# ಹೆಳವನಕಟ್ಟೆ ಗಿರಿಯಮ್ಮನ
## ಜೀವನ ಮತ್ತು ಕೃತಿಗಳು

ಪಿಎಚ್.ಡಿ.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಮಹಾಪ್ರಬಂಧ


ಸಂಶೋಧಕರು
ಉಷಾರಾಣಿ ಎ.ಪಿ.

ಮಾರ್ಗದರ್ಶಕರು
ಡಾ. ಎಸ್.ಎಸ್.ಅಂಗಡಿ
ಪ್ರವಾಚಕರು, ಹಸ್ತಪ್ರತಿಶಾಸ್ತ್ರ ವಿಭಾಗ



ಹಸ್ತಪ್ರತಿಶಾಸ್ತ್ರ ವಿಭಾಗ
ಭಾಷಾನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೭

# ಹೆಳವನಕಟ್ಟೆ ಗಿರಿಯಮ್ಮನ

## ಜೀವನ ಮತ್ತು ಕೃತಿಗಳು

ಪಿಎಚ್.ಡಿ.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು
ಉಷಾರಾಣಿ ಎ.ಪಿ.

ಮಾರ್ಗದರ್ಶಕರು
ಡಾ. ಎಸ್.ಎಸ್.ಅಂಗಡಿ
ಪ್ರವಾಚಕರು, ಹಸ್ತಪ್ರತಿಶಾಸ್ತ್ರ ವಿಭಾಗ



ಹಸ್ತಪ್ರತಿಶಾಸ್ತ್ರ ವಿಭಾಗ
ಭಾಷಾನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೭

## ಸಂಶೋಧಕರ ಪ್ರಮಾಣ ಪತ್ರ

ಹೆಳವನಕಟ್ಟೆ ಗಿರಿಯಮ್ಮನ ಜೀವನ ಮತ್ತು ಕೃತಿಗಳು ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ.ಪದವಿಗಾಗಿ ಡಾ.ಎಸ್.ಎಸ್.ಅಂಗಡಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ನನ್ನ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Usha Rani · A·P·

ಉಷಾರಾಣಿ ಎ.ಪಿ.
ಸಂಶೋಧಕಿ
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : ೨೨ · ೧೨ · ೨೦೦೭

ಸ್ಥಳ : ವಿದ್ಯಾರಣ್ಯ

## ಮಾರ್ಗದರ್ಶಕರ ಪ್ರಮಾಣ ಪತ್ರ

ಉಷಾರಾಣಿ ಎ.ಪಿ. ಅವರು ಹೆಳವನಕಟ್ಟೆ ಗಿರಿಯಮ್ಮನ ಜೀವನ ಮತ್ತು ಕೃತಿಗಳು ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ.ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಅವರ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಎಸ್.ಎಸ್. ಅಂಗಡಿ
ಮಾರ್ಗದರ್ಶಕರು ಮತ್ತು ಮುಖ್ಯಸ್ಥರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : 24.12.2002
ಸ್ಥಳ : ವಿದ್ಯಾರಣ್ಯ

# ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಪಿ.ಎಚ್.ಡಿ. ಅಧ್ಯಯನಕ್ಕೆ ಅವಕಾಶ ಕಲ್ಪಿಸಿಕೊಟ್ಟ ಹಿಂದಿನ ಕುಲಪತಿಗಳಾದ ಡಾ.ಬಿ.ಎ.ವಿವೇಕ ರೈ, ಪ್ರಸ್ತುತ ಕುಲಪತಿಗಳಾದ ಡಾ.ಹಿ.ಚಿ.ಬೋರಲಿಂಗಯ್ಯ ಅವರಿಗೆ ಮತ್ತು ಕುಲಸಚಿವರಾದ ವಿ.ಶಂಕರ್ ಅವರಿಗೆ ಹಾಗೂ ಅಧ್ಯಯನಾಂಗದ ನಿರ್ದೇಶಕರಾದ ಡಾ. ಡಿ.ಪಾಂಡುರಂಗ ಬಾಬು ಅವರಿಗೆ ಆಡಳಿತ ವರ್ಗದವರಿಗೆ

ಪಿ.ಎಚ್.ಡಿ. ಅಧ್ಯಯನದ ಈ ನಿಬಂಧ ರೂಪುಗೊಳ್ಳಲು ನನಗೆ ಪ್ರತಿ ಹಂತದಲ್ಲೂ ಸೂಕ್ತ ಸಲಹೆ ಸಹಕಾರಗಳನ್ನು ನೀಡಿ ಮಾರ್ಗದರ್ಶನ ಮಾಡಿದ ಮತ್ತು ತಿದ್ದಿ ಪ್ರೋತ್ಸಾಹಿಸಿದ ಪೂಜ್ಯ ಗುರುಗಳು ಮತ್ತು ಹಸ್ತಪ್ರತಿಶಾಸ್ತ್ರ ವಿಭಾಗದ ಮುಖ್ಯಸ್ಥರುಗಳಾದ ಡಾ.ಎಸ್.ಎಸ್.ಅಂಗಡಿ ಅವರಿಗೆ, ಅಧ್ಯಯನಕ್ಕೆ ಸಲಹೆ ಸಹಕಾರವನ್ನು ನೀಡಿ ಪ್ರೋತ್ಸಾಹಿಸಿದ ವಿಭಾಗದ ಅಧ್ಯಾಪಕರುಗಳಾದ ಡಾ.ಎಫ್ .ಟಿ.ಹಳ್ಳಿಕೇರಿ, ಡಾ.ಕೆ.ರವೀಂದ್ರನಾಥ, ಡಾ. ವಿರೇಶ ಎಸ್.ಬಡಿಗೇರ ಡಾ.ಎಸ್.ಆರ್.ಚನ್ನವೀರಪ್ಪ ಮತ್ತು ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ.ಎ.ವಿ.ನಾವಡ ಮತ್ತು ಶ್ರೀಮತಿ ಗಾಯಿತ್ರಿ ನಾವಡ ಅವರಿಗೆ,

ಅಧ್ಯಯನಕ್ಕೆ ಸಲಹೆಯನ್ನು ನೀಡಿ ಸಹಕರಿಸಿದ ಕನ್ನಡ ವಿಶ್ವವಿದ್ಯಾಲಯದ ಪ್ರೊ.ಲಕ್ಷ್ಮಣ ತೆಲಗಾವಿ, ಡಾ.ಕೆ.ವಿ.ನಾರಾಯಣ, ಡಾ. ರಹಮತ್ ತರೀಕೇರಿ, ಡಾ. ಅಮರೇಶ ನುಗಡೋಣಿ, ಡಾ.ಎಂ. ಉಷಾ, ಡಾ.ಎಚ್.ಎಸ್.ಶ್ರೀಮತಿ, ಡಾ. ಸಾಂಬವಮೂರ್ತಿ, ಡಾ. ಮೋಹನ್ ಕುಂಟಾರ್ ಅವರಿಗೆ,

ಮೈಸೂರು ವಿಶ್ವವಿದ್ಯಾಲಯದ ಡಾ.ಟಿ.ಎನ್.ನಾಗರತ್ನ, ಡಾ.ವೈ.ಸಿ.ಭಾನುಮತಿ, ಟಿ.ಕೆ.ಇಂದುಬಾಯಿ, ವಿಶ್ರಾಂತ ಪ್ರಾಧ್ಯಪಕರಾದ ಎನ್.ಬಸವರಾಧ್ಯ, ಮತ್ತು ಅಧ್ಯಾಪಕರಾದ ಡಾ. ವಾಸುದೇವ ಅಗ್ನಿಹೋತ್ರಿ ಅವರಿಗೆ,

ಕರ್ನಾಟಕ ವಿಶ್ವವಿದ್ಯಾಲಯದ ಡಾ.ಎಚ್.ಎಂ.ಮಹೇಶ್ವರಯ್ಯ, ಮಧುರೈ ಕಾಮರಾಜ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಗುರುಗಳಾದ ದಿವಂಗತ ಡಾ.ಪಿ.ವಿ.ಕುಲಕರ್ಣಿ, ಕೆ.ಸಿ.ವಿರೂಪಾಕ್ಷ, ಡಾ.ಹರಿಕೃಷ್ಣ ಭರಣ್ಯ, ಅಧ್ಯಯನಕ್ಕೆ ಪೂರಕವಾದ ಗ್ರಂಥಗಳ ಮಾಹಿತಿಯನ್ನು ಒದಗಿಸಿ ಸಹಕರಿಸಿದ ಕನ್ನಡ ವಿಶ್ವವಿದ್ಯಾಲಯ ಗ್ರಂಥಾಲಯ ಸಿಬ್ಬಂದಿಯವರಿಗೆ, ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಾಲಯ ಸಿಬ್ಬಂದಿ ವರ್ಗದವರಿಗೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಅವರಿಗೆ,

ಅಧ್ಯಯನಕ್ಕೆ ಪೂರಕವಾದ ಮಾಹಿತಿಗಳನ್ನು ಹಾಗೂ ಗ್ರಂಥಗಳನ್ನು ಒದಗಿಸಿದ ಮಲೇಬೆನ್ನೂರಿನ ಹೆಳವನಕಟ್ಟೆ ಗಿರಿಯಮ್ಮನ ವಂಶಸ್ಥರಾದ ನಾಡಿಗ ಕೃಷ್ಣಮೂರ್ತಿ ಅವರಿಗೆ, ನಾಡಿಗ ಮತ್ತು ದೇಶಪಾಂಡೆ

ಮನೆತನದ ಕುಟುಂಬ ವರ್ಗದವರಿಗೆ, ಮಲೇಬೆನ್ನೂರಿನ ಗ್ರಾಮ ನಿವಾಸಿಗಳಿಗೆ ಮತ್ತು ಕುಮಾರಹಳ್ಳಿಯ ರಂಗನಾಥ ದೇವಸ್ಥಾನದ ಸೇವಾ ಸಮಿತಿಯವರಿಗೆ

ಮಲೇಬೆನ್ನೂರಿನ ರಂಗನಾಥ ದೇವಸ್ಥಾನದ ಫೋಟೊಗಳನ್ನು ಒದಗಿಸಿಕೊಟ್ಟು ನೆರವಾದ ಫೊಟೋಗ್ರಾಫರ್ ನಾಗರಾಜಶೆಟ್ಟಿ ಅವರಿಗೆ, ಅಧ್ಯಯನಕ್ಕೆ ನೆರವಾದ ಎಲ್ಲಾ ಅಧ್ಯಾಪಕರುಗಳಿಗೆ, ಅಧ್ಯಯನದ ಜೊತೆಗೆ ಸಲಹೆ ನೀಡಿದ ಪಿ.ಎಚ್.ಡಿ ಮತ್ತು ಎಂ.ಫಿಲ್. ಸಂಶೋಧನ ಆತ್ಮೀಯ ಸ್ನೇಹಿತರಿಗೆ ಮತ್ತು ಅಧ್ಯಯನಕ್ಕೆ ಸಹಕಾರ ನೀಡಿದ ಹಸ್ತಪ್ರತಿ ಶಾಸ್ತ್ರ ವಿಭಾಗದ ಕಛೇರಿ ಸಿಬ್ಬಂದಿ ವರ್ಗದ ಎಸ್.ರಾಮನಾಯಕ, ಈರಪ್ಪ ಮೆಟ್ಟಿ, ಕೆ.ಸತ್ಯನಾರಾಯಣ, ಅಧ್ಯಯನಾಂಗದ ಡಿ.ವಿ.ಪ್ರಕಾಶ್ ಅವರಿಗೆ

ಅಧ್ಯಯನಕ್ಕೆ ನೆರವಾಗಿ ಪ್ರೋತ್ಸಾಹ ನೀಡಿದ ಅಜ್ಜ ಮತ್ತುರಪ್ಪ ಯು. ಅಜ್ಜಿ, ಸಿದ್ದಮ್ಮ, ತಾಯಿ, ಅಂಜಿನಮ್ಮ ಮಾವ ಪಂಪಾಪತಿ ಅವರಿಗೆ, ಅಧ್ಯಯನದ ಅವಧಿಯಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕಾರ ನೀಡಿದ ಎಲ್ಲರಿಗೂ ಹಾಗೂ ಈ ಪ್ರಬಂಧವನ್ನು ಅಂದವಾಗಿ ಅಕ್ಷರ ಸಂಯೋಜಿಸಿಕೊಟ್ಟ ಶ್ರೀಮತಿ ಬಿ.ರಶ್ಮಿ ಹಾಗೂ ಎ.ಎಂ.ಕೃಪಾಶಂಕರ್ ಅವರಿಗೆ, ನನ್ನ ಹೃದಯ ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಉಷಾರಾಣಿ ಎ.ಪಿ.

## ಪರಿವಿಡಿ

## ಅಧ್ಯಾಯ ೧

# ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ

೧

# ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಹರಿದಾಸ ಸಾಹಿತ್ಯದ್ದು ಒಂದು ಪ್ರಮುಖ ಘಟ್ಟ-ಶಿವಶರಣರ ನಂತರ ಜನಸಾಮಾನ್ಯರಿಗೆ ಸುಲಭವಾಗಿ ನಿಲುಕುವ ಸಾಹಿತ್ಯವನ್ನು ರಚಿಸಿದರು ಹರಿದಾಸರು. ಹರಿದಾಸ ಸಾಹಿತ್ಯದ ಉಗಮವನ್ನು ಮಧ್ವಾಚಾರ್ಯರಿಂದಲೇ ಗುರುತಿಸಲಾಗುತ್ತದೆ. ವೀರಶೈವ ಮತದ ಪ್ರಾಬಲ್ಯದಿಂದ ವರ್ಣಾಶ್ರಮಗಳ ತಳಹದಿಯ ಮೇಲೆ ನಿಂತಿದ್ದ ವೈದಿಕ ಮತದ ಅನುಯಾಯಿಗಳು ತತ್ತರಿಸಿದರು. ತಮ್ಮ ಧಾರ್ಮಿಕ ಅಸ್ತಿತ್ವವನ್ನು ಸ್ಥಿರಗೊಳಿಸಲು ಹೊಸ ಸಿದ್ಧಾಂತವೊಂದನ್ನು ಸ್ಥಾಪಿಸಲು ಪ್ರಯತ್ನಪಟ್ಟರು ಅವರ ಪ್ರಯತ್ನದ ಫಲವೇ ದ್ವೈತ ಮತದ ಸ್ಥಾಪನೆ ಮಧ್ವಾಚಾರ್ಯರೇ ಈ ಮತದ ಸ್ಥಾಪಕರಾಗಿ ದಾಸ ಪಂಥವನ್ನು ಅನುಷ್ಠಾನಗೊಳಿಸಿದರು. ದಾಸರ ಕೀರ್ತನೆಗಳಿಗೆ ಮಧ್ವಸಿದ್ಧಾಂತ ಹಿನ್ನೆಲೆಯಾಗಿದೆ. ಶ್ರೀಹರಿಯೇ ಸರ್ವೋತ್ತಮ; ಜಗತ್ತು ಪಾರಮಾರ್ಥಿಕ ಸತ್ಯ ಮತ್ತು ನಿತ್ಯ; ಜೀವಗಣಗಳು ಶ್ರೀಹರಿಯ ಅನುಚರರು ಎಲ್ಲದರಲ್ಲಿಯೂ ತಾರತಮ್ಯವುಂಟು; ಸ್ವರೂಪಸುಖಾನುಭವವೇ ಮುಕ್ತಿ; ನಿರ್ಮಲವಾದ ಭಕ್ತಿಯೇ ಮುಕ್ತಿಗೆ ಸಾಧನ; ಪ್ರತ್ಯಕ್ಷ ಅನುಮಾನ, ಶಬ್ದ ಎಂಬ ಮೂರು ಪ್ರಮಾಣಗಳು; ಶ್ರೀ ಹರಿಯನ್ನು ವೇದಗಳಿಂದ ಮಾತ್ರ ತಿಳಿಯುವುದು ಸಾಧ್ಯ ಎಂಬುದು ಮಧ್ವಾಚಾರ್ಯರ ಸಿದ್ಧಾಂತ. ಈ ತತ್ವಗಳನ್ನು ಅನುಸರಿಸಿ ಹರಿದಾಸ ದೀಕ್ಷೆಯನ್ನು ಪಡೆದುಕೊಂಡು ಇದೇ ಮಾರ್ಗದಲ್ಲಿ ಮುಂದುವರೆದ ದಾಸರು ತಮ್ಮ ಅನುಭವಗಳನ್ನು ಹಾಡುಗಳ ರೂಪದಲ್ಲಿ ಅಭಿವ್ಯಕ್ತಿಸಿ ಮಧ್ವಮತ ತತ್ವಗಳನ್ನು ಜನಸಾಮಾನ್ಯರಲ್ಲಿ ಪ್ರಚಾರ ಪ್ರಸಾರ ಮಾಡುವುದಕ್ಕಾಗಿಯೇ ಹುಟ್ಟಿಕೊಂಡಿದ್ದು ದಾಸ ಸಾಹಿತ್ಯ.

ವೀರಶೈವ ಮತವು ತ್ವರಿತಗತಿಯಿಂದ ಹರಡಿದುದಕ್ಕೆ ಮುಖ್ಯ ಕಾರಣವೆಂದರೆ ವಚನಕಾರರು ಬಳಸಿದ ಭಾಷಾ ಮಾಧ್ಯಮ ಈ ಸೂಕ್ಷ್ಮವನ್ನು ಅರಿತ ವೈಷ್ಣವ ಧರ್ಮದ ಅನುಯಾಯಿಗಳು ತಮ್ಮ ಧಾರ್ಮಿಕ ಪ್ರಚಾರಕ್ಕೆ ಜನರ ಆಡುನುಡಿಯನ್ನೇ ಹೆಚ್ಚಾಗಿ ಬಳಸಿಕೊಂಡರು. ಶಿವಶಿರಣರು ಕಾವ್ಯಮಯವಾದ ಗದ್ಯದಲ್ಲಿ ವಚನಗಳನ್ನು ರಚಿಸಿ ಜನಮನವನ್ನು ಸೂರೆಗೊಂಡರೆ ಹರಿದಾಸರು ಹೃದಯವನ್ನು ಸೂರೆಗೊಳ್ಳ ಬಲ್ಲ ಕೀರ್ತನೆಗಳನ್ನು ಹಾಡಿ ಜನರನ್ನು ತಮತ್ತ ಸೆಳೆದುಕೊಂಡರು. ಈ ಕೀರ್ತನೆಗಳು ಸಂಗೀತ ಪ್ರಧಾನವಾದದ್ದು ಪರಮಾತ್ಮನು ಸಂಗೀತಕ್ಕೆ ಕೀರ್ತನೆ ನೃತ್ಯಗಳಿಗೆ ಬಹುಬೇಗ ಪ್ರಸನ್ನನಾಗುವನೆಂಬ ನಂಬಿಕೆ ಇದಕ್ಕೆ ಕಾರಣ ಭಕ್ತಿಯ ಸಾಹಿತ್ಯದಲ್ಲಿ ಒಂದಾದ ಸಂಗೀತಕ್ಕೆ ಸಾಹಿತ್ಯವೂ ಸೇರಿದರೆ ಅದರ

ಸೊಗಸು ಮತ್ತಷ್ಟೂ ಹೆಚ್ಚುವುದೆಂದು ಭಾವಿಸಿದ ಹರಿದಾಸರು ಸಂಗೀತಕ್ಕೂ ಸಾಹಿತ್ಯಕ್ಕೂ ಸಾಮರಸ್ಯವನ್ನು ವೈವಿಧ್ಯವನ್ನೂ ತಂದರು. ಸಂಗೀತಕ್ಕೆ ಸಂಬಂಧಿಸಿದಂತೆ ವಿವಿಧ ರಾಗ ತಾಳಗಳಲ್ಲೂ, ಸಾಹಿತ್ಯಕ್ಕೆ ಸಂಬಂಧಿಸಿದಂತೆ ವಿವಿಧ ಛಂದಸ್ಸುಗಳಲ್ಲೂ ತಮ್ಮ ಕೃತಿಗಳನ್ನು ರಚಿಸಿದರು. ಪದ, ಸುಳಾದಿ, ಉಗಾಭೋಗ, ಶ್ಲೋಕ, ಕಂದ, ವೃತ್ತ, ದ್ವಿಪದಿ, ತ್ರಿಪದಿ, ಚೌಪದಿ, ಷಟ್ಪದಿ, ರಗಳೆ ಮುಂತಾದ ದೇಶೀ ಪ್ರಕಾರಗಳಲ್ಲಿ ಅವರ ಸಾಹಿತ್ಯ ರೂಪುಗೊಂಡಿದೆ. ಕನ್ನಡವನ್ನು ಸಂಗೀತ ಭಾಷೆಯನ್ನಾಗಿ ಮಾಡಿದ ಕೀರ್ತಿ ಮುಖ್ಯವಾಗಿ ಹರಿದಾಸರಿಗೆ ಸಲ್ಲುತ್ತದೆ.

'ಹರಿದಾಸ ಸಾಹಿತ್ಯ' ಹೆಸರೇ ಸೂಚಿಸುವಂತೆ ಹರಿಯ ಭಕ್ತರಿಂದ ರಚಿತವಾದ ಸಾಹಿತ್ಯ ಪ್ರಚೀನ ಭಾಗವತ ಪರಂಪರೆಯೊಂದಿಗೆ ಮಧ್ವಮತ ತತ್ತ್ವಗಳ ತಳಹದಿಯ ಮೇಲೆ ಈ ದಾಸ ಸಾಹಿತ್ಯದಲ್ಲಿ ಭಗವಂತನ ನಾನಾರೂಪಗಳ ವರ್ಣನೆ ಭಕ್ತನ ಅಂತರಂಗ ಶೋಧನೆ, ಕಳವಳ, ಸರ್ವಸಮರ್ಪಣ ಭಾವಗಳ ಜೊತೆಗೆ ಮಧ್ವಮತ ತತ್ತ್ವ ನಿರೂಪಣೆಯೂ ಕಂಡು ಬರುತ್ತದೆ. ಅನೇಕ ದಾಸರ ಕೃತಿಗಳಲ್ಲಿ ಸುತ್ತಲಿನ ಸಮಾಜವನ್ನು ಕುರಿತು ಕಳಕಳಿ, ವಿಡಂಬನೆ ಇತ್ಯಾದಿ ಕಂಡುಬರುತ್ತಿದ್ದು, ದಾಸ ಸಾಹಿತ್ಯ ಸಾಮಾಜಿಕವಾಗಿಯೂ ಮಹತ್ವಪೂರ್ಣವಾಗಿರುವುದನ್ನು ಗುರುತಿಸಬಹುದುಗಿದೆ. ಹೀಗೆ, ಭಕ್ತಿಯ ಮೂಲಕ ಮುಕ್ತಿಯನ್ನು ಪಡೆದುಕೊಳ್ಳಬೇಕೆಂದು ಮುಖ್ಯವಾಗಿ ಬಯಸಿದ ಹರಿದಾಸರು ತಮ್ಮನ್ನು ಮತ್ತು ತಮ್ಮ ಸುತ್ತಮುತ್ತಲಿನ ಸಮಾಜವನ್ನು ಅರಿತುಕೊಳ್ಳಲು ಮತ್ತು ಸುಧಾರಿಸಲು ಸಹಕಾರಿಯಾಗಿ ಮಾಡಿದ ಪ್ರಾಮಾಣಿಕ ಪ್ರಯತ್ನಗಳೇ ಹರಿದಾಸ ಸಾಹಿತ್ಯದಲ್ಲಿ ಕಂಡುಬರುತ್ತವೆ ಎನ್ನಬಹುದು. ಇವು ವ್ಯಕ್ತವಾದದ್ದು ಸಹಜವಾದ ಆಡುನುಡಿಗಳಲ್ಲಿ ಹರಿದಾಸರು ತಮ್ಮ ಅಂತರಂಗದ ಅಭಿವ್ಯಕ್ತಿ ಹಾಗೂ ಮತ ತತ್ತ್ವ ಪ್ರಚಾರಗಳಿಗೆ ಕನ್ನಡ ಭಾಷೆಯನ್ನು ಅತ್ಯಂತ ಸಮರ್ಥವಾಗಿ ಬಳಸಿಕೊಂಡಿದ್ದಾರೆ. 'ಆಡುಭಾಷೆ'ಗೆ 'ದೇವಭಾಷೆ'ಯ ಸ್ಥಾನಮಾನಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ದಾಸ ಸಾಹಿತ್ಯ, ಕೀರ್ತನೆ, ಸುಳಾದಿ, ಉಗಾಭೋಗ, ವೃತ್ತ, ನಾಮ, ದಂಡಕ ಮುಂತಾದ ಪ್ರಕಾರಗಳಲ್ಲಿ ರಚಿತವಾಗಿದ್ದು ಮುಖ್ಯವಾಗಿ ಅದರ ಗೇಯಗುಣ ಜನ ಸಾಮಾನ್ಯರನ್ನು ವಿಶೇಷವಾಗಿ ಆಕರ್ಷಿಸುತ್ತದೆ. ಪಂಡಿತರನ್ನು ಪಾಮರರನ್ನು ಏಕಕಾಲಕ್ಕೆ ಆಕರ್ಷಿಸಬಲ್ಲ ವಿಶಿಷ್ಟ ಸಾಮರ್ಥ್ಯವನ್ನು ದಾಸಸಾಹಿತ್ಯ ಹೊಂದಿದೆ.

ಭಗವಂತನ ಅನುಗ್ರಹವನ್ನು ಸಂಪಾದಿಸುವಲ್ಲಿ ಪ್ರಸಿದ್ಧವಾದ ಜ್ಞಾನ, ಭಕ್ತಿ, ಕರ್ಮ ಮಾರ್ಗಗಳಲ್ಲಿ ಭಕ್ತಿಮಾರ್ಗವು ಅತ್ಯಂತ ಸುಲಭವೂ ಪ್ರಿಯವೂ ಆದದ್ದೆಂಬುದು ನಿರ್ವಿವಾದವಾದ ಸಂಗತಿ. ಭಕ್ತನಾದವನು ಭಗವಂತನಲ್ಲಿ ಇಟ್ಟುಕೊಂಡಿರುವ ನಿರ್ಮಲ ಪ್ರೇಮವೇ ಭಕ್ತಿ(ನಾರದ) ಭಕ್ತ ಭಗವಂತನ ನಡುವಿನ ಸಂಬಂಧವೇ ಭಕ್ತಿ. ಕೃಷ್ಣನಿಗೂ ಇಂತಹ ಭಕ್ತರೇ ಅತ್ಯಂತ ಪ್ರಿಯರಾದವರೆಂಬುದನ್ನು ಭಗವದ್ಗೀತೆಯಲ್ಲಿ ನಾವು ಕಾಣಬಹುದು. ವೈವಿಧ್ಯಪೂರ್ಣ ಭಕ್ತಿ ನಿರೂಪಣೆಯ ದೃಷ್ಟಿಯಿಂದ ದಾಸರ ಕೀರ್ತನೆಗಳು ಅನುಪಮವಾಗಿವೆ. ಒಮ್ಮೆ ಅವರು ದುಃಖ ಸಂತಪ್ತರಾಗಿ ಪರಮಾತ್ಮನಲ್ಲಿ ಮೊರೆಯಿಟ್ಟಿದ್ದಾರೆ.

ಮತ್ತೊಮ್ಮೆ ತಾವು ಮಾಡಿದ ಪಾಪ ಕೃತ್ಯಗಳನ್ನು ನೆನೆದು ಕ್ಷಮಾಯಾಚನೆ ಮಾಡಿದ್ದಾರೆ. ಮಗದೊಮ್ಮೆ ಆತನನ್ನು ಎಣೆ ಇಲ್ಲದ ದೈವವೆಂದು ದೀನರಾಗಿ ಆಶ್ರಯಿಸಿದ್ದಾರೆ; ಪರಮಾತ್ಮನನ್ನು ಗೆಳೆಯನೆಂದು ಸಂಬೋಧಿಸಿದ್ದಾರೆ; ಒಡೆಯನೆಂದು ತಲೆಬಾಗಿದ್ದಾರೆ; ಗುರುವೆಂದು ವಂದಿಸಿದ್ದಾರೆ. ಆತನ ಅವತಾರಗಳನ್ನೆಲ್ಲ ಸುಂದರವಾಗಿ ವಿವರವಾಗಿ ಚಿತ್ರಿಸಿದ್ದಾರೆ.

ಭಕ್ತಿಯ ನವವಿಧ ಮಾರ್ಗಗಳ ಹಾಗೂ ಪಂಚಭಾವಗಳಾದ ದಾಸ್ಯ, ಸಖ್ಯ, ಮಧುರ, ವಾತ್ಸಲ್ಯ, ಶಾಂತಭಾವಗಳ ಪರಚಯ ಎಲ್ಲರಿಗೂ ಇದೆ. ಈ ಎರಡರಲ್ಲಿ ಎರಡನೆಯದು ಪಂಚ ವಿಧಭಾವ ಭಕ್ತ-ಭಗವಂತನ ಸಂಬಂಧವನ್ನು ಪ್ರತಿಪಾದಿಸುವುದರಲ್ಲಿ ಹೆಚ್ಚು ಪ್ರಭಾವಯುತವೂ ಹೃದಯಕ್ಕೆ ಹತ್ತಿರವೂ ಆಗಿದೆ. ಭಕ್ತನಾದವನು ಭಗವಂತನನ್ನು ತನಗೆ ತೀರ ಪರಿಚಿತವಾದ ಒಡೆಯ, ಗೆಳೆಯ, ನಲ್ಲ, ಎಳೆಯ, ಇವೇ ಮುಂತಾದ ಲೌಕಿಕ ಸಂಬಂಧಗಳಲ್ಲಿ ಕಲ್ಪಿಸಿಕೊಂಡು ತನ್ನ ಹೃದಯದ ಭಾವವನ್ನು ವ್ಯಕ್ತಪಡಿಸುವ ರೀತಿ ಸುಮಧುರ ಸುಂದರ ಹಾಗೂ ಹೃದಯಸ್ಪರ್ಶಿ ಈ ಭಾವಗಳನ್ನು ದಾಸ ಸಾಹಿತ್ಯದಲ್ಲಿ ಮೊಟ್ಟ ಮೊದಲಿಗೆ ಅನುಷ್ಠಾನಗೊಳಿಸಿದವರು ಶ್ರೀಪಾದರಾಜರು.

ಹರಿದಾಸರು ಮುಖ್ಯವಾಗಿ ಎರಡು ಪ್ರಮುಖ ಅಂಶಗಳಿಂದ ಸಾಹಿತ್ಯ ನಿರ್ಮಾಣ ಮಾಡಿರುವುದನ್ನು ನಾವು ಗಮನಿಸಬಹುದು. ಅದರಲ್ಲಿ ಒಂದು ತಮ್ಮ ಮತ್ತು ಭಗವಂತನ ಸಂಬಂಧವನ್ನು ಕುರಿತು ನಾನಾ ರೀತಿಯಲ್ಲಿ ವರ್ಣಿಸಿರುವುದು ಭಕ್ತ-ಭಗವಂತರ ನಡುವಿನ ಪಂಚವಿದ ಭಕ್ತಿಗಳೂ ಅಲ್ಲಿ ಗೋಚರಿಸಬಹುದು. ಭಕ್ತನ ಅಂತರಂಗದ ಕಳವಳ. ಆಸೆ-ನಿರಾಸೆ ತೃಪ್ತಿ ಇತ್ಯಾದಿಗಳಿಗೆ ಸಂಬಂಧಪಟ್ಟ ಹಲವಾರು ಸಂಚಾರೀ ಭಾವಗಳು ಪರಿಣಾಮಕಾರಿಯಾಗಿ ತೋಡಿಕೊಳ್ಳಲ್ಪಟ್ಟಿರುವುದನ್ನು ಕಾಣುತ್ತೇವೆ ಇನ್ನೊಂದು ತಮಗೂ ಸಮಾಜಕ್ಕೂ ಇರುವ ಸಂಬಂಧ ಇದನ್ನು ನಾವು ಕೆಲವು ಪ್ರಮುಖ ಹರಿದಾಸರ ಕೃತಿಗಳಲ್ಲಿ ಕಾಣಬಹುದು. ತಮ್ಮ ಸುತ್ತಮುತ್ತಲಿನ ಸಮಾಜ ವಿಮರ್ಶೆಯನ್ನು ಮಾಡುತ್ತಾ ಭಕ್ತಿಯನ್ನು ಸುತ್ತಮುತ್ತಲಿನ ಸಮಾಜ ವಿಮರ್ಶೆಯನ್ನು ಮಾಡುತ್ತಾ ಭಕ್ತಿಯನ್ನು ಬೋಧಿಸಿ, ಸಮಾಜದ ಉದ್ಧಾರಕ್ಕೆ ಶ್ರಮಿಸಿರುವುದು ಸಮಾಜವನ್ನು ಕುರಿತಾದ ಅಪಾರ ಕಳಕಳಿ ಮಾತಿನ ರೂಪದಲ್ಲಿ ಹೊರಬಂದಾಗ ಕೆಲವೊಮ್ಮೆ ಅದು ಉಗ್ರವಾಗಿರಬಹುದು. ವ್ಯಂಗ ಮಾತುಗಳಿಂದ ಹೊರಬಂದಿರಬಹುದು. ಏನೇ ಇದ್ದರೂ ಸಮಾಜದ ಒಳತಿಗೆ ಅವು ಸಹಕಾರಿ. ಪುರಂದರದಾಸರಲ್ಲಿ ನಾವು ಈ ಎರಡೂ ಬಗೆಯ ಪದಗಳನ್ನು ಕಾಣುತ್ತೇವೆ. ಅವರ ಮೊದಲ ಬಗೆಯ ವ್ಯಕ್ತಿನಿಷ್ಠ ಹಾಡುಗಳಲ್ಲಿ ಭಗವಂತನ ನಾಮಸ್ಮರಣೆ, ವರ್ಣನೆ, ಲೀಲಾವಿನೋದಗಳು ಚಿತ್ರಿತವಾಗಿರುವದರೊಂದಿಗೆ ತಮ್ಮ ಅಂತರಂಗದ ನೋವು ನಲಿವುಗಳನ್ನು ಉತ್ಕಟಭಕ್ತಿಯನ್ನು ಪ್ರಕಟಪಡಿಸಿದ್ದಾರೆ. ಎರಡನೆಯ ಬಗೆಯ ಹಾಡುಗಳಲ್ಲಿ ಸಾಮಾಜಿಕ ಪ್ರಜ್ಞೆ ದಟ್ಟವಾಗಿ ಮೂಡಿಬಂದಿದೆ. ಸಮಕಾಲೀನ ಸಮಾಜದ ಮೂಢನಂಬಿಕೆ. ಜಾತಿ ವ್ಯವಸ್ಥೆ ದುರಾಚಾರ ಮುಂತಾದವನ್ನು ಕಟುವಾಗಿ ಟೀಕಿಸಲು ದಾಸರು ಹಿಂಜರಿಯದೆ, ನೈತಿಕ ಮೌಲ್ಯಗಳಿಗೆ ಅವರು ಹೆಚ್ಚಿನ

ಪ್ರಾಶಸ್ತ್ಯವನ್ನು ನೀಡಿದ್ದಾರೆ. ಪ್ರಸ್ತುತ ಅಧ್ಯಯನದಲ್ಲಿ ಹೆಳವನಕಟ್ಟೆ ಗಿರಿಯಮ್ಮನ ಬದುಕು-ಸಾಧನೆಗೆ ಒತ್ತು ಕೊಟ್ಟು ಅಧ್ಯಯನ ನಡೆಸಲಾಗಿದೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅನೇಕ ಮಹಿಳಾ ಕವಯಿತ್ರಿಯರು ಕೃತಿ ರಚನೆ ಮಾಡಿರುವುದು ಕಂಡುಬರುತ್ತದೆ. ಶರಣ ಸಾಹಿತ್ಯ ರಚನೆಯಲ್ಲಿ ಶಿವಶರಣೆಯರು ದೊಡ್ಡ ಪ್ರಮಾಣದಲ್ಲಿ ಪಾಲ್ಗೊಂಡು ಕೃತಿ ರಚನೆ ಮಾಡಿದ ಖಚಿತ ಮಾಹಿತಿಗಳು ದೊರೆಯುತ್ತವೆ. ಆದರೆ ದಾಸ ಸಾಹಿತ್ಯ ಚಳುವಳಿಯಲ್ಲಿ ಮಹಿಳಾ ದಾಸರು ಪ್ರವರ್ತಿಸಿದ್ದರೂ ಈ ಬಗ್ಗೆ ಸಂಶೋಧನೆ ಗಂಭೀರವಾಗಿ ಸಾಗಿಲ್ಲ. ಹೆಳವನಕಟ್ಟೆ ಗಿರಿಯಮ್ಮ, ಹರಪನಹಳ್ಳಿ ಬಿಮವ್ವನವರ ಹೆಸರನ್ನು ಮಾತ್ರ ಸಾಹಿತ್ಯ ಚರಿತ್ರೆಕಾರರು ದಾಖಲಿಸಿಬಿಟ್ಟು ಅನೇಕ ಮಹಿಳಾ ದಾಸರ ಬಗ್ಗೆ ಮೌನವಾಗಿದ್ದಾರೆ. ಈಗ ಲಭ್ಯವಿರುವ ಮಹಿಳಾ ದಾಸರ ಇತಿವೃತ್ತ ವಿಚಾರ ಕೀರ್ತನೆಗಳ ಕುರಿತು ಇಲ್ಲಿ ಚರ್ಚಿಸಲಾಗಿದೆ.

ಕನ್ನಡ ಸಾಹಿತ್ಯದಲ್ಲಿ ಮಹಿಳಾ ಕೃತಿಕಾರರು ಕೃತಿ ರಚಿಸಿರುವುದು ಕಂಡುಬರುತ್ತದೆ. ಆಯಾ ಕಾಲಘಟ್ಟಕ್ಕೆ ಅನುಗುಣವಾಗಿ ಸಾಹಿತ್ಯ ರಚನೆಯಲ್ಲಿ ತೊಡಗಿರುವುದು ವಿಶೇಷವಾಗಿದೆ. ತಮ್ಮ ಸಮಕಾಲೀನ ಬದುಕಿನ ಚಿತ್ರಣವನ್ನು ಮೌಲ್ಯಗಳನ್ನು ತಮ್ಮ ಕೃತಿಗಳ ಮೂಲಕ ಕಟ್ಟಿಕೊಟ್ಟಿದ್ದಾರೆ. ಕರ್ನಾಟಕ ಭಕ್ತಿಪಂಥ ಚಳುವಳಿಯಲ್ಲಿ ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿರುವ ಹರಿದಾಸ ಸಾಹಿತ್ಯದಲ್ಲಿ ಮಹಿಳೆಯರ ಧ್ವನಿ ಗಟ್ಟಿಯಾಗಿ ನೆಲೆಯೂರಿದೆ. ದಾಸ ಸಾಹಿತ್ಯ ೧೩ನೇ ಶತಮಾನದಿಂದ ಈಚೆಗೆ ಬೆಳೆದು ಬಂದಿದ್ದರೂ ಮಹಿಳೆಯರು ಕಂಡುಬರುವುದು ೧೮ನೇ ಶತಮಾನದ ಕೊನೆಯ ಘಟ್ಟದಲ್ಲಿ.

ಮಹಿಳೆಯರ ದಾಸ ಸಾಹಿತ್ಯದ ಸೃಷ್ಟಿಯನ್ನು ಕುರಿತು ಹೇಳುವಾಗ ೧೮ನೇ ಶತಮಾನದಿಂದ ಹರಿದಾಸ ಸಾಹಿತ್ಯದಲ್ಲಿ ಮಹಿಳೆಯರ ಪಾತ್ರ ಸ್ಪಷ್ಟವಾಗಿ ಕಂಡುಬರುತ್ತದೆ. ಅದಕ್ಕಿಂತಲೂ ಪೂರ್ವದಲ್ಲಿ ಮಧ್ವಚಾರ್ಯರ ಸೋದರಿ ಕಲ್ಯಾಣಿದೇವಿ, ಪುರಂದರದಾಸರ ಪತ್ನಿ ಸರಸ್ವತಿ ಬಾಯಿ ಹಾಗೂ ಪುತ್ರಿಯರು ಅಂಕಿತದೊಡನೆ ಕೀರ್ತನೆ ರಚನೆಗೈದರು ಎಂದು ಹೇಳಿದ್ದಾರೆ. ಅದಕ್ಕೆ ಸ್ಪಷ್ಟ ಆಧಾರಗಳಿಲ್ಲ. ೧೮ನೇ ಶತಮಾನದ ಉತ್ತರಾರ್ಧದಲ್ಲಿ ಇದ್ದ ಹೆಳವನಕಟ್ಟೆ ಗಿರಿಯಮ್ಮನವರೆಗೆ ಯಾವ ಮಹಿಳಾ ಕೀರ್ತನಕಾರರ ಸಾಹಿತ್ಯವು ಇಡಿಯಾಗಿ ಲಭ್ಯವಾಗಿಲ್ಲ. ಆ ಅಧ್ಯಯನದಲ್ಲಿ ಮಹಿಳಾ ಹರಿದಾಸರ ಕುರಿತು ವಿವರಗಳಿವೆ. ಪ್ರಥಮ ಮಹಿಳಾ ದಾಸರೆಂದು ಗುರುತಿಸಲ್ಪಡುವ ಗಲಗಲಿ ಅವ್ವನವರಿಂದ ಹಿಡಿದು ಹರಪನಹಳ್ಳಿ ಭೀಮವ್ವ ಹಾಗು ಅವಳ ಪ್ರಭಾವಕ್ಕೆ ಒಳಗಾದ ಓರುಬಾಯಿ ಲಕ್ಷ್ಮೀದೇವಮ್ಮ ಬಾಳಿದ ಮಹಿಳಾ ಕವಯಿತ್ರಿಯರಿದ್ದಾರೆ. ೧೮ನೇ ಶತಮಾನದ ಕೊನೆಯಿಂದ ಇಂದಿಗೂ ಮಹಿಳೆಯರು ಅಂಕಿತದಿಂದ ಕೃತಿ ರಚನೆಯ ಕಾರ್ಯದಲ್ಲಿ ತೊಡಗಿರುವುದು ಅವರ ಆಸಕ್ತಿಯನ್ನು ತೋರಿಸುತ್ತದೆ. ಸಹಜವಾಗಿ ಮಹಿಳಾ ಸಾಹಿತ್ಯವು ವೇದನೆಗಳನ್ನು ನೋವು ನಲಿವನ್ನು ಪ್ರತಿನಿಧಿಸುತ್ತದೆ. ಇವು ಕೇವಲ ಆಕೆಯ ಭಾವನೆಗಳಾಗದೇ ಅಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಹೆಣ್ಣಿನ ಸ್ಥಾನಮಾನವನ್ನು ಕುರಿತು ಬೆಳಕು ಚೆಲ್ಲುತ್ತವೆ.

ಮಹಿಳಾ ದಾಸರಲ್ಲಿ ಹೆಳವನಕಟ್ಟೆ ಗಿರಿಯಮ್ಮನದು ಬಹುದೊಡ್ಡ ಹೆಸರು. 'ಹೆಳವನಕಟ್ಟೆ ರಂಗಯ್ಯ'ನ ಸೇವೆಯಲ್ಲೇ ಬದುಕಿನ ಸಾರ್ಥಕತೆಯನ್ನು ಕಂಡುಕೊಂಡ ಗಿರಿಯಮ್ಮನ ಕೀರ್ತನೆಗಳು ಆಕರ್ಷಕವಾಗಿವೆ. ಹರಿಹರರ ಅಭೇದವನ್ನು ಗಿರಿಯಮ್ಮ ತಮ್ಮ ಹಾಡುಗಳಲ್ಲಿ ಪರಿಶೀಲಿಸಿರುವುದು ಗಮನಿಸತಕ್ಕ ಸಂಗತಿ. ಆಕೆ ಕೀರ್ತನೆಗಳಲ್ಲಿ ಒಪ್ಪಾಲು ಸ್ತುತಿ ಗೀತೆಗಳು, ಮುಪ್ಪಾಲು ಭಕ್ತ ಹೃದಯದ ಆರ್ತಮೊರೆ ಅವಳ ಕೀರ್ತನೆಗಳ ಒಳದನಿಯಾಗಿ ಮೂಡಿಬಂದಿದೆ. ಭಕ್ತೆಯೊಬ್ಬಳ ಅಂತರಂಗದ ನಿವೇದನೆಯಾಗಿ ತನ್ನ ಮೆಚ್ಚಿನ ದೈವ ರಂಗನಾಥನ ಮಹಿಮಾತಿಶಯಗಳನ್ನು ಬಗೆ ಬಗೆಯಲ್ಲಿ ಬಣ್ಣಿಸಿರುವಳು. ಎಲ್ಲಾ ಹರಿದಾಸರಂತೆ ಗಿರಿಯಮ್ಮಳು ಕೂಡ ರಂಗನಾಥನನ್ನು ದಾಸ್ಯ, ಸಖ್ಯ, ಮಧುರ, ವಾತ್ಸಲ್ಯ ಹಾಗೂ ಶಾಂತ ಎಂಬ ಪಂಚ ಭಾವಗಳಲ್ಲಿ ಕಂಡು ಆ ಅನುಭವವನ್ನು ಹಾಡಾಗಿಸಿದ್ದಾಳೆ.

ಹರಿದಾಸರ ಸಾಹಿತ್ಯ ಪರಂಪರೆಯಲ್ಲಿ ಗೋಪಾಲದಾಸರ ಸಮಕಾಲೀನಳಾಗಿ ಕಾಣಿಸಿಕೊಳ್ಳುವ ಗಿರಿಯಮ್ಮ ಹೆಳವನಕಟ್ಟೆ ರಂಗ ಎಂಬ ಅಂಕಿತದಲ್ಲಿ ಅನೇಕ ಕೀರ್ತನೆಗಳನ್ನು ಹಾಗೂ ಕೆಲವು ಕಥನ ಕಾವ್ಯಗಳನ್ನು ರಚಿಸಿದ್ದಾಳೆ. ಈಕೆಯ ಜನ್ಮ ಸ್ಥಳ ಹಾವೇರಿ ಜಿಲ್ಲೆಯ ರಾಣೇಬೆನ್ನೂರು. ಈಕೆಯ ಕಾಲ ಸುಮಾರು ೧೮ನೇ ಶತಮಾನದ ಪೂರ್ವಾರ್ಧ ಎಂದು ವಿದ್ವಾಂಸರು ಊಹಿಸಿದ್ದಾರೆ. ಬಾಲ್ಯದಿಂದಲೂ ದೇವರಲ್ಲಿ ಅಚಲಶ್ರದ್ಧೆ ಹೊಂದಿ ಅವಳು ಹೆಳವನಕಟ್ಟೆ ರಂಗನಾಥನ ಭಕ್ತಳಾಗಿದ್ದಳು. ಗೋಪಾಲದಾಸರ ಕೃಪೆಯಿಂದ ತಾನು ಬಿಡಿಸಿದ ರಂಗವಲ್ಲಿಯಲ್ಲಿಯೇ ರಂಗನಾಥನ ದರ್ಶನ ಪಡೆದಳು. ರಂಗನಾಥನನ್ನು ಕುರಿತು ಅನೇಕ ಹಾಡುಗಳನ್ನು ರಚಿಸಿರುವಳು. ಪರಮಾತ್ಮನನ್ನು ಪುತ್ರವಾತ್ಸಲ್ಯದಿಂದ ಕಂಡ ಮಹಾತಾಯಿ ಇವಳು. 'ಹೆಳವನಕಟ್ಟೆ ರಂಗ' ಎಂಬ ಅಂಕಿತ ಅವಳ ಕೃತಿಗಳಲ್ಲಿದೆ. ಚಂದ್ರಹಾಸನ ಕಥೆ, ಲವಕುಶರ ಕಾಳಗ, ಸೀತಾಕಲ್ಯಾಣ, ಶಂಕರಗಂಡನ ಹಾಡು, ಚಂದ್ರಹಾಸನಕಥೆ, ಬ್ರಹ್ಮಕೊರವಂಜಿ, ಕೃಷ್ಣಕೊರವಂಜಿ ಮುಂತಾದ ಕಥನ ಕಾವ್ಯಗಳನ್ನು ರಚಿಸಿದ್ದಾಳೆ. ಗಜೇಂದ್ರ ಮೋಕ್ಷ, ಗಿಳಿ ಪಾರಿಜಾತಗಳನ್ನು ಗಿರಿಯಮ್ಮ ಬರೆದಿದ್ದಾಳೆ ಎನ್ನುತ್ತಾರೆ. ಈ ಎಲ್ಲ ಕೃತಿಗಳಲ್ಲೂ ಭಕ್ತಿಯೇ ಪ್ರಧಾನವಾಗಿದೆ. ತಾನು 'ದಾಸರ ದಾಸರದಾಸಿ' ಎಂಬ ನಮ್ರತೆಯನ್ನೇ ಎಲ್ಲೆಡೆಯೂ ಮೆರೆದಿದ್ದಾಳೆ. ಗಿರಿಯಮ್ಮ ಹೆಚ್ಚು ಕಲಿತವಳಲ್ಲ ಶುದ್ಧ ದೇಸಿ ಶೈಲಿಯಲ್ಲಿಯೇ ಕೃತಿಗಳನ್ನು ರಚಿಸಿದ್ದಾಳೆ. ಭಾವರಸಪೂರ್ಣ ಅಲಂಕಾರ ಸೌಂದರ್ಯಗಳು ಸಹಜವಾಗಿಯೇ ಮೂಡಿ ಬಂದು ಅವಳ ಕೃತಿಗಳನ್ನು ಸರಳ ಸುಂದರ ಕಾವ್ಯಗಳನ್ನಾಗಿಸಿವೆ.

ಹೆಳವನಕಟ್ಟೆ ಗಿರಿಯಮ್ಮ ಕ್ರಿ.ಶ.೧೭೫೦ನೆಯ ಶತಮಾನದಲ್ಲಿ ಬಾಳಿದ ಹರಿದಾಸ ಮಹಿಳೆಯರಲ್ಲಿ ಒಬ್ಬಳಾದ ಪುರಂದರದಾಸರ ತರುವಾಯ ಕರ್ನಾಟಕದಲ್ಲಿ ಸ್ವಸ್ಥವಾಗಿದ್ದ ಹರಿದಾಸ ಸಾಹಿತ್ಯ ಪರಂಪರೆಯನ್ನು ಪುನರುತ್ಥಾನಗೊಳಿಸಿದವರಾದ ಹರಿದಾಸ ಚತುಷ್ಟರಲ್ಲಿ ಎರಡನೆಯವರಾದ ಶ್ರೀ ವಿಜಯದಾಸರ ನಂತರ ಗಿರಿಯಮ್ಮ ಶ್ರೇಷ್ಠ ಹರಿಭಕ್ತಳಾಗಿ ಪ್ರಸಿದ್ಧಳಾಗಿರುವ ತನ್ನ ಕೃತಿಗಳಿಂದ ಹರಿದಾಸ ಸಾಹಿತ್ಯ ಪರಂಪರೆಯಲ್ಲಿ ಅಮರಳಾಗಿದ್ದಾಳೆ. ಅಪರೋಕ್ಷ ಜ್ಞಾನಿಗಳಾಗಿ ಆಶ್ರಿತರನ್ನು ಅನುಗ್ರಹಿಸಿ ಹಲವರಿಗೆ ಕಷ್ಟದಲ್ಲಿ

ಸಹಾಯವನ್ನು ಮಾಡಿ ಔದಾರ್ಯವನ್ನು ಮೆರೆದು ದೇವತಾ ಮಹಿಮ ಪುರುಷಳೆನಿಸಿದ್ದಾಳೆ. ಇವಳ ಕೃತಿಗಳು ರಾಗ, ತಾಳ, ಲಯಬದ್ಧವಾಗಿದ್ದು ಸರಳ ಸುಂದರ ಶೈಲಿಯಲ್ಲಿ ರಚಿತವಾಗಿ ಅವಳ ಕಾವ್ಯಗಳನ್ನು ಓದಿದರೆ ಅಲ್ಲಿನ ತತ್ವಗಳನ್ನರಿಯಬೇಕೆಂಬ ಆಸಕ್ತಿ ಒಡಮೂಡಿಸುತ್ತವೆ. ಭಾಷೆ ಸರಳವಾದರೂ ಭಾವ ಆಳವಾದ ಚಿಂತನೆಯಿಂದ ಕೂಡಿ ನಿರಂತರ ಸಾಧನೆಯಿಂದ ಹೊರಹೊಮ್ಮಿರುವಂತೆ ತೋರುವ ಗಿರಿಯಮ್ಮನ ಕೃತಿಗಳ ಆಮೂಲಾಗ್ರವಾದ ಅಧ್ಯಯನದಿಂದ ಕನ್ನಡ ಹರಿದಾಸ ಸಾಹಿತ್ಯದ ಮೇಲೆ ಹೊಸ ಬೆಳಕು ಹರಿಯಬಹುದು ಎಂದು ಆಶಿಸಿ 'ಹೆಳವನಕಟ್ಟೆ ಗಿರಿಯಮ್ಮನ ಜೀವನ ಮತ್ತು ಕೃತಿಗಳು' ಎಂಬ ವಿಷಯವನ್ನು ಕುರಿತು ಅಧ್ಯಯನಕ್ಕೆ ಆರಿಸಿಕೊಳ್ಳಲಾಗಿದೆ.

ಹೆಳವನಕಟ್ಟೆ ಗಿರಿಯಮ್ಮ ಪವಾಡ ಪುರುಳಂತೆ ಪ್ರಸಿದ್ಧಳಾಗಿರುವ ಅವಳ ಮಹಿಮೆಗಳನ್ನು ಕುರಿತು ಅನೇಕ ಪವಾಡ ಕಥೆಗಳು ಪ್ರಚಲಿತವಾಗಿವೆ. ಆದರೆ ಅವಳ ಜೀವನದಲ್ಲಿ ನಡೆದಿರಬಹುದಾದ ಸಂಗತಿಗಳು ಮಾತ್ರ ಇತಿಹಾಸದ ದೃಷ್ಟಿಯಿಂದ ಮುಖ್ಯವಾಗುತ್ತವೆ. ಆದುದರಿಂದ ವಿಶ್ವಾಸನೀಯವಾದ ಆಧಾರಗಳಿಂದ ಅವಳ ಜೀವನ ಚರಿತ್ರೆಯನ್ನು ಬಿಂಬಿಸುವ ಸಮಸ್ಯೆಯನ್ನು ಪರಿಶೀಲನೆಗಾಗಿ ಸ್ವೀಕರಿಸಲಾಗಿದೆ. ಒಬ್ಬ ವ್ಯಕ್ತಿಯ ಶ್ರೇಷ್ಠತೆಯನ್ನು ಅವಳ ಪ್ರಭಾವದಲ್ಲಿ ಗುರುತಿಸುವುದು ಸಹಜವಾದುದರಿಂದ ಅವಳ ಕೃತಿಗಳನ್ನು ಇತರ ಮಹಿಳಾ ಹರಿದಾಸರ ಕೃತಿಗಳೊಡನೆ ಹೋಲಿಸಿ ಅಧ್ಯಯನ ಮಾಡಿ ಹರಿದಾಸ ಸಾಹಿತ್ಯದಲ್ಲಿ ಹಾಗೂ ಕನ್ನಡ ಸಾಹಿತ್ಯದಲ್ಲಿ ಗಿರಿಯಮ್ಮನ ಸ್ಥಾನವೇನೆಂಬುದನ್ನು ನಿರ್ದೇಶಿಸುವುದು ಈ ಮಹಾಪ್ರಬಂಧದ ಮುಖ್ಯ ಉದ್ದೇಶವಾಗಿದೆ.

ಪ್ರಸ್ತುತ ಮಹಾಪ್ರಬಂಧದಲ್ಲಿ ಗಿರಿಯಮ್ಮನ ಕಾಲದ ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಪರಿಸರವನ್ನು ಅರಿತುಕೊಳ್ಳುವುದರ ಜೊತೆಗೆ ಗಿರಿಯಮ್ಮನ ಜೀವನ ಚರಿತ್ರೆ ವ್ಯಕ್ತಿತ್ವ ಮತ್ತು ಸ್ಥಾನವನ್ನು ನಿರ್ಧರಿಸುವುದು ಮಧ್ಯಕಾಲೀನ ಕನ್ನಡ ಕವಿಯಿತ್ರಿಯರಲ್ಲಿ ಅವಳ ಸ್ಥಾನವನ್ನು ಗುರುತಿಸುವುದು ಮಹಿಳಾ ದೃಷ್ಟಿಕೋನ ವಿಮರ್ಶೆಯ ನೆಲೆಯಲ್ಲಿ ಅರ್ಥ ಮಾಡಿಕೊಳ್ಳುವುದು ಮತ್ತು ಗಿರಿಯಮ್ಮನ ಕೃತಿಗಳ ರಚನೆಯನ್ನು ಕಂಡು ಹಿಡಿಯುವುದು ಮಹಾಪ್ರಬಂಧದ ಉದ್ದೇಶವಾಗಿದೆ. ಪ್ರಸ್ತುತ ಮಹಾಪ್ರಬಂಧವು ಒಟ್ಟು ಒಂಭತ್ತು ಅಧ್ಯಾಯಗಳನ್ನು ಒಳಗೊಂಡಿದೆ. ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪವನ್ನು ಕುರಿತು ಚರ್ಚಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಹರಿದಾಸ ಸಾಹಿತ್ಯದಲ್ಲಿ ಹೆಳವನಕಟ್ಟೆ ಗಿರಿಯಮ್ಮನ ಸಮಕಾಲೀನ ಮಹಿಳೆಯರಲ್ಲಿ ಹರಪನಹಳ್ಳಿ ಭೀಮವ್ವ ಮತ್ತು ಗಲಗಲಿ ಅವ್ವ ಇನ್ನು ಮುಂತಾದ ಮಹಿಳಾ ಕೃತಿಕಾರರ ಕೃತಿಗಳ ಸ್ವರೂಪವನ್ನು ಸಂಕ್ಷಿಪ್ತವಾಗಿ ಉಳಿಸಿ ಹರಿದಾಸ ಸಾಹಿತ್ಯ ಪರಂಪರೆಯಲ್ಲಿ ಹೆಳವನಕಟ್ಟೆ ಗಿರಿಯಮ್ಮಳ ಸಾಹಿತ್ಯವನ್ನು ಕುರಿತು ಈ ಅಧ್ಯಾಯದಲ್ಲಿ ಚರ್ಚೆ ಮಾಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಗಿರಿಯಮ್ಮನ ಜೀವನ ಚರಿತ್ರೆ, ಗಿರಿಯಮ್ಮನ ಕಾಲದ ರಾಜಕೀಯ, ಧಾರ್ಮಿಕ, ಸಾಮಾಜಿಕ ಜೀವನ ಮತ್ತು ಗಿರಿಯಮ್ಮನ ಜನನ ಬೆಳವಣಿಗೆ, ಹುಟ್ಟೂರು, ಮತ, ಕಾಲ ಹಾಗೂ ಕೃತಿಗಳ ರಚನೆ ಕುರಿತು ಪರಿಚಯಿಸಲಾಗಿದೆ.

ಹರಿದಾಸ ಪರಂಪರೆಯಲ್ಲಿ ಗೋಪಾಲದಾಸರ ಸಮಕಾಲೀನಳಾಗಿ ಕಾಣಿಸಿಕೊಳ್ಳುವ ಗಿರಿಯಮ್ಮ 'ಹೆಳವನಕಟ್ಟೆ ರಂಗ' ಎಂಬ ಅಂಕಿತದಲ್ಲಿ ಅನೇಕ ಹಾಡುಗಳನ್ನು ರಚಿಸಿ ಹೆಳವನಕಟ್ಟೆ ಗಿರಿಯಮ್ಮ ಎಂದೇ ಪ್ರಸಿದ್ಧಳಾಗಿದ್ದಾಳೆ. ಭಕ್ತಿಪಂಥಕ್ಕೆ ಸೇರಿದ ಕನ್ನಡ ಕವಿಯಿತ್ರಿಯರಲ್ಲಿ ಹೆಳವನಕಟ್ಟೆ ಗಿರಿಯಮ್ಮನಿಗೆ ಪ್ರಮುಖ ಸ್ಥಾನವಿದೆ. ಆಕೆ ಹುಟ್ಟಿದೂರು ಹಾವೇರಿ ಜಿಲ್ಲೆಯ ರಾಣೇಬೆನ್ನೂರು, ತಂದೆ ಬಿಷಪ್ಪ ಜೋಯಿಸ, ತಾಯಿಯ ಹೆಸರು ತಿಳಿದುಬಂದಿಲ್ಲ. ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ಮಲೆಬೆನ್ನೂರು ಶ್ಯಾನುಭೋಗರ ತಿಪ್ಪರಸನೊಡನೆ ಆಕೆಯ ವಿವಾಹವಾಗಿತ್ತು. ಆಕೆ ಯಾವಾಗಲೂ ದೈವೋನ್ಮಾದ ಸ್ಥಿತಿಯಲ್ಲಿರುತ್ತಿದ್ದಳು. ಭಾವುಕಳಾದ್ದರಿಂದ ಸಾಮಾನ್ಯ ಸ್ತ್ರೀಯರಂತೆ ಸಂಸಾರ ಸುಖವನ್ನು ಬಯಸದೆ ದೇವರ ನಾಮ ಸಂಕೀರ್ತನೆ ಮತ್ತು ಕಾವ್ಯ ರಚನೆಯಲ್ಲಿ ತನ್ನ ಜೀವನವನ್ನು ತೊಡಗಿಸಿಕೊಂಡಿದ್ದಳು.

ನಾಲ್ಕನೆಯ ಅಧ್ಯಾಯದಲ್ಲಿ ಗಿರಿಯಮ್ಮನ ಕೀರ್ತನೆಗಳ ಸ್ವರೂಪವನ್ನು ಮತ್ತು ವಸ್ತು ವಿವರ ಹೇಳಲಾಗಿದೆ. ಗಿರಿಯಮ್ಮನ ಕೃತಿಗಳ ವಸ್ತುವನ್ನು ಸಮಾಜ ವಿಮರ್ಶೆ, ಭಕ್ತಿ ಸ್ವರೂಪ, ಸಮರ್ಪಣೆ ಮನೋಭಾವ, ನೀತಿಬೋಧೆ, ಆತ್ಮವಿಮರ್ಶೆ ಮತ್ತು ಮುಕ್ತಿ ಮಾರ್ಗ ಎಂಬ ಶೀರ್ಷಿಕೆಗಳಡಿಯಲ್ಲಿ ವಿವೇಚಿಸಲಾಗಿದೆ ಹಾಗೂ ಕೃತಿಗಳಲ್ಲಿ ಬರುವ ವರ್ಣನೆ, ಅಲಂಕಾರ, ರಸ ಪ್ರತಿಪಾದನೆ ಮುಂತಾದ ಕಾವ್ಯಾಂಶಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಗಿರಿಯಮ್ಮಳು ಕೀರ್ತನೆಗಳಲ್ಲದೆ ಆರು ಕಥನ ಕಾವ್ಯಗಳನ್ನು ರಚಿಸಿದ್ದಾಳೆ. ೧. ಉದ್ದಾಳಿಕನ ಕಥೆ, ೨. ಚಂದ್ರಹಾಸನ ಕಥೆ, ೩. ಶಂಕರಗಂಡನ ಹಾಡು, ೪. ಲವಕುಶರ ಕಾಳಗ, ೫. ಸೀತಾಕಲ್ಯಾಣ, ೬. ಬ್ರಹ್ಮಕೊರವಂಜಿ ಎಂಬ ಕೃತಿಗಳ ವಸ್ತು ವಿಷಯವನ್ನು ಕುರಿತು ವಿವೇಚಿಸಲಾಗಿದೆ. ಅಪೂರ್ಣ ಹಾಡುಗಳು ಕೃಷ್ಣಕೊರವಂಜಿ ಗಿರಿಯಮ್ಮನಿಂದ ರಚಿತವಾದ ಕಥನ ಕಾವ್ಯಗಳು. ಈ ಕಾವ್ಯ ಈವರೆಗೆ ಅಪೂರ್ಣವಾಗಿ ಮಾತ್ರ ಲಭ್ಯವಿದೆ. ಸೀತಾಕಲ್ಯಾಣ ಮದುವೆ ಸಂದರ್ಭಗಳಲ್ಲಿ ಹಾಡುವ ಉರುಟಾಣೆ ಪದಗಳ ಸಂಗ್ರಹವಾಗಿದೆ. ಇವಲ್ಲದೆ ಹೆಳವನಕಟ್ಟೆ ರಂಗ ಎಂಬ ಅಂಕಿತದಲ್ಲಿ ಗಿರಿಯಮ್ಮ ಅನೇಕ ಕೀರ್ತನೆಗಳನ್ನು ರಚಿಸಿದ್ದಾಳೆ.

ಆರನೆಯ ಅಧ್ಯಾಯದಲ್ಲಿ ಗಿರಿಯಮ್ಮಳ ಕೃತಿಗಳನ್ನು ಮಹಿಳಾ ದೃಷ್ಟಿಕೋನ ತತ್ವಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುವುದರ ಜೊತೆಗೆ ಸಾಮಾಜಿಕ ಜೀವನದಲ್ಲಿ ಮಹಿಳಾ ತತ್ವಗಳನ್ನು ಕುರಿತು ವಿಚಾರಗಳನ್ನು ಚರ್ಚಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಹೆಳವನಕಟ್ಟೆ ಗಿರಿಯಮ್ಮನ ಕೃತಿಗಳ ಭಾಷೆ ಮತ್ತು ಶೈಲಿಗೆ ಸಂಬಂಧಿಸಿದಂತೆ ಕೃತಿಗಳ ವಸ್ತು, ಸನ್ನಿವೇಶ, ಪಾತ್ರ, ಭಾಷೆ, ಛಂದಸ್ಸು, ಉಕ್ತಿವೈಚಿತ್ರ್ಯ, ಸಂಸ್ಕೃತಿ, ವಿಶಿಷ್ಟ ಪದಪ್ರಯೋಗಗಳು ಮತ್ತು ಭಾಷೆಯ ನಿರೂಪಣೆಯ ಶೈಲಿ ಇತ್ಯಾದಿ ಅಂಶಗಳನ್ನು ಕುರಿತು ವಿವೇಚಿಸಲಾಗಿದೆ

ಎಂಟನೆಯ ಅಧ್ಯಾಯದಲ್ಲಿ ಮಧ್ಯಕಾಲೀನ ಕನ್ನಡ ಸಾಹಿತ್ಯದ ಕವಿಯಿತ್ರಿಯರಲ್ಲಿ ಹೆಳವನಕಟ್ಟೆ ಗಿರಿಯಮ್ಮ ಪಡೆದುಕೊಂಡ ಸ್ಥಾನ, ಮಹತ್ವ, ಹೆಗ್ಗಳಿಕೆಗಳನ್ನು ತೌಲನಿಕವಾಗಿ ಇಲ್ಲಿ ವಿವೇಚಿಸಲಾಗಿದೆ. ಈ ಅಧ್ಯಯನದಲ್ಲಿ ವ್ಯಾಖ್ಯಾತ್ಮಕ ಮತ್ತು ವಿಶ್ಲೇಷಣಾತ್ಮಕ ವಿಧಾನಗಳು ಬಳಸಿಕೊಳ್ಳಲಾಗಿದೆ. ಗಿರಿಯಮ್ಮಳನ್ನು ಕೇಂದ್ರವಾಗಿಟ್ಟುಕೊಂಡು ಒಟ್ಟು ಮಹಿಳಾ ಹರಿದಾಸರ ಬಗ್ಗೆ ಹೊಸ ಹೊಳಹು ನೀಡುವುದು ಈ ಅಧ್ಯಯನದಲ್ಲಿ ಹಾಗೂ ಅಧ್ಯಾಯ ಒಂಬತ್ತು ಸಮಾರೋಪದಲ್ಲಿ ಅಧ್ಯಯನದ ಫಲಿತಗಳನ್ನು ನೀಡಲಾಗಿದೆ.

# ಅಧ್ಯಾಯ ೨

# ಹರಿದಾಸ ಸಾಹಿತ್ಯ ಪರಂಪರೆಯಲ್ಲಿ ಮಹಿಳೆ

೨

# ಹರಿದಾಸ ಸಾಹಿತ್ಯ ಪರಂಪರೆಯಲ್ಲಿ ಮಹಿಳೆ

ಕರ್ನಾಟಕ ಹರಿದಾಸ ಸಾಹಿತ್ಯ ಪರಂಪರೆ ಕ್ರಿ.ಶ.೧೫ರಿಂದ ೧೮ನೇ ಶತಮಾನದವರೆಗೆ ಸುಮಾರು ನಾಲ್ಕು ಶತಮಾನಗಳ ಕಾಲ ಭಕ್ತಿ ಸಾಹಿತ್ಯವನ್ನು ಸುಮಾರು ೩೦೦ ಜನ ಹರಿದಾಸರು ತಮ್ಮ ವಿವಿಧ ರೀತಿಯ ರಚನೆಗಳಿಂದ ವಿಶೇಷವಾಗಿ ಕೀರ್ತನೆಗಳಿಂದ ಜನಪ್ರಿಯವಾಗಿಸಿದರು. ಸಾಮಾಜಿಕ ಚಳುವಳಿಗಾಗಿ ಪುರಂದರದಾಸ ಮತ್ತು ಕನಕದಾಸರಂತಹ ಕೆಲವು ಮುಖ್ಯ ಹರಿದಾಸರ ಹೆಸರು ಚಿರಪರಿಚಿತವಾಗಿವೆ. ಸಾಹಿತ್ಯಿಕ ಮಾತ್ರವಲ್ಲದೆ ದ್ವೈತ ಸಿದ್ಧಾಂತವನ್ನು ಅಧ್ಯಯನ ಮಾಡುವ ದೃಷ್ಟಿಯಿಂದಲೂ ಹರಿದಾಸ ಸಾಹಿತ್ಯ ಮಹತ್ವದಾಗಿದೆ. ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಮತ್ತು ಕರ್ನಾಟಕ ಸಂಗೀತ ಕ್ಷೇತ್ರಕ್ಕೆ ಕೀರ್ತನೆಗಳ ಮೂಲಕ ಹರಿದಾಸರು ನೀಡಿದ ಕೊಡುಗೆ ಮಹತ್ವದ್ದಾಗಿದೆ.

ಕರ್ನಾಟಕ ಹರಿದಾಸ ಸಾಹಿತ್ಯ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಸಂಗೀತ ಹಾಗೂ ಸಂಸ್ಕೃತಿಗೆ ಮಹತ್ವದ ಕಾಣಿಕೆಯನ್ನು ನೀಡಿದೆ. ಹರಿದಾಸ ಸಾಹಿತ್ಯವು ಕನ್ನಡ ಜನರ ಮೇಲೆ ವಿಶೇಷವಾದ ಪ್ರಭಾವವನ್ನು ಬೀರಿದೆ. ತತ್ವಜ್ಞಾನ, ಸಾಮಾಜಿಕ ಕಳಕಳಿ, ಆಧ್ಯಾತ್ಮ ಹಾಗೂ ಭಕ್ತಿ ಇಂತಹ ಪ್ರವೃತ್ತಿಗಳಿಂದ ಹರಿದಾಸ ಸಾಹಿತ್ಯ ಪರಂಪರೆ ಇಂದು ಜೀವಂತವಾಗಿ ಉಳಿದುಕೊಂಡು ಮುಂದುವರೆದಿರುವುದು ಅದರ ಸಾರ ಸತ್ವಕ್ಕೆ ನಿದರ್ಶನವಾಗಿದೆ. ವೈದಿಕ ತತ್ವಜ್ಞಾನ ವೈದಿಕ ಜೀವನ ವಿಧಾನ ಈ ದೇಶದ ಸಾಂಸ್ಕೃತಿಕ ಬದುಕಿನ ನೆಲೆಗಟ್ಟನ್ನು ರೂಪಿಸುವಲ್ಲಿ ಬಹು ಮಹತ್ವದ ಪಾತ್ರವನ್ನು ವಹಿಸಿದೆ. ಆದರೆ ವ್ಯಕ್ತಿಯ ಮುಕ್ತಿಗೆ ಸಾಮೂಹಿಕ ಏಳಿಗೆಯನ್ನು ಒಳಗೊಂಡು ರೂಪತಾಳಿದ ವೈದಿಕ ಧರ್ಮ ತನ್ನ ಅಭಿವ್ಯಕ್ತಿಗಾಗಿ ಸಂಸ್ಕೃತ ಭಾಷೆಯನ್ನು ಅವಲಂಬಿಸಿತು. ಸಂಸ್ಕೃತ ಭಾಷೆಯನ್ನು ತಿಳಿಯದ ಜನ ಸಾಮಾನ್ಯರು ಅನಿವಾರ್ಯವಾಗಿ ಬೇರೆ ವಿವರಣೆ, ವ್ಯಾಖ್ಯಾನ, ವಿಶ್ಲೇಶಣೆಗಳನ್ನು ಅವಲಂಬಿಸಬೇಕಾಯಿತು. ಹೀಗೆ ಧರ್ಮ ತತ್ವಜ್ಞಾನಗಳ ತಿಳುವಳಿಕೆ ಹಾಗೂ ಆಚರಣೆಗಳ ಸಂಬಂಧದಲ್ಲಿ ಬೇರೊಬ್ಬನ ಪ್ರವೇಶದಿಂದಾಗಿ ಅದರ ಸ್ವರೂಪ ಬದಲಾಯಿತು. ಹೀಗಾಗಿ ಕಾಲದಿಂದ ಕಾಲಕ್ಕೆ ವೈದಿಕ ಧರ್ಮ ಹಲವು ರೂಪಾಂತರಗಳನ್ನು ಹೊಂದಬೇಕಾಯಿತು.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅವಿಸ್ಮರಣೀಯ ಘಟ್ಟಗಳೆಂದರೆ ವಚನ ಸಾಹಿತ್ಯ ಹಾಗೂ ಹರಿದಾಸ ಸಾಹಿತ್ಯ ಎಂದು ಹೇಳಬಹುದು, ವಚನ ಸಾಹಿತ್ಯ ಕ್ರಿ.ಶ.೧೨ನೇ ಶತಮಾನದಲ್ಲಿ ಪ್ರವರ್ಧಿಸಿ,

ಬೆಳೆದು ಬಂದರೆ ಹರಿದಾಸ ಸಾಹಿತ್ಯ ಕ್ರಿ.ಶ.೧೪ನೇ ಶತಮಾನದಿಂದ ಸುಮಾರು ೨೦೦ ವರ್ಷ ಬೆಳೆದು ಅನಂತರ ೧೭ನೇ ಶತಮಾನ ಸ್ವಲ್ಪ ಮಂಕಾಗಿ ಮತ್ತೆ ೧೭ನೇ ಶತಮಾನದಿಂದ ೧೯ನೇ ಶತಮಾನದ ಆರಂಭದ ಘಟ್ಟದವರೆಗೆ ವ್ಯಾಪಿಸಿತು. ಇಂದೂ ಹರಿದಾಸ ದೀಕ್ಷೆ ಪಡೆದವರು ನಮ್ಮಲ್ಲಿದ್ದಾರೆ. ಹರಿದಾಸ ಸಾಹಿತ್ಯ ನಿಂತ ನೀರಾಗದೆ ಮುಂದುವರೆಯುತ್ತಿದೆ. ಇಷ್ಟಾದರೂ ವಚನ ಮತ್ತು ಹರಿದಾಸ ಸಾಹಿತ್ಯಗಳ ಹುಟ್ಟು ಸ್ವರೂಪಗಳು ಬೇರೆ ಬೇರೆಯೆ ಆಗಿವೆ. ಧ್ಯೇಯ ಕೂಡ ಬೇರೆಯಾಗಿದೆ. ಮೊದಲಿನ ಚಳುವಳಿ ಅನುಭಾವ ಆದರೆ ಎರಡನೆಯದು ಭಕ್ತಿಯ ಆಂದೋಲನ, ಆಧ್ಯಾತ್ಮಿಕ ಆಂದೋಲನ ಎರಡೂ ಆಂದೋಲನಗಳ ಪ್ರಧಾನ ಧ್ಯೇಯ ಸಮಾಜ ಹಿತ ಹಾಗೂ ಸಮಾಜ ನಿರ್ಮಿಸಿದ ಪ್ರತಿಬಂಧಕಗಳ ವಿರುದ್ಧ ಹೋರಾಟ. ಈ ಹೋರಾಟ ಹಿಂದಿನಿಂದಲೂ ನಡೆದಿದ್ದು ಇಂದೂ ನಡೆದು ಇನ್ನೂ ಮುಂದುವರೆಯುತ್ತಿದೆ. ಆದರೆ ಸಮಾಜ ಸುಧಾರಣೆಯಲ್ಲಿ ವಚನ ಸಾಹಿತ್ಯ ಮತ್ತು ಹರಿದಾಸ ಸಾಹಿತ್ಯ ಮಾಡಿರುವ ಉಪಕಾರ ಮರೆಯುವಂತಿಲ್ಲ.

ಸಾಹಿತ್ಯಕ್ಕೆ ಮೂರ್ತಿ ಸ್ವರೂಪ ಕೊಡುವ ಸಾಧನ ಭಾಷೆ. ಭಾಷೆ ಸಾಹಿತ್ಯವನ್ನು ಹಿಡಿದಿರಿಸುತ್ತದೆ. ಹಾಗೂ ಸಮೂಹ ಸಂಪರ್ಕ ಮಾಧ್ಯಮ ಸಾಧನ, ತಲೆ ಮಾರಿನಿಂದ ತಲೆ ಮಾರಿಗೆ ಬಾಯಿಯ ಮೂಲಕ ಬೆಳೆದು ಬಂದ ಸಾಹಿತ್ಯವನ್ನು 'ಜನಪದ ಸಾಹಿತ್ಯ' ವೆನ್ನುತ್ತೇವೆ. ಬರಹದಲ್ಲಿ ದೊರೆವಂಥದ್ದೆ 'ಗ್ರಂಥಸ್ಥ ಸಾಹಿತ್ಯ' ಹರಿದಾಸ ಸಾಹಿತ್ಯ ಜನಪದದಲ್ಲಿ ಅನುರಣ ಗೊಳ್ಳುತ್ತಿರುವ ಗ್ರಂಥಸ್ಥ ಆದ ಸಾಹಿತ್ಯ ಗ್ರಂಥಸ್ಥ ಆದರೂ ಕಾವ್ಯದಲ್ಲಿರುವ ಓಜಸ್ಸು, ತತ್ವ, ಕಾವ್ಯಧರ್ಮ, ಕವಿತಾಗುಣ, ಗೇಯತೆ ಇದರಲ್ಲಿ ಒಳಗೊಂಡಂತೆ ಜನಪದ ಸೊಗಡಿನ ಅಭಿವ್ಯಕ್ತಿಯೂ ಇದೆ. ಜನಪದ ಸಾಹಿತ್ಯದಂತೆಯೆ ಹರಿದಾಸ ಸಾಹಿತ್ಯವೂ ಶತಮಾನಗಳಿಂದ ಬೆಳೆದು ಬಂದದ್ದೂ ಆಗಿದೆ. ಜನ ಸಾಮಾನ್ಯರಿಗೆ ಸುಲಭವಾಗಿ ಅರ್ಥ ಆಗಿಸಲು ಜನಪದ ನುಡಿ ಮುತ್ತುಗಳಲ್ಲಿ ತಮ್ಮ ಸಾಹಿತ್ಯವನ್ನು ಹರಿದಾಸರು ಪ್ರಸಾರಿಸಿದ್ದಾರೆ. ಸಮಾಜದ ಹಿತ, ಸುಧಾರಣೆ, ಒಳಿತಿಗಾಗಿ ಶ್ರಮಿಸಿದ ಸಂಘಟಿತ ಸಮುದಾಯ-ಹರಿದಾಸರದು ಈ ಕಾರಣವಾಗಿ ತಮ್ಮ ಕಾಲದ ಜನಭಾಷೆಯನ್ನು ಬಳಸಿದರು.

ಹರಿದಾಸ ಸಾಹಿತ್ಯ ಒಂದು ಕಾಲದ ಮತ, ಧರ್ಮ, ಸಂಪ್ರದಾಯ ಎತ್ತಿ ಹಿಡಿಯಲು ಪ್ರಸರಿಸಲು ಒಡಮೂಡಿ ಬಂದಿತು ಸಾಮಾಜಿಕ ಬದುಕಿನಲ್ಲಿ ಸಂಘಟನೆ ಸುಧಾರಣೆ ಪ್ರಗತಿಯ ಒಲವು, ಜನಭಾಷೆಯ ಬಳಕೆ ಲಕ್ಷಣಗಳಿಂದ ಹರಿದಾಸ ಸಾಹಿತ್ಯ ಸೃಜನಾತ್ಮಕ ಚಟುವಟಿಕೆಗಳಿಗೆ ಪ್ರೇರಕವಾಯಿತು.

ಇನ್ನು ಆಶ್ರಯದಾತರಾದ ರಾಜರು-ಹರಿದಾಸ ಸಾಹಿತ್ಯಕ್ಕೆ ರಾಜಾಶ್ರಯವನ್ನು ಪ್ರಧಾನವಾಗಿ ಅವಲಂಬಿಸದೆ ಅನುವಾಗಿ ಪೋಷಕವಾಯಿತು. ವಿಜಯನಗರದ ಅರಸರ ಕಾಲದಲ್ಲಿ ದಾಸಸಾಹಿತ್ಯ ಚೆನ್ನಾಗಿ ಬೆಳೆಯಿತು. ದಾಸ ಪರಂಪರೆ ಮುಂದುವರೆಯಿತು. ವಿಜಯನಗರ ಸಾಮ್ರಾಜ್ಯದ ಅಳಿವು ಹರಿದಾಸ ಸಾಹಿತ್ಯ ನಿಂತು ಹೋಗಿದ್ದು ಒಂದು ಶತಕಗಳ ಕಾಲ ಅನಂತರ ಪುನಃ ದಾಸ ಸಾಹಿತ್ಯ

ಸಾಧನೆಯಲ್ಲಿ ಮಂತ್ರಾಲಯ ಕ್ಷೇತ್ರದ ಶ್ರೀ ರಾಘವೇಂದ್ರ ಸ್ವಾಮಿಗಳ ಕುರಿತಾಗಿ ಭಕ್ತಿ ಸ್ಫೂರ್ತಿಯಿಂದಾಗಿ ಅನೇಕ ಹರಿದಾಸರು ಕೃತಿ ರಚನೆ ಮಾಡಿದರು. ಈ ಎಲ್ಲ ಕಾರಣದಿಂದಾಗಿ ಹಾಗೂ ಹರಿದಾಸ ಸಾಹಿತ್ಯ ಮುಖ್ಯವಾಗಿ ಭಕ್ತಿ ಸಾಹಿತ್ಯವೆಂದು ಕರೆಯುವುದರಿಂದ ಭಕ್ತಿ ಸಾಹಿತ್ಯ, ಭಕ್ತಿ ಪಂಥಗಳನ್ನು ಕುರಿತು ವಿಶ್ಲೇಷಿಸುವುದು. ಸೂಕ್ತವಾಗಿದೆ.

ಕಣ್ಣಿಗೆ ಕಾಣದ ಅಗೋಚರವಾಗಿರುವ ಸರ್ವವ್ಯಾಪಿ, ಸರ್ವಶಕ್ತ, ಸರ್ವಾಂತರ್ಯಾಮಿ ಎನ್ನುವ ಪರಮಾತ್ಮನನ್ನು ಸಾಕ್ಷಾತ್ಕಾರಿಸಿಕೊಳ್ಳಲು ತಮ್ಮ ಬದುಕನ್ನೆ ಸಮರ್ಪಿಸಿಕೊಂಡು ಲೌಕಿಕ ಅಥವಾ ಇಹದ ಸುಖವನ್ನು ಕ್ಷಣಿಕ 'ನೀರ ಮೇಲಣಗುಳ್ಳೆ' 'ಭ್ರಾಂತಿ' ಎಂದು ತ್ಯಜಿಸಿ ನಿತ್ಯ ಶಾಶ್ವತವೆನಿಸುವ ಭಗವತ ಸುಖವನ್ನು ಪಡೆಯಲು ಯತ್ನಿಸುವ ಪರಮ ಧ್ಯೇಯ ಹಾಗೂ ಗುರಿಯನ್ನು ಹೊಂದಿರುವರು. ಇಂಥ ಅನುಭಾವಿಗಳಾಗುವ (ಹರಿದಾಸರ ಪರಿಭಾಷೆಯಲ್ಲಿ ಅಪರೋಕ್ಷಜ್ಞಾನಿ) ಸಾಧಕರಾಗಿ ಸಾಧನೆಯ ಮೆಟ್ಟಲೇರಬೇಕಾಗುತ್ತದೆ. ದೇವರನ್ನು ಜ್ಞಾನದ ಅರಿವಿನ ಬೆಳಕಲ್ಲಿ ಕಾಣಲು ಹಂಬಲಿಸಿ ಹಲಬುತ್ತಾರೆ ಇದಕ್ಕೆ ಮುಖ್ಯ ಸಾಧಕ ಅಂಶವೆ ಭಕ್ತಿ. ಭಕ್ತಿಯನ್ನು ಒಡಮೂಡಿಸುವ ಪ್ರೇರಿಪಿಸುವ ಕುರಿತು ಹೇಳಿರುವ ಮಾತು ಗ್ರಂಥ, ಪದ, ವಚನ, ಕೀರ್ತನೆ ಎಲ್ಲವೂ 'ಭಕ್ತಿ ಸಾಹಿತ್ಯ' 'ಅನುಭಾವ ಸಾಹಿತ್ಯ' ಎಂದೆಲ್ಲ ಹೆಸರಿನಿಂದ ಕರೆಯಲ್ಪಡುತ್ತದೆ. ಭಕ್ತಿಯ ವಿವಿಧ ನಿರೂಪಣೆ, ವಿವಿಧ ದರ್ಶನ ಕುರಿತು ತಿಳಿಸುವುದು ಅತ್ಯಗತ್ಯವೆಂದೆನಿಸುತ್ತದೆ.

ಭಕ್ತಿಯು ತೀರ ವೈಯಕ್ತಿಕವಾದದು ಅದನ್ನು ಭೌದ್ಧಿಕವಾಗಿ ಹೀಗೆ ಎಂದು ಖಚಿತವಾಗಿ ವಿವರಿಸಲಾಗದು ಅದು ಹೃದಯಕ್ಕೆ ಸಂಬಂಧಿಸಿದುದು. ಅಂತರಂಗದ ವಿಕಾಸವನ್ನು ಕುರಿತು ಸಾಧನೆಗೆ ವಿಶಾಲವಾದ ಅರ್ಥದಲ್ಲಿ ಭಕ್ತಿಯೆನ್ನುವುದು ತಳಹದಿ, ಭಕ್ತಿಗೆ ಭಯವೇ ಮೂಲ. ಆದಿಮಾನವನಿಂದಲೂ ಭಕ್ತಿಗೆ ಭಯವೇ ಮೂಲವೆಂಬ ಸಿದ್ಧಾಂತವನ್ನು ೧೨ನೇ ಶತಮಾನದ ಶಿವಯೋಗಿ ಸಿದ್ಧರಾಮನೂ ಒಪ್ಪಿರುವಂತಿದೆ. ಅವನು ಇದನ್ನು ಹೀಗೆ ಪ್ರತಿಪಾದಿಸಿರುವನು.

> ರೂಪಿಲ್ಲದ ನೆಲದಲ್ಲಿ ಸಸಿಯನೇ ಬೆಳೆವುದಯ್ಯಾ?
> ಭಯವಿಲ್ಲದವನಲ್ಲಿ ಭಕ್ತಿಯನೇ ಬೆಳೆವುದಯ್ಯಾ?
> ಭಯ ಕೆಟ್ಟಡೆ ಭಕ್ತಿ ಬಿಡುವುದು ಮಹದೇವನೊಲ್ಲ
> ಕಪಿಲ ಸಿದ್ಧಮಲ್ಲಿನಾಥನಾ ಹೋ: ಅಯ್ಯಾ!

ಭಕ್ತಿ ಪದ ಮೊಟ್ಟ ಮೊದಲು ಸಿಗುವುದು ಶ್ವೇತಾಶ್ವೇತರ ಉಪನಿಷತ್ತಿನಲ್ಲಿ. ಅಲ್ಲಿ ಭಕ್ತಿ ಪದದ ಬಳಕೆ ಹೀಗೆ ಬಂದಿದೆ.

> "ಯಸ್ಯದೇವ ಪರಾಭಕ್ತಿ: ಯಥಾದೇವೇ ತಥಾಗುಕೌ.
> ತಸ್ಯೆತೇ ಕಥಿತಾಹ್ಯರ್ಥ ಪ್ರಕಾಶಂತೇ ಮಹಾತ್ಮನ."

'ಭಕ್ತಿ' ಎಂಬುದು 'ಭಜ್' ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. 'ಭಜ್' ಎಂದರೆ ಆಶ್ರಯಿಸು ಪೂಜಿಸು ಎಂದರ್ಥ. ಭಕ್ತಿಯ ತಿರುಳೇ ಆಶ್ರಯ ಪೂಜೆ, ಸೇವೆ, ವಂದನೆ, ಇತ್ಯಾದಿ, ಇದನ್ನೇ ವಿಶಿಷ್ಟಾದ್ವೈತ ಸಿದ್ಧಾಂತ ಪ್ರವರ್ತಕರಾದ ಶ್ರೀ ರಾಮಾನುಜರು 'ಭಗವತ್ಕೈಂಕರ್ಯ' ವೆಂದಿದ್ದಾರೆ. ಕಿಂಕರ (ಭೃತ್ಯ) ವೆಸಗುವುದೇ ಕೈಂಕರ್ಯ. (ಸೇವೆ) ರಾಮಾನುಜರ ಪ್ರಕಾರ ಜ್ಞಾನ ಭಕ್ತಿಯೊಡಗೂಡಿರಬೇಕು ಭಗವಂತನನ್ನು 'ಭಕ್ತ ಪರಾಧೀನ' ನೆನ್ನುವುದಿದೆ. ಭಕ್ತಿ-ಭುಕ್ತಿಗೆ ಅನ್ನವೆಂದೂ ಅರ್ಥ ದೇವರನ್ನು ಸಂತೋಷಗೊಳಿಸಲು ತೃಪ್ತಿಪಡಿಸಲು ಬೇಕಾದ ನಿವೇದನ ರೂಪವಾದ 'ಅನ್ನ' ವೇ ಭಕ್ತಿ ನಿಷ್ಕಾಮ ಭಕ್ತಿ.

ಇನ್ನು ಸಂಸ್ಕೃತದ ವ್ಯಾಕರಣ ಸೂತ್ರಗಳ ಕಾಲಕ್ಕೆ ಬಂದಾಗ ಕ್ರಿ.ಪೂ ೫, ೬ನೇ ಶತಮಾನದ ಪಾಣಿನಿಯ ಸೂತ್ರಗಳಲ್ಲಿ ಭಕ್ತಿ, ಅವತಾರಗಳ ಕಲ್ಪನೆಗೆ ತಿರುಗಿತು ಕೃಷ್ಣನನ್ನು ವಿಷ್ಣುವಿನ ಅವತಾರವೆಂದು ತಿಳಿದು ಪೂಜಿಸಿದುದು ಕಂಡು ಬರುತ್ತದೆ. ಪಾಣಿನಿಯ ನಂತರದ ಕ್ರಿ.ಪೂ ೧೪ನೇ ಶತಮಾನದ ಪತಂಜಲಿಯೂ ಕೃಷ್ಣ ವಾಸುದೇವ ಎಂದು ಪೂಜಿಸಲ್ಪಡುವದನ್ನು ಸೂಚಿಸುತ್ತಾನೆ. ಶ್ರೀಮದ್ ಭಗವದ್ಗೀತೆಯಲ್ಲಿ ಭಕ್ತಿ ಧಾರೆಯಾಗಿ ಹರಿದಿದೆ. ಭಗವದ್ಗೀತೆಯು ವಿಷ್ಣು ಭಕ್ತಿಯಿಂದ ತುಂಬಿ ತುಳುಕಿದೆ. ಭಕ್ತಿಯೋಗವೆಂದೆನಿಸಿಕೊಂಡು ಮೋಕ್ಷ ಸಾಧನೆಗೆ ಭಕ್ತಿ ಬಹಳ ಸುಲಭವಾದ ಮಾರ್ಗವಾಗಿ ತೋರಿದೆ. ಗೀತೆಯಲ್ಲಿ 'ಯೋ ಮೇ ಭಕ್ತ: ಸ ಮೇ ಪ್ರಿಯ: ಮೇ ಭಕ್ತ: ಪ್ರಣಶ್ಯತೆ' ಇತ್ಯಾದಿ ಸಾಲುಗಳು ವಿಷ್ಣು ಭಕ್ತಿಯ ಮಹತ್ವವನ್ನು ಸಾರುತ್ತವೆ. 'ನಾರದ ಭಕ್ತಿಸೂತ್ರ'ದಲ್ಲಿ 'ಯಾರೊಬ್ಬರ ಬಗ್ಗೆಯಾಗಲಿ ನಮಗಿರುವ ಪರಮ ಪ್ರೀತಿಯೆ ಭಕ್ತಿ' ಎಂದು ಹೇಳಲಾಗಿದೆ. ಭಾಗವತದಲ್ಲಿ ಭಗವಂತನನ್ನು ನಿಸ್ವಾರ್ಥಭಾವದಿಂದ ಭಜಿಸುವುದು ಭಕ್ತಿ ಎಂದೂ ರಾಮಾಯಣಲ್ಲಿ 'ಭಗವಂತನೊಂದಿಗಿರುವ ನಿಕಟ ಸಂಬಂಧವೇ ಭಕ್ತಿ' ಇವುಗಳನ್ನು ಗಮನಿಸಿದಾಗ ಪರಿಶುದ್ಧವಾದ ಪ್ರೇಮವೇ ಭಕ್ತಿಯ ತಳಹದಿಯೆಂಬುದು ವಿದಿತವಾಗುತ್ತದೆ.

ನಾರದ ಭಕ್ತಿ ಸೂತ್ರದಲ್ಲಿ ಭಕ್ತಿಎನ್ನುವುದು ಪರಮ ಪ್ರೇಮರೂಪಮಾದದ್ದು ಸರ್ವ ವ್ಯಾಪ್ತಿಯಾದ ಶಕ್ತಿಗೆ ಸಂಪೂರ್ಣವಾಗಿ ಅರ್ಪಿಸಿಕೊಳ್ಳುವುದರಿಂದ ಉಂಟಾಗುವ ಅನಿರ್ವಚನೀಯ ಅನುಭವ ಎಂದು ವಿವರಿಸಲಾಗಿದೆ. ಇದನ್ನೇ ಶಾಂಡಿಲ್ಯ ತನ್ನ ಭಕ್ತಿ ಸೂತ್ರದಲ್ಲಿ ಈಶ್ವರನ ಮೇಲಿನ ತೀವ್ರತರವಾದ ಪ್ರೇಮವೆಂದು ಕರೆದಿರುವನು. ನಾರದ ಭಕ್ತಿ ಸೂತ್ರದಲ್ಲಿ ಭಕ್ತಿಯ ಹನ್ನೊಂದು ರೂಪಗಳನ್ನು ಹೇಳಲಾಗಿದೆ. ಅವುಗಳೆಂದರೆ

೧. ಗುಣಮಹಾತ್ಮಸಕ್ತಿ. ೨.ರೂಪಾಸಕ್ತಿ. ೩.ಪೂಜಾಸಕ್ತಿ. ೪.ಸ್ಮರಣಾಸಕ್ತಿ. ೫.ದಾಸ್ಯಾಸಕ್ತಿ. ೬. ಸಖ್ಯಾಸಕ್ತಿ. ೭.ವಾತ್ಸಲ್ಯಾಸಕ್ತಿ. ೮.ಕಾಂತ್ಯಾಸಕ್ತಿ. ೯.ಆತ್ಮನಿವೇದನಾಸಕ್ತಿ. ೧೦.ತನ್ಮಯಾಸಕ್ತಿ. ೧೧.ಪರಮ ವಿರಹಾಸಕ್ತಿ.

ಭಾಗವತದಲ್ಲಿ ನವವಿಧ ಭಕ್ತಿಗಳನ್ನು ಹೇಳಲಾಗಿದೆ. ಅವು ಶ್ರವಣ ಕೀರ್ತನ, ವಿಷ್ಣೋಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ, ಆತ್ಮನಿವೇದನ ನವವಿಧ ಭಕ್ತಿಗಳಲ್ಲಿ ಮೊದಲು ಆರು ಭಕ್ತಿ ಮಾರ್ಗದ ಸಾಧನ ಕ್ರಿಯೆಗಳು ಭಕ್ತಿಯ ಅನುಸಂಧಾನದಲ್ಲಿ ಪೂರ್ವ ಸಿದ್ಧತೆಗಳು ಉಳಿದ ಮೂರು ವಿಶಿಷ್ಟವಾದ ಭಕ್ತಿ ಭಾವಗಳಾಗಿವೆ.

'ಭಕ್ತನಿಂದ ಭಗವಂತನೆಡೆಗೆ ನಿರಂತರವಾಗಿ ಹರಿಯುವ ಪ್ರೇಮ ಪ್ರವಾಹವೇ ಭಕ್ತಿ, ಪ್ರೇಮ, ಪ್ರವಾಹದ ಮೂಲಕ ಭಕ್ತಿ ಭಗವಂತನಲ್ಲಿ ಪರಸ್ಪರ ಸಂಬಂಧವೇರ್ಪಡುತ್ತದೆ. ಆ ಸಂಬಂಧ ನಿತ್ಯವಾದುದು ಶಾಶ್ವತವಾದುದು ಆ ನಿತ್ಯ ಸಂಬಂಧವನ್ನೇ ಭಕ್ತಿ ಎನ್ನಬಹುದು. ಪ್ರೇಮದಿಂದಲೇ ಹುಟ್ಟಿ ಪ್ರೇಮಮಯವಾಗಿಯೇ ಭಗವಂತನತ್ತ ಪ್ರವಹಿಸುವ ಪ್ರೇಮವೇ ಭಕ್ತಿ'.

ಪಾಣಿನಿಯ ದಶಾವತಾರ ಕಲ್ಪನೆಯಲ್ಲಿ ಭಕ್ತಿ ಮಾರ್ಗಕ್ಕೆ ಹೊಸಕಳೆ ಬಂದಿತು. ಅದಕ್ಕನುಗುಣವಾಗಿ ಪಂಚಭಾವಗಳಾದ ದಾಸ್ಯ, ಸಖ್ಯ, ಮಧುರ, ವಾತ್ಸಲ್ಯ, ಶಾಂತ, ಕಲ್ಪನೆ ಮೂಡಿ ಬಂದಿತು. ಪ್ರಲ್ಹಾದನು ನವವಿಧ ಭಕ್ತಿಗಳನ್ನು ಹೇಳಿದ್ದಾನೆ.

"ಶ್ರವಣಂ ಕೀರ್ತನಂ ವಿಷ್ಣೋ : ಸ್ಮರಣ ಪಾದಸೇವನಂ
ಅಚನಂ ವಂದನಂ ದಾಸ್ಯಂ ಸಖ್ಯಂ ಆತ್ಮ ನಿವೇದನಮ್"

ಅನುಭಾವ ಎಂಬ ಪದ ಶರಣರು ಆಧ್ಯಾತ್ಮಿಕ ಪ್ರಪಂಚಕ್ಕೆ ಕೊಟ್ಟ ಕಾಣಿಕೆ. 'ಅನುಭಾವ' ಆಧ್ಯಾತ್ಮಿಕ ಸಾಧಕನ ಭಗವತ್ಪರವಾದ ಹಂಬಲ ಭಕ್ತ ಮತ್ತು ಭಗವಂತನ ನಡುವಣ ಆತ್ಮೀಯ ಸಂಬಂಧವನ್ನು ಸೂಚಿಸುತ್ತದೆ. ಇದು ಮೂರು ಮುಖ್ಯವಾದ ಅಂಶಗಳನ್ನೊಳಗೊಂಡಿವೆ. 'ಪರಮಾತ್ಮ-ಜೀವಾತ್ಮ' ಇವುಗಳ ಸಂಬಂಧದಿಂದ ಉಂಟಾಗುವ 'ಅಮೃತತ್ವ' ಪರಮಾತ್ಮನೊಡನೆ ಸಮರಸಗೊಂಡು ಅಮೃತತ್ವವನ್ನು ಪಡೆಯಬೇಕೆಂಬ ಜೀವಾತ್ಮದ ನಿರಂತರ ಹಂಬಲವನ್ನು ಕೈಗೂಡಿಸಿಕೊಡುವ ಸಾಧನೆಯೇ ಅನುಭಾವ ಮಾರ್ಗ ಇದು ಕೇವಲ ಬುದ್ಧಿ ಮನಗಳಿಗೆ ನಿಲುಕದೇ ಅವುಗಳನ್ನು ದಾಟಿದ 'ಒಳ ಅರಿವು' ಅಥವಾ 'ಅಂತರ್‌ದೃಷ್ಟಿ' ಯಿಂದ ಅನುಭೂತವಾಗುತ್ತದೆ. 'ಅನುಭವ' ಲೌಕಿಕ ಜೀವನಕ್ಕೆ ಸಂಬಂಧಿಸಿದ್ದರೆ 'ಅನುಭಾವ' ಆಧ್ಯಾತ್ಮಿಕ ಜೀವನಕ್ಕೆ ಸಂಬಂಧಿಸಿದ್ದು ಅನುಭವ ಮಾನವರ ಸಬಂಧದಿಂದ ಉಂಟಾದರೆ ಅನುಭಾವ ದೇವರ ಸಂಬಂಧದಿಂದ ಉಂಟಾಗುವುದು. ಅನುಭವ ಬಹಿರಂಗ ಜೀವನ ವ್ಯಾಪರಿಗಳಿಗೆ ಸಂಬಂಧಿಸಿದ್ದು. ಅನುಭಾವ ಅಂತರಂಗದ ಅನುಭವಕ್ಕೆ ಸಂಬಂಧಿಸಿದ್ದು ಅನುಭವ ದೇಹಕ್ಕೆ ಸಂಬಂದಪಟ್ಟರೆ ಅನುಭಾವ ಆತ್ಮಕ್ಕೆ ಸಂಬಂಧಪಟ್ಟದ್ದು.

'ಅನುಭವ' ಮತ್ತು 'ಅನುಭಾವ' ಎಂಬಿವು ಸಂಸ್ಕೃತ ಪದಗಳು 'ಅನು' ಎಂಬುದು ಉಪಸರ್ಗ 'ಭವ' ಎಂಬುದು 'ಭೂ' ದಿಂದ ನಿಷ್ಪನ್ನವಾದ ಧಾತು 'ಅನು' ಎಂದರೆ ಅನುಸರಿಸು ಭವ ಎಂದರೆ ಇರುವುದು 'ಇರುವುದನ್ನು ಅನುಸರಿಸು' ಎಂಬುದು 'ಅನುಭವ' ಪದದ ನಿಘಂಟುವಿನ ಅರ್ಥ 'ಭಾವ'

ಎಂಬ ಪದ ಇರುವಿಕೆಯ ಸ್ಥಿತಿಯನ್ನು ಆಗುವಿಕೆಯ ಅವಸ್ಥೆಯನ್ನು ಸೂಚಿಸುತ್ತದೆ. ಅನುಭವದ ಪ್ರಯೋಜಕ ರೂಪ ಮತ್ತು ಕರ್ಮಣಿ ರೂಪ 'ಅನುಭಾವ' ಎಂದು ಹೇಳಲಾಗುತ್ತದೆ.

ಶಿವಶರಣರು 'ಅನುಭಾವ' ಎಂಬ ಪದಕ್ಕೆ ನೂತನ ಅವಿಷ್ಕಾರ ನೀಡಿ ಅದರ ಅರ್ಥ ವ್ಯಾಪ್ತಿಯನ್ನು ಹೆಚ್ಚಿಸಿದರು. ಹೀಗಾಗಿ ಇದು ಆಧ್ಯಾತ್ಮ ಪ್ರಪಂಚಕ್ಕೆ ವೀರಶೈವರು ಕೊಟ್ಟ ವಿಶಿಷ್ಟ ಕೊಡುಗೆ ಎನಿಸಿದೆ. ಶರಣರ ಪರಿಭಾಷೆಯಲ್ಲಿ ಅನುಭಾವ ಎಂದರೆ 'ಜೀವಾತ್ಮ-ಪರಮಾತ್ಮರ ಏಕ ಸತ್ವದ' ಜೀವ ಶಿವೈಕ್ಯದ ಲಿಂಗಾಂಗಗಳ ಸಮರ ಸತ್ವದ ಅನುಭವ ಅದೊಂದು ಅನುಭವ ನಿಜ ಆದರೆ ಅದು ಇಂದ್ರಿಯ ಜನ್ಯವಲ್ಲ. ವಿಷಯಗಳ ಮೂಲಕ ಉಂಟಾದುದಲ್ಲ. ಅತೀಂದ್ರಿಯವೂ, ಅತಿಮಾನಸವೂ, ಅತ್ಯಂತ ಸೂಕ್ಷ್ಮವೂ, ಆತ್ಮ ಸರ್ವಸ್ವವನ್ನು ತುಂಬಿಕೊಳ್ಳುವಂತಹದೂ ನಿರಾಲಂಬ ಆನಂದವನ್ನುಂಟು ಮಾಡುವಂತಹುದೂ ದ್ವಂದ್ವಾತೀತವೂ, ತ್ರಿಗುಣರಹಿತವೂ, ಅಪರೋಕ್ಷವೂ, ಅನಿರ್ವಚನೀಯವೂ, ವರ್ಣಾನಾತೀತವೂ, ಅಂತಃಸ್ಫುರಣ ರೂಪಿಯೂ ಸಮರ ಸೈಕ್ಯವೂ ಆನಂದ ರೂಪಿಯೂ ಆಗಿರುವುದು ಅದರ ಪ್ರಮುಖ ಲಕ್ಷಣಗಳೆನಿಸಿವೆ.

ಅನುಭಾವ ವೆಂಬುದು ಅಂತರಂಗದ ರತ್ನ: ಅನುಭಾವ ವೆಂಬುದು ಆತ್ಮವಿದ್ಯೆ ಅನುಭಾವ ವೆಂಬುದು ತಾನಾರೆಂಬುದು ತೋರುವುದು ಅನುಭಾವ ವೆಂಬುದು ನಿಜ ನಿವಾಸದಲ್ಲಿರುವುದು ಅನುಭಾವ ವೆಂಬುದು ನೆಲದ ಮರೆಯ ನಿಧಾನ: ಅನುಭಾವ ವೆಂಬುದು ಶಿಶುಕಂಡ ಕನಸು. ಅನುಭಾವ ವೆಂಬುದು ಮಡಿವಾಳನ ಕಾಯಕದಂತೆ ಸುಗನ ಶರಣರ ಅನುಭಾವ ಗಜವೈದ್ಯ: ಅನುಭಾವದಿಂದ ತನುಮನ ಹಾಳಾಯಿತು. ಇವು ಶಿವಶರಣರ ಅನುಭಾವದ ಸ್ವರೂಪವನ್ನು ತಿಳಿಸುವ ನುಡಿರತ್ನಗಳು. ಅನುಭಾವವು ಸಾಧಕನಲ್ಲಿ ನೆಲೆಯಾಗಿ ನಿಂತು ಅವನನ್ನು ಸಿದ್ಧತ್ವ ಪದವಿಗೇರಿಸಿದರೆ ಅದು 'ಅನುಭೂತಿ' ಎನಿಸುತ್ತದೆ. ಸಿದ್ಧಸ್ಥಿತಿಯಲ್ಲಿ ಸ್ಥಿರತೆಯನ್ನುಂಟು ಮಾಡುವುದೇ ಅನುಭೂತಿಯ ಮುಖ್ಯ ಲಕ್ಷಣ.

ಉಪನಿಷತ್ತುಗಳ ತರುವಾಯ ಅವುಗಳ ಸಾರವನ್ನು ಒಳಗೊಂಡು ಮೂಡಿ ಬಂದ ಭಗವದ್ಗೀತೆ ಅನುಭಾವದ ದೃಷ್ಟಿಯಿಂದ ಇನ್ನೂ ಹೆಚ್ಚು ಮುಖ್ಯವಾದ ಗ್ರಂಥವೆನಿಸಿದೆ. ಅದು ಜ್ಞಾನದ ಜೊತೆಗೆ ಭಕ್ತಿಗೂ ಆದ್ಯತೆಯನ್ನು ನೀಡುತ್ತದೆ. 'ತತ್ವ ಜಿಜ್ಞಾಸೆ' ಸಾರ್ಥಕವಾಗಬೇಕಾದರೆ ಅದು ಬುದ್ಧಿಯನ್ನು ಮಾತ್ರ ತೃಪ್ತಿ ಪಡಿಸಿದರೆ ಸಾಲದು: ಹೃದಯವನ್ನರಳಿಸುವ ಅನುಭಾವವಾಗಬೇಕು. ಎಂಬ ತತ್ವವನ್ನು ಅವು ಪ್ರತಿಪಾದಿಸುತ್ತದೆ. ದಿವ್ಯ ದೃಷ್ಟಿಯೇ ಅನುಭಾವಿಗೆ ಬೇಕಾದ ಒಳಗಣ್ಣು ಸತ್ಯ ಸ್ವರೂಪ ಸಾಕ್ಷಾತ್ಕಾರವೇ ವಿಶ್ವರೂಪದರ್ಶನ ಸತ್ಯದ ಸಾಕ್ಷಾತ್ಕಾರಕ್ಕೆ ಅಂತರ್‌ದೃಷ್ಟಿ ಬೇಕೆಂಬುದನ್ನು ಗೀತೆ ಪ್ರತಿಮಾರೂಪದಲ್ಲಿ ಹೇಳುತ್ತದೆ.

ಮಧ್ಯಯುಗದಲ್ಲಿ ಆರಂಭವಾದ ಭಕ್ತಿಯ ಆಂದೋಲನವು ಅನುಭಾವ ಪರಂಪರೆಗೆ ಒಂದು ಹೊಸ ಆಯಾಮವನ್ನು ತಂದುಕೊಟ್ಟಿತು. ಅದು ದ್ರಾವಿಡ ಸಂಸ್ಕೃತಿಯ ಕೊಡುಗೆ ಎಂದು ವಿದ್ವಾಂಸರು

ಅಭಿಪ್ರಾಯಪಟ್ಟಿದ್ದಾರೆ. ಸಂಸ್ಕೃತ ಪದ್ಮಪುರಾಣದಲ್ಲಿ ಬರುವ 'ಜಾತಾಹಂ ದ್ರಾವಿಡೇ ದೇಶೇ ವೃದ್ಧಿಂ ಕರ್ನಾಟಕೇ ಗತಾ' ಎಂಬ ಹೇಳಿಕೆಯು ಭಕ್ತಿ ಚಳುವಳಿಯು ದ್ರಾವಿಡ ದೇಶದಲ್ಲಿ ಹುಟ್ಟಿ ಕರ್ನಾಟಕದಲ್ಲಿ ಬೆಳೆದು, ಭಾರತದಲ್ಲೆಲ್ಲ ವ್ಯಾಪಕವಾಗಿ ಮೆರೆಯಿತು ಎಂದು ತಿಳಿಸುತ್ತದೆ. ಈ ಮಾತನ್ನು ಸಮರ್ಥಿಸುವಂತೆ ಕಬೀರದಾಸನ ಈ ಹೇಳಿಕೆಯು ಮೂಡಿ ಬಂದಿದೆ. 'ಭಕ್ತಿ ದ್ರಾವಿಡ ಉಪಜೀ ಲಾಯೇ ರಾಮಾನಂದ್ ಪರಗಟಕಿಯೇ ಕಬೀರನೇ ಸಾತದ್ವೀಪ ನವಖಂಡ್' ಅಂದರೆ ಭಕ್ತಿಯು ದ್ರಾವಿಡ ದೇಶದಲ್ಲಿ ಜನಿಸಿತು. ಅದನ್ನು ಉತ್ತರಕ್ಕೆ ತಂದವರು ರಮಾನಂದರು.

ಮಧ್ಯಯುಗದ ಈ ಭಕ್ತಿ ಆಂದೋಲನ ವಿಶ್ವದ ಮಹಾ ಆಂದೋಲನಗಳಲ್ಲಿ ಒಂದು. ಅಂದು ಹಿಂದೂ ಧರ್ಮದಲ್ಲಿ ಮಡುಗಟ್ಟಿದ ಅರ್ಥಶೂನ್ಯ ಕರ್ಮಕಾಂಡ ಜಾತಿ-ಪದ್ಧತಿ, ಮಡಿಮೈಲಿಗೆ, ಮೇಲು ಕೀಳುಗಳೆಂಬುದನ್ನು ವಿರೋಧಿಸಿ ಒಂದು ವರ್ಗ ವರ್ಣರಹಿತ ಸಮಾಜವನ್ನು ರಚಿಸಲು ಸಂಕಲ್ಪಿಸಿತು. ದೇವವಾಣಿಗೆ ಜನವಾಣಿಯಾಗುವುದು ಅಸಾಧ್ಯವಾದಾಗ ಜನವಾಣಿಯನ್ನೇ ದೇವವಾಣಿಯ ಮಟ್ಟಕ್ಕೇರಿಸಿ ಧಾರ್ಮಿಕ ಸಾಮ್ರಾಜ್ಯದಲ್ಲಿ ಜನತಂತ್ರವನ್ನು ಸಾರಿದ ಶ್ರೇಯಸ್ಸು ಈ ಆಂದೋಲನಕ್ಕೆ ಸಲ್ಲುತ್ತದೆ. ತಮಿಳು ನಾಡಿನಲ್ಲಿ ಕ್ರಿ.ಶ ೭ನೆಯ ಶತಮಾನದಲ್ಲಿ ಮೊದಲು ಶೈವಪುರಾತನ ನಾಯನಾರರಿಂದ ಆರಂಭವಾದ ಶಿವಭಕ್ತಿಯ ಆಂದೋಲನ, ನಂತರ ವೈಷ್ಣವ ಆಳ್ವಾರರ ಹರಿಭಕ್ತಿಯ ಮತ್ತೊಂದು ಕವಲಾಗಿ ಒಡೆಯಿತು. ಈ ಶೈವ ಮತ್ತು ವೈಷ್ಣವ ಭಕ್ತರಿಂದ ಹುಟ್ಟಿದ ತೇವಾರಂ ಮತ್ತು ಪ್ರಬಂಧ ಎಂಬ ಭಕ್ತಿ ಸಾಹಿತ್ಯ ಕನ್ನಡ ನಾಡಿನ ಶಿವಶರಣರ ಮೇಲೆ ಗಾಢವಾದ ಪ್ರಭಾವವನ್ನು ಬೀರಿತು. ಕರ್ನಾಟಕ ಶಿವಶರಣರು ತಮಿಳುನಾಡಿನ ಶೈವಪುರಾತನರಿಂದ ಪ್ರೇರಣೆ ಪಡೆದಿದ್ದರೂ ಇವರ ದೃಷ್ಟಿ-ಧೋರಣೆಗಳು ಅವರಿಗಿಂತಲೂ ಹೆಚ್ಚು ವ್ಯಾಪಕವಾಗಿ ವಿಸ್ತರಿಸಿಕೊಂಡವು. ಈ ಶರಣ ಸಮೂಹದಲ್ಲಿ ಜಾತಿ-ಲಿಂಗ ಅಂತಸ್ತು-ವರ್ಣ-ವರ್ಗ ಭೇದವಿಲ್ಲದೆ ಎಲ್ಲ ವರ್ಗದ ಜನರು ಬೆರೆತು 'ಸಕಲ ಜೀವಾತ್ಮ'ರಿಗೆ ಲೇಸನ್ನುಂಟುಮಾಡುವ ಮಾರ್ಗವನ್ನು ರೂಪಿಸಿದರು. ವೇದ, ಆಗಮ, ಉಪನಿಷತ್ತುಗಳಲ್ಲಿ ಸಂಸ್ಕೃತ ಭಾಷೆಯಲ್ಲಿ ರಹಸ್ಯವಾಗಿ ಅಡಗಿದ್ದ ಆಧ್ಯಾತ್ಮ ತತ್ವಗಳನ್ನು ವಚನ ಎಂಬ ವಿನೂತನ ರೂಪದಲ್ಲಿ ಸರಳ ದೇಶೀಭಾಷೆಯಲ್ಲಿ ಹೇಳಿ ಸರ್ವರಿಗೂ ಪಾರಮಾರ್ಥದ ಮಾರ್ಗವನ್ನು ಮುಕ್ತಗೊಳಿಸಿದರು. ಶ್ರದ್ಧೆ, ನಿಷ್ಠೆ ಭಕ್ತಿಗಳಿಂದ ಸಾಧಕ ಸುಲಭವಾಗಿ ಸಿದ್ಧಿಯನ್ನು ಪಡೆಯಬಲ್ಲ ಎಂಬುದನ್ನು ಸಾಧಿಸಿ ತೋರಿಸಿಕೊಟ್ಟರು.

ಇದೇ ವೇಳೆಗೆ ಆಂಧ್ರ ಕೇರಳ, ಬಂಗಾಲ, ಉತ್ತರ ಪ್ರದೇಶ ಮತ್ತು ಮಹಾರಾಷ್ಟ್ರ ಮುಂತಾದ ಪ್ರಾಂತಗಳಲ್ಲಿಯೂ ಈ ಭಕ್ತಿಯ ಪ್ರಸಾರವಾಗತೊಡಗಿತು. ಈ ಭಕ್ತಿ ಪಂಥಗಳಿಗೆ ಶಿವ ಮತ್ತು ವಿಷ್ಣು ಕೇಂದ್ರ ದೈವಗಳೆನಿಸಿದವು. ತಮಿಳುನಾಡು ಮತ್ತು ಕರ್ನಾಟಕ ಶೈವ, ವೀರಶೈವ ಭಕ್ತಿಪಂಥಗಳಿಗೆ ಶಿವ ಮುಖ್ಯವೆನಿಸಿದರೆ, ವೈಷ್ಣವ (ಹರಿದಾಸ) ಪಂಥದ ಭಕ್ತರಿಗೆ ಹಾಗೂ ಉಳಿದ ಪ್ರದೇಶಗಳ ಭಕ್ತಿ

ಪಂಥಗಳಿಗೆ ವಿಷ್ಣು ಕೇಂದ್ರ ದೈವವೆನಿಸಿದ. ಆದರೂ ಈ ಎಲ್ಲ ಭಕ್ತಿಪಂಥಗಳಲ್ಲಿ ಕೆಲವು ಸಮಾನವಾದ ಲಕ್ಷಣಗಳು ಕಂಡು ಬರುತ್ತವೆ. ಅವುಗಳನ್ನು ಹೀಗೆ ಗುರುತಿಸಬಹುದು.

೧. ಪ್ರೇಮವೇ ಪರಮ ಪುರುಷಾರ್ಥ-ಮೋಕ್ಷವಲ್ಲ.

೨. ದೈವೀ ಪ್ರೇಮವು ಕುಲಜಾತಿಗಳನ್ನು ಮೀರಿದ್ದು.

೩. ಭಕ್ತ ಇಲ್ಲವೆ ಗುರು ದೇವರಿಗಿಂತ ದೊಡ್ಡವನು.

೪. ಭಕ್ತಿಯಿಲ್ಲದ ಪಾಂಡಿತ್ಯ ವ್ಯರ್ಥ.

೫. ನಾಮ ರೂಪಕ್ಕಿಂತ ದೊಡ್ಡದು.

ಈ ಭಕ್ತಿ ಪಂಥಗಳಲ್ಲಿ ಕೆಲವು ಸುಗುಣೋಪಾಸನೆಗೆ ಮಹತ್ವ ಕೊಟ್ಟರೆ, ಹೆಚ್ಚಿನವು ನಿರ್ಗುಣೋಪಾಸನೆಗೆ ಒತ್ತುಕೊಡುತ್ತವೆ. ಎಲ್ಲ ಭಕ್ತಿ ಪಂಥಗಳ ಗುರಿ ಸಮಾನತೆಯನ್ನು ಸಾರುವುದು, ಸಹಜ, ಸರಳ ಪಾರಮಾರ್ಥಿಕ-ಪ್ರಾಪಂಚಿಕ ಮಾರ್ಗವನ್ನು ಬೋಧಿಸುವುದು. ಹೀಗಾಗಿ ಧರ್ಮ-ಸಮಾಜ-ಸಾಹಿತ್ಯ ಮೂರು ಇಲ್ಲಿ ಮುಪ್ಪುರಿಗೊಂಡಿವೆ. ಹೀಗೆ ಜನ ಸಾಮಾನ್ಯರ ಬದುಕನ್ನು ಹಸನುಗೊಳಿಸುವ ಉದ್ದೇಶ ಗಳನ್ನು ಇಟ್ಟುಕೊಂಡು ಹುಟ್ಟಿದ ಈ ಭಕ್ತಿ ಪಂಥಗಳು ಸಾಹಿತ್ಯದ ಮೂಲಕ ತಮ್ಮ ಅನುಭಾವವನ್ನು ಅಭಿವ್ಯಕ್ತಿಗೊಳಿಸಿದವು.

ಮಧ್ಯಕಾಲೀನ ಭಕ್ತಿ ಪಂಥಗಳಿಗೆ ಅನುಭಾವಿಗಳಿಗೆ ಮೂಲ ಪ್ರೇರಣೆಯಾಗಿ ನಿಂತುದು ಜನ ಸಾಮಾನ್ಯರ ಬದುಕು; ಅದನ್ನು ಹಸನುಗೊಳಿಸಬೇಕೆಂಬ ಹಂಬಲ ಹಾಗೂ ಜಡಗಟ್ಟಿದ್ದ ವ್ಯವಸ್ಥೆ ಅದನ್ನು ಒಡೆದು ಹಾಕಿ ಸರ್ವಸಮಾನತೆಯ ಸುಂದರ ಸುಖೀ ಸಮಾಜವನ್ನು ನಿರ್ಮಿಸಬೇಕೆಂಬ ಉತ್ಕಟತೆ ಹೀಗಾಗಿ ಎಲ್ಲ ಅನುಭಾವಿಗಳು ಗಹನವಾದ ಗೂಢವಾದ ಪರತತ್ವದ ರಹಸ್ಯವನ್ನು ಬದುಕನ್ನು ಬೆಡಗನ್ನು ತಮ್ಮ ತಮ್ಮ ಪ್ರಾಂತದ ದೇಶೀ ಭಾಷೆಯಲ್ಲಿ ಬಿಡಿಸಿ ಹೇಳಲು ಪ್ರಯತ್ನಿಸಿದರು. ಕರ್ನಾಟಕದ ಶರಣರು ಈ ಹಂಬಲದ ಜೊತೆಗೆ ವೈದಿಕ ಧರ್ಮದಲ್ಲಿರುವ ಕರ್ಮಕಾಂಡವನ್ನು ವರ್ಣಾಶ್ರಮಧರ್ಮ ಪದ್ಧತಿಯನ್ನು ವರ್ಗ-ವರ್ಣ ಲಿಂಗ ಭೇದದಿಂದ ಕೂಡಿದ ಶೋಷಣೆ ಸಹಿತ ವ್ಯವಸ್ಥೆಯನ್ನು ಸಂಸ್ಕೃತ ಭಾಷೆಯ ಬಂಧುರತೆಯನ್ನು ಪ್ರತಿಭಟಿಸಿದರು. ಶೋಷಣೆ ರಹಿತ ಸರ್ವ ಸಮಾನತೆಯ ಸಮಾಜವನ್ನು ಅವಿಷ್ಕಾರ ಗೊಳಿಸಲು ಯತ್ನಿಸಿದರು. ವಿಷ್ಣುಭಕ್ತಿ ಪರವಾದ ಅನುಭಾವ ಪಂಥಗಳಲ್ಲಿಯೂ ಈ ಸಮತಾದೃಷ್ಟಿ ತೋರಿದರು. ಇವರು ವೇದ ಉಪನಿಷತ್ತು, ಗೀತೆ, ಭಾಗವತಗಳ ಗೂಢ ತತ್ವಗಳ ರಹಸ್ಯವನ್ನು ಸರಳ ಭಾಷೆಯಲ್ಲಿ ಜನಸಾಮನ್ಯರಿಗೆ ತಿಳಿಯುವ ರೀತಿಯಲ್ಲಿ ಹೇಳಲು ಪ್ರಯತ್ನಿಸಿದರು. ಈ ದೃಷ್ಟಿಯಿಂದ ಶಿವಶರಣರ ಅನುಭಾವದ ಪ್ರೇರಣೆಗಳು ಉಳಿದವರಿಗಿಂತ ಭಿನ್ನವಾಗಿ ಹೆಚ್ಚು ಅರ್ಥ ಪೂರ್ಣವಾಗಿ ತೋರುತ್ತದೆ.

ಹೀಗೆ ಆಯಾ ಕಾಲದ ಮತ್ತು ಸಮಾಜದ ಪ್ರಭಾವ ಹಾಗೂ ವ್ಯಕ್ತಿ ವಿಶಿಷ್ಟವಾದ ಸ್ವಭಾವ-ಸಂಸ್ಕಾರಗಳ ಹಿನ್ನೆಲೆಯಲ್ಲಿ ಅನುಭಾವ ಸಾಹಿತ್ಯಕ್ಕೆ ಪ್ರೇರಣೆಗಳು ದೊರೆತಿದ್ದರೂ ಎಲ್ಲ ಸಾಧಕರ ಶರಣರ,

ಸಾಧು ಸಂತರ, ತತ್ವಜ್ಞಾನಿಗಳ ಮುಂದಿದ್ದ ಆದರ್ಶ ಮಾತ್ರ ಒಂದೇ ಆಗಿದೆ. ತಮಿಳು ನಾಡಿನ ನಾಯನಾರರು ಆಳ್ವಾರು, ಕರ್ನಾಟಕದ ಶಿವಶರಣರು, ಹರಿದಾಸರು, ಮಹಾರಾಷ್ಟ್ರದ ಸಂತರು, ಉತ್ತರದ ಕಬೀರ ಮತ್ತು ಇತರರು ಬಂಗಾಳದ ಚೈತನ್ಯ ಇವರೆಲ್ಲರಲ್ಲಿಯೂ ವ್ಯಕ್ತಿ-ಕಾಲ ಪರಿಸರ ವಿಶಿಷ್ಟವಾದ ವಿಭೇದಗಳನ್ನು ಜೊತೆಗೆ ಒಳಗೆ ಜೀವಂತವಾಗಿರುವ ಅನುಭಾವದ ಏಕ ಸೂತ್ರತೆಯನ್ನು ನಾವು ಕಾಣುತ್ತೇವೆ.

'ಭಕ್ತಿಯೇ ಅನುಭಾವಕ್ಕೆ ಬೀಜ', 'ಅನುಭಾವ ವಿಲ್ಲದ ಭಕ್ತಿ ಅನುವಿಂಗೆ ಬಾರದು', ಎಂಬ ಶರಣರ ನುಡಿಯಂತೆ ಭಕ್ತಿಯ ನೆಲೆಗಟ್ಟಿನ ಮೇಲೆ ಅನುಭಾವದ ಸೌಧ ನಿರ್ಮಿಸ ಹೊರಟ ಮಧ್ಯಕಾಲೀನ ಅನುಭಾವಿಗಳಲ್ಲಿ ತಮಿಳನಾಡಿನ ಶೈವ ನಾಯನಾರರು, ವೈಷ್ಣವ ಆಳ್ವಾರರು ಪ್ರಮುಖರೆಂಬುದನ್ನು ಈಗಾಗಲೇ ನೋಡಿದ್ದೇವೆ. ಇವರ ಪ್ರಭಾವ ಕರ್ನಾಟಕದ ಶಿವಶರಣರು ಹಾಗೂ ಹರಿದಾಸರ ಮೇಲೆ ಆದುದನ್ನು ಕಾಣುತ್ತೇವೆ. ಹಾಗೆಯೇ ದಕ್ಷಿಣದ ಹಾಗೂ ಉತ್ತರದ ಭಕ್ತಿ ಪಂಥಗಳ ಮೇಲೆಯೂ ಇವರು ತಮ್ಮ ಪ್ರಭಾವವನ್ನು ಬೀರಿದ್ದಾರೆ.

ರಾಮಾಯಣ, ಮಹಾಭಾರತ, ಭಾಗವತಗಳಲ್ಲಿ ವಿಷ್ಣು ಭಕ್ತಿಯು ಮಹಾ ಪ್ರವಾಹವಾಗಿ ಹರಿದಿದೆ ದ್ವೈತ, ವಿಶಿಷ್ಟಾದ್ವೈತದ ಹರಿಕಾರರಾದ ಮಧ್ವಾಚಾರ್ಯ ರಾಮಾನುಜಾಚಾರ್ಯರವರು ವೈಷ್ಣವ ಧರ್ಮಕ್ಕೆ ಜೀವ ತುಂಬಿದರು. ಜೈನ ಮತ್ತು ಬೌದ್ಧ ಧರ್ಮಗಳ ಅಡೆತಡೆಗಳ ನಡುವೆಯೂ ವೈದಿಕ ಧರ್ಮ ಪ್ರವಹಿಸತೊಡಗಿತು. ಹಿಂದಿ ಸಾಹಿತ್ಯಕ್ಕೆ ಕೃಷ್ಣ ಭಕ್ತಿಯ ಕಂಪನ್ನು ಬೀರಿದ ಸೂರದಾಸರ ಕೃಷ್ಣ ಭಕ್ತಿ, ಸಂತ ಕಬೀರರ ರಾಮ ಭಕ್ತಿ, ಮೀರಾಬಾಯಿಯ ರಾಧಾಕೃಷ್ಣ ಭಕ್ತಿ, ವೈಷ್ಣವ ಧರ್ಮಕ್ಕೆ ಹೊಸ ಚೆಲುವನ್ನು ತಂದುಕೊಟ್ಟಿತು. ಮಹಾರಾಷ್ಟ್ರದಲ್ಲಿ ನಾಮದೇವ-ಜ್ಞಾನದೇವ, ಜುನಾಬಾಯಿ, ರಾಮದಾಸ, ಏಕನಾಥ, ತುಕಾರಾಮರಲ್ಲಿ ವಿಷ್ಣು ಭಕ್ತಿಯನ್ನು ಹಾಗೂ ಅದರ ದಟ್ಟ ಪ್ರಭಾವವನ್ನು ಗಮನಿಸಬಹುದು ಇನ್ನು ತಮಿಳಿನಲ್ಲಿ ಮಧುರ ಕವಿ, ಪರಿಮಾಳ್, ನಮ್ಮೊಳ್ವರ್ ಪ್ರಬಂಧಗಳಿಗೆ ತೆಲುಗಿನವರಾದ ಕೃಷ್ಣಚಾರ್ಯ, ಅನ್ನಮಾಚಾರ್ಯ, ರಾಮದಾಸ, ತ್ಯಾಗರಾಜರ ಕೀರ್ತನೆಗಳಿಗೆ ವಿಷ್ಣು ಭಕ್ತಿಯೇ ಮುಖ್ಯ ಪ್ರೇರಣೆಯಾಗಿದೆ.

ಹರಿದಾಸ ಸಾಹಿತ್ಯ ಹರಿ ಭಕ್ತರಿಂದ ರಚಿತವಾದ ಸಾಹಿತ್ಯ. ವಿಶೇಷವಾಗಿ ಹರಿ ಪಾರಮ್ಯವನ್ನು ಗುರಿಯಾಗಿರಿಸಿಕೊಂಡು ರಚನೆಯಾಗಿದೆ. ಅದರಲ್ಲಿ ಭಾಗವತ ಭಕ್ತಿ ಪರಂಪರೆಯೊಂದಿಗೆ ಮಧ್ವ ಮತ ತತ್ವ ನಿರೂಪಣೆ ಮತ್ತು ಭಗವಂತನ ರೂಪಗಳ ವರ್ಣನೆ ಭಕ್ತನ ಅಂತರಂಗ ಶೋಧನೆ ಕಳವಳ ಕಂಡುಬರುತ್ತದೆ. ಅನೇಕ ದಾಸರ ಕೃತಿಗಳಲ್ಲಿ ಸುತ್ತಲಿನ ಸಮಾಜವನ್ನು ಕುರಿತು ಕಳಕಳಿ, ವಿಡಂಬನೆ ಇತ್ಯಾದಿ ಕಂಡುಬರುತ್ತದೆ. ದಾಸ ಸಾಹಿತ್ಯ ಸಾಮಾಜಿಕವಾಗಿಯೂ ಮಹತ್ವಪೂರ್ಣವಾಗಿದೆ. ಸಮಾಜ ಸುಧಾರಣೆಗಾಗಿ ಪ್ರಾಮಾಣಿಕ ಪ್ರಯತ್ನದಿಂದ ಸಹಜವಾದ ಆಡು ನುಡಿಗಳಲ್ಲಿ ಹರಿದಾಸರು ತಮ್ಮ

ಅಂತರಂಗದ ಅಭಿವ್ಯಕ್ತಿ ಹಾಗೂ ಮತ ತತ್ವ ಪ್ರಚಾರಗಳಿಗೆ ಶ್ರಮಿಸಿದರು. ದಾಸ ಸಾಹಿತ್ಯ ಕೀರ್ತನೆ, ಸುಳಾದಿ, ಉಗಾಭೋಗ, ವೃತ್ತನಾಮ, ದಂಡಕ ಮುಂತಾದ ಪ್ರಕಾರಗಳಲ್ಲಿ ರಚಿತವಾಗಿದ್ದು ಮುಖ್ಯವಾಗಿ ಅದರ ಗೇಯಗುಣ ಜನ ಸಾಮಾನ್ಯರನ್ನು ವಿಶೇಷವಾಗಿ ಆಕರ್ಷಿಸಿದೆ.

ಕ್ರಿ.ಶ.೧೩ನೆಯ ಶತಮಾನದ ವೇಳೆಗೆ ಮದ್ವಾಚಾರ್ಯರು ತಮ್ಮ ದ್ವೈತ ಸಿದ್ಧಾಂತವನ್ನು ಸಾರಿದರು. ಅವರ 'ದ್ವಾದಶ ಸ್ತೋತ್ರ' ವೆಂಬ ಭಕ್ತಿ ಪ್ರಧಾನ ಸ್ತೋತ್ರವೇ ದಾಸ ಪಂಥಕ್ಕೆ ಮೂಲ ಪ್ರೇರಣೆಯೆಂಬುದು ಹಲವರ ನಂಬಿಕೆ ಜಿ.ವರದರಾಜರಾಯರು ಒಂದೆಡೆ ಇದೆ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.[೧] ದ್ವೈತ ಸಿದ್ಧಾಂತವೇ ಹರಿದಾಸರ ಸಿದ್ಧಾಂತವೂ ಹೌದು ಅದನ್ನೊಪ್ಪಿ ಅದರ ತತ್ವಗಳನ್ನು ಪ್ರತಿಪಾದಿಸಲು ಯತ್ನಿಸಿರುವುದನ್ನು ಎಲ್ಲಾ ಹರಿದಾಸರಲ್ಲೂ ಕಾಣಬಹುದು.

"ಕನ್ನಡದಲ್ಲಿ 'ಕೀರ್ತನೆ' ಅಥವಾ 'ಪದ' ಎಂಬುದೇನೂ ಹೊಸದಲ್ಲ ಕನ್ನಡದ ಮಟ್ಟಿಗೆ ಪಾಡು ಮೆಲ್ಪಾಡು ಭಾಜನೆಗಳಿದ್ದವು. ಆಮೇಲೆ ಶರಣರಲ್ಲಿ ಪದಗಳನ್ನು ಹಾಡಿದರು ಅದೇ ಹರಿದಾಸರ ಬಾಯಲ್ಲಿ 'ಕೀರ್ತನೆ' ಬಂದರೆ ಹರಿಸ್ತುತಿ ಪರವಾದ ಹಾಡಾಯಿತು"[೨] ಎನ್ನುವ ರಂ.ಶ್ರೀ ಮುಗಳಿಯವರ ಮಾತುಗಳಲ್ಲಿ ಕೀರ್ತನೆಯ ಹಿನ್ನೆಲೆ ದೊರೆಯುತ್ತದೆ. ಹಾಗೆಯೇ ಜಾನಪದ ಮೂಲದಿಂದ ಕೀರ್ತನೆಗೆ ಪ್ರೇರಣೆ ದೊರೆತಿದೆ ಎಂಬ ಸುಳಿವು ದೊರೆಯುತ್ತದೆ. ಡಾ.ಎಲ್.ಬಸವರಾಜು ಅವರು "ಶಿವಶರಣರು ಬರೆದ ಈ ಹಾಡುಗಳು ಪಲ್ಲವಿಯಿಂದ ಕೂಡಿ ಬೇರೆ ಬೇರೆ ರಾಗಗಳಲ್ಲಿ ಹಾಡಲು ಅನುವರಿತು ರಚಿತವಾದ ಗೇಯ ಕೃತಿಗಳು..... ಹರಿದಾಸರ ಕೀರ್ತನ ಪ್ರಕಾರಕ್ಕೆ ಮೂಲವೂ ಮಾದರಿಯವೂ ಆಗಿತ್ತೆಂದು"[೩] ಅಭಿಪ್ರಾಯ ಪಡುತ್ತಾರೆ.

'ಕೀರ್ತನೆ' ದೇವರನಾಮ ಎಂಬ ಹೆಸರು ಯಾವಾಗ ಪ್ರಚಾರದಲ್ಲಿ ಬಂತೆಂಬುದು ತಿಳಿಯದು. ಬಹುಶಃ ಪುರಂದರದಾಸರ ಮತ್ತು ಕನಕದಾಸರ ಕಾಲದಲ್ಲಿ ಬಂದಿರಬಹುದೆಂದು ಕಾಣುತ್ತವೆ. ದೇವರ ನಾಮಸ್ಮರಣೆ, ಸ್ತುತಿ, ಲೀಲೆಗಳ ಕಥನ ಇವು ಪ್ರಧಾನವಾಗಿದ್ದ ಕಾರಣ ಕೀರ್ತನ ಪದ ವಿಶೇಷವು ರೂಢವಾಗುತ್ತ ಬಂದಿತು ಇದಕ್ಕೆ 'ದಾಸರ ಪದ' ಎಂದು ಹೇಳುವ ಪ್ರಥೆಯೂ ಉಂಟು.[೪]

ಇದೇ ರೀತಿಯಾಗಿ ಡಾ.ಎಲ್.ಬಸವರಾಜು ಅವರ ಇನ್ನೊಂದು ಹೇಳಿಕೆಯನ್ನು ಇಲ್ಲಿ ಗಮನಿಸಬಹುದು. "ಕವಿರಾಜ ಮಾರ್ಗದ ಕಾಲಕ್ಕಿಂತ ಹಿಂದಿನಿಂದಲೂ ಕರ್ನಾಟಕದಲ್ಲಿ ಮೆಲ್ಪಾಡೆಂದೋ, ಬೆದಾಂಡೆಯೆಂದೋ ಪ್ರಚಾರವಾಗಿದ್ದ ಗೀತ ಸಾಹಿತ್ಯ ಪ್ರಕಾರವನ್ನು ಹನ್ನೆರಡನೆಯ ಶತಮಾನದ ಶಿವದಾಸರೂ ಹದಿನೈದು-ಹದಿನಾರನೇ ಶತಮಾನಗಳಲ್ಲಿ ಹರಿದಾಸರೂ ಬಳಸಿ ಬೆಳೆಸಿಕೊಂಡು ಬಂದರು."[೫]

ಈ ಎಲ್ಲಾ ಹೇಳಿಕೆಗಳನ್ನು ನೋಡಿದಾಗ ಮೊದಲೇ ಅಸ್ತಿತ್ವದಲ್ಲಿದ್ದ ಗೀತ ಪ್ರಕಾರ ವಚನಕಾರರ ಸಂದರ್ಭದಲ್ಲಿ ಸ್ವರ ವಚನವೆಂದು ಹರಿದಾಸರ ಸಂದರ್ಭದಲ್ಲಿ ಕೀರ್ತನೆ ಎನಿಸಿಕೊಳ್ಳುವುದು. ಆದರೆ

ಅದು ಬಹು ಮುಖ್ಯ ಸಾಧನವಾಗಿ, ವ್ಯಾಪಕವಾಗಿ ಬಳಕೆಗೊಂಡದ್ದು ಹರಿದಾಸರ ಯುಗದಲ್ಲಿ ಪಲ್ಲವಿ, ಅನುಪಲ್ಲವಿ ಹಾಗೂ ನುಡಿ ಅಂಕಿತಗಳಿಂದ ಕೂಡಿದ ಸಾಹಿತ್ಯ ರೂಪ ಶರಣರಲ್ಲಿಯೂ ಇತ್ತು. ಆದರೆ ಹರಿದಾಸರು ಕೈಯಲ್ಲಿ ಚಿಟಿಗೆ, ತಂಬೂರಿ ಹಿಡಿದು, ಕಾಲಿಗೆ ಗೆಜ್ಜೆಕಟ್ಟಿ ಸಾಹಿತ್ಯವೆಂಬ ಹಾಲಿಗೆ ಸಂಗೀತವೆಂಬ ಸಕ್ಕರೆ ಸೇರಿಸಿ ಹಾಡಿ ಕುಣಿದರು. ಕೀರ್ತನೆಯನ್ನು ಮಾಧ್ಯಮವಾಗಿ ಮಾಡಿಕೊಂಡು ಜನರ ಅಂತರಂಗವನ್ನು ತಲುಪಿದ ಹರಿದಾಸ ಪಂಥದ ಉಗಮದ ಕುರಿತಾಗಿ ಚರ್ಚೆಗಳು ನಡೆದಿವೆ. ಉಗಮದ ಎಳೆಗಳನ್ನು ವೇದೋಪನಿಷತ್ತುಗಳಲ್ಲಿ ಹುಡುಕುವ ಯತ್ನ ನಡೆದಿದೆ. ಲಕ್ಷ್ಮೀಯೆ ಪ್ರಥಮ ದಾಸಿ. 'ಅಂಭ್ರಣಿಸೂಕ್ತ'ದಲ್ಲಿ ಲಕ್ಷ್ಮೀದೇವಿಯು ತಾನು ಪರಮಾತ್ಮನ ದಾಸಿ ಎಂದು ಹೇಳಿಕೊಂಡಿದ್ದಾಳೆ. ಇದಕ್ಕೆ ಪುಷ್ಟಿಕೊಡುವಂತೆ ಪುರಂದರ ದಾಸರ ಕೀರ್ತನೆಯೊಂದಿದೆ.

> ಏನು ಧನ್ಯಳೋ ಲಕುಮಿ ಎಂಥ ಮಾನ್ಯಳೋ
>
> ಸಾನು ರಾಗದಿಂದ ಹರಿಯ ತಾನೆ ಸೇವೆ ಮಾಡುತಿಹಳೊ

ವಚನ ಸಾಹಿತ್ಯವನ್ನು ಜನ ಸಾಮಾನ್ಯರನ್ನು ದೃಷ್ಟಿಯೊಳಗಿಟ್ಟುಕೊಂಡು ರಚಿಸಿದ ಕೀರ್ತಿ ಶಿವಶರಣರಿಗೆ ಸಲ್ಲುತ್ತದೆ. ಅದೇ ರೀತಿ ಹರಿದಾಸ ಸಾಹಿತ್ಯದಲ್ಲಿ ಹಾಡುಗಳ ರಚನೆ ನಡೆಯಿತು. 'ಬೆದಂಡೆ'ಯ ಉಲ್ಲೇಖದಿಂದ ಶೃಂಗಾರದ ರಸಭಾವ ಅಭಿವ್ಯಕ್ತಿ ಕಾರಣಕ್ಕೆ ಗೀತೆಗಳನ್ನು ಬರೆಯುತ್ತಿದ್ದರೆಂದು ತಿಳಿದು ಬರುತ್ತದೆ. ೧೨ನೇ ಶತಮಾನದಲ್ಲಿ ಅನುಭವದ ಅಭಿವ್ಯಕ್ತಿಗಾಗಿ ಹಾಡನ್ನು ಶಿವಶರಣರು ಬಳಸಿದರು. ಸಕಲೇಶ ಮಾದರಸನ "ತಂಗಾಳಿಗಲಿರು ಮರನೆ ಎನ್ನಂಗದೊಳಿಪ ಶಿವಲಿಂಗವ ಮರನೆ" ಎಂಬ ಶಂಕರಾಭರಣ ರಾಗದ ಕೃತಿ ಗುಣದೃಷ್ಟಿಯಿಂದಲೂ ಮಹತ್ವದ್ದನ್ನುವುದರಲ್ಲಿ ಸಂದೇಹವಿಲ್ಲ. ಸುದೀರ್ಘ ಕೀರ್ತನ ಪರಂಪರೆಯ ಮೊಟ್ಟ ಮೊದಲನೆಯ ಕೃತಿ ಎಂಬ ಐತಿಹಾಸಿಕ ಮಹತ್ವ ಈ ಕೃತಿಗೆ ಸಲ್ಲುವುದೆಂಬ್ ಅಂಶವನ್ನು ಗಮನಿಸಬಹುದು.

ಹರಿದಾಸ ಸಾಹಿತ್ಯ ಮುಖ್ಯ ತತ್ವ ಭಕ್ತಿ ಮೂಲ ಸತ್ಯ ಭಗವಂತ ಈ ಸತ್ಯದ ಹುಡುಕಾಟ ಭಕ್ತಿಯ ಹಾದಿಯಲ್ಲಿ ಸಾಗಿದೆ. ದಾಸರು ಭಕ್ತಿಯ ಹಾದಿಗೆ ತಮ್ಮನ್ನಷ್ಟೇ ಅರ್ಪಿಸಿಕೊಂಡಿಲ್ಲ. ಅದನ್ನು ದಾಸ ದೀಕ್ಷೆ ಹಿಡಿದು ಕೊರಳಲ್ಲಿ ತುಳಸಿಮಾಲೆ ಹಣೆಗೆ ಗೋಪಿ ಚಂದನದ ನಾಮವಿಟ್ಟು ಕೈಯಲ್ಲಿ ತಾಳ ತಂಬೂರಿ ಮೀಟುತ್ತ ಅಂದುಗೆ ಕಿರುಗೆಜ್ಜೆ ಇಟ್ಟು ದಿಂಧಿಮಿ ಧಿಮಿಕೆಂದು ಕುಣಿಯುತ್ತ ತಾವು ಕಂಡ ಸತ್ಯವನ್ನು ಮನೆ ಮನೆಗೆ ತಲುಪಿಸಿದರು. ಈ ಸತ್ಯದ ಸಾಕ್ಷಾತ್ಕಾರದ ಅಭಿವ್ಯಕ್ತಿಗೆ ಆಡುಭಾಷೆ ಮತ್ತು ಸಂಗೀತ ಮಾಧ್ಯಮವನ್ನು ಹರಿದಾಸರು ಆಯ್ದುಕೊಂಡದ್ದು ಜನ ಸಮೂಹವನ್ನು ಆಕರ್ಷಿಸಲು ಸುಲಭ ಸಾಧ್ಯವಾಯಿತು. ಹರಿದಾಸರಿಗೆ ಮುನ್ನ ಶಿವಶರಣರು ಹಾಡುಗಬ್ಬದ ಪ್ರವರ್ತಕರಾದರೂ ಸಾವಿರಾರು ಹಾಡುಗಬ್ಬವನ್ನು ರಚಿಸಿ ಒಂದು ಸಂಗೀತ ಪರಂಪರೆಯನ್ನು ನಿರ್ಮಾಣ ಮಾಡಿದರು. ಹರಿದಾಸರು ಎನ್ನುವುದು ಈ ಆಂದೋಲನದ ಬಹುದೊಡ್ಡ ಸಾಧನೆ. ಸಂಕೀರ್ಣವಾಗಿದ್ದ ಮತ, ತತ್ವ ಹಾಗೂ

ಆಧ್ಯಾತ್ಮಿಕ ಸಂಗತಿಗಳು ಸಂಗೀತದ ಮಾಧ್ಯಮದಲ್ಲಿ ಸರಳ ಕನ್ನಡದಲ್ಲಿ ಸುಲಭ ಭಕ್ತಿಯಲ್ಲಿ ಜನ ಸಾಮಾನ್ಯರಿದ್ದಲ್ಲೇ ದೊರೆತದ್ದು ಆಶ್ಚರ್ಯಕರ ವಾದದ್ದು. ದಾಸರು ಕೊಟ್ಟ ಈ ಹೊಸ ಪರಿಕಲ್ಪನೆ ಜನ ಸಾಮಾನ್ಯರಲ್ಲಿ ಒಂದು ಆತ್ಮ ವಿಶ್ವಾಸ ಹಾಗೂ ಭರವಸೆಯನ್ನು ಹುಟ್ಟುಹಾಕಿತು. ಹರಿದಾಸ ಸಾಹಿತ್ಯ ಜನರ ಮಧ್ಯೆ ಹುಟ್ಟಿದ ಆಶುರಚನೆಗಳು ಅವು ಅಂದು ಮೌಖಿಕವಾಗಿ ಹಾಡಿದವು ಅನುಭವ ಮಂಟಪದಂತಹ ಕೇಂದ್ರೀಕೃತ ವ್ಯವಸ್ಥೆಯೊಳಗೆ ಇವು ನಿರ್ಮಾಣಗೊಂಡದ್ದು ಅಲ್ಲ. ಮನೆ ಮನೆ ಬೀದಿ, ಬೀದಿಗಳಲ್ಲಿ ಸುತ್ತಾಡುತ್ತ ಹಾಡುತ್ತ ಕುಣಿಯುತ್ತ ಸಾಗುವಾಗ ಕಂಡ ಲೋಕಾನುಭವವನ್ನು ಅಲ್ಲಲ್ಲಿ ಕಟ್ಟಿ ಹಾಡಿದ್ದು ಭಾವ ತನ್ಮಯತೆಯಲ್ಲಿ ಮೂಡಿ ಬಂದ ಈ ರಚನೆಗಳು ಕವಿತೆಯ ಎಲ್ಲ ಕಾವ್ಯಾಂಶಗಳನ್ನು ತುಂಬಿ ನಿಂತವು ಸಾಹಿತ್ಯ ಮತ್ತು ಸಂಗೀತದ ಸಾಮರಸ್ಯದ ಪ್ರತೀಕವಾದ ಹರಿದಾಸರ ರಚನೆಗಳು ಭಾವಗೀತೆಯ ಲಕ್ಷಣವನ್ನು ಹೊಂದಿವೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ಸಾಂಸ್ಕೃತಿಕ ಸಾಹಿತ್ಯಿಕ ಮತ್ತು ಸಂಗೀತ ಕ್ಷೇತ್ರಕ್ಕೆ ಹರಿದಾಸರು ವಿಶಿಷ್ಟ ಕೊಡುಗೆಯನ್ನು ನೀಡಿದ್ದಾರೆ.

ಹರಿದಾಸರಿಗೆ ಶಿವ ಶರಣರಿಂದ ಸ್ಫೂರ್ತಿ ಸಿಕ್ಕಿದೆ ಎಂಬುದರಲ್ಲಿ ಸಂದೇಹವಿಲ್ಲ. ಶರಣರ ವಚನಗಳಿಗೆ ತಮಿಳು ನಾಯನಾರರ ತೇವಾರಂ ಗೀತೆಗಳಿಂದ ಪ್ರೇರಣೆ ದೊರೆತಿರಬಹುದು. ಹಾಗೆಯೇ ಹರಿದಾಸರ ಕೀರ್ತನೆಗಳಿಗೂ ಆಳ್ವಾರರ ಭಕ್ತಿ ಗೀತೆಗಳಿಂದಲೂ ಪ್ರೇರಣೆ ದೊರೆತಿರುವ ಸಾಧ್ಯತೆ ಇದೆ. ಶ್ರೀ ಕೃಷ್ಣದೇವರಾಯ ವೈಷ್ಣವ ಧರ್ಮಾನುಯಾಗಿದ್ದನು. ವೈಷ್ಣವ ಆಚಾರ್ಯರಾದ ವ್ಯಾಸರಾಯರು ರಾಜ ಗುರುಗಳಾಗಿದ್ದುದರಿಂದ ಭಾಗವತ ಸಂಪ್ರದಾಯದ ಕೀರ್ತನೆಗಳು ಮಧ್ವಾಚಾರ್ಯರ ದ್ವಾದಶ ಸ್ತೋತ್ರದ ಮೂಲ ಪ್ರೇರಣೆ ಇದೆ ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಭಕ್ತಿ ಮುಕ್ತಿಗಳ ಬಗೆಗೆ ಹೇಳಿದ್ದು ಮಾತ್ರವಲ್ಲದೆ ಸಮಾಜದ ಹಿತವನ್ನು ಮುಖ್ಯವಾದ ಗುರಿಯಾಗಿಟ್ಟುಕೊಂಡು ಕೀರ್ತನೆಗಳನ್ನು ಬರೆದ ಹರಿದಾಸರು ಭಾರತದ ಸಂಗೀತ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ವಿಶಿಷ್ಟ ವ್ಯಕ್ತಿಗಳಾಗಿ ಕಾಣಿಸುತ್ತಾರೆ. ಮತ್ತು ತಮ್ಮ ವಿಚಾರಗಳನ್ನು ಜನ ಸಾಮಾನ್ಯರ ಆಡುಭಾಷೆಯಲ್ಲಿ ತಿಳಿಸಿ ಹೇಳಿದರು. ಈ ನಿಟ್ಟಿನಲ್ಲಿ ಹರಿದಾಸ ಸಾಹಿತ್ಯ ಬಹುಬೇಗ ತನ್ನ ಜನಪ್ರಿಯತೆಯನ್ನು ಗಳಿಸಿಕೊಂಡಿತು.

ಕೀರ್ತನ ಪರಂಪರೆ ಇಂದಿಗೂ ಒಂದು ನಿರಂತರ ಜೀವಂತ ಪ್ರಕ್ರಿಯೆಯಾಗಿ ನಮ್ಮ ನಡುವಿದೆ. ಮನೆ ಮನೆಗಳಲ್ಲಿ ಜಾತಿ ವರ್ಗದ ನೆಲೆಯನ್ನು ದಾಟಿ ಪುರುಷರು, ಮಹಿಳೆಯರು, ಮಕ್ಕಳು ನಿತ್ಯವೂ ಮನೆ ದೇವರ ಮುಂದೆ ನಡೆಸುವ ಭಜನೆ ಸಂಪ್ರದಾಯ ಹಾಗೂ ಭಜನಾ ಮಂಡಳಿಗಳು ಊರ, ಪರವೂರ ದೇವಾಲಯಗಳಲ್ಲಿ ನಡೆಸುವ ಭಜನೆ ಸಪ್ತಾಹಗಳು, ಹರಕೆಗಳು ಹಾಗೂ ದೇವಸ್ಥಾನದ ಪೂಜಾ ಸಂದರ್ಭದಲ್ಲಿ ಹಾಡುವ ಕೀರ್ತನ ದಂತಹ ಕಾರ್ಯಕ್ರಮಗಳು ಸಮುದಾಯದ ಬದುಕಿನೊಂದಿಗೆ ಬೆರತ ಬಗೆಯನ್ನು ಹೇಳುತ್ತವೆ. ದಾಸ ಪರಂಪರೆಯಲ್ಲಿ ಮಹಿಳೆಯರು ಸಂಖ್ಯಾ ಪ್ರಮಾಣದಲ್ಲಿ ಕಡಿಮೆ

ಇರಬಹುದು. ಆದರೆ ಕೀರ್ತನೆ ಪರಂಪರೆಯನ್ನು ಅನುಗಾಲ ಜೀವಂತವಾಗಿಟ್ಟವರು ಬಹುತೇಕ ಮಂದಿ ಮಹಿಳೆಯರು ದಿನದ ಬೆಳಕು ಹರಿವ ಮುನ್ನವೇ ಎದ್ದು ಉದಯರಾಗದಿಂದ ತನ್ನ ಕಾಯಕಕ್ಕೆ ತೊಡಗುವ ಮಹಿಳೆಯು ರಾತ್ರಿ ಮಲಗುವವರೆಗೆ ದಾಸರ ಕೀರ್ತನೆಗಳನ್ನು ಹಾಡುತ್ತ ಹತ್ತೆಂಟು ಮನೆ ವಾರ್ತೆಯ ಕಾರ್ಯಭಾರವನ್ನು ನಿರ್ವಹಿಸುವ ದಿನಚರಿಯಲ್ಲಿ ಆ ಗೀತೆಗಳು ಅವರ ಬದುಕಿನ ಭಾಗವೇ ಆಗುತ್ತವೆ. ಮದುವೆ ಮುಂಜಿ ವ್ರತ ಪೂಜೆಯ ಸಂದರ್ಭದಲ್ಲಿ ವೈದಿಕ ಕ್ರಿಯಾ ಭಾಗಕ್ಕೆ ಪರ್ಯಾಯವಾಗಿ ಮಹಿಳೆಯರು ಪಾಲ್ಗೊಳ್ಳುವಿಕೆಯನ್ನು ದಾಖಲಿಸುತ್ತದೆ. ಅಂದರೆ ಪರಂಪರೆಯೊಂದರಲ್ಲಿ ರಚನೆಕಾರರಾಗಿ ಒಳಗೊಳ್ಳುವಿಕೆ ಮತ್ತು ಒಂದು ಪರಂಪರೆಯ ಪ್ರಸರಣ ಮತ್ತು ಮುನ್ನಡೆಸುವಿಕೆ ಕೂಡಾ ಮಹತ್ವದ್ದಾಗಿದೆ.

## ಕರ್ನಾಟಕ ಹರಿದಾಸ ಪಂಥ

ಐತಿಹಾಸಿಕವಾಗಿ ಕನ್ನಡ ಹರಿದಾಸ ಪಂಥದ ಮೂಲ ಪುರುಷರ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಶ್ರೀಬೇಲೂರು ಕೇಶವದಾಸರು ತಮ್ಮ ಕರ್ನಾಟಕ ಭಕ್ತ ವಿಜಯದಲ್ಲಿ ಶ್ರೀ ಅಚಲಾನಂದದಾಸರು (ಕ್ರಿ.ಶ.೯ನೇ ಶ) ಹರಿದಾಸ ಪಂಥದ ಮೂಲ ಪುರುಷರೆಂದು ಹೇಳಿದ್ದಾರೆ. ೧೪ನೇ ಶತಮಾನದ ನರಹರಿತೀರ್ಥರು ಕನ್ನಡದಲ್ಲಿ ಪದಗಳನ್ನು ರಚಿಸಿ ಹರಿದಾಸ ಪಂಥದ ಮೂಲ ಪುರುಷರೆನಿಸಿದರು[2] ಎಂಬ ಅಭಿಪ್ರಾಯವನ್ನು ಆರ್.ಎಸ್.ಪಂಚಮುಖಿಯವರು ತಾಳಿದ್ದಾರೆ. ಈ ಅಭಿಪ್ರಾಯವನ್ನೇ ರಂ.ಶ್ರೀ.ಮುಗಳಿಯವರು ಅನುಮೋದಿಸಿದ್ದಾರೆ. ತರುವಾಯದ ವಿದ್ವಾಂಸರು ೧೫ನೇ ಶತಮಾನದಲ್ಲಿ ಮುಳುಬಾಗಿಲ ಮಠದ ಒಂಭತ್ತನೇಯ ಪೀಠಾಧಿಪತಿಗಳಾದ ಶ್ರೀ ಶ್ರೀಪಾದರಾಜರಿಂದ ಕನ್ನಡದಲ್ಲಿ ಹರಿದಾಸ ಪಂಥ ಪ್ರಾರಂಭವಾಯಿತೆಂಬ ಹೇಳಿಕೆಯನ್ನು ನೀಡಿದ್ದಾರೆ.

ಕ್ರಿ.ಶ.೧೪೮೪ ರಿಂದ ೧೫೬೪ರ ಸುಮಾರಿನಲ್ಲಿ ಜೀವಿಸಿದ್ದ ಪುರಂದರದಾಸರು ತಮ್ಮ ಕೃತಿಯಲ್ಲಿ ಶ್ರೀಮಾಧ್ವಚಾರ್ಯರೇ ಶ್ರೀಹರಿಯದಾಸರು ಅವರೇ ಕನ್ನಡ ಹರಿದಾಸ ಮೂಲ ಪುರುಷರು ಎಂದು ಹೇಳಿದ್ದಾರೆ. ಅವರ ಪ್ರಕಾರ.

“ಶ್ರೀಪತಿ ನಾಭಿ ಕಮಲದಿ ಅಜ ಜನಿಸಿದನು
ಅಜನ ಮಾನಸ ಪುತ್ರರೇ ಸನಕಾದಿಗಳು
ಸನಕಾದಿಗಳ ಶಿಷ್ಯರೇ ಸತ್ಯಪ್ರಜ್ಞರು
ಸತ್ಯ ಪ್ರಜ್ಞರ ಶಿಷ್ಯರೇ ಪ್ರಾಜ್ಞಾತೀರ್ಥರು
ಪ್ರಾಜ್ಞಾತೀರ್ಥರ ಶಿಷ್ಯರೇ ಅಚ್ಯುತ ಪ್ರೇಕ್ಷರು
ಅಚ್ಯುತ ಪ್ರೇಕ್ಷರ ಕರಸಂಜಾತರೇ ಮಹಾ ಭಾಷ್ಯಾಕಾರರು.
ಮಹಾ ಭಾಷ್ಯಾಕಾರರೇ ಗುರು ಮುಖ್ಯ ಪ್ರಾಣರು

ಗುರುಮುಖ್ಯ ಪ್ರಾಣಪತಿ ನಮ್ಮ ಪುರಂದರವಿಠಲ
ದಾಸರಿಗೆ ನಮೋ ನಮೋ........''[೯]

ಎಂಬ ಪುರಂದರದಾಸರ ಈ ಹೇಳಿಕೆಯಿಂದ ವಾಯು ದೇವರ ಅವತಾರಿಗಳಾದ ಮಾಧ್ವಚಾರ್ಯರೇ ಹರಿದಾಸ ಮೂಲ ಪುರುಷರು. ಇದಕ್ಕೆ ಪೂರಕವೆಂಬಂತೆ ಕ್ರಿ.ಶ.೧೪೮೦-೧೬೦೦ರಲ್ಲಿ ಜೀವಿಸಿದ್ದ ಶ್ರೀವಾದಿರಾಜರು ತಮ್ಮ ಒಂದು ಹಾಡಿನಲ್ಲಿ

"ಪನ್ನಂಗ ಶಯನ ಶ್ರೀಹರಿವದನ ದಾಸರೊಳು
ನಿನ್ನ ಪೋಲುವರುಂಟೇ ಮಧ್ವಮುನಿರಾಯ......''[೧೦]

ಎಂದಿದ್ದಾರೆ. ಆದರೆ ಭಕ್ತಿ ಪಂಥಕ್ಕೆ ಸೇರಿದ ಮಾಧ್ವಮುನಿಗಳು ಕನ್ನಡಿಗರಾಗಿದ್ದರೂ ಕನ್ನಡದಲ್ಲಿ ಅವರು ಒಂದೂ ಕೃತಿಯನ್ನು ರಚಿಸಿದಂತೆ ಕಂಡುಬರುವುದಿಲ್ಲ. ಅವರ ಕೃತಿಗಳೆಲ್ಲ ಸಂಸ್ಕೃತದಲ್ಲಿವೆ''. ಈ ಹರಿದಾಸ ಪರಂಪರೆ ಜಗತ್ತಿನಲ್ಲಿ ನಾರದ ಮುನಿಗಳಿಂದ ಹಬ್ಬಿತ್ತೆಂಬ ಅಭಿಪ್ರಾಯವಿದೆ. ಅಲ್ಲದೆ ಭಗವದ್ಭಕ್ತಿಯ ಚರಿತ್ರೆಯನ್ನು ಭಾಗವತ ಕಥೆಗಳಲ್ಲಿ ವಿಪುಲವಾಗಿ ನೋಡಬಹುದು.... ಕಲಿಯುಗದ ಆರಂಭದಲ್ಲಿ ಭಾಗವತ ಪಂಥದ ಭಕ್ತಿ ಮಾರ್ಗದ ಪ್ರಚಾರವೂ ಭರತಖಂಡದಲ್ಲಿ ಅನೇಕ ಮುಖಗಳಿಂದ ಆಗಿತ್ತು. ಕಲಿಯುಗದಲ್ಲಿ ಕಡೆಗೆ ಅಂದರೆ ಈಗ ೫೦೦೦ ವರ್ಷಗಳಲ್ಲಿ ಅದು ಒಂದಿಲ್ಲೊಂದು ಆಘಾತಗಳಿಂದ ಕುಗ್ಗುತ್ತಾ ಬಂದು ತನ್ನ ಮೂಲ ರೂಪವನ್ನು ಮರೆಸಿಕೊಂಡರು. ೧೩ನೇಯ ಶತಮಾನದಲ್ಲಿ ಶ್ರೀಮಾಧ್ವಚಾರ್ಯರ ದ್ವೈತ ಸಿದ್ಧಾಂತ ಅಥವಾ ತತ್ತ್ವ ವಾದದಿಂದ ಅದರ ಮೂಲ ರೂಪವು ಮತ್ತೇ ಬಯಲಿಗೆ ಬಂತು....[೧೧] ಎಂಬ ಐತಿಹ್ಯವು ಇದೆ. ಅದೇನೇ ಇದ್ದರೂ ಶ್ರೀಮಧ್ವಚಾರ್ಯರು ಇವರ ಶಿಷ್ಯರಾದ ನರಹರಿತೀರ್ಥರು, ಜಯತೀರ್ಥರು, ಶ್ರೀಪಾದರಾಜರು, ವ್ಯಾಸತೀರ್ಥರು ಇವರೇ ಮೊದಲಾದವುಗಳನ್ನು ಲೌಕಿಕ ವಚನಗಳಿಂದ ಜನರಿಗಾಗಿ ಉಪದೇಶಿಸಿದ್ದು ಹರಿದಾಸ ಪರಂಪರೆಯ ಮೊದಲನೇಯ ಘಟ್ಟ ದಾಸ ಸಾಹಿತ್ಯದ ಉಚ್ಛ್ರಾಯ ಕಾಲವೆನಿಸಿದ್ದ ವಿಜಯನಗರದ ಕೃಷ್ಣದೇವರಾಯನ ಆಳ್ವಿಕೆಯ ಕಾಲದಲ್ಲಿ ಪುರಂದರ, ಕನಕ, ವಾದಿರಾಜ ಮುಂತಾದವರಿಂದ ಹರಿದಾಸ ಪರಂಪರೆಯ ಎರಡನೇ ಘಟ್ಟ ನಂತರದಲ್ಲಿ ವಿಜಯದಾಸರು, ಪ್ರಸನ್ನ ವೆಂಕಟದಾಸರು, ಮಹಿಪತಿದಾಸರು, ಗೋಪಾಲದಾಸರು, ಮೋಹನದಾಸರು, ಜಗನ್ನಾಥದಾಸರು ಮುಂತಾದವರಿಂದ ದಾಸ ವೃಂದದ ಪುರೋಭಿವೃದ್ಧಿಯ ಮೂರನೇಯ ಘಟ್ಟ. ತರುವಾಯದಲ್ಲಿ ಪ್ರಾಣೇಶದಾಸರು ಗುರು ಪ್ರಾಣೇಶರಾಯರು ಮೊದಲಾದವರಿಂದ ಪ್ರಾರಂಭಗೊಂಡ ದಾಸ ಪರಂಪರೆಯ ನಾಲ್ಕನೇಯ ಘಟ್ಟ ಬೆಳೆದು ಕರ್ನಾಟಕದಲ್ಲಿ ಕನ್ನಡ ಹರಿದಾಸ ಪಂಥ ಮುನ್ನಡೆ ಪಡೆಯಿತು.

'ಅಚಲಾನಂದ ವಿಠಲ' ಎಂಬ ಅಂಕಿತದಲ್ಲಿ ದೊರೆತಿರುವ ಕೆಲವು ಉಗಾಭೋಗಗಳ ಹಾಗೂ ದೇವರ ನಾಮಗಳ ಕರ್ತೃವಾದ ಅಚಲಾನಂದ ದಾಸರೇ ಹರಿದಾಸ ಪಂಥದಲ್ಲಿ ಮೊದಲಿಗರೆಂದ ಬೇಲೂರು

ಕೇಶವದಾಸರು ಮತ್ತೊಂದು ವಾದವನ್ನು ಮುಂದಿಟ್ಟು ಆ ಅಚಲಾನಂದ ದಾಸರು ೯ನೆಯ ಶತಮಾನದವರು ಎಂದು ಅಭಿಪ್ರಾಯ ಪಟ್ಟಿದ್ದಾರೆ. ಎ.ಟಿ.ಪಾಟೀಲರು ಕೂಡ ಇವರ ವಾದವನ್ನು 'ಕರ್ನಾಟಕದಲ್ಲಿ ಮೊದಲು ವೈಷ್ಣವ ಭಕ್ತಿಯನ್ನು ಬೀರಿದವರೆಂದರೆ ಅಚಲಾನಂದರು' ಎಂದಿದ್ದಾರೆ. ಆದರೆ ಅಚಲಾನಂದ ವಿಠಲಾಂಕಿತ ಉಗಾಭೋಗಗಳು ಅಚಲಾನಂದರವೇ ಎಂದು ಹೇಳುವಲ್ಲಿ ಸಂದೇಹಾಸ್ಪದವಾಗಿದೆ. ಅವುಗಳನ್ನೋದಿದಾಗ ಶರಣರ ವಚನಗಳ ಹೋಲಿಕೆ ಬಹಳ ಕಂಡು ಬರುತ್ತದೆ.

ಪಾತಕರೊಳಗೆಲ್ಲ ನಾವೆ ವೆಗ್ಗಳನಯ್ಯ
ಪ್ರಾಯಶ್ಚಿತ್ತಕ್ಕೆ ನಿನ್ನ ನಾಮವೇ ಘನವಯ್ಯ
ಪಾತಕವನು ನಾನು ಮಾಡಿದ್ದು ಏನು
ಪಾತಕ ಪಾವನ ಎರಡು ನಿನ್ನಾಧೀನ
ಪಾತಕ ವೆನಗಿಲ್ಲ ಪ್ರಾಯಶ್ಚಿತ್ತವೆನಗಿಲ್ಲ ಕೇಳಯ್ಯ ದೇವ, ಅಚಲಾನಂದ ವಿಠಲ[೧೨]

ಇದರಲ್ಲಿ ಬಳಕೆಯಾಗಿರುವ ಭಾಷೆ ಸುಮಾರು ೧೫ನೆಯ ಶತಮಾನದ ಕನ್ನಡವೆಂದು ಭಾಷಾಶಾಸ್ತ್ರಜ್ಞರ ಅಭಿಪ್ರಾಯ ೯ನೆಯ ಶತಮಾನದ ಹಳಗನ್ನಡವನ್ನು ಇಲ್ಲಿ ಗುರುತಿಸಬಹುದು ಸಾಧ್ಯವಿಲ್ಲ ಅಲ್ಲದೆ 'ಕೇಳೊ ಜೀವವೆ ನಿಮಧ್ವಮತವನನುಸರಿಸಿ ಶ್ರೀ ಲೋಲನಂಘ್ರಿಗಳ ನೆನೆದ ಸುಖಿಸೋ'[೧೩] ಎಂಬ ಅವರ ಕೀರ್ತನೆಯಲ್ಲಂತೂ ಮಧ್ವ ಮತದ ಸ್ಪಷ್ಟ ಉಲ್ಲೇಖವಿದ್ದು ಅಚಲಾಂದರು ಮಧ್ವಾಚಾರ್ಯರಿಗಿಂತ ಈಚಿನವರೆಂಬುದನ್ನು ಸ್ಪಷ್ಟಪಡಿಸುತ್ತದೆ.

ಡಾ.ಜಿ.ವರದರಾಜರಾಯರು ಅಚಲಾಂದ ದಾಸರ ಕುರಿತು ಹೇಳುತ್ತಾ ೯ನೆಯ ಶತಮಾನದಲ್ಲಿ ಒಬ್ಬರು ಹಾಗೂ ೧೫- ೧೬ನೆಯ ಶತಮಾನದಲ್ಲಿ ಇನ್ನೊಬ್ಬರು ಹೀಗೆ ಇಬ್ಬರು ಅಚಲಾನಂದರು ಇರಬೇಕು ಎಂದು ತಮ್ಮ ಕೀರ್ತನೆಯೊಂದರಲ್ಲಿ ಮಧ್ವಾಚಾರ್ಯರನ್ನು ಸ್ಮರಿಸುವುದರಿಂದ ಅಚಲಾನಂದರು ಆಚಾರ್ಯ ಮಧ್ವರ ನಂತರದವರು ಎಂಬುದು ಸ್ಪಷ್ಟವಾಗುತ್ತದೆ ಎಂದು ಅಭಿಪ್ರಾಯಪಡುತ್ತಾರೆ.

"ಎಚ್.ಕೆ.ವೇದವ್ಯಾಸಾಚಾರ್ಯರು ನರಹರಿತೀರ್ಥರೇ ದಾಸಕೂಟಕ್ಕೆ ಆದ್ಯ ಆಚಾರ್ಯರೆಂದು ಹೇಳಬಹುದು ಎಂದಿದ್ದಾರೆ. ರಂ.ಶ್ರೀ.ಮುಗಳಿಯವರು ಹಾಗೂ ಕಪಟರಾಳ ಕೃಷ್ಣರಾಯರು ಈ ವಾದವನ್ನು ಅನುಮೋದಿಸುತ್ತಾರೆ".[೧೪] ಒಟ್ಟಿನಲ್ಲಿ ನರಹರಿತೀರ್ಥರ "ಎಂತು ಮರುಳಾದೆ ನಾನೆಂತು ಮರುಳಾದೆ" ಎಂಬ ಕೀರ್ತನೆ ಹರಿದಾಸರ ಕೃತಿಗಳಲ್ಲಿ ಮೊದಲನೆಯದೆಂದು ಇದರ ಕರ್ತೃಗಳಾದ ಶ್ರೀ ನರಹರಿತೀರ್ಥರು ಕನ್ನಡದಲ್ಲಿ ದಾಸಕೂಟದ ಪ್ರವರ್ತಕರಾಗಿರಬಹುದೆಂದು ಊಹಿಸಿದ್ದಾರೆ.

"ಕನ್ನಡದಲ್ಲಿ ದೊರೆತ ೪ ಕೀರ್ತನೆಗಳಾದ "ತಿಳಕೋ ನಿನ್ನೊಳಗೆ, ಎಂತು ಮರುಳಾದೆ" ಎದುರ್ಯಾರೋ ಗುರುವೇ 'ಹರಿಯೇ ಇದು ಸರಿಯೇ' ಎನ್ನುವಲ್ಲಿ ರಘುತಿಲಕ ರಘುಪತಿ ನರಹರಿ ಅಂಕಿತ ಬರುತ್ತದೆಯೇ ವಿನಾ ವಿಠಲ ಪದ ಬರುವುದಿಲ್ಲ ಎನ್ನುವ ವಾದ ಒಂದಾದರೆ ಮತ್ತೊಂದು ಕಡೆ ಹರಿದಾಸ

ಸಾಹಿತ್ಯದ ಕುರಿತಾಗಿನ ಒಂದು ಸ್ತೋತ್ರದಲ್ಲಿ ನರಹರಿತೀರ್ಥರ ಹೆಸರು ಬರುವುದಿಲ್ಲ ಶ್ರೀ ಪಾದರಾಜರನ್ನೇ ಆದ್ಯರೆಂದು ಗುರುತಿಸಲಾಗಿದೆ".[೧೫] "ಆರ್.ಜಿ.ಗುಡಿಯವರು" ನರಹರಿ ತೀರ್ಥರು ಕನ್ನಡದಲ್ಲಿ ಕೀರ್ತನೆಗಳನ್ನು ರಚಿಸಲಾರರು ಎಂಬ ಅನುಮಾನವೇನೋ ಸಹಜ ಆದರೆ ನರಹರಿ ತೀರ್ಥರು ಮಧ್ವರ ಶಿಷ್ಯರಾಗಿ ಉಡುಪಿಗೆ ಬಂದರಲ್ಲದೆ ಅವರು ಅನೇಕ ವರ್ಷಗಳಕಾಲ ಇಲ್ಲಿ ಮಠಾಧಿಪತಿಗಳು ಆಗಿದ್ದನ್ನು ನೆನೆದಾಗ ಅವರಿಂದ ಕನ್ನಡದಲ್ಲಿ ಕೀರ್ತನೆ ರಚನೆ ಅಸಾಧ್ಯವೆಂದೇನೂ ಅನಿಸುವುದಿಲ್ಲ. ಹಾಗೆಯೇ ನರಹರಿ ತೀರ್ಥರು ಶ್ರೀ ಕೂರ್ಮದಲ್ಲಿ ಕೈಗೊಂಡ ನರಸಿಂಹದೇವರ ದೇವಸ್ಥಾನದ ಸ್ಥಾಪನೆ, ಉಪಾಸನೆ ಮುಂತಾದ ಕಾರಣಗಳಿಂದ ನರಹರಿ ಎಂಬ ಅಂಕಿತದ ಕೀರ್ತನೆಯೂ ಅವರದೇ ಆಗಿರುವ ಸಾಧ್ಯತೆಯೇ ಹೆಚ್ಚಾಗಿರುವಂತೆ ತೋರುತ್ತದೆ.[೧೬]

ದಾಸ ಸಾಹಿತ್ಯದಲ್ಲಿ ಸಾಂದರ್ಭಿಕವಾಗಿ ರಚಿಸಿದ ಕೀರ್ತನೆಗಳ ಸಂಖ್ಯೆ ಹೆಚ್ಚು ಸುಮಾರು ಇನ್ನೂರಕ್ಕೂ ಹೆಚ್ಚು ಹರಿದಾಸರು ಕೀರ್ತನೆಗಳನ್ನು ರಚಿಸಿರುವುದಾಗಿ ತಿಳಿದು ಬರುತ್ತದೆ. ಅವರಲ್ಲಿ ಪುರಂದರದಾಸರು ನಾಲ್ಕು ಲಕ್ಷದ ಎಪತ್ತೈದು ಸಾವಿರ ಕೀರ್ತನೆಗಳನ್ನು ರಚಿಸಿದ್ದಾರೆ ಎಂಬ ಹೇಳಿಕೆಯುಂಟು. ಈ ವರೆಗೆ ದೊರೆತ ಪ್ರಕಟವಾಗಿರುವ ಕೃತಿಗಳ ಸಂಖ್ಯೆಯೇ ಸಾವಿರಕ್ಕೆ ಮೀರುತ್ತವೆ. ೧೩-೧೪ನೇ ಶತಮಾನದಲ್ಲಿ ಹರಿದಾಸ ಸಾಹಿತ್ಯ ನರಹರಿತೀರ್ಥರಿಂದ ಆರಂಭವಾಗಿದೆ. ಮತ್ತು ನರಹರಿತೀರ್ಥರು ಹರಿದಾಸ ಸಾಹಿತ್ಯ ಕೀರ್ತನ ಪರಂಪರೆಯ ಆದ್ಯ ಕೃತಿಕಾರರೆಂಬುದು ವಿದ್ವಾಂಸರು ಅಭಿಪ್ರಾಯ ನರಹರಿತೀರ್ಥರು ಬರೆದ ಮೂರು ಹಾಡುಗಳು ಉಪಲಬ್ಧವಿವೆ. ಈ ಹಾಡುಗಳಲ್ಲಿ ಆರ್ತತೆ ಮತ್ತು ಆತ್ಮಶೋಧನೆಯ ನಿಲುವುಗಳು ಕಂಡುಬರುತ್ತವೆ.

ನರಹರಿತೀರ್ಥರ ನಂತರ ಹದಿನೈದನೆ ಶತಮಾನದವರೆಗೆ ಗಮನಿಸುವಂಥ ಬೇರೆ ಹರಿದಾಸರು ಕಾಣಿಸುವುದಿಲ್ಲ ಶ್ರೀಪಾದರಾಜರಿಂದಲೇ ದಾಸ ಸಾಹಿತ್ಯ ರಚನೆ ಕ್ರಮವಾಗಿ ಪ್ರಾರಂಭವಾಯಿತು. ದಾಸ ಸಾಹಿತ್ಯದಲ್ಲಿ ಕನ್ನಡದಲ್ಲಿ ಮೊಟ್ಟ ಮೊದಲಿಗೆ ಶ್ರೀಪಾದರಾಜರು ಪ್ರಥಮವಾಗಿ ಕನ್ನಡದಲ್ಲಿ ಕೃತಿ ರಚನೆ ಮಾಡಿದರು ಲಕ್ಷ್ಮೀನಾರಾಯಣ ಮುನಿಯೆಂದು ಹೆಸರಾದ ಇವರು ಶ್ರೀ ಮಧ್ವಾಚಾರ್ಯರ ಶಿಷ್ಯನಾದ ಪದ್ಮನಾಭತೀರ್ಥನ ಪೀಳಿಗೆಯ ಮುಳುಬಾಗಿಲ ಮಠಕ್ಕೆ ೯ನೆಯ ಸ್ವಾಮಿಯಾಗಿದ್ದು ಮಹಾ ಪಂಡಿತನೆಂದು ಪ್ರಖ್ಯಾತಿಯನ್ನು ಪಡೆದನು. ಕನ್ನಡದಲ್ಲಿ ಧರ್ಮಗ್ರಂಥಗಳನ್ನು ಪರಿವರ್ತಿಸಬೇಕೆಂಬ ಅಭಿಲಾಷೆ ಇವನಲ್ಲಿ ಉಂಟಾಗಿ ಅಂದಿನ ಪರಿಸ್ಥಿತಿಯಲ್ಲಿ ಕ್ರಾಂತಿಯನ್ನೇ ಉಂಟುಮಾಡಿದ ಭಾಗವತ ತಂಡವೊಂದನ್ನು ಏರ್ಪಡಿಸಿ ಪೂಜಾ ಕಾಲದಲ್ಲಿ ವೇದ ಪಾರಾಯಣ ಮಾಡಿದಂತೆ ಭಾಗವತದಿಂದ ಕನ್ನಡ ದೇವರ ನಾಮಗಳನ್ನು ಹಾಡಿಸಿದನು. ಅವುಗಳಲ್ಲಿ ಮುಖ್ಯವಾದವು ಅವನೇ ರಚಿಸಿದ ಭ್ರಮರಗೀತೆ, ವೇಣುಗೀತೆ, ಗೋಪಿಗೀತೆಗಳು ಇವುಗಳಲ್ಲಿ ಗೇಯತೆ ಇದೆ ಪ್ರಾಸದ ಸೊಗಸಿದೆ. ಶೈಲಿಯಲ್ಲಿ ಶುದ್ಧವಾದ ಮಾತಿನ ದೇಶಿಯೂ ಸೇರಿಕೊಂಡಿದೆ. ಅವನ ಕೃತಿಗಳಲ್ಲಿ ಅವಷ್ಟೇ ದೊರೆಯದೆ ಹೋಗಿರಬಹುದು. ಕೆಲವನ್ನು

ಮಾತ್ರ 'ರಂಗ ವಿಠಲ' ಎಂಬ ಮುದ್ರಿಕೆಯಲ್ಲಿ ಅವನು ರಚಿಸಿದ್ದನ್ನು ನಾವು ಓದಬಹುದು. ಶ್ರೀಪಾದರಾಜರ ಕನ್ನಡ ಕೃತಿಗಳಲ್ಲಿ ಪದ ಲಾಲಿತ್ಯ, ಅಲಂಕಾರ, ಪ್ರೌಢಿಮೆ ಶೃಂಗಾರ, ಶಾಂತಿ ಭಕ್ತಿ ರಸಗಳ ನಿರೂಪಣ ಇವು ಓದುಗರ ಚಿತ್ತವನ್ನು ಹೃದಯವನ್ನು ಆಕರ್ಷಿಸುವವು. ಶ್ರೀ ಭಾಗವತದ ಕೃಷ್ಣಕತೆಯನ್ನು ಚಿಕ್ಕ ಚಿಕ್ಕ ಪದಗಳಲ್ಲಿ ಬಹುರಸವತ್ತಾಗಿ ಹಾಡಿದ್ದಾರೆ.

ಶ್ರೀ ಪಾದರಾಜರ ಈ ಸಾಧನೆಯಿಂದ ಅವರ ಸಾಧನೆಯಿಂದ ಅವರನ್ನು ಹರಿದಾಸ ಸಾಹಿತ್ಯ ಪಿತಾಮಹ ಎಂದು ಇತರ ದಾಸ ಶ್ರೇಷ್ಠರುಗಳೆಲ್ಲರೂ ಇವರನ್ನು ಹಾಡಿಹೊಗಳಿದ್ದಾರೆ. ಒಟ್ಟಿನಲ್ಲಿ ಹರಿದಾಸ ಸಾಹಿತ್ಯದಲ್ಲಿ ಶ್ರೀಪಾದರಾಯರ ಸ್ಥಾನ ಅತ್ಯಂತ ಹಿರಿದಾದದ್ದು ಹರಿದಾಸ ಪಂಥದ ಸ್ಥಾಪನೆ ಬೆಳವಣಿಗೆಗೆ ಕಾರಣರಾದ ಶ್ರೀಪಾದರಾಜರು ವ್ಯಾಸಕೂಟ-ದಾಸಕೂಟ ಎರಡರಲ್ಲೂ ಸಮಾನ ಗೌರವ ಪ್ರಸಿದ್ಧಿ ಪಡೆದಿರುವರು. ಸಂಸ್ಕೃತ ಮತ್ತು ಕನ್ನಡ ಎರಡೂ ಭಾಷೆಗಳಲ್ಲೂ ಕೃತಿ ರಚನೆ ಮಾಡಿ ಎರಡೂ ಭಾಷೆಗಳಲ್ಲಿನ ತಮ್ಮ ಪ್ರೌಢಿಮೆಯನ್ನು ಮೆರೆದಿರುವರು. ಸಂಗೀತದ ಮೌಲ್ಯವರಿತು ಅದನ್ನು ತಮ್ಮ ಪ್ರಸಾರಕ್ಕೆ ಸಾಹಿತ್ಯ ನಿರ್ಮಾಣಕ್ಕೆ ಮಾಧ್ಯಮವಾಗಿ ಬಳಸಿಕೊಂಡ ಕೀರ್ತಿ ಶ್ರೀಪಾದರಾಯರದು.

"ಕಲಿಯುಗದಿ ಗಾನದಲಿ ಕೇಶವನೆನಲು ಕೈಗೂಡುವನು ವಿಠಲ" ಎಂದು ಹಾಡುತ್ತಾ ಗಾನದಿಂದ ದೈವ ಸಾಕ್ಷಾತ್ಕಾರ ಸಾಧ್ಯ ಎಂಬ ಸುಲಭೋಪಾಯವನ್ನು ತೋರಿಸಿಕೊಟ್ಟವರು ಶ್ರೀಪಾದರಾಯರು. ತಮ್ಮ ಸ್ವಂತ ಆಲೋಚನೆಯಿಂದ ನಡೆಸಿದ ಪ್ರಯೋಗ ಮುಂದೆ ಸುಳಾದಿ, ಕೀರ್ತನೆ, ವೃತ್ತನಾಮ, ಉಗಾಭೋಗಗಳನ್ನು ಮೊದಲಬಾರಿಗೆ ಬೆಳಕಿಗೆ ತಂದು ಪುರಂದರದಾಸರಂತೆ ಸಂಗೀತ ಪಿತಾಮಹರಿಗೆ ನೀಡಿದ ಸ್ಫೂರ್ತಿ ತಳಪಾಯ ಹಾಕಿಕೊಟ್ಟವರು ಶ್ರೀಪಾದರಾಯರು.

ಕನ್ನಡ ದಾಸ ಸಾಹಿತ್ಯ ಪರಂಪರೆಯಲ್ಲಿ ವ್ಯಾಸರಾಯರದು ದೊಡ್ಡ ಹೆಸರು ಅವರು ದಾಸ ಪರಂಪರೆಯ ಸಂಘಟಕರು ಮತ್ತು ನಿರ್ಮಾತೃರು ಇವರು ಶ್ರೀಪಾದರಾಜರ ಶಿಷ್ಯರು ವಿಜಯನಗರದ ದೊರೆ ಕೃಷ್ಣದೇವರಾಯನಿಂದ ಸನ್ಮಾನಿತರಾಗಿ ವಿಜಯನಗರದಲ್ಲಿ ವಿದ್ಯಾಪೀಠವನ್ನು ತೆರೆದರು 'ಶ್ರೀಕೃಷ್ಣ' ಅಂಕಿತಗಳಲ್ಲಿ ಕನ್ನಡ ಕೀರ್ತನೆಗಳನ್ನು ರಚಿಸಿದರು. ಸಂಸ್ಕೃತದಲ್ಲೂ ಅನೇಕ ಕಾವ್ಯಗಳನ್ನು ಬರೆದರು ವ್ಯಾಸರಾಯರು ದಾಸಕೂಟ ವ್ಯಾಸಕೂಟಗಳ ಕೂಡುದಾರಿಯಲ್ಲಿ ನಡೆದರು. ಅವರು ಕೀರ್ತನೆಗಳನ್ನು ರಚಿಸಿದರು ಎನ್ನುವುದಕ್ಕಿಂತ ಪುರಂದರ ಕನಕದಾಸರಂತಹ ಮಹಾನ್ ಕೀರ್ತನ ಕಾರರನ್ನು ರೂಪಿಸಿದರು. ಅದರಿಂದ ಕೀರ್ತನೆಗಳನ್ನು ಬರೆಯಿಸಿದರು ಹಾಡಿಸಿದರು ಎನ್ನುವುದು ಹೆಚ್ಚು ಔಚಿತ್ಯದ ಸಂಗತಿ.

ದಾಸಸಾಹಿತ್ಯ ಪರಂಪರೆಗೆ ನೀಡಿದ ಬಹುದೊಡ್ಡ ಕೊಡುಗೆಯೆಂದರೆ ಸೋದೆ ಮಠಾಧೀಶರಾದ ಶ್ರೀವಾದಿರಾಜರು (೧೪೮೦-೧೬೦೦) ವಾದಿರಾಜರು ಸಂಸ್ಕೃತ ಕನ್ನಡಗಳೆರಡರಲ್ಲೂ ಕಾವ್ಯ ನಿರ್ಮಿಸಿದ ಪ್ರತಿಭಾಶಾಲಿಗಳು, ಕೆಳವರ್ಗದ ಸಮುದಾಯದವರಿಗೆ ಹಾಡಿಕೊಳ್ಳಲು ಅನುಕೂಲವಾಗಲೆಂದು ತುಳು ಭಾಷೆಯಲ್ಲೂ ಕಾವ್ಯ ಬರೆದರೆಂದು ಹೇಳಲಾಗಿದೆ. (ದಶಾವತಾರ ಸ್ತುತಿಯೆಂದೇ ಸಿಗುತ್ತದೆ) ಅವರ

ಅಂಕಿತ 'ಹಯವದನ' ಮಾಧ್ವತತ್ತ್ವ ಪ್ರತಿಪಾದನೆಯ ಜೊತೆಗೆ ಸಾಮಾಜಿಕ ವಿಡಂಬನೆ ಸ್ವಾನುಭವ ನಿರೂಪಣೆ ಆರ್ತತೆ ಅವರ ಕೀರ್ತನೆಗಳ ಹೆಗ್ಗುರುತುಗಳು ಭಾಗವತದ ಅನೇಕ ಘಟನಾವಳಿಗಳು ಸಂಭಾಷಣಾ ರೂಪದಲ್ಲಿ ಅವರ ಕೀರ್ತನೆಗಳಲ್ಲಿ ಆಕಾರ ಪಡೆದಿವೆ. ತ್ರಿಪದಿ ಅವರಿಗೆ ಪ್ರಿಯವಾದ ಮಟ್ಟು ತಾಳುವಿಕೆಗಿಂತ ತಪವು ಇಲ್ಲ. 'ಕುದುರೆ ಬಂದಿದೆ ಮನದ ಡೊಂಕು' ಇವರ ಪ್ರಸಿದ್ಧ ಕೀರ್ತನೆಗಳು.

'ದಾಸರೆಂದರೆ ಪುರಂದರದಾಸರಯ್ಯ' ಎಂದು ಗುರುಗಳಾದ ವ್ಯಾಸರಾಯರಿಂದ ಹೊಗಳಿಸಿಕೊಂಡ ಪುರಂದರದಾಸರು ಕೀರ್ತನ ಸಾಹಿತ್ಯ ಪರಂಪರೆಗೆ ಅತ್ಯ ಪೂರ್ಣವಾದ ನೆಲೆ ಬೆಲೆಯನ್ನು ಕಲ್ಪಿಸಿಕೊಟ್ಟರು. ಕ್ರಿ.ಶ.೧೪೮೪ರಲ್ಲಿ ಪುರಂದರಗಡದಲ್ಲಿ ಜನಿಸಿದ ಅವರು ತಮ್ಮ ಕೃತಿಗಳಲ್ಲಿನ ಸಾಹಿತ್ಯಕ ಸಾಮಾಜಿಕ ಹಾಗೂ ಸಂಗೀತದ ಮೌಲ್ಯಗಳಿಂದ ಸಮಸ್ತ ಕನ್ನಡಿಗರ ಗೌರವಕ್ಕೆ ಪಾತ್ರರಾಗಿದ್ದಾರೆ. 'ಪುರಂದರ ವಿಠಲ' ಅವರ ಅಂಕಿತ ಅವರ ಕೀರ್ತನೆಗಳಲ್ಲಿ ಭಕ್ತಿಯ ಅಭಿವ್ಯಕ್ತಿ ವಿಧಾನಗಳಲ್ಲಿ ಒಂದಾದ ಪಂಚಭಾವ ಸ್ಪಷ್ಟವಾಗಿ ಅಭಿವ್ಯಕ್ತಗೊಂಡಿದೆ. ಅದರಲ್ಲೂ ವಾತ್ಸಲ್ಯ ಭಾವದ ಅಭಿವ್ಯಕ್ತಿಯಲ್ಲಿ ಅವರಿಗೆ ವಿಶೇಷವಾದ ಒಲವು. ಆಧ್ಯಾತ್ಮ, ತತ್ವ, ಲೋಕ ನೀತಿ ಹಾಗೂ ಸಂಗೀತದ ರಾಗ ಸ್ವರೂಪಗಳ ಮುಪ್ಪುರಿಯನ್ನು ಪುರಂದರ ದಾಸರಷ್ಟು ಸೂಕ್ಷ್ಮವಾಗಿ ಗಮನಿಸಿದವರು ಮತ್ತೊಬ್ಬರಿಲ್ಲ. ಸಾರ್ವಕಾಲಿಕ ಜೀವನ ಮೌಲ್ಯಗಳನ್ನು ಇವರು ಪರಿಣಾಮಕಾರಿಯಾಗಿ ಪ್ರತಿಮೆ ರೂಪಕಗಳ ಮೂಲಕ ಪ್ರತಿಪಾದಿಸಿದ್ದಾರೆ. ಇವರ ಅನೇಕ ಕೀರ್ತನೆಗಳು ಸುಂದರ ಭಾವಗೀತೆಗಳೇ ಆಗಿವೆ. ಪುರಂದರದಾಸರು ಕರ್ನಾಟಕ ಶಾಸ್ತ್ರೀಯ ಸಂಗೀತಕ್ಕೆ ಒಂದು ಭದ್ರವಾದ ಅಡಿಪಾಯವನ್ನು ಹಾಕಿಕೊಟ್ಟರಲ್ಲದೆ ಆರಂಭದ ಅಭ್ಯಾಸಿಗಳಾಗಿ 'ಪಿಳ್ಳಾರಿ ಗೀತೆ' ಗಳನ್ನು ರಚಿಸಿದರು. ಪುರಂದರದಾಸರ ರಚನೆಗಳನ್ನು ವಸ್ತು ವೈವಿಧ್ಯದ ದೃಷ್ಟಿಯಿಂದ ಎರಡಾಗಿ ವಿಂಗಡಿಸಬಹುದು. ಮೊದಲ ಬಗೆಯು ವ್ಯಕ್ತಿನಿಷ್ಠವಾದ ಭಗವಂತನ ನಾಮಸ್ಮರಣೆ, ವರ್ಣನೆ, ಲೀಲಾವಿನೋದಗಳು, ಅಲ್ಲಿ ಅವರು ತಮ್ಮ ಅಂತರಂಗದ ನೋವು ನಲಿವುಗಳನ್ನು ಉತ್ಕಟ ಭಕ್ತಿಯನ್ನೂ ವ್ಯಕ್ತಪಡಿಸಿದ್ದಾರೆ. ಎರಡನೆಯ ಬಗೆಯ ಕೀರ್ತನೆಗಳಲ್ಲಿ ಸಾಮಾಜಿಕ ಪ್ರಜ್ಞೆ ದಟ್ಟವಾಗಿ ಮೂಡಿ ಬಂದಿದೆ. ಸಮಾಜದ ಮೂಢನಂಬಿಕೆ, ಜಾತಿವ್ಯವಸ್ಥೆ ಮುಂತಾದವುಗಳನ್ನು ಕಟುವಾಗಿ ವ್ಯಂಗ್ಯವಾಗಿ ಟೀಕಿಸಲು ಹರಿದಾಸರು ಹಿಂಜರಿಯಲಿಲ್ಲ. ನೈತಿಕ ಮೌಲ್ಯಗಳಿಗೆ ಅವರು ಹೆಚ್ಚಿನ ಪ್ರಾಧಾನ್ಯ ಕೊಟ್ಟಿದ್ದಾರೆ.

ಕೃಷ್ಣನ ಬಾಲಲೀಲೆಗಳನ್ನು, ವಾತ್ಸಲ್ಯ ಭಾವದ ಗೀತೆಗಳನ್ನು ಬರೆದ ಕೀರ್ತಿ, ಕೀರ್ತನಕಾರರಲ್ಲಿ ಪುರಂದರದಾಸರಿಗೆ ಸಲ್ಲುತ್ತದೆ. 'ಆಡಿದನೋರಂಗ ಅದ್ಭುತದಿಂದಲಿ', 'ಆಡಿಸಿದಳೆಶೋದ' 'ಹರಿಕುಣಿದ' ಮಾದಲಾದವು ಅವನ ಬಾಲಲೀಲೆಗಳನ್ನು ಚಿತ್ರಿಸುವ ಗೀತೆಗಳಾದರೆ, 'ಗುಮ್ಮನ ಕರೆಯದಿರೆ, ಪೋಗದಿರೆಲೋ ರಂಗ' 'ಮನೆಯೊಳಗಾಡೊ ಗೋವಿಂದ' ಇಲ್ಲಿ ತಾಯಿ-ಮಗುವಿನ ವಾತ್ಸಲ್ಯವನ್ನೂ ಕಾಣಬಹುದು. 'ದಾಸನ ಮಾಡಿಕೋ ಎನ್ನ' 'ಗೋವಿಂದಾ ಎನ್ನಿರೊ' 'ಕಂಡು ಕಂಡು ನೀಯನ್ನ ಕೈ ಬಿಡುವರೆ' 'ನೀನ್ಯಾಕೊ ನಿನ್ನ ಹಂಗ್ಯಾಕೊ' 'ಎನಗೂ ಆಣೆ ರಂಗ ನಿನಗೂ ಆಣೆ' 'ಕಣ್ಣಾರೆ ಕಂಡೆ ಅಚ್ಯುತನ' ಮುಂತಾದ ಹಾಡುಗಳಲ್ಲಿ ಹರಿಯ ಭಕ್ತಿಯ ರೂಪಗಳಲ್ಲಿ ವರ್ಣಿಸಲಾಗಿದೆ.

ಸಂಸಾರದ ನಿಸ್ಸಾರತೆಯನ್ನೂ ಭೋಗ ಜೀವನದ ನಶ್ವರತೆಯನ್ನೂ ಕುರಿತು ಪುರಂದರದಾಸರು ಸಾಕಷ್ಟು ಗೀತೆಗಳನ್ನು ರಚಿಸಿದ್ದಾರೆ. 'ಆರು ಹಿತವರು ನಿನಗೆ' 'ಆರೇನು ಮಾಡುವರು' 'ಸಾಕು ಸಾಕಿನ್ನು ಸಂಸಾರ ಸುಖವು' 'ಅನುಗಾಲವು ಚಿಂತೆ ಯಾರ ಹಾರೈಸಿದರೇನುಂಟು' ಎಂದು ಹೇಳಿದರು. ಪುರಂದರದಾಸರು 'ಮಾನವ ಜನ್ಮ ದೊಡ್ಡದು ಅದನು ಹಾನಿ ಮಾಡಬೇಡಿ ಹುಚ್ಚಪ್ಪಗಳಿರಾ' ಇತ್ಯಾದಿ ನರಜನ್ಮ ಬಂದಾಗ ನಾಲಿಗೆ ಇರುವಾಗ ಕೃಷ್ಣ ಎಂದು ಬದುಕಬೇಕು. ಸಂಸಾರವನ್ನು 'ಈಸಬೇಕು ಇದ್ದು ಜೈಸಬೇಕು' ಎಂದು ಭೋದಿಸುತ್ತಾರೆ. ಹೀಗೆ ಸಮಾಜವನ್ನು ಕುರಿತು ವ್ಯಂಗ್ಯ, ವಿಡಂಬನೆಗಳೂ ಸಾಕಷ್ಟು ಪದಗಳಲ್ಲಿವೆ. ಡೊಂಕುಬಾಲದ ನಾಯಕರೆ ನೀವೇನೂಟವ ಮಾಡಿದಿರಿ? ಇತ್ಯಾದಿ 'ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ', ಸಂಸಾರದ ಚಿಂತೆಯಲ್ಲೇ ಮುಳುಗಿರದೆ 'ಬಂದದ್ದೆಲ್ಲ ಬರಲಿ ಗೋವಿಂದನ ದಯವೊಂದಿರಲಿ' ಎಂದು ಹರಿನಾಮ ಮಹಿಮೆಯ ಗೀತೆಗಳಂತೂ ಲೆಕ್ಕವಿಲ್ಲದಷ್ಟು. ಹರಿನಾಮಸ್ಮರಣೆ, ಸ್ತುತಿ, ಅಂತರಂಗ ನೀವೇದನೆ, ಕೃಷ್ಣಲೀಲೆ, ಸಮಾಜ ವಿಮರ್ಶೆ, ಸಮಾಜ ಬೋಧನೆ ಮುಂತಾದ ಅಂಶಗಳನ್ನು ಪುರಂದರದಾಸರ ಹಾಡಿಗಳಲ್ಲಿ ಕಾಣಬಹುದು.

ಪುರಂದರದಾಸರ ಸಮಕಾಲೀನರಾಗಿ, ವ್ಯಾಸರಾಯರ ಶಿಷ್ಯರಾಗಿ ಹರಿದಾಸ ಸಾಹಿತ್ಯಕ್ಕೆ ಮತ್ತಷ್ಟು ಜೀವ ತುಂಬಿದವರೆಂದರೆ ಶ್ರೀ ಕನಕದಾಸರು ಹರಿದಾಸ ಕವಿಯಾಗಿರುವ ಇವರ ಪ್ರತಿಭೆ ಕೀರ್ತನೆಗಳಿಗಷ್ಟೇ ಸೀಮಿತಗೊಳ್ಳದೇ ಮೋಹನ ತರಂಗಿಣಿ, ನಳ ಚರಿತ್ರೆ, ರಾಮಧ್ಯಾನ ಚರಿತೆ, ಹರಿಭಕ್ತಿಸಾರಗಳಲ್ಲಿ ಬಹುಮುಖ್ಯವಾಗಿ ಹೊರ ಹೊಮ್ಮಿದೆ. ಸಮಾಜದ ಕೆಳವರ್ಗದಿಂದ ಬಂದು ಸಾಮಾಜಿಕ ಕಟ್ಟುಪಾಡುಗಳನ್ನು ಮುರಿದುಕಟ್ಟಿದ ಧೀಮಂತರು ಕನಕದಾಸರು. ಇದರಿಂದಾಗಿಯೆ ಅವರ ಸಾಮಾಜಿಕ ವಿಡಂಬನೆಯಲ್ಲಿ ಹೆಚ್ಚಿನ ನೋವು ತೀಕ್ಷ್ಣತೆಯೂ ಎದ್ದು ಕಾಣುತ್ತದೆ. ಅವರು ತಮ್ಮ ಕೀರ್ತನೆಗಳಲ್ಲಿ ಜಡ ಕರ್ಮಕಾಂಡಗಳ ವಿವರಗಳಿಗೆ ಮತ ತತ್ತ್ವ ಪ್ರತಿಪಾದನೆಗೆ ವಿಶೇಷ ಇಂಬು ನೀಡಿಲ್ಲ. ಅಲ್ಲಿ ಅಪರೋಕ್ಷ ಜ್ಞಾನಿಯೊಬ್ಬನು ಏಕಾಂತ ಭಕ್ತಿಯನ್ನು ಸರ್ವಾರ್ಪಣ ಮನೋಧರ್ಮವನ್ನು ಕಾಣಬಹುದಾಗಿದೆ. ಜನತೆಯ ಮೌಢ್ಯ, ಅಂಧ ಕಂದಾಚಾರ, ವರ್ಣ ವ್ಯವಸ್ಥೆಯ ಕ್ರೂರತನಗಳನ್ನು ತಮ್ಮ ಕೀರ್ತನೆಗಳಲ್ಲಿ ಗಾಳಿಗೆ ಹಿಡಿದಿದ್ದಾರೆ. 'ತನು ನಿನ್ನದು ಜೀವನ ನಿನ್ನದು' 'ತಲ್ಲನಿಸದಿರು ಕಂಡ್ಯ ತಾಳು ಮನವೆ' 'ತೊರೆದು ಜೀವಿಸಬಹುದೆ ಹರಿ ನಿನ್ನ ಚರಣಗಳ' 'ಬಾಗಿಲನು ತೆರೆದು ಸೇವೆಯನು ಕೊಡು ಹರಿಯೆ' ಈ ಕೀರ್ತನೆಗಳಲ್ಲಿ ಅವರ ಮನೋಧರ್ಮವನ್ನು, ಸಾಧಕನೊಬ್ಬನ ಮೊರೆಯನ್ನು ಗುರುತಿಸಬಹುದು. 'ಕುಲ ಕುಲವೆನ್ನುತಿಹರು' 'ಎಲ್ಲರೂ ಮಾಡುವುದು ಹೊಟ್ಟೆಗಾಗಿ' 'ಕಣೆಯ ಹೇಳಬಂದೆ' ಕೃತಿಗಳಲ್ಲಿ ಅವರ ಸಾಮಾಜಿಕ ವಿಡಂಬನೆ ಧಾಟಿಯನ್ನು ಗುರುತಿಸಬಹುದು. ಕನಕದಾಸರು ತಮ್ಮ ಕೀರ್ತನೆಗಳಲ್ಲಿ ಸಮಕಾಲದ ಆಡು ಮಾತುಗಳನ್ನು ಬಳಸಿರುವುದು ದಾಸ ಸಾಹಿತ್ಯದಲ್ಲೇ ಒಂದು ವಿಶಿಷ್ಟ ಮಾದರಿ. ಅವರ ಕೀರ್ತನೆಗಳಲ್ಲಿ ಶಿವ ಪರವಾದ ದೋರಣೆ ಅವರ ವಿಶಾಲ ಮನೋಧರ್ಮವನ್ನು ತಿಳಿಸುತ್ತದೆ.

ಶ್ರೀ ಪಾದರಾಯರಿಂದ ಕನಕ, ಪುರಂದರರ ನಡುವಣ ಕಾಲಾವಧಿ ದಾಸ ಸಾಹಿತ್ಯದ ಸುವರ್ಣಯುಗ. ಮುಂದೆ ವಿಜಯನಗರದ ಪತನದ ಬಳಿಕ ಒಂದು ನೂರು ವರ್ಷ ದಾಸ ಸಾಹಿತ್ಯದ ಬೀಳುಗಾಲ ಅಥವಾ ಅಜ್ಞಾತ ಪರ್ವ ಮುಂದೆ ವಿಜಯದಾಸರಿಂದ ಪುನಃ ಜೀವಂತಿಕೆಯನ್ನು ಪಡೆಯಿತು. ಈ ಪುನರುಜ್ಜೀವನ ಕಾಲದಲ್ಲಿ ಕಾಣಿಸಿಕೊಂಡವರು ಕಾಖಂಡಿಕಿ ಮಹೀಪತಿದಾಸರು ಹಾಗೂ ಅವರ ಮಕ್ಕಳಾದ ಕೃಷ್ಣದಾಸರು. ಮಹೀಪತಿದಾಸರು (ಕ್ರಿ.ಶ ೧೬೧೧-೧೬೮೧) ಹಲವು ಭಾಷೆಗಳಲ್ಲಿ ಪರಿಣತರಾಗಿದ್ದು ಆದಿಲ್ ಶಾಹಿಯ ಆಸ್ಥಾನದಲ್ಲಿ ಅಧಿಕಾರಿಯಾಗಿದ್ದರು. ತಮ್ಮ ಯೋಗಾನುಭವದ ಬೆಳಕಿನಲ್ಲಿ ಕೀರ್ತನೆಗಳನ್ನು ರಚಿಸಿದರು. ಇವರ ಗುರುಗಳಾದ ಅವಧೂತ ಭಾಸ್ಕರ ಸ್ವಾಮಿಗಳ ಪ್ರಭಾವದಿಂದಾಗಿ ಇವರ ಕೀರ್ತನೆಗಳಲ್ಲಿ ಅವಧೂತ ಪರಂಪರೆಯ ಛಾಪು ಕಾಣಿಸುತ್ತದೆ. ಹೀಗೆ ರಾಜಕೀಯ, ಸಾಮಾಜಿಕ ಒತ್ತಡದ ಫಲವಾಗಿ ದಾಸಸಾಹಿತ್ಯದ ಪುನರುಜ್ಜೀವನಕ್ಕೆ ಬೆನ್ನು ಕೊಟ್ಟವರು ಈ ತಂದೆ ಮಕ್ಕಳು. ಮಂತ್ರಾಲಯದ ಪ್ರಭುಗಳೆಂದು ಖ್ಯಾತರಾದ ಶ್ರೀ ರಾಘವೇಂದ್ರರು 'ಇಂದು ಎನಗೆ ಗೋವಿಂದ ನಿನ್ನ ಪಾದಾರವಿಂದವ ತೋರೋ ಮುಕುಂದನೆ' ಎಂಬ ಒಂದೇ ಒಂದು ಕೀರ್ತನೆ ರಚಿಸಿದ್ದರೂ ತನ್ನ ಜನಾನುರಾಗದಿಂದಾಗಿ ಸ್ಥಗಿತಗೊಂಡಿದ್ದ ದಾಸ ಚಳುವಳಿಯನ್ನು ಮತ್ತೆ ಚಾಲನೆಗೊಳಿಸಿದರು.

ಮೊದಲನೆ ಘಟ್ಟದಲ್ಲಿ ಪುರಂದರದಾಸರು ಕೇಂದ್ರಬಿಂದುವಾಗಿದ್ದಂತೆ ಎರಡನೆಯ ಘಟ್ಟದಲ್ಲಿ ವಿಜಯದಾಸರು ಕೇಂದ್ರ ಬಿಂದುವಾಗಿದ್ದಾರೆ. ಏಕೆಂದರೆ ಅವರ ನೇತೃತ್ವದಲ್ಲಿ ಅನೇಕ ಹರಿದಾಸರು ಕರ್ನಾಟಕದಲ್ಲಿ ದಾಸಕೂಟ ಪದ್ಧತಿಯನ್ನು ಮುಂದುವರೆಸಿದರು. ಅದರಿಂದ ವಿಜಯನಗರದ ಪತನದ ನಂತರದ ಅಜ್ಞಾತ ಕಾಲವು ನಿಂತು ಮತ್ತೆ ದಾಸ ಸಾಹಿತ್ಯವು ಚೇತೋಹಾರಿಯಾಗಿ ಬೆಳೆದು ಬಂದಿತು. ಅದಕ್ಕಾಗಿ ವಿಜಯದಾಸರನ್ನು ದಾಸ ಸಂಪ್ರದಾಯವನ್ನು ಪುನರುಜ್ಜೀವನ ಮಾಡಿದ ಪ್ರಮುಖ ವ್ಯಕ್ತಿಯೆಂದು ಕರೆಯಬಹುದು. ಈ ಅಭಿಪ್ರಾಯಕ್ಕೆ ಪೋಷಕವಾಗಿ

"ನಮಃ ಶ್ರೀಪಾದರಾಜಾಯ ನಮಸ್ತೇ ವ್ಯಾಸಯೋಗಿನೇ
ನಮಃ ಪುರಂದರರಾರ್ಯಾಯ ವಿಜಯಾರ್ಯಾಮತೇ ನಮಃ"

ವಿಜಯದಾಸರು (೧೬೮೨-೧೭೭೩) ಪುರಂದರದಾಸರನ್ನು ಅಪರೋಕ್ಷವಾಗಿ ತಮ್ಮ ಗುರುಗಳೆಂದು ಸ್ವೀಕರಿಸಿದ್ದಾರೆ. ಜಗನ್ನಾಥದಾಸ, ಗೋಪಾಲದಾಸರು ಈ ಕಾಲದ ಪ್ರಸಿದ್ಧ ದಾಸರು. ವಿಜಯದಾಸರು ರಾಯಚೂರು ಜಿಲ್ಲೆಯ ಮಾನ್ವಿಗೆ ಸಮೀಪದ ಚೀಕಲಪರವಿ ಗ್ರಾಮದಲ್ಲಿ ಜನಿಸಿದರು. 'ವಿಜಯ ವಿಠಲ' ಇವರ ಅಂಕಿತ. ಅವರ ಕೀರ್ತನೆಗಳಲ್ಲಿ ಮಾಧ್ವತತ್ತ್ವದ ಗಹನ ಸಿದ್ಧಾಂತಗಳು ಕಂಡುಬರುತ್ತವೆ. ಅವರದು ಬಹುತೇಕ ಸ್ತುತಿಪರವಾದ ಕೀರ್ತನೆಗಳು.

ಆರಂಭಿಕ ಕಾಲಘಟ್ಟದಲ್ಲಿ ವಾದಿರಾಜರು ಮಾಡಿದ ರೀತಿ ಎರಡನೇ ಹಂತದಲ್ಲಿ ವಿಜಯದಾಸರು ಅದನ್ನೇ ಮುಂದುವರಿಸಿದರು. ವಿಜಯದಾಸರ 'ಕಾದನು ವತ್ಸವ ಹರಿ ಕಾದನಾ' 'ವೇದ ವೇದ್ಯ

ಸಾದವಿನುತ ರಾಧಿಕಾ ರಮಣ ಕೃಷ್ಣ' ಈ ಕೀರ್ತನೆಗಳು ತುಂಬಾ ಜನಪ್ರಿಯವಾಗಿದೆ. ಹರಿದಾಸ ಸಾಹಿತ್ಯ ತಿರುವು ನೀಡಿದ ವಿಜಯದಾಸರು ಸುಳಾದಿಗಳನ್ನು ಹೆಚ್ಚಿನ ರೀತಿಯಲ್ಲಿ ರಚಿಸಿದ್ದರಿಂದ ಸುಳಾದಿ ದಾಸರೆಂದೇ ಹೆಸರಾದರು. ಗಹನವಾದ ತತ್ವಗಳನ್ನು ಸುಳಾದಿಗಳ ಮೂಲಕ ಸರಳಗೊಳಿಸಿದ ಶ್ರೇಯಸ್ಸು ವಿಜಯದಾಸರಿಗೆ ಸಲ್ಲುತ್ತದೆ.

ವಿಜಯದಾಸರ ಸಮಕಾಲೀನರಾದ ಪ್ರಸನ್ನ ವೆಂಕಟದಾಸರು ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ. ಗೋಪಾಲದಾಸರು ಹಾಗೂ ಹೆಳವನಕಟ್ಟೆ ಗಿರಿಯಮ್ಮ ಕೂಡ ಇವರ ಸಮಕಾಲೀನರಾಗಿದ್ದರೆಂದು ತಿಳಿದುಬರುತ್ತದೆ. ಶ್ರೀಮದ್ಭಾಗವತದ ೧೦ನೆಯ ಸ್ಕಂದದ ಪೂರ್ವಾರ್ಧದ ಕಥಾ ಸನ್ನಿವೇಶವನ್ನು ಉತ್ತಮವಾಗಿ ತಮ್ಮ ಕೀರ್ತನೆಯೊಳಗೆ ಬಳಸಿಕೊಂಡು ರಚಿಸಿದ್ದಾರೆ. ಶ್ರೀಕೃಷ್ಣನ ಬಾಲಲೀಲೆಗಳನ್ನು ಹೃದಯಂಗಮವಾಗಿ ಚಿತ್ರಿಸುವಲ್ಲಿ ಅವರು ಬಾಲ ಭಾಷೆಯನ್ನು ಬಳಸಿಕೊಂಡು ವಾತ್ಸಲ್ಯ ಭಾವದ ಕೀರ್ತನೆಗಳನ್ನು ರಚಿಸಿರುವುದು ಗಮನಾರ್ಹವಾಗಿದೆ.

ಸುಮಾರು ೧೭ನೆಯ ಶತಮಾನದ ಮಧ್ಯಭಾಗದಲ್ಲಿ ಬಾಲಕೋಟೆಯಲ್ಲಿ ನೆಲೆಸಿ, ವೈದಿಕ ವೃತ್ತಿಯಿಂದ ಜೀವನ ನಡೆಸುತ್ತಿದ್ದ ಕಾಶ್ಯಪ ಗೋತ್ರಜರಾಗಿದ್ದ ಕಾಖಂಡಕಿ ನರಸಪ್ಪಯ್ಯನವರು ಇವರ ತಂದೆ, ತಾಯಿ ಲಕ್ಷ್ಮೀಬಾಯಿ. ದಾಸರ ಪೂರ್ವಜರು ಕಾಖಂಡಕಿಯವರಿದ್ದಿರಬೇಕೆಂದು ಅವರ ಮನೆತನದ ಹೆಸರಿನಿಂದ ಊಹಿಸಬಹುದಾಗಿದೆ. ನರಸಪ್ಪಯ್ಯವರಿಗೆ ಇಬ್ಬರು ಗಂಡುಮಕ್ಕಳಿದ್ದರು. ಅವರಲ್ಲಿ ಕಿರಿಯವನೇ ವೆಂಕಟೇಶ ಈತನೇ ಮುಂದೆ ಪ್ರಸನ್ನ ವೆಂಕಟದಾಸನೆಂದು ಪ್ರಸಿದ್ಧನಾದನು. ಮನೆಯಲ್ಲಿ ವೆಂಕಟೇಶನನ್ನು ವೆಂಕಪ್ಪಯ್ಯ ಎಂದು ಕರೆಯುತ್ತಿದ್ದರು. ವೆಂಕಪ್ಪಯ್ಯನ ಜನನ ಕಾಲ ಯಾವಾಗ ಆಯಿತೆಂಬುದಕ್ಕೆ ಖಚಿತವಾದ ಆಧಾರಗಳಿಂದ ತಿಳಿದುಬಂದಿಲ್ಲ. ಮುಂದೆ ಪ್ರಸನ್ನ ವೆಂಕಟದಾಸರೆಂದು ಪ್ರಸಿದ್ಧರಾದ ಮೇಲೆ ದೊರೆತ ಕೆಲವು ದಾನಪತ್ರ, ವರ್ಷಾಶನಗಳ ಆಧಾರದಿಂದ ಡಾ.ಎ.ಟಿ.ಪಾಟೀಲರು ಇವರ ಜನನ ಕಾಲವನ್ನು ಕ್ರಿ.ಶ.೧೬೮೦ ಇರಬಹುದೆಂದು ಊಹಿಸಿದ್ದಾರೆ. ಪ್ರಸ್ತುತ ಈ ಅಭಿಪ್ರಾಯವನ್ನೇ ಉಳಿಸಿ ಕೊಳ್ಳಬಹುದಾಗಿದೆ. ಪ್ರಸನ್ನ ವೆಂಕಟದಾಸರು ಕನ್ನಡ ಸಾಹಿತ್ಯದಲ್ಲಿ ಸ್ಥಾನ ಪಡೆದಿರುವುದು ತಮ್ಮ ಕೃತಿಗಳಿಂದ 'ಪ್ರಸನ್ನವೆಂಕಟ' ಎಂಬ ಅಂಕಿತದಲ್ಲಿ ೪೪೮ ಕೃತಿಗಳು ದೊರಕಿವೆ. ಪ್ರಸನ್ನವೆಂಕಟದಾಸರ ಒಟ್ಟು ಕೃತಿಗಳನ್ನು ಗಮನಿಸಿದರೆ ಅವುಗಳಲ್ಲಿ ೬ ದೀರ್ಘವಾದ ಕೃತಿಗಳು. ೪೨೯ ಸಣ್ಣ ಕೀರ್ತನೆಗಳು ೧೦ ಸುಳಾದಿಗಳು ಮತ್ತು ೭ ಉಗಾಭೋಗಗಳಿವೆ. ಪ್ರಸನ್ನ ವೆಂಕಟದಾಸರ ಅಂಕಿತದಲ್ಲಿರುವ ೬ ದೀರ್ಘ ಕೃತಿಗಳು ಈ ಕೆಳಗಿನಂತಿವೆ.

೧. ಸತ್ಯಭಾಮಾ ವಿಲಾಸ

೨. ನಾರಾಯಣ ಪಂಜರ

೩. ಸಮಾಸ್ತನಾಮ ಮಣಿಗಣ ಪಟ್ಟರಣ ಪದ್ಯಮಾಲಾ

೪. ಭೇದ ಮುಕ್ತಾವಲಿ

೫. ನಾರದ ಕೊರವಂಜಿ

೬. ಶ್ರೀ ಪ್ರಸನ್ನ ವೆಂಕಟದಾಸರ ಭಾಗವತ

**ಸತ್ಯಭಾಮಾ ವಿಲಾಸ**

ಈ ಕೃತಿ ಹರಿಯನ್ನು ಕುರಿತು ಮಧುರ ಭಾವದ ಕೀರ್ತನೆಗಳಲ್ಲಿ ಸೇರಿದೆ. ಇದಕ್ಕೆ 'ಶ್ರೀಕೃಷ್ಣ ಪರಿಜಾತ' ಎಂಬ ಹೆಸರೂ ಇದೆ(ಶ್ರೀ ಪ್ರಸ್ನವೆಂಕಟದಾಸರು ಮತ್ತು ಅವರ ಕೃತಿಗಳು ಡಾ.ಎ.ಟಿ.ಪಾಟೀಲ, ಪು.೭೦). ಕೃತಿಯಲ್ಲಿಯೇ ಎರಡೂ ಹೆಸರುಗಳನ್ನು ಹೇಳಿದೆ. ನುಡಿ ೨೮ರಲ್ಲಿ 'ಈ ಪದ್ಯಂಗಳ ಪೇಳಿಸಿದನು ದಯಾಬ್ಧಿ ಪಾರಿಜಾತಾಖ್ಯವ' ಎಂದೂ ನುಡಿ ೫೧ರಲ್ಲಿ 'ಈ ಸತ್ಯಭಾಮಾ ವಿಲಾಸದ ಪದ್ಯಪದ ಲೇಸಾಗಿ' ಎಂದೂ ಬಂದಿದೆ. ಈ ಕೃತಿಯಲ್ಲಿ ೨೪ ಶ್ಲೋಕ ಮತ್ತು ೨೭ ಪದಗಳಿದ್ದು, ಒಟ್ಟು ೫೧ ನುಡಿಗಳಿವೆ. ೨ ಶ್ಲೋಕಗಳ ನಂತರ ೨ ಪದ ಈ ಕ್ರಮದಲ್ಲಿ ಇಡೀ ಕೃತಿ ರಚಿತವಾಗಿದ್ದು, ಅಂತ್ಯದಲ್ಲಿ ೨ ಪದಗಳು ಹೆಚ್ಚಾಗಿ ಸೇರಿವೆ.

ಕೃತಿಯ ವಸ್ತು ಕೃಷ್ಣನ ಬದುಕಿನ ಕೆಲವು ಘಟನೆಗಳಿಗೆ ಸಂಬಂಧಿಸಿದ್ದು, ಕೃಷ್ಣನಿಂದ ನಡೆಯುವ ಪಾರಿಜಾತಪಹರಣಕ್ಕೆ ಹಿನ್ನೆಲೆಯಾಗಿ ಒಂದು ಘಟನೆ ನಡೆಯುತ್ತದೆ ಒಂದು ದಿನ ನಾರದ ದೇವಲೋಕದಿಂದ ತಂದ ಒಂದು ಪಾರಿಜಾತದ ಹೂವನ್ನು ಕೃಷ್ಣನಿಗೆ ಕೊಡುತ್ತಾನೆ. ಕೃಷ್ಣ ಅದನ್ನು ರುಕ್ಮಿಣಿಗೆ ಕೊಡುತ್ತಾನೆ. ಈ ಸುದ್ದಿ ಕೇಳಿದ ಸತ್ಯಭಾಮೆ ಕೃಷ್ಣ ತನ್ನನ್ನು ಅವಮಾನಿಸಿದನೆಂದು ತಿಳಿದು ಕೋಪಗೊಳ್ಳುತ್ತಾಳೆ. ಕೃಷ್ಣ 'ಪಾರಿಜಾತದ ವೃಕ್ಷವನ್ನೇ ತಂದು ನಿನ್ನ ಮನೆಯಂಗಳದಲ್ಲಿ ನೆಡುತ್ತೇನೆ' ಎಂದು ಆಕೆಯನ್ನು ಸಮಾಧಾನ ಪಡಿಸುತ್ತಾನೆ. ಆಕೆಗೆ ಹೇಳಿದಂತೆಯೆ ಪಾರಿಜಾತ ವೃಕ್ಷವನ್ನು ತಂದು ಆಕೆಯ ಮನೆಯೆದುರು ನೆಡುತ್ತಾನೆ. ಕೊನೆಗೆ ಸತ್ಯಭಾಮೆಯ ಅಪೇಕ್ಷೆಯಂತೆ ಆ ಮರದ ಬುಡದಲ್ಲಿ ಆಕೆಯೊಡನೆ ಲೆತ್ತದಾಟವನ್ನಾಡುತ್ತಾನೆ. ಕೃಷ್ಣನ ಈ ಲೀಲೆಯನ್ನು ಹಾಡಿದವರಿಗೆ ಕೃಷ್ಣ ಸುಖವ ನೀಡುವ ಎಂಬ ಆಶಯದೊಂದಿಗೆ ಕೃತಿ ಕೊನೆಗೊಳ್ಳುತ್ತದೆ. ಭಾಗವತದಲ್ಲಿ ಕೃಷ್ಣನ ಬಾಲಲೀಲೆಗಳನ್ನು ಮನದುಂಬಿ ಹಾಡಿರುವ ದಾಸರು ಇಲ್ಲಿ ಆತನ ವಿವಾಹಿತ ಬದುಕಿನ ಒಂದು ಭಾಗವನ್ನು ಸೆರೆ ಹಿಡಿಯಲೆತ್ನಿಸಿದ್ದಾರೆ. ದಾಸರ ಉಳಿದ ಕೃತಿಗಳೊಡನೆ ಈ ಕೃತಿಯನ್ನು ಹೊಲಿಸಿದರೆ ಇದು ಬಹುಶಃ ದಾಸರ ಬರವಣಿಗೆಯ ಆರಂಭಕಾಲದ ಒಂದು ಕೃತಿ ಇರಬಹುದೆನ್ನಿಸುತ್ತದೆ.

ಪ್ರಸನ್ನವೆಂಕಟದಾಸರ ೬ ದೀರ್ಘಕೃತಿಗಳಲ್ಲದೆ ಕೀರ್ತನೆಗಳೇ ಅಧಿಕ ಸಂಖ್ಯೆಯಲ್ಲಿವೆ. ಎಲ್ಲ ಹರಿದಾಸರ ಕೀರ್ತನೆಗಳಲ್ಲೂ ಸಾಮಾನ್ಯವಾಗಿ ಕಾಣುವ ವಸ್ತುವನ್ನೇ ಇವರ ಕೀರ್ತನೆಗಳಲ್ಲೂ ಕಾಣುತ್ತೇವೆ.

ಹರಿ ಸರ್ವೋತ್ತಮತ್ವ, ಹರಿನಾಮ ಮಹಿಮೆ, ಹರಿದಾಸರ ಹಿರಿಮೆ, ದ್ವೈತಮತ ತತ್ವ ಪ್ರತಿಪಾದನೆ ಆತ್ಮಶೋಧನೆ, ಲೋಕನೀತಿ ಇವೇ ಮೊದಲಾದವು ಇವರ ಕೀರ್ತನೆಗಳಲ್ಲಿ ಅಭಿವ್ಯಕ್ತಿ ಪಡೆದಿವೆ. ಇವರ ಕೀರ್ತನೆಗಳ ಧಾಟಿ, ಧೋರಣೆ, ನಿರೂಪಣೆಗಳಲ್ಲಿ ಹಿಂದಿನ ಹರಿದಾಸ ಸಾಹಿತ್ಯದ ಪ್ರಭಾವವನ್ನು, ಸಾಮ್ಯತೆಗಳನ್ನು ಇವರ ಕೃತಿಗಳಲ್ಲಿ ಗುರುತಿಸಬಹುದಾದರೂ ಅವರದೇ ಬದುಕಿನ ಹಿನ್ನೆಲೆಯಿಂದ ಪಾಂಡಿತ್ಯ ಪ್ರತಿಭೆಗಳಿಂದ ರಚನೆಗೊಂಡ ವ್ಯಕ್ತಿ ವಿಶಿಷ್ಟವಾದ ಛಾಪನ್ನುಳ್ಳ ಕೃತಿಗಳೂ ಸಾಕಷ್ಟಿವೆ. ಇವರ ದೀರ್ಘ ಕೃತಿಗಳನ್ನು ಗಮನಿಸಿದರೆ 'ನಾರದ ಕೊರವಂಜಿ'ಯನ್ನು ಕುರಿತು ವಾದಿರಾಜರು ಬರೆದಿದ್ದಾರೆ. 'ಸತ್ಯಭಾಮಾ ವಿಲಾಸ'ದ ವಸ್ತುವನ್ನು ಆರಿಸಿಕೊಂಡು ಹೆಳವನಕಟ್ಟೆ ಗಿರಿಯಮ್ಮ ಒಂದು ಹಾಡನ್ನು ರಚಿಸಿದ್ದಾಳೆ. ಅವರ ಕೃತಿಗಳನ್ನು ಪ್ರಸನ್ನ ವೆಂಕಟದಾಸರು ನೋಡಿದ್ದರು ಎಂದು ಖಚಿತವಾಗಿ ಹೇಳಲಾಗು ವುದಿಲ್ಲ. ಅಲ್ಲದೆ ವಸ್ತು ಒಂದೇ ಇದ್ದರೂ ಆಕೃತಿಗಳೂ ಪ್ರಸನ್ನವೆಂಕಟದಾಸರ ಕೃತಿಗಳಿಗೂ ಭಾಷೆ ನಿರೂಪಣೆಗಳಲ್ಲಿ ತುಂಬ ವ್ಯತ್ಯಾಸವಿದೆ. ಉಳಿದ ನಾಲ್ಕು ದೀರ್ಘ ಕೃತಿಗಳ ವಸ್ತುಗಳೂ ಹೊಸದಾಗಿದ್ದು, ಇವುಗಳ ಆಯ್ಕೆ ನಿರ್ವಹಣೆಗಳಲ್ಲಿ ಇವರದೇ ಆದ ಪ್ರತಿಭೆ ಪಾಂಡಿತ್ಯಗಳನ್ನು ಕಾಣಬಹುದಾಗಿದೆ.

ದಾಸ ಚಳುವಳಿಯ ಉತ್ತರಾರ್ಧದಲ್ಲಿ ಹೆಸರಿಸಬೇಕಾದ ಮಹತ್ವದ ಹೆಸರು ಗೋಪಾಲದಾಸರದು. (೧೭೨೨-೧೮೬೫) ಇವರು ವಿಜಯದಾಸರ ಶಿಷ್ಯರು ಗೋಪಾಲದಾಸರು 'ಭಕ್ತಿಯಲ್ಲಿ ಭಾಗಣ್ಣ' ಎಂದೇ ಜನಪ್ರಿಯರಾಗಿದ್ದಾರೆ. 'ಗೋಪಾಲ ವಿಠಲ' ಅವರ ಅಂಕಿತ ಕೀರ್ತನೆಗಳಲ್ಲಿ ಶಾಸ್ತ್ರ ವಿಚಾರಗಳನ್ನು ಎರಕ ಹೊಯ್ಯುವುದರಲ್ಲಿ ಗೋಪಾಲದಾಸರಿಗೆ ವಿಶೇಷ ಆಸಕ್ತಿ. ಗೋಪಾಲದಾಸರ ಕೃತಿಗಳು ಎಲ್ಲ ದಾಸರ ಜಾಡಿನಲ್ಲೆ ಸಾಗುತ್ತವೆ. "ಭಕ್ತಿಯಿಲ್ಲದ ಕೇವಲ ಕರ್ಮದ ಪಥವು ಕೆಸರಿನಿಂದ ಕೆಸರನ್ನು ತೊಳೆದಂತೆ" ಎಂದಿದ್ದಾರೆ.

ಗೋಪಾಲದಾಸರ ಬಳಿಕ ಹರಿದಾಸ ಸಮುಚ್ಚಯದಲ್ಲಿ ದೊಡ್ಡ ಹೆಸರು. ಜಗನ್ನಾಥದಾಸರದು (೧೭೨೮-೧೮೦೯)ದಾಸ ಚತುಷ್ಟಯರಲ್ಲಿ ನಾಲ್ಕನೆಯವರು ಜಗನ್ನಾಥದಾಸರು ಅವರ ಕೀರ್ತನೆಗಳಲ್ಲಿ ಸ್ತುತಿ ಗೀತೆಗಳ ಸಂಖ್ಯೆ ಸಾಕಷ್ಟು ದೊಡ್ಡದು ಅನೇಕ ದೇವಾನುದೇವತೆಗಳನ್ನು, ಯತಿಗಳನ್ನು ಸ್ತುತಿಸಿ ಕೀರ್ತನೆಗಳನ್ನು ರಚಿಸಿರುವರು ಸುವ್ವಾಲಿಗಳ ರಚನೆ ಅವರ ವಿಶಿಷ್ಟತೆ ತ್ರಿಪದಿಗಳಲ್ಲಿ ಘನವಾದ ತತ್ವಗಳನ್ನು ಸರಳವಾಗಿ ಇವುಗಳೊಳಗೆ ಬಿತ್ತರಿಸಿದ್ದಾರೆ. ಅವರ ಕೀರ್ತನೆಗಳಲ್ಲಿ ಸಾಹಿತ್ಯದ ಸೊಗಸು ಹಾಗೂ ಶಾಸ್ತ್ರದ ಗಾಂಬೀರ್ಯ ಜೊತೆ ಜೊತೆಗೆ ಸಾಗುತ್ತಿರುವುದು ಕಂಡುಬರುತ್ತದೆ. ಕನ್ನಡ ಸಾಹಿತ್ಯ ಆಧ್ಯಾತ್ಮಿಕ ಕ್ಷೇತ್ರಕ್ಕೆ ನೀಡಿದ ಬಹುದೊಡ್ಡ ಕೊಡುಗೆಯೆಂದರೆ ಅವರ "ಹರಿಕಥಾಮೃತಸಾರ" ೩೨ ಸಂಧಿಗಳುಳ್ಳ ೧೦೦೦ ಪದ್ಯಗಳುಳ್ಳ ಭಾಮಿನಿ ಷಟ್ಪದಿಯಲ್ಲಿ ರಚಿತವಾದ ಗ್ರಂಥವಿದು. ಹರಿದಾಸ ಪರಂಪರೆಯನ್ನು ಸಂಘಟಿಸಿ ನೂರಾರು ಶಿಷ್ಯರಿಗೆ ದೀಕ್ಷೆಯನ್ನಿತ್ತು ಹರಿದಾಸ ಪರಂಪರೆಯನ್ನು ಸಂಗೋಪನ ಮಾಡಿದವರು; ಜಗನ್ನಾಥದಾಸರು.

ಜಗನ್ನಾಥದಾಸರ ನಂತರ ಸಶಕ್ತ ಶಿಷ್ಯ ಪರಂಪರೆ ಸಾಹಿತ್ಯದ ಮುಂದುವರಿಕೆಗೆ ಕಾರಣವಾಗಿದೆ. ಪ್ರಾಣೇಶದಾಸರು, ಗುರು ಪ್ರಾಣೇಶದಾಸರು ಶ್ರೀ ದ ವಿಠಲಾಂಕಿತ ಕರ್ಜಗಿದಾಸರು, ಸುರುಪುರದ ಆನಂದದಾಸರು, ಗೋನವಾರದ ರಾಮದಾಸರು, ಶ್ಯಾಮಸುಂದರ ದಾಸರು, ಅಸ್ಕಿಹಾಳ್ ಗೋವಿಂದ ದಾಸರು ಇನ್ನು ಮುಂತಾದ ಹರಿದಾಸರು ಪರಂಪರೆಯಲ್ಲಿ ಭಕ್ತಿ ಪ್ರತಿಪಾದನೆಯನ್ನು ಜೀವಂತವನ್ನಾಗಿಸಿದ್ದಾರೆ.

೩

ಶರಣರ ಸಾಹಿತ್ಯ ರಚನೆಯಲ್ಲಿ ಶಿವಶರಣೆಯ ದೊಡ್ಡ ಪ್ರಮಾಣದಲ್ಲಿ ಪಾಲ್ಗೊಂಡ ಬಗ್ಗೆ ಖಚಿತ ಮಾಹಿತಿಗಳು ದೊರೆಯುತ್ತವೆ. ದಾಸ ಸಾಹಿತ್ಯ ಚಳುವಳಿಯಲ್ಲಿ ಮಹಿಳಾ ದಾಸರು ಪ್ರವರ್ತಿಸಿದ್ದರೂ ಈ ಬಗ್ಗೆ ಸಂಶೋಧನೆ ಗಂಭೀರವಾಗಿ ಸಾಗಿಲ್ಲ. ಹೆಳವನಕಟ್ಟೆ ಗಿರಿಯಮ್ಮ, ಹರಪನಹಳ್ಳಿ ಭೀಮವ್ವ ನವರ ಹೆಸರನ್ನು ಮಾತ್ರ ಸಾಹಿತ್ಯ ಚರಿತ್ರಕಾರರು ದಾಖಲಿಸಿಬಿಟ್ಟು ಅನೇಕ ಮಹಿಳಾ ದಾಸರ ಬಗ್ಗೆ ಮೌನವಾಗಿರುವುದು ಆಶ್ಚರ್ಯ. ಈಗ ಲಭ್ಯವಿರುವ ಮಹಿಳಾ ದಾಸರ ಇತಿವೃತ್ತ ವಿಚಾರ ಕೀರ್ತನೆಗಳ ಕುರಿತು ಇಲ್ಲಿ ಚರ್ಚಿಸಲಾಗಿದೆ. ಮಹಿಳಾ ದಾಸರಲ್ಲಿ ಹೆಳವನಕಟ್ಟೆ ಗಿರಿಯಮ್ಮನ ಹೆಸರು ದೊಡ್ಡದು. ಹೆಳವನಕಟ್ಟೆ ರಂಗಯ್ಯನ ಸೇವೆಯಲ್ಲೇ ಬದುಕಿನ ಸಾರ್ಥಕ್ಯವನ್ನು ಕಂಡ ಗಿರಿಯಮ್ಮನ ಕೀರ್ತನೆಗಳು ಆಕರ್ಷಕವಾಗಿವೆ. ಹರಿಹರರ ಅಭೇದವನ್ನು ಗಿರಿಯಮ್ಮ ತನ್ನ ಹಾಡುಗಳಲ್ಲಿ ಪರಿಶೀಲಿಸಿರುವುದು ಗಮನಿಸತಕ್ಕ ಸಂಗತಿ. ಆಕೆಯ ಸ್ತುತಿ ಗೀತೆಗಳು ಮುಪ್ಪಾಲು ಭಕ್ತಿ ಹೃದಯದ ಮೊರೆ ಅವಳ ಕೀರ್ತನೆಗಳ ಒಳದನಿಯಾಗಿ ಭಕ್ತೆಯೊಬ್ಬಳ ಪ್ರಾಸಾದಿಕ ವಾಣಿ ಕೇಳಿಸುತ್ತದೆ. ತನ್ನ ಮೆಚ್ಚಿನ ದೈವ ರಂಗನಾಥನ ಮಹಿಮಾತಿಶಯಗಳನ್ನು ಬಗೆ ಬಗೆಯಲ್ಲಿ ಬಣ್ಣಿಸಿರುವಳು ಎಲ್ಲಾ ದಾಸರಂತೆ ರಂಗನಾಥನನ್ನು ಪಂಚ ಭಾವಗಳಲ್ಲಿ ಕಂಡು ಆ ಅನುಭವವನ್ನು ಹಾಡಾಗಿಸಿದ್ದಾಳೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅನೇಕ ಮಹಿಳಾ ಕವಿತ್ರಿಯರು ಕೃತಿ ರಚನೆಗೈದಿರುವುದು ಕಂಡು ಬರುತ್ತದೆ. ಆಯಾ ಕಾಲಘಟ್ಟಕ್ಕೆ ಅನುಗುಣವಾಗಿ ಸಾಹಿತ್ಯ ರಚನೆಯಲ್ಲಿ ತೊಡಗಿರುವುದು ವಿಶೇಷವಾದುದು. ತಮ್ಮ ಸಮಕಾಲೀನ ಬದುಕಿನ ಚಿತ್ರಣವನ್ನು ಮೌಲ್ಯಗಳನ್ನು ತಮ್ಮ ಕೃತಿಗಳ ಮೂಲಕ ಕಟ್ಟಿಕೊಟ್ಟಿದ್ದಾರೆ. ಕರ್ನಾಟಕದ ಭಕ್ತಿ ಚಳುವಳಿಯಲ್ಲಿ ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿರುವ ಹರಿದಾಸ ಸಾಹಿತ್ಯದಲ್ಲಿ ಮಹಿಳೆಯರ ಧ್ವನಿ ಗಟ್ಟಿಯಾಗಿ ನೆಲೆಯೂರಿದೆ. ದಾಸ ಸಾಹಿತ್ಯ ೧೩ನೇ ಶತಮಾನದಿಂದ ಈಚೆಗೆ ಬೆಳೆದು ಬಂದಿದ್ದರೂ ಮಹಿಳೆಯರು ಕಂಡುಬರುವುದು ೧೮ನೇ ಶತಮಾನದ ಕೊನೆಯ ಘಟ್ಟದಲ್ಲಿ.

ಮಹಿಳೆಯರ ದಾಸ ಸಾಹಿತ್ಯದ ಸೃಷ್ಟಿಯನ್ನು ಕುರಿತು ಹೇಳುವಾಗ ೧೮ನೇ ಶತಮಾನದಿಂದ ಹರಿದಾಸ ಸಾಹಿತ್ಯದಲ್ಲಿ ಮಹಿಳೆಯರ ಪಾತ್ರ ಸ್ಪಷ್ಟವಾಗಿ ಕಂಡುಬರುತ್ತದೆ. ಅದಕ್ಕಿಂತಲೂ ಪೂರ್ವದಲ್ಲಿ ಮಧ್ವಾಚಾರ್ಯರ ಸೋದರಿ ಕಲ್ಯಾಣದೇವಿ ಪುರಂದರದಾಸರ ಪತ್ನಿ ಸರಸ್ವತಿ ಬಾಯಿ ಹಾಗೂ ಪುತ್ರಿಯರು

ಅಂಕಿತದೊಡನೆ ಕೀರ್ತನೆ ರಚನೆಗೈದಿದ್ದಾರೆ ಎಂದು ಹೇಳಿದರು. ಅದಕ್ಕೆ ಸ್ಪಷ್ಟ ಆಧಾರಗಳಿಲ್ಲ. ೧೮ನೇ ಶತಮಾನದ ಉತ್ತರಾರ್ಧದಲ್ಲಿ ಹೆಳವನಕಟ್ಟೆ ಗಿರಿಯಮ್ಮನವರೆಗೆ ಯಾವ ಮಹಿಳಾ ಕೀರ್ತನಕಾರರ ಸಾಹಿತ್ಯವು ಇಡಿಯಾಗಿ ಲಭ್ಯವಾಗಿಲ್ಲ. ಈ ಅಧ್ಯಾಯದಲ್ಲಿ ಮಹಿಳಾ ಹರಿದಾಸರ ಕುರಿತು ವಿವರಗಳಿವೆ. ಪ್ರಥಮ ಮಹಿಳಾ ದಾಸರೆಂದು ಗುರುತಿಸಲ್ಪಡುವ ಗಲಗಲಿ ಅವ್ವನವರಿಂದ ಹಿಡಿದು ಹರಪನಹಳ್ಳಿ ಭೀಮವ್ವ ಹಾಗು ಅವಳ ಪ್ರಭಾವಕ್ಕೆ ಒಳಗಾದ ಓರುಬಾಯಿ ಲಕ್ಷ್ಮೀದೇವಮ್ಮನವರೆಗೆ ಬಾಳಿದ ಮಹಿಳಾ ಕವಿಯಿತ್ರಿಯರ ವಿವರಗಳಿವೆ. ೧೮ನೇ ಶತಮಾನದ ಕೊನೆಯಿಂದ ಇಂದಿಗೂ ಮಹಿಳೆಯರು ಅಂಕಿತದಿಂದ ಕೃತಿ ರಚನೆಯ ಕಾರ್ಯ ಅವರ ಆಸಕ್ತಿಯನ್ನು ತೋರಿಸುತ್ತದೆ. ಸಹಜವಾಗಿ ಮಹಿಳಾ ಸಾಹಿತ್ಯವು ವೇದನೆಗಳನ್ನು ನೋವು ನಲಿವನ್ನು ಪ್ರತಿನಿಧಿಸುತ್ತವೆ. ಅವು ಕೇವಲ ಆಕೆಯ ಭಾವನೆಗಳಾಗದೇ ಅಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಹೆಣ್ಣಿನ ಸ್ಥಾನಮಾನವನ್ನು ಕುರಿತು ಬೆಳಕು ಚಲ್ಲುತ್ತವೆ.

## ಗಲಗಲಿ ಅವ್ವನವರು

ದಾಸ ಸಾಹಿತ್ಯದಲ್ಲಿ ಮೊದಲು ಕಾಣುವ ಮಹಿಳೆಯೆಂದರೆ ಗಲಗಲಿಯ ಅವ್ವನವರು. ಇವರ ಕಾಲ ಕ್ರಿ.ಶ ೧೬೯೫ ಈ ಕಾಲದವರೆಗೂ ಯಾವುದೇ ಮಹಿಳೆ ದಾಸ ಸಾಹಿತ್ಯ ರಚನೆಯಲ್ಲಿ ತೊಡಗಿದ್ದ ಬಗ್ಗೆ ಯಾವುದೇ ನಿಖರ ಆಧಾರಗಳಿಲ್ಲ. ಆದ್ದರಿಂದ ಇವರೇ ಮೊಟ್ಟ ಮೊದಲ ದಾಸ ಮಹಿಳೆಯಿರಬೇಕೆಂದು ಡಾ. ಶ್ರೀನಿವಾಸ ಹಾವನೂರು ಅಭಿಪ್ರಾಯ ಪಡುತ್ತಾರೆ. ಹಾಗೂ ಹಣಮಂತ ತಾಸಗಾಂವಕರ ಗಲಗಲಿ ಅವ್ವನವರು ಪ್ರಥಮ ಹರಿದಾಸ ಮಹಿಳೆ ಎನ್ನುತ್ತಾರೆ. ಗಲಗಲಿ ಮನೆತನ ಹಿಂದಿನಿಂದಲೂ ಶೌರ್ಯ, ಪಾಂಡಿತ್ಯಗಳಿಗೆ ಹೆಸರುವಾಸಿಯಾಗಿದ್ದು, ಆದಿಲಶಾಹಿ ನಿಜಾಮರು ಪೇಶ್ವೆ, ರಾಣಿ ಸರಕಾರ ಮೈಸೂರು ಅರಸರು ಹಾಗೂ ಇದೀಗ ಭಾರತ ಸರಕಾರದಿಂದಲೂ ಮಾನ-ಸನ್ಮಾನಗಳನ್ನು ಪಡೆದವರು ಈ ಮನೆತನದವರು ಇಂದು ರಾಷ್ಟ್ರಮಟ್ಟದ ಮನ್ನಣೆಗಳಿಸಿರುವ ಸಂಸ್ಕೃತ-ಕನ್ನಡ ಉಭಯ ಭಾಷಾ ಪ್ರವೀಣ ಗಲಗಲಿ ಆಚಾರ್ಯರ ವಂಶದ ಹಿರಿಯರು, ಗಲಗಲಿಯ ಅವ್ವನವರು. ಗಲಗಲಿಯ ಅವ್ವನವರ ಹೆಸರು ರಮಾ. ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ನವಲಿಯ ಪೂಜಾರ ಮನೆತನದ ರಮಾಬಾಯಿ ಈಕೆ ಗಲಗಲಿ ಆಚಾರ್ಯರ ವಂಶದ ಮಹರ್ಷಿಗಳ ಮನೆತನದವರೆಂದೇ ಪ್ರಸಿದ್ಧರಾಗಿದ್ದ ಶ್ರೀ ಮುದ್ಗಲಾಚಾರ್ಯರ ಧರ್ಮಪತ್ನಿ. ಗಲಗಲಿ ವಂಶಸ್ತರು 'ಅಪ್ಪನವರು-ಅವ್ವನವರು' ಎಂದು ಮುದ್ಗಲಾಚಾರ್ಯರು ಮತ್ತು ರಮಾ ದಂಪತಿಗಳನ್ನು ಗೌರವಿಸಿ ಪೂಜಿಸುತ್ತಾರೆ. ಕ್ರಿ.ಶ ೧೯೨೭ರ ಬಾಲಭೋದ (ಬೆಳಗಾವಿ ಶ್ರೀ ರಾಮತತ್ವ ಪ್ರಕಾಶನದವರು ಪ್ರಕಟಿಸಿದ ಪುಸ್ತಕ) ಪುಸ್ತಕದ ಪ್ರಸ್ತಾವನೆಯನ್ನು ಬರೆದಿರುವ ಗಲಗಲಿ ಮಧ್ವಮುನಿ ಆಚಾರ್ಯರು ಅನುಸರಿಸಿ ಬರೆದ ಸಂಕ್ಷಿಪ್ತ ಚರಿತ್ರೆಯಿಂದ ತಾವು ವಿಷಯ ಗ್ರಹಣ ಮಾಡಿರುವುದಾಗಿ ಸೂಚಿಸಿದ್ದಾರೆ. ಅದರಲ್ಲಿ ರಮಾ ಹಾಗೂ ಮುದ್ಗಲಾಚಾರ್ಯರ

ಪ್ರಾಣಿಗ್ರಹಣ ಸಂದರ್ಭದ ಉಲ್ಲೇಖವಿದೆ. ಭೋಗಾಪುರ ಗ್ರಾಮ ಶ್ಯಾನುಭೋಗರ ಮಗಳಾದ ಈಕೆಯನ್ನು ಶ್ರೀ ಮುದ್ಗಲಾಚಾರ್ಯರು ಶಾಸ್ತ್ರ ಸಂಪನ್ನರಾದ ತಮ್ಮ ಮಕ್ಕಳೆಲ್ಲರ ಅನುಮತಿ ಪಡೆದು ಕನ್ಯೆಯ ಮಾತಾ-ಪಿತೃಗಳ ಸಮ್ಮತಿಯೊಂದಿಗೇ ವಿವಾಹವಾದರೆಂದು ಹೇಳಿದೆ. ವಿವಾಹದ ವಿಚಾರವೂ ತುಂಬ ಕುತೂಹಲಕಾರಿಯಾಗಿದ್ದು ಒಮ್ಮೆ ಬಾಗಲಕೋಟೆ ಜಿಲ್ಲೆಯ ಗಲಗಲಿಯ ಪಂಡಿತ ಮುದ್ಗಲಾಚಾರ್ಯರು ತಮ್ಮ ಐದು ಜನ ವಿದ್ವಾಂಸ ಪುತ್ರರೊಂದಿಗೆ ಮೈಸೂರಿನ ರಾಜಾಸ್ಥಾನಕ್ಕೆ ಹೋಗಿದ್ದರಂತೆ ಅಲ್ಲಿಯ ವಿದ್ವಾಂಸರನ್ನು ವಾದದಲ್ಲಿ, ಪಾಂಡಿತ್ಯದಲ್ಲಿ ಸೋಲಿಸಿ, ಮಾನ-ಮರ್ಯಾದೆಯೊಂದಿಗೆ ಹಿಂತಿರುಗಿ ಬರುವಾಗ ಭೋಗಪುರ ಗ್ರಾಮದ ಭೋಗಾಪುರೇಶ ದೇವಸ್ಥಾನದಲ್ಲಿ ತಂಗಿದ್ದರು. ಅಲ್ಲಿ ಓಡಾಡಿಕೊಂಡಿದ್ದ ಅವಿವಾಹಿತೆ ಶ್ಯಾನುಭೋಗರ ಮಗಳು ಹನ್ನೆರಡರ ಬಾಲೆಯನ್ನು ಕಂಡು ಅವಳನ್ನೆ ಮದುವೆಯಾಗಲು ನಿರ್ಧರಿಸಿದರು. ಮೊದಲು ಮಕ್ಕಳ ಒಪ್ಪಿಗೆ ಪಡೆದು ಬಳಿಕ ಶ್ಯಾನುಭೋಗರಿಗೆ ಸಾವಿರದ ಇನ್ನೂರು ರೂಪಾಯಿ ತೆರಕೊಟ್ಟು, ತೊಂಬತ್ತು ವಯಸ್ಸಿನ ವಯೋವೃದ್ಧ ಮುದ್ಗಲಾಚಾರ್ಯರು ಈ ಕನ್ಯೆಯನ್ನು ಮದುವೆ ಮಾಡಿಕೊಂಡರು. ಮದುವೆಯಾದ ಎಂಟೇ ದಿನಗಳಲ್ಲಿ ಪರಲೋಕ ಯಾತ್ರೆ ಮಾಡಿದರು. ಸಾಯುವಾಗ ಮಕ್ಕಳನ್ನು ಬಳಿಗೆ ಕರೆದು ತಮ್ಮ ವಿಧವೆ ಹೆಂಡತಿಗೆ ನೀವೇ ವಿದ್ಯಾಭ್ಯಾಸ ಮಾಡಿಸಬೇಕೆಂದು ಹೇಳಿದ್ದರಿಂದ ಮಕ್ಕಳೇ ಅವ್ವನಿಗೆ ವಿದ್ಯಾಗುರುಗಳೂ ಆದರು. ಕ್ರಮೇಣ ಅವ್ವನವರು ನ್ಯಾಯಶಾಸ್ತ್ರದಲ್ಲಿ ವಿಶೇಷ ಪರಿಣಿತಿಯನ್ನು ಪಡೆದದ್ದಲ್ಲದೆ ಪುಣೆಯ ಪೇಶ್ವೆ ದರ್ಬಾರಿನಲ್ಲಿ ಔತ್ತರೇಯ ವಿದ್ವಾಂಸರು ದಕ್ಷಿಣದ ವಿದ್ವಾಂಸರನ್ನೆಲ್ಲ ಸೋಲಿಸಿದೆವೆಂದು ಬೀಗುತ್ತಿದ್ದಾಗ ಮುದ್ಗಲಾಚಾರ್ಯರ ಮಕ್ಕಳಾದ ಪಂಡಿತರು ಸೋಲುವ ಸ್ಥಿತಿಬಂತೆಂದೂ ಆಗ ಅವ್ವನವರ ಸಹಾಯ ಪಡೆದು ವಾದ ಮಾಡಿ ಗೆದ್ದರೆಂದೂ ಪ್ರತೀತಿ ಈ ಮಾತಿಗೆ ಪೇಶ್ವೆಯವರು ಅವ್ವನವರಿಗೆ ಬಾಗಲಕೋಟೆ ಜಿಲ್ಲೆಯ ಬೀಳಗಿ ಟ್ರೇಜರಿಯಲ್ಲಿ ವರ್ಷಾಶನ ಹಾಕಿ ಕೊಟ್ಟುದ್ದುದೇ ಸಾಕ್ಷಿ.

ಅವ್ವನವರ ಹಾಡುಗಳಲ್ಲಿ ದೊರೆಯುವ ಆಧಾರಗಳಿಂದ ಅವರ ಕಾಲವನ್ನು ಹೀಗೆ ಗುರ್ತಿಸಬಹುದು. ತಮ್ಮ ಮುಯ್ಯದ ಹಾಡಿನಲ್ಲಿ ಹಾಡು ಬರೆದು ಮುಗಿಸಿದ ದಿನವನ್ನು ಹೀಗೆ ಹೇಳಿದ್ದಾರೆ.

"ಜ್ಯೇಷ್ಠ ಬಹುಳ ಉತ್ಕೃಷ್ಠ ಪಂಚಮಿ ತಿಥಿ
ಶ್ರೇಷ್ಠವಾಗಿದ್ದ ಬುಧವಾರ| ಈ ಕವನ
ಶ್ರೀ ಕೃಷ್ಣಗರ್ಪಿಸಿದೆ ಹರುಷಾಗಿ
ಭಾವ (ಯುವ?) ಸಂವತ್ಸರದಿ ದೇವಾಧಿದೇವನ
ಪಾವನವಾದ ಚರಿತ್ರೆಯ ರಚಿಸಿದೆ"[೧೭]

ಈ ವಿವರಗಳು ಎಫಿಮೆರಿಸ್ ಪ್ರಕಾರ ೧೮೭೫ನೇ ಇಸವಿ ಮೇ ೨೨ನೇ ತಾರೀಖು ಬುಧವಾರ ಸರಿಯಾಗುತ್ತದೆ.

## ಕೀರ್ತನೆಗಳು

ಹದಿನೇಳನೆಯ ಶತಮಾನದ ಉತ್ತರಾರ್ಧ ಹಾಗೂ ಹದಿನೆಂಟನೆಯ ಶತಮಾನದ ಪೂರ್ವಾರ್ಧದಲ್ಲಿ ಜೀವಿಸಿದ್ದಿರಬಹುದಾದ ಅಪ್ಪನವರು ರಾಮೇಶ, ರಮಿಅರಸು ಇತ್ಯಾದಿ ಅಂಕಿತಗಳಿಂದ ಭಕ್ತಿ ಪ್ರಧಾನವಾದ ಮುಯ್ಯದ ಹಾಡುಗಳು, ಬೀಗರ ಹಾಡುಗಳು, ಕೋಲು ಹಾಡುಗಳು. ಶೃಂಗಾರ ತಾರತಮ್ಯ, ಮೋರೆಗೆ ನೀರುತಂದ ಹಾಡುಗಳು, ಮೊದಲಾದ ಕೃತಿಗಳನ್ನು ರಚಿಸಿರುವುದಾಗಿ ತಿಳಿದುಬರುತ್ತವೆ. ಆದರೆ ಈಗ ನಮಗೆ ದೊರೆತಿರುವುದು ಮುಯ್ಯದ ಹಾಡುಗಳು ಮಾತ್ರ ಅಡಿಗೆ ಮಾಡುತ್ತ ಮಾಡುತ್ತಲೇ ಆಲಿಸುತ್ತ ಮಾತ್ರ ಕೇವಲ ಶ್ರವಣ ಮಾತ್ರದಿಂದಲೇ ಮಕ್ಕಳಿಂದ ಶಾಸ್ತ್ರಾಭ್ಯಾಸ ಮಾಡಿ ಪಂಡಿತರಾದ ಅಪ್ಪನವರು 'ಬಲ್ಲಿದ ಗುರುಗಳ ಎಲ್ಲ ಹಿರಿಯರ ದಯದಿ| ಬಲ್ಲಷ್ಟು ತತ್ವ ರಚಿಸಿದೆ'. ಎಂದಿದ್ದಾರೆ.

'ಮುದ್ಗಲ್ಲವಾಸನ ಶುದ್ಧನಾಮದವರು
ಮುದ್ದುಪಾದಗಳ ಸ್ಮರಿಸುತ ರಚಿಸಿದ ಅ
ಪದ್ಧ ನೋಡದತಿ ಹರಿಕೊಳ್ಳೊ
ಮೂಡಳು ನಾನೊಂದು ಬೇಡಿ ಬಯಸಿಕೊಂಡೆ
ಮಾಡಿವೆ ರಚನಿ ಮನ ಉಬ್ಬಿ'[೧೮]

ಎಂದು ವಿನಯವನ್ನು ಮೆರೆದಿರುವರು ಕೊಂಗ ಬುದ್ಧಿಯನ್ನು ಅಷ್ಟಮದಗಳನ್ನು ತಂದೆ ರಾಮೇಶನ ಪಾದಕ್ಕೆ ಅರ್ಪಿಸಿ, ಜ್ಞಾನ ಸೂರ್ಯನ ಉದಯ ಮಾಡಿಸಬೇಕೆಂದು ಕೇಳುವ ಪರಿ ಹೀಗಿದೆ:

ಅಷ್ಟಮದವು ತಮವು ಎಂಬೊ
ಕುಟ್ಟಿ ಹಿಟ್ಟಮಾಡಿಸಿ
ಸಿಟ್ಟು ಕೊಪವೆಂಬೊ ಬಣವಿ
ಒಟ್ಟಿ ಕೆಂಡ ಹೇರಿಸಿ
ಸತ್ವ ರಜವು ತಮವು ಎಂಬೊ
ಕತ್ತಲಿಯ ಅಡಗಿಸಿ
ಮತ್ತೆ ಜ್ಞಾನ ಸೂರ್ಯನ ಪ್ರಶಸ್ತ
ಉದಯ ಮಾಡಿಸಿ[೧೯]

ಮುಯ್ಯದ ಹಾಡುಗಳು ಅಪ್ಪನವರ ವಿಶೇಷ ರಚನೆಗಳು ಪುರಾಣದ ಹಿನ್ನೆಲೆಯಲ್ಲಿ ರಚಿತವಾಗಿರುವಂಥ ಹಾಡುಗಳವು 'ಮುಯ್ಯಿ' ಕೊಡುವ ಮತ್ತು ಹಿಂತಿರುಗಿಸುವ ಸಂಪ್ರದಾಯದ ನೆವದಲ್ಲಿ ಭಾರತ, ಭಾಗವತಾದಿ ಪುರಾಣ ಪಾತ್ರಗಳು, ಪುರಾಣ ಪ್ರಸಂಗಗಳು ಅವುಗಳ ಮನೋಧರ್ಮ ಬಗೆ ಬಗೆಯ ವರ್ಣನೆಗಳು ಮೂಡಿಬಂದಿವೆ. ಪರಸ್ಪರ ಮಾತಿನ ಚಕಮಕಿ, ಹಾಸ್ಯ ವಿಡಂಬನೆಗಳನ್ನು

ಕಾಣಬಹುದು. ಅವ್ವನವರ ಮುಯ್ಯದ ಹಾಡುಗಳನ್ನು 'ಮುಯ್ಯ ಕೊಟ್ಟ ಹಾಡು' ಮತ್ತು 'ಮುಯ್ಯ ಹಿಂತಿರುಗಿಸಿದ ಹಾಡು' ಎಂದು ಎರಡು ನೆಲೆಗಳಲ್ಲಿ ಪರಿಭಾವಿಸಬಹುದು. ಈ ಹಾಡುಗಳಲ್ಲಿ ಉದ್ದಕ್ಕೂ ದ್ರೌಪದಿ, ಸುಭದ್ರೆ, ರುಕ್ಮಿಣಿ, ಸತ್ಯಭಾಮೆ, ಗಂಗೆ, ಗೌರಿ, ಕೃಷ್ಣ, ವಿಷ್ಣು, ಶಿವ ಈ ಎಲ್ಲ ಪಾತ್ರಗಳ ಸಡಗರ ಸಂಭ್ರಮಗಳೊಂದಿಗೆ ಶ್ರೀ ಹರಿಯ ದಿವ್ಯ ಲೀಲೆಗಳನ್ನು ಹಾಡಿ ಹೊಗಳಿದ್ದಾಳೆ.

ಸುಭದ್ರೆ ದ್ರೌಪದಿಯರು ತಮ್ಮ ಅಣ್ಣ ಶ್ರೀಕೃಷ್ಣನ ದರ್ಶನಾಕಾಂಕ್ಷಿಗಳಾಗಿ ಮುಯ್ಯದ ನೆಪ ಮಾಡಿಕೊಂಡು ದ್ವಾರಕೆಗೆ ಬರುವರು ಕೃಷ್ಣನ ಹಾಗೂ ಅವನ ಪತ್ನಿಯರಾದ ರುಕ್ಮಿಣಿ, ಸತ್ಯಭಾಮೆರನ್ನು ಸ್ತುತಿಸಿ ಅವರೊಂದಿಗೆ ವಾದ ಮಾಡಿದಂತೆ ನಟಿಸಿ ಧನ್ಯರಾಗುವರು. ತಾವು ಧನ್ಯರಾದುದಲ್ಲದೆ ಮುಂಬರುವ ಭಕ್ತರೂ ಈ ಪದ್ಧತಿಯನ್ನನುಸರಿಸಿ ಧನ್ಯತೆ ಪಡೆಯಲಿ ಎಂದು ಆಶಿಸಿ, ಆಣೆಯಿಟ್ಟು ತಮ್ಮ ತಮ್ಮ ಮನೆಗಳಿಗೆ ಹಿಂತಿರುಗುವರು ಇದು ಸ್ಥೂಲವಾಗಿ ಮುಯ್ಯಕೊಟ್ಟ ಹಾಡಿನ ವಸ್ತು. ಅಂತೆಯೇ ತಮಗೆ ಪ್ರೀತಿಪಾತ್ರರೂ ಭಗವದ್ಭಕ್ತರೂ ಆದ ಪಾಂಡವರನ್ನು ಕಾಣಲು ಪ್ರೀತಿಯಿಂದ ಆಲಿಂಗಿಸಲು ಬಯಸಿದ ಶ್ರೀಕೃಷ್ಣ ತನ್ನ ಪತ್ನಿಯರಿಂದ ಕೂಡಿ ವೈಭವದಿಂದ ಮುಯ್ಯ ಹಿಂತಿರುಗಿಸಲು ಹಸ್ತಿನಾವತಿಗೆ ಬರುತ್ತಾರೆ. ಪುನಃ ಅಲ್ಲಿ ಪರಸ್ಪರರಿಗೆ ವಾಗ್ವಾದಗಳು, ಹಾಸ್ಯ, ವಿಡಂಬನೆ ಎಲ್ಲ ಸಾವಕಾಶವಾಗಿ ನಡೆದು ಎಲ್ಲರೂ ಸಂತೋಷ ಸಡಗರ ಸಂಭ್ರಮಗಳಿಂದ ಶುಭ ಹಾರೈಸುತ್ತ ಹಿಂತಿರುಗುವರು. ಇದು ಮುಯ್ಯ ಹಿಂತಿರುಗಿಸಿದ ಹಾಡಿನ ವಸ್ತು. ಅವ್ವ ವರ್ಣಿಸಿರುವ ದ್ವಾರಕೆಯ ಒಂದು ನೋಟ ಹೀಗಿದೆ.

"ದಿಕ್ಕು ತುಂಬಿತು ಲೆಕ್ಕವಿಲ್ಲದೆ ಜನರು
ಕಾಶ ತುಂಬಿತು ಎಲ್ಲಕೊಶ ತುಂಬಿತು
ಆಶಿ ಬಡುತಲೆ ಜನರು ಸೋಸಿನ ಮುಯ್ಯಕ್ಕೆ
ಹಾದಿ ತುಂಬಿತು ಎಲ್ಲ ಬೀದಿ ತುಂಬಿತು
ಅಂಬರ ತುಂಬಿತು ಪಟ್ಟಣ ತುಂಬಿತು
ಒಂದಿಷ್ಟೂ ಬಿಡದಲೆ"[೨೦]

ಮುಯ್ಯ ಕೊಡುವ ಮಂಗಲ ಕಾರ್ಯದಲ್ಲಿ ಪಾಂಡವರೊಡಗೂಡಿ ಸುಭದ್ರೆ ದ್ರೌಪದಿಯರು ಮಾತ್ರ ಭಾಗವಹಿಸಿರಲಿಲ್ಲ. ದೇವಾನುದೇವತೆಗಳು ತಾಳ ತಂಬೂರಿಯವರು, ತುಂಬುರ ನಾರದರು, ಪ್ರಸಿದ್ಧ ನಾಟಕಕಾರರು ಎಲ್ಲರೂ ಕೂಡಿ 'ಕೋಟಿ ಸೂರ್ಯರ ಧಾಟಿ ತೋರೋ ಅಂಗಳದಿ| ಮುತ್ತಿನ ತೋರಣ ನವರತ್ನದ ಹಂದರ| ಪಚ್ಚದ ಪಾವಟಿಗೆ ರತ್ನ ಹಚ್ಚಿದ ಹೊಸ್ತಿಲ'ನ್ನು ದಾಟಿ ಒಳಗೆ ಪ್ರವೇಶಿಸಿದರಂತೆ| ಇದು ಕೃಷ್ಣನ ದ್ವಾರಕೆಯ ವೈಭವ ಕೃಷ್ಣಾರ್ಜುನರ ರುಕ್ಮಿಣಿ, ಸತ್ಯಭಾಮೆ: ಸುಭದ್ರೆ, ದ್ರೌಪದಿಯರ ಪರಿಹಾಸ್ಯ ಭರಿತ ಸಂಭಾಷಣೆಗಳು ರಸವತ್ತಾಗಿವೆ. ಅವ್ವನವರ ಭಾಷೆ ಉಪಮಾ ರೂಪಕಾದಿ ಅಲಂಕಾರಗಳು ನಾಣ್ನುಡಿ ಪದಗಳು.

ನೇತ್ರವೆಂಬೊ ಕುಮುದ ಚಕ್ಕನರಳುತ
ಕಂದಗೆ ಸ್ತನವೊಂದು ಬಿಂದು ಬಾಯೊಳಗಿಟ್ಟು
ತಾರಕ್ಕಿ ಹೊಳೆವಂತೆ ತೋರ ದೀವಿಗೆ ಎಷ್ಟ ಇವು.
ಎಲ್ಲೊ ಒಂದೆರಡು ಉದಾರಣೆಗಳು
ಘಲಿ ಘಲಿ ಘಲಿಕೆಂದು ಗೆಜ್ಜೆ
ಘಲಿ ಘಲಿ ಘಲಿಕೆಂದು ಗೆಜ್ಜೆ
ಘಲಿ ಘಲಿ ಘಲಿ ಘಲಿಕು ಎನ್ನುತಲೆ
ಬಲು ಬಲು ಕೌಸದ ಬಾಲೆ ರಂಬಾ”

ಎಂದು ಆ ನರ್ತನ ಪ್ರಿಯ ಹರಿಯನ್ನು ಭಕ್ತಿಯಿಂದ ತಾಳಕ್ಕೆ ತಕ್ಕಂತೆ ಕುಣಿಸಿದ್ದಾರೆ.

ಅವ್ವನವರ ಇನ್ನೊಂದು ಕೃತಿ 'ಜೋಗುಳದ ಹಾಡು', ಇದೂ ಕೂಡ ಸರಳ ಮಾತುಗಳಲ್ಲಿ ಸುಲಭ ಧಾಟಿಯಲ್ಲಿ ನಿರೂಪಿತವಾಗಿದೆ. ೫೨ ನುಡಿಗಳಲ್ಲಿರುವ ಈ ಹಾಡಿನಲ್ಲಿ ಮಗು ಕೃಷ್ಣನನ್ನು ವಿಧಿವತ್ತಾಗಿ ತೊಟ್ಟಿಲಿನಲ್ಲಿ ಮಲಗಿಸಿ ಜೋಗುಳ ಹಾಡಿದ ಪ್ರಸ್ತಾಪವಿದೆ ಕೃಷ್ಣ ಹುಟ್ಟಿದ ಕೂಡಲೇ ಕಂಸನ ಭಯದಿಂದ ವಸುದೇವ ಅವನನ್ನೆತ್ತಿಕೊಂಡು ಗೋಕುಲದಲ್ಲಿ ಯಶೋದೆಯ ಬಳಿಯಲ್ಲಿಟ್ಟು ಯಶೋದೆಯ ಮಡಿಲಿನ ಹೆಣ್ಣು ಕೂಸುನ್ನು ಒಯ್ದು ದೇವಕಿಯ ಬದಿಯಲ್ಲಿಟ್ಟನೆಂಬುದರಿಂದ ಕೀರ್ತನೆ ಪ್ರಾರಂಭವಾಗುತ್ತದೆ. ಕ್ರಮವಾಗಿ ಮಗುವಿಗೆ ಎರೆದು ಜಾತಕರ್ಮ ಮಾಡಿ ತೊಟ್ಟಿಲಿಡುವ ಶಾಸ್ತ್ರವನ್ನು ಹಂತ ಹಂತವಾಗಿ ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾರೆ. ಇನ್ನೊಂದು ಸೇತುಬಂಧನದ ಹಾಡು, ರಾಮ ಭಕ್ತ ಹನುಮ ಮತ್ತು ಕೃಷ್ಣ ಭಕ್ತ ಪಾರ್ಥರ ನಡುವೆ ರಾಮ ಹೆಚ್ಚು ಕೃಷ್ಣ ಹೆಚ್ಚು ಅನ್ನುವ ವಾಗ್ವಾದ ಪ್ರಾರಂಭವಾಗುತ್ತದೆ. ವಾಗ್ವಾದದ ನೆಪದಲ್ಲಿ ರಾಮ-ಕೃಷ್ಣರಿಬ್ಬರ ಮಹಿಮೆಗಳನ್ನು ಹೇಳುತ್ತ ಹೋಗುವ ತಂತ್ರ ಮೆಚ್ಚುವಂಥದ್ದು. ಕೊನೆಗೆ ಪಾರ್ಥ ಸೋತರೂ ಹನುಮ ಅವನ ಧ್ವಜದಲ್ಲಿ ನೆಲೆಸಿದನೆನ್ನುವಲ್ಲಿಗೆ ಕೀರ್ತನೆ ಮುಗಿಯುತ್ತದೆ.

ಉತ್ತಾರಾದಿ ಮಠದ ಆಗಿನ ಪೀಠಾಧಿಪತಿಗಳಾಗಿದ್ದ ಶ್ರೀ ಸತ್ಯಪೂರ್ಣ ತೀರ್ಥ ಶ್ರೀ ಪಾದಂಗಳವರು ಇವರ ಪತಿ ಮುದ್ಗಲಾಚಾರ್ಯರನ್ನು ಆಸ್ಥಾನ ವಿದ್ವಾಂಸರೆಂದು ಗೌರವಿಸಿದ್ದು ಅವ್ವನವರನ್ನು ಅದೇ ರೀತಿ ಗೌರವದಿಂದ ಕಾಣುತ್ತಿದ್ದರಂತೆ ಸಂಸ್ಕೃತದ ಆಳವಾದ ಅಧ್ಯಯನದ ಫಲವಾಗಿ ಅವರ ಕೃತಿಗಳ ಪ್ರೌಢ ವಿಚಾರಗಳು ಹೊರ ಹೊಮ್ಮಿವೆ. ಅಕ್ಕಮಹಾದೇವಿಯ ವಚನವೊಂದನ್ನು ನೆನಪಿಗೆ ತರುವ ಈ ಹಾಡು ಅವ್ವನವರ ಸಾಮರ್ಥ್ಯವನ್ನು ಪ್ರಚಾರ ಪಡಿಸುತ್ತದೆ. ಪ್ರಕೃತಿಯಲ್ಲಿನ ಹರಿಯ ಸ್ತುತಿಯನ್ನು ಕಾಣುತ್ತಾ ಹೂ, ಹಕ್ಕಿ ಬಳ್ಳಿಗಳು ಗಾಳಿಯು ರಂಗನ ಧ್ಯಾನ ಮಾಡುತ್ತಿರುವುದನ್ನು ಸುಂದರವಾಗಿ ಈ ಹಾಡಿನಲ್ಲಿ ಮೂಡಿಸಿದ್ದಾರೆ.

ಬಾಗುವ ತೆಂಗಿನ ಮರನೋಡ| ರಂಗನ ಅಂಘ್ರಿಗೆರಗುವಂತೆ ಸಖಿಯೆ
ಶೃಂಗಾರದ ವನನೋಡ ಪಂಚರಂಗದ ಗಿಳಿನೋಡ ಸಖಿಯೆ
ಮಂಗಳ ಸ್ವರನೋಡ ಕೋಕಿಲ ರಂಗನ ಪಾಡುತಲೆ
.........................................................
ನಾಗ ಪುನಗ ನೋಡ ಸಂಪಿಗಿ ಹ್ಯಾಂಗೆ ಪರಿಮಳ ನೋಡ
ಸಖಿಯೆ ಹಾಂಗೆ ಕ್ಯಾದಿಗಿ ನೋಡ ಹರಿ ಪಾದಕ್ಯೋಗಿ ಎರಗುವಂತೆ
.........................................................
ಸಾಲು ಮರವ ನೋಡ ರಾಗಗ ಫಲ ಮೇಲ್ಯಾಂಡಿ ಮೇಲಿಸುವಂತೆ
ಸಖಿಯೆ ಲಾಲಿಮಣಿಯ ನೋಡ ರಮೇಶನ ವಾಲೈಸಿ ಕರುವಂತೆ[೨೨]

ಗಿಳಿ ಕೋಗಿಲೆಗಳು ಹರಿನಾಮ ಸ್ಮರಣೆಯಲ್ಲಿ ತೊಡಗಿರುವುದು, ಹಂಸ, ಮೃಗ, ಹೂಗಳು ಹರಿಪಾದಕ್ಕೆರಗುವುದಕ್ಕೆ ಆತುರದಿಂದ ಬರುತಿವೆ ಎನ್ನುತ್ತಾ ಪ್ರಕೃತಿಯ ಪ್ರತಿ ಅಂಶದಲ್ಲೂ ಹರಿನಾಮ ಸಂಕೀರ್ತನೆಯನ್ನು ಕಾಣುತ್ತಾಳೆ. ಸಜ್ಜನರ ಸಹವಾಸದ ಹಿರಿಮೆಯನ್ನು ಸಾರುವ ಎರಡು ಸಾಲುಗಳು ಎಂಥ ಸಾಮಾನ್ಯರಿಗೂ ತಿಳಿಯುವಂತಿವೆ.

"ಭಾವಜ್ಞರ ಸಂಗ ಶಾವೀಗೆ ಉಂಡಂತೆ ಭಾವವರಿಯದಾಪಾಮರರ|
ಬಾವವರಿಯದ ಪಾಮರರ ಸಹವಾಸ ಬೇವಿನ ಹಾಲು ಕುಡಿದಂತೆಯೆ||"[೨೩]

ಒಟ್ಟಿನಲ್ಲಿ ಸಂಸ್ಕೃತ ವಿದ್ವಾಂಸರ, ಶಾಸ್ತ್ರ ಸಂಪನ್ನರ ವೇದಪಾರಂಗತರ ಮನೆಯ ಹೆಣ್ಣು ಮಗಳೊಬ್ಬಳು ಕನ್ನಡದಲ್ಲಿ ಕೃತಿ ರಚನೆ ಮಾಡಿದ್ದಲ್ಲದೆ ಅಂದಿನ ಸಾಮಾಜಿಕ ಪರಿಸರದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ವಹಿಸಿದ್ದು ಹೆಗ್ಗಳಿಕೆಯೇ ಸರಿ. ಉತ್ತರ ಕರ್ನಾಟಕದ ಕೆಲವೆಡೆಗಳಲ್ಲಿ ಇಂದಿಗೂ ಅವ್ವನವರ ಮುಯ್ಯದ ಹಾಡು, ಸೇತುಬಂಧನದ ಹಾಡುಗಳನ್ನು ಹಬ್ಬ ಹರಿದಿನಗಳಲ್ಲಿ ಶ್ರದ್ಧೆ, ಭಕ್ತಿಗಳಿಂದ ಹಾಡುತ್ತಾರೆ.

## ಪ್ರಯಾಗ ಬಾಯಿ

ಗಲಿಗಲಿ ಅವ್ವನವರ ಶಿಷ್ಯೆಯಾದ ಪ್ರಯಾಗವ್ವ ಅವಳ ಜೊತೆಯಿದ್ದು ಆಗಾಗ ಹೇಳುವ ಹಾಡುಗಳನ್ನು ಆಲಿಸಿ ತಾನು ಹಾಡುತಿದ್ದಳು ಅವ್ವನವರಿಂದ ಪ್ರಭಾವಿತರಾದ ಇವಳು ಕೆಲವು ಹಾಡುಗಳನ್ನು ರಚಿಸಿದ್ದಾಳೆ. ಈಕೆ ಅವ್ವನವರ ಶಿಷ್ಯತ್ವ ದೊರೆತುದದನ್ನು ವಿನಮ್ರವಾಗಿ ಹೀಗೆ ಸ್ಮರಿಸುತ್ತಾಳೆ.

"ಏಸು ಜನ್ಮದ ಪುಣ್ಯ ವಾಸವಾಯಿತೋ ವಿಷ್ಣುದಾಸ ದಾಸಿ ನಾನಾದೆ|
ಈ ಸಂಸಾರ ಕ್ಲೇಶವ ಕಳೆದು ಸುವಾಸನೆಯ ಕೊಡು ಗುರುರಾಜ||"

ಅಪ್ಪನವರು ಭಾಗವತದ ತೃತೀಯ ಸ್ಕಂದವನ್ನು ಕನ್ನಡದಲ್ಲಿ ರಚಿಸಲು ಹೇಳಿದರು ಅದರಂತೆ ಪ್ರಯಾಗವ್ವ ಕನ್ನಡೀಕರಿಸಿದರು.

"ತೃತೀಯ ಸ್ಕಂದದಲ್ಲಿ ರತಿಯಿಟ್ಟು ಮನದಲ್ಲೆಯತಿ
ಮುನಿರಾಯನಿಗೊಂದಿಸುವೆ ಅತಿ ಭಕ್ತಿಯಿಂದಲೇ
ಮತಿಬೇಡಿ ಪಾರ್ವತಿಸುತೆಗೆ ವಂದನೆಯ ಮಾಡುವೆನು
ಸ್ವಾಮಿ ಗುರುಗಳ ಪಾದ ನೇಮದಿ ಭಜಿಸುವೆ"

ತತ್ವ ನಿರೂಪಣೆಯಲ್ಲಿ ಪ್ರಯಾಗವ್ವ ಆಸಕ್ತಿ ತೋರಿದ್ದಾಳೆ. ಅವಳು ರಚಿಸಿದ ಕೆಲವೇ ಕೃತಿಗಳು ದೊರೆತಿವೆ. ಉರುಟಣೆ ಹಾಡು, ಭೂಮದ ಹಾಡು, ಹಸೆಕರದ ಹಾಡುಗಳನ್ನು ರಚಿಸಿದ್ದಾಳೆ. ತಮ್ಮನ್ನು ಭಾಗಮ್ಮ ಎಂದು ಕರೆಯುತ್ತಿದ್ದುದನ್ನು ಹಾಡೊಂದರಲ್ಲಿ ಹೇಳಿಕೊಂಡಿದ್ದಾಳೆ.

ಕಾಶೀ ಪಟ್ಟಣದಲ್ಲಿ ದಾಸಾದ ಭಾಗಮ್ಮ ಕಟ್ಟಿದ ಪದ್ಯವನು
ಭೂಸುರರೆಲ್ಲರೂ ಉದಾಸೀನ ಮಾಡದೆ ಲೇಸಾಗಿ ಪದ್ಯವನು ತಿದ್ದುವುದು||

'ಪಾಂಡುರಂಗ' ಇವರ ಅಂಕಿತ ಆಡುಭಾಷೆಯಲ್ಲಿಯೇ ತತ್ವಜ್ಞಾನದ ತಿರುಳನ್ನು ತೆರೆದಿಟ್ಟ ಪ್ರಯಾಗಬಾಯಿ ಹರಿದಾಸ ಸಾಹಿತ್ಯದ ದ್ವಿತೀಯ ದಾಸ ಮಹಿಳೆ ಎನಿಸಿದ್ದಾಳೆ.

## ಹರಪನಹಳ್ಳಿ ಭೀಮವ್ವ

ಹರಿದಾಸ ಸಾಹಿತ್ಯ ಪರಂಪರೆಯಲ್ಲಿ ಹರಪನಹಳ್ಳಿ ಭೀಮವ್ವನಿಗೆ ವಿಶಿಷ್ಟ ಸ್ಥಾನವಿದೆ. ಹರಪನಹಳ್ಳಿ ಭೀಮವ್ವ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ 'ನಾರಾಯಣದೇವರಕೆರೆ'ಯಲ್ಲಿ ಜನಿಸಿದರು. ಈಗ ಆ ಹಳ್ಳಿ ತುಂಗಭದ್ರಾ ಆಣೆಕಟ್ಟಿನ ನೀರಿನಲ್ಲಿ ಮುಳುಗಡೆಯಾಗಿದೆ. ಇವರ ಕಾಲ ಸ್ವಭಾನು ಸಂವತ್ಸರದ ಜೇಷ್ಠ ಬಹುಳ ೧೩ರಂದು ಅಂದರೆ ಕ್ರಿ.ಶ.೧೮೨೩ ಜುಲೈ ೬ರ ಭಾನುವಾರದಂದು ಹುಟ್ಟಿದರು. ತಂದೆ ರಘುನಾಥಾಚಾರ್ಯ, ತಾಯಿ ರಾಘಮ್ಮ ದಂಪತಿಗಳ ಚೊಚ್ಚಲು ಮಗಳಾದ ಈಕೆಯ ಹುಟ್ಟು ಹೆಸರು ಕಮಲಾಕ್ಷಿ ಕ್ರಮೇಣ ಅವಳ ಹೆಸರು ಭೀಮಾಬಾಯಿ ಯೆಂದಾಯಿತು. ತಂದೆ ತಾಯಿಯರು ಕೌಂಡಿನ್ಯ ಗೋತ್ರದ ಯಜುರ್ವೇದಿಗಳಾದ ರಾಘವೇಂದ್ರ ಮಠದ ಅನುಯಾಯಿಗಳು.

ಬಾಲ್ಯದಿಂದ ಭೀಮವ್ವನಿಗೆ ಹರಿದಾಸರ ಹಾಡುಗಳನ್ನು ಕೇಳುವುದೆಂದರೆ ಬಹಳ ಒಲವು. ಅವಳ ತಾತಾ (ತಾಯಿಯ ತಂದೆ) ಜೋಯಿಸ ವೆಂಕಪ್ಪಾಚಾರ್ಯರು ಹರಿದಾಸರಾಗಿದ್ದು ಸದಾ ಹರಿನಾಮ ಸ್ಮರಣೆಯಲ್ಲಿ ನಿರತರಾಗಿರುತ್ತಿದ್ದುದರಿಂದ ಚಿಕ್ಕಂದಿನಿಂದಲೇ ಆಕೆಗೆ ಹರಿಭಕ್ತಿ ಮಯವಾದ ವಾತಾವರಣ ನಿರ್ಮಾಣವಾಗಿತ್ತು. ಭೀಮವ್ವನವರ ಬಾಲ್ಯದ ಬದುಕು ಪವಾಡಮಯ ಘಟನೆಗಳಿಂದ ಕೂಡಿದೆ. ಭೀಮವ್ವನ ಅತೀತ ಪ್ರಜ್ಞೆಯ ಕುರಿತು ಒಂದು ಘಟನೆಯನ್ನು ಹೇಳುವುದುಂಟು. ಆಕೆಯ ಎರಡನೆಯ ವರ್ಷದ ಹುಟ್ಟು ಹಬ್ಬಕ್ಕೆ ಒಂದು ಬಂಗಾರದ ಮುಂದಲೆ ಹೂವನ್ನು ಮುಡಿಸಲಾಗಿತ್ತು ಅದನ್ನು ಮುಡಿದು

ಮಲಗಿದ್ದ ಮಗು ರಾತ್ರಿ ಇದ್ದಕ್ಕಿದ್ದಂತೆಯೇ 'ಚೇಳು ಬಂದಿದೆ ಚೇಳು' ಎಂದು ಕೂಗಲಾರಂಭಿಸಲು, ಎಲ್ಲರೂ ಗಾಬರಿಯಿಂದ ನೋಡಲು ಚೇಳು ಕಾಣಿಸಲಿಲ್ಲ. ಆಗ ಮಗುವನ್ನೇ ಕೇಳಲು ಅದು ನನ್ನ ಮುಂದಲೆ ಹೂವಿನ ಕೆಳಗೆ ಇದೆ ಎನ್ನಲು ಎಲ್ಲರೂ ಮುಂದಲೆ ಹೂವನ್ನು ತೆಗೆದರೆ ಚೇಳು ಆ ಹೂವಿನ ತಗ್ಗಿನಲ್ಲಿ ಕುಳಿತಿತ್ತಂತೆ.

ಹೀಗೆ ಭೀಮವ್ವನ ಬಾಲ್ಯ ಜೀವನದ ಬಗ್ಗೆ ಅನೇಕ ಸಂಗತಿಗಳು ತಿಳಿದು ಬರುತ್ತವೆ. ವಿದ್ಯಾಭ್ಯಾಸದ ದೃಷ್ಟಿಯಿಂದ ಆಕೆ ಓದುವುದಕ್ಕೂ ಬರೆಯುವುದಕ್ಕೂ ಬಾರದ ನಿರಕ್ಷರಳಾದ ಭೀಮವ್ವನ ಮನೆಯಲ್ಲಿನ ಭಕ್ತಿಪರಿಸರ, ಪುರಾಣ, ಹರಿಕಥೆಗಳನ್ನು ಕೇಳುವುದು ಹಾಗೂ ಗೌರಿಪೂಜೆ, ಶ್ರಾವಣ ಮಾಸದ ಹಾಡುಗಳಲ್ಲಿ ಭಾಗವಹಿಸುವುದು ಮತ್ತು ನಿರಂತರ ಹರಿಭಕ್ತಿ ಭಜನೆಗಳು, ಸಂಪ್ರದಾಯದ ಹಾಡುಗಳು ಆಕೆಯ ಭಕ್ತಿಸಾಹಿತ್ಯಕ್ಕೆ ಪ್ರೇರಣೆ ಮತ್ತು ಸ್ಫೂರ್ತಿಯಾದವು.

ಭೀಮವ್ವನಿಗೆ ಹನ್ನೊಂದು ವರ್ಷಗಳಾದಾಗ ಅವಳನ್ನು ರಾಯದುರ್ಗ ತಾಲ್ಲೂಕಿನ ಹಿರೇ ಸಮುದ್ರ ಗ್ರಾಮದ ಕುಲಕರ್ಣಿ ಮನೆತನದ ಗೋಪಾಲಪ್ಪನವರ ಮಗ ಮುನಿಯಪ್ಪನಿಗೆ ಕೊಟ್ಟು ವಿವಾಹ ಮಾಡಲಾಯಿತು.

ಮೂರು ಜನ ಹೆಂಡಂದಿರನ್ನು ಮದುವೆಯಾಗಿ ಅವರಿಂದಾದ ಮಕ್ಕಳೆಲ್ಲಾ ಮೃತರಾದ ಮೇಲೆ ತಮ್ಮ ನಲವತ್ತೈದನೇ ವಯಸ್ಸಿನಲ್ಲಿ ಭೀಮವ್ವನನ್ನು ಮದುವೆಯಾದರು. ತವರು ಮನೆಯ ಹೆಸರಾದ ಭೀಮವ್ವ ಅತ್ತೆಯ ಮನೆಯಲ್ಲಿ ಕೃಷ್ಣಬಾಯಿ ಎಂದಾಯಿತು. ಸ್ವಾಮಿರಾಯ ಎಂಬ ಮಗನೂ, ಸುಬ್ಬಾಬಾಯಿ ಎಂಬ ಹೆಣ್ಣು ಮಗಳೂ ಹುಟ್ಟಿದರು. ಅಲ್ಲಿಂದ ಅವರ ಬದುಕು ಸಂಕಷ್ಟಕ್ಕೆ ಒಳಗಾಗಿತು, ಆಗ ಮನೆಯಲ್ಲಿ ಕಳ್ಳತನವಾಗಿ ಬಡತನ ಕಾಡತೊಡಗಿತು. ಆದಾದ ಒಂದು ವರ್ಷಕ್ಕೆ ಮುನಿಯಪ್ಪನವರು ಸ್ವರ್ಗಸ್ಥರಾದರು. ವಿವಾಹದ ಕೇವಲ ತಮ್ಮ ೩೬ನೇ ವರ್ಷದಲ್ಲಿ ಒದಗಿ ಬಂದ ವಿಧವಾ ಪಟ್ಟ ಭೀಮವ್ವನನ್ನು ಹರಿನಾಮಸ್ಮರಣೆ ಕಡೆ ಮನಸ್ಸನ್ನು ಹರಿಸಿತು. ಮಕ್ಕಳ ಪಾಲನೆ, ಹರಿಭಜಯೇ ನಿತ್ಯಕಾಯಕವಾಯಿತು. ಚಿಕ್ಕವಯಸ್ಸಿನಲ್ಲಿ ಒದಗಿ ಬಂದ ವೈಧವ್ಯ ಆಕೆಯ ಭಕ್ತಿ ಸಾಧನೆಗೆ ಒತ್ತಾಸೆಯಾಯಿತು. ಭೀಮವ್ವನಿಗೆ ಅದೇ ವೇಳೆ ನಾರದರಿಂದ ಸ್ವಪ್ನಾಂಕಿತವಾಯಿತು. ತವರು ಮನೆಯ ಭೀಮವ್ವ ಅತ್ತೆಯ ಮನೆಯ ಕೃಷ್ಣಬಾಯಿ ಸೇರಿ 'ಭೀಮೇಶ ಕೃಷ್ಣ' ಎಂಬ ಅಂಕಿತವು ಸ್ವಪ್ನದಲ್ಲಿ ಪ್ರಾಪ್ತವಾಯಿತು. ಆಗ ಅವ್ವನಿಗೆ ಅಂಕಿತ ಸೂಚಿತವಾದ ಹಾಡು ಹೊರ ಹೊಮ್ಮಿತು.

> ಯಾತಕವನಿಯೋಳು ಜನಿಸಿದೆ ನಾನು, ಸಾರ್ಥಕವೇನು
> ನೀತಿಯಿಲ್ಲದೆ ಮಾತಿನಲ್ಲೇ ಕಾಲಕ ಕಳೆವೆ ನಾನು, ಕೋಲೆ ಸಾರ್ಥಕವೇನು
> ಬಿಟ್ಟು ಚಲಿಸದೇ ನಿನ್ನಲ್ಲೋ ಮನಸಿಟ್ಟೇನೆನೋ
> ವಾಸಿಷ್ಠ ಭೀಮೇಶ ಕೃಷ್ಣನ ಭಜಿಸುತ್ತಿರುವೆನೇನು, ಕೋಲೆನಾಥ ಸಾರ್ಥಕೇನು?[೨೯]

ಎಂದು ಹನುಮ, ಭೀಮ, ಮಧ್ವ ಅವತಾರಗಳ ವರ್ಣನೆಯಿರುವ ಈ ಹಾಡು ಅಂಕಿತ ಪ್ರಧಾನವಾದ ನಂತರ ಹೊರಬಂದ ಮೊದಲ ಹಾಡು.

ಭೀಮವ್ವನ ಕೃತಿಗಳಲ್ಲಿ ಎಲ್ಲ ಹರಿದಾಸರಂತೆ ಮಧ್ವತತ್ವವೇ ಮೂಲ ಆಕರ. ಮಾಧ್ವರ ಅವತಾರಗಳನ್ನು ತನ್ನ ಹಾಡುಗಳಲ್ಲಿ ಉಲ್ಲೇಖಿಸಿದ್ದಾಳೆ.

ಮಾಯವಾದಿಯ ಮುರಿದೊತ್ತಿ ತಾ ಮಧ್ವ
ರಾಯರಾಗಿ ರಜತಪೀಠ ಪುರದಲ್ಲೆ
ಸಕಲ ಜೀವರಿಗಾಧಾರಕನೋ
ಭಾರತಿ ಜೀವರಿಗಾಧಾರಕ ನೋ
ಭಾರತಿ ಪ್ರಾರಂಭಕ್ಕೊಂದಿತನೋ
ಮಧ್ವಮತ ಶಾಸ್ತ್ರಗಳ ಉದ್ಧಾರಕನೊ
ತ್ರಿಗುಣ ಜೀವನು ಸಾರ ಪ್ರೇರಕನು
ವಾಯು ಸಕಲ ಸುರರೊಡೆಯ[೨೫]

ಹೀಗೆ ಕೇವಲ ಏಳು ಸಾಲುಗಳ ನುಡಿಯಲ್ಲಿ ಮಧ್ವಮತದ ಸಾರವನ್ನು ಹಿಡಿದಿಟ್ಟಿದ್ದಾಳೆ. ಮಾಧ್ವರು ಗುರುವಿಗೆ ಪ್ರಮುಖ ಸ್ಥಾನ ನೀಡಿದ್ದಾರೆ. ಅದರಂತೆ ಭೀಮವ್ವನು ಕೂಡಾ ಗುರುಸ್ಥಾನದಲ್ಲಿರುವ ಮುಖ್ಯ ಪ್ರಾಣದೇವರನ್ನು ಸ್ತುತಿಸಿದ್ದಾಳೆ.

ಎಂಥ ಮಹಿಮ ಬಲವಂತ ನಮ್ಮನುಮಂತ
ನಿಂತು ನೀ ಸಲಹೋ ನಿರಂತರಲೆನ್ನ
ರಾಮ ರುಂಗುರ ಸೀತೆಗಿಟ್ಟು ವರವರೆತ್ತಿ ಸೂ
ರೆಮಾಡ್ಯಕ್ಷ ಕುಮಾರನ ಮುರಿದು
ರಾವಣೇಶನ ಲಂಕಾಧೀಪಕ್ಕೆ ದೀಪಗಳಚ್ಚೆ
ಹಾರಿದ್ವಾರಿಧಿ ಮತ್ತೆ ಹರಿಗೆ ಬಂದಿರುಹಿದ[೨೬]

ಹರಿಗೆ ಸಲ್ಲಿಸುವ ಎಲ್ಲ ಸೇವೆಗಳೂ ಗುರುಗಳಾದ ಪ್ರಾಣದೇವರ ಮೂಲಕವೇ ತಲುಪಬೇಕು ವಾಯುದೇವರು ಪರಮಾತ್ಮನಿಗೂ, ಜೀವಾತ್ಮರಿಗೂ ಸಂಪರ್ಕ ಸೇತುವೆಯಾಗಿದ್ದಾರೆ. ಅಂಥ ವಾಯುದೇವರ ಮಹಿಮೆಯನ್ನು ಹೇಳುತ್ತಾ 'ನಿಂತು ನೀ ಸಲಹೋ ನಿರಂತರದಲ್ಲೆನ್ನ' ಎಂದು ಮೊರೆ ಇಡುತ್ತಾಳೆ.

ಹರಿದಾಸರ ಪರಂಪರೆಯ ಹಿನ್ನೆಲೆಯಲ್ಲಿ ಭೀಮವ್ವನ ಹಾಡುಗಳು ಹರಿದಾಸರ ಸಂಪ್ರದಾಯದಂತೆ ಕೀರ್ತನೆ, ಸುಳಾದಿ, ಉಗಾಭೋಗ, ಈ ಮೂರು ಪ್ರಕಾರಗಳನ್ನು ಕಾಣಬಹುದು. ಸಂಖ್ಯೆಯಲ್ಲಿ ಕೀರ್ತನೆಗಳು ಹೆಚ್ಚು, ಒಂದೇ ಒಂದು ಉಗಾಭೋಗ ಎರಡು ಸುಳಾದಿಗಳು, ಕ್ರಮವಾಗಿ ಹರಿಯ ದಶಾವತಾರ ವರ್ಣನೆ, ಹರಿಯ ಸಂದರ್ಶನವನ್ನು ಬೇಡುವುದು ಮತ್ತು ನಿಂದಾ ಸ್ತುತಿ ಕೃತಿಗಳಾಗಿವೆ.

ಹರಿದಾಸರ ಸಂಪ್ರದಾಯದಂತೆ ಭೀಮವ್ವನ ಹಾಡುಗಳಲ್ಲಿ ಹರಿಯ ದಶಾವತಾರಗಳ ವರ್ಣನೆ ವೈವಿಧ್ಯಮಯವಾಗಿ ಮೂಡಿ ಬಂದಿದೆ. ದ್ರೌಪದಿಯ ಮೊರೆ, ಭಾಮೆಯ ನಿಂದೆ, ಗೋಪಿಯರ ಪ್ರತಾಪ, ಮುಂತಾದವುಗಳಲ್ಲಿ ಪಂಚವಿಧ ಭಾವಗಳಲ್ಲಿ ದಾಸ್ಯ, ಸಖ್ಯ, ಮಧುರ, ವಾತ್ಸಲ್ಯ, ಶಾಂತ, ಭಾವದಿಂದ ಹರಿಯನ್ನು ಆರಾಧಿಸುವಲ್ಲಿ ದಶಾವತಾರಗಳ ವರ್ಣನೆಯನ್ನು ಕಾಣಬಹುದು.

ವಾರಿಧಿಯೊಳಗೆ ಓಡ್ಯಾಡಿ ನಾರುವುದೇನೊ ಮಂ (ಮತ್ಸಾವತಾರ)
ದರವ ಹೊತ್ತು ನೀ ಧರನಾ (ಧರೆಯೆ) ಹೊರುವುದೇನು (ಕೋರ್ಮ, ವರಹಾ)
ಊರ (ಉರ?) ಬಗೆದು ಕರುಳ್ಹಾರ ಹಾಕುವುದೆನು (ನರಸಿಂಹ)
ದೂರ ಬೆಳೆದು ಸುಳ್ಳು ಸುಳ್ಳೆ ಪೋರನೆನಿಪದೇನು (ವಾಮನ)
ದೂರಾಗಿ ಜನನಿಕೊಂದೆ ಸ್ವಾರಸ್ಯಗಳೇನು (ಭಾರ್ಗವ)
ನಾರುಟ್ಟಾರಣ್ಯದಿ ನಾರಿ ಬಿಡುವುದೇನು (ರಾಮ)
ಪಾರ ಹೆಂಡಿರ ಸಂಸಾರ ಘೋರ ವಿದೇನು (ಕೃಷ್ಣ)
ಜಾರಾಗಿ ಜನಕೆ ಶರೀರ ತೋರುವುದೇನು (ಬುದ್ಧ)
ಕ್ರೂರ ಕಲಿಗಳ ನೀ ಸಂಹಾರ ಮಾಡುವುದೇನು (ಕಲ್ಕಿ)
ಧೀರ ನಮ್ಮೆದುರು ನಿಲ್ಲಬಾರದೇನು
ಮಾರ ಜನಕ ಭೀಮೇಶ ಕೃಷ್ಣನೆ
ಮರೆಯಾಗಿದ್ದರೇನೊ ಮರೆಯಂದತಿರೊ||[೨೬]

ಒಂದೊಂದು ಸಾಲುಗಳಲ್ಲಿ ದಶಾವತಾರಗಳ ಚಿತ್ರಣವಿದೆ. ಶ್ರೀ ಕೃಷ್ಣನಿಗೆ ಸತ್ಯಭಾಮೆಯು ಬಾಗಿಲು ಕಟ್ಟೋ ಸಂದರ್ಭದಲ್ಲಿ ಆತನ ಅಪಾರ ಮಹಿಮೆಗಳನ್ನು ಹೇಳುತ್ತಾ ದಶಾವತಾರಗಳನ್ನು ವರ್ಣಿಸಿದ್ದಾಳೆ.

ದಾಸಸಾಹಿತ್ಯದ ರಚನೆಗೆ ಮೂಲ ಪ್ರೇರಣೆ ಭಾಗವತ, ರಾಮಾಯಣ, ಮಹಾಭಾರತಗಳು ವಿಷ್ಣು ಭಕ್ತಿಯನ್ನು ನಿರೂಪಿಸುವ ಮೇರು ಕೃತಿಗಳು ಹಾಗೆಯೇ ಹರಪನಹಳ್ಳಿ ಭೀಮವ್ವ ಮಹಾ ಕಾವ್ಯಗಳ ಪ್ರಸಂಗಗಳನ್ನು ಹೇಳುವ ರೀತಿಯೇ ಒಂದು ಸೊಗಸು ಮಹಾಭಾರತ, ಭಾಗವತ, ಹಾಗೂ ಶಾಕುಂತಲ ನಾಟಕದ ಪ್ರಭಾವಕ್ಕೊಳಗಾಗಿದ್ದ ಭೀಮವ್ವ ಪುರಾಣ, ಹರಿಕಥಾ ಶ್ರಾವಣದಿಂದ ಪ್ರೇರಿತಳಾಗಿ, ಪುರಂದರದಾಸರಲ್ಲಿ ಕಾಣುವಷ್ಟು ಸೊಗಸಾದ ಕೃಷ್ಣನ ಲೀಲೆಗಳ ವರ್ಣನೆಗಳನ್ನು ಭೀಮವ್ವನ ಕೃತಿಗಳಲ್ಲಿ ಕಾಣುತ್ತೇವೆ. ಅತ್ಯಂತ ಸರಳ ರೀತಿಯಲ್ಲಿ ಬೆಡಗಿನ ಭಾಷೆಯಲ್ಲಿ ಚಿತ್ರಿತವಾಗಿದೆ. ಬಾಲಕೃಷ್ಣನ ವರ್ಣನೆ ಮಾಡುವಾಗ ಭೀಮವ್ವ ಪುರಂದರದಾಸರಂತೆ ಬಾಲಭಾಷೆ ಬಳಸಿದ್ದಾಳೆ. ಬಾಲಕೃಷ್ಣನ ಹಾವಳಿಯಿಂದ ಬೇಸತ್ತ ಗೋಪಿಯರು ಯಶೋಧೆಗೆ ಬಂದು ದೂರು ಹೇಳುವುದನ್ನು ಈ ಹಾಡು ಒಳಗೊಂಡಿದೆ.

ನೋಡೆ ಗೋಪಮ್ಮ ಕೃಷ್ಣಂ ಚಾಳಿಯ ನೀ
ಮಾಡಿ ಬಿಟ್ಟಿಯೇ ಇಂಥ ಗೂಳಿಯ ಇಂಥ ಧಾಳಿಯ || ಪ ||

ಹಾಲು ಮೊಸರು ಕೆನೆ ಬೇಡುವ ಕಡ
ಗೋಲಿಂದ್ಹೊಡೆದು ನಮ್ಮನ್ನೋಡುವ ಬಂದು ಕಾಡುವ || ೧ ||

ತುಪ್ಪದ ಕೊಡ ಧಪ್ಪನೊಡೆದಾನೆ ಕಂ
ದರ್ಪನಪ್ಪನು ಈತೇನುಡ್ಡುಗನೆ ಇಂಥ ತುಡುಗನೆ || ೨ ||

ಕರೆದು ಕೈಯಲ್ಲಿ ಬೆಣ್ಣೆಯ ಮುದ್ದೆನೀ
ಕೊಟ್ಟೇಳೆ ಭೀಮೇಶ ಕೃಷ್ಣಗೆ ಬುದ್ದಿ || ೩ ||

ಜಲಕ್ರೀಡೆ ಹಾಡು ಭೀಮವ್ವನ ಕಾವ್ಯ ಕಟ್ಟುವ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ಭಾಗವತದ ದಶಮಸ್ಕಂದಲ್ಲಿ ಬರುವ ಜಲಕ್ರೀಡೆಯಂತಹ ಸಣ್ಣ ಪ್ರಸಂಗವನ್ನು ವರ್ಣನಾತ್ಮಕವಾಗಿ ಸೀರೆಯ ನಮೂನೆಗಳನ್ನು ಹೇಳುತ್ತಾ ಅವುಗಳ ಹಿಂದಿರುವ ಸಂಬಂಧಗಳನ್ನು ತಿಳಿಯಪಡಿಸುತ್ತಾಳೆ. ಸೀರೆಯ ಕುರಿತಾಗಿ ಹೇಳುತ್ತಾ ಸೋದರಮಾವ, ಅತ್ತೆ, ಭಾವ, ಅಕ್ಕ ಮುಂತಾದವರು ಕೂಡಿಸಿದ್ದು ಎಂದು ಹೇಳುತ್ತಾ ಆಗಿನ ಕಾಲದ ಅವಿಭಕ್ತ ಕುಟುಂಬದ ಕಲ್ಪನೆಯನ್ನು ಹೇಳಿದ್ದಾಳೆ. ಸೀರೆಗಳ ಸೆರಗು, ಬಣ್ಣ ಅದ್ದಿದ ಸೀರೆ ಇತರೆ ಎಪ್ಪತ್ತು ಸೀರೆಗಳನ್ನು ವರ್ಣಿಸುತ್ತಾ ಅವುಗಳೊಂದಿನ ಭಾವನಾತ್ಮಕ ಸಂಬಂಧವನ್ನು ತಿಳಿಯಪಡಿದ್ದಾಳೆ. ಜಲಕ್ರೀಡೆಯ ಆನಂದದಲ್ಲಿ ಮೀಯುತ್ತಿದ್ದ ಗೋಪಿಕೆಯ ಮನಸ್ಥಿತಿಯನ್ನು ಈ ಸಾಲುಗಳು ಅಭಿವ್ಯಕ್ತಿಸುತ್ತವೆ. ನೀರಾಟವಾಡಿ ಒಲ್ಲದ ಮನಸ್ಸಿನಿಂದ ದಡಕ್ಕೆ ಒಂದು ನೋಡಿದರೆ ಸೀರೆಗಳು ಕಾಣೆಯಾಗಿದ್ದವು. ಗೋಪಿಕೆಯ ತಮ್ಮ ಸೀರೆಗಳು ಕಳ್ಳತನವಾದದ್ದು ಕಂಡು ಭಯದಿಂದ ನಡಗುತ್ತಾ ಗೋವುಗಳ ಕಾಯುವ ಕೃಷ್ಣ ಬರುವ ಹೋತ್ತಾಯಿತು ಬಂದರೆ ನಮ್ಮ ಮಾನ ಹೋಗುತ್ತದೆ ಎಂದು ಮಿಡುಕುತ್ತಾ ಒಬ್ಬೊಬ್ಬರು ತಮ್ಮ ಸೀರೆಯನ್ನು ಕುರಿತು ಹೇಳುವ ವರ್ಣನೆಯಾಗಿದೆ.

ಸಾರಾವಳಿ ಸೀರೆ ರಾಗಾವಳಿ ಸೀರೆ
ದ್ವಾರಮನಿ ಸೀರೆ ನಿಂದಲ್ಲೇನೆ ಅಕ್ಕ
ಗೋದಿಮಗ್ಗಿ ಸೀರೆ ಗುಬ್ಬಿಕಣ್ಣಿನ ಸೀರೆ
ಸೋದರತ್ತೆಯರುಟ್ಟ ಸೀರೆಗಳ

ಕರಿಯ ಮಧುರೆ ಸೀರೆ ಜರಮಗ್ಗಿ ಕುಪ್ಪಸ
ಕರೆಸಿ ಸೋದರಮಾವ ಉಡಿಸಿದ್ದನೆ ನನ್ನ
ರವಡಕೆ ಅಂಚಿನ ದಿವ್ಯ ಕವಳೆ ಹೂವಿನ ಸೀರೆ
ಕುರುಡ್ಡವ್ವಿನ ನಮ್ದು ಕಾಣಲಲ್ಲೆ.

ಮಾವಿನಗೆ (ನ್ಗೆ?) ಸೀರೆ ಮಾರುದ್ದು ಸೆರಗಿತ್ತು
ಮಾವ ತಂದು ಕೊಟ್ಟ ನನಗೆ ನಿನ್ನೆ ನೊಡೆ
ಹ್ಯಾವವಿಲ್ಲದೆ ಮನೆಗ್ಹೋದರೆ ನ
ಮ್ಮಾವ ಕೋಲು ಕೋಲಲಿ ಹೊಡೆದ್ಹೊರಗ್ಹಾಕುವ

ಜರತಾರಿ ಸೆರಗಿನ ಮತ್ತಾರಿ ಪತ್ತಲ
ಅತ್ಮುಟ್ಟ ಬಣ್ಣದ ಕೊಟ್ಟಿದ್ದಳೆ ನನಗೆ[೨೮]
.....................................
.....................................

ಹೀಗೆ ತಾವು ಕಳೆದುಕೊಂಡ ಸೀರೆಯ ಸೊಬಗನ್ನು ವರ್ಣಿಸುತ್ತಾ ತಂದೆ ತಾಯಿ ಕೊಟ್ಟ ಸೀರೆಯ ಬಗ್ಗೆ ಅಕ್ಕರೆ ತೋರುತ್ತಾ ಮಾವ ಅತ್ತೆಯರ ಪಾತ್ರಗಳ ಸ್ವಭಾವವನ್ನು ಚಿತ್ರಿಸಿದ್ದಾಳೆ. ಅತ್ತೆ ಮನೆಯ ನಾದಿನಿ, ಮೈದುನ, ಭಾವಂದಿರ ವ್ಯಕ್ತಿತ್ವವು ಈ ಹಾಡುಗಳಲ್ಲಿ ವ್ಯಕ್ತವಾಗಿದೆ. ಮಹಿಳೆಯರ ಸೌಂದರ್ಯ ಪ್ರಜ್ಞೆಯ ಜೊತೆಗೆ ಭೀಮವ್ವ ಅಲಂಕಾರಿಕ ವಸ್ತುಗಳ ವಿಸ್ತಾರವಾದ ಜ್ಞಾನವನ್ನು ಹೊಂದಿದ್ದಾಳೆಂಬುದಕ್ಕೆ ಇಲ್ಲಿನ ಸೀರೆಗಳು ವರ್ಣನೆ ನಿದರ್ಶನವಾಗಿದೆ.

ಹರಪನಹಳ್ಳಿ ಭೀಮವ್ವನು ಸಹ ನವವಿಧ ಭಕ್ತಿಗಳಿಗೆ ತನ್ನ ಭಾವನೆಗಳನ್ನು ಹೇಳಿಕೊಂಡಿದ್ದಾಳೆ. ಆದರೆ ಪಂಚ ಭಾವಗಳಲ್ಲಿ ಅಡಕವಾಗಿರುವ ಭಕ್ತಿಗೆ ತೀರ ಹತ್ತಿರದ ಸಂವೇದನೆಗಳು ಭೀಮವ್ವನ ಕೃತಿಗಳಲ್ಲಿವೆ.

## ದಾಸ್ಯಭಾವ

ಪಂಚ ಭಾವಗಳ ಮೂಲಕ ಭೀಮವ್ವ ಭಕ್ತಿಯ ಉತ್ಕಟತೆಯನ್ನು ಅಭಿವ್ಯಕ್ತಿಸಿದ್ದಾಳೆ. ದಾಸ ಸಾಹಿತ್ಯದಲ್ಲಿ ಹಾಸು ಹೊಕ್ಕಾಗಿರುವ ದಾಸ್ಯಭಾವ ಅವ್ವನವರ ಹಾಡುಗಳಲ್ಲಿ ವ್ಯಕ್ತವಾಗಿದೆ.

ಶ್ರೀಶನೆ ಕೇಳ್ ನಿನ್ನ ದಾಸರಂಗಳದಲ್ಲಿ
ಬೀಸಿ ಬೀಸಾಕೋ ಎನ್ನನು ಎನ್ನ ಹರಿದಾಸರ
ದಾಸತ್ವಯೆನಗೆ ಕೂಡಿಸಯ್ಯ[೩೦]

'ದಾಸೋಹಂ' ಭಾವದೊಡನೆ ನವವಿಧ ಭಕ್ತಿಯ ನಿರೂಪಣೆಯೊಡನೆ ಶ್ರೀ ಹರಿಯ ದರ್ಶನ ಮಾಡಿದ ಮಹಾತ್ಮರ ಸೇವೆಯೂ ಮಾಡುವುದು ಒಂದು ಸೌಭಾಗ್ಯ ಎಂದು ಭೀಮವ್ವ ಆರ್ತಳಾಗಿ ದೇವರಲ್ಲಿ ಮೊರೆಯಿಡುತ್ತಾಳೆ. ಆತ ಉದಾಸೀನದಿಂದಲಾದರೂ ಇಂತಹ ದಾಸರಿಂದ ಆತ್ಮೋದ್ಧಾರದ ಸುವರ್ಣಾವಕಾಶ ದೊರಕಿಸಲೆಂದು ಭಜಿಸುವ ದಾಸರ ದಾಸತ್ವ ಎನಗೆ ಕರುಣಿಸು ಎಂದು ಶ್ರೀ ಹರಿಯಲ್ಲಿ ಮೊರೆ ಇಟ್ಟಿದ್ದಾಳೆ.

ಇಂದು ಕುಲಜಾತಿ ನಿನ್ನೊಂದಿಕೊಂಡಿದ್ದು
ಎಂದೆಂದಿಗೂ ಬಿಡದೆ ಗೆಳೆತನ ಗೆಳೆತನವಿದ್ದಲ್ಲಿ
ಸಂದೇಹವ್ಯಾತಕೊ ಸಲಹಲು[೩೧]

### ಸಖ್ಯಭಾವ

ಸಖ್ಯಭಾವದಿಂದ ಭೀಮವ್ವ ಶ್ರೀ ಹರಿಯನ್ನು ಸ್ತುತಿಸುತ್ತಾ ಎಂದೆಂದಿಗೂ ನಿನ್ನೊಂದಿಗಿರುವ ಗೆಳೆತನ ಕರುಣಿಸಿ ಸಲಹು ಎಂದು ಕೃಷ್ಣನನ್ನು ಕೋರುತ್ತಾಳೆ. 'ಗೆಳೆತನವಿದ್ದಲ್ಲಿ ಸಂದೇಹ ವ್ಯಾತಕೂ' ಎನ್ನುವ ಸಾಲಿನಲ್ಲಿ ಗೆಳೆತನ ಎಂಬುದು ಸಂಶಯ ಸಂದೇಹಗಳಿಂದ ಹೊರತಾಗಿರುವುದು. ನಿಜವಾದ ಗೆಳೆತನವಿದ್ದಲ್ಲಿ ಅನುಮಾನಗಳಿರಬಾರದು ಎಂಬುದು ಭೀಮವ್ವನವರ ನಿಲುವು.

ಯಾದವ ನಿನ್ನೆಲ್ಲ ವರ್ಮಕ ಮಂಗಳ
ಸಾಧಿಸಿ ಜನರ ಮುಂದ್ಹೇಳಲ್ಯಾರಂಗ
ಸಾಧಿಸಿ ಜನರ ಮುದ್ಹೇಳಲ್ಯಾ
ಭೇದವಿಲ್ಲದೆ ಕರುಣವನಿಟ್ಟು ಮರೆ
ಯದೆ ನೀ ದಯ ಸುಮ್ಮನೆ ಮಾಡುವ್ಯಾ[೨೨]

### ಮಧುರ ಭಾವ

ಗೋಪಿಯರು ಕೃಷ್ಣನನ್ನು ನೆನಪಿಸಿಕೊಂಡು ತಮ್ಮನ್ನು ತಾವು ನಿಂದಿಸಿಕೊಂಡು ಮನದಳುವನ್ನು ತೋಡಿಕೊಳ್ಳುತ್ತಾರೆ.

ಬಾರೋ ರಂಗ ಕೋಮಲಾಂಗ ದಾರಿಗೆ ತನ್ನಂಗ ಸಂಗ
ನೀಡಲ್ಹೊದ ಎನ್ನ ಕಂಗಳಿಂದ ನೋಡ ||ಪ||
ಮುದ್ದು ಮುಖವನು ನೋಡುತ್ತಿದ್ದ ಪ್ಯಾರೆ ಮಂದಿರದಲ್ಲಿ
ಮದ್ದು ಮಾಡ್ಹೊಲಿಸಿದ್ದಾಳೆನಾ ಭದ್ರಾ ಕೃಷ್ಣಗೆ[೨೩]

ಕೃಷ್ಣನ ಮಹಿಮೆಯನ್ನು ಮಧುರತೆಯಿಂದ ಹೇಳ ತೊಡಗುವ ಗೋಪಿಕೆಯರು ಉದ್ದವನ ಮುಂದೆ ಕೃಷ್ಣನನ್ನಗಲಿ ನಾವು ಇರಲಾರೆವು ಅವನನ್ನು ತೋರಿಸು ಎಂದು ಅಲವತ್ತು ಕೊಳ್ಳುತ್ತಾರೆ.

ಸಕ್ಕರೆಯಂತಹ ಸವಿ ಮಾತನಾಡುವ ನಮಗೆ
ದಕ್ಕಿದಕ್ಕದಲ್ಹೋದನೊ
ಮತ್ತೇನು ಪೇಳೋಣ, ಮಂದ ಭಾಗ್ಯರು ಹರಿಯ
ದಕ್ಕಿಸಿ ಕೊಳ್ಳದ್ಹೋದೆವೊ
ಸಿಕ್ಕರೆ ಧನವು ಶತಸಾವಿರ ಕೊಪ್ಪರಿಗೆ ಅಷ್ಟ
ಧಿಕ ಸುಖವಾದಿತೋ ಉದ್ದವ[೨೪]

ಎಂದು ಗೋಕುಲದಿಂದ ದ್ವಾರಕೆಗೆ ಹೋದ ಕೃಷ್ಣನನ್ನು ಮತ್ತೆ ಗೋಕುಲಕೆ ಮರಳುವಂತೆ ಉದ್ದವನಿಗೆ ಕೋರುತ್ತಾರೆ. ಬ್ಯಾಗೆ ಬರುವೇನೆಂದು ಸಾಗಿ ಮಧುರೆಗೆ ಹೋದ ಹ್ಯಾಗೆ ಮಾಡೋಣದ್ವವ ಎಂದು ತಮ್ಮೊಳಗಿನ ವಿರಹ ವೇದನೆಯನ್ನು ಮಧುರ ಭಾವದ ಮೂಲಕ ಹೊರ ಹಾಕುತ್ತಾರೆ.

ಕದ ವಿಕ್ಕಿದ ಕಾರಣೇನೆ ಮುದದಿಕೇಳೆ ಮೋಹನಾಗಿ
ಸದವಕ್ಕಾಗಿ ಬಂದೆ ನಾನು ಸರಸ ವ್ಯಾತಕೆ ಸುಂದರಾಂಗಿ
..........................................

ಇಂದು ನಾನು ಬಂದೆ ದ್ರೌಪದಿ
ಬಂದು ಬಾಗಿಲನ್ನಾಕುವೋರು
ಚೆಂದವೇನೆ ಚಂದ್ರಮುಖಿಯೆ
ಬಂದು ಬಾಗಿಲ ತೆಗೆಯೆ ನೀನು[೨೯]

ಅರ್ಜುನನು ದ್ರೌಪದಿಗೆ ಬಾಗಿಲು ಕಟ್ಟಿದಾಗ ಹೇಳಿದ್ದು ಇದರಲ್ಲಿ ಅರ್ಜುನನು ತನ್ನ ಹತ್ತು ಅವತಾರಗಳನ್ನು ಹೇಳುತ್ತಾ ದ್ರೌಪದಿಯನ್ನು ಮನವೊಲಿಸಿಕೊಳ್ಳುತ್ತಾನೆ. ಭೀಮವ್ವನ ಬಹುತೇಕ ಹಾಡುಗಳಲ್ಲಿ ಮಧುರ ಭಾವ ಕಂಡು ಬರುತ್ತದೆ. ಕೃಷ್ಣ ಸತ್ಯಭಾಮೆ ಹಾಗೂ ಇನ್ನಿತರ ಸಂಸಾರಿಕ ಚಿತ್ರಣ ಕೊಡುವಾಗ ಮಧುನ ಭಾವ ಅಭಿವ್ಯಕ್ತಿಗೊಂಡಿದೆ.

## ವಾತ್ಸಲ್ಯ ಭಾವ

ವಾತ್ಸಲ್ಯ ಭಾವದ ಹಾಡುಗಳು ಬಹಳಷ್ಟು ಸಂಖ್ಯೆಯಲ್ಲಿ ಕಂಡು ಬರುತ್ತವೆ. ಪುರಂದರದಾಸರ ಕೃತಿಗಳಲ್ಲಿನ ಬಾಲಕೃಷ್ಣನ ವರ್ಣನೆ ಶ್ರೀಮಂತಿಕೆಯನ್ನು ಭೀಮವ್ವನ ಕೃತಿಗಳಲ್ಲಿ ಕಾಣಬಹುದಾಗಿದೆ. ಗೋಪಿಕಾಸ್ತ್ರೀಯರು ಕೃಷ್ಣನ ತುಂಟತನ ಕುರಿತು ಯಶೋಧೆಯ ಹತ್ತಿರ ದೂರಿದಾಗ ಕೃಷ್ಣ ತನ್ನ ತುಂಟತನವನ್ನು ಸಮರ್ಥಿಸಿಕೊಳ್ಳುವ ಪರಿ ಬಾಲಭಾಷೆಯಲ್ಲಿ ಸೊಗಸಾಗಿ ಮೂಡಿ ಬಂದಿದೆ.

ಯಾಕೆನ್ನ ದೂರುವರೆ ಪೇಳಮ್ಮಯ್ಯ
ಪೋಕ ಬುದ್ಧಿಯ ಗೊಲ್ಲತಿ
ಗೋಕುಲ ದೊಳಗಿಂಥ ಪೋಕ ಹೆಂಗಸರಾಗಿ
ಲೋಕ ಲೋಕದಿ ನೋಡೆ ನಾಕಾಣೆನೆಲ್ಲೆಲ್ಲೊ.[೩೦]

ಬಾಲಕೃಷ್ಣನನ್ನು ಆಟವಾಡಿಸುವ ಬಗೆಗಿನ ವರ್ಣನೆಯನ್ನು ನೋಡಿದಾಗ ಭೀಮವ್ವನೊಳಗಿನ ಮಾತೃವಾತ್ಸಲ್ಯ ಗರಿಗೆದರಿದೆ. ಚಿಕ್ಕ ಮಕ್ಕಳನ್ನು ಆಡಿಸುವಾಗ ಬಳಸುವ ಪದಗಳಾದ ತಾರಮ್ಮಯ್ಯ ಹಾಗೂ ಇನ್ನಿತರ ಪದಗಳು ಮಗುವಿನ ಬಾಲಲೀಲೆಗಳನ್ನು ವರ್ಣಿಸುತ್ತವೆ.

ಹೊನ್ನ ಪುತ್ಥಳಿಗೊಂಬೆ ಹೊಸ ಚಿನ್ನದ ಗಣಿಯೆ
ಹೊನ್ನು ತಾ ಗುಬ್ಬಿ ತಾರಮ್ಮಯ್ಯ ಎನುತಲಿ
ಬಣ್ಣ ಬಣ್ಣದ ಆಟ ವರ್ಣಿಸುತಲಿ ನೀಲ
ವರ್ಣನ ತನ್ನ ತೋಳಿಂದಪ್ಪಿ ನಲಿಯುತ[೩೧]

ವಿವಿಧ ಆಭರಣಗಳ ಆಸೆ ತೋರಿಸಿ 'ಹೊನ್ನು ತಾ ಗುಬ್ಬಿ ತಾರಮ್ಮಯ್ಯ ಎನುತಲಿ' ಹಟವನ್ನು ಹಿಡಿದ ಬಾಲಕೃಷ್ಣನನ್ನು ಯಶೋದೆ ರಮಿಸುತ್ತಾಳೆ. ಚಿಕ್ಕ ಮಕ್ಕಳ ಬಾಲ್ಯವನ್ನು ವರ್ಣಿಸುವಾಗ ಭೀಮವ್ವ ಬಾಲಕೃಷ್ಣನ ವರ್ಣನೆಯ ಜೊತೆಗೆ ಬಾಲ್ಯದ ತುಂಟತನಕ್ಕೆ ಹೊಸ ಮೆರಗು ನೀಡುವುದರ ಮೂಲಕ ಮಹಿಳಾ ಹರಿದಾಸರಲ್ಲಿ ಭೀಮವ್ವನವರ ಕೃಷ್ಣ ಭಕ್ತಿಯ ನಿರೂಪಣೆಯಲ್ಲಿ ವಾತ್ಸಲ್ಯಭಾವವನ್ನು ಹೆಚ್ಚು ವ್ಯಾಪಕವಾಗಿ ಬಳಸಿಕೊಂಡಿದ್ದಾರೆ ಎಂದು ಹೇಳಬಹುದು.

**ಶಾಂತಭಾವ**

ಪಂಚ ಭಾವಗಳಲ್ಲೊಂದಾದ ಶಾಂತಭಾವವನ್ನು ಹರಿದಾಸರು ಭಗವದ್ದರ್ಶನದ ಸಂದರ್ಭದಲ್ಲಿ ನಿರೂಪಣೆಯಲ್ಲಿ ಬಳಸಿಕೊಂಡಿದ್ದಾರೆ. ಅದರಂತೆ ಭೀಮವ್ವನು ಸಹ ಶಾಂತಭಾವದಲ್ಲಿ ಹಾಡನ್ನು ಬರೆದಿದ್ದಾಳೆ.

ನಾರಾಯಣ ಎನ್ನಿರೂ ನಾರಾಯಣ ಎನ್ನಿ
ನಾರದ ಪ್ರಿಯನಿಗೆ ನಂದನಸುತ ಮುಕುಂದ ಮುರಾರಿಗೆ ॥ ಪ ॥
..............................................
..............................................
ಸ್ನಾನ ಜಪ ತಪವ್ಯಾಕೆ ಮೌನ ವ್ರತ ಬಿಟ್ಟು
ಕಾಲ ಕಳೆಯಲು ಯಮಭಟರು ಕರೆದು ಭಾದಿಸದೆ ಬಿಡರು[೬೭] ॥ ೨ ॥

ನಾರಾಯಣ ಸ್ಮರಣೆಯಲ್ಲಿ ತೊಡಗಿರಿ ಎನ್ನುವ ಭೀಮವ್ವ ಸ್ನಾನ, ಜಪ, ತಪಗಳಿಗಿಂತ ಹರಿಯ ಸ್ಮರಣೆ ಕಾಲ ಕಳೆಯಬೇಕು ಎಂದು ಹೇಳುತ್ತಾಳೆ. ಭಗವಂತನನ್ನು ಸಮಾಧಾನದಿಂದ ಧ್ಯಾನಿಸುತ್ತಾ ಆತನ ಮಹಿಮೆಯನ್ನು ಹಾಡಿ ಹೊಗಳಿದ್ದಾಳೆ.

ನಾರಾಯಣ ನಿಮ್ಮ ನಾಮ ನಾಲಿಗೆಲಿರಲಿ ನಾರಾಯಣ
ಘೋರ ಪಾತಕವ ಹಾರಿ ಹೋಗುವುದಯ್ಯ ನಾರಾಯಣ ॥ ೧ ॥
ಎಷ್ಟೆಷ್ಟು ದುರಿತಗಳು ನಷ್ಟವಾಗಿ ಹೋಗುವವು ನಾರಾಯಣ
ಎಷ್ಟೋ ನಾಮದ ಬಿಡದೆ ನೆನೆಕಂಡ್ಯ ಮನವೆ ನಾರಾಯಣ[೬೮] ॥ ೨ ॥

೧೦೮ ನಾರಾಯಣ ನಾಮಾವಳಿಯನ್ನು ಒಳಗೊಂಡಿರುವ ಈ ಹಾಡಿನಲ್ಲಿ ವಿಷ್ಣುವಿನ ಮಹಿಮೆಗಳು, ಅವತಾರಗಳು, ದ್ವಿಪದಿಯಲ್ಲಿ ರಚನೆಗೊಂಡಿವೆ. ಭಗವದ್ದರ್ಶನದ ಸಂದರ್ಭದಲ್ಲಿ ಹೊರಹೊಮ್ಮಿದ ಶಾಂತ ಭಾವ ಹೆಚ್ಚು ಬಳಕೆಯಾಗಿದೆ. ತಿರುಪತಿಗೆ ಹೋದಾಗ ತಿಮ್ಮಪ್ಪನನ್ನು ಕುರಿತು ಹಾಡಿದ ಹಾಡಿನಲ್ಲಿ ಭಗವಂತನನ್ನು ಕಾಣುವಲ್ಲಿ ಧನ್ಯತಾಭಾವ ಅಡಗಿದೆ.

ಅಪ್ಪ ವೆಂಕೋಬನ ನೇತ್ರದಲ್ಲಿ ಪವಿತ್ರಳಾದೇನೋ. ಇಂದಿಗೆ
ತಪ್ಪುಗಳೆಲ್ಲ ನಿನಗರ್ಪಿಸುವೆ ನಾನೀಗ
ಒಪ್ಪಿಕೋಬೇಕು ತಿಮ್ಮಪ್ಪ ಕರುಣಾ ನಿಧಿಯೆ[೪೦]

ಭಗವಂತನನ್ನು ನಿಷ್ಕಲ್ಮಶ ಹೃದಯದಿಂದ ಆರಾಧಿಸಿದಾಗ ಉಂಟಾಗುವ ಧನ್ಯತಾಭಾವ, ಶಾಂತಭಾವದಲ್ಲಿ ಕೃತಿ ರಚನೆ ಮಾಡಲು ಪ್ರೇರಣೆ ನೀಡಿದೆ.

ಕಂಡು ಧನ್ಯನಾದೆ ನಂದ ತನಯನ ಕಣ್ಣಾರ
ಕಂಡು ಧನ್ಯನಾದೆ ನಂದತನಯನ
ಕಂಡು ಧನ್ಯನಾದೆ ದಣಿಯವೆನ್ನವೆರಡು ಕಂಗಳೀಗ
ತಿರುಗಿ ಪೋಗಲಾರೆ ತಿಮ್ಮಲಾಪುರೀಶ ದೊರೆಯ ಬಿಟ್ಟು[೪೧]

ಹರಪನಹಳ್ಳಿಯಿಂದ ಬಹಳ ಹತ್ತಿರವಿರುವ ತಿಮ್ಮಲಾಪುರದ ವೆಂಕಟೇಶ್ವರ ಮೂರ್ತಿಯನ್ನು ಕಂಡು ಧನ್ಯತಾಭಾವದಿಂದ ಹಾಡಿದ್ದಾಳೆ. ಹೀಗೆ ಪಂಚ ಭಾವಗಳಲ್ಲಿ ಹರಪನಹಳ್ಳಿ ಭೀಮವ್ವನ ವಿಚಾರ ಧಾರೆ ಹರಿದಿದೆ. ಭೀಮವ್ವ ಪಂಚ ಭಾವಗಳನ್ನು ಚೆನ್ನಾಗಿ ಬಳಸಿಕೊಂಡಿದ್ದಾಳೆ. ಈ ಭಾವಗಳನ್ನು ಬಳಸಿಕೊಂಡು ಭಗವಂತನ ಮಹಿಮೆಯನ್ನು ಹರಿಭಕ್ತಿಯನ್ನು ನಿರೂಪಿಸುವಲ್ಲಿ ಭೀಮವ್ವ ಎಲ್ಲಾ ದಾಸರಂತೆ ಭಕ್ತಿ ಇವಳ ರಚನೆಗಳ ಸ್ಥಾಯೀಭಾವ 'ಭೀಮೇಶ ಕೃಷ್ಣ' ಇವಳ ಅಂಕಿತನಾಮ ಭೀಮವ್ವ ಕೀರ್ತನೆ, ಸುಳಾದಿ, ಉಗಾಭೋಗಗಳನ್ನಷ್ಟೆ ಅಲ್ಲದೆ ೧೪೦ ಸಣ್ಣ ಹಾಡುಗಳನ್ನು ರಚಿಸಿದ್ದಾಳೆ. ನಳಚರಿತ್ರೆ, ಮುಯ್ಯದ ಹಾಡು, ಪತಿದಾನಕೊಟ್ಟ ಹಾಡು, ಶಕುಂತಲೆ ದುಷ್ಯಂತ ಮಹಾರಾಜನ ಹಾಡು, ರತಿ ಕಲ್ಯಾಣ, ಸುಭದ್ರಾಕಲ್ಯಾಣ ಮುಂತಾದ ದೊಡ್ಡ ಹಾಡುಗಳನ್ನು ರಚಿಸಿದ್ದಾಳೆ. ಈಕೆಯ ಕೃತಿಗಳಲ್ಲಿ ಕಥನಕಾವ್ಯಗಳೇ ಹೆಚ್ಚು ಇವುಗಳಿಗೆ ರಾಮಾಯಣ, ಮಹಾಭಾರತ ಮತ್ತು ಭಾಗವತಗಳಿಂದ ವಸ್ತುವನ್ನು ಆರಿಸಿಕೊಂಡಿದ್ದಾಳೆ. ಮಂಗಳಗೌರಿ, ವ್ರತ ಲಕ್ಷ್ಮೀದೇವಿ ಹಾಡು, ಜಲಕ್ರೀಡೆ ಹಾಡು, ಶನಿವಾರದ ಹಾಡು, ಶುಕ್ರವಾರದ ಹಾಡು, ಸ್ತುತಿಮಣಿಮಾಲಿಕೆ ಇವರ ದೀರ್ಘ ಹಾಡುಗಳು ಯಾವುದಾದರೂ ಒಂದು ಪುರಾಣ ಅಖ್ಯಾಯಿಕೆಯನ್ನು ಹಿಡಿದು ವಸ್ತುವನ್ನು ಸ್ವಪ್ರತಿಭೆಯಿಂದ ವಿಸ್ತರಿಕೊಂಡು ಹೋಗಿದ್ದಾಳೆ. ದ್ರೌಪದೀಯವಸ್ತ್ರಾಪಹರಣ ಪ್ರಸಂಗ ಅವಳ ಕಾವ್ಯದಲ್ಲಿ ಪ್ರಸಿದ್ಧವಾಗಿದೆ. ಹಾಗೆಯೆ ಭೀಮವ್ವನ ಕೀರ್ತನೆಗಳಲ್ಲಿ ಪಂಚವಿಧಭಾವ ವ್ಯಕ್ತಗೊಂಡಿದೆ. ಅದರಲ್ಲೂ ದಾಸ ಸಾಹಿತ್ಯದ ಪ್ರಧಾನ ಭಾವವಾಗಿರುವ ದಾಸ್ಯಭಾವ ಇವಳ ಕೀರ್ತನೆಗಳಲ್ಲಿ ಎದ್ದು ಕಾಣುತ್ತದೆ. ಹಾಗೆಯೇ ವಾತ್ಸಲ್ಯ ಭಾವವು ಇದೆ. ಅವ್ವ ನವರ ಹಾಡುಗಳಲ್ಲಿ ಲೋಕಾನುಭವವು ಗಾದೆಗಳ ರೂಪತಾಳಿ ಕಂಡು ಬರುತ್ತದೆ.

ಕೃಷ್ಣಲೀಲೆಗಳನ್ನು ಭೀಮವ್ವ ಇನ್ನೊಂದು ಹಾಡಿನಲ್ಲಿ ವರ್ಣಿಸಿದ್ದಾಳೆ. ಭೀಮವ್ವನ ಅಂತರಂಗದ ಪ್ರತಿಧ್ವನಿಯಂತಿರುವ ಕೆಳಗಿನ ಹಾಡಿನಲ್ಲಿ ಮಧುರ ಭಾವಗಳಿವೆ.

ಹರಿ ಹರಿ ಹರಿ ಎನ್ನದೆ ಈ ನಾಲಗಿ
ನ್ನಿರುವುದ್ಯಾತಕೆ ಸುಮ್ಮನೆ
ಸರಸಿಜಾಕ್ಷನ ದಿವ್ಯ ಸಾಸಿರನಾಮ ಬಿಟ್ಟು
ಪರರ ವಾರ್ತೆಲಾಸಕ್ತಿ ಪಾಮರನಾಗುವುದ್ಯಾಕೆ
ಕಲ್ಲು ಹಿಟ್ಟಾಗಿ ರಂಗವಾಲಿ ಎನಿಸುವುದು.......”

ಭೀಮವ್ವನ ಕೃತಿಗಳು ಕಥನ ಕಲೆ ಮತ್ತು ವರ್ಣನಾ ವೈವಿಧ್ಯದಿಂದ ಕೂಡಿ ಸರಳಶೈಲಿಯಿಂದ ಸಾಮಾನ್ಯ ಜನರನ್ನೂ ಆಕರ್ಷಿಸುತ್ತವೆ. ಕನ್ನಡದಲ್ಲಿ ಇಷ್ಟೊಂದು ಕೃತಿಗಳನ್ನು ರಚಿಸಿದ ಕವಯಿತ್ರಿಯರು ಬಹಳ ಕಡಿಮೆ ವಿರಳ ಅಥವಾ ಇಲ್ಲವೇ ಇಲ್ಲ ಎನ್ನಬಹುದು. ಕೃತಿಯ ವೈವಿಧ್ಯತೆಯ ದೃಷ್ಟಿಯಿಂದ ಭೀಮವ್ವ ಚಿರಸ್ಮರಣೀಯಳಾಗಿದ್ದಾಳೆ. ೧೮೨೨ರಿಂದ ೧೯೦೨ರ ವರೆಗೆ ಬಾಳಿದ ಭೀಮವ್ವ ಕನ್ನಡ ಜನಪ್ರಿಯ ಕವಯಿತ್ರಿಯರಲ್ಲಿ ಪ್ರಮುಖಳಾಗಿದ್ದಾಳೆ.

## ಓರುಬಾಯಿ ಲಕ್ಷ್ಮೀದೇವಮ್ಮ

ಬಳ್ಳಾರಿಯ ಲಕ್ಷ್ಮಣರಾಯ ಓರೆಬಾಯಿಯ ಮಗಳಾಗಿ ಜನಿಸಿದ ಲಕ್ಷ್ಮೀಬಾಯಿಯ ಕಾಲ ೧೮೬೪-೧೯೪೦ ತನ್ನ ಐದನೆಯ ವಯಸ್ಸಿನಲ್ಲಿ ಹತ್ತನೇ ವರ್ಷದ ಸೋದರಮಾವ ಮಧ್ವಾರಾಯನೊಂದಿಗೆ ವಿವಾಹವಾಯಿತು. ತಂದೆಯೇ ಈಕೆಗೆ ಸಂಸ್ಕೃತ ಕನ್ನಡ ಅಭ್ಯಾಸ ಮಾಡಿಸಿದರು. ತಾಯಿಯಿಂದ ಈಕೆಗೆ ನಿಯಮ ನಿಷ್ಠೆ ಸಾಂಪ್ರದಾಯಿಕ ಹಾಡುಗಳು ಮುಂತಾದ ಕಲೆಗಳು ಬಳುವಳಿಯಾಗಿ ಬಂದವು ಪತಿ ಮಧ್ವಾರಾಯರು ಬಳ್ಳಾರಿ, ಗುತ್ತಿ, ಆದವಾನಿಗಳಲ್ಲಿ ಸಂಪೂರ್ಣ ಸಹಕಾರ ನೀಡುತ್ತಿದ್ದರು. ಲಕ್ಷ್ಮೀದೇವಮ್ಮ ಮಣಿಮಂಜರಿ, ಸುಮಧ್ವ ವಿಜಯ ಮುಂತಾದ ಪ್ರಾಚೀನ ಗ್ರಂಥಗಳ ಪಠಣ ಮಾಡಿದಳು. ಉತ್ತರಾಧಿಮಠ, ರಾಯರ ಮಠ ಮತ್ತು ಸೋಂದೆ ಮಠಾಧೀಶರ ಪ್ರಭಾವ ಈಕೆಯ ಮೇಲೆ ಬೀರಿತು. ಅರ್ಥಹೀನ ನಂಬಿಕೆಗಳನ್ನು ಗೊಡ್ಡು ಸಂಪ್ರದಾಯಗಳನ್ನು ವಿರೋಧಿಸುತ್ತಾ ಗೃಹವೈದ್ಯ ಪದ್ಧತಿಯನ್ನು ಅರಿತಿದ್ದ ಈಕೆ ಬಡವರಿಗೆ ಉಚಿತ ಚಿಕಿತ್ಸೆಯನ್ನು ನೀಡುತ್ತಿದ್ದಳು.



೪೨ನೇ ವಯಸ್ಸಿನಲ್ಲಿ ಪತಿ ವಿಯೋಗದ ನಂತರ ಹರಿನಾಮಸ್ಮರಣೆಯೇ ಮುಖ್ಯವಾಯಿತು. ಬಳ್ಳಾರಿಗೆ ತಮ್ಮ ಕುಲದೇವರಾದ ನರಸಿಂಹ ದೇವರ ದೇವಾಲಯ ಕಟ್ಟಿಸಿ ದೇವತಾ ಪ್ರತಿಷ್ಠಾಪನೆ ಮಾಡಿಸಿ ಅಪಾರ ಖ್ಯಾತಿ ಪಡೆದರು ಮಠ ದೇಗುಲಗಳಿಗೆ ದಾನ ಧರ್ಮ ಮಾಡುತ್ತಾ ನೆಮ್ಮದಿ ಬದುಕು ಸಾಗಿಸಿ ಲಕ್ಷ್ಮೀದೆವಮ್ಮನವರು ೧೯೪೦ರಲ್ಲಿ ನಿಧನರಾದರು.

“ನರಸಿಂಹ ವಿಠಲ” ಅಂಕಿತದಿಂದ ಶುಕ್ರವಾರ, ಶನಿವಾರ, ಮಂಗಳಗೌರಿ ಹಾಡುಗಳಲ್ಲದೆ ರಾಯರ ಹಾಡು, ಸೌದಾಮಿನಿ ಹಾಡು, ವರಮಹಾಲಕ್ಷ್ಮೀ ಹಾಡು, ಜಲಕ್ರೀಡೆ, ಶನಿಮಹಾತ್ಮೆ,

ಸಕ್ಕೂಬಾಯಿ ಹಾಡುಗಳು, ಗೋಪಿಗೀತೆಗಳನ್ನು ರಚಿಸಿದ್ದಾಳೆ. ಮಹಾಬಲೇಶ್ವರ, ಮಲ್ಲಿಕಾರ್ಜುನ, ಪಾತಾಳಗಂಗೆ ವಾದಿರಾಜ ಭೂತರಾಜ, ತ್ರಿವಿಕ್ರಮ ದೇವ ಸ್ತೋತ್ರ ರಚಿಸಿದ್ದಾರೆ.

ಲಕ್ಷ್ಮೀದೇವಮ್ಮನವರ ಮನಸ್ಸು ಶಾಸ್ತ್ರಗಳ ಶ್ರವಣ, ಪಠಣ ಮನನಗಳಿಂದ ಹರಿತಗೊಂಡಿದ್ದು. ಉಪವಾಸ ಹರಿಗರುಗಳ ಮತ್ತು ಜನತಾ ಸೇವೆಯಿಂದ ಮನಸ್ಸು ಸಂಸ್ಕಾರಗೊಂಡಿತ್ತು. ಹರಿಗುರುಗಳ ವಿಶೇಷ ಅನುಗ್ರಹವಿತ್ತು ಕುಟುಂಬದವರ ಸಹಕಾರದೊಂದಿಗೆ ದೇವಾಲಯದ ನಿರ್ಮಾಣದ ನಂತರ ಆಕೆಯಲ್ಲಿ ಸುಪ್ತವಾಗಿದ್ದ ಕಾವ್ಯ ಪ್ರತಿಭೆ ಗಂಭೀರವಾಗಿ ಆಕೆಯ ಸಾಹಿತ್ಯ ಕಾವ್ಯವಾಗಿ ಮೂಡಿ ಬಂದಿತು. ಶುಕ್ರವಾರದ ಹಾಡು, ಶನಿವಾರದ ಹಾಡು, ಮಂಗಳಗೌರೀ ಹಾಡು, ಶ್ರೀಕೃಷ್ಣದಾನ ವ್ರತ ಚೇಳಿನ ಹಾಡು ಇತ್ಯಾದಿಗಳನ್ನು ರಚಿಸಿದ್ದಾರೆ. ಇವರಿಗಿಂತ ಮುಂಚೆ ಇದ್ದ ಭೀಮವ್ವನವರೂ ಸಹ ಈ ಹಾಡುಗಳನ್ನು ರಚಿಸಿದ್ದಾರೆ. ಅಂದರೆ ಲಕ್ಷ್ಮೀದೇವಮ್ಮನವರ ಕೀರ್ತನೆಗಳ ವಿಷಯ ಒಂದೇ ಆದರೂ ನಿರೂಪಣೆ ಮತ್ತು ಶೈಲಿಗಳಲ್ಲಿ ಭಿನ್ನತೆಯಿದೆ. ಬಳ್ಳಾರಿಯ ಕನ್ನಡದ ಗಡಸುತನದ ಸೊಗಡಿದೆ. ಅನೇಕ ತೆಲಗು ಶಬ್ದಗಳ ಕನ್ನಡ ಶಬ್ದಗಳೊಂದಿಗೆ ಬೆರೆತಿವೆ. ಪ್ರಾದೇಶಿಕ ಭಾಷೆಯಾಗಿ ನೇರ ಹೃದಯವನ್ನು ತಟ್ಟುವ ಸಾತ್ವಿಕ ಶಕ್ತಿ ಹೊಂದಿದೆ.

ಲಕ್ಷ್ಮೀದೇವಮ್ಮನವರು ಹುಟ್ಟಿದುದು ಬಳ್ಳಾರಿ ಪ್ರದೇಶವಾದ ಸೊಂಡೂರಿನಲ್ಲಾದರೂ ಬಾಲ್ಯದ ನಂತರದ ಅವರ ಜೀವನವೆಲ್ಲಾ ಕಳೆದದ್ದು ಗುತ್ತಿ, ಆದವಾನಿ, ಬಳ್ಳಾರಿಗಳಲ್ಲಿ ಕಳೆಯಿತು. ಅದು ಆಗ ನೆರೆಯ ಆಂಧ್ರಪ್ರದೇಶಕ್ಕೆ ಸೇರಿದ್ದುದು ಹೀಗಾಗಿ ಆಡುಭಾಷೆ ಕನ್ನಡವಾದರೂ ಅಲ್ಲಿನ ಜನರು ಬರೆಯಲಿಕ್ಕೆ ಬಳಸುವ ಲಿಪಿ, ತೆಲುಗು. ಹೀಗಾಗಿ ನಾವು ಅವ್ವನವರ ಕೃತಿಗಳಲ್ಲಿ ಬಳ್ಳಾರಿಯಲ್ಲಿ ದೇಶೀಯ ಕನ್ನಡವನ್ನೂ ಮತ್ತು ನೆರೆಯ ಪ್ರಾಂತದ ತೆಲಗನ್ನೂ ಕಾಣುತ್ತೇವೆ.

ಅವರು ಅನೇಕ ಸಂಸ್ಕೃತ ಹಾಗೂ ಕನ್ನಡ ಗ್ರಂಥಗಳನ್ನು ಅಭ್ಯಸಿಸಿದ್ದುದಲ್ಲದೆ ಅವರ ಮನೆಗೆ ಬರುತ್ತಿದ್ದ ಅನೇಕ ಘನ ವಿದ್ವಾಂಸರ ಪುರಾಣ ಉಪನ್ಯಾಸ, ಕಾವ್ಯವಾಚನ ಇತ್ಯಾದಿಗಳಿಂದ ಭಾರತ ಭಾಗವತ ರಾಮಾಯಣ ಹಾಗೂ ಶಾಸ್ತ್ರಗ್ರಂಥಗಳ ಪರಿಚಯ ಚೆನ್ನಾಗಿ ಆಗಿದ್ದಿತು. ಸ್ವಂತಃ ಕವಿ ಹೃದಯದವರೂ, ಧರ್ಮಾನುಷ್ಠಾನ ಶೀಲರೂ ಆಗಿದ್ದ ಈ ಸಾಧ್ವೀಮಣಿಯ ಅಂತರಾಳದಿಂದ ಸಾಹಿತ್ಯ ಹೊರ ಹೊಮ್ಮಲು ಒಬ್ಬ ಅನುಭಾವಿಗೆ ಬೇಕಾದ ಯೋಗ್ಯ ಪರಿಸರ, ಮಾರ್ಗದರ್ಶನ ಉತ್ತೇಜನಗಳು ದೊರಕಿ ಆಕೆಯ ಭಾವನೆಗಳು ಕಾವ್ಯವಾಗಿ ಕಥನ ಕಾವ್ಯವಾಗಿ ಬಿಡಿ ನುಡಿಯಾಗಿ ಅಪ್ಪಟ ಆಡುಮಾತಿನಲ್ಲಿ ಮೂಡಿ ಬಂದವು. ಅವರ ಒಂದೊಂದು ಕೃತಿಯೂ ಆದಿ ಪ್ರಾಸ, ಯತಿ, ಗಣ, ಮಾತ್ರೆ, ಸಾಂಗತ್ಯ, ರಗಳೆ ಇವುಗಳಿಂದ ಕೂಡಿದೆ. ಅವುಗಳಲ್ಲಿಯ ಪ್ರಕೃತಿ ವರ್ಣನೆ, ಶೃಂಗಾರ, ವಿಪ್ರಲಂಬ ಶೃಂಗಾರ ವೀರ, ಶೋಕ, ಕರುಣ, ಇತ್ಯಾದಿ ರಸಗಳು ಚೇತೋಹಾರಿಯಾಗಿವೆ. ಉಪಮೆ ಶ್ಲೇಷಾಲಂಕಾರಗಳು ಲಕ್ಷ್ಮೀದೇವಮ್ಮನವರಲ್ಲಿ ಹೇರಳವಾಗಿ ಕಂಡುಬರುತ್ತವೆ.

ಉಪ್ಪರಿಗ್ಹೋಯಿತು ತಿಪ್ಪಿ ಕುಣಿಯಾಯಿತು.
ಕಪ್ಪಕಾಸುಗಳೆಲ್ಲ ಕಳೆದ್ಹೋಯಿತು.
ಕಪ್ಪಾಯಿತು ದೇಹ ಕಂದಿ ಕುಂದ್ಹೋಯಿತು.
ಒಪ್ಪಿತು ಗಾಜಿನ ಬಳೆಯ ಕೈಯ
ರಾಮನ ಕಾಣದೆ ಪ್ರಾಣ ಆಹುತಿಗಳು
ನೇಮದಿ ತಕ್ಕೊಳ ಬ್ಯಾಡವೆಂದ
ಸೀಮಿಯ ಬಿಟ್ಟು ಹೊರಗ ಹೊರಡು ಎಂದು
ಭೀಮ ಘರ್ಜನೆಯಿಂದ ನುಡಿದನಾಗ[೪೨]

ಶ್ರೀ ರಾಮದೇವರ ಕಥೆಯಿಂದ ತೆಗೆದುಕೊಂಡ ಈ ಸಾಲುಗಳಲ್ಲಿ ಕಾಣುವ ಆದಿಪ್ರಾಸ ಕೃತಿಯ ಎಂಭತ್ತೆರಡು ನುಡಿಗಳಲ್ಲೂ ಕಂಡು ಬರುತ್ತದೆ.

ಅಂತ್ಯಪ್ರಾಸ, ಶಬ್ದಾಲಂಕಾರಗಳಲ್ಲಿ ಮೆರೆಯುವ ರಗಳೆಯನ್ನೂ ಅದರಲ್ಲಿ ಅಡಕವಾಗಿರುವ ಶೃಂಗಾರವನ್ನೂ 'ಗೊಲ್ಲತಿ ಹಾಡಿ' ನಲ್ಲಿ ನೋಡಬಹುದು.

ಗೋಕುಲದಲ್ಲಿದ್ದ ಗೊಲ್ಲತಿ ಹುಡುಗಿಯೊಬ್ಬಳು ಶ್ರೀಕೃಷ್ಣನನ್ನು ನೋಡಿರುವುದೇ ಇಲ್ಲದ ಕಾರಣ ಅವಳ ಅತ್ತೆ ಅವಳನ್ನು ಮೊಸರು ಮಾರಲು ಹೊರಗೆ ಕಳಿಸಿರುವುದಿಲ್ಲ ಶ್ರೀಕೃಷ್ಣನ ಭಯ ಅವಳಿಗೆ, ಶ್ರೀಕೃಷ್ಣ ತನ್ನ ಸೊಸೆಯನ್ನು ಬುಟ್ಟಿಯಲ್ಲಿ ಹಾಕಿಕೊಳ್ಳುತ್ತಾನೆಂದು ಸೊಸೆಯಾದರೋ ತನ್ನ ಓರಗೆಯವರಿಂದ ಶ್ರೀ ಕೃಷ್ಣನ ರೂಪ ಸೌಂದರ್ಯಗಳನ್ನು, ಲೀಲೆಗಳನ್ನೂ ಕೇಳಿರುತ್ತಾಳೆ. ತಾನೇನೂ ಅವನಿಗೆ ಮರುಳಾಗುವಷ್ಟು ಹೇಡಿಯಲ್ಲ. ಇದೊಂದು ದಿನ ಹೋಗಿ ನೋಡಿ ಬರುತ್ತೇನೆ ಎಂದು ಅತ್ತೆಯನ್ನು ರಮಿಸಿ ಹೊರಡುತ್ತಾಳೆ.

ಶೃಂಗಾರವಾದಳು ನಾರಿ, ಗೊಲ್ಲತಿ ಸುಂದರಿ
ಶೃಂಗಾರವಾದಳು ಮಂಗಳ ಮುಖಿಯೆ ಅಂಗನೆ ತಾನೆ ಜಡೆಗಳ ಬಿಗಿಯೆ
ಛಂದದಿ ಜಡೆ ಭಂಗಾರಗಳ್ಹೆಣೆಯೆ ಮುಂಗುರುಳಲಿ
                ಚಂದ್ರ ಸೂರ್ಯರು ಹೊಳಿಯೆ
ಅಂಗನೆ ರಂಗನ ಮುಂಗೈ ಗಿಣಿಯೆ
ವಾಲಿ ಬುಗುಡಿ ವಾರಿಜಾಕ್ಷಿಯ ಇಟ್ಟು ತೋರ
                ಮುತ್ತಿನ ಮೂಗುತಿಯಿಟ್ಟು
ಚಾರುಕಂಚುಕ ಬಿಗಿ ಬಿಗಿ ತೊಟ್ಟು ಹಾರ
                ಪದಕವು ಕೊರಳೊಳಗಿಟ್ಟು

ಬಾರಿ ಬಾರಿಗೆ ಪೊಗಳುವುದೆಷ್ಟು.
ವಜ್ರದ ಹಸ್ತ ಕಡಗವನಿಟ್ಟು ಭರ್ಜರಿ ಪಿತಾಂಬರವುಟ್ಟು
ಗೆಜ್ಜೆ ಅಂದಿಗೆ ಪಾದದೊಳಿಟ್ಟು ಹೆಜ್ಜೆ ಹೆಜ್ಜೆಗೆ ಆ ಶಬ್ದಗಳೆಷ್ಟು
ಸಜ್ಜನ ಪ್ರಿಯ ನಮ್ಮ ನರಸಿಂಹವಿಠಲನ
ಕೂಡುವ ತ್ವರಿತದಿ ಎಂಬುವ ಗುಟ್ಟು"[೪]

ಜಲಕ್ರೀಡೆಗೆ ಬಂದ ಗೋಪಿಕನ್ನಿಕೆಯರು ಸುತ್ತಲಿನ ವನಗಳಲ್ಲಿ ಆಟವಾಡುತ್ತಾರೆ. ಆ ವನದ ವರ್ಣನೆ ಹೀಗಿದೆ.

"ನೋಡಿದ್ಯಾ ಸಖೀ ಕೂಡಿ ಆಡುವಾ ವನಗಳಾ"
ಭಂಗ ಗಿಳಿ ಸಾರಂಗ, ಮಾತಂಗ, ನೋಡಿದೇ ವಿಹಂಗ
ಕೂರಂಗ ಶಿಂಗಗಳ ನೋಡಿದ್ಯಾ
ಶಿಸ್ತಿಲ ಆಡುವಾ ಕಸ್ತೂರಿ ಮೃಗಗಳು
ಜತ್ತಿಲಿ ಸ್ವರವೆತ್ತಿ ಕೂಗುವೋ ಗಿಳಿಗಳು.
ಥಳಥಳಿಸುವಾ ಮಯೂರಿ ಪಿಕಗಳು
ಜಳಪಿಸಿ ಹಾಡುವ ಕೋಕಿಲ ಸ್ವರಗಳು
ಕೇತಕೀ ಕ್ಯಾದಿಗೀ ಕಮಲ ಕುಸುಮ ನೋಡಿದ್ಯಾ
ನೂತನವಾಗಿದ್ದ ಪಾರಿಜಾತವ ನೋಡಿದ್ಯಾ
ಮರುಗ ಜಾಜೀ ಮಲ್ಲಿಗಿ ಇರುವಂತಿಗಿ ದವನಾ
ಸುರಗಿ ಸಂಪಗಿಯಿಂದ ತೋರ್‍ವದೀವನಾ
ಭ್ರಮರ ಗೀತಗಳಿಂದ ಮನವು ಭ್ರಾಂತಿಗೊಳ್ಳುದು
ಅಮರ ವಂದಿತನಿಂದ ಕೂಡಿ ಅಚ್ಚ ಸ್ಥಳವಿದು
ಪರಮ ಪುರುಷ ನರಸಿಂಹ ವಿಠಲರಾಯನ
ಪಾದ ಧೂಳಿಗಳಿಂದ ಶೋಭಿತವಾಗಿದೀವನ"[೫]

ಯಮುನಾ ನದಿಯ ವರ್ಣನೆ ಈ ರೀತಿ ಬಂದಿದೆ.

ಹರಿವೋ ಜಲಗಳ ನೋಡೇ ವರ ಮೋಹನಾರಿಗಿನಿ
ನವರತ್ನ ಖಚಿತ ಸೋಪಾನಗಳಿಂದ ಮುಚ್ಚಿ ಮೊಸಳೆ
ಕೂಮಗಳು ಸ್ಥಬ್ಧ ಜಲ ಕುಕ್ಕುಟವು ಸ್ವೇಚ್ಛ ಆಡುವುದು

ಪಚ್ಚ ನೀಲಗಳ ಅಚ್ಚ ಯಮುನಿಯ ನೀರಾ
ಅಚ್ಯುತಾನಂದ ಹರಿ ಮೆಚ್ಚವಾ ಸ್ಥಳವೂ
ಜಲ ಜಂತುಗಳಿಂದ ಜಳ ಜಳಿಸುವ ಜಲವೂ
ನಳಿನಾಕ್ಷಿ ನೋಡೆ ಈ ಮಳಲ ಶೃಂಗಾರವೂ
ತೆತ್ತಿಸ ಕೋಟಿ ದೇವತ್ಯಾರೆಲ್ಲ ಅತ್ಯಂತ ಹರುಷದ ಆಡುವ ಸ್ಥಳವೂ"[೬]

ಲಕ್ಷ್ಮೀದೇವಮ್ಮನವರ ರಚನೆಗಳೆಲ್ಲಾ ಸಾಹಿತ್ಯಕ ದೃಷ್ಟಿಯಿಂದ ನೋಡಿದಾಗ ಸರಳವಾದ ಆಡುಭಾಷೆಯಲ್ಲಿರುವ ಈಕೆಯ ಕೃತಿಗಳು ನೇರವಾಗಿ ಹೃದಯವನ್ನು ತಟ್ಟುತ್ತವೆ. ಭಾಷೆಯಲ್ಲಿ

ಸರಳತೆಯಿದೆ ಬೆಡಗಿದೆ. ಸರಾಗವಾಗಿ ಓದಿಸಿಕೊಳ್ಳುತ್ತದೆ. ನೇರ ನಿರೂಪಣೆಯಿಂದ ಸುಲಭ ಗ್ರಾಹ್ಯವಾಗಿದೆ. ಭಾವುಕತೆಯಿಂದ ಕೂಡಿರುವ ಶೈಲಿಯಲ್ಲಿ ಭಕ್ತಿಯ ಉದ್ದೀಪನವಿದೆ. ಅರ್ಹತೆಯಿಂದ ಸಮರ್ಪಣ ಭಾವವಿದೆ. ಓರುಬಾಯಿ ಲಕ್ಷ್ಮೀದೇವಮ್ಮನವರು ಹೆಳವನಕಟ್ಟೆಗಿರಿಯಮ್ಮ ಹರಪನಹಳ್ಳಿ ಭೀಮವ್ವನವರ ಸಾಲಿನಲ್ಲಿ ನಿಲ್ಲುತ್ತಾಳೆ.

ಜನಕ್ರೀಡೆ ಹಾಡಿನಲ್ಲಿ ಸ್ತ್ರೀಯರ ಮನೋಸ್ಥಿತಿಯನ್ನು ತೆರೆದಿಡುವ ಪರಿ ವಿಶಿಷ್ಟವಾದುದು. ಗೋಪಿಕಾ ಸ್ತ್ರೀಯರು ಜಲ ಕ್ರೀಡೆಯಲ್ಲಿ ಮುಳುಗಿರುವಾಗಿ ಬಾಲಕೃಷ್ಣ ಅವರ ಸೀರೆಗಳನ್ನು ಹೊತ್ತೊಯ್ದ ಚಿತ್ರಣವನ್ನು ಕಾಣಬಹುದು.

"ಲೆಕ್ಕವಿಲ್ಲದೆ ವಸ್ತ್ರ ಇಕ್ಕೋ ಇಟ್ಟೀವಲ್ಲೆ
ಅಕ್ಕ ನೀ ನೋಡೆ ಇಲ್ಲೆ ದಿಕ್ಕು ತೋರದಲ್ಲೇ
ಸುಳಿಗಾಳಿಗಳಿಂದ ಬಳಲುತಿಹುದು ದೇಹ
ಸುರಿವೋದು ಮೈ ನೀರ ತಿಳಿವೋದಿನ್ನಾರ
ವಬ್ಬರನು ನೋಡಲಿಲ್ಲ ಕೋಟಿ ನಿಂದಾಡಿದೆಯಲ್ಲೆ
ಹಬ್ಬದ ಸೀರೆಗಳೆಲ್ಲೆ ಅಬ್ಬರ ತೋರುವುದರಲ್ಲಿ
ಏನು ಮೋಸವಾಯಿತಲ್ಲ ಶ್ರೀನಿವಾಸ ತಾನೇ ಬಲ್ಲ
ಮಾನ ಹೀನವಾಯಿತಲ್ಲ ಏನು ಮಾಡುವ ಆಹಾ
ಇಷ್ಟು ಜನರೊಳು ಮಾನ ಭ್ರಷ್ಟರಾದ ಮೇಲೆ ಇನ್ನು
ಸುಟ್ಟು ಜೀವ ಯಾತಕಿನ್ನು ಬಿಟ್ಟು ಪೋಗುವ ಆಹಾ"

ನೀರಿನಲ್ಲಿ ಮುಳುಗಿ ಎದ್ದು ದಡಕ್ಕೆ ಬಂದಾಗ ತಮ್ಮ ವಸ್ತ್ರಗಳೆಲ್ಲ ಮಾಯವಾಗಿರುವುದ ಕಂಡು ಪರಿತಪಿಸುವ ಹೆಂಗಳೆಯರ ಮನಸ್ಥಿತಿ ಇಲ್ಲಿ ಚಿತ್ರಿತಗೊಂಡಿದೆ. ತಾವು ಯಾರನ್ನು ನಿಂದನೆ ಮಾಡಿದೆವೆಯೋ ಅತ್ತೆ ಮಾವಂದಿರು ಕೊಟ್ಟ ಸೀರೆಯಿತ್ತಲೇ ಎಂದು ಸಖೀಯರಲ್ಲೇ ತಮ್ಮನ್ನು ಶಪಿಸಿಕೊಳ್ಳುತ್ತಾ ಪೇಚಾಡುವುದು ಸೊಗಸಾಗಿ ಮೂಡಿ ಬಂದಿದೆ. ಮಹಿಳೆಗೆ ಶೀಲವೇ ಮುಖ್ಯ ಎಂಬುದಕ್ಕೆ ಪೂರಕವಾಗಿ ಇಷ್ಟು ಜನರೊಳು ಮಾನ ಭ್ರಷ್ಟರಾದ ಮೇಲೆ ಇನ್ನು ಜೀವನ ಯಾತಕಿನ್ನು ಬಿಟ್ಟು ಹೋಗುವ ಆಹಾ ಎನ್ನುವ ಸಾಲುಗಳು ಮಾನಕ್ಕೆ ಅವರು ನೀಡಿದ ಮಹತ್ವವನ್ನು ಎತ್ತಿ ತೋರಿಸುತ್ತದೆ. ಓರುಬಾಯಿ ಲಕ್ಷ್ಮೀದೇವಮ್ಮನವರು ಹರಪನಹಳ್ಳಿ ಭೀಮವ್ವನವರ ಪ್ರಭಾವಕ್ಕೆ ಒಳಗಾಗಿದ್ದರು ಎನ್ನುವುದಕ್ಕೆ 'ಜಲಕ್ರೀಡೆ ಹಾಡು' ಸ್ಪಷ್ಟ ನಿದರ್ಶನವಾಗಿದೆ.

### ಅಂಬಾಬಾಯಿ(೧೯೦೨-೧೯೬೫)

ಗೋಪಾಲದಾಸ, ಜಗನ್ನಾಥದಾಸ, ಮೋಹನದಾಸ ಪಂಗನಾಮದ ತಿಮ್ಮಣ್ಣದಾಸರ ನಂತರ ಇವರ ಶಿಷ್ಯ ಪ್ರಶಿಷ್ಯರ ಮೂಲಕ ಮುಂದುವರೆದ ದಾಸಕೂಟದ ಚಟುವಟಿಕೆಗಳ ೧೯ ಮತ್ತು ೨೦ನೆಯ

ಶತಮಾನಗಳಲ್ಲಿ ಹಳೆಯ ಮೈಸೂರು ಪ್ರಾಂತ್ಯದಲ್ಲಿಯೂ ನೆಲೆಯನ್ನು ಕಂಡುಕೊಂಡಿತು. ಜಯೇಶ ವಿಠಲರು, ಗುರುರಾಮ ವಿಠಲರು, ಮುದ್ದುಮೋಹನ ದಾಸರು, ತಂದೆ ಮುದ್ದುಮೋಹನದಾಸರು ಇವರ ಮೂಲಕ ದಾಸಕೂಟದ ಚಟುವಟಿಕೆಗಳು ಬೆಳೆದು ಬಂದವು ಅದರಲ್ಲೂ ತಂದೆ ಮುದ್ದುಮೋಹನದಾಸರು ಸಾವಿರಕ್ಕೂ ಹೆಚ್ಚು ಮಂದಿ ಶಿಷ್ಯರಿಗೆ ಅಂಕಿತಗಳನ್ನು ನೀಡಿ ಅವರೆಲ್ಲರನ್ನು ದಾಸಮಾರ್ಗದಲ್ಲಿ ಪ್ರವೃತ್ತರಾಗುವಂತೆ ಪ್ರೇರೇಪಿಸಿದರು.

ತಂದೆ ಮುದ್ದುಮೋಹನದಾಸರಿಂದ ಅಂಕಿತ ಪಡೆದವರೆಲ್ಲರೂ ಕೀರ್ತನೆಗಳನ್ನು ರಚಿಸದಿದ್ದರೂ ಹರಿದಾಸರು ಹಾಕಿಕೊಟ್ಟ ಹಾದಿಯಲ್ಲಿ ಭಕ್ತಿಪಂಥವನ್ನು ಬೆಳೆಸಿದರು. ಕೆಲವರು ಕೀರ್ತನೆ, ಸುಳಾದಿ, ಉಗಾಭೋಗ, ಖಂಡಕಾವ್ಯಗಳು ಇತ್ಯಾದಿಗಳ ರಚನೆಯ ಮೂಲಕ ಹರಿದಾಸ ಪರಂಪರೆಯನ್ನು ಮುಂದುವರೆಸಿದರು. ಬಾಗೇಪಲ್ಲಿ ಶೇಷದಾಸರು ರಮಾಕಾಂತವಿಠಲರು, ರಂಗೇಶವಿಠಲರು, ನಿತ್ಯಾನಂದ ವಿಠಲರು, ಉರಗಾದ್ರಿವಿಠಲರು, ಗುರುಗೋವಿಂದ ವಿಠಲದಾಸರು ಮೊದಲಾದವರು ಕೀರ್ತನೆಗಳಲ್ಲಿ ಭಕ್ತಿಸಾಹಿತ್ಯವನ್ನು ರಚಿಸಿ ದಾಸಕೂಟವನ್ನು ಪುನರುಜ್ಜೀವನಗೊಳಿಸಲು ಪ್ರಯತ್ನಿಸಿದರು.

ತಂದೆ ಮುದ್ದುಮೋಹನದಾಸರಿಂದ ಅಂಕಿತ ಪಡೆದವರಲ್ಲಿ ಹಲವಾರು ಮಂದಿ ಮಹಿಳೆಯರಿದ್ದಾರೆ. ಹರಿದಾಸ ಸಾಹಿತ್ಯವನ್ನು ಗಂಭೀರವಾಗಿ ಪರಿಗಣಿಸಿ ಕೃತಿ ರಚನೆ ಮಾಡುವುದರ ಮೂಲಕ ಗಮನ ಸೆಳೆದ ದಾಸ ಸಾಹಿತ್ಯ ಮತ್ತೊಂದು ಮೇರು ಪ್ರತಿಭೆ ಶ್ರೀಮತಿ ಅಂಬಾಬಾಯಿಯವರು ತಂದೆ ಮುದ್ದುಮೋಹನದಾಸರ ಶಿಷ್ಯೆಯಾದ ಇವರು ರಚಿಸಿರುವ ಕೀರ್ತನ ಸಾಹಿತ್ಯ ಗುಣಗಾತ್ರದಲ್ಲೂ ಮೌಲ್ಯಯುತವಾಗಿದ್ದು ಮಹಿಳಾ ಸಾಹಿತ್ಯದಲ್ಲಿ ಉಲ್ಲೇಖನೀಯವಾಗಿರುವುದನ್ನು ಗಮನಿಸಬಹುದು.

ಅಂಬಾಬಾಯಿಯವರ ಜನ್ಮಸ್ಥಳ ಚಿತ್ರದುರ್ಗ. ಅವರು 'ಅನಂತಪದ್ಮನಾಭ' ಕಥಾಸಾರ ಎಂಬ ಹಾಡಿನಲ್ಲಿ 'ಧರೆಯೊಳಗೆ ಪುಟ್ಟಿ ಮುವ್ವತ್ತಾರು ಸಂವಸ್ತರವು ಸರಿದುದಿ ಬಹುಧಾನ್ಯಕೆ' ಎಂದು ತಿಳಿಸಿ ಅವರ ಜನ್ಮದಿನ ಶೋಬನಕೃತು ಸಂವಸ್ತರದ ಕಾರ್ತೀಕ ಶುದ್ದ ದಶಮಿ (೧೯೦೨) ಎಂದು ಖಚಿತವಾಗಿ ಹೇಳಬಹುದು. ಅಂಬಾಬಾಯಿಯವರ ತಂದೆ ಭೀಮಸೇನರಾಯರು ತಾಯಿ ಭಾರತೀಬಾಯಿ (ವೆಂಕಮ್ಮ) ಆ ಕಾಲದಲ್ಲಿ ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಯಾವುದೇ ರೀತಿಯ ಪ್ರೋತ್ಸಾಹವಿಲ್ಲದ ಕಾರಣ ಭೀಮಸೇನರಾಯರು ಮಗಳಿಗೆ ೨,೪ ನೆಯ ತರಗತಿಯ ವಿದ್ಯಾಭ್ಯಾಸವನ್ನು ನೀಡಿದರು. ಬಾಲ್ಯದಲ್ಲಿಯೇ ಅಂಬಾಬಾಯಿಯವರಿಗೆ ಗೋಪಾಲಪುರದ ಹನುಮಂತಾಚಾರ್ಯ ಎಂಬ ಬಾಲಕನೊಂದಿಗೆ ವಿವಾಹವಾಯಿತು. ೧೨ನೆಯ ವಯಸ್ಸಿನಲ್ಲಿಯೆ ಗಂಡನ ಮನೆಗೆ ಬಂದ ಅಂಬಾಬಾಯಿಯ ಬದುಕು ಅಷ್ಟೇನೂ ಸುಗಮವಾಗಿರದೆ ಊರಿಗೆ ಬಂದ ಪ್ಲೇಗಿಗೆ ಬಲಿಯಾದ ಆಕೆ ಒಂದೇ ದಿನ ಗಂಡನನ್ನು ತಂದೆಯನ್ನು ಕಳೆದುಕೊಂಡಳು. ಬಾಲ್ಯದಲ್ಲಿಯೇ ವಿಧವೆಯಾದ ಅಂಬಾಬಾಯವರು ತಂದೆಯನ್ನೂ ಕಳೆದುಕೊಂಡು ಅನೇಕ ರೀತಿಯ ಕಷ್ಟಗಳನ್ನು ಎದುರಿಸಬೇಕಾಯಿತು. ಅನಂತರ ತಂಗಿಯ ಮನೆಯಲ್ಲಿ ಹದಿನಾರು ವರ್ಷಗಳ ಕಾಲ

ಕಳೆದರು.  ಮನೆಗೆಲಸ, ಮಕ್ಕಳ ಆರೈಕೆ ಇವುಗಳ ಜೊತೆಯಲ್ಲೇ ಧಾರ್ಮಿಕ ಪ್ರವೃತ್ತಿಯನ್ನು ಬೆಳೆಸಿಕೊಂಡು ಪೂಜೆ, ವ್ರತ, ಉಪವಾಸ, ಪಾರಾಯಣ, ಅಧ್ಯಯನ ಇವುಗಳಿಂದ ಕಷ್ಟಗಳನ್ನು ಮರೆಯುವ ಪ್ರವೃತ್ತಿಯನ್ನು ಬೆಳೆಸಿಕೊಂಡ ಇದೇ ಸಂದರ್ಭದಲ್ಲಿ ತಂದೆ ಮುದ್ದುಮೋಹನದಾಸರಿಂದ ೧೯೩೧ರಲ್ಲಿ ಅಂಬಾಬಾಯಿಯವರು 'ಗೋಪಾಲಕೃಷ್ಣ ವಿಠಲ' ಎಂಬ ಅಂಕಿತವನ್ನು ಪಡೆದು ಹರಿದಾಸರಾದರು. ಗುರುಗಳಿಂದ ಅಂಕಿತ ಪಡೆದು ಹರಿದಾಸರಾದ ಮೇಲೆ 'ದೇಹ ಮೋಹ ದೂರವಾಯಿತು'.  ಭೋಗದಲ್ಲಿ ವೈರಾಗ್ಯ ಮೂಡಿತು.  ಇಂದು ನಾಳೆಗೆ ಎಂಬ ಮಂದ ಬುದ್ಧಿಯನ್ನು ಬಿಟ್ಟು ಬಂದದ್ದರಿಂದ ಆನಂದಿಸುತ್ತ ಹರಿದಾಸರಿಗೆ ಉಚಿತವಾದ ಧರ್ಮಕಾರ್ಯಗಳ ಆಚರಣೆ, ವಚನದಲ್ಲಿ ಹರಿಯನಾಮ, ಶುಚಿಯಾದ ಜೀವನ, ನಿರಂತರವಾದ ಸಂಚಾರ, ಕೃತಿರಚನೆ, ಭಜನೆ ಇವು ಅಂಬಾಬಾಯಿಯವರ ಬದುಕಿನ ಅವಿಬಾಜ್ಯ ಭಾಗಗಳಾದವು.  ತಮ್ಮ ಜೀವನದಲ್ಲಿ ಕಳೆದುಕೊಂಡ ಲೌಕಿಕ ಸುಖವನ್ನು ಆಧ್ಯಾತ್ಮಿಕ ಹಾಗೂ ಪಾರಮಾರ್ಥಿಕ ಸಾಧನೆಯಿಂದ ಪಡೆದುಕೊಳ್ಳಲು ಪ್ರಯತ್ನಿಸಿದರು.

ದಾಸರೆಂದು ಕರೆದ ಮಾತ್ರದಿ| ಈಗ ಎಮ್ಮ  
ದೋಷರಾಶಿ ನಾಶವಾಯಿತು.  
..............................  
..............................  
ದಾಸ ತನಕೆ ಅಧಿಕ ವಿಲ್ಲವು| ಸಾದನವು  
ದಾಸ ತನವು ಗರ್ವ ವಳಿವಳಿವುದು  
ದಾಸ ದಾಸ ದಾಸ ನಿನಗೆ  
ವಾಸುದೇವ ಸಲಹೊ ಎನಲು  
ದೋಷನಾಶಗೈಸಿ ಹರಿಯು  
ದಾಸ ಜನರ ಕಾಯ್ದ ದಯದಿ

ಅಷ್ಟು ಭಾಗ್ಯಕಧಿಕ ಲಾಭವು| ರಾಸತನವು  
ಶ್ರೇಷ್ಠ ಗುರುಗಳಿಂದ ದೊರಕಿತು  
ಇಷ್ಟವೆನಗೆ ದಾಸಪೆಸರು  
ಶಿಷ್ಯರೆಲ್ಲ ಕರೆಯಲೀಗ  
ತುಷ್ಟಿಪಡುವೆ ಶ್ರೀ ಗೋಪಾಲ  
ಕೃಷ್ಣ ವಿಠಲ ಸಲಹೊ ಎಂದು[೬]

ಹೀಗೆ ಅಂಬಾಬಾಯಿಯವರು ತಾಳ ತಂಬೂರಿಗಳನ್ನು ಹಿಡಿದು ಜೋಳಿಗೆ ಹಾಕಿಕೊಂಡು ಕಾಲಿಗೆ ಗೆಜ್ಜೆಕಟ್ಟಿ ಹರಿದಾಸ ದೀಕ್ಷೆಯನ್ನು ಸ್ವೀಕರಿಸಿದರು.  ತಮ್ಮ ಬದುಕಿಗೆ ತಾವೇ ಕಟ್ಟು ಪಾಡುಗಳನ್ನು

ಹಾಕಿಕೊಂಡರು. ಗುರು ಸೇವೆಯನ್ನು ಇಚ್ಛೆಯಿಂದ ಮಾಡಬೇಕು. ತುಚ್ಛ ಮಾತುಗಳಿಗೆ ಮನ ಕೊಡದೆ ವಂದನೆ, ನಿಂದನೆಗಳನ್ನು ಒಂದಾಗಿ ಭಾವಿಸಬೇಕು. ಮಂದರಂತೆ ಮನುಜರಿಗೆ ಕಾಣಬೇಕು ಚಿಂತೆಯು ನಳಿಯಬೇಕು. ಈ ಸ್ಪಷ್ಟ ಧ್ಯೇಯಗಳೊಂದಿಗೆ ಹರಿದಾಸ ವೃತ್ತಿ ಕೈಗೊಂಡು ಲೌಕಿಕ ಆಸಕ್ತಿಗಳು ಮತ್ತು ಸ್ವಾರ್ಥದಿಂದ ಸಂಪೂರ್ಣ ದೂರವಾಗಿ ವಿರಕ್ತಿ ಹೊಂದಿದ ಅಂಬಾಬಾಯಿಯ 'ಹರಿಗುರು ಕಾರ್ಯಕಲ್ಲವೆ ಈ ದೇಹ' ಎಂದು ಪ್ರಶ್ನಿಸಿಕೊಂಡರು. ನಿನ್ನ 'ಕಿಂಕರಳಾಗಿ ನಿನ್ನ ಸೇವೆಯ ಮಾಳ್ಪ ಉನ್ನತ ಅಭಿಲಾಷೆ'ಯನ್ನು ನೆರವೇರಿಸುವಂತೆ ಶ್ರೀ ಹರಿಯನ್ನು ಪ್ರಾರ್ಥಿಸಿದರು 'ಭೋಗದಲ್ಲಿ ವೈರಾಗ್ಯ ನೀಡು ಭಾಗವತರ ಸಂಗಕೊಡು' 'ಗುರುವಿಕೆಯನ್ನು ಬಿಡಿಸು ಶರಣಳ ಗೋಪಿಸಿ ನಿರುತದಿ ಧಾನಿಪ ವರಮತಿ ನೀಡು' ಇಂತಹ ಬೇಡಿಕೆಗಳನ್ನು ದೇವರ ಮುಂದಿಡುತ್ತಾಳೆ ಚಿಂತೆಯೆನಗೊಂದಿಲ್ಲ ಅಂತರಂಗದಿ ನೆಲಸಿ ಸಂತಸದಿ ನಿನ್ನ ದ್ಯಾನ ನೀಡೆಂಬೆನೊ ಎಂದು ಜಗತ್ತಿನ ಚಿಂತೆಗಳಿಂದ ದೂರವಾಗಿ ಭಗವಂತನ ಚಿಂತನೆಯಲ್ಲಿ ತೊಡಗಿದರು.

ಈ ಹಿನ್ನೆಲೆಯಲ್ಲಿ ವೈರಾಗ್ಯವನ್ನು ಹೊಂದಿದ ಅವರು ದಾಸತ್ವವನ್ನು ಸ್ವೀಕರಿಸಿದರು.

ಉಡಲು ಉಣಲು ಆಸೆಯಿಲ್ಲ
ತೊಡಲು ಇಡಲು ಮಮತೆಯಿಲ್ಲ
ಎಡದ ಬಲದ ನೆಂಟರಭಿಮಾನ ವಿಲ್ಲವು
ಎಡರು ಬರಲು ಭಯವು ಇಲ್ಲ
ಬಿಡಲು ದೇಹ ಅಂಜಿಕಿಲ್ಲ[೪೮]

ದಾಸ ತನದಿ ಮೆರೆವುದೊಂದು
ಆಸಿಯಿಲ್ಲದಿನ್ನು ಬೇರೆ
ಆಸೆಯೊಂದು ಇಲ್ಲ ಕೇಳು ನಾಶರಹಿತನೆ
ಪಾಶಕರ್ಮ ಹರಿಸಿ ನಿನ್ನ
ದಾಸಳೆಂದು ಮರೆಸಿ ಜಗಕೆ
ಈಶನೆಂದು ನಿನ್ನ ಮೆರೆಸಿ ಆಸೆ ಪೂರೈಸಿಕೊಂಬೆ[೪೯]

ಅಂಬಾಬಾಯಿಯವರ ಗಂಡನ ಮನೆಯಿಂದ ಪಡೆದುಕೊಂಡ ಕಂಚಿನ ಗೋಪಾಲಕೃಷ್ಣನ ವಿಗ್ರಹವೇ ಆಕೆಯ ಆರಾಧ್ಯ ದೈವವಾಯಿತು. ಅದಕ್ಕೆ ಅನುಗುಣವಾಗಿ ಗುರುಗಳು ನೀಡಿದ ಅಂಕಿತ ಗೋಪಾಲಕೃಷ್ಣ ವಿಠಲ ಹೀಗಾಗಿ ಅಂಬಾಬಾಯಿಯವರು ಕೃತಿಗಳು ಬಹುಪಾಲು ಕೃಷ್ಣಸ್ತುತಿಗಳೇ ಆಗಿವೆ.

ಮುತ್ತೈದೆಯಾದೆ ನಾ ಮುರವೈರಿ ದಯದಿ
ನಿತ್ಯ ತೃಪ್ತನು ಎನ್ನ ನಿಜಕರವ ಪಿಡಿಯೆ[೫೦]

ಎಂದು ತನಗೆ ಸೌಮಂಗಲ್ಯದ ಎಲ್ಲ ಸಂಕೇತಗಳು ಗುರು ಕರುಣೆಯಿಂದ ಮತ್ತೆ ಪ್ರಾಪ್ತವಾದವೆಂದು ಭಾವಿಸಿದರು. ಅಂಕಿತವೇ ಮಾಂಗಲ್ಯ, ನಾಮವೇ ತಿಲಕ, ಗುರುಕರುಣವೇ ಕವಚ, ಗುರು ಪ್ರೀತಿಯೆ ವಸನ, ಭಕ್ತಿ, ಜ್ಞಾನ, ವೈರಾಗ್ಯಗಳೇ ಮೂರುಕಾಲಿನ ಜಡೆ, ತತ್ವಗಳೇ ಚೌರಿ, ರಾಗುಟೆ, ಗೊಂಡ್ಯಗಳು

ಶ್ರವಣವೇ ಕರ್ಣ ಕುಂಚಲ ನಿರ್ಮಾಲ್ಯವೇ ನಾಸಿಕಾಭರಣ ಭಕ್ತಿಯೇ ನಡುವಿನೊಡ್ಯಾಣ, ಸದ್ಗುಣಗಳೇ ಪಾದಾಭರಣ, ಗುರುವಿನ ಅನುಗ್ರಹವೇ ಮಂಗಳ ದ್ರವ್ಯಗಳು ಹೀಗೆ ತನ್ನನ್ನು ಶ್ರೀಹರಿಗೆ ಧಾರೆ ಎರೆದು ಭಾವುಕತೆಯಿಂದ ಹಾಡಿದ್ದಾರೆ.

ಹೀಗೆ ತಮ್ಮ ದೃಢ ನಿರ್ಧಾರ ಮತ್ತು ಸಮರ್ಪಣ ಭಾವದಿಂದ ಅಂಬಾಬಾಯಿಯವರು ಹರಿದಾಸರಂತೆಯೇ ವೇಷ ಭೂಷಣಗಳನ್ನು ತೊಟ್ಟು, ಕಾವಿಯ ವಸ್ತ್ರ, ಕಾಲಿಗೆ ಗೆಜ್ಜೆ, ಕೊರಳಿಗೆ ತುಳಸೀ ಮಾಲೆ, ಬಗಲಿಗೆ ತಂಬೂರಿ, ಜೋಳಿಗೆ ಇತ್ಯಾದಿಗಳನ್ನು ಧರಿಸಿ ಹರಿದಾಸರಾಗಿ ಸಂಚರಿಸ ತೊಡಗಿದರು. ಹೀಗೆ ಏಕಾಂತ ಸುಖವನ್ನು ನೀಡುವ ತಂಬೂರಿ ಶ್ರೀ ಹರಿಯನ್ನು ಒಲಿಸಿಕೊಳ್ಳುವ ಸಾಧನ ಎಂದು ಭಾವಿಸಿದರು.

ಬಲು ಬಲು ಪರಿಯಲಿ ಹರಿದಾಸತ್ವಕೆ
ಬರುವಂತೆ ಮಾಡಿದ ತಂಬೂರಿ
ನೆಲೆಯಾದೆನು ಹರಿದಾಸರ ಮಾರ್ಗದಿ
ಕಲುಷವ ಕಳೆದಿತು ತಂಬೂರಿ[೫೧]

ಬೆಟ್ಟದೊಡೆಯ ತಾನಿಷ್ಟು ಹಠವ ಮಾಡಿ
ಕೊಟ್ಟೇ ಕೊಟ್ಟೆನು ತಂಬೂರಿ
ಎಷ್ಟು ನಾಚಿಕೆಪಟ್ಟರೂ ಬಿಡದೆಲೆ
ಕಷ್ಟ ಕಳೆಯುತ್ತಲಿತ್ತ ತಂಬೂರಿ
ಬಿಟ್ಟು ಹೋಯಿತು. ಭವಕಟ್ಟು ಇಂದೆನ್ನೆನು
ಮುಟ್ಟಸಿತ್ಹರಿಪುರ ತಂಬೂರಿ
ಎಷ್ಟು ಪೇಳಲಿ ಶ್ರೀನಿಧಿ ಗೋಪಾಲ
ಕೃಷ್ಣ ವಿಠಲನಿತ್ತ ತಂಬೂರಿ[೫೨]

ಹೀಗೆ ತಂಬೂರಿಯನ್ನು ಹಿಡಿದು ಹರಿದಾಸರಾಗಿ ಸಾಲ ಮಾಡದೆ ಸಾಲದೆನ್ನದೆ ನಾಳೆಗೆ ಇಡದೆ ಬದುಕಿದರು ಹರಿದಾಸ ಪದ್ಧತಿಯಿಂದ ಗೋಪಾಳ ಧರಿಸಿ ಭಕ್ತರ ಮನೆಗಳಿಗೆ ಭಿಕ್ಷೆಗೆ ಹೋಗುವುದು ಅವರ ನಿತ್ಯ ಕೆಲಸವಾಗಿತ್ತು. ಅಂಬಾಬಾಯಿ ಆಶು ಕವಿಯತ್ರಿ ಸಂಚಾರ ಕಾಲದಲ್ಲಿ ಪ್ರತಿನಿತ್ಯ ಹಾಡುಗಳನ್ನು ಬರೆಯುವ ಹಾಡುವ ಅದನ್ನು ಮಹಿಳೆಯರಿಗೆ ಹೇಳಿಕೊಡುವ ಪ್ರವೃತ್ತಿ ಅವರಲ್ಲಿತ್ತು

ಪುಟ್ಟಿತು ಮನದಲ್ಲಿ ಕೃಷ್ಣಲೀಲೆಯ ಸ್ಮರಣೆ
ತಟ್ಟನೆದ್ದೀಗ ಬರೆಯುವೆ| ಹರಿಚರಿತೆ
ಶ್ರೇಷ್ಠಗುರು ಚರಣಕರ್ಪಿಸುವೆ[೫೩]

ಅನ್ಯ ಸ್ಮರಣೆಗಳೇಕೆ ಅನ್ಯ ವಾಕ್ಯಗಳೇಕೆ
ಅನ್ಯರಾಡುವ ನುಡಿಯೇಕೆ| ಶ್ರೀಕೃಷ್ಣ
ನಿನ್ನ ನೆನಹೆನಗೆ ಆನಂದ

ಮುದ್ದುಕೃಷ್ಣನೆ ದೈವ ಮಧ್ವರಾಯರೇ ಗುರುವು
ಶುದ್ಧ ವೈಷ್ಣವರೆ ಬಿಂಧುಗಳು| ಎಂದವರು
ಹೆದ್ದಾರಿ ಹಿಡಿದು ನಡೆಯುವರು[೫೪]

ವಸುದೇವ ದೇವಕಿಯರ ಸೆರೆವಾಸ, ಕೃಷ್ಣನ ಜನನ, ವಸುದೇವನ ಗೋಕುಲ ಪ್ರಯಾಣ, ಗೋಕುಲದಲ್ಲಿ ಕೃಷ್ಣನ ಬಾಲ ಲೀಲೆಗಳು, ಅವನ ತುಂಟಾಟ, ಯಶೋದೆಯ ವಾತ್ಸಲ್ಯ ಇತ್ಯಾದಿಗಳನ್ನು ಸುವ್ವಾಲಿ ಧಾಟಿಯ ಈ ಗೇಯ ಕಾವ್ಯದ ೩೮೯ ನುಡಿಗಳ ದೀರ್ಘರಚನೆಯಲ್ಲಿರುವುದು ಕಾಣಬಹುದು.

ಅಂಬಾಬಾಯಿಯವರ ಸಾಹಿತ್ಯ ಬಹುಪಾಲು ತೀರ್ಥಯಾತ್ರೆಯ ಸಂದರ್ಭದಲ್ಲಿ ರಚಿತವಾದ ಕೀರ್ತನೆಗಳಾಗಿವೆ. ಕರಿಗಿರಿ ಕದಿರುಮಂಡಲಗಿ, ತಿರುಪತಿ, ಉಡುಪಿ, ಪಂಡರಾಪುರ, ಮಂತ್ರಾಲಯ, ಹಂಪೆ, ಸವಣೂರು, ರಿತ್ತಿ, ಭದ್ರಾವತಿ, ಮೊದಲ ಘಟ್ಟ, ಸಾಗರಕಟ್ಟೆ ಮುಂತಾದ ಕ್ಷೇತ್ರಗಳಲ್ಲಿ ಹಲವಾರು ದಿನ ನೆಲೆಸಿ ತಮ್ಮ ಎಲ್ಲ ಕಷ್ಟಗಳನ್ನು ದೇವರ ಬಳಿ ನಿವೇದಿಸಿಕೊಂಡಿದ್ದಾರೆ. ತಾವು ಕಂಡ ದಿವ್ಯ ಮೂರ್ತಿಗಳ ಚಿತ್ರಣವನ್ನು ನೀಡಿದ್ದಾರೆ. ಮತ್ತು ಉತ್ಸವ ಪೂಜೆ ಮೊದಲಾದ ಸಂಪ್ರದಾಯಗಳನ್ನು ವಿವರವಾಗಿ ಬಣ್ಣಿಸಿದ್ದಾರೆ.

ಹನುಮ-ಭೀಮ-ಮಧ್ವ ಈ ಅವತಾರತ್ರಯರಲ್ಲಿ ಕಲ್ಪನೆಯ ಹಿನ್ನೆಲೆಯಲ್ಲಿ ರಚನೆಯಾದ ಕೃತಿಗಳು ಸುಮಾರು ೩೦, ಅದರಲ್ಲಿ ಕದರುಮಂಡಲಗಿ ಹನುಮಂತ, ಹಂಪೆ ಯಂತ್ರೋದ್ಧಾರ ಪ್ರಾಣದೇವರು, ಚಳ್ಳಕೆರೆ ಹನುಮಂತ, ವೀಣೆ ಧರಿಸಿದ ಹನುಮಂತ, ಮೊದಲಘಟ್ಟದ ಹನುಮಂತ ಇವರ ಹಿರಿಮೆಯನ್ನು ಅನನ್ಯತೆಯಿಂದ ಹಾಡಿ ಹೊಗಳಿದ್ದಾಳೆ. ಹನುಮನಾಗಿ ಮಾಡಿದ ರಾಮನ ಸೇವೆ, ಭೀಮನಾಗಿ ತೋರಿದ ಕೃಷ್ಣಭಕ್ತಿ, ಆನಂದ ತೀರ್ಥರಾಗಿ ಮಾಡಿದ ವೇದವ್ಯಾಸರ ಸೇವೆ ಇವುಗಳನ್ನು ಚಿತ್ರಿಸಿದ್ದಾರೆ.

ಬಳ್ಳಾರಿ ಜಿಲ್ಲೆಯ ಆಡುನುಡಿಯ ಸೊಗಡನ್ನು ಸರಳವಾದ ಶೈಲಿಯಲ್ಲಿ ಅಭಿವ್ಯಕ್ತಿಗೊಳಿಸಿದ್ದಾರೆ. ಭಕ್ತಿ, ಬದುಕಿನ ನಿಷ್ಠೆ ಇವರ ಕೃತಿಗಳಲ್ಲಿ ಬೆರೆತು ಹೋಗಿವೆ. ಜಾನಪದ ಮಾದರಿ, ಉಪಮೆ, ಉತ್ಪ್ರೇಕ್ಷೆ, ಅಲಂಕಾರ, ಪ್ರಾಸಗಳನ್ನು ಇವರ ಕಾವ್ಯಗಳಲ್ಲಿ ಕಾಣಬಹುದು. ಮಹಾರಾಷ್ಟ್ರ ಭಕ್ತ ಸಂತರನ್ನು, ಬಂಗಾಳದ ಶಕ್ತಿ ದೇವತೆಗಳನ್ನು ತನ್ನ ಹಾಡುಗಳಲ್ಲಿ ಪ್ರಸ್ತಾಪಿಸಿರುವುದು ವಿಶೇಷವಾಗಿ ಕಂಡು ಬರುತ್ತದೆ.

## ಜೀವೂಬಾಯಿ

ಜೀವೂಬಾಯಿಯವರು ಕೋಲಾರ ಜಿಲ್ಲೆಯ ಚಿಂತಾಮಣಿ ತಾಲೂಕಿನ ನಿಡುಗುರಕಿ ಎಂಬ ಒಂದು ಹಳ್ಳಿಯಲ್ಲಿ ಜನಿಸಿದರು. ಇವರ ಕಾಲ ೧೮೯೭ರಿಂದ ಒಳ್ಳೆಯ ಆಚಾರ ಶೀಲರಾಗಿ ಚೆನ್ನಾಗಿ ಬಾಳಿ ಬದುಕಿದ ಹಿರಿಯ ಮನೆತನದವರಾದ ಶಾನುಭೋಗರಾಗಿದ್ದ ತಂದೆ ದೇಶಮುಖ ರಾಮಚಂದ್ರರಾಯರು

ತಾಯಿ ರಮಾಬಾಯಿಯವರ ನಾಲ್ಕನೆ ಪುತ್ರಿಯಾಗಿದ್ದರು. ಇವರನ್ನು ಜೀವೂಬಾಯಿ ಅಥವಾ ಜೀವಮ್ಮ ಎಂದು ಕರೆಯುತ್ತಿದ್ದರು.

ಮನೆಯಲ್ಲಿ ಸದಾ ನಡೆಯುತ್ತಿದ್ದ ದೇವರ ಪೂಜೆ, ವ್ರತ, ನೇಮ, ಹೋಮಗಳು ಜೀವೂಬಾಯಿಯ ಮೇಲೆ ಗಾಢ ಪ್ರಭಾವ ಬೀರಿದವು ಜೊತೆಗೆ ಊರಿನ ಸುಂದರ ಪರಿಸರ ಶ್ರೀಹರಿಯ ಸೃಷ್ಟಿ ಶಕ್ತಿ ಬಗ್ಗೆ ಆಲೋಚಿಸುವಂತೆ ಮಾಡಿರಬೇಕು. ಪ್ರಾಯಶಃ ಬಾಲ್ಯದಲ್ಲಿ ಕಂಡ ಹುಣಸೆ ಮರ, ಹುಣಸೆಕಾಯಿ, ಹುಣಸೆ ಹಣ್ಣುಗಳು 'ಆ ಹಣ್ಣು ಈ ಹಣ್ಣು ನೆನಸಿ ಫಲವೇನೆ, ಈ ಹುಣಸೇ ಹಣ್ಣಿಗೆ ಸಮ ಬಾಹೋದೇನೆ' ಎಂಬ ಹಾಡು ರಚಿಸಲು ಪ್ರೇರಣೆ ಪಡೆದಿರಬಹುದು.

ಸಂಪ್ರದಾಯಸ್ಥ, ಆಚಾರಶೀಲ ಕುಟುಂಬವಾದ್ದರಿಂದ ನಿಡಗುರಕಿ ಸಣ್ಣ ಹಳ್ಳಿಯಲ್ಲಿ ಪಾಠಶಾಲೆಯಿಲ್ಲದ ಕಾರಣ ಮನೆಯಲ್ಲಿ ಜೀವೂಬಾಯಿ ತಂದೆಯವರಿಂದ ಓದು, ಬರಹ ಕಲಿತರು. ಮತ್ತು ತಾಯಿಯವರು ಕೂಡ ಅನೇಕ ಹಾಡುಗಳನ್ನು ಬಾಯಿಪಾಠ ಮಾಡಿಸುತ್ತಿದ್ದರು.

ಜೀವಮ್ಮನಿಗೆ ಆ ಕಾಲದ ರೂಢಿಯಂತೆ ಕೇವಲ ಹತ್ತು ವರ್ಷಕ್ಕೆ ಸೋದರಮಾವನಿಗೆ ಕೊಟ್ಟು ವಿವಾಹ ಮಾಡಿದರು. ಆದರೆ ವಿಧಿವಶ ಗಂಡನನ್ನು ಕಳೆದುಕೊಂಡ ಜೀವೂಬಾಯಿ ಹನ್ನೊಂದನೇ ವಯಸ್ಸಿಗೆ ವೈದವ್ಯ ಪ್ರಾಪ್ತಿಯಾಯಿತ್ತು. ಲೌಕಿಕ ಬದುಕಿನಿಂದ ದೂರವಾಗಿ ಪೂಜೆ, ವ್ರತ, ನೇಮಗಳಲ್ಲಿ ತೊಡಗಿದರು ಮತ್ತು ಹುಟ್ಟಿದ ಮನೆಯಲ್ಲಿಯೇ ಶಾಶ್ವತವಾಗಿ ನೆಲೆಸಬೇಕಾಯಿತು. ನಂತರದ ದಿನಗಳಲ್ಲಿ ಮನೆಕೆಲಸ, ದುಡಿಮೆಗಳು ಹೆಚ್ಚಾದವು ಅತಿಥಿಗಳ ಉಪಚಾರ, ಹೆಣ್ಣು ಮಕ್ಕಳ ಬಸಿರು ಬಾಣಂತನ ಪ್ರತಿಯೊಂದನ್ನು ಜೀವಮ್ಮ ನೋಡಿಕೊಳ್ಳುತ್ತಿದ್ದಳು ಮನೆಯಲ್ಲಿ ಗೋವುಗಳ ಸೇವೆಯನ್ನು ಹರಿಸೇವೆ ಎಂದು ಭಾವಿಸಿ ಅವುಗಳನ್ನು ಶ್ರದ್ಧೆಯಿಂದ ನೋಡಿಕೊಳ್ಳುತ್ತಿದ್ದಳು. ಬಿಡುವಿನ ವೇಳೆಯಲ್ಲಿ ರಾಮಾಯಣ, ಮಹಾಭಾರತ, ಭಾಗವತಗಳನ್ನು ಓದುವ ಅಭ್ಯಾಸವನ್ನು ಹೊಂದಿದ್ದರು.

ದೊಡ್ಡ ಹಾಡುಗಳಾದ ಶ್ರೀನಿವಾಸ ಕಲ್ಯಾಣ, ಹನುಮದ್ವಿಲಾಸ, ದ್ರೌಪದಿ ಸ್ವಯಂವರ ಇತ್ಯಾದಿ ಪೌರಾಣಿಕ ಪದಗಳನ್ನು ಚೆನ್ನಾಗಿ ಹಾಡುತ್ತಿದ್ದರು ಮತ್ತು ಹಾಡುಗಳ ಅರ್ಥವನ್ನು ಬಹು ಸ್ವಾರಸ್ಯವಾಗಿ ವಿವರಿಸಿ ಹೇಳುತ್ತಿದ್ದ ಜೀವೂಬಾಯಿ ಮನೆಯಲ್ಲಿ ವ್ರತ, ನೇಮ, ಉಪವಾಸಗಳನ್ನು ನಡೆಸಿಕೊಂಡು ಬಂದು ಹಿಡಿದ ವ್ರತಗಳ ಅಂಗವಾಗಿ ಉದ್ಯಾಪನೆಗಳನ್ನು ಶ್ರದ್ಧೆಯಿಂದ ಮಾಡುತ್ತಿದ್ದರು.

ತಂದೆ-ತಾಯಿ ಮರಣಾನಂತರ ಹಳ್ಳಿಯನ್ನು ಬಿಟ್ಟು ಬೆಂಗಳೂರು, ಮೈಸೂರುಗಳಲ್ಲಿ ಅಣ್ಣ ತಮ್ಮಂದಿರುಗಳ ಮನೆಗಳಲ್ಲಿ ವಾಸಮಾಡಿದರು. ಅಲ್ಲಿ ಅನೇಕ ಕಡೆ ಹರಿಕತೆ, ಪುರಾಣವಚನ ಭಾಗವತ ಸಪ್ತಾಹ ಇತ್ಯಾದಿಗಳು ನಡೆಯುತ್ತಿದ್ದವು. ಇವು ಜೀವೂಬಾಯಿಯವರಿಗೆ ಹರಿದಾಸರ ನೂರಾರು ದೇವರ ನಾಮಗಳಲನ್ನು ನಿರರ್ಗಳವಾಗಿ ಹಾಡಲು ಅನುಕೂಲವಾಯಿತು.

ತುಮಕೂರಿನ ಬಳಿಯ ದೇವರಾಯನ ದುರ್ಗದಲ್ಲಿದ್ದ ಅಪರೋಕ್ಷಜ್ಞಾನಿಗಳು ಶ್ರೀ ತಂದೆ ಮುದ್ದುಮೋಹನ ವಿಠ್ಠಲದಾಸರ ಹಾಗೂ ಶಿಷ್ಯರಾದ ಶ್ರೀ ಉರಗಾದ್ರಿವಾಸ ವಿಠಲದಾಸರು ಹಾಸನಕ್ಕೆ ಬಂದು ಒಂದು ಸಪ್ತಾಹವನ್ನು ಶ್ರೀಜಗನ್ನಾಥ ವಿಠಲದಾಸರ ಕೃತಿ ಶ್ರೀಹರಿಕಥಾಮೃತಸಾರದ ಬಗ್ಗೆ ಪ್ರವಚನ ನಡೆಯುತ್ತಿದ್ದ ಸಂದರ್ಭದಲ್ಲಿ ಜೀವೂಬಾಯಿಯವರು ಈ ಸಪ್ತಾಹದಲ್ಲಿ ಭಾಗಿಯಾಗಿ, ದೇವತಾ ಕಾರ್ಯಗಳಲ್ಲಿ ಸಹಾಯಕರಾಗಿ ಸತತವಾಗಿ ಕೆಲಸ ಮಾಡುತ್ತಿದ್ದ ಇವರ ಶ್ರದ್ಧಾ ಭಕ್ತಿ ನಿಷ್ಠೆಗಳಿಗೆ ಮೆಚ್ಚಿದ ಶ್ರೀ ಉರಗಾದ್ರಿವಾಸ ವಿಠಲದಾಸರು ಶ್ರೀ ಹರಿಗುರುಗಳ ಪ್ರೇರಣೆ ಅನುಸಾರ ಇವರಿಗೆ 'ಶ್ರೀ ಕಮಲನಾಭ ವಿಠ್ಠಲ' ಎಂಬ ಅಂಕಿತವನ್ನು ಉಪದೇಶಿಸಿ ಶ್ರೀಹರಿಯನ್ನು ಆರಾಧಿಸಲು ಅನುಗ್ರಹ ಮಾಡಿದರು. ಜೀವೂಬಾಯಿ ಅದೇ ದಿನ 'ಕರುಣದಿಂದ ಕಾಯೋ ಎನ್ನನು ಉರಗಾದ್ರಿವಾಸ ವಿಠಲ ದೇವ' ಎಂಬ ಪ್ರಥಮ ಕೀರ್ತನೆಯನ್ನು ಕಾಮ ವರ್ಧಿನಿ ರಾಗ, ಆದಿ ತಾಳದಲ್ಲಿ ಶ್ರೀ ಕಮಲಿನಾಥ ವಿಠಲ ಅಂಕಿತದಿಂದ ಕೃತಿ ರಚಿಸಿದ್ದಾರೆ. ಹೀಗೆ ಗುರುಕರುಣೆ ಒದಗಿ ಬಂದ ಮೇಲೆ ಜೀವೂಬಾಯಿ ಅವರು ಅನೇಕ ಕೀರ್ತನೆಗಳನ್ನು ಹರಿಕತೆಯನ್ನು ಹೋಲುವ ಹಲವು ದೀರ್ಘ ಕೀರ್ತನೆಗಳನ್ನು ರಚಿಸಿದ್ದಾರೆ. ಸಾಮಾನ್ಯವಾಗಿ ಪ್ರತಿವರ್ಷ ಯುಗಾದಿಯ ದಿನ ಒಂದು ಕೀರ್ತನೆಯನ್ನು ರಚಿಸಿ ಭಗವಂತನಿಗೆ ಅರ್ಪಿಸುವ ಪದ್ಧತಿಯನ್ನು ಇವರು ಅನುಸರಿಸುತ್ತಿದ್ದರೆಂದು ತಿಳಿದು ಬರುತ್ತದೆ.

೩೧.೦೮.೧೯೮೨ರಂದು ಸ್ಮರಿಸಿ ಬದುಕಿರೊ ಗುರುವರ ನರಹರಿ ಸ್ಮರಣೆ ಮರೆಯದಲೆ ಕೀರ್ತಿಸಿ ನಲಿದವರ ಎಂದು ಹಾಡಿದ ಹಾಡೇ ಅವರ ಕೊನೆಯ ರಚನೆಯಾಗಿದೆ. ಅವರ ಮೊದಲ ಹಾಡು ಗುರು ಉರಗಾದ್ರಿವಾಸ ವಿಠಲದಾಸರ ಮೇಲೆ ರಚಿತವಾಗಿದ್ದರೆ ಕೊನೆಯ ಹಾಡು ಉರಗಾದ್ರಿವಾಸ ವಿಠಲದಾಸರ ಪರಮಾಪ್ತ ಶಿಷ್ಯರಾದ ತಂದೆ ವೆಂಕಟೇಶ ವಿಠಲದಾಸರ ಮೇಲೆ ರಚಿತವಾಗಿದೆ. ಜೀವೂಬಾಯಿಯವರು ತಮ್ಮ ಗುರುಗಳಿಗೆ ಗುರುಕಾಣಿಕೆ ಸಲ್ಲಿಸಿ ಧನ್ಯರಾಗಿದ್ದಾರೆ.

ಶಾಲಿವಾಹನ ಶಕೆ ೧೯೦೫ ಶ್ರೀ ರುಧಿರೋದ್ಗಾರಿ ಸಂವತ್ಸರ ಉತ್ತರಾಯಣ ವೈಶಾಖ ಬಹಳ ಚತುರ್ದಶಿ ಗುರುವಾರ ಅಂದರೆ ೯.೬.೧೯೮೩ ಜೀವೂಬಾಯಿಯವರು ಇಹಲೋಕವನ್ನು ಬಿಟ್ಟು ಶ್ರೀಹರಿಯ ಪಾದವನ್ನು ಸೇರಿದರು.

ಜೀವೂಬಾಯಿಯವರು ೧೭೦ ಕೀರ್ತನೆಗಳನ್ನು ೧೦ ದೀರ್ಘ ಕೀರ್ತನೆಗಳನ್ನು ರಚಿಸಿದ್ದಾರೆ. ಉಗಾಭೋಗ ಸುಳಾದಿ ಹಾಡುಗಳಲ್ಲಿ ಪಲ್ಲವಿ, ಅನುಪಲ್ಲವಿ, ನುಡಿಗಳು ೩,೫,೭ ಹೀಗೆ ರಚಿತವಾಗಿದ್ದರು. ಕೆಲವು ಕಡೆ ಇವು ಯಾವುವು ನಿರ್ದೇಶಿಸಿಲ್ಲ. ಹೀಗಾಗಿ ಜೀವೂಬಾಯಿಯವರ ಕೃತಿಗಳು ಛಂದಸ್ಸಿಗನುಗುಣವಾಗಿರದೆ ಸಾಕಷ್ಟು ಸ್ವಾತಂತ್ರ್ಯ ವಹಿಸಿರುವುದು ಕಂಡುಬರುತ್ತದೆ.

ಜೀವೂಬಾಯಿಯವರ ಕೃತಿಗಳ ವೈವಿಧ್ಯತೆಯಿಂದ ತಾರತಮ್ಯಾನುಸಾರ ದೇವ, ದೇವತೆಗಳ, ಗುರುಗಳ ಸ್ತುತಿ ಮಾಡಿದ್ದಾರೆ. ಹರಿ ಸಂಕೀರ್ತನೆಯನ್ನು ಹಾಡಿದ್ದಾರೆ. ಮತ್ತು ಗಣಪತಿ, ಕೃಷ್ಣ,

ನರಸಿಂಹ, ಶ್ರೀನಿವಾಸ, ಶ್ರೀರಾಮ, ಲಕ್ಷ್ಮೀದೇವಿ, ಹನುಮ, ಭೀಮ, ಮಧ್ವ ಗುರುಗಳು ಎಲ್ಲರನ್ನು ಮನಧಣಿದು ಕೊಂಡಾಡಿದ್ದಾಳೆ.

ಹರಿಯ ದಶಾವತಾರಗಳನ್ನು ವರ್ಣಿಸುವುದು ದಾಸ ಪರಂಪರೆಯಲ್ಲಿ ಒಂದು ಸಂಪ್ರದಾಯವೇ ಆಗಿದೆ. ಜೀವೂಬಾಯಿಯವರು ದಶಾವತಾರ ವರ್ಣನೆ ಕೆಲವು ಧೀರ್ಘವಾಗಿ ಹತ್ತು ನುಡಿಗಳಲ್ಲಿ ಇದ್ದರೆ ಮತ್ತೆ ಕೆಲವೊಮ್ಮೆ ಕೇವಲ ಒಂದೊಂದು ನುಡಿಯಲ್ಲಿ ಸೂಚಿಸಿರುವುದುಂಟು.

ಜಾತುಕೊಂಡಿ ಯಾಕೊ ನರಹರಿ
ಪ್ರಾರ್ಥನೆಯನ್ನು ಕೇಳೊ ಸ್ವಾಮಿ ||ಪ||
ವೇದ ತಂದು ಭಾರಪೊತ್ತು
ಕೋರೆ ತೋರಿ ಕರುಳ ಬಗೆದು
ಬೇಡಿ ಭೂಮಿ ದೂಡಿ ನೃಪರ
ಸಾಗರವ ಬಂಧಿಸಿದ ಭಯವೋ[೫೫] ||೧||

ಇಲ್ಲಿ ಒಂದೇ ಮುಡಿಯಲ್ಲಿ ಏಳು ಅವತಾರಗಳನ್ನು ಹೇಳಿರುವುದನ್ನು ಗಮನಿಸಬಹುದು. ಹರಿಸ್ತುತಿಯಲ್ಲಿ ಬಾಲಲೀಲೆಗಳಲ್ಲಿ ಮಂಗಳಾರತಿ ಹಾಡುಗಳಲ್ಲಿ ಮತ್ತೆ ಮತ್ತೆ ದಶಾವತಾರ ಸ್ತುತಿ ಮೂಡಿ ಬಂದಿದೆ. ದಶಾವತಾರದ ನಂತರದ ಸ್ಥಾನ ಶ್ರೀಕೃಷ್ಣನ ಬಾಲ ಲೀಲೆಗಳದ್ದು ಭಾಗವತದ ದಶಮ ಸ್ಕಂದದಲ್ಲಿ ಬರುವ ಶ್ರೀಕೃಷ್ಣನ ವಿವಿಧ ಕ್ರೀಡೆಗಳಾಗಿವೆ. ವಾತ್ಸಲ್ಯ ಭಕ್ತಿಗೆ ಉದಾಹರಣೆ

ತೊಟ್ಟಿಲ ತೂಗುವೆ ಕೃಷ್ಣನ ತೊಟ್ಟಿಲ ತೂಗುವೆ
ಪುಟ್ಟ ಬಾಲಕರೊಳು ಪರಮ ಶ್ರೇಷ್ಠನಾದನಾ[೫೬]

ಎಂದು ಹಾಡಿ ಗೋಪಿ ತೊಟ್ಟಿಲ ತೂಗುತ್ತಾಳೆ ದೈತ್ಯರನ್ನು ಕೊಲ್ಲುವುದಕ್ಕಾಗಿ ಹತ್ತಾವತಾರ ಎತ್ತಿ ಬಂದು ಬಳಲೀದ್ದೀಯಾ 'ಪವಡಿಸು ಪರಮಾತ್ಮ ಶ್ರೀಶಾ ಪವಡಿಸು' ಎಂದು ನಿದ್ರೆ ಮಾಡಿಸುತ್ತಾಳೆ. ಬೆಳಿಗ್ಗೆ ಎದ್ದ ಮೇಲೆ ಬಂದು ಪೀತಾಂಬರ ನುಡಿಸಿದಳಾಗವರ ಗೋಪಿಯು ಬೇಗ : ಬಗೆ ಬಗೆ ಅಲಂಕಾರ ಮಾಡಿಸುತ್ತಾಳೆ.

'ಉದೋ ಕೊಳಲನು ಕೃಷ್ಣ ಊದೋ ಕೊಳಲನು' ಎಂದು ಗೋಪಿಯರೆಲ್ಲಾ ಬಂದು ಕೇಳಿಕೊಳ್ಳುತ್ತಾರೆ. ಕೃಷ್ಣನಿಗೂ ಗೋಪಿಯರಿಗೂ ಸರಸ ಸಂವಾದ ನಡೆಯುತ್ತದೆ.

ಗೋಪಿಯರು : ತರುಳರೆಲ್ಲ ಕೂಡಿಕೊಂಡು
ಕರುಗಳನ್ನೆ ಪಾಲಿಸುತಿರೆ
ಮರೆಯ ಮಾಡಿ ಕರುಗಳನ್ನು
ದುರುಳತನವು ತರವೆ ಕೃಷ್ಣ
ತಾರೊ ಕರುಗಳ ಕೃಷ್ಣ ತಾರೋ ಕರುಗಳ

ಕೃಷ್ಣ : ಮಾತೆಯರನೆ ಅರಸುತಿರಲು

ಪ್ರೀತಿಯಿಂದ ಕರುಗಳನ್ನು

ಜೋಕೆಯಿಂದ ಪಿಡಿದು ತರಲು

ಯಾತರೇಪರಿ ನಿಂದಿಸುವುದು

ನೋಡಿ ಕರುಗಳ ನಿಂತಿರುವುದು ನೋಡಿ ಕರುಗಳ ಕೊನೆಗೆ

ಕೃಷ್ಣ ಸರಸವಾಡುತಿಹಿರಿ ಎನ್ನ

ಸ್ಮರಣೆಯಿಂದ ತನುವ ಮರೆತು

ಕ್ಷಮಿಸೆ ನಿಮ್ಮ ಗೃಹಕೆ ತೆರಳಿ

ವನಜ ಮುಖಿಯರೆಲ್ಲರು[೫೭]

ಎಂದು ಹೇಳಿ ಮನೆಗೆ ಕಳುಹಿಸುತ್ತಾನೆ. ಇನ್ನೊಂದು ಹಾಡಿನಲ್ಲಿ ಚಾಡಿ ಮಾತು ಕೇಳಿ ಕೇಳಿ ಸಾಕಾಗಿ ಯಶೋದೆ

ಬ್ಯಾಡೊ ಒಬ್ಬರ ಮನೆಗೆ ನೀ ಪೋಗ

ಬ್ಯಾಡೊ ಒಬ್ಬರ ಮನೆಗೆ[೫೮]

ಎಂದು ಬೇಡಿಕೊಳ್ಳುತ್ತಾಳೆ ಅವನು ಮಾಡಿದನೆಂದು ಹೇಳಿದ ತುಂಟಾಟಗಳನ್ನೆಲ್ಲ ತಿಳಿಸುತ್ತಾಳೆ.

ಮಕ್ಕಳೆಲ್ಲರು ಕೈಯ್ಯೊಳು ಅವ

ಲಕ್ಕಿಯ ತಿನ್ನುತಿರಲು

ಫಕ್ಕನೆ ಬಡಿಯೆ ದಿಕ್ಕು ದಿಕ್ಕಿಗೆ ಚಲ್ಲೆ

ಬಿಕ್ಕಿ ಬಿಕ್ಕಿ ಅಳುತಾರೆ ಗೋಪಕ್ಕ ನೀನೋಡೆಂಬರು

ಎಂದು ಹೇಳುತ್ತಾಳೆ ಅದಕ್ಕೆ ಕೃಷ್ಣ

ನಾನೆಲ್ಲೊ ಪೋಗಲಿಲ್ಲ ನಾರಿಯರೆನ್ನ

ದೂರುವರಿದ ನೋಡಮ್ಮಾ[೫೯]

ಎಂದು ತನ್ನ ವಾದವನ್ನು ನಿವೇದಿಸಿಕೊಳ್ಳುತ್ತಾನೆ. ಈ ಎಲ್ಲ ಹಾಡುಗಳಲ್ಲಿ ಕೃಷ್ಣ, ಕೇಶಿ, ಬಕ, ಧೇನುಕ ವತ್ಸಾಸುರ ಪೂತನಿ ಮುಂತಾದವರನ್ನು ಸಂಹಾರ ಮಾಡಿದ ವಿಷಯ ಮತ್ತೆ ಮತ್ತೆ ಬಂದು ಕೃಷ್ಣನ ಮಹಿಮೆ ಪ್ರಕಟವಾಗುತ್ತದೆ.

ನವವಿಧ ಭಕ್ತಿಗಳಲ್ಲಿ ಆತ್ಮ ನಿವೇದನೆಯೂ ಒಂದು ಬದುಕಿನಲ್ಲಿ ಹಲವು ರೀತಿಯಿಂದ ನೊಂದ ಜೀವಮ್ಮ ಆರ್ತಳಾಗಿ ತನ್ನನ್ನು ಸಂಪೂರ್ಣವಾಗಿ ಶ್ರೀಹರಿಗೆ ಸಮರ್ಪಿಸಿಕೊಂಡು ನೀನಲ್ಲದೆ ಅನ್ಯರಿಲ್ಲ ಕಾಪಾಡು ಎಂದು ಮೊರೆ ಇಡುತ್ತಾರೆ.

ಕರೆ ಕರೆ ಭವದೊಳು ಮುಳುಗಿರುವೆ
ದುರಿತ ದೊರನೆ ದುಃಖ ತರ ತರ ವ್ಯಥೆಯಲಿ
ನಾನು ನನ್ನದು ಎಂಬ ಹೀನ ವೃತ್ತಿಗಳಿಂದ
ಹಾನಿಯಾಯಿತು ಆಯು ಶ್ರೀ ನಿಧಿಯ
ಜ್ಞಾನಿಗಳೊಡನಾಡಿ ಮೌನದಿಂದಿರದಲೆ
ಶ್ವಾನ ಸೂಕರನಂತೆ ತಿರುಗಿ ಬಾಯ್ಬಿಡುತಲು[೬೦]

ಎಂದು ಪಶ್ಚಾತ್ತಾಪ ಪಡುತ್ತಾರೆ.

ದಾನ ಧರ್ಮವು ಮಾಡಬೇಕೆಂದು ಮನವಿದೆ
ದಾನವಾಂತಕ ಕೃಷ್ಣ ಧನವಿಲ್ಲವಯ್ಯ ಎಂದು ವಾಸ್ತವವನ್ನು ಅರುಹುತ್ತಾರೆ.

ಲೇಸು ಭಕುತಿಯ ಮಾಡದಲೆ ಬಲು
ಘಾಸಿಯಾಗುತ ಮನದಿ ನೊಂದು
ದಾಸ ನಾಗದೆ ಕ್ಲೇಶ ಪಟ್ಟೆನೊ
ಈಸು ದಿನಗಳ ಕಳೆದೆನೊ ವೃಥಾ[೬೧]

ಇನ್ನಾದರೂ

ನಿನ್ನ ದಾಸರ ಕೀರ್ತಿ ನಿನ್ನ ದಾಸರ ವಾರ್ತೆ
ನಿನ್ನ ನಾಮಾಂಮೃತವು ಎನ್ನ ಕಿವಿ ತುಂಬಿರಲಿ[೬೨]
ಎಂದು ಬೇಡುತ್ತಾಳೆ.

ಸ್ನಾನ ಜಪ ತಪವ ನೇಮಗಳ ಬಿಟ್ಟೆ
ಮೌನವನು ಬಿಟ್ಟೆ ದಾನ ಧರ್ಮವ ಕೊಡದೆ ಕೆಟ್ಟೆ
ಶ್ರೀನಿವಾಸನ ಪೂಜೆ ನೇಮ ನಿಷ್ಠೆ ಮಾಡದಲೆ ಬಿಟ್ಟೆ
ಶ್ವಾನ ಸೂಕರನಂತೆ ಪೊರೆದ ಹೊಟ್ಟೆ
ಏನು ಹೇಳಲಿ ಪರರ ದ್ರವ್ಯಪಹರಿಸುತಿಹ
ಹೀನ ಜನರ ಸಂಗ ಮಾಡಿ ಬಳಲಿ ಬರಿದೆ[೬೩]

ಎಂದು ಮುಂತಾಗಿ ಮತ್ತೆ ಮತ್ತೆ ತಮ್ಮ ಅಜ್ಞಾನವನ್ನು ಹೇಳಿಕೊಳ್ಳುತ್ತಾರೆ.

ತಂದೆ, ತಾಯಿ, ಬಂಧು, ನೀನೆ ಪದ್ಮನಾಭ ನಿನ್ನ
ನಂಬಿದ ಭಕ್ತರೊಳಿರಿಸಿ ಪದ್ಮನಾಭ
ಅಂಬುಜಾಕ್ಷಿ ಸಲಹಬೇಕೊ ಪದ್ಮನಾಭ[೬೪]

ಎಂದು ಶರಣಾಗುತ್ತಾರೆ. ಆತ್ಮ ನಿವೇದನೆಯ ಹಾಡುಗಳು ಕವಯಿತ್ರಿಯ ನೇರವಾದ ನಿರೂಪಣೆಯಾಗಿವೆ.

ಲೋಕದ ಜನರಿಗೆ ಚಂದನದಲ್ಲಿ ಸಿಲುಕಿ ಅನುಭವಿಸುತ್ತಿರುವ ಕಷ್ಟಗಳಿಂದ ಮುಕ್ತರಾಗಲು ಜನರಿಗೆ ಸನ್ಮಾರ್ಗದ ದಾರಿಯನ್ನು ತಿಳಿಯಪಡಿಸಿ, ಅಹಂಕಾರವನ್ನು ಬಿಟ್ಟು ಭಗವಂತನಲ್ಲಿ ಶರಣಾದರೆ ಹರಿ ಕಾಪಾಡುವನು ಎಂಬ ಭರವಸೆಯನ್ನು ನೀಡಿದ್ದಾರೆ.

ಏನು ಮಾಡಿದರೇನು ಹಾನಿಯಾಗದು ಪಾಪ
ಶ್ರೀನಿಕೇತನನ ದಿವ್ಯನಾಮ ನೆನೆ ಮನವೆ

ದಾನ ಧರ್ಮಗಳಿಂದ ಧನ್ಯನಾದೇನು ಎನಲು
ಹಾನಿಯಾಗೋದು ಆಯು ಪ್ರತಿನಿಮಿಷದಿ
ಸ್ನಾನ ಜಪತಪದೊಳಗೆ ಯಾರೆನಗೆ ಸರಿ ಎನಗೆ
ಮೌನದಿಂದ್ಹರಿ ನಾಮ ಧ್ಯಾನಿಸುವ ತನಕ[೬೫]

ಯಾಕೆ ಮನದಲಿ ಶೋಕಿಸುತ್ತಿರುವೆ ಜಗ
ದೇಕನಾಥನು ಸಾಕುತಿರುವನು ನೀ ತಿಳಿಯದಿರುವೆ
ಸೃಷ್ಟಿಕರ್ತನು ರಕ್ಷಿಸುತ್ತಿರುವ
ದುರಿತಂಗಳ ರಾಸಿಯ
ಬೆಟ್ಟಗಳ ತರಿದೊಟ್ಟುತಿರುವ
ಅದು ತಿಳಿಯದು ನೀ ಬಲು
ಕಷ್ಟಗಳ ಪಡುತಿರ್ಪ ವಿಷಯಗಳ
ನೋಡುತ ನಗುತಿರುವ
ಇಷ್ಟು ಈತನ ಪ್ರಭಾವವು ತಿಳಿಯದೆ
ಲಕ್ಷ್ಮೀರಮಣ ರಕ್ಷಿಸಿಮತ ಸ್ಮರಿಸದೆ[೬೬]

ಎಂದು ನುಡಿದು ಹರಿನಾಮ ಸ್ಮರಣೆ ಮಾಡುವುದರಿಂದ ಹರಿದಾಸರೊಡನೆ ಕೂಡಿ ಸತ್ಸಂಗದಲ್ಲಿ ಪರಿಹಾರವಾಗುತ್ತದೆ ಎನುತ್ತಾರೆ. ಸಂಪ್ರದಾಯದ ನಡುವೆಯೇ ಬೆಳೆದು ಬಂದು ಮನಸ್ಸಿನ ನೆಮ್ಮದಿ ಧೈರ್ಯಗಳಿಗಾಗಿ ವ್ರತ, ನೇಮ, ಪೂಜೆಗಳನ್ನು ಭಕ್ತಿಯಿಂದ ನಡೆಸುತ್ತಾ ಬಂದ ಜೀವೂಬಾಯಿ ಸಾಕಷ್ಟು ಸಂಖ್ಯೆಯ ಸಂಪ್ರದಾಯದ ಹಾಡುಗಳನ್ನು ರಚಿಸಿದ್ದಾರೆ. ಹಸೆಗೆ ಕರೆಯುವುದು, ಆರತಿ ಎತ್ತುವುದು, ಬಾಗಿಲು ಕಟ್ಟುವುದು, ಉಡಿ ತುಂಬುವದು, ಜೋಗುಳ, ಮಂಗಳ, ಶೋಭಾನೆ ಇಂತಹ ಹಾಡುಗಳಲ್ಲಿ ಅವರಿಗಿರುವ ಧಾರ್ಮಿಕ ಸಂಪ್ರದಾಯದ ಅರಿವು ಶ್ರದ್ಧಾಭಕ್ತಿಗಳು ಗೋಚರವಾಗುತ್ತದೆ.

ಜೀವೂಬಾಯಿಯವರು ಪಾಲಿಸಿಕೊಂಡು ಬಂದ ಒಂದು ವಿಶಿಷ್ಟ ಪದ್ಧತಿ ಎಂದರೆ ಪ್ರತೀ ಯುಗಾದಿಯಂದು ಒಂದೋ ಎರಡೋ ಕೀರ್ತನೆಗಳನ್ನು ರಚಿಸಿ ಅದನ್ನು ಶ್ರೀಹರಿಗೆ ಅರ್ಪಿಸುವುದು. ಈ ಹಾಡುಗಳಲ್ಲಿ ಸಾಮಾನ್ಯವಾಗಿ ಸಂವತ್ಸರದ ಹೆಸರು ಇರುತ್ತದೆ. ಖಚಿತವಾಗಿ ಯುಗಾದಿಯಂದೇ ರಚಿತವಾದದ್ದು ಎಂದು ತಿಳಿದು ಬರುವ ೨೨ ಹಾಡುಗಳು ಮತ್ತು ಶ್ರೀರಾಮ ಜನನ ಮತ್ತು ಸೀತಾ ಕಲ್ಯಾಣ 'ಶ್ರೀಹರಿಲೀಲಾ' ಎಂಬ ಎರಡು ದೊಡ್ಡ ಹಾಡುಗಳು ಇಲ್ಲಿವೆ. ಇವುಗಲ್ಲಿ ಹರಿಸ್ತುತಿ ಸಂಪ್ರದಾಯದ ಹಾಡುಗಳು ಆತ್ಮನಿವೇದನೆ ಎಲ್ಲವೂ ಸೇರಿವೆ. ಉದಾಹರಣೆಗೆ

'ವಿಶ್ವವ್ಯಾಪಕ ನೀನೆ ವಿಶ್ವಮಾರುತಿ ನೀನೆ
ವಿಶ್ವಕರ್ತನು ನೀನೆ ವಿಶ್ವನೀಗೆ ಶ್ರೀ'

'ವಿಶ್ವವಸುನಾಮ ಸಂವತ್ಸರದೊಳು ಮೆರೆವ
ಪರಿ ಪರಿ ವಿಧದಲಿ ಹರಿ ಸ್ಮರಣೆಯ ಮಾಡೆ'
ಪರಾಭವ ನಾಮ ಸಂವತ್ಸರದಿ

'ಮಂಗಳಾಂಗ ಪ್ಲವಂಗ ವತ್ಸರ
ಗಂಗಾಜನಕ ನಿನ್ನಂಘ್ರಿಭಜಕರ'
'ಸೌಮ್ಯ ನಾಮ ಸಂವತ್ಸರದಂದು
ನೇಮದಿಂದ ಭಜಪ ಭಕುತರ'
'ಸಾಧಾರಣ ವತ್ಸರದಲಿ ಸಲಹುವ
ಶ್ರೀದ ಕಮಲನಾಭ ವಿಠಲ ಸುಜನರ'

ಹೀಗೆ ಜೀವಮ್ಮನವರ ಸಣ್ಣ ಹಾಡುಗಳು ಬಹಳ ವೈವಿಧ್ಯಮಯವಾಗಿದ್ದು ಅವರ ಕವಿತಾ ಸಾಮರ್ಥ್ಯ ಸಹಜ ಪ್ರತಿಭೆಯಿಂದ ಪುರಾಣ ಪುಣ್ಯ ಕತೆಗಳು, ಸಂಪ್ರದಾಯದ ಆಚಾರ ವಿಚಾರಗಳನ್ನೊಳಗೊಂಡ ಶುದ್ಧ ಭಕ್ತಿ ನಿರೂಪಣೆಯ ಕೀರ್ತನೆಗಳಾಗಿ ಹೊರ ಹೊಮ್ಮಿವೆ. ಅಲ್ಲದೆ ಜೀವೂಬಾಯಿಯವರು ಒಟ್ಟು ಹತ್ತು ದೀರ್ಘ ಕೃತಿಗಳನ್ನು ರಚಿಸಿದ್ದಾರೆ ಅವುಗಳಲ್ಲಿ 'ಶ್ರೀಪುರಂದರ ವಿಠಲದಾಸರ ಚರಿತ್ರೆ' ಎಲ್ಲಕ್ಕಿಂತ ದೀರ್ಘವಾದ ಕೃತಿಯಾಗಿದೆ. ಗದ್ಯ ಮತ್ತು ಪದ್ಯ ಮಿಶ್ರಿತವಾಗಿ 'ಶ್ರೀರಾಮ ಜನನ ಮತ್ತು ಸೀತಾ ಕಲ್ಯಾಣ' 'ಗಾಲವ ಚರಿತ್ರೆ' 'ಶ್ರೀಪಾಂಡುರಂಗ ಚರಿತ್ರೆ' 'ಶ್ರೀ ಹರಿಲೀಲಾ' 'ಸಮುದ್ರಮಥನ' 'ಶ್ರೀ ವರ ಮಹಾಲಕ್ಷ್ಮಿಯ ಕಥೆ' 'ಶ್ರೀಕೃಷ್ಣ ಲೀಲಾ' ಶ್ರೀ ಹರಿಮಾನಸ ಪೂಜಾ 'ರಾಧಾಮಾಧವ ವಿಲಾಸ' ಇವು ಮುಖ್ಯವಾಗಿವೆ.

ಜೀವೂಬಾಯಿಯವರ ದೀರ್ಘ ಕೀರ್ತನೆಗಳು ಹರಿಕತೆಯ ಧಾಟಿಯಲ್ಲಿದ್ದು ಗದ್ಯ, ಪದ್ಯ ಹಾಡುಗಳ ಮಿಶ್ರಣವಾಗಿ ಮೊದಲೆ ಹೇಳಿದಂತೆ ಗ್ರಾಂಥಿಕ ಸಾಹಿತ್ಯದ ಛಂದಸ್ಸಿನ ಹಾಗೂ ನಿರ್ಧಿಷ್ಟವಾಗಿ ನಿಯಮಗಳನ್ನು ಅನುಸರಿಸದೆ ಕಂದ, ಷಟ್ಪದಿ, ಸೀಪ ಪದ್ಯ ಬಂದು ಕವಯತ್ರಿ ಛಂದಸ್ಸನ್ನು ನಿರ್ದೇಶಿಸಿದ್ದರೂ, ಅವು ಹಾಡಿನ ರೂಪವನ್ನು ಧಾಟಿಯನ್ನು ಅನುಸರಿಸಿದಂತೆ ತೋರುತ್ತವೆ. ಆಕೆಯ 'ಅರಿಯೆ ಯತಿ ಗಣ ಪ್ರಾಸನೇಮಗಳನೆಂದೆಂದು' ಎಂದು ಹೇಳಿಕೊಂಡಿದ್ದಾರೆ. ಕಥಾ ವಸ್ತುವಿಗಿಂತ ಭಕ್ತಿ ಪ್ರಧಾನವಾದ ಹಾಡುಗಳೇ ಹೆಚ್ಚಾಗಿ ಕಂಡು ಬಂದಿವೆ.

ಜೀವಮ್ಮನವರ ಭಾಷೆ ಬಹು ಸರಳವಾಗಿದ್ದು ಆಡುನುಡಿಗೆ ಹತ್ತಿರವಾಗಿ ರಚನೆಯಾದ ಹಾಡುಗಳಲ್ಲಿ ಶಬ್ದಾಲಂಕಾರಗಳ ಆಡಂಬರವಿಲ್ಲ. ಪ್ರಾಸ ನಿಯಮಿತವಾಗಿ ಬಂದಿಲ್ಲ. ಮತ್ತು ವರ್ಣನೆಗಳು ಹಿತಮಿತವಾಗಿ ಬಂದಿದೆ. ಪುರವರ್ಣನೆ, ಮದುವೆಯ ವೈಭವದ ವರ್ಣನೆ, ಹರಿಮೋಹಿನಿ ಅಲಂಕಾರದ ವರ್ಣನೆ, ದಶವತಾರ ವರ್ಣನೆ ಇತ್ಯಾದಿಗಳು ಜೀವೂಬಾಯಿಯವರ ವರ್ಣನಾವೈಖರಿಯನ್ನು

ತಿಳಿಯಪಡಿಸುತ್ತದೆ. ಹರಿಯ ಮಹಿಮೆಯೇ ಅವರ ಕೃತಿಗಳ ಮುಖ್ಯ ವಸ್ತುವಾದ್ದರಿಂದ ಭಕ್ತಿರಸವೇ ಪ್ರಧಾನವಾಗಿ ಶೃಂಗಾರ 'ಹಾಸ್ಯ' ಕರುಣಗಳು ಅಲ್ಲಲ್ಲಿ ಪೂರಕವಾಗಿ ಬಂದಿವೆ.

## ಇತರ ಹರಿದಾಸ ಮಹಿಳೆಯರು

ಹರಿದಾಸ ಸಾಹಿತ್ಯದಲ್ಲಿ ಈ ಮೇಲೆ ಹೇಳಿದ ಮಹಿಳಾ ಕೃತಿಕಾರರನ್ನು ಬಿಟ್ಟರೆ ವಿಸ್ತೃತವಾಗಿ ಬರವಣಿಗೆ ನಡೆಸಿದವರಾಗಲಿ, ಅತ್ಯಂತ ಪ್ರತಿಭಾನ್ವಿತರಾಗಲಿ ಕಂಡು ಬರುವುದಿಲ್ಲ. ೧೮೫೦ ರಿಂದ ಈಚಿನ ಕಾಲದಲ್ಲಿ ಕೆಲವರು ವೈಷ್ಣವ ಪಂಥದಲ್ಲಿ ಕೃತಿ ರಚನೆ ಮಾಡಿರುವುದನ್ನು ಡಾ. ಸರೋಜಿನಿ ಮಹಿಷಿಯವರು ಅಂಥ ಮಹಿಳೆಯರ ಬಗ್ಗೆ ವಿವರಗಳನ್ನು ಕೊಟ್ಟಿದ್ದಾರೆ. (ಕರ್ನಾಟಕ ಕವಯಿತ್ರಿಯರು)

ಚ.ರಾ.ಚೆಲ್ಲಮ್ಮ (೧೮೫೦) ಗಣಪಕ್ಕ (೧೮೭೦) ಸುಂದರ ಬಾಯಿ (೧೮೭೫) ಪನ್ನಿ ಲಕ್ಷ್ಮೀಬಾಯಿ (೧೮೮೦) ಶಾಂತಿಬಾಯಿ (೧೮೮೦)ಇವರ ಬಹುಪಾಲು ಕೃತಿಗಳಲ್ಲಿ ಭಕ್ತಿಪ್ರಧಾನವಾದ ವೈವಿಧ್ಯತೆಯ ಅಂಶಗಳನ್ನು ಗುರುತಿಸಬಹುದು.

ಕೆಲವು ಕವಿಯಿತ್ರಿಯರನ್ನು ಬಿಟ್ಟರೆ ಈಗಲೂ ಈ ವೈಷ್ಣವ ಭಕ್ತಿ ಪಂಥದ ಪರಂಪರೆಯನ್ನು ಮುಂದುವರೆಸಿಕೊಂಡು ಬರುತ್ತಿರುವವರಲ್ಲಿ ಉಡುಪಿಯ ವಾದಿರಾಜಮಠ ಗಿರಿಬಾಲೆ, ಮೈಸೂರಿನ ವಿದ್ಯಾರಣ್ಯಪುರಂ ಜೀವೂಬಾಯಿ, ಬೆಂಗಳೂರಿನ ಚಾಮರಾಜ ಪೇಟೆಯ ರಾಜಾಮಣಿಯವರನ್ನು ಹೆಸರಿಸಬಹುದು. ಇವರಲ್ಲದೆ ಇನ್ನೂ ಎಷ್ಟೋ ಜನ ಅಜ್ಞಾತ ಕವಿಯಿತ್ರಿಯರು ಈ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಮತ್ತು ಬರುತ್ತಿದ್ದಾರೆ.

ಹರಿದಾಸ ಪರಂಪರೆಯಲ್ಲಿ ಮಹಿಳೆಯರ ಬದುಕು ಸಾಹಿತ್ಯಕ್ಕೆ ಪ್ರೇರಣೆಯನ್ನು ನೀಡಿದೆ. ಬಹುತೇಕ ಮಹಿಳೆಯರು ಬಾಲ ವಿಧವೆಯರಾಗಿದ್ದವರು. ಬದುಕಿನ ಪ್ರಾರಂಭದ ಹಂತದಲ್ಲಿ ತಮ್ಮ ಸುಖಮಯವಾದ ಬದುಕನ್ನು ತ್ಯಜಿಸಿ ವೈರಾಗ್ಯದೆಡೆಗೆ ಮನಸ್ಸನ್ನು ಸೆಳೆದು ದೈವ ಸಾಕ್ಷಾತ್ಕಾರಕ್ಕೆ ಪ್ರೇರೇಪಿಸಿತು.

ಕೇವಲ ಸಾಹಿತ್ಯ ರಚನೆಯೊಂದೇ ಗುರಿಯಾಗಿರದೇ ಭಗವಂತನ ಸಾಕ್ಷಾತ್ಕಾರಕ್ಕೆ ಹಂಬಲಿಸಿದರು. ಹೆಚ್ಚಿನ ಮಹಿಳಾ ಕವಯತ್ರಿಯರು ಕುರಿತೋದದೆಯೇ ಕಾವ್ಯಪ್ರಯೋಗ ಪರಿಣತಮತಿಗಳು ತಾವು ಬದುಕಿನುದ್ದಕ್ಕೂ ನೋವು, ನಿರಾಶೆಯನ್ನು ಹೊಂದಿದ್ದರು. ಜೀವನ ಪ್ರೇಮವನ್ನು ಸಾರುತ್ತಾ ಹರ್ಷ, ಉಲ್ಲಾಸಗಳನ್ನು ಚಿಮ್ಮಿಸುತ್ತಾ ಭಕ್ತಿಯ ಪರಿಮಳವನ್ನು ಬೀರಿದರು. ಆಗಿನ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನ ಕಲ್ಪಿಸಿಕೊಂಡರೆ ಅವರ ಸಾಹಿತ್ಯ ರಚನೆ ಆಶ್ಚರ್ಯವನ್ನುಂಟುಮಾಡುತ್ತದೆ. ಎಲ್ಲಾ ಹೆಣ್ಣು ಮಕ್ಕಳು ವ್ರತ, ನಾಮಕರಣ, ಮದುವೆ, ಉತ್ಸವ, ಗೃಹ ಪ್ರವೇಶದ ಸಂದರ್ಭದಲ್ಲಿ ಒಟ್ಟಿಗೆ ಸೇರಿ ಮುಯ್ಯದ ಹಾಡು, ಬಾಗಿಲಕಟ್ಟೊ ಹಾಡು, ಬೀಗರ ಹಾಡು, ಆರತಿ ಹಾಡುಗಳನ್ನು ಹಾಡಿ ಬದುಕಿಗೆ

ಅರ್ಥಪೂರ್ಣತೆಯನ್ನು ತಂದು ಕೊಟ್ಟಿದ್ದಾರೆ. ಮೇಲ್ನೋಟಕ್ಕೆ ಧಾರ್ಮಿಕ ಆಚರಣೆಯೆನಿಸಿದರೂ ಅದರ ತಾತ್ಪರ್ಯವನ್ನು ಕಂಡಾಗ 'ಸಮುದಾಯ ಪ್ರಜ್ಞೆ' ತಿಳಿಯುತ್ತದೆ. ಸಮಾಜದ ಲೋಪದೋಷಗಳನ್ನು ಖಂಡಿಸದೇ ಅವುಗಳೊಂದಿಗೆ ತಮ್ಮ ಬದುಕನ್ನು ಹೊಂದಿಸಿಕೊಂಡು ಬದುಕಿ ಬಾಳಿರುವುದು ಕಂಡು ಬರುತ್ತದೆ. ವ್ಯಕ್ತಿಗತ ನೆಲೆಯಲ್ಲಿ ಬದುಕನ್ನು ಹಸನುಗೊಳಿಸುವ ಕ್ರಿಯೆಗೆ ಮಹತ್ವ ನೀಡುವುದು ಗಮನಾರ್ಹವೆನಿಸುತ್ತದೆ. ಕನ್ನಡ ಹರಿದಾಸ ಸಾಹಿತ್ಯದ ಪರಂಪರೆಯು ಇಂದಿಗೂ ಜೀವಂತವಾಗುಳಿಯಲು ಮಹಿಳೆಯರ ಕಾಣಿಕೆ ಮೌಲ್ಯಯುತವಾದುದು. ಈ ದಿಸೆಯಲ್ಲಿ ಹಲವಾರು ಮಹಿಳೆಯರು ಕೀರ್ತನೆ, ಉಗಾಭೋಗ, ಸುಳಾದಿಗಳನ್ನು ರಚಿಸುವುದರ ಮೂಲಕ ದಾಸ ಸಾಹಿತ್ಯಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕಾಣಿಕೆ ಸಲ್ಲಿಸಿದ್ದಾರೆ.

**ಅಡಿ ಟಿಪ್ಪಣಿಗಳು**

೦೧. ಟಿ.ಎನ್.ನಾಗರತ್ನ, ಹರಿದಾಸ ಭಕ್ತಿ ಸ್ವರೂಪ, ೧೯೮೬, ಪು.೧೨

೦೨. ರಂ.ಶ್ರೀ.ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ, ೧೯೯೩, ಪು.೨೧೨

೦೩. ಎಲ್.ಬಸವರಾಜು, ಶಿವದಾಸ ಗೀತಾಂಜಲಿ ೧೯೯೦ ಪು.೬೬

೦೪. ರಂ.ಶ್ರೀ ಮುಗಳಿ, ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳು ೧೯೭೨ ಪು.೨೬೨

೦೫. ಎಲ್.ಬಸವರಾಜು, ತಿರುಮಲಾರ್ಯನ ಶೃಂಗಾರ ನಿದರ್ಶನ(ಪ್ರಸ್ತಾವನೆ), ೧೯೭೧ ಪು.೩೧

೦೬. ಎಚ್.ಎಸ್.ವೆಂಕಟೇಶ ಮೂರ್ತಿ, ಕೀರ್ತನಕಾರರು, ೧೯೭೭, ಪು.೪

೦೭. ಆರ್.ಎಸ್.ಪಂಚಮುಖಿ, ಹರಿದಾಸ ಸಾಹಿತ್ಯ, ಪು.೪೯

೦೮. ರಂ.ಶ್ರೀ ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ, ೧೯೯೩, ಪು.೨೯೮

೦೯. ಸುಬೋದರಾಮರಾವ್(ಸಂ), ಶ್ರೀ ಪುರಂದರದಾಸರ ಕೃತಿಗಳು, ಪು.೨

೧೦. ಸುಬೋದರಾಮರಾವ್(ಸಂ), ಶ್ರೀ ವಾದಿರಾಜ ಕೃತಿಗಳು, ಪು.೪

೧೧. ಆರ್.ಎಸ್.ಪಂಚಮುಖಿ, ಹರಿದಾಸ ಸಾಹಿತ್ಯ, ಪು.೪೯

೧೨. ಟಿ.ಎನ್.ನಾಗರತ್ನ, ಹರಿದಾಸರ ಭಕ್ತಿ ಸ್ವರೂಪ, ೧೯೮೬, ಪು.೧೨

೧೩. ಅದೇ ಪು.೧೨

೧೪. ಅದೇ ಪು.೧೩

೧೫. ಅದೇ ಪು.೧೩

೧೬. ಆರ್.ಜಿ.ಗುಡಿ, ದಾಸಸಾಹಿತ್ಯದ ಸೈದ್ಧಾಂತಿಕ ಅಧ್ಯಯನ, ೧೯೯೪, ಪು.೧೮

೧೭. ಹಣಮಂತ ತಾಸಗಾಂವಕರ(ಸಂ), ಗಲಗಲಿ ಅವ್ವನವರ ಕೀರ್ತನೆಗಳು, ೨೦೦೩, ಪು.೩೦೪

೧೮. ಅದೇ ಪು.೩೦೫

೧೯. ಅದೇ ಪು.೩೦೧

೨೦. ಅದೇ ಪು.೧೪೮

೨೧. ಅದೇ ಪು.೧೮೬

೨೨. ಅದೇ ಪು.೧೮೧

೨೩. ಅದೇ ಪು.೨೪

೨೪. ಟಿ.ಎನ್.ನಾಗರತ್ನ(ಸಂ), ಹರಪನಹಳ್ಳಿ ಭೀಮವ್ವನ ಹಾಡುಗಳು, ೧೯೮೪, ಪು.೨೧೪

೨೫. ಟಿ.ಎನ್.ನಾಗರತ್ನ(ಸಂ), ಹರಪನಹಳ್ಳಿ ಭೀಮವ್ವನ ಕೀರ್ತನೆಗಳು, ೨೦೦೩, ಪು.೬೯

೨೬. ಅದೇ ಪು.೬೭

೨೭. ಅದೇ ಪು.೧೮೩

೨೮. ಅದೇ ಪು.೪೧

೨೯. ಅದೇ ಪು.೧೪೫

೩೦. ಟಿ.ಎನ್.ನಾಗರತ್ನ(ಸಂ), ಹರಪನಹಳ್ಳಿ ಭೀಮವ್ವನ ಹಾಡುಗಳು, ೧೯೮೪, ಪು.೬೪

೩೧. ಅದೇ ಪು.೬೪

೩೨. ಅದೇ ಪು.೨೧೫

೩೩. ಅದೇ ಪು.೧೯೮

೩೪. ಅದೇ ಪು.೨೦೩

೩೫. ಅದೇ ಪು.೫೭

೩೬. ಅದೇ ಪು.೨೧೩

೩೭. ಅದೇ ಪು.೨೦೫

೩೮. ಅದೇ ಪು.೨

೩೯. ಅದೇ ಪು.೧೫೧

೪೦. ಅದೇ ಪು.೨

೪೧. ಅದೇ ಪು.೮೬

೪೨. ಅದೇ ಪು.೨೮೪

೪೩. ನಂಜನಗೂಡು ತಿರುಮಲಾಂಬಾ ಮತ್ತು ಇತರರು, ಮಹಿಳಾ ಹರಿದಾಸರ ಕೀರ್ತನೆಗಳು, ೨೦೦೩, ಪು.೧೭೬

೪೪. ಅದೇ ಪು.೨೦೭

೪೫. ಅದೇ ಪು.೨೭೩

೪೬. ಅದೇ ಪು.೨೬೪

೪೭. ಅನಂತ ಪದ್ಮನಾಭ ರಾವ್(ಸಂ), **ಅಂಬಾಬಾಯಿ ಅವರ ಕೀರ್ತನೆಗಳು**, ೨೦೦೩, ಪು.೨೨೭

೪೮. ಅದೇ ಪು.೨೬೭

೪೯. ಅದೇ ಪು.೨೬೮

೫೦. ಅದೇ ಪು.೩೩೭

೫೧. ಅದೇ ಪು.೩೪೨

೫೨. ಅದೇ ಪು.೩೪೩

೫೩. ಅದೇ ಪು.೩೪೪

೫೪. ಅದೇ ಪು.೩೮೪

೫೫. ಲೀಲಾವತಿ ಎಸ್ ರಾವ್(ಸಂ), **ನಿಡಗುರುಕಿ ಜೀವೂಬಾಯಿಯವರ ಕೀರ್ತನೆಗಳು**, ೨೦೦೩, ಪು.೨೦

೫೬. ಅದೇ, ಪು.೨೩

೫೭. ಅದೇ ಪು.೧೦

೫೮. ಅದೇ ಪು.೪೮

೫೯. ಅದೇ ಪು.೮

೬೦. ಅದೇ ಪು.೧೧೮

೬೧. ಅದೇ ಪು.೧೨೧

೬೨. ಅದೇ ಪು.೧೨೩

೬೩. ಅದೇ ಪು.೧೨೪

೬೪. ಅದೇ ಪು.೧೨೫

೬೫. ಅದೇ ಪು.೧೪೦

೬೬. ಅದೇ ಪು.೧೫೦

೬೭. ಅದೇ ಪು.೧೯೧

# ಅಧ್ಯಾಯ ೩

# ಹೆಳವನಕಟ್ಟೆ ಗಿರಿಯಮ್ಮ : ಇತಿವೃತ್ತ ವಿಚಾರ

೩

# ಹೆಳವನಕಟ್ಟೆ ಗಿರಿಯಮ್ಮ : ಇತಿವೃತ್ತ ವಿಚಾರ

## ಹಿನ್ನೆಲೆ : ರಾಜಕೀಯ ಚರಿತ್ರೆ

ಅ. ಹದಿನೇಳನೆಯ ಶತಮಾನದ ಆರಂಭದಲ್ಲಿ ದಕ್ಷಿಣ ಭಾರತದ ವಿಜಯನಗರ ಸಾಮ್ರಾಜ್ಯದ ಅವನತಿಯಿಂದಾಗಿ ಅರಾಜಕತೆಯ ವಾತಾವರಣ ಮೂಡಿತ್ತು. ಎಲ್ಲೆಲ್ಲೂ ರಾಜಕೀಯ ಅನೈಕ್ಯತೆಯುಂಟಾಗಿ, ಸ್ವಾರ್ಥ ಸಾಧನೆಗಾಗಿ ಹವಣಿಸುತ್ತಿದ್ದ ಹಲವಾರು ಸಣ್ಣ ಪುಟ್ಟ ರಾಜರು ಪರಸ್ಪರ ಹೋರಾಡುತ್ತಿದ್ದರು. ತಮ್ಮ ಶಕ್ತಿ ಕುಗ್ಗಿದಾಗ ತಮ್ಮ ಶತ್ರುವನ್ನು ಸೋಲಿಸಲು ಬೇರೊಬ್ಬ ಪ್ರಬಲ ರಾಜನನ್ನೊ, ಸುಲ್ತಾನನ್ನೊ ಆಹ್ವಾನಿಸುತ್ತಿದ್ದರು. ತಾಳಿಕೋಟೆ ಕದನದ ನಂತರ ಅರವೀಡು ಮನೆತನದ ಅರಸರು ವಿಜಯನಗರ ಸಾಮ್ರಾಜ್ಯದ ಆಡಳಿತವನ್ನು ಮುಂದುವರಿಸಿದವರು. ವಿಜಯನಗರದ ಕೊನೆಯ ಅರಸನಾದ ಶ್ರೀರಂಗ ರಾಯನು ಬಿಜಾಪುರದ ಸುಲ್ತಾನನಿಂದ ಸೋಲಿಸಲ್ಪಟ್ಟರೂ, ಸಾಮ್ರಾಜ್ಯದ ಗತ ವೈಭವವನ್ನು ಪುನಃ ಸ್ಥಾಪಿಸುವ ಕನಸು ಕಾಣುತ್ತಾ ೧೬೭೫ರವರೆಗೂ ಜೀವಿಸಿದ್ದನು. ಸಾಮಂತ ನಾಯಕರಾರೂ ಅವನಲ್ಲಿ ನಿಷ್ಠೆಯನ್ನಾಗಲೀ ಸಹಕಾರವನ್ನಾಗಲಿ ತೋರಲಿಲ್ಲ. ರಾಜ್ಯವನ್ನು ಕಳೆದುಕೊಂಡು ಅಲೆಮಾರಿಯಾಗಿದ್ದ ಶ್ರೀರಂಗರಾಯನಿಗೆ ಮೈಸೂರು ಕಂಠೀರವ ನರಸರಾಜರು ಆಶ್ರಯ ನೀಡಿದರು ಎನ್ನಲಾಗುತ್ತಿದೆ. ವಿಜಯನಗರ ಸಾಮ್ರಾಜ್ಯದ ಉತ್ತರ ಭಾಗವನ್ನು ಬಿಜಾಪುರ ಗೋಲ್ಕಂಡದ ಸುಲ್ತಾನರು ಆಕ್ರಮಿಸಿಕೊಂಡಿದ್ದರು. ಬಹುಪಾಲು ಪ್ರಾಂತಗಳು ಸ್ವತಂತ್ರ ಘೋಷಣೆ ಮಾಡಿದ್ದವು. ಮಾಂಡಲಿಕರು ಹಲವಾರು ಸಣ್ಣಪುಟ್ಟ ರಾಜ್ಯಗಳನ್ನು ಕಟ್ಟಿಕೊಂಡರು. ದಕ್ಷಿಣದಲ್ಲಿ ಮಧುರೆ, ತಂಜಾವೂರು ಮುಂತಾದ ಪ್ರಾಂತ್ಯಗಳು ಸ್ವತಂತ್ರವಾದವು. ಇಂದಿನ ಕರ್ನಾಟಕದ ಉತ್ತರ ಭಾಗವೆಲ್ಲಾ ಬಿಜಾಪುರ ಮತ್ತು ಗೋಲ್ಕಂಡ ಸುಲ್ತಾನರ ವಶದಲ್ಲಿದ್ದವು. ಉಳಿದ ಭಾಗವು ಸಣ್ಣ ಸಣ್ಣ ರಾಜ್ಯಗಳಾಗಿ ಒಡೆದು ಹೋಗಿದ್ದವು. ದಕ್ಷಿಣ ಕರ್ನಾಟಕದಲ್ಲಿ ಮೈಸೂರಿನ ಒಡೆಯರು ಮತ್ತು ಇಕ್ಕೇರಿ ಅಥವಾ ಕೆಳದಿಯ ನಾಯಕರು ಪ್ರಬಲರಾದರು. ಇವಲ್ಲದೆ ಚಿತ್ರದುರ್ಗ, ಬಸವಾಪಟ್ಟಣ ಮುಂತಾದ ಸಣ್ಣ ರಾಜ್ಯಗಳೂ ಇದ್ದವು.

ಮೈಸೂರಿನ ಒಡೆಯರು ಚಂದ್ರವಂಶಕ್ಕೆ ಸೇರಿದವರೆಂದು, ಉತ್ತರದ ದ್ವಾರಕೆಯಿಂದ ಬಂದವರೆಂದೂ ಶಾಸನಗಳು ತಿಳಿಸುತ್ತವೆ. ಈ ಮನೆತನದ ಮೊಟ್ಟ ಮೊದಲ ದೊರೆ ಬೆಟ್ಟದ ಚಾಮರಾಜ ಒಡೆಯರು (೧೫೧೩-೧೫೭೫) ಅವರ ನಂತರ ಪಟ್ಟಕ್ಕೆ ಬಂದ ರಾಜ ಒಡೆಯರು ಸಮರ್ಥ ಯೋಧರೂ, ದಕ್ಷ

ಆಡಳಿತಗಾರರೂ ಆಗಿದ್ದರು. ಇವರು ಕೇವಲ ಮೂವತ್ತೂರು ಗ್ರಾಮಗಳನ್ನೊಳಗೊಂಡ ಸಣ್ಣ ಪ್ರಾಂತಗಳನ್ನು ರಾಜ್ಯವನ್ನಾಗಿ ಪರಿವರ್ತಿಸಿ ಸುಮಾರು ೪೦ ವರ್ಷಗಳ ದೀರ್ಘಕಾಲ ರಾಜ್ಯವಾಳಿದ ರಾಜ ಒಡೆಯರು ವಿಜಯನಗರದ ಪ್ರತಿನಿಧಿಯಾಗಿದ್ದ ತಿರುಮಲರಾಯನನ್ನು ೧೬೧೦ರಲ್ಲಿ ಶ್ರೀರಂಗಪಟ್ಟಣದಿಂದ ಓಡಿಸಿ ಅದನ್ನು ಸ್ವಾಧೀನ ಪಡಿಸಿಕೊಂಡರು. ಮೈಸೂರಿನ ಅರಸರು ತಾವು ವಿಜಯನಗರದ ಸಾಮಂತರೆಂದು ನಂತರದ ಶಾಸನಗಳಲ್ಲಿ ಹೇಳಿಕೊಂಡಿದ್ದರೂ, ಎಲ್ಲಾ ರಾಜಕೀಯ ವಿಷಯಗಳಲ್ಲಿ ಮೈಸೂರು ೧೬೧೦ರಲ್ಲಿಯೇ ಸ್ವತಂತ್ರವಾಯಿತು. ಆ ಕಾಲದಲ್ಲಿ ನಡೆಯುತ್ತಿದ್ದ ನಿರಂತರ ಯುದ್ಧಗಳಿಗಾಗಿ ಮತ್ತು ರಾಜ್ಯದ ಆಡಳಿತಕ್ಕಾಗಿ ಪ್ರಬಲ ಸೈನ್ಯ ಬಲ ಹಾಗೂ ಉತ್ತಮ ಆಡಳಿತ ವ್ಯವಸ್ಥೆ ಅವಶ್ಯವಿದ್ದಿತು. ಇದನ್ನು ಮನಗಂಡ ರಾಜ ಒಡೆಯರು ಬೆಟ್ಟದರಸು ಎಂಬುವನನ್ನು ದಳವಾಯಿ ಮತ್ತು ಸರ್ವಾಧಿಕಾರಿಯಾಗಿ ನೇಮಿಸಿದರು. ರಾಜ ಒಡೆಯರು ಸರಗೂರು, ತೆರಕಣಾಂಬಿ, ಉಮ್ಮತ್ತೂರು ಮುಂತಾದ ಪ್ರಾಂತಗಳನ್ನು ಆಕ್ರಮಿಸಿ ಅವುಗಳ ಆಡಳಿತಕ್ಕೆ ಸಮರ್ಥ ಅಧಿಕಾರಿಗಳನ್ನು ನೇಮಿಸಿದರು ಎಂಬ ಬಗ್ಗೆ ದಾಖಲೆಗಳಿವೆ. ರಾಜ್ಯದ ಪ್ರತಿಹಳ್ಳಿಗೂ ಮೇಲ್ವಿಚಾರಣೆಗಾಗಿ ರಕ್ಷಣೆ ಮತ್ತು ತೆರಿಗೆಗಳನ್ನು ಸಂಗ್ರಹಿಸಲು ಅಧಿಕಾರಿಗಳನ್ನು ನೇಮಕ ಮಾಡಿದರು. ಇವರು ಮೇಲುಕೋಟೆ ಮತ್ತು ನಂಜನಗೂಡುಗಳಲ್ಲಿ ದೇವಾಲಯಗಳನ್ನು ಕಟ್ಟಿಸಿದರು. ನವರಾತ್ರಿ ಉತ್ಸವದ ಆಚರಣೆಯನ್ನು ಧಾರ್ಮಿಕ ತಳಹದಿಯ ಮೇಲೆ ವಿಜೃಂಭಣೆಯಿಂದ ನಡೆಸಲು ಆರಂಭಿಸಿದರು. ಅಲ್ಲದೆ ಕನ್ನಡ ಸಾಹಿತ್ಯವನ್ನು ಪ್ರೋತ್ಸಾಹಿಸಿದರು. ಸಿಂಗಾರೈಯ್ಯಂಗಾರ್ ರವರು 'ಶ್ರೀರಂಗಮಹಾತ್ಮೆ' ಮತ್ತು ತಿರುಮಲೈಯ್ಯಂಗಾರ್ ಅವರು 'ಕರ್ಣ ವೃತ್ತಾಂತ' ಎಂಬ ಗ್ರಂಥಗಳನ್ನು ರಚಿಸಿದರು. ರಾಜ ಒಡೆಯರು ೧೬೧೭ರಲ್ಲಿ ಮೃತ್ಯು ವಶರಾದರು. ನಂತರ ಅವರ ಮೊಮ್ಮಗ ಐದನೆಯ ಚಾಮರಾಜ ಒಡೆಯರು ಪಟ್ಟಕ್ಕೆ ಬಂದ ಬಗ್ಗೆ ಮಹತ್ವದ ವಿವರಗಳಿವೆ.

ಚಾಮರಾಜ ಒಡೆಯರ ೧೬೧೭-೧೬೩೭ ಆಳ್ವಿಕೆಯ ಆರಂಭ ಕಾಲದಲ್ಲಿ ದಳವಾಯಿ ಬೆಟ್ಟದರಸುವಿನ ಕೈಯಲ್ಲಿದ್ದ ಆಡಳಿತ ಸೂತ್ರವನ್ನು ಚಾಮರಾಜ ಒಡೆಯರು ತಮ್ಮ ಕೈಗೆ ತೆಗೆದುಕೊಂಡರು. ಇವರು ರಾಜ್ಯದ ಗಡಿಗಳನ್ನು ವಿಸ್ತರಿಸುವ ಕಾರ್ಯದಲ್ಲಿ ತೊಡಗಿ ಚನ್ನಪಟ್ಟಣ ಮುಂತಾದ ಪ್ರಾಂತಗಳನ್ನು ಆಕ್ರಮಿಸಿಕೊಂಡರು. ಚಾಮರಾಜ ಒಡೆಯರ ಆಡಳಿತದ ಅಂತ್ಯದ ವೇಳೆಗೆ ಮೈಸೂರು ರಾಜ್ಯವು ಉತ್ತರಕ್ಕೆ ಚನ್ನಪಟ್ಟಣ ಮತ್ತು ನಾಗಮಂಡಲ ಪ್ರದೇಶಗಳವರೆಗೂ ಪಶ್ಚಿಮ ಮತ್ತು ವಾಯುವ್ಯಕ್ಕೆ ಪಿರಿಯಾಪಟ್ಟಣ ಮತ್ತು ಚನ್ನರಾಯಪಟ್ಟಣಗಳವರೆಗೂ ಪೂರ್ವ ಮತ್ತು ಆಗ್ನೇಯ ದಿಕ್ಕಿಗೆ ಮಳವಳ್ಳಿ ಮತ್ತು ವಣ್ಣಾಯಕನ ಕೋಟೆಗಳವರೆಗೂ ಹರಡಿದ್ದಿತು.

ಚಾಮರಾಜ ಒಡೆಯರ ಕಾಲದಲ್ಲಿ ಉತ್ತಮ ಆಡಳಿತ ವ್ಯವಸ್ಥೆಯನ್ನು ರೂಪಿಸಲಾಗಿತ್ತು. ಹೊಸದಾಗಿ ಆಕ್ರಮಿಸಿಕೊಂಡ ಪ್ರದೇಶಗಳ ಆಂತರಿಕ ಆಡಳಿತವನ್ನು ನಿರ್ವಹಿಸಲು ಕಾರ್ಯಕರ್ತರನ್ನು ನಿಯಮಿಸಿದರು. ಸೈನ್ಯ ಮತ್ತು ಯುದ್ಧ ಸಾಮಗ್ರಿಗಳನ್ನು ಅಭಿವೃದ್ಧಿಗೊಳಿಸಿದರು. ವಿಶಾಲ ಧಾರ್ಮಿಕ

ಮನೋಭಾವವನ್ನು ಹೊಂದಿದ್ದ ಚಾಮರಾಜರು ಎಲ್ಲಾ ಧರ್ಮಗಳನ್ನೂ ಸಮಾನ ದೃಷ್ಟಿಯಿಂದ ಪ್ರೋತ್ಸಾಹಿಸಿದರು. ಇವರು ಅನೇಕ ಪ್ರಜಾಹಿತ ಕಾರ್ಯಗಳನ್ನು ಕೈಗೊಂಡರು. ಶ್ರೀರಂಗಪಟ್ಟಣದ ಬಳಿ ಕಾವೇರಿನದಿಯ ಕಾಲುವೆಗಳನ್ನು ಅಭಿವೃದ್ಧಿಗೊಳಿಸಿ ಸೇತುವೆ ನಿರ್ಮಾಣ ಮಾಡಿದರು. ಉತ್ತಮ ಕುದುರೆ ಸವಾರರೂ, ಸಂಗೀತ ಪ್ರೇಮಿಗಳೂ ಹಾಗೂ ಸಾಹಿತ್ಯಾಸಕ್ತರೂ ಆಗಿದ್ದ ಚಾಮರಾಜ ಒಡೆಯರ ಆಶ್ರಯದಲ್ಲಿ ರಾಮಚಂದ್ರ ಮತ್ತು ಪದ್ಮಣ್ಣ ಎಂಬ ಇಬ್ಬರು ಪಂಡಿತರು ಅಶ್ವಶಾಸ್ತ್ರಕ್ಕೆ ಸಂಬಂಧಿಸಿದ 'ಅಶ್ವಶಾಸ್ತ್ರ' ಮತ್ತು 'ಹಯಸಾರ ಸಮುಚ್ಚಯ' ಎಂಬ ಎರಡು ಗ್ರಂಥಗಳನ್ನು ರಚಿಸಿದರು. ಸ್ವತಃ ವಿದ್ವಾಂಸರಾಗಿದ್ದ ಚಾಮರಾಜರು 'ಚಾಮರಾಜೋಕ್ತಿ ವಿಲಾಸ' ಎಂಬ ಹೆಸರಿನಲ್ಲಿ ವಾಲ್ಮೀಕಿ ರಾಮಾಯಣವನ್ನು ಕನ್ನಡ ಗದ್ಯದಲ್ಲಿ ರಚಿಸಿದರು. ಈ ಕಾಲದ ಮತ್ತೊಂದು ಪ್ರಮುಖ ಗ್ರಂಥ 'ಬ್ರಹ್ಮೋತ್ತರಕಾಂಡ' ಚಾಮರಾಜರ ನಂತರ ಪಟ್ಟಕ್ಕೆ ಬಂದ ೨ನೇ ಚಾಮರಾಜ ಒಡೆಯರು ಮರಣಕ್ಕೆ ಈಡಾದುದರಿಂದ ರಾಜ ಒಡೆಯರ ಅಣ್ಣ ಬೆಟ್ಟದ ಚಾಮರಾಜ ಒಡೆಯರ ಮಗ ಕಂಠೀರವ ನರಸರಾಜರು ಪಟ್ಟಕ್ಕೆ ಬಂದರು ಎಂಬ ಮಾಹಿತಿಯನ್ನು ಚರಿತ್ರೆಕಾರರು ದಾಖಲಿಸಿದ್ದಾರೆ.

ಕಂಠೀರವ ನರಸರಾಜ ಒಡೆಯರು (೧೬೩೮-೧೬೫೯) ಎಳೆಯ ವಯಸ್ಸಿನಿಂದಲೂ ಪರಾಕ್ರಮ, ಸಾಹಸ ಶೌರ್ಯ ಮನೋಭಾವವುಳ್ಳವರಾಗಿದ್ದ ಇವರು ಮಾರು ವೇಷದಿಂದ ತಿರುಚನಾಪಳ್ಳಿಗೆ ಹೋಗಿ ಅಲ್ಲಿ ಜಂಭದಿಂದ ಸವಾಲು ಹಾಕುತ್ತಿದ್ದ ಜಟ್ಟಿಯನ್ನು ಸೋಲಿಸಿದರು. ಕಂಠೀರವ ನರಸರಾಜರು ಪಟ್ಟಕ್ಕೆ ಬಂದ ಮರು ವರ್ಷದಲ್ಲಿಯೇ ಬಿಜಾಪುರ ಸುಲ್ತಾನನ ದಾಳಿಯನ್ನು ಎದುರಿಸಬೇಕಾಯಿತು. ವಿಜಾಪುರ ಸುಲ್ತಾನನು ರಣದುಲ್ಲಾಖಾನ್ ಮತ್ತು ಷಹಜಿ ನೇತೃತ್ವದಲ್ಲಿ ಮೈಸೂರಿನ ವಿರುದ್ಧ ದೊಡ್ಡ ಸೈನ್ಯವನ್ನು ಕಳುಹಿಸಿದನು. ರಣದುಲ್ಲಾಖಾನನು ಶಿರಾ, ತುಮಕೂರು ಮತ್ತು ಬೆಂಗಳೂರು ಪ್ರಾಂತಗಳನ್ನು ವಶಪಡಿಸಿಕೊಂಡನು. ಬೆಂಗಳೂರಿನ ಕೆಂಪೇಗೌಡ ಮತ್ತು ಬಿಜಾಪುರ ಸೈನ್ಯದೊಡನೆ ಒಪ್ಪಂದ ಉಂಟಾಗಿ ಕೆಂಪೇಗೌಡನಿಗೆ ಮಾಗಡಿ ಪ್ರಾಂತವನ್ನು ಕೊಡಲಾಯಿತು. ಬಿಜಾಪುರ ಸೈನ್ಯದಲ್ಲಿ ಪ್ರಮುಖ ಸೇನಾನಾಯಕನೂ ವೀರ ಶಿವಾಜಿಯ ತಂದೆಯೂ ಆದ ಷಹಜಿಯನ್ನು ಬೆಂಗಳೂರು ಪ್ರಾಂತದ ಆಡಳಿತ ನಿರ್ವಹಣೆಗೆ ನೇಮಕ ಮಾಡಲಾಯಿತು. ರಣದುಲ್ಲಾಖಾನನು ೧೬೩೯ರಲ್ಲಿ ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದನು. ಇದರಿಂದ ಅಪಾರ ನಷ್ಟಕ್ಕೆ ಗುರಿಯಾದ ಕಂಠೀರವ ನರಸರಾಜನು ಕಪ್ಪವನ್ನು ಕೊಡಲು ಅಂಗೀಕರಿಸಿ ಒಪ್ಪಂದವನ್ನು ಮಾಡಿಕೊಂಡರು. ಆದರೆ ಕಪ್ಪವನ್ನು ಕ್ರಮವಾಗಿ ಸಂದಾಯ ಮಾಡದಿದ್ದ ಕಾರಣ ಬಿಜಾಪುರ ಸುಲ್ತಾನನು ೧೬೪೦ರಲ್ಲಿ ಕಳುಹಿಸಿದ ಸೈನ್ಯವು ಬೆಂಗಳೂರಿನಲ್ಲಿ ಬೀಡು ಬಿಟ್ಟಿತು. ಮೈಸೂರಿನ ದಳವಾಯಿ ನಂಜರಾಜಯ್ಯನು ಶತ್ರು ಸೈನ್ಯದ ಮೇಲೆ ರಾಮದುರ್ಗದ ಬಳಿ ದಾಳಿ ಮಾಡಿದರು ಹುಲಿಯೂರು ದುರ್ಗ, ಬೇಗೂರು, ತುರವೇಕೆರೆ ಮತ್ತು ನೊಣವಿನಕೆರೆ ಪ್ರದೇಶಗಳಲ್ಲಿ ಮೈಸೂರು ಮತ್ತು ಬಿಜಾಪುರ ಸೈನ್ಯಗಳ ನಡುವೆ ಯುದ್ಧ ನಡೆಯಿತು. ಮೈಸೂರಿನ ಸೈನ್ಯವು ಹೋರಾಡಿ ವಿಜಾಪುರದ ದಾಳಿಯನ್ನು ತಡೆಯಿತು.

ವಿಜಾಪುರದ ದಾಳಿಗಳಿಂದ ಸತತ ಯುದ್ಧಗಳಲ್ಲಿ ತೊಡಗಿದ್ದರೂ, ಕಂಠೀರವ ನರಸರಾಜರು ರಾಜ್ಯದ ಗಡಿಗಳನ್ನು ವಿಸ್ತರಿಸಿದರು.

ಮಧುರೆಯ ನಾಯಕನಿಂದ ದಣ್ಣಾಯಕನ ಕೋಟೆ ಮತ್ತು ಸತ್ಯಮಂಗಲಗಳನ್ನು ಆಕ್ರಮಿಸಿಕೊಂಡರು. ಪಶ್ಚಿಮದಲ್ಲಿ ಅರಕಗೂಡು, ಬೆಟ್ಟದಪುರ ಮತ್ತು ಸೇಲಂ ಪ್ರಾಂತ್ಯದ ಹೊಸೂರನ್ನು ಆಕ್ರಮಿಸಿಕೊಂಡರು. ಮಾಗಡಿಯ ಇಮ್ಮಡಿ ಕೆಂಪೇಗೌಡನನ್ನು ಸೋಲಿಸಿ ಹೆಬ್ಬೂರನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡರು. ನಂತರ ಕಂಠೀರವ ನರಸರಾಜರು ನಾಯಕವಾಡಿ, ಯಲಹಂಕನಾಡು, ಚನ್ನಗಿರಿ ಮತ್ತು ಬಸವಾಪಟ್ಟಣ ಪ್ರದೇಶಗಳನ್ನು ಮುಸಲ್ಮಾನರಿಂದ ವಶಪಡಿಸಿಕೊಂಡರು.

ಕಂಠೀರವ ನರಸರಾಜರು ಉತ್ತಮ ಆಡಳಿತಗಾರರೂ ದಕ್ಷ ಯೋಧರೂ ಆಗಿದ್ದರು. ಅವರು ಶ್ರೀರಂಗಪಟ್ಟಣದ ಕೋಟೆಯನ್ನು ಸುಭದ್ರಗೊಳಿಸಿದರು. ಅನೇಕ ಅಗ್ರಹಾರ ಮತ್ತು ದೇವಾಲಯಗಳನ್ನು ಕಟ್ಟಿಸಿ ಅವುಗಳಿಗೆ ದತ್ತಿ ಬಿಟ್ಟುಕೊಟ್ಟರು. ಈ ರಾಜ ಮನೆತನದಲ್ಲಿಯೇ ಮೊದಲ ಬಾರಿಗೆ ಟಂಕ ಶಾಲೆಯನ್ನು ಸ್ಥಾಪಿಸಿ ಕಂಠೀರವ ನಾಣ್ಯಗಳನ್ನು ಚಲಾವಣೆಗೆ ತಂದರು. ದಳವಾಯಿಗಳು ದೀರ್ಘಕಾಲ ಅಧಿಕಾರದಲ್ಲಿ ಉಳಿದರೆ ರಾಜ್ಯದ ಭದ್ರತೆಗೆ ಅಪಾಯಕಾರಿಯೆಂದು ನರಸರಾಜರು ತಮ್ಮ ಆಳ್ವಿಕೆಯ ಕಾಲದಲ್ಲಿ ಹತ್ತು ಜನ ದಳವಾಯಿಗಳನ್ನು ಬದಲಾಯಿಸಿದರು. ಇವರು ಕಲೆ ಮತ್ತು ಸಾಹಿತ್ಯ ಪೋಷಣೆಯ ಜೊತೆಗೆ ಹಲವಾರು ಪ್ರಜಾಹಿತ ಕಾರ್ಯಗಳನ್ನು ಕೈಗೊಂಡರು. ಇವರ ಕಾಲದಲ್ಲಿ ರಚಿತವಾದ ಗ್ರಂಥಗಳೆಂದರೆ ಭಾಸ್ಕರನ 'ಬೇಹರಗಣಿತ' ಮತ್ತು ತಿಮ್ಮರಸನ 'ಮಾರ್ಕಂಡೇಯ ಪುರಾಣ' ಇವರ ಕಾಲದ ಮತ್ತೊಂದು ಪ್ರಮುಖ ಕೃತಿಯಾದ ಗೋವಿಂದ ವೈದ್ಯನ 'ಕಂಠೀರವ ನರಸರಾಜ ವಿಜಯ'ವು ಐತಿಹಾಸಿಕ ವಿಷಯವನ್ನೊಳಗೊಂಡಿದ್ದು, ಅಂದಿನ ಮೈಸೂರು ರಾಜ್ಯದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳ ಮೇಲೆ ವಿಶೇಷವಾಗಿ ಬೆಳಕು ಚೆಲ್ಲುತ್ತದೆ.

ಕಂಠೀರವ ನರಸರಾಜ ಒಡೆಯರ ನಂತರ ಮುಪ್ಪಿನ ದೇವರಾಜ ಒಡೆಯರ ಮಗ ದೊಡ್ಡ ದೇವರಾಜ ಒಡೆಯರು ಪಟ್ಟಕ್ಕೆ ಬಂದರು. ಇವರು ಅಧಿಕಾರಕ್ಕೆ ಬಂದಾಗ ದಕ್ಷಿಣ ಭಾರತದ ರಾಜಕೀಯವು ಕ್ಲಿಷ್ಟಕರ ವಾತಾವರಣದಲ್ಲಿತ್ತು. ದಕ್ಷಿಣದ ಬಹುಮುಖ್ಯ ರಾಜಕೀಯ ಕೇಂದ್ರಗಳಾಗಿದ್ದ ಬಿಜಾಪುರ ಮತ್ತು ಗೋಲ್ಕಂಡ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವುದಕ್ಕಾಗಿ ಔರಂಗಜೇಬನೊಡನೆ ಸೆಣಸಾಡುತ್ತಿದ್ದವು. ಬಿಜಾಪುರ ಸುಲ್ತಾನರ ಅಧೀನದಲ್ಲಿದ್ದ ಕರ್ನಾಟಕ ಪ್ರಾಂತಗಳನ್ನು ಷಹಜಿಯ ಆಡಳಿತಕ್ಕೆ ನೀಡಲಾಯಿತು. ಷಹಜಿ ಇತರೆ ಪಾಳೆಯಗಾರರ ಸಹಕಾರದೊಂದಿಗೆ ಬಿಜಾಪುರ ಸುಲ್ತಾನನ ಪರವಾಗಿ ದಕ್ಷಿಣ ಭಾರತದಲ್ಲಿ ಯುದ್ಧಗಳು ಮುಂದುವರಿದಿದ್ದವು. ಷಹಜಿ ಮತ್ತು ದೊಡ್ಡ ದೇವರಾಜ ಒಡೆಯರು ಪರಸ್ಪರ ಹೋರಾಡುವ ಸ್ಥಿತಿಯು ಅನಿವಾರ್ಯವಾಗಿತ್ತು. ಮೈಸೂರು ವಾಯುವ್ಯ ದಿಕ್ಕಿನಲ್ಲಿ ಶಿವಪ್ಪನಾಯಕನ ಆಳ್ವಿಕೆಯಲ್ಲಿ (೧೬೪೫-೧೬೬೦) ಇಕ್ಕೇರಿ ರಾಜ್ಯವು ದಿನೇ ದಿನೇ ಪ್ರಬಲವಾಯಿತು.

ವಿಜಯನಗರದ ಕೊನೆಯ ದೊರೆ ಶ್ರೀರಂಗರಾಯನು ರಾಜ್ಯವನ್ನು ಕಳೆದುಕೊಂಡು ನೆಲೆಯಿಲ್ಲದೆ ತನ್ನ ಸಾಮಂತರ ಬಳಿ ಆಶ್ರಯ ಪಡೆಯುವ ಸ್ಥಿತಿಯಲ್ಲಿದ್ದನು. ಮಧುರೆಯ ನಾಯಕನು ರಾಜಕೀಯ ಕಾರಣಗಳಿಂದಾಗಿ ಮೈಸೂರಿನ ಮೇಲೆ ಯುದ್ಧ ಸಾರಲು ಸಿದ್ಧನಿದ್ದನು. ಹಾಗೂ ಡಚ್, ಫ್ರೆಂಚ್ ಮತ್ತು ಬ್ರಿಟಿಷರು ಪೋರ್ಚುಗೀಸರಿಗೆ ಪ್ರತಿಸ್ಪರ್ಧಿಗಳಾಗಿ ತೀರ ಪ್ರದೇಶಗಳಲ್ಲಿ ಪೈಪೋಟಿ ನಡೆಯಿಸಿದ್ದರು. ಈ ಗೊಂದಲಮಯ ವಾತಾವರಣದಲ್ಲಿ ಇಕ್ಕೇರಿಯ ಶಿವಪ್ಪನಾಯಕನು ಬೇಳಗಿ, ತರೀಕೆರೆ ಮುಂತಾದ ರಾಜ್ಯಗಳ ಪಾಳೆಯಗಾರರ ನೆರವಿನಿಂದ ಮೈಸೂರಿನ ಮೇಲೆ ದಾಳಿ ನಡೆಸಿದನು. ಇಕ್ಕೇರಿ ಸೈನ್ಯವು ಶ್ರೀರಂಗಪಟ್ಟಣವನ್ನು ತಲುಪುವ ಮೊದಲೇ ದೊಡ್ಡ ದೇವರಾಜ ಒಡೆಯರು ವಿಜಾಪುರ ಸುಲ್ತಾನನ ಸಹಾಯವನ್ನು ಅಪೇಕ್ಷಿಸಿದರು. ಆದರೆ ಬಿಜಾಪುರದಿಂದ ಬಂದ ಸೈನ್ಯಾಧಿಕಾರಿಯೊಡನೆ ಶಿವಪ್ಪನಾಯಕನು ಒಪ್ಪಂದವನ್ನು ಮಾಡಿಕೊಂಡು ಅವನನ್ನು ಹಿಂತಿರುಗುವಂತೆ ಮಾಡಿದನು. ಆದರೂ ಶಿವಪ್ಪನಾಯಕನು ಜಯಗಳಿಸಲು ಸಾಧ್ಯವಾಗದೆ ಇಕ್ಕೇರಿಗೆ ಮರಳಬೇಕಾಯಿತು.

ಇವರ ನಂತರ ಪಟ್ಟಕ್ಕೆ ಬಂದ ಚಿಕ್ಕ ದೇವರಾಜ ಒಡೆಯರು (೧೬೭೩-೧೭೦೪) ಮೈಸೂರಿನ ಇತಿಹಾಸದಲ್ಲಿ ಪ್ರಮುಖ ಸ್ಥಾನ ಪಡೆದಿದ್ದಾರೆ. ಸುಮಾರು ೩೦ ವರ್ಷಗಳ ಇವರ ರಾಜ್ಯಾಳ್ವಿಕೆಯ ಕಾಲವು ದಕ್ಷಿಣ ಭಾರತದ ಇತಿಹಾಸದಲ್ಲಿ ಹಲವಾರು ಘಟನೆಗಳಿಂದ ಕೂಡಿದುದಾಗಿದೆ. ಈ ಅವಧಿಯ ಐರೋಪ್ಯ, ಮರಾಠ ಮತ್ತು ಮೊಗಲರ ರಾಜಕೀಯ ಚಟುವಟಿಕೆಗಳ ಕಾಲವಾಗಿದ್ದಿತು. ಮೊಗಲ್ ಸಾಮ್ರಾಜ್ಯ ಕುಸಿಯುತ್ತಿತ್ತು. ಐರೋಪ್ಯರ ಅಧೀನದಲ್ಲಿದ್ದ ವಾಣಿಜ್ಯ ಕೇಂದ್ರಗಳು ಬೆಳಕಿಗೆ ಬಂದವು. ಮರಾಠರು ಹೆಚ್ಚು ಪ್ರಬಲರಾಗುತ್ತಿದ್ದರು. ಈ ಎಲ್ಲಾ ಶಕ್ತಿಗಳ ನಡುವೆಯೂ ಚಿಕ್ಕದೇವರಾಜರು ಮೈಸೂರಿನ ಘನತೆಯನ್ನು ಉನ್ನತಗೊಳಿಸಿದರು. ಇವರು ಯುವರಾಜನಾಗಿದ್ದಾಗಲೇ ತಮ್ಮ ಸಾಹಸ, ಸಾಮರ್ಥ್ಯಗಳನ್ನು ಪ್ರದರ್ಶಿಸಿದ್ದರು. ಪಟ್ಟಕ್ಕೆ ಬಂದ ನಂತರ ಸಾಮ್ರಾಜ್ಯದ ವಿಸ್ತರಣೆಯಲ್ಲಿ ತೊಡಗಿದರು. ಬಿಜಾಪುರ ಸುಲ್ತಾನನಿಂದ ಕೇತ ಸಮುದ್ರ, ಕಂದಿಕೆರೆ, ಹಂದಲಗೆರೆ, ಗೊಳೂರು, ತುಮಕೂರು, ಹೊನ್ನಾವಳಿ ಮುಂತಾದ ಪ್ರಾಂತಗಳನ್ನು ಗೆದ್ದುಕೊಂಡರು. ಇವರ ಕಾಲದಲ್ಲಿ ನಡೆದ ಶಿವಾಜಿಯ ಕರ್ನಾಟಕ ದಾಳಿ ಬಹು ಪ್ರಮುಖ ಘಟನೆಯಾಗಿದೆ. ಭಾರತದಲ್ಲಿ ಪ್ರಬಲ ಶಕ್ತಿಯಾಗಿ ಬೆಳೆಯುತ್ತಿದ್ದ ಶಿವಾಜಿಯು ೧೬೭೭ರಲ್ಲಿ ಶ್ರೀರಂಗಪಟ್ಟಣದ ಮೇಲೆ ದಾಳಿ ಮಾಡಿದನು. ಚಿಕ್ಕದೇವರಾಜರು ವೀರಾವೇಶದಿಂದ ಹೋರಾಡಿ ಶಿವಾಜಿಯನ್ನು ಸೋಲಿಸಿ 'ಅಪ್ರತಿಮವೀರ' ಎಂಬ ಬಿರುದನ್ನು ಪಡೆದರು. ಏಕೋಜಿಯ ಪ್ರಧಾನಮಂತ್ರಿ ಯಶವಂತರಾವನನ್ನು ಪರಾಭವಗೊಳಿಸಿದರು. ಉತ್ತರ ದಿಕ್ಕಿನಲ್ಲಿ ಮುಂದುವರಿದು ಕಡೂರು, ಚನ್ನರಾಯದುರ್ಗ ಮುಂತಾದ ಪ್ರದೇಶಗಳನ್ನು ಆಕ್ರಮಿಸಿಕೊಂಡು ನಂತರ ಮಧುರೆಯ ಗಡಿ ಪ್ರದೇಶಗಳನ್ನು ವಶಪಡಿಸಿಕೊಂಡರು. ಚಿಕ್ಕದೇವರಾಜ ಒಡೆಯರು ೧೬೮೬ರಲ್ಲಿ ಮೊಗಲ ಚಕ್ರವರ್ತಿ ಔರಂಗಜೇಬನಿಗೆ ಬಿಜಾಪುರ ಕೋಟೆಯನ್ನು ಆಕ್ರಮಿಸಿಕೊಳ್ಳಲು ಸಹಾಯ ಮಾಡಿದರು. ಇದರಿಂದ

ಮೊಗಲ್, ಮೈಸೂರು ಪ್ರಾಂತ್ಯಗಳ ಬಾಂಧವ್ಯ ಸ್ವಲ್ಪ ಕಾಲ ಉತ್ತಮವಾಗಿ ಮುಂದುವರಿಯಿತು. ಬೆಂಗಳೂರನ್ನು ಮರಾಠರಿಂದ ಕೊಂಡುಕೊಳ್ಳಲು ಚಿಕ್ಕದೇವರಾಜರು ಮರಾಠರೊಡನೆ ಮಾತುಕತೆ ನಡೆಯುತ್ತಿದ್ದಾಗ ಮೊದಲ ಸೇನಾನಾಯಕ ಖಾಸಿಂಖಾನನು ಬೆಂಗಳೂರಿನ ಕೋಟೆಯನ್ನು ಆಕ್ರಮಿಸಿಕೊಂಡನು. ಚಿಕ್ಕದೇವರಾಜರು ಖಾಸಿಂಖಾನನಿಗೆ ಮೂರು ಲಕ್ಷ ರೂಪಾಯಿಗಳನ್ನು ಕೊಟ್ಟು ಬೆಂಗಳೂರನ್ನು ಬಿಡಿಸಿಕೊಂಡರು. ಕರಣಿಕ ಲಿಂಗಯ್ಯನನ್ನು ಚಿಕ್ಕದೇವರಾಜ ಒಡೆಯರು ಔರಂಗಜೇಬನ ಬಳಿ ರಾಯಭಾರಿಯಾಗಿ ಕಳುಹಿಸಿದರು. ಔರಂಗಜೇಬನು ಲಿಂಗಯ್ಯನನ್ನು ಆದರದಿಂದ ಸ್ವಾಗತಿಸಿ ಒಡೆಯರಿಗೆ 'ರಾಜಾ ಜಗದೇವ' ಎಂಬ ಬಿರುದನ್ನು ನೀಡಿದನು ಎಂಬ ಮಾಹಿತಿ ಇತಿಹಾಸದ ದಾಖಲೆಗಳು ತಿಳಿಸುತ್ತವೆ.

ಚಿಕ್ಕ ದೇವರಾಜರು ಮೈಸೂರು ರಾಜ್ಯವನ್ನು ಉತ್ತರದಲ್ಲಿ ಚಿಕ್ಕಮಗಳೂರು ಪರ್ವತಶ್ರೇಣಿ ಮತ್ತು ತುಮಕೂರು ಜಿಲ್ಲೆಗಳಿಂದ ದಕ್ಷಿಣಕ್ಕೆ ಅಣ್ಣಾಮಲೈ ಮತ್ತು ಪಳನಿ ಬೆಟ್ಟಗಳವರೆಗೂ ಪೂರ್ವದಲ್ಲಿ ಸೇಲಂ ಪ್ರದೇಶದಿಂದ ಪಶ್ಚಿಮಕ್ಕೆ ಬೇಲೂರು ಮತ್ತು ಕೊಡಗು ಪ್ರದೇಶಗಳವರೆಗೂ ವಿಸ್ತರಿಸಿದರು.

ಚಿಕ್ಕ ದೇವರಾಜ ಒಡೆಯರು ಮೊಗಲ್ ಮಾದರಿಯ ಆಡಳಿತ ಪದ್ಧತಿಯಿಂದ ಪ್ರಭಾವಿತರಾಗಿದ್ದರು. ಅವರ ಆಂತರಿಕ ನೀತಿಯು ರಾಜ್ಯ ವಿಸ್ತರಣಾ ದೃಷ್ಟಿಯಿಂದ ಬಹಳ ಅನುಕೂಲಕರವಾಗಿದ್ದಿತು. ಇವರು ವಿಶಾಲಾಕ್ಷ ಪಂಡಿತ, ತಿರುಮಲಾರ್ಯ, ಚಿಕ್ಕುಪಾಧ್ಯಾಯ ಮತ್ತು ಲಿಂಗಣ್ಣಯ್ಯ ಇವರುಗಳನ್ನೊಳಗೊಂಡಂತೆ ಒಂದು ಮಂತ್ರಿಮಂಡಲವನ್ನು ನೇಮಿಸಿದ್ದರು. ಚಿಕ್ಕದೇವರಾಜ ಒಡೆಯರು ಕೇಂದ್ರಾಡಳಿತವನ್ನು ಸರ್ಕಾರದ ಎಲ್ಲಾ ಕಾರ್ಯ, ಚಟುವಟಿಕೆಗಳನ್ನು ಒಳಗೊಂಡಂತೆ ೧೮ ಶಾಖೆಗಳಾಗಿ ವಿಭಾಗಿಸಿದ್ದರು. ಇದು 'ಅಠಾರ ಕಛೇರಿ' ಎಂದು ಪ್ರಸಿದ್ಧಿ ಪಡೆಯಿತು. ಇದರಲ್ಲಿ ಅಂಚೆ ಇಲಾಖೆ ಅಥವಾ 'ಬೇಹಿನ ಚಾವಡಿ'ಯು ಸೇರಿದ್ದಿತು. ಬೇಹುಗಾರರು ರಾಜ್ಯದ ಎಲ್ಲಾ ಕಡೆಗಳಿಂದ ಪ್ರತಿನಿತ್ಯ ವರದಿಯನ್ನು ತಂದೊಪ್ಪಿಸುತ್ತಿದ್ದರು. ರಾಜ್ಯ ರಕ್ಷಣೆಗಾಗಿ ಸುಸಜ್ಜಿತ ಸೈನ್ಯವನ್ನು ಕಟ್ಟಿದರು. ಅಧಿಕಾರಿಗಳಿಗೆ ಸಂಬಳವನ್ನು ಹಣ ಮತ್ತು ಧಾನ್ಯ ರೂಪದಲ್ಲಿ ಕೊಡುತ್ತಿದ್ದರು. ಸಮರ್ಥ ಹಾಗೂ ಎಚ್ಚರಿಕೆಯ ಆರ್ಥಿಕ ನೀತಿಯ ಪರಿಣಾಮವಾಗಿ ರಾಜರು ತಮ್ಮ ಭಂಡಾರದಲ್ಲಿ ಒಂಬತ್ತು ಕೋಟಿ ಪಗೋಡಗಳನ್ನು ಸಂಗ್ರಹಿಸಿ ಪ್ರಜೆಗಳಿಂದ 'ನವಕೋಟಿ ನಾರಾಯಣ' ಎಂಬ ಹೊಗಳಿಕೆಗೆ ಪಾತ್ರರಾದರು.

ಚಿಕ್ಕದೇವರಾಜರು ನಿಯಂತ್ರಣ ಮಾರುಕಟ್ಟೆಗಳನ್ನು ಸ್ಥಾಪಿಸುವುದರ ಜೊತೆಗೆ ತೂಕ ಅಳತೆಗಳನ್ನು ನಿರ್ದಿಷ್ಟಗೊಳಿಸಿದರು. ಸರಕುಗಳ ಮೇಲೆ ಸುಂಕ ವಿಧಿಸಿ ಅದನ್ನು ವಸೂಲಿ ಮಾಡಲು ಸುಂಕದ ಕಟ್ಟೆಗಳನ್ನು ಸ್ಥಾಪಿಸಿದರು. ಬೆಂಗಳೂರು ನೇಯ್ಗೆಯವರ ಮುಖ್ಯ ಕೇಂದ್ರವಾಗಿ ಪರಿವರ್ತಿತವಾಯಿತು. ಶ್ರೀರಂಗಪಟ್ಟಣವು ಯುದ್ಧೋಪಕರಣಗಳ ಉತ್ಪಾದನ ಕೇಂದ್ರವಾಗಿ ಮಾರ್ಪಟ್ಟಿತು. ಕಾವೇರಿ ನದಿಗೆ ಅಡ್ಡವಾಗಿ ಅಣೆಕಟ್ಟೆಯೊಂದನ್ನು ನಿರ್ಮಿಸಿದರಲ್ಲದೆ ಎರಡು ಬದಿಯಲ್ಲಿಯೂ ಎರಡು ಕಾಲುವೆಗಳನ್ನು

ನಿರ್ಮಾಣ ಮಾಡಿ ಅದಕ್ಕೆ 'ಚಿಕ್ಕದೇವರಾಯ ನಾಲೆ' ಮತ್ತು 'ದೇವರಾಯ ನಾಲೆ'ಗಳೆಂದು ನಾಮಕರಣ ಮಾಡಿದರು ಎಂಬ ಅಂಶಗಳು ಸಾದರಪಡಿಸುತ್ತಿವೆ.

ಕಲೆ ಮತ್ತು ಸಾಹಿತ್ಯ ಪ್ರೇಮಿಯಾದ ಚಿಕ್ಕದೇವರಾಜರು ಹಲವಾರು ದೇವಾಲಯಗಳನ್ನು ನಿರ್ಮಾಣ ಮಾಡುವುದರ ಜೊತೆಗೆ ಸಾಹಿತ್ಯಕ್ಕೂ ಅಪಾರ ಪ್ರೋತ್ಸಾಹ ನೀಡಿದರು. ಇವರು ಸ್ವತಃ ಕವಿಗಳಾಗಿದ್ದು 'ಚಿಕ್ಕದೇವರಾಜ ಬಿನ್ನಪ' 'ಗೀತಗೋಪಾಲ' ಗ್ರಂಥಗಳನ್ನು ರಚಿಸಿದ್ದಾರೆಂದು ತಿಳಿದುಬರುತ್ತದೆ. ಅವರ ಆಸ್ಥಾನದಲ್ಲಿ ಅನೇಕ ಜನ ಪಂಡಿತರೂ ಕವಿಗಳೂ ಆಶ್ರಯ ಪಡೆದಿದ್ದರು. ಇವರ ಆಸ್ಥಾನದಲ್ಲಿದ್ದ ತಿರುಮಲಾರ್ಯನು 'ಚಿಕ್ಕದೇವರಾಜ ವಿಜಯ' 'ಚಿಕ್ಕದೇವರಾಜ ವಂಶಾವಳಿ' ಅಪ್ರತಿಮ ವೀರಚರಿತ' ಮುಂತಾದ ಗ್ರಂಥಗಳನ್ನು ರಚಿಸಿದನು. ಚಿಕ್ಕುಪಾಧ್ಯಾಯನು ಚಂಪೂ, ಗದ್ಯ ಮತ್ತು ಸಾಂಗತ್ಯಗಳಲ್ಲಿ ಸುಮಾರು ಮೂವತ್ತು ಕೃತಿಗಳನ್ನು ರಚಿಸಿದನು. ಇವುಗಳಲ್ಲಿ ಮುಖ್ಯವಾದವು : ಕಮಲಾಚಲ ಮಾಹಾತ್ಮ್ಯ, ಹಸ್ತಗಿರಿಯ ಮಹಾತ್ಮ್ಯೆ, ರುಕ್ಮಾಂಗದ ಚರಿತೆ, ವಿಷ್ಣು ಪುರಾಣ, ದಿವ್ಯ ಸೂರಿ ಚರಿತೆ, ಸಾತ್ವಿಕ ಬ್ರಹ್ಮ ವಿದ್ಯಾವಿಲಾಸ, ಅರ್ಥಪಂಚಕ ಎಂಬ ಚಂಪೂ ಗ್ರಂಥಗಳು. ವೆಂಕಟಗಿರಿ ಮಹಾತ್ಮ್ಯೆ ಶ್ರೀರಂಗ ಮಹಾತ್ಮೆ ಯದುಗಿರಿ ಮಹಾತ್ಮ್ಯೆ ಮುಂತಾದ ಸಾಂಗತ್ಯ ಗ್ರಂಥಗಳು ಇದರ ಜೊತೆಗೆ ಶೃಂಗಾರದ ಹಾಡುಗಳನ್ನು ರಚಿಸಿದ್ದಾನೆ. ತಿರುಮಲಾರ್ಯನ ತಮ್ಮನಾದ ಸಿಂಗರಾರ್ಯನು ಕನ್ನಡ ಸಾಹಿತ್ಯದಲ್ಲಿ ಮೊದಲನೆಯದಾಗಿ ಉಪಲಬ್ದವಾಗಿರುವ 'ಮಿತ್ರವಿಂದಾ ಗೋವಿಂದ' ನಾಟಕವನ್ನು ರಚಿಸಿದನು. ನಮ್ಮ ನಾಡಿನ ಕವಿಯಿತ್ರಿಯರಲ್ಲಿ ಖ್ಯಾತಳಾಗಿರುವ ಸಂಚಿಹೊನ್ನಮ್ಮ ಈ ಕಾಲದಲ್ಲಿ ತನ್ನ ಕೃತಿಯಾದ 'ಹದಿಬದೆಯ ಧರ್ಮ'ವನ್ನು ರಚಿಸಿದಳು. ಮತ್ತೊಬ್ಬ ಕವಿಯಿತ್ರಿ ಶೃಂಗಾರಮ್ಮ 'ಪದ್ಮಿನೀ ಕಲ್ಯಾಣ' ಮೊದಲಾದ ಮೂರು ಸಾಂಗತ್ಯ ಗ್ರಂಥಗಳ್ನು ಮತ್ತು 'ತಲಕಾವೇರಿ ಮಹಾತ್ಮೆ ಎಂಬ ಗ್ರಂಥವನ್ನೂ ಬರೆದಳು. ಇವರಲ್ಲದೆ ವೇಣುಗೋಪಾಲ ವರಪ್ರಸಾದ. ಮಲ್ಲಿಕಾರ್ಜುನ, ಚಿದಾನಂದಕವಿ, ತಿಮ್ಮಕವಿ, ಮಲ್ಲರಸ ಮುಂತಾದ ಕವಿಗಳು ರಾಜಾಶ್ರಯ ಪಡೆದು ಕನ್ನಡ ಸಾಹಿತ್ಯಕ್ಕೆ ಅಪಾರ ಕಾಣಿಕೆಯನ್ನು ಸಲ್ಲಿಸಿದ್ದಾರೆ. ಪ್ರಸ್ತುತ ಅಧ್ಯಯನದ ವ್ಯಕ್ತಿಯಾದ ಹೆಣವನಕಟ್ಟೆ ಗಿರಿಯಮ್ಮಳು ಇವರ ಕಾಲದಲ್ಲಿದ್ದಳು.

## ಹೆಳವನಕಟ್ಟೆ ಗಿರಿಯಮ್ಮಳ ಇತಿವೃತ್ತ ವಿಚಾರ

ಭಕ್ತಿ ಪಂಥಕ್ಕೆ ಸೇರಿದ ಕವಿಯಿತ್ರಿಯರಲ್ಲಿ ಹೆಳವನಕಟ್ಟೆ ಗಿರಿಯಮ್ಮಳಿಗೆ ಪ್ರಮುಖ ಸ್ಥಾನವಿದೆ. ಹರಿದಾಸ ಸಾಹಿತ್ಯ ಪರಂಪರೆಯಲ್ಲಿ ಗೋಪಾಲದಾಸರ ಸಮಕಾಲೀನಳಾಗಿ ಕಾಣಿಸಿಕೊಳ್ಳುವ ಗಿರಿಯಮ್ಮ 'ಹೆಳವನಕಟ್ಟೆ ರಂಗ' ಎಂಬ ಅಂಕಿತದಲ್ಲಿ ಅನೇಕ ಹಾಡುಗಳನ್ನು ಮತ್ತು ಕಥನಕಾವ್ಯಗಳನ್ನು ರಚಿಸಿ ಪ್ರಸಿದ್ಧಳಾಗಿದ್ದಾಳೆ. ಇವಳ ಬದುಕು, ಬರಹಗಳನ್ನು ಕುರಿತು ಇದುವರೆಗೆ ಅನೇಕ ಲೇಖನಗಳು, ಕೃತಿಗಳು ಪ್ರಕಟವಾಗಿವೆ. ಇವುಗಳನ್ನು ಆಧರಿಸಿ ಹಾಗೂ ನನ್ನ ಅಧ್ಯಯನದ ಫಲವಾಗಿ ದೊರೆತಿರುವ ಸಂಗತಿಗಳನ್ನು ಇಲ್ಲಿ ತಿಳಿಯಪಡಿಸಿದ್ದೇನೆ.

ಗಿರಿಯಮ್ಮನ ಜನ್ಮಸ್ಥಳ ಹಾವೇರಿ ಜಿಲ್ಲೆಯ ರಾಣೆಬೆನ್ನೂರು. ತಂದೆ ಬಿಷ್ಟಪ್ಪ ಜೋಯಿಸ. ತಾಯಿಯ ಹೆಸರು ತಿಳಿದುಬರುವುದಿಲ್ಲ. ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ಮಲೆಬೆನ್ನೂರು ಶ್ಯಾನುಭೋಗ ಕೃಷ್ಣಪ್ಪನವರ ಮಗ ತಿಪ್ಪರಸನೊಂದಿಗೆ ಈಕೆಯ ವಿವಾಹವಾಗಿತ್ತು. ಗಿರಿಯಮ್ಮಳು ಯಾವಾಗಲೂ ದೈವೋನ್ಮಾದ ಸ್ಥಿತಿಯಲ್ಲಿರುತ್ತಿದ್ದು ಭಾವುಕಳಾದ್ದರಿಂದ ಸಾಮಾನ್ಯ ಸ್ತ್ರೀಯರಂತೆ ಸಂಸಾರ ಸುಖವನ್ನು ಬಯಸದೆ ದೇವರ ನಾಮ ಸಂಕೀರ್ತನೆ ಮತ್ತು ಕಾವ್ಯ ರಚನೆಯಲ್ಲಿ ತನ್ನ ಜೀವನ ಸಾರ್ಥಕವನ್ನು ಕಂಡುಕೊಂಡಳು.

**ಕಾಲ**

ಗಿರಿಯಮ್ಮನ ಜೀವನ ಮತ್ತು ಕಾಲವನ್ನು ಕುರಿತು ಖಚಿತವಾಗಿ ತಿಳಿಸುವ ದಾಖಲೆಗಳಾವುವು ಇಲ್ಲ. ದೊರೆಯುವ ಬಾಹ್ಯ ಮತ್ತು ಆಂತರಿಕ ಆಧಾರಗಳಿಂದ ಆಕೆಯು ಜೀವಿಸಿದ್ದ ಕಾಲವನ್ನು ಸ್ಥೂಲವಾಗಿ ನಿರ್ಧರಿಸಬಹುದು. ಇದಕ್ಕೆ ಮೊದಲಿಗೆ ಆಕೆಯ ಹಾಡುಗಳಲ್ಲೇ ದೊರೆಯುವ ಆಧಾರಗಳನ್ನು ಗಮನಿಸಬಹುದು.

ಗಿರಿಯಮ್ಮನ 'ರಾಮ ಶ್ರೀ ರಘುನಂದನ' ಎಂದು ಆರಂಭವಾಗುವ ಒಂದು ಹಾಡಿನಲ್ಲಿ 'ಸದಾನಂದ ಸುಮತೀಂದ್ರ ಹೃದಯ ಪಂಕಜಭೃಂಗ' ಎಂದು ಮಂತ್ರಾಲಯದ ಶ್ರೀ ಸುಮತೀಂದ್ರ ಸ್ವಾಮಿಗಳನ್ನು ಸ್ಮರಿಸಿರುವುದು ಕಂಡುಬರುತ್ತದೆ. ಅವರ ಕಾಲ ಕ್ರಿ.ಶ.೧೬೯೧ ರಿಂದ ೧೭-೨೫ ಎಂದು ತಿಳಿದುಬರುತ್ತದೆ. ಹಾಗೆಯೇ ಗಿರಿಯಮ್ಮನ ಲವಕುಶ ಕಾಳಗದ ಆರಂಭದಲ್ಲಿ ಹರಿಹರ ಬ್ರಹ್ಮ ತ್ರಿಮೂರ್ತಿಗಳ ಬಲಗೊಂಬೆ ಗುರು ಸತ್ಯಬೋಧರ ನೆನೆದು'' ಎಂದು ಗುರು ಸತ್ಯಬೋಧರನ್ನು ನೆನೆಸಿದ್ದಾಳೆ. ಈ ಸತ್ಯಬೋಧರು ಉತ್ತರಾದಿ ಮಠದ ಮಠಾಧಿಪತಿಗಳಲ್ಲಿ ಸತ್ಯಪ್ರಿಯ(ಕ್ರಿ.ಶ.೧೭೪೪)ರ ನಂತರ ಬಂದ ಸತ್ಯಬೋಧರೇ (ಕ್ರಿ.ಶ.೧೭೪೪-೧೭೮೩) ಇರಬೇಕು, ಇವುಗಳ ಜೊತೆಗೆ ಗಿರಿಯಮ್ಮ ತನ್ನ ಚಂದ್ರಹಾಸನ ಕಥೆಯನ್ನೇ ಚರಿತೆಯ ಮಾಡಿ ವರ್ಣಿಸುವೆ ಎಂದು ಹೇಳಿಕೊಂಡಿರುವುದರಿಂದ ಈಕೆ ಲಕ್ಷ್ಮೀಶ ಕವಿ ಜೈಮಿನಿ ಭಾರತವನ್ನು ಬರೆದ ನಂತರದಲ್ಲಿ ತನ್ನ ಚಂದ್ರಹಾಸನ ಕಥೆ ಬರೆದಿದ್ದಾಳೆ ಎನ್ನುವುದು ಖಚಿತ, ಲಕ್ಷ್ಮೀಶನ ಕಾಲ ಕ್ರಿ.ಶ.೧೭೦೦ ಎಂದು ವಿದ್ವಾಂಸರು ನಿರ್ಣಯಿಸಿದ್ದಾರೆ. ಇವುಗಳ ಜೊತೆಗೆ ಗಮನಿಸಬಹುದಾದ ಅವಳ ಜೀವನದಲ್ಲಿ ನಡೆಯಿತೆನ್ನಲಾದ ಎರಡು ಘಟನೆಗಳಿವೆ. ಮೊದಲನೆಯದು ಮಂತ್ರಾಲಯದ ಸುಮತೀಂದ್ರ ಸ್ವಾಮಿಗಳು ಮಲೆಬೆನ್ನೂರಿಗೆ ಬಂದಾಗ ಆಗದವರು ಅವಳನ್ನು ದೂರ ಇರುವಂತೆ ನಿರ್ಬಂಧ ಪಡಿಸಿದರೂ ಸ್ವಾಮಿಗಳು ಅನುಗ್ರಹಿಸಿ ಆಕೆಗೇ ಮೊದಲು ತೀರ್ಥ ನೀಡಿ ಗೌರವಿಸಿದರು ಎನ್ನುವುದು. ಎರಡನೆಯದು ದಾಸ ಶ್ರೇಷ್ಠರಲೊಬ್ಬರಾದ ಗೋಪಾಲದಾಸರು ಉಡುಪಿಗೆ ಯಾತ್ರಾರ್ಥಿಗಳಾಗಿ ಹೋಗುವ ಮಾರ್ಗವಾಗಿ ಮಲೆ ಬೆನ್ನೂರಿಗೆ ಬಂದು ಆಕೆಗೆ ಬಾಲಗೋಪಾಲನ ಮೂರ್ತಿಯ ಮುದ್ರಿಕೆ ಯನ್ನೂ ನೀಡಿದರು. ಗೋಪಾಲದಾಸರ ಕಾಲ ಕ್ರಿ.ಶ.ಸು.೧೭೨೧-೧೭೬೧

ಹಿಂದೆಯೇ ತಿಳಿಸಿದಂತೆ ಸುಮತೀಂದ್ರರ ಕಾಲ ಕ್ರಿ.ಶ.ಸು. ೧೬೯೧-೧೭೨೫ ಸತ್ಯಬೋಧರ ಕಾಲ ೧೭೪೪-೧೭೮೩ ಆದರೆ ಈ ಮೂವರ ಜೀವಿತಾವಧಿಯನ್ನು ಗಮನಿಸಿ ಗಿರಿಯಮ್ಮ ೧೮ನೆಯ ಶತಮಾನದ ಕೊನೆಯತನಕ ಜೀವಿಸಿದ್ದಳೆಂದು ಹೇಳಲಾಗುವುದಿಲ್ಲ. ಸತ್ಯಬೋಧರು ಮಠಾಧಿಪತಿಗಳಾದ ಆರಂಭದ ವರ್ಷಗಳಲ್ಲೇ ಗಿರಿಯಮ್ಮ ಇವರನ್ನು ತಮ್ಮ ಹಾಡಿನಲ್ಲಿ ನೆನೆದಿರಬೇಕು ಒಟ್ಟಿನಲ್ಲಿ ಈಕೆ ಬಹುಮಟ್ಟಿಗೆ ೧೮ನೆಯ ಶತಮಾನದ ಪೂರ್ವಾರ್ಧದಲ್ಲಿ ಬದುಕಿದ್ದಳು ಎಂದು ಭಾವಿಸಬಹುದಾಗಿದೆ.

ಗಿರಿಯಮ್ಮ ಮತ್ತು ಗೋಪಾಲದಾಸರು ಭೇಟಿಯಾಗಿದ್ದರೆನ್ನುವ ಹೇಳಿಕೆಯನ್ನು ಬಿಟ್ಟರೆ ಯಾವುದೇ ಶಾಸನವಾಗಲಿ ಇವರ ಸಾಹಿತ್ಯ ಕೃತಿಗಳಲ್ಲಿಯ ಉಲ್ಲೇಖವಾಗಲಿ ಈವರೆಗೆ ಉಪಲಬ್ದವಿಲ್ಲ. ಆದರೆ ಗಿರಿಯಮ್ಮ ಮತ್ತು ಸುಮತೀಂದ್ರ ಸ್ವಾಮಿಗಳು ಭೇಟಿಯಾಗಿದ್ದರೆನ್ನುವ ಬಗ್ಗೆ ಮೇಲೆ ಹೇಳಿದ ಗಿರಿಯಮ್ಮನ ಒಂದು ಕೀರ್ತನೆ ಆಧಾರವಾಗಿದೆ. ಇದನ್ನು ಬಿಟ್ಟರೆ ಬೇರಾವ ಆಧಾರವೂ ಈವರೆಗೆ ಕಂಡುಬಂದಿರಲಿಲ್ಲ.

## ಗಿರಿಯಮ್ಮಳ ಕಾಲ : ಮತ್ತಷ್ಟು ವಿಚಾರಗಳು

ಗಿರಿಯಮ್ಮ ಗೋಪಾಲದಾಸರ ಈ ಭೇಟಿಯ ಸಾಧ್ಯತೆಯ ಬಗ್ಗೆ ಪರೋಕ್ಷವಾಗಿ ಮಾಹಿತಿ ನೀಡುವಂತಹ ಶಿಲಾಶಾಸನವೊಂದು ಈಚೆಗೆ ದೊರೆಕಿರುವುದನ್ನು ಗಮನಿಸಬಹುದು.

ಚಿತ್ರದುರ್ಗ ಜಿಲ್ಲೆಯ ಜಗಳೂರು ತಾಲ್ಲೂಕಿನ ಕಸಬಾ ಹೋಬಳಿಯಲ್ಲಿ ಅದೇ ತಾಲ್ಲೂಕಿನ ಹೋಬಳಿ ಕೇಂದ್ರಗಳಲ್ಲೊಂದು ಬಿದರಕೆರೆಯ ಪಶ್ಚಿಮಕ್ಕೆ ಸುಮಾರು ೨ ಕಿ.ಮೀ ದೂರದಲ್ಲಿರುವ ಒಂದು ಸಣ್ಣ ಗ್ರಾಮ ಮಠದ ದ್ಯಾಮವ್ವನ ಹಳ್ಳಿ. ಈ ಗ್ರಾಮದ ಪಶ್ಚಿಮ ಭಾಗದಲ್ಲಿರುವ ಈಚೆಗೆ ಜೀರ್ಣೋದ್ಧಾರವಾಗಿರುವ ಆಂಜನೇಯ ಸ್ವಾಮಿಯ ಸಣ್ಣ ದೇವಸ್ಥಾನದ ಬಳಿ ದೊರೆತಿರುವ ಒಂದು ಶಾಸನದಿಂದ ತಿಳಿದುಬರುವುದು. ಏನೆಂದರೆ "ಕಪ್ಪು ಕಲ್ಲಿನ ಮೇಲೆ ಕನ್ನಡ ಲಿಪಿ ಮತ್ತು ಭಾಷೆಯ ೧೭ ಪಂಕ್ತಿಗಳಲ್ಲಿ ಕೆತ್ತಿರುವ ಈ ಶಾಸನ ಶಾಲಿವಾಹನ ಶಕ ವರ್ಷ ೧೬೩೩ರ ಖರನಾಮ ಸಂವತ್ಸರದ ಚೈತ್ರ ಶುದ್ಧ ೧೫ ರಂದು ಚಂದ್ರಗ್ರಹಣದ ಪುಣ್ಯಕಾಲದಲ್ಲಿ ಭರಮಣ್ಣ ನಾಯಕರು ಕುಂಭಕೋಣೆ ಮಠದ ಸುಮತೀಂದ್ರ ಸ್ವಾಮಿಗಳವರಿಗೆ, ಅವರು ಪೂಜಿಸುತ್ತಿದ್ದ ರಘುಪತಿ ದೇವರ ಸೇವೆಯ ಸಲುವಾಗಿ ಕುಣಕುಪ್ಪಿ ಸೀಮೆಯ ಬಿದರಕೆರೆ ಹೊಲಬಿನ ಚಿಕ್ಕಣ್ಣನ ದೇಮವ್ವನ ಹಳ್ಳಿ ಗ್ರಾಮವನ್ನು ಸರ್ವಮಾನ್ಯವಾಗಿ ಕೊಟ್ಟಿರುವುದಾಗಿ ತಿಳಿಸುತ್ತದೆ.[1] ಶಾಸನದಲ್ಲಿ ಹೇಳುರುವ ಕ್ರಿ.ಶ.ಸು.೧೭೧೧ರ ಮಾರ್ಚ್ ೨೩ರ ಶುಕ್ರವಾರಕ್ಕೆ ಸರಿಹೊಂದುತ್ತದೆ. ಈ ಶಾಸನವನ್ನು ಬರೆಸಿದ ಭರಮಣ್ಣ ನಾಯಕನು ಚಿತ್ರದುರ್ಗ ಸಂಸ್ಥಾನವನ್ನು ಕ್ರಿ.ಶ.೧೬೮೯ ರಿಂದ ೧೭೨೧ರವರೆಗೆ ಆಳಿದ ದೊರೆ (ಪಾಳೆಯಗಾರ) ಎಂಬುದು ಸ್ಪಷ್ಟವಿರುವ ಸಂಗತಿ ಇದರಲ್ಲಿ ಕುಂಭಕೋಣೆ ಮಠದವರೆಂದು ಹೇಳಲಾದ ಸುಮತೀಂದ್ರ ಸ್ವಾಮಿಗಳು

(ಹಿಂದೆ ಕನ್ನಡದಲ್ಲಿ ಮಂಚಾಲೆ, ತೆಲುಗಿನಲ್ಲಿ ಮಂತಸಾಲ) ಈಗ ಮಂತ್ರಾಲಯ ಎಂದು ಕರೆಯಲಾದ ಸ್ಥಳದ ಮಠದ ಪೀಠಾಧೀಶರಲ್ಲೊಬ್ಬರು ಎನ್ನುವುದು ಸಹ ಸ್ಪಷ್ಟವಿರುವ ಸಂಗತಿ. ಆ ಮಠದ ಸ್ಥಾಪಕರಾದ ರಾಘವೇಂದ್ರಸ್ವಾಮಿಗಳು (ಕ್ರಿ.ಶ.೧೬೨೧-೭೧) ನಂತರ ಅದೇ ಮಠಕ್ಕೆ ಮೂರನೆಯ ಪೀಠಾಧೀಶರಾಗಿ ಬಂದವರು ಅವರು. ಆದರೆ ಶಾಸನದಲ್ಲಿ ಅವರು ಕುಂಭಕೋಣೆ ಮಠದವರೆಂದು ಕರೆಯಲ್ಪಟ್ಟಿರುವುದೇಕೆ ಎಂಬುದಕ್ಕೆ ಸ್ಪಷ್ಟ ವಿವರಣೆ ಹೀಗಿದೆ.

ತಮಿಳು ನಾಡಿನಲ್ಲಿ ಈಗಲೂ 'ಕುಂಭಕೋಣಂ' ಎಂದು ಕರೆಯಲ್ಪಡುತ್ತಿರುವ ಸ್ಥಳವೇ ಈ ಶಾಸನದಲ್ಲಿ ಬಂದಿರುವ 'ಕುಂಭಕೋಣ' ಮಾಧ್ವ ಅಥವಾ ದ್ವೈತ ಸಂಪ್ರದಾಯದ ಚರಿತ್ರೆಯಲ್ಲಿ ಈ ಸ್ಥಳಕ್ಕೆ ವಿಶೇಷ ಪ್ರಾಶಸ್ತ್ಯವಿದೆ. ಅಲ್ಲಿ ಹಿಂದಿನಿಂದಲೂ ಮಾಧ್ವ ಸಂಪ್ರದಾಯಕ್ಕೆ ಸೇರಿರುವ ಒಂದು ಮಠವಿದೆ. ರಾಘವೇಂದ್ರ ಸ್ವಾಮಿಗಳು ಸನ್ಯಾಸಿಯಾಗುವ ಪೂರ್ವದಿಂದಲೂ ಮತ್ತು ಸನ್ಯಾಸಿಯಾದ ಮೇಲೂ ಬಹುಕಾಲ ಇದ್ದುದು ಅಲ್ಲಿಯೇ ವೆಂಕಣ್ಣಾಚಾರ್ಯ ಎಂದು ಪೂರ್ವಾಶ್ರಮದಲ್ಲಿ ಹೆಸರು ಹೊಂದಿ ಒಳ್ಳೆಯ ವೀಣಾವಾದನ ಪಟುವಾಗಿದ್ದ ಅವರು ಅಲ್ಲಿಯ ಮಾಧ್ವ ಮಠದ ಯತಿಗಳಾಗಿದ್ದ ಸುಧೀಂದ್ರಸ್ವಾಮಿಗಳಲ್ಲಿ ಶಿಷ್ಯತ್ವ ಪಡೆದು ಸನ್ಯಾಸ ಸ್ವೀಕರಿಸಿ, ಕಡೆಗೆ ಅವರ ಉತ್ತರಾಧಿಕಾರಿಗಳೂ ಆಗಿ ಪ್ರಸಿದ್ಧರಾದವರು. ಹೀಗಾಗಿ ಕುಂಭಕೋಣವು ಅವರ ಧಾರ್ಮಿಕ ಜೀವನದ ಭಾಗವೆಂಬಂತೆ ಆಗಿ ಹೋಗಿದ್ದ ಒಂದು ಸ್ಥಳ ಮುಂದೆ ಅವರು ಮಂಚಾಲೆಗೆ ಬಂದು ಮಠ ಮಾಡಿಕೊಂಡು ಅಲ್ಲಿ ನಿಂತ ಮೇಲೂ ಅವರಿಗೆ ಕುಂಭಕೋಣದ ಸಂಪರ್ಕ ಇದ್ದೇ ಇತ್ತು. ಅವರ ನಂತರ ಬಂದ ಪೀಠಾಧೀಶರೂ ಕೂಡ ಆ ಸಂಪರ್ಕವನ್ನು ಮುಂದುವರಿಸಿಕೊಂಡು ಬಂದರು. ಸುಮತೀಂದ್ರ ಸ್ವಾಮಿಗಳು ಸಹ ತಮ್ಮ ಜೀವಿತದ ಬಹುಭಾಗವನ್ನು ಮಂತ್ರಾಲಯವಲ್ಲದೆ, ಕುಂಭಕೋಣಂನಲ್ಲೂ ಮತ್ತು ತಮಿಳುನಾಡಿನ ಶ್ರೀರಂಗಂನಲ್ಲೂ ಕಳೆದರೆನ್ನುವುದು ತಿಳಿದುಬರುವ ಸಂಗತಿ. ಹೀಗಾಗಿ ಈ ಶಾಸನದಲ್ಲಿ ಮಂತ್ರಾಲಯ ಮಠದ ಸುಮತೀಂದ್ರರನ್ನು ಕುಂಭಕೋಣೆ ಮಠದವರೆಂದು ವಿಶೇಷವಾಗಿ ಕರೆದಿರುವುದು ಸಹಜವಾಗಿ ಕಂಡುಬರುತ್ತದೆ.

ಸುಮತೀಂದ್ರ ಸ್ವಾಮಿಗಳು ರಾಘವೇಂದ್ರ ಸ್ವಾಮಿಗಳ ತರುವಾಯದಲ್ಲಿ ಬಂದ ಮಂತ್ರಾಲಯದ ಮಠದ ಮೂರನೆಯ ಉತ್ತರಾಧಿಕಾರಿ ಎಂದು ಹಿಂದೆಯೇ ಹೇಳಿದೆ. ಕ್ರಿ.ಶ.೧೬೯೨ರಲ್ಲಿ ಪಟ್ಟಕ್ಕೆ ಬಂದ ಅವರು ಮುಂದೆ ಕ್ರಿ.ಶ.೧೭೨೫ರಲ್ಲಿ ಅದೇ ಶ್ರೀರಂಗನಲ್ಲಿ ವೃಂದಾನವಸ್ಥರಾದರು. ಹಿಂದಿನ ಎಲ್ಲ ಗುರುಗಳಂತೆಯೇ ಅವರೂ ಸಹ ಪೀಠಾಚಾರ್ಯರಾಗಿದ್ದ ಅವಧಿಯಲ್ಲಿ ಅನೇಕ ಪ್ರಾಂತಗಳಿಗೆ ಧರ್ಮ ಸಂಚಾರವನ್ನು ಕೈಕೊಂಡರು. ಹೀಗೆ ಅವರು ಚಿತ್ರದುರ್ಗ ಪ್ರಾಂತಕ್ಕೆ ಎರಡು ಸಾರಿ ಭೇಟಿ ಕೊಟ್ಟಂತೆ ತಿಳಿದುಬರುತ್ತದೆ. ಮೊದಲ ಬಾರಿಗೆ ಸುಮತೀಂದ್ರರು ಕ್ರಿ.ಶ.೧೭೦೦ರಲ್ಲಿ ಬೆಂಗಳೂರಿಗೆ ಆಗಮಿಸಿ, ಅಲ್ಲಿ ಬಂದು ಆಂಜನೇನ ಮೂರ್ತಿಯನ್ನು ಪ್ರತಿಷ್ಠಾಪಿಸಿದರೆಂದೂ ತರುವಾಯ ಹಾಗೇ ಸಂಚರಿಸುತ್ತಾ

ಚಿತ್ರದುರ್ಗಕ್ಕೆ ಬಂದರೆಂದೂ ಹೇಳಲಾಗಿದೆ. ಆದರೆ ಅವರು ಚಿತ್ರದುರ್ಗಕ್ಕೆ ನಿಶ್ಚಿತವಾಗಿ ಯಾವ ವರ್ಷದಲ್ಲಿ ಎಂಬುದು ಸ್ಪಷ್ಟವಾದಂತಿಲ್ಲ. ಪ್ರಾಯಶಃ ಅದೇ ವರ್ಷ ಅಂದರೆ ಕ್ರಿ.ಶ.೧೭೦೦ರಲ್ಲಿಯೇ ಅವರು ಚಿತ್ರದುರ್ಗ ಪ್ರಾಂತ್ಯಕ್ಕೆ ಬಂದು ಹೋಗಿರಬಹುದು ಅವರ ಎರಡನೆಯ ಭೇಟಿ ಪ್ರಸ್ತುತ ಶಾಸನದ ಕಾಲವಾದ ಕ್ರಿ.ಶ.೧೭೧೧ರಲ್ಲಿ ಆಗಿದ್ದಿರಬಹುದು.

ಸುಮತೀಂದ್ರರು ಮೊದಲ ಸಹ ಚಿತ್ರದುರ್ಗಕ್ಕೆ ಬಂದಾಗ ಅವರಿಗೆ ಅಲ್ಲಿ ಒಂದು ಸ್ವಪ್ನವಾಯಿತೆಂದೂ ಅದರಲ್ಲಿ ರಾಯರು ಕಾಣಿಸಿಕೊಂಡು ಸೂಚನೆ ನೀಡಿದಂತೆ ಇಲ್ಲಿ ವೃಂದಾವನ ಇದ್ದಸ್ಥಳದಲ್ಲಿ ಅಗೆಸಿದಾಗ ಶ್ರೀರಾಮಚಂದ್ರನ ಒಂದು ಲೋಹದ ವಿಗ್ರಹವೂ ಆಂಜನೇಯನ ಒಂದು ಶಿಲಾವಿಗ್ರಹವೂ ದೊರೆತುವೆಂದೂ ಆ ವಿಗ್ರಹಗಳನ್ನು ಮತ್ತು ರಾಘವೇಂದ್ರ ಸ್ವಾಮಿಗಳು ಮಂತ್ರಾಲಯದಲ್ಲಿ ತಮ್ಮ ಬೃಂದಾವನಕ್ಕೆ ಬಳಸಿದ ಕಲ್ಲಿನ ಒಂದು ತುಂಡಿನಲ್ಲಿ ಮಾಡಿಸಿದ ಅತಿ ಚಿಕ್ಕದಾದ ಒಂದು ಚಲ ಬೃಂದಾವನವನ್ನು ಅವರು ಇಲ್ಲಿ(ಚಿತ್ರದುರ್ಗದಲ್ಲಿ) ವಿದ್ಯುಕ್ತವಾಗಿ ಪ್ರತಿಷ್ಠಾಪನೆ ಮಾಡಿದರೆಂದೂ, ರಾಘವೇಂದ್ರರ ಪ್ರಿಯ ಶಿಷ್ಯನಾಗಿದ್ದ ಚಿತ್ರದುರ್ಗ ವೆಂಕಣ್ಣ ಎಂಬುವನ ವಂಶಜನಾಗಿದ್ದ ರಾಘಪ್ಪ ಎಂಬುವನಿಗೆ ಇಲ್ಲಿ ಪೂಜಾಕೈಂಕಾರ್ಯವನ್ನು ನಡೆಸಿಕೊಂಡು ಬರುವಂತೆ ಅಪ್ಪಣೆ ಮಾಡಿದರೆಂದೂ ಹೇಳಲಾಗಿದೆ. ಹಿಂದೆ ಹೇಳಿದ ವಿಗ್ರಹ ಇತ್ಯಾದಿಗಳಿರುವ ಮಠವನ್ನು ಈಗ ರಾಘವೇಂದ್ರಸ್ವಾಮಿಗಳ ಮಠ 'ರಾಯರ ಮಠ' ಎಂದು ಕರೆಯಲಾಗುತ್ತಿದೆ. ಇದು ಚಿತ್ರದುರ್ಗದ ಸಂತೇಬಾಗಿಲ ನೈರುತ್ಯದಲ್ಲಿ ಅಂಜುಮನ್ ರಸ್ತೆಗೆ ಹೊಂದಿಕೊಂಡು ಈಗಲೂ ಇದೆ. ಇದು ಸುಮತಿಂದ್ರ ಸ್ವಾಮಿಗಳ ಮಠಕ್ಕೆ ಹಾಗೂ ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠಕ್ಕೆ ಸೇರಿದ್ದೆಂಬಂತೆ ಸರ್ಕಾರಿ ದಾಖಲೆಗಳಲ್ಲಿರುವುದು ತಿಳಿದುಬರುತ್ತದೆ.

ಹೆಳವನಕಟ್ಟೆ ಗಿರಿಯಮ್ಮನನ್ನು ಸುಮತೀಂದ್ರ ಸ್ವಾಮಿಗಳು ಕಂಡದ್ದು ಅವರು ಮಲೆಬೆನ್ನೂರಿಗೆ ಬಂದಾಗ ಎಂದು ಹಿಂದೆಯೇ ನೋಡಿದ್ದೇವೆ. ಅಂದರೆ ಇವರೀರ್ವರ ಭೇಟಿಯ ಸಾಧ್ಯತೆ ಸುಮತೀಂದ್ರ ಸ್ವಾಮಿಗಳು ಚಿತ್ರದುರ್ಗ ಪ್ರಾಂತ್ಯಕ್ಕೆ ಬಂದ ಕಾಲದಲ್ಲೇ ಎನ್ನುವುದು ಸ್ಪಷ್ಟ. ಹಾಗೆಯೇ ಈ ಭೇಟಿ ಕ್ರಿ.ಶ.೧೭೧೧ರಲ್ಲಿ ಸುಮತೀಂದ್ರರು ಎರಡನೆಯ ಬಾರಿಗೆ ಇಲ್ಲಿಗೆ ಬಂದಿದ್ದಾಗ ಕೆಲಕಾಲ ಇಲ್ಲಿ ತಂಗಿದ್ದು ಕೆಲವು ರಚನೆ ಪ್ರತಿಷ್ಠಾಪನೆ ಕಾರ್ಯಗಳನ್ನು ಮಾಡಿದವರಾದರೂ ಆ ಹೊತ್ತಿಗೆ ಗಿರಿಯಮ್ಮನ ಸಂಗತಿ ಅವರಿಗೆ ತಿಳಿದು ಬಂದಿತ್ತೆನ್ನುವುದು ಸಂದೇಹಗ್ರಸ್ತ. ಆದರೆ ಅವರ ಎರಡನೆಯ ಭೇಟಿಯ ಹೊತ್ತಿಗೆ ಗಿರಿಯಮ್ಮ ಒಬ್ಬ ಭಕ್ತೆಯಾಗಿ ಮಹಿಮಾವಂತೆಯಾಗಿ ಖ್ಯಾತಳಾಗಿರಬೇಕು. ಮತ್ತು ಅದೇ ರೀತಿ ಗಿರಿಯಮ್ಮನಿಗೂ ಸಹ ಸುಮತೀಂದ್ರ ಸ್ವಾಮಿಗಳ ಬಗ್ಗೆ ಅವರು ಪ್ರಾಂತಕ್ಕೆ ಎರಡನೆಯ ಬಾರಿಗೆ ಭೇಟಿ ಕೊಡುವ ವೇಳೆಗೆ ಸಾಕಷ್ಟು ಮಾಹಿತಿ ತಿಳಿದುಬಂದಿರಬಹುದು. ಹೀಗಾಗಿ ಅವರೀರ್ವರ ಭೇಟಿ ಕ್ರಿ.ಶ.೧೭೧೧ರಲ್ಲಿ ಸಾಧ್ಯವಾಗಿರಬೇಕು.

ಗಿರಿಯಮ್ಮ ಮತ್ತು ಸುಮತೀಂದ್ರ ಸ್ವಾಮಿಗಳ ಪರಸ್ಪರ ಭೇಟಿಯನ್ನು ತಿಳಿಸುವ ಯಾವ ಶಾಸನಗಳೂ ಸದ್ಯಕ್ಕೆ ದೊರೆತಿಲ್ಲವಾದರೂ, ಹಿಂದೆ ಹೇಳಿದಂತೆ ಅವಳು ಸುಮತೀಂದ್ರರಿಂದ ಪೂಜೆಗೊಳ್ಳುತ್ತಿದ್ದ

ಶ್ರೀರಾಮ ವಿಗ್ರಹವನ್ನು 'ಸುಮತೀಂದ್ರ ಹೃದಯ ಪಂಕಜ ಭೃಂಗ' ಎಂದು ವಿಶೇಷಿಸಿ ಸಂಬೋಧಿಸಿರುವ ಕೀರ್ತನೆಯು ಅವರಿಬ್ಬರ ಭೇಟಿಗೆ ಒಂದು ಸಾಕ್ಷ್ಯಾಧಾರವೆಂಬಂತೆ ಇದೆ. ಸುಮತೀಂದ್ರರು ಚಿತ್ರದುರ್ಗ ಪ್ರಾಂತ್ಯಕ್ಕೆ ಬಂದದ್ದನ್ನು ಸ್ಪಷ್ಟಪಡಿಸುವ ಪ್ರಸ್ತುತ ಶಾಸನ ಆ ಕೀರ್ತನೆಗೆ ಪೂರಕವಾಗಿದೆ ಎನ್ನಬಹುದು.

ಇದರಿಂದ ಗಿರಿಯಮ್ಮನ ಕಾಲವನ್ನು ಕ್ರಿ.ಶ.೧೭೨೫-೫೦ ಅಥವಾ ೧೭೫೦ ಎಂಬ ಊಹಿತದಿಂದ ಕ್ರಿ.ಶ.ಸುಮಾರು ೧೭೦೦ ಎಂದು ಕೆಲವು ದಶಕಗಳಷ್ಟು ಹಿಂದಕ್ಕೆ ಈಗ ಒಯ್ಯಬಹುದಾಗಿದೆ. ಸುಮತೀಂದ್ರ ಸ್ವಾಮಿಗಳು ಅವಳನ್ನು ಕಾಣುವ ಹೊತ್ತಿಗೆ ಅವಳಿಗೆ ೪೦-೫೦ರಷ್ಟು ವಯಸ್ಸಾಗಿರಬೇಕು ಎಂದು ಭಾವಿಸಬಹುದು. ಇದರಿಂದ ಅವಳ ಕಾಲವನ್ನು ಇನ್ನಷ್ಟು ಖಚಿತಗೊಳಿಸಬಹುದಾದರೆ ಅದನ್ನು ಕ್ರಿ.ಶ.೧೬೬೫-೧೭೧೫ ಎಂದು ಇಟ್ಟುಕೊಳ್ಳಬಹುದು ಹೀಗೆ ಇನ್ನು ಮುಂದೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಗಿರಿಯಮ್ಮಳ ಈ ಕಾಲವನ್ನು ನಮೂದಿಸುವುದು ವಿಹಿತವಾಗಿದೆ. ಮೇಲೆ ತಿಳಿಸಿದ ಶಾಸನದಿಂದ ಈವರೆಗೆ ವೃತ್ತಾಂತ ರೂಪವಾಗಿ ಮಾತ್ರ ಹೇಳುತ್ತಿದ್ದ ಗಿರಿಯಮ್ಮನ ಜೀವಿತದ ಒಂದು ಮಹತ್ವದ ಸಂದರ್ಭಕ್ಕೆ ಆಧಾರವೊಂದು ದೊರಕಿದಂತಾಗಿದೆ. ಮತ್ತು ಅವಳ ಜೀವಿತಾವಧಿಯನ್ನು ನಿರ್ಧರಿಸುವಲ್ಲಿ ಕೂಡಾ ಈ ಶಾಸನ ಒಂದು ಪೂರಕ ಆಧಾರವಾಗಿದೆ ಎಂದು ಬಿ.ರಾಜಶೇಖರಪ್ಪನವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

## ಗಿರಿಯಮ್ಮ ಮತ್ತು ಗೋಪಾಲದಾಸರು ಭೇಟಿಯಾಗಿದ್ದರೆ?

ಈ ಮೇಲಿನ ವಿವೇಚನೆಯ ಹಿನ್ನೆಲೆಯಲ್ಲಿ ಹೆಳವನಕಟ್ಟೆ ಗಿರಿಯಮ್ಮ ಮತ್ತು ಗೋಪಾಲದಾಸರ ಭೇಟಿಯ ಬಗೆಗಿನ ಹೇಳಿಕೆಗಳನ್ನು ವಿಮರ್ಶಿಸಬೇಕಾಗಿದೆ. ಗೋಪಾಲದಾಸರು ಕ್ರಿ.ಶ.೧೭೧೭ರಲ್ಲಿ ಜನಿಸಿದರೆಂದೂ ಗಿರಿಯಮ್ಮ ಅವರ ಶಿಷ್ಯಳೆನ್ನುವುದರಿಂದ ಅವಳು ಕ್ರಿ.ಶ.೧೭೧೭ರ ತರುವಾಯ ಜನಿಸಿದಳೆಂದು ಖಚಿತವಾಗುತ್ತದೆಯೆಂದೂ ಹೇಳಲಾಗಿದೆಯಷ್ಟೆ. ಹಾಗೆಯೆ ಗೋಪಾಲದಾಸರು ಅವಳಿಗೆ ಬಾಲಗೋಪಾಲ ಮೂರ್ತಿಯನ್ನೂ "ಹೆಳವನ ಕಟ್ಟೆರಂಗ" ಎಂಬ ಮುದ್ರಿಕೆಯನ್ನು ನೀಡಿದರೆಂದೂ ಮುಂದೆ ಅವಳು ಅದೇ ಮುದ್ರಿಕೆಯಲ್ಲಿ ಕೀರ್ತನೆಗಳನ್ನು ರಚಿಸಿದಳೆಂದೂ ಹೇಳಲಾಗಿದೆ. ಈ ಎಲ್ಲಾ ಹೇಳಿಕೆಗಳನ್ನು ಈಗ ವಿಮರ್ಶಿಸುವುದು ವಿಹಿತವಾಗಿದೆ. ಸುಮತೀಂದ್ರ ಸ್ವಾಮಿಗಳು ಎರಡನೆಯ ಬಾರಿಗೆ (ಮತ್ತು ಅದೇ ಕೊನೆಯ) ಅಂದರೆ ಕ್ರಿ.ಶ.೧೭೧೧ರಲ್ಲಿ ಚಿತ್ರದುರ್ಗ ಪ್ರಾಂತ್ಯಕ್ಕೆ ಬಂದಾಗ ಭೇಟಿ ನೀಡಿದ್ದರು. ಆಗ ಗಿರಿಯಮ್ಮಳ ಭೇಟಿಯಾಗಿತ್ತು. ಅದೇ ವೇಳೆಗೆ ಅವಳು ಸುಮತೀಂದ್ರರ ಪೂಜಾ ವಿಗ್ರಹ ರಾಮನನ್ನು ಕುರಿತು 'ಹೆಳವನಕಟ್ಟೆ ರಂಗ' ಎಂಬ ಮುದ್ರಿಕೆಯನ್ನು ಬಳಸಿ ಕೀರ್ತನೆ ರಚಿಸಿ ಹಾಡಿದ್ದಳು ಎಂದ ಮೇಲೆ, ಗೋಪಾಲದಾಸರು ಹುಟ್ಟಿದ ತರುವಾಯ ಅಂದರೆ ಕ್ರಿ.ಶ.೧೭೧೭ರ ನಂತರ ಅವಳು ಹುಟ್ಟಿದ್ದಳೆನ್ನುವುದು ಮತ್ತು ಅದು ಖಚಿತವೆಂದು ಹೇಳುವುದು ಅಸಂಗತವಾಗುತ್ತದೆ. ಕ್ರಿ.ಶ.೧೭೧೭ರ

ಸುಮಾರಿನಲ್ಲೇ ಸುಮತೀಂದ್ರ ಸ್ವಾಮಿ ಗೌರವಿಸುವ ಆಧ್ಯಾತ್ಮಿಕ ವ್ಯಕ್ತಿತ್ವವನ್ನು ಹೊಂದಿದ್ದ ಗಿರಿಯಮ್ಮ ಅವರಲ್ಲಿದ್ದ ಪೂಜಾಮೂರ್ತಿಗೆ ಆಶುಕೀರ್ತನೆ ರಚಿಸಿ ಸ್ವಾಮಿಗಳಿಗೆ ಪ್ರತಿಗೌರವವನ್ನು ತೋರಿದ್ದಳು, ಕ್ರಿ.ಶ.೧೭೧೭ರಲ್ಲಿ ಹುಟ್ಟಿದ ಗೋಪಾಲದಾಸರಿಗೆ ಶಿಷ್ಯಳಾದಳೆನ್ನುವುದೂ ಗೋಪಾಲದಾಸರು ಗಿರಿಯಮ್ಮಳಿಗೆ 'ಹೆಳವನಕಟ್ಟೆ ರಂಗ' ಎಂಬ ಅಂಕಿತ ಇತ್ಯಾದಿ ನೀಡಿದರೆನ್ನುವುದೂ ಯಾವ ರೀತಿಯಲ್ಲೂ ಸಮರ್ಥನೀಯವಾಗಿ ತೋರುವುದಿಲ್ಲ. ಅಲ್ಲದೆ ಸುಮತೀಂದ್ರ ಸ್ವಾಮಿಗಳ ಭೇಟಿಯನ್ನು ಸೂಚಿಸುವಂತಹ ಪದ್ಯವನ್ನು ರಚಿಸಿರುವಂತೆ, ಗಿರಿಯಮ್ಮಳಿಗೆ ಗೋಪಾಲದಾಸರ ಭೇಟಿಯಾಗಿದ್ದರೆ, ಅದನ್ನು ಸೂಚಿಸುವ ಪದ್ಯವನ್ನು ಪ್ರಾಯಶಃ ರಚಿಸಿರುತ್ತಿದ್ದಳೆಂದು ಸಹಜವಾಗಿಯೆ ಭಾವಿಸಬಹುದು. ಆದರೆ ಈವರೆಗೆ ದೊರೆತಿರುವ ಅವಳ ಹಾಡುಗಳಲ್ಲಿ ಅಂಥ ಸೂಚನೆ ಇರುವ ಯಾವೊಂದೂ ಹಾಡು ಇಲ್ಲ ಎಂಬುದನ್ನು ಗಮನಿಸಬಹುದು.

## ಮನೆತನ

ಗಿರಿಯಮ್ಮ ಭಾಗವತ ಸಂಪ್ರದಾಯದ ಸ್ಮಾರ್ತ ಮನೆತನಕ್ಕೆ ಸೇರಿದವಳು. ಈಗಲೂ ಆಕೆಯ ಗಂಡನ ಮನೆಯ ವಂಶಸ್ಥರು ಮಲೆಬೆನ್ನೂರಿನಲ್ಲಿ ವಾಸಿಸುತ್ತಿದ್ದಾರೆ. ಅವಳು ಹರಿದಾಸ ಪಂಥಕ್ಕೆ ಸೇರಿದ ಸಂತಳಾದರೂ ಹರಿಹರ ಪ್ರಾಂತ್ಯದ ವೈಶಿಷ್ಟ್ಯವೋ ಎಂಬಂತೆ ಹರಿ-ಹರ ವಿಭೇದವನ್ನರಿಯದ ಭಕ್ತೆ. ಈ ಮುಂದಿನ ಕೀರ್ತನೆ ಅವಳ ಹರಿ-ಹರ ಸಾಮರಸ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

"ಈತ ಲಿಂಗದೇವ ಶಿವನು, ಆತ ರಂಗಧಾಮ ವಿಷ್ಣು
ಮಾತ ಕೇಳಿ ಮನುಜರಿನ್ನು ನೀತಿ ಬಿಡದೆ ನಡೆಯಿರಿ
ವೇದಕೆ ನಿಲುಕನೀತ ವೇದ ನಾಲ್ಕು ತಂದನಾತ
ಬೂದಿ ಮೆಯ್ಯೊಳ್ ಪೂಸಿದನೀತ, ಭುವನಗಿರಿಯ ನಿಗವಿದನಾತ
ಗಂಗೆಯ ಪೊತ್ತನೀತ, ಗರುಡ ವಾಹನನಾತ
ತುಂಗ ಹೆಳವನಕಟ್ಟೆ, ರಂಗನೀತ, ಲಿಂಗನಾತ"[೨]

ಗಿರಿಯಮ್ಮನ ಬಾಲ್ಯ, ವೈವಾಹಿಕ ಬದುಕು, ಆಕೆಯ ಭಕ್ತಿ, ವೈರಾಗ್ಯಪೂರ್ಣ ವ್ಯಕ್ತಿತ್ವಗಳ ಬಗ್ಗೆ ಬಹಳಷ್ಟು ವರ್ಣರಂಜಿತ ಕಥೆಗಳು ಜನಜನಿತವಾಗಿವೆ. ಅವುಗಳಲ್ಲಿ ಮುಖ್ಯವಾದ ಕೆಲವು ವಿಚಾರಗಳನ್ನಷ್ಟೆ ಇಲ್ಲಿ ಗಮನಿಸಬಹುದು. ಅಲ್ಲದೆ ಗಿರಿಯಮ್ಮ ತನ್ನ ಹಾಡುಗಳಲ್ಲಿ ಸ್ವಂತ ವಿಚಾರಗಳನ್ನು ಅಷ್ಟಾಗಿ ಹೇಳಿಕೊಂಡಿಲ್ಲ. ಉಗಾಭೋಗವೊಂದರಲ್ಲಿ

"ತಂದೆ ತಾಯಿಂಬುವನು ನಾನೊಂದು ಗುರುತನರಿಯೆ ನಿಮ್ಮ
ಕಂದಳೆನಿಸಿ ಕಡೆಹಾಯಿಸೊ ಹೆಳವನಕಟ್ಟೆ ರಂಗ"[೩]

ಎಂದು ಹೇಳಿಕೊಂಡಿರುವುದರಿಂದ ಆಕೆ ಚಿಕ್ಕವಳಿರುವಾಗಲೇ ಹೆತ್ತವರನ್ನು ಕಳೆದುಕೊಂಡಿರಬೇಕೆಂದು ಊಹಿಸಬಹುದಾಗಿದೆ. ಹಾಗೆಯೇ 'ಚಂದ್ರಹಾಸನ ಕಥೆಯಲ್ಲಿ ಹೆತ್ತೋರ ಮನೆದೈವ ಮೈಲಾರಗೆ ಹಸ್ತವ ಮುಗಿದು ವಂದಿಸುವೆ' ಎಂದಿರುವುದರಿಂದ ಮೈಲಾರಲಿಂಗ ಅವಳ ಹೆತ್ತವರ ಮನೆದೈವ ಎನ್ನುವುದು

ತಿಳಿದುಬರುತ್ತದೆ. ಹೆತ್ತವರನ್ನು ಚಿಕ್ಕಂದಿನಲ್ಲೇ ಕಳೆದುಕೊಂಡ ಗಿರಿಯಮ್ಮ ತನ್ನ ಚಿಕ್ಕಪ್ಪನ ಆಶ್ರಯದಲ್ಲಿ ಬೆಳೆಯುತ್ತಾಳೆ. ಆ ಮನೆಯಲ್ಲಿನ ಧಾರ್ಮಿಕ ಆವರಣ, ಜೊತೆಗೆ ಹೆತ್ತವರ ಅಗಲಿಕೆ ತಂದಿದ್ದ ಅನಾಥಭಾವ ಇವು ಒಟ್ಟಾಗಿಯೇ ಅವಳಲ್ಲಿ ಆ ವಯಸ್ಸಿಗೆ ದೈವಭಕ್ತಿಯನ್ನು ಒಲಿಸಿರಬೇಕು. ಅಂದಿನ ಸಾಮಾಜಿಕ ರೂಢಿಯಂತೆ ಆಕೆಗೆ ೧೦-೧೨ ವರ್ಷಗಳಾಗುವಷ್ಟರಲ್ಲಿ ಹರಿಹರ ತಾಲ್ಲೂಕಿನ ಮಲೆಬೆನ್ನೂರಿನ ಶಾನುಭೋಗ ಕೃಷ್ಣಪ್ಪನವರ ಮಗ ತಿಪ್ಪರಸನೊಂದಿಗೆ ವಿವಾಹವಾಗುತ್ತದೆ. ಪಾಲಕರ ಒತ್ತಾಯಕ್ಕೆ ಮಣಿದು ವಿವಾಹವಾದರೂ ಆ ಹೊತ್ತಿಗೆ ಸಂಸಾರದ ಬಗ್ಗೆ ವೈರಾಗ್ಯ ಹೊಂದಿದ್ದ ಗಿರಿಯಮ್ಮ ಗಂಡನಿಗೆ ಮರುವಿವಾಹವಾಗುವಂತೆ ತಿಳಿಸಿ ಕೊನೆಯತನಕ ವಿರಾಗಿಣಿಯಾಗೆ ಉಳಿಯುತ್ತಾಳೆ. ಇದು ಗಿರಿಯಮ್ಮನ ಕ್ರಾಂತಿಕಾರಿ ನಿಲುವು. ಗಂಡನ ಮನೆಯಲ್ಲಿದ್ದೇ ತನ್ನ ಭಕ್ತಿ ಸಾಧನೆಗೆ ತೊಡಗುತ್ತಾಳೆ. ಈ ಸಾಧನಾ ಮಾರ್ಗದಲ್ಲಿ ಗಂಡ ಹಾಗೂ ಮಾವನ ಸಹಕಾರ ಇದ್ದರೂ ಕುಟುಂಬದ ಉಳಿದ ಸದಸ್ಯರು ಹಾಗೂ ಇತರ ಕೆಲವರ ಅಸೂಯೆಗೆ ಕಷ್ಟ ನಿಷ್ಠುರಗಳಿಗೆ ಒಳಗಾಗುತ್ತಾಳೆ. ಆದರೆ ಆ ಎಲ್ಲವನ್ನು ಮೀರಿ ಅವಳ ಭಕ್ತಿ ಸಾಧನೆ ಮುನ್ನಡೆಯುತ್ತದೆ. ಆಕೆಗೆ ಹೀಗೆ ಮನೆಯ ಕೆಲವರಿಂದ ಹಾಗೂ ಇತರರಿಂದ ಬಂದ ಕಷ್ಟಗಳು, ಅವುಗಳನ್ನು ಆಕೆ ತನ್ನ ಅಪ್ರತಿಮ ದೈವಭಕ್ತಿಯಿಂದ ಗೆದ್ದುನಿಂತ ರೀತಿ, ಇವುಗಳ ಬಗ್ಗೆ ಅನೇಕ ಪವಾಡ ಸದೃಶ ಕಥೆಗಳು ಪ್ರಚಲಿತವಾಗಿವೆ.

ಗಂಡನ ಮನೆಯಲ್ಲಿದ್ದೇ ವಿರಾಗಿಣಿಯಾಗಿ ರಂಗನಾಥನ ಭಕ್ತೆಯಾಗಿ ಬಾಳಿದ ಗಿರಿಯಮ್ಮ ತನ್ನ ಸುತ್ತಲಿನ ಸಮಾಜಕ್ಕೆ ಉಪಕಾರಿಯಾಗಿ ಮಾರ್ಗದರ್ಶಕಳಾಗಿ ಬೆಳೆದು 'ಅಮ್ಮನವರು' ಎನಿಸಿಕೊಳ್ಳುತ್ತಾಳೆ. ಆಕೆ ಭಕ್ತಿಯಿಂದ ಪ್ರೇರಿತಳಾಗಿ ಅನೇಕ ಸಣ್ಣ ಹಾಡುಗಳನ್ನೂ ಭಕ್ತರ ಕಥೆಗಳನ್ನೂ ಬರೆದಿದ್ದಾಳೆ. ಆದರೆ ಇದಕ್ಕೆ ಪೂರ್ವಭಾವಿಯಾಗಿ ಆಕೆಗೆ ವಿದ್ಯಾಭ್ಯಾಸ ದೊರೆಕಿತ್ತೆ ಎಂಬುದರ ಬಗ್ಗೆ ಖಚಿತವಾಗಿ ಏನನ್ನೂ ಹೇಳಲಾಗುವುದಿಲ್ಲ. ಈ ಬಗ್ಗೆ ವಿಭಿನ್ನ ಅಭಿಪ್ರಾಯಗಳು ದೊರೆಯುತ್ತವೆ.

೧. "ಚಿಕ್ಕಂದಿನಲ್ಲಿ ಓದುಬರಹ ಕಲಿತವಳಲ್ಲವಾದರೂ ಬಹುಶ್ರುತಳಾಗಿದ್ದಳೆಂದೂ ಕೇವಲ ಭಕ್ತಿಭಾವದಿಂದ ಕನಕ, ಪುರಂದರಾದಿ ದಾಸರಂತೆ ಅಪರೋಕ್ಷ ಜ್ಞಾನಿಯಾಗಿದ್ದಳೆಂದೂ ಬಾಲ್ಯದಲ್ಲಿಯೇ ಕವಿತಾ ಶಕ್ತಿಯನ್ನು ಪಡೆದವಳೆಂದೂ ತಿಳಿಯುತ್ತದೆ."[೪]

೨. "ಈಕೆಗೆ ಪ್ರಾಯಶಃ ಗುರುಮುಖದಿಂದ ಕ್ರಮವಾಗಿ ವಿದ್ಯಾಭ್ಯಾಸವಾಗಿರಲಾರದು. ಆದರೆ ಪೂರ್ವಕಾವ್ಯಗಳ ಪುರಾಣೇತಿಹಾಸಗಳ ಒಳ್ಳೆಯ ಪರಿಚಯವಿದ್ದಂತೆ ತೋರುತ್ತದೆ. ಇವಳ ಕಾವ್ಯಶಕ್ತಿ ನೈಸರ್ಗಿಕವೂ ಪ್ರಾಸಾದಿಕವೂ ಆಗಿದ್ದು ಭಾಗವತ ಕವಿಗಳಲ್ಲಿ ಕೆಲಮಟ್ಟಿಗೆ ಕುಮಾರವ್ಯಾಸನನ್ನು ನೆನಪಿಗೆ ತರುತ್ತಾಳೆ."[೫]

೩. ಹೆಣ್ಣು ಮಕ್ಕಳಿಗೆ ಹೆಚ್ಚಿನ ಶಿಕ್ಷಣ ಕೊಡಿಸುವ ಪದ್ಧತಿ ಆಗಿನ ಕಾಲದಲ್ಲಿ ಬೆಳೆದಿರಲಿಲ್ಲವಾದ್ದರಿಂದ ತಂದೆಯವರಾದ ಭಿಷ್ಟಪ್ಪ ಜೋಯಿಸರಿಂದಲೇ ಗಿರಿಯಮ್ಮನಿಗೆ ಅಕ್ಷರಭ್ಯಾಸವಾಯಿತು. ತಕ್ಕಮಟ್ಟಿಗೆ ಓದುಬರಹವನ್ನು ಅವಳು ಕಲಿತುಕೊಂಡಳು.[೬]

ಈ ಹೇಳಿಕೆಗಳ ಜೊತೆಗೆ ಗಿರಿಯಮ್ಮ ಸ್ವತಃ 'ಲವಕುಶರ ಕಾಳಗ'ದ ಕೊನೆಯಲ್ಲಿ ಹೇಳಿಕೊಂಡಿರುವ ಮಾತುಗಳನ್ನೂ ಗಮನಿಸಬಹುದು.

ಅರಿಯದೆ ಮಾಡಿದೆ ಅಜ್ಞಾನತನದಿಂದ ಬರೆದೋದಿದವಳಲ್ಲ ಮರುಳೆ
ಕರುಣಾಕರದೇವ ಹೆಳವನಕಟ್ಟೆ ರಂಗಯ್ಯ ಅರುಹಿದಂದಷ್ಟು ಪೇಳಿದೆನು.

ಆದರೆ ಮೇಲಿನ ಈ ಮಾತುಗಳಾಗಲೀ, 'ಚಂದ್ರಹಾಸನ ಕಥೆ'ಯ ಕೊನೆಯಲ್ಲಿ ಬರುವ 'ಅರಿಯೆನು ಕವಿತಾಚಾತುರ್ಯದ ಮಹಿಮೆಯ ಗುರುಮುಖದಲಿ ಹೇಳಲಿಲ್ಲ' ಎಂಬ ಮಾತುಗಳಾಗಲೀ ಆಕೆ ನಿರಕ್ಷರಿಯಾಗಿದ್ದಳು ಎಂದು ನಂಬಿಸಲು ಸೋಲುತ್ತವೆ. ಇದಕ್ಕೆ ಮೊದಲ ಕಾರಣವೆಂದರೆ ಇವಳ ಚಂದ್ರಹಾಸನ ಕಥೆ. ಲಕ್ಷ್ಮೀಶನ ಜೈಮಿನಿಭಾರತದ ಚಂದ್ರಹಾಸೋಪಾಖ್ಯಾನವನ್ನು ಹೆಜ್ಜೆ ಹೆಜ್ಜೆಗೂ ಆರಂಭದಿಂದ ಅಂತ್ಯದವರೆಗೂ ಸಂಧಿಗಳ ಸೂಚನಾ ಪದ್ಯಗಳಿಂದ ಹಿಡಿದು ವರ್ಣನೆ, ನಿರೂಪಣೆ ಎಲ್ಲದರಲ್ಲೂ ಅನುಸರಿಸುವುದು ಛಂದಸ್ಸು ಮಾತ್ರ ಭಿನ್ನವಾಗುತ್ತದೆ. ಹೀಗಾಗಿ ಇದು ಇನ್ನೊಬ್ಬರು ಓದಿದ್ದನ್ನು ಒಂದು ಸಾರಿಯೋ ಎರಡು ಸಾರಿಯೋ ಕೇಳಿ ಬರೆದ ಹಾಡಂತೂ ಅಲ್ಲ. ತಾನು ಲಕ್ಷ್ಮೀಶನ ಕಾವ್ಯದಲ್ಲಿ ಬರುವ ಚಂದ್ರಹಾಸನ ಕಥೆಯನ್ನೇ 'ಚರಿತೆಯ ಮಾಡಿ ವರ್ಣಿಸುವೆ' ಎಂದು ಆಕೆಯೇ ಆರಂಭದಲ್ಲಿ ಹೇಳಿಕೊಂಡಿದ್ದಾಳೆ. ಹೀಗಿಯೇ ಕುಮಾರವ್ಯಾಸ ಭಾರತದ ಪರಿಚಯವೂ ಈಕೆಗಿದೆಯೆಂಬುದಕ್ಕೆ ಅಜಾಮಿಳನ ಹಾಡಿನಲ್ಲಿ ಬರುವ (ಹಾ.೧೩) 'ಭಾಪುರೆ ವಿಧಿ' ಎಂಬ ಉದ್ಗಾರ ಮತ್ತೆ ಮತ್ತೆ ಬರುವ 'ಮತ್ತವಾರಣ ಕದಳೀವನ ಪೊಕ್ಕಂತೆ' (ಉ.ಕ.ನು ೯೦) ಎಂಬಿತ್ಯಾದಿ ಉಪಮೆಗಳು ಸಾಕ್ಷಿಯಾಗಿ ನುಡಿಯುತ್ತವೆ. ಇವುಗಳ ಜೊತೆಗೆ ''ಸರೋಜಿನಿ ಮಹಿಷಿಯವರು ಲವಕುಶರ ಕಾಳಗದಲ್ಲಿ ಭವಭೂತಿಯ ಉತ್ತಮ ರಾಮಚರಿತೆಯ ಪ್ರಭಾವವಿರುವುದನ್ನು ಗುರುತಿಸಿರುವುದನ್ನು''[೭] ಗಮನಿಸಿದಾಗ ಗಿರಿಯಮ್ಮನಿಗೆ ಕ್ರಮಬದ್ಧ ವಿದ್ಯಾಭ್ಯಾಸ ದೊರೆಯದೆ ಇದ್ದರೂ ತಕ್ಕಮಟ್ಟಿನ ಓದುಬರಹ ತಿಳಿದಿದ್ದಿರಬೇಕು ಎನ್ನಿಸುತ್ತದೆ.

ಗಿರಿಯಮ್ಮನದು ಭಕ್ತಿ ಪ್ರಧಾನವಾದ ವ್ಯಕ್ತಿತ್ವ. ಗಂಡನ ಮನೆಯನ್ನು ಸೇರಿದ ಮೇಲೆ ಮನೆದೇವರಾದ ಹೆಳವನಕಟ್ಟೆ ರಂಗನಾಥನನ್ನು ತನ್ನ ಇಷ್ಟದೈವವಾಗಿ ಆರಿಸಿಕೊಂಡಳು. ''ಗಿರಿಯಮ್ಮನ ಅಂಕಿತ 'ಹೆಳವನಕಟ್ಟೆ ರಂಗ'ದಲ್ಲಿ ಬರುವ ಹೆಳವನಕಟ್ಟೆ ಎನ್ನುವುದು ಮಲೆಬೆನ್ನೂರಿನ ಸಮೀಪದಲ್ಲಿರುವ ಕುಮಾರಹಳ್ಳಿಯ ಒಂದು ಕೆರೆ ಆ ಸ್ಥಳಕ್ಕೆ ಹೆಳವನಕಟ್ಟೆ ಎಂದು ಹೆಸರು ಬರಲು ಕಾರಣವಾದ ಕಥೆಯೊಂದಿದೆ''.[೮] ''ಮಲೆಬೆನ್ನೂರಿನಿಂದ ಸುಮಾರು ಒಂದು ಮೈಲಿ ದೂರದಲ್ಲಿರುವ ಕುಮಾರನ ಹಳ್ಳಿಯಲ್ಲಿ ಹೆಳವನೊಬ್ಬ ವಾಸಿಸುತ್ತಿದ್ದ ಅವನು ಊರ ದನಗಳ ನೆರವಿನಿಂದ ಒಂದು ಕೆರೆಯನ್ನು ಕಟ್ಟಿದನಾದ್ದರಿಂದ ಅದಕ್ಕೆ ಹೆಳವನಕಟ್ಟೆ ಎಂದು ಹೆಸರಾಯಿತು. ಅದೇ ಕೆರೆಯ ಬದಿಗಿದ್ದ ದಿಬ್ಬದ ಮೇಲೆ ಒಂದು ಹುತ್ತವಿದ್ದು ಅಲ್ಲಿ ಹಸುಗಳು ಹಾಲು ಕರೆಯುತ್ತಿದ್ದದನ್ನು ಕಂಡ ಹೆಳವನು ಆಶ್ಚರ್ಯಗೊಂಡನು.

ಹುತ್ತವನ್ನು ಅಗೆದು ದೇವಸ್ಥಾನವನ್ನೂ ಆತನೇ ನಿರ್ಮಿಸಿದನಂತೆ. ಈ ರಂಗನಾಥನಿಗೆ 'ಹೆಳವನಕಟ್ಟೆ ರಂಗನಾಥ'ನೆಂದೇ ಹೆಸರಾಗಿ, ಅದೇ ಹೆಸರು ಗಿರಿಯಮ್ಮನ ಅಂಕಿತವಾಗಿಯೂ ಪ್ರಸಿದ್ಧವಾಯಿತು".[೯]

ಗಿರಿಯಮ್ಮ ರಂಗನಾಥನ ಸಾನಿಧ್ಯದಲ್ಲಿಯೇ ತನ್ನ ಬಹುಕಾಲವನ್ನು ಕಳೆಯುತ್ತಿದ್ದಳು. ಭಗವನ್ನಾಮ ಸಂಕೀರ್ತನೆ, ಅರ್ಚನೆ ಅವಳ ದಿನಚರಿಯಾಯಿತು. ಅವಳ ದೈವೀ ವ್ಯಕ್ತಿತ್ವವನ್ನರಿಯಲಾರದ ಅವಳ ಓರಗಿತ್ತಿಯವರು ತಮ್ಮ ಮಾವನಲ್ಲಿ ಇಲ್ಲಸಲ್ಲದ ಚಾಡಿ ಮಾತುಗಳನ್ನು ಹೇಳಿರಬೇಕು ಅವಳ ಮಾವ ಒಂದು ಮುಂಜಾನೆ ರಂಗನಾಥ ದೇವಾಲಯದ ಬಳಿ ಒಂದು ಮರವನ್ನು ಹತ್ತಿ ಸೊಸೆಯ ಚಾರಿತ್ರ್ಯವನ್ನು ಹೊಂಚಿಸಿ ಪರೀಕ್ಷಿಸಿದ ಅಂದಿನಿಂದ ಅವನಿಗೆ ಆಕೆಯ ಬಗ್ಗೆ ಗೌರವಾಭಿಮಾನಗಳು ಹೆಚ್ಚಿದವು.

"ಒಂದು ದಿನ ಗಿರಿಯಮ್ಮನ ಮಾವ ತನ್ನ ಹರಿದ ಮೆಟ್ಟನ್ನು ಸರಿಪಡಿಸಲು ಮಾದಿಗರವನಿಗೆ ಕೊಟ್ಟಿದ್ದನು. ಸ್ನಾನ ಮಾಡಿ ಮಡಿಯುಟ್ಟು ಪೂಜೆಗೆ ಕುಳಿತಾಗಲೂ ಮನಸ್ಸಿನಲ್ಲಿ ತನ್ನ ಹರಿದ ಮೆಟ್ಟನ್ನು ಕುರಿತೇ ಚಿಂತಿಸುತ್ತಿದ್ದನು. ಅದೇ ಸಮಯದಲ್ಲಿ ಯಾರೋ ಬಂದು ಒಳಗೆ ಯಜಮಾನರಿದ್ದಾರೆಯೇ ಎಂದು ಕೇಳಿದರು. ಗಿರಿಯಮ್ಮ ಮಾವನವರು ಹೊಲೆಗೇರಿಗೆ ಹೋಗಿದ್ದಾರೆ ಎಂದು ಹೇಳಿದಳು".[೧೦] ಈ ಮಾತನ್ನು ಕೇಳಿದ ಅವಳ ಮಾವನಿಗೆ ತನ್ನ ಕಾಟಾಚಾರದ ಪೂಜೆಯ ಬಗ್ಗೆ ನಾಚಿಕೆಯಾಯಿತು. ಗಿರಿಯಮ್ಮಳ ಸುತ್ತ ಹಲವು ಪವಾಡಗಳು ಹೆಣೆಯಲ್ಪಟ್ಟಿವೆ. ಅವು ಇಂತಿವೆ. "ವಿವಾಹದ ನಂತರದಲ್ಲಿ ತಿಪ್ಪರಸ ಮಲಗುವ ಕೋಣೆಗೆ ಹೋದಾಗ ಗಿರಿಯಮ್ಮಳನ್ನು ಘಟಸರ್ಪವೊಂದು ಸುತ್ತಿಕೊಂಡಿರುವಂತೆ ಕಂಡು ಆಕೆ ದೈವಾಂಶ ಸಂಭೂತಳೆಂದು ಭಾವಿಸಿ ಆಕೆಗೆ ತಲೆಬಾಗಿದ ಪ್ರಸಂಗ ಅವಳ ಅನನ್ಯ ದೈವಭಕ್ತಿ ವೈರಾಗ್ಯಗಳನ್ನೇ ಹೇಳುವಂಥದು. ಗಿರಿಯಮ್ಮ ಮನೆಯಲ್ಲಿ ಸೌದೆ ಇಲ್ಲದಾಗ ಅವಳ ಅತ್ತೆ ಬೈದಂತೆಯೇ ಒಲೆಗೆ ಕಾಲನ್ನಿಟ್ಟು ಅಡುಗೆ ಮಾಡಿದಳೆನ್ನುವ ಪ್ರಸಂಗ,ಪುಂಗನೂರಿನ ರಾಜಕುಮಾರನಿಗೆ ಕಣ್ಣು ಬರಿಸಿದ ಪ್ರಸಂಗ,ಮಳೆ ಬೆಳೆ ಇಲ್ಲದ ಬರಗಾಲ ಬಂದ ಕಾಲದಲ್ಲಿ ದೇವರಲ್ಲಿ ಪ್ರಾರ್ಥಿಸಿ ಮಳೆ ತರಿಸಿದಳೆನ್ನುವ ಪ್ರಸಂಗ, ಜನರು ಬಂಜೆಯೆಂದು ದೂರಿದ ಗಿರಿಯಮ್ಮನ ಕೈಯಲ್ಲಿ ಸುಮತೀಂದ್ರರು ದೇವಕಿ ಯಶೋಧೆಯರ ಕೈಲಕ್ಷಣಗಳನ್ನು ಗುರುತಿಸಿ ಆಕೆ ಮಹಾತ್ಮಳೆಂದು ತಿಳಿಯಪಡಿಸಿದ ಪ್ರಸಂಗ. ಗೋಪಾಲದಾಸರು ಅವಳನ್ನು ಅನುಗ್ರಹಿಸಿ ಹೋದ ಪ್ರಸಂಗ, ಮಲೆಬೆನ್ನೂರಿನ ಸಮೀಪದ ದಿಬ್ಬದ ಹಳ್ಳಿಯ ಒಂದು ಮನೆಯವರು ಹೆಳವನಕಟ್ಟೆ ರಂಗನಾಥನ ಜಾತ್ರೆಗೆ ಬಂದ ಸಂದರ್ಭದಲ್ಲಿ ಅವರ ಒಂದು ವರ್ಷದ ಮಗು ಸತ್ತಾಗ ಗಿರಿಯಮ್ಮ ಆ ಮಗುವನ್ನು ಬದುಕಿಸಿದ್ದರಿಂದ ಆ ಮನೆತನದವರಿಗೆ ಪವಾಡದವರೆಂಬ ಹೆಸರು ಬಂದಿದೆ ಎಂದು ಹೇಳುವ ಪ್ರಸಂಗ ಇಂಥ ಅನೇಕ ಪವಾಡಮಯ ಘಟನೆಗಳು"[೧೧] ಆಕೆಯ ಬದುಕಿನ ಸುತ್ತ ಹೆಣೆದುಕೊಂಡು ಆಕೆ ಒಬ್ಬ ಅಸಾಮಾನ್ಯ ಮಹಿಳೆಯಾಗಿ ಜನಮನದಲ್ಲಿ ನೆಲೆಸಿದ್ದು ಕಂಡುಬರುತ್ತದೆ.

ಗಿರಿಯಮ್ಮ ವಿವಾಹವಾಗಿ ಮಲೆಬೆನ್ನೂರಿನ ತನ್ನ ಗಂಡನ ಮನೆಗೆ ಬಂದ ನಂತರ ನಿತ್ಯ ನೀರು ತರಲು, ಬಟ್ಟೆ ಒಗೆಯಲು ಇದೇ ಕೆರೆಗೆ ಬರುತ್ತಿದ್ದಳು ಮೊದಲ ಬಾರಿಗೆ ಕೆರೆಗೆ ಬಟ್ಟೆ ಒಗೆಯಲು ಹೆಂಗಳೆಯರೊಂದಿಗೆ ಬಂದ ಗಿರಿಯಮ್ಮ ಪಕ್ಕದಲ್ಲೇ ಇದ್ದ ರಂಗನಾಥನ ದೇವಾಲಯವನ್ನು ಕಂಡು ಅದರ ಬಗ್ಗೆ ವಿಚಾರಿಸಿಕೊಂಡು ದೇವರ ದರ್ಶನ ಮಾಡುತ್ತಾಳೆ. ಆ ರಂಗನೇ ತನ್ನ ಮನದ ದೈವವೆಂದು ಕಂಡುಕೊಂಡ ಗಿರಿಯಮ್ಮ ತನ್ನ ಮುಂದಿನ ಬದುಕನ್ನೆಲ್ಲ ರಂಗನಾಥನ ಪೂಜೆಗೆ ಮೀಸಲಿಡುತ್ತಾಳೆ. ತನ್ನೆಲ್ಲ ಹಾಡುಗಳಿಗೆ ಆ ದೈವದ ಹೆಸರನ್ನೇ ಅಂಕಿತವಾಗಿರಿಸಿಕೊಂಡು ಕೃತಿ ರಚನೆ ಮಾಡಿದಳು.

ಮಲೆಬೆನ್ನೂರಿನ ಶ್ಯಾನುಭೋಗ ತಿಪ್ಪರಸನಾಗಿದ್ದರೂ ಅವನ ತಮ್ಮ ವೆಂಕಟರಾಯನೇ ಎಲ್ಲ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದ. ಅವನು ಸಕಾಲದಲ್ಲಿ ರಾಜ್ಯದ ಆದಾಯವನ್ನು ಬೊಕ್ಕಸಕ್ಕೆ ಸಲ್ಲಿಸಲಿಲ್ಲವೆಂದೂ ಎಲ್ಲ ಹಣವನ್ನು ತನ್ನ ಅತ್ತಿಗೆ ಗಿರಿಯಮ್ಮನ ಧಾರ್ಮಿಕ ಸಂತರ್ಪಣೆಗಳಿಗೆ ವಿನಿಯೋಗಿಸುತ್ತಿರುವನೆಂದೂ ಆರೋಪಿಸಿ ಅವನನ್ನು ಬಂಧಿಸಲಾಯಿತು. ಆ ಪ್ರದೇಶದ ಈ ಅಧಿಕಾರಿಗಳು ಈ ಪ್ರಸಂಗವನ್ನು ಸ್ವತಃ ವಿಚಾರಣೆ ಮಾಡಿ ಜನರಲ್ಲಿ ಗಿರಿಯಮ್ಮನ ಬಗ್ಗೆ ಇರುವ ಗೌರವ ಭಾವವನ್ನು ಮನಗಂಡು ವೆಂಕಟರಾಯನನ್ನು ಸೆರೆಯಿಂದ ಬಿಡಿಸಿದರು.

ದೈವಭಕ್ತಿಯಿಂದ ಪರಿಪೂರ್ಣಗೊಂಡ ಅವು ಸರಸವಾದ ಹಾಡುಗಳು, ಸುಮಧುರ ದೇವರನಾಮಗಳು ಸತತವಾಗಿ ಹೊರಹೊಮ್ಮಿದವು. ಅವಳು "ಹೆಳವನಕಟ್ಟೆ ರಂಗಯ್ಯ" ಎಂಬ ಅಂಕಿತದಿಂದ ಕೀರ್ತನೆಗಳನ್ನು ರಚಿಸಿದಳು.

ಗಿರಿಯಮ್ಮನ ಶುದ್ಧ ಚಾರಿತ್ರ್ಯ, ಅಚಲ ನಿಷ್ಠೆ ಮತ್ತು ಅಲೌಕಿಕ ಗುಣಗಳಿಂದ ಕ್ರಮೇಣ ಜನಮನವನ್ನು ಸೆಳೆದುಕೊಂಡಳು. ಆಕೆಯನ್ನು ದೈವಾಂಶ ಸಂಭೂತೆಯೆಂದೂ ಅದ್ಭುತ ಸಾಮರ್ಥ್ಯ ಸಂಪನ್ನೆ ಎಂದೂ ಜನರು ಆದರಿಸಿದರು. ಗಿರಿಯಮ್ಮ ಮನೆಗೆಲಸಗಳಲ್ಲಿ ತೊಡಗಿ ಮನೆಯ ಸಾಮಾನ್ಯ ಸದಸ್ಯಳಂತೆ ಬಾಳಿದರೂ ಉಳಿದವರಿಗೂ ಹಿತಕಾರಿಯಾಗಿ ನಡೆಯುತ್ತಾಳೆ. ಈಕೆಯ ಸನ್ನಡತೆ, ವೈರಾಗ್ಯ, ದೈವಭಕ್ತಿಗಳು ಗಂಡನಿಗೆ ಬೇರೆ ಮದುವೆ ಮಾಡಿಸಿದ ವಿಚಾರ ಇವೆಲ್ಲವೂ ಆಕೆಯ ಬಗ್ಗೆ ವರ್ಣರಂಜಿತ ಕಥೆಗಳು ಹರಡಲು ಕಾರಣವಾಗಿ ಆಕೆ ಆ ಸುತ್ತಲಿನ ಜನಮನದಲ್ಲಿ ಮಹಿಮಾನ್ವಿತ ಭಕ್ತೆಯಾಗಿ ನೆಲೆಯೂರುತ್ತಾಳೆ. ಗಿರಿಯಮ್ಮ ಹಾಲು ಕರೆಯವಾಗ, ಮೊಸರು ಕಡೆಯುವಾಗ ಬಾಲಕೃಷ್ಣ ಆಕೆಗೆ ಗೋಚರವಾಗುತ್ತಿದ್ದನೆಂಬುದು ಇಂಥದೇ ಒಂದು ನಂಬಿಕೆ ಗಿರಿಯಮ್ಮ ರಾಧಿಕೆಯ ಅವತಾರವೆಂದು ಜನ ತಿಳಿಯುತ್ತಿದ್ದರಂತೆ, ಆಕೆ ಮುಟ್ಟಿ ಹರಸಿದ ಮಕ್ಕಳು ದೀರ್ಘಾಯುಷಿಗಳಾಗುತ್ತಾರೆಂಬ ನಂಬಿಕೆಯೂ ಜನರಲ್ಲಿತ್ತು. "ರಾಣಿಬೆನ್ನೂರಿನಲ್ಲಿ ಇಂದಿಗೂ ಗಿರಿಯಮ್ಮನಿಗೆ ಎರೆಯುತ್ತಿದ್ದರೆಂದು ತಿಳಿಯುವ ಬಚ್ಚಲಮನೆ ಇದ್ದು ಅಲ್ಲಿ ಮಕ್ಕಳನ್ನು ಕೂಡಿಸಿ ನೀರು ಎರೆದರೆ ಮಕ್ಕಳ ಪೀಡೆ ಪರಿಹಾರವಾಗುತ್ತದೆಂಬ ನಂಬಿಕೆ ಉಳಿದಿದೆಯಂತೆ. ಇಂಥ ಭಕ್ತೆ ಹರಸಿದರೆ ತಮ್ಮ ಕಷ್ಟಗಳು ಪರಿಹಾರವಾಗುತ್ತವೆ ಎಂಬ ನಂಬಿಕೆ

ಜನರಲ್ಲಿ ಬಲವಾಗುತ್ತ ನಡೆದು ಸುತ್ತಮುತ್ತಲ ಪ್ರದೇಶಕ್ಕೆಲ್ಲ ಹರಡಿ ತಮ್ಮ ದೈಹಿಕ ಹಾಗೂ ಸಾಂಸಾರಿಕ ತೊಂದರೆಗಳಿಂದ ನೊಂದವರು ಆಕೆಯ ಅಭಯವನ್ನು ಬಯಸಿ ಬರುವಂತೆ ಮಾಡುತ್ತವೆ.''[೧೨]

ಆಕೆಯ ಮಹಿಮೆಯನ್ನು ಕೇಳಿ ಆಂಗ್ಲ ಸರದಾರನೊಬ್ಬ ಆಕೆಯ ದರ್ಶನಕ್ಕೆ ಬಂದು ಶಾನುಭೋಗರ ಮನೆತನಕ್ಕೆ 'ದೇಶಪಾಂಡೆ' ಎಂಬ ಬಿರುದನ್ನಿತ್ತು ಆ ಗ್ರಾಮದ ಸ್ವತ್ತು ವೃತ್ತಿಗಳನ್ನು ಅನುಭವಿಸುವ ಸನ್ನದನ್ನು ಕೊಟ್ಟಿದ್ದಾಗಿ ತಿಳಿದುಬರುತ್ತದೆ. ಹೀಗೆಯೆ ಪುಂಗನೂರಿನ ರಾಜಕುಮಾರನಿಗೆ ಕಣ್ಣು ಕಾಣಿಸದಂತಾದಾಗ ಆತನು ಗಿರಿಯಮ್ಮನ ಬಳಿಗೆ ಬರಲು ಆಕೆ, ನಂದಾದೀವಿಗೆಯ ಕಪ್ಪನ್ನು ಆತನ ಕಣ್ಣಿಗೆ ಹಚ್ಚಿ ದೃಷ್ಟಿ ಬರೆಸಿದಳಂತೆ. ಈ ಉಪಕಾರಕ್ಕಾಗಿ ಪುಂಗನೂರಿನ ರಾಜಕುಮಾರನು ಕುಮಾರನ ಹಳ್ಳಿಯನ್ನು ಮೈಸೂರು ಅರಸರಿಂದ ಕ್ರಮಕ್ಕೆ ಕೊಂಡು ಗಿರಿಯಮ್ಮನ ನೆಚ್ಚಿನ ದೈವ ರಂಗನಾಥನ ದೇವಾಲಯಕ್ಕೆ ಕೊಟ್ಟು ಅದರಿಂದ ಬರುವ ಉತ್ಪಾದನೆಯಲ್ಲಿ ದೇವಸ್ಥಾನದಲ್ಲಿ ನಿತ್ಯೋತ್ಸವ ನಡೆಯುವ ಏರ್ಪಾಡು ಮಾಡಿದ್ದಲ್ಲದೆ ದೇವಸ್ಥಾನದ ಮುಂದೆ ಒಂದು ಪುಷ್ಕರಣಿಯನ್ನು ಕಟ್ಟಿಸಿ ಹೂದೋಟವನ್ನು ಮಾಡಿಸಿದನೆಂದು ತಿಳಿದುಬರುತ್ತದೆ.[೧೩]

ಗಿರಿಯಮ್ಮ ತನ್ನ ಕೊನೆಯ ದಿನಗಳಲ್ಲಿ ಮೈಲಾರ, ಕೊಕ್ಕನೂರು, ಗೋಕರ್ಣ, ಪಿಳ್ಳಂಗಿರಿ ಮುಂತಾದ ಸ್ಥಳಗಳಿಗೆ ಯಾತ್ರ ಮಾಡುತ್ತಿದ್ದಾಗ ಆಕೆಗೆ ನೀನು ಇಲ್ಲಿಂದ ಕುಂಬಳೂರು, ದಾಗಿನಕಟ್ಟೆ ಮಾರ್ಗವಾಗಿ ಕಮ್ಮಾರಗಟ್ಟೆಗೆ ಹೋಗು ಅಲ್ಲಿ ನಿನಗೆ ಮಾರುತಿ ದರ್ಶನವಾಗುತ್ತದೆ ಎಂಬ ವಾಣಿ ಕೇಳಿಸಿತಂತೆ. ಅದರಂತೆ ಗಿರಿಯಮ್ಮ ಕಮ್ಮಾರಗಟ್ಟೆಗೆ ಹೋದಳೆಂಬ ಅಭಿಪ್ರಾಯವಿದೆ. ಕಮ್ಮಾರಗಟ್ಟೆ ತುಂಗಾಭದ್ರಾ ನದಿಯ ತೀರದಲ್ಲಿ ಶಿವಮೊಗ್ಗ ಜಿಲ್ಲೆಯ ಹೊನ್ನಾಳಿಗೆ ಸಮೀಪದಲ್ಲಿರುವ ಸ್ಥಳ ಅಲ್ಲಿ ಗಿರಿಯಮ್ಮನೇ ನದಿಗೆ ಸೋಪಾನವನ್ನೂ ಮಾರುತಿಗೆ ದೇವಸ್ಥಾನವನ್ನು ಕಟ್ಟಿಸಿದಳಂತೆ. ಅವಳ ಅಂತ್ಯಕಾಲದಲ್ಲಿ ಅಲ್ಲಿ ಮಾರುತಿಯ ದರ್ಶನವಾಗಿ ಅಂದೇ ತುಂಗಭದ್ರೆಯ ಪೂರ್ಣ ಪ್ರವಾಹದಲ್ಲಿ ಶ್ರಾವಣಶುದ್ಧ ಪಂಚಮಿಯ ದಿನದಂದು ಆಕೆ ಅದೃಶ್ಯಳಾದಳೆಂದು ಹೇಳುತ್ತಾರೆ. ಈಗಲೂ ಗಿರಿಯಮ್ಮನ ಪುಣ್ಯತಿಥಿಯಾದ ಶ್ರಾವಣಶುದ್ಧ ಪಂಚಮಿಯ ದಿವಸ ಆಕೆ ಸ್ಥಾಪಿಸಿದ ಮಾರುತಿಗೆ ರಥೋತ್ಸವ ನಡೆಯುತ್ತದೆಯಂತೆ.[೧೪]

ಹೀಗೆ ಜನಮನದಲ್ಲಿ ಇಂದಿಗೂ ನಿಂತಿರುವ ಗಿರಿಯಮ್ಮ ವಿವಾಹಿತಳಾಗಿಯೂ ವಿರಾಗಿಣಿಯಾಗಿ, ಸಂಸಾರದೊಳಗಿದ್ದೂ ಭಕ್ತೆಯಾಗಿ, ಸಾಧಕಳಾಗಿ ಬೆಳೆಯುತ್ತ ತನ್ನ ಕುಟುಂಬ ಹಾಗೂ ತನ್ನ ಸುತ್ತಲಿನ ಸಮಾಜಕ್ಕೆ ಉಪಕಾರಿಯಾಗಿ, ಮಾರ್ಗದರ್ಶಿಯಾಗಿ ತನ್ನ ಅಪೂರ್ವ ವ್ಯಕ್ತಿತ್ವವನ್ನು ಹೊಂದಿದ ಗಿರಿಯಮ್ಮ ಚಂದ್ರಹಾಸನ ಕಥೆಯ ಒಂದು ಪ್ರತಿಯ ಕೊನೆಯಲ್ಲಿ "ಶ್ರೀಮತ್ ಪರಮ ಹಂಸಾರೂಢೆಯಾದ ನಿತ್ಯನಿರ್ಮಲ ಪರಮಾನಂದ ಹೃದಯೆಯಾದ ಹೆಳವನಕಟ್ಟೆ ರಂಗನಾಥ ಸ್ವಾಮಿಯ ಕರುಣವುಳ್ಳವರಾದ ಹೆಳವನಕಟ್ಟೆ ಗಿರಿಯಮ್ಮನವರು ಎಂಬ ಮಾತುಗಳಿವೆ. ಗಿರಿಯಮ್ಮ ತಾನು ನಂಬಿದ ದೈವವನ್ನು

ಸಾಕ್ಷಾತ್ಕಾರಿಸಿಕೊಂಡ ಮಹಾಭಕ್ತೆಯಷ್ಟೇ ಅಲ್ಲ ಆಕೆಯನ್ನು ನಂಬಿ ನಮಸ್ಕರಿಸುವವರ ದೇವತೆಯಾಗಿ ನಿಂತಳು. ಇಂದಿಗೂ ಆ ಸುತ್ತಲಿನ ಪ್ರಾಂತದ ಜನ ಆಕೆಯನ್ನು ದೇವರೆಂದೇ ಭಾವಿಸಿ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಆಕೆಯ ಇಷ್ಟದೈವ ರಂಗನಾಥ ಸ್ವಾಮಿಯ ದೇವಾಲಯದ ಆವರಣದಲ್ಲೇ ಭಕ್ತರು ಗಿರಿಯಮ್ಮನ ಗುಡಿಯೊಂದನ್ನು ಕಟ್ಟಿ, ಅವಳ ಮೂರ್ತಿಯನ್ನು ಸ್ಥಾಪಿಸಿ ಪೂಜಿಸುತ್ತಿರುವುದು ಅವಳ ಹಿರಿಮೆಗೂ ಜನಪ್ರಿಯತೆಗೂ ಸಾಕ್ಷಿಯಾಗಿದೆ.

ಗಿರಿಯಮ್ಮಳು 'ಚಂದ್ರಹಾಸನ ಕಥೆ', 'ಉದ್ದಾಳೀಕರನ ಕಥೆ', 'ಬ್ರಹ್ಮಕೊರವಂಜಿ', 'ಲವಕುಶರ ಕಾಳಗ', 'ಶಂಕರಗಂಡನ ಹಾಡು' ಮತ್ತು 'ಕೃಷ್ಣಕೊರವಂಜಿ' ಎಂಬ ಕಥನ ಕಾವ್ಯಗಳನ್ನು ರಚಿಸಿದ್ದಾಳೆ. 'ಸೀತಾಕಲ್ಯಾಣ' ಮದುವೆಯ ಸಮಾರಂಭಗಳಲ್ಲಿ ಹೆಣ್ಣು ಮಕ್ಕಳು ಹಾಡುವ ಉರುಟಣೆ ಹಾಡುಗಳ ಸಂಗ್ರಹ, ಇವಲ್ಲದೆ 'ಹೆಳವನಕಟ್ಟೆ ರಂಗ' ಎಂಬ ಅಂಕಿತದಿಂದ ಗಿರಿಯಮ್ಮ ಅನೇಕ ಕೀರ್ತನೆಗಳನ್ನು ರಚಿಸಿದ್ದಾಳೆ. ಅವು ಸಾಂಸ್ಕೃತಿಕ ಅನನ್ಯತೆಯಿಂದ ಕೂಡಿವೆ.

**ಅಡಿಟಿಪ್ಪಣಿಗಳು**

೦೧. ಬಿ.ರಾಜಶೇಖರಪ್ಪ, ಇತಿಹಾಸ ಸಂಕಥನ, ೨೦೦೧, ಪು.೧೮೭

೦೨. ಜಿ.ಎಸ್.ಶಿವರುದ್ರಪ್ಪ, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂ.೫, ಪು.೧೭೪

೦೩. ಟಿ.ಕೆ. ಇಂದುಬಾಯಿ, ಹೆಳವನಕಟ್ಟೆ ಗಿರಿಯಮ್ಮನ ಹಾಡುಗಳು, ೧೯೮೭, ಪು.XIV

೦೪. ಕಮದಾನಿ ಗುರುರಾಯರು, ಹರಿದಾಸರ ಕಥೆಗಳು, ಪು.೧೬೬

೦೫. ಟಿ.ವಿ. ವೆಂಕಟಾಚಲಶಾಸ್ತ್ರೀ, ಕನ್ನಡದ ಕಬ್ಬಗಿತಿಯರು, ದೇವಗಂಗೆ, ಪು.೨೩೯

೦೬. ಜಯಸಿಂಹ, ಹೆಳವನಕಟ್ಟೆ ಗಿರಿಯಮ್ಮ, ಪು.೬

೦೭. ಡಾ. ಸರೋಜಿನಿ ಮಹಿಷಿ, ಕರ್ನಾಟಕ ಕವಯಿತ್ರಿಯರು, ೧೯೬೫, ಪು.೨೯೦

೦೮. ಬೇಲೂರು ಕೇಶವದಾಸರು, ಶ್ರೀ ಕರ್ನಾಟಕ ಭಕ್ತ ವಿಜಯ, ೨೦೦೦, ಪು.೨೯೦

೦೯. ಡಾ. ಸರೋಜಿನಿ ಮಹಿಷಿ, ಕರ್ನಾಟಕ ಕವಯಿತ್ರಿಯರು, ೧೯೫೭, ಪು.೨೫೨-೨೫೩

೧೦. ಅದೇ, ಪು.೨೫೩

೧೧. ವಿವರಗಳಿಗೆ ನೋಡಿ ಕರ್ನಾಟಕ ಕವಯಿತ್ರಿಯರು, ೧೯೬೫, ಪು.೨೫೩-೨೫೮

೧೨. ಟಿ.ಕೆ.ಇಂದುಬಾಯಿ, ಹೆಳವನಕಟ್ಟೆ ಗಿರಿಯಮ್ಮನ ಹಾಡುಗಳು, ೧೯೮೭, ಪು.xviii

೧೩. ಎನ್.ಬಸವರಾದ್ಯ, ಚಂದ್ರಹಾಸನ ಕಥೆ, ಪು.xxi

೧೪. ಬೇಲೂರು ಕೇಶವದಾಸ, ಶ್ರೀ ಕರ್ನಾಟಕ ಭಕ್ತ ವಿಜಯ, ೨೦೦೦, ಪು.೩೦೮

## ಅಧ್ಯಾಯ ೪

# ಗಿರಿಯಮ್ಮನ ಕೀರ್ತನೆಗಳ ವಿವೇಚನೆ

೪

# ಗಿರಿಯಮ್ಮನ ಕೀರ್ತನೆಗಳ ವಿವೇಚನೆ

ಹೆಳವನಕಟ್ಟೆ ಗಿರಿಯಮ್ಮ ತನ್ನ ಹಿಂದಿನ ಹರಿದಾಸ ಪರಂಪರೆಯಂತೆ ಕೀರ್ತನೆಗಳನ್ನು ರಚಿಸಿದ್ದಾಳೆ. ಗಿರಿಯಮ್ಮ ಭಕ್ತಿಯಿಂದ ರಚಿಸಿದ ಹಾಡುಗಳು ಬಹಳ ಇರಬಹುದಾದರೂ ಗಾತ್ರನುಗುಣವಾಗಿ ಸಣ್ಣ ಹಾಡುಗಳು ಮತ್ತು ದೊಡ್ಡ ಹಾಡುಗಳೆಂದು ವಿಂಗಡಿಸಬಹುದು. ನಮಗೆ ೫೩ ಸಣ್ಣ ಹಾಡುಗಳನ್ನು (ಕೀರ್ತನೆ) 'ಹೆಳವನಕಟ್ಟೆ ರಂಗ' ಎಂಬ ಅಂಕಿತದಲ್ಲಿ ರಚಿಸಿದ್ದಾಳೆಂದು ತಿಳಿದುಬರುತ್ತದೆ. ದೊರೆತಿರುವ ೫೩ ಹಾಡುಗಳಲ್ಲಿ ಒಂದೇ ಒಂದು ಉಗಾಭೋಗವಿದ್ದು ಉಳಿದವು ಕೀರ್ತನೆಗಳನ್ನು ಹೋಲುವ ರಚನೆಗಳಾಗಿವೆ. ಸುಳಾದಿಗಳು ಒಂದೂ ರಚಿಸಿಲ್ಲ. ಈ ಹಾಡುಗಳಲ್ಲಿ ಉಳಿದ ಹರಿದಾಸರ ಹಾಡುಗಳಲ್ಲಿರುವಂತೆಯೇ ಸಾಮಾನ್ಯವಾಗಿ ಪಲ್ಲವಿ, ಅನುಪಲ್ಲವಿ ನುಡಿಗಳಿರುತ್ತವೆ. ಒಂದೆರಡರಲ್ಲಿ ಪಲ್ಲವಿ ಇಲ್ಲದಿರುವುದು ನುಡಿಗಳ ಸಂಖ್ಯೆ ೩ ರಿಂದ ೧೮ರವರೆಗೆ ವಿಸ್ತಾರವಾಗಿರುವುದು ಕಂಡುಬರುತ್ತದೆ.

ಗಿರಿಯಮ್ಮನ ಹಾಡುಗಳು ಬಹುಪಾಲು ದೇವ ದೇವತೆಯರ ಸ್ತುತಿ ಗೀತೆಗಳು ಇಲ್ಲವೆ ಭಕ್ತ ಹೃದಯದ ಆರ್ತ ಮೊರೆಯನ್ನು ಅವಳ ಕೀರ್ತನೆಗಳು ಒಳಗೊಂಡಿವೆ. ಸಹಜವಾದ ಭಾಷೆಯಲ್ಲಿ ನಿರರ್ಗಳವಾಗಿ ಹಾಡಿದ್ದಾಳೆ. ಆಕೆಯ ಅನೇಕ ಹಾಡುಗಳ ಒಂದು ವಿಶೇಷತೆಯೆಂದರೆ ಅವೆಲ್ಲಕ್ಕೂ ಹಿನ್ನೆಲೆಯಾಗಿ ಒಂದೊಂದು ಘಟನೆಗಳು ಹೇಳುವುದು ಅನೇಕ ಸಂದರ್ಭಗಳಲ್ಲಿ ಈ ಘಟನೆಗಳು ಪವಾಡಗಳಾಗಿರುವುದು ಕಂಡುಬರುತ್ತದೆ.

ಭಕ್ತೆ ಗಿರಿಯಮ್ಮನ ಎಲ್ಲಾ ಹಾಡುಗಳ ಪ್ರೇರಕ ಶಕ್ತಿ ನೇರ ಅಭಿವ್ಯಕ್ತಿಯ ಜೊತೆಗೆ ಹರಿಭಕ್ತಿ ಮಹಿಮೆಯನ್ನು ಕಥನ ಕಾವ್ಯಗಳ ಮೂಲಕ ಹೇಳಿದ್ದಾಳೆ. ಗಿರಿಯಮ್ಮನ ಹಾಡುಗಳಲ್ಲಿ ಭಕ್ತಳೊಬ್ಬಳ ಸಾಮಾನ್ಯ ಸಹಜೋಕ್ತಿಗಳ ಅಂತರಂಗ ನಿವೇದನೆಯನ್ನು ಗುರುತಿಸಬಹುದು.

ಮಹಿಳಾ ಹರಿದಾಸ ಸಾಹಿತ್ಯದ ವೈಶಿಷ್ಟ್ಯತೆಗಳಲ್ಲೊಂದಾದ ಸುದೀರ್ಘ ಹಾಡುಗಳನ್ನು ಗಿರಿಯಮ್ಮ ರಚಿಸಿದ್ದಾಳೆ. ಯಾವುದಾದರೊಂದು ಪುರಾಣದ ಕತೆ, ವ್ರತ ಕತೆಯನ್ನು ಆಯ್ದುಕೊಂಡು ಅದನ್ನು ದೀರ್ಘ ಕಥನ ಕವನ ಶೈಲಿಯಲ್ಲಿ ಹೇಳಿದ್ದಾಳೆ. ಸಾಮಾನ್ಯವಾಗಿ ಹರಿದಾಸ ಸಾಹಿತ್ಯಕ್ಕೆ ಪ್ರೇರಣೆಯಾದ ರಾಮಾಯಣ, ಮಹಾಭಾರತ, ಭಾಗವತಗಳೇ ಗಿರಿಯಮ್ಮನ ಕೃತಿಗಳ ಮೂಲ ಆಕರಗಳಾಗಿವೆ. ಇನ್ನು ಕೆಲವು ಹಾಡುಗಳನ್ನು ಕೆಲವು ಪುರಾಣಗಳ ಪ್ರಸಂಗಗಳನ್ನು ಆರಿಸಿಕೊಂಡು ಹಾಡುಗಳನ್ನು ಹೆಣೆದಿದ್ದಾಳೆ.

ಪುರಂದರದಾಸರಂತೆ ಗಿರಿಯಮ್ಮನ ಕೃತಿಗಳಲ್ಲಿ ಮೈದುಂಬಿಕೊಂಡಿರುವುದು ವೈಷ್ಣವ ಭಕ್ತಿ ಹೀಗೆ ವಿಷ್ಣು ಭಕ್ತಿಯನ್ನು ಸಾರುವ ಅನೇಕ ಹಾಡುಗಳನ್ನು ರಚಿಸಿದ್ದಾಳೆ.

ಮುಂದಿನ ಅಧ್ಯಾಯದಲ್ಲಿ ಗಿರಿಯಮ್ಮನ ಕೃತಿಗಳನ್ನು ವಿಭಿನ್ನ ದೃಷ್ಟಿಕೋನಗಳಿಂದ ಅಧ್ಯಯನ ಮಾಡಲಾಗಿದೆ. ನಾನು ''ಹೆಳವನಕಟ್ಟೆ ಗಿರಿಯಮ್ಮನ ಕೀರ್ತನೆಗಳು' ಎಂಬ ಕೃತಿಯನ್ನು ಪ್ರಮುಖ ಆಕರ ಕೃತಿಯನ್ನಾಗಿಸಿಕೊಂಡು ಅಧ್ಯಯನ ಕೈಗೊಂಡಿದ್ದೇನೆ. ಗಿರಿಯಮ್ಮನ ಹಿರಿಮೆ, ಮಹಿಮೆಗಳಿಂದ ನಡೆದುವೆಂದು ಹೇಳುವ ಅನೇಕ ಪವಾಡಗಳ ಸಂದರ್ಭಗಳನ್ನು ಹಿನ್ನೆಲೆಯಾಗಿ ಉಳ್ಳ ಹಲವು ಕೀರ್ತನೆಗಳು ದೊರೆತಿವೆ. ಗಿರಿಯಮ್ಮನ ಹಾಡುಗಳಲ್ಲೆಲ್ಲ ಅತಿ ಮಹತ್ವಪೂರ್ಣವಾದುದೆಂದರೆ ಆ ಪ್ರಾಂತ್ಯದಲ್ಲಿ ಬರಗಾಲ ಬಂದ ಸಂದರ್ಭದಲ್ಲಿ ತನ್ನ ಭಕ್ತಿಯ ಬಲದಿಂದ ಅನೇಕ ಪವಾಡಗಳೂ ನಡೆದುವು ಎಂಬುದಕ್ಕೆ ಉಲ್ಲೇಖಿತವಾಗಿವೆ. ಮಳೆಯಿಲ್ಲದೆ ಜನ ಕಂಗಲಾದಾಗ ಗಿರಿಯಮ್ಮಳು ತನ್ನ ಆರಾಧ್ಯ ದೈವವಾದ ರಂಗನಾಥನನ್ನು ಪ್ರಾರ್ಥಿಸಿ ಮಳೆ ತರಿಸಿ, ಜನರನ್ನು ಕಾಪಾಡಿದಳು ಎಂಬುದಕ್ಕೆ ಉದಾಹರಣೆ

ಮಳೆಯ ದಯ ಮಾಡೊ ರಂಗಯ್ಯ ನಿಮ್ಮ
ಕರುಣ ತಪ್ಪಿದರೆ ಉಳಿಯದೀ ಲೋಕ ||ಪ||

ಪಶುಜಾತಿ ಹುಲ್ಲೆ ಸಾರಂಗ ಮೃಗಗಳು ಬಹಳ
ಹಸಿದು ಬಾಯಾರಿ ಬತ್ತಿದ ಕೆರೆಗೆ ಬಂದು
ತೃಷೆ ಯಡಗದೆ ತಲ್ಲಣಿಸಿ ಮೂರ್ಛೆಗೊಂಡು
ದೆಸೆ ದೆಸೆಗೆ ಬಾಯಿ ಬಿಡುತಿಹವಯ್ಯ ಹರಿಯೆ ||೧||

ಧಗೆಯಾಗಿ ದ್ರವಗುಂದಿ ಇದುವ ಬಾವಿಯ ನೀರ
ಮೊಗೆ ಮೊಗೆದು ಪಾತ್ರೆಯಲಿ ನಾರಿಯರು
ಹಗಲೆಲ್ಲ ತರುತಿಹರು ಯೋಚನೆಯ ಮಾಡುತ್ತ
ಬೇಗದಿಂದಲಿ ತರಿಸೊ ವೃಷ್ಟಿಯನು ಹರಿಯೆ ||೨||

ಸಂದು ಹೋದವು ಜ್ಯೇಷ್ಠ ಆಷಾಢ ಶ್ರಾವಣ
ಬಂದಿದೆ ಭಾದ್ರಪದ ಮಾಸವೀಗ
ಇಂದು ಪುರಂದರಗೆ ಹೇಳಿ ವೃಷ್ಟಿಯ ತರಿಸೊ
ಸಂದೇಹ ವಿನ್ನಾಕೆ ಹೆಳವನಕಟ್ಟೆ ರಂಗ[7] ||೩||

ಪ್ರಸ್ತುತ ಕೀರ್ತನೆಯಲ್ಲಿ ಕಂಡುಬರುವ ನೇರವಾದ ನಿರೂಪಣೆ ತುಂಬ ಶ್ಲಾಘನೀಯವಾಗಿದೆ. ಒಂದೊಂದು ನುಡಿಯಲ್ಲಿಯೂ ಜಲಕ್ಷಾಮದ (ಬರಗಾಲ) ಬೇಗೆ ಎಂತಹುದೆನ್ನುವುದನ್ನು ಸ್ವಾಭಾವಿಕವಾಗಿ ಚಿತ್ರಿತವಾಗಿದೆ. ಮೂಕ ಪ್ರಾಣಿಗಳ ನೀರಿಗಾಗಿ ಪರದಾಟ ಬತ್ತಿದ ಬಾವಿಯಿಂದ ಹೆಂಗಸರು ನೀರನ್ನು

ಮೊಗೆಯುವುದು ಮಳೆಗಾಲ ಕಳೆದರೂ ಜನರಿಗೆ ಅನಾವೃಷ್ಟಿಯಿಂದ ಬಿಡುಗಡೆಯಾಗದಿರುವುದು ಮೊದಲಾದವು ಕಣ್ಣಿಗೆ ಕಟ್ಟಿದಂತೆ ಚಿತ್ರಿತವಾಗಿದೆ.

ಹೆಳವನಕಟ್ಟೆಯ ರಂಗನಾಥ ದೇವರ ಉತ್ಸವ ಕಾಲದಲ್ಲಿ ಅರ್ಚಕರು ದೇವರಿಗೆ ಅಲಂಕಾರ ಮಾಡಿ ಕೈಯಲ್ಲಿ ರತ್ನದುಂಗುರವನ್ನಿಟ್ಟು ಬಾಗಿಲಿಗೆ ಮೊಹರು ಮಾಡಿ ಮನೆಗೆ ಹೋಗಿದ್ದರು. ಬೆಳಿಗ್ಗೆ ಎದ್ದು ಬಂದು ನೋಡುವಷ್ಟರಲ್ಲಿ ಉಂಗುರ ಮಾಯವಾಗಿತ್ತು. ಅರ್ಚಕನಿಗೆ ದಿಗಿಲುಂಟಾಗಿ ಇದ್ದ ಮೊಹರು ಇದ್ದಂತೆಯೇ ಇತ್ತು. ಕಳುವಿನ ಆರೋಪ ತನ್ನ ಮೇಲೆ ಬರುವುದೆಂದು ಅರ್ಚಕನಿಗೆ ಗಾಬರಿ ಅಷ್ಟರಲ್ಲಿಯೇ ಗಿರಿಯಮ್ಮ ದೇವಾಲಯಕ್ಕೆ ಬಂದಳು ಅರ್ಚಕ ಗಾಬರಿಯಾಗಿ ಆಕೆಯ ಪಾದಕ್ಕೆರಗಿ ವಿಷಯವನ್ನೆಲ್ಲ ಹೇಳಿದನು ಗಿರಿಯಮ್ಮನು ದೇವರ ಲೀಲೆಗೆ ಮುಗುಳ್ನಕ್ಕಳು.

ಹೊನ್ನು ತಾ ಗುಬ್ಬಿ ಹೊನ್ನು ತಾ
ಚೆನ್ನ ಗೋಪಾಲ ಚೆಲುವ ಕೃಷ್ಣನ ಕೈಗೆ ||ಪ||
ಆಗಮವನು ತಂದು ಅಜಗಿತ್ತ ಕೈಗೆ
ಸಾಗರವನೊತ್ತಿಕ್ಕಿ ಸುಧೆಯಿತ್ತ ಕೈಗೆ
ತೂಗಿ ನಡೆದ ಸ್ಥೂಲಕಾಯನ ಕೈಗೆ
ನಾಗಶಯನ ನರಸಿಂಹನ ಕೈಗೆ[೨] ||೧||
.............
.............

ಕೀರ್ತನೆ ಮುಗಿಯುವಷ್ಟರಲ್ಲಿಯೇ ಗುಬ್ಬಿ ಬಾಯಲ್ಲಿ ಕಚ್ಚಿ ತಂದು ಉಂಗುರವನ್ನು ಚೆಲ್ಲಿ ಹೋಯಿತು. ಎಲ್ಲರಿಗೂ ಆನಂದ, ಆಶ್ಚರ್ಯಯುಂಟಾಗಿ ಗಿರಿಯಮ್ಮನನ್ನು ಆಧರಿಸಿ, ಗೌರವಿಸಿದರು. ಹಾಗೆಯೇ ಪುಂಗನೂರಿನ ರಾಜಕುಮಾರನಿಗೆ ಕಣ್ಣು ಕೊಟ್ಟ ಸಂಗತಿಯು ಈ ಹಾಡಿನಲ್ಲಿ ಪವಾಡದ ರೂಪದಲ್ಲಿ ಮೂಡಿಬಂದಿರುವುದನ್ನು ಕಾಣಬಹುದು.

ತೋರ ಬಾರದೆ ನಿಮ್ಮ ಚರಿತೆಯನು
ನರರೊಳು ನಗೆಗೇಡು ಮಾಡದ ಹಾಗೆ ||ಪ||

ಕಲ್ಲೊಳು ಕಾಂತೆಯ ಮಾಡಿದವನೆಂ
ದೆಲ್ಲರು ಜಗದೊಳು ಪೇಳುವರು
ಅಲ್ಲಿ ಮಾಡಿದ ಹಾಗೆ ಇಲ್ಲಿ ತೋರಿಸಿದರೆ
ಬಲ್ಲಿದನೆನ್ನೊಡೆಯ ದೊಡ್ಡವನೆಂದು ಸಾರುವೆ ||೧||

ಅಹಹ ಕುಬುಜೆಯಳ ತನುವನ್ನೆತ್ತಿ
ಮಹಿಯೊಳು ಯುವತಿಯ ಮಾಡಿದೆಯೆಂಬರು

ಬಹುಪರಾಕ್ರಮವನ್ನು ಈಗ ತೋರಿಸಿದರೆ
ಅಹುದೋ ಎನ್ನೊಡೆಯ ದೊಡ್ಡವನೆಂದು ಸಾರುವೆ ||೨||

ನೀನೆ ಗತಿಯೆಂದು ಬಂದಭಕ್ತನ ಕ
ಣ್ಣುನವ ತಿದ್ದಿ ನಿಜವ ತೋರಿಸಯ್ಯ
ದೀನದಯಾಳು ಹೆಳವನಕಟ್ಟೆ ರಂಗಯ್ಯ
ದಾನಿ ಎನ್ನೊಡೆಯ ದೊಡ್ಡವನೆಂದು ಹೊಗಳುವೆ[೩] ||೩||

ಗಿರಿಯಮ್ಮ ತನ್ನ ಕೀರ್ತನೆಗಳಲ್ಲಿ ವಿಶೇಷವಾಗಿ ಹರಿಹರರಲ್ಲಿ ಭೇದವನ್ನೆಣಿಸದ ಸದ್ಭಕ್ತೆಯಾಗಿ ತನ್ನ ಆರಾಧ್ಯ ದೈವ ಹೆಳವನಕಟ್ಟೆ ರಂಗನಾಥ ಹಾಗೂ ತಾಯಿಯ ಮನೆಯ, ಮನೆದೇವರಾದ ಮೈಲಾರಲಿಂಗನನ್ನು ಹಾಡಿಕೊಂಡಾಡಿದ್ದಾಳೆ.

ಈತ ರಂಗನಾದ ಹರಿಯು ಆತ ಲಿಂಗನಾದ ಹರನು ||ಪ||

ಗಿರಿಜಾ ಪತಿಯಾದ ನಾತ ಗಿರಿಯ
ಗಿರಿಯ ಬೆನ್ನಲಿ ತಾಳಿದ ನೀತ
ಸ್ಮರನ ಮಡುಹಿದಾತ ನಾತ
ಸ್ಮರನ ಜನಕನಾದ ನೀತ ||೧||

ಶೇಷ ಭೂಷಣನಾದ ನಾತ
ಶೇಷ ಶಾಯಿಯಾದ ನೀತ
ಪೋಷಿಪ ಭಕ್ತರ ನಾತ
ದೋಷ ದೂರದಾದ ನೀತ ||೨||

ಕಂಗಳು ಮೂರುಳ್ಳವನಾತ
ಮಂಗಳ ದೇವೇಶನೀತ
ತುಂಗ ಹೆಳವನಕಟ್ಟೆ
ರಂಗನೀತ ಲಿಂಗನಾತ[೪] ||೩||

ಹರಿದಾಸ ಸಾಹಿತ್ಯದ ಸೃಷ್ಟಿಗೆ ಶ್ರೀ ಮಧ್ವಾಚಾರ್ಯರು ಪ್ರೇರಕ ಶಕ್ತಿಯಾದರೆ, ಶ್ರೀ ನರಹರಿ ತೀರ್ಥರು ಕನ್ನಡ ಕೀರ್ತನೆ ರಚಿಸಿ ಹರಿದಾಸರಿಗೆ ಮಾರ್ಗದರ್ಶಿಗಳಾಗಿದ್ದಾರೆ. ಶ್ರೀ ಪಾದರಾಜರು ವ್ಯಾಸರಾಯರು, ಪುರಂದರದಾಸರು, ಕನಕದಾಸರು ಮುಂತಾದವರು ದಾಸ ಸಾಹಿತ್ಯದ ಹುಟ್ಟು, ಬೆಳವಣಿಗೆ, ವಿಕಾಸ ವೈಭವಗಳಲ್ಲಿ ವಿಶೇಷವಾಗಿ ಶ್ರಮಿಸಿದರು. ಇವರಲ್ಲದೆ ಇನ್ನೂ ಅನೇಕ ಹರಿದಾಸರು

ದಾಸ ಸಾಹಿತ್ಯದ ಸೃಷ್ಟಿಗೆ ಕಾರಣರಾಗಿದ್ದಾರೆ. ಹರಿದಾಸರು ಮುಖ್ಯವಾಗಿ ಮಧ್ವಮತವನ್ನು ಪ್ರಚಾರ ಮಾಡಿ "ಮಧ್ವ ಮತ ಸಿದ್ಧಾಂತದ ಪದ್ಧತಿ ಬಿಡಬೇಡ" ಮತದೊಳಗೆ ಒಳ್ಳೆ ಮತ ಮಧ್ವಮತವೂ ಎಂದು ಮುಂತಾಗಿ ಹೇಳಿದರೂ ಹರಿಯೇ ಸರ್ವೋತ್ತಮ, ಹರಿಯೇ ಪರದೇವತೆ, ಹರಿಯಲ್ಲದನ್ಯತ್ರ ದೈವಗಳುಂಟೇ? ಎಂದು ಮುಂತಾಗಿ ಪದೇ ಪದೇ ಕೇಳೀದ್ದರೂ ಅವರು ಇತರ ಮತಗಳನ್ನೂ ಇತರ ದೇವತೆಗಳನ್ನೂ ಖಂಡಿಸಿಲ್ಲ. ಅದ್ವೈತಿಗಳ ತಾತ್ವಿಕ ನಿಲುವು ಅವರಿಗೆ ಸಮ್ಮತವಲ್ಲದಿದ್ದರೂ ಅವರು ಹರಿಹರರಲ್ಲಿ ಭೇದವೆಣಿಸಿಲ್ಲ. ಮಧ್ವಮತದ ತತ್ತ್ವದ ತಾರತಮ್ಯ ಸರಣಿಗೆ ಅನುಸಾರವಾಗಿ ಶಿವನಿಗೂ ಒಂದು ವಿಶೇಷವಾದ ಸ್ಥಾನವನ್ನು ನೀಡಿ ಆತನು ಪ್ರೇರಣಾತ್ಮಕನೆಂದು ಪೂಜ್ಯ ಭಾವನೆಯಿಂದ ಹರಿದಾಸರೆಲ್ಲರೂ ಶಿವನನ್ನು ಭಕ್ತಿಯಿಂದ ಸ್ತುತಿಸಿ ಕೊಂಡಾಡಿದ್ದಾರೆ. ಶ್ರೀ ವಾದಿರಾಜರ ಹರನ ಕೀರ್ತನೆ ಹಾಗೂ ಶ್ರೀ ಪುರಂದರದಾಸರು ಮತ್ತು ಕನಕದಾಸರ ಶಿವಸ್ತುತಿಗಳು ಬಹು ಸುಂದರವಾಗಿದ್ದು, ಹರಿದಾಸರ ಔದಾರ್ಯಕ್ಕೂ ಹರಿ-ಹರರ ಸಮನ್ವಯ ಭಾವಕ್ಕೂ ಒಳ್ಳೆಯ ಉದಾಹರಣೆಗಳಾಗಿವೆ.

ಹರಿಯಧಿಕ ಹರನಧಿಕನೆಂದು ಒಡೆದಾಡದಿರಿ ಎಂದು ಎಚ್ಚರಿಸಿ "ಹರಿ ಹರರು ಸಮರೆಂದು ಅರಿಯದ ಜ್ಞಾನಿಗಳು ಹರನ ಹೃದಯದೊಳಿರುವ ಹರಿಯು ತಾವರಿಯರು" ಎಂಬುದಾಗಿ ಹೇಳಿ "ಶಿವಸ್ಯ ಹೃದಯೇ ವಿಷ್ಣುಃ ವಿಷ್ಣೋಶ್ಚ ಹೃದಯೇ ಶಿವಃ" ಎಂಬುದನ್ನು ಮತ್ತೊಮ್ಮೆ ಪ್ರತಿಪಾದಿಸಿದ್ದಾರೆ.

ಕನಕದಾಸರು ಆರು ಬಲ್ಲರು ಹರಿಹರಾದಿಗಳ ಮಹಿಮೆಯನ ಎಂಬ ಕೀರ್ತನೆಯಲ್ಲಿ ಹರಿ ಹರರ ಸಮಾನತೆಯನ್ನು ಎತ್ತಿ ಹೇಳಿದ್ದಾರೆ. ಅಷ್ಟೇ ಅಲ್ಲದೆ 'ಮೋಹನ ತರಂಗಿಣಿ'ಯಲ್ಲಿ ಕೇಳವನೆಡೆಗೆನ್ನೆಡೆಗಾವ ನೋರ್ವನು ದ್ವೇಷ ಬುದ್ಧಿಯ ಮಾಡಿದರು ದೋಷ ಸಂಭವಿಸುವುದೆಂದು ಶಿವನಿಂದ ಬಾಣಾಸುರನಿಗೆ ಹೇಳಿಸಿದ್ದಾರೆ. ಇದು ಅವರ ಸಮನ್ವಯ ದೃಷ್ಟಿಗೆ ನಿದರ್ಶನವಾಗಿದೆ. ತಾವು ಹರಿದಾಸರಾಗಿದ್ದರೂ ದಾಸನಾಗಬೇಕು. ಸದಾಶಿವನ ದಾಸನಾಗಬೇಕು ಎಂದು ಹಾಡಿದ ಮಹಾಮಹಿಮರು ಅವರು ಮನದ ಕಲ್ಮಷ ಕಳೆದು ಮಹೇಶನ ಮಹಿಮೆಗಳನ್ನು ಇನಿತು ತಿಳಿದು ಈ ಜಗವೆಲ್ಲ ಈಶ್ವರ ಮಯವೆಂದು ಘನವಾದ ಮೋಹದ ಗಡಿಯನು ದಾಟುತ ದಾಸನಾಗಬೇಕು ಸದಾಶಿವನ ದಾಸನಾಗಬೇಕು ಎಂದು ಸಾರಿದ್ದಾರೆ. ಹರಿ ಸರ್ವೋತ್ತಮ ಎಂದು ಹೇಳಿದ ಹರಿದಾಸರು ಈ ಜಗವೆಲ್ಲ ಈಶ್ವರ ಮಯವೆಂದು ನುಡಿದಿರುವುದನ್ನು ಕಂಡಾಗ ದಾಸರ ಹೃದಯ ವೈಶಾಲ್ಯದ ಅರಿವಾಗುತ್ತದೆ.

ಹೆಳವನಕಟ್ಟೆ ಗಿರಿಯಮ್ಮನ ಇನ್ನೊಂದು ಕೀರ್ತನೆಯಲ್ಲಿ ಹರಿಹರ ಕ್ಷೇತ್ರದ ಸಮೀಪದಲ್ಲಿ ಬದುಕಿ ಬಾಳಿದ ಆಕೆಗೆ ಹರಿಹರರಲ್ಲಿ ಭೇದವಿಲ್ಲದೆ ಎಷ್ಟು ನೈಜವಾದುದೆನ್ನುವುದಕ್ಕೆ ಶಿವ ಮತ್ತು ವಿಷ್ಣುವಿನ ಸ್ತುತಿ ಮಾಡಿರುವುದನ್ನು ಈ ಕೀರ್ತನೆಯಲ್ಲಿ ಕಾಣಬಹುದಾಗಿದೆ.

ಈತ ಲಿಂಗದೇವ ಶಿವನು
ಆತ ರಂಗಧಾಮ ವಿಷ್ಣು

ಮಾತ ಕೇಳೊ ಮಂಕು ಮನಜ
ಮನದ ಅಹಂಕಾರ ಬಿಟ್ಟು
ವೇದಕ್ಕೆ ಸಿಕ್ಕಿದ ನೀತ
ವೇದ ನಾಲ್ಕು ತಂದನಾತ
ಬೂದಿ ಮೈಯೊಳು ಧರಿಸಿದನೀತ
ಪೋದ ಗಿರಿಯ ಪೊತ್ತನಾತ
ವ್ಯಾದನಾಗಿ ಒಲಿದನೀತ
ಮಾಧವ ವಧುಸೂದನನಾತ
ಮದನನ್ನ ಉರಿಹಿದನೀತ
ಮದನನ ಪಡೆದಾತನಾತ
ಗಂಗೆಯ ಪೊತ್ತವ ನೀತ
ಗಂಗೆ ಪದವಿ ಪಡೆದನಾತ
ತುಂಗ ಹೆಳವನಕಟ್ಟೆ
ಲಿಂಗ ಅಂತರಂಗ ರಂಗನಾಥ"

'ರಂಗ' 'ಲಿಂಗ' ಒಬ್ಬನೇ ಭಗವಂತನ ರೂಪಗಳು ಎನ್ನುವ ಗಿರಿಯಮ್ಮನವರು ಹರಿ-ಹರ ಸಾಮರಸ್ಯವನ್ನು ಕುರಿತು ಹೇಳುವ ಮೂಲಕ ಸಾಮಾಜಿಕ ಸಾಮರಸ್ಯದ ವಿಚಾರ ಈ ಕೀರ್ತನೆಯಲ್ಲಿ ಮೂಡಿಬಂದಿದೆ.

ಭಗವಂತ ಪರಿಪೂರ್ಣ ನಾನು ಅಪರಿಪೂರ್ಣ ಪರಮಾತ್ಮನಿಗಿಂತ ನಾನು ಬೇರೆ ಭಿನ್ನ ಸಮ ಅಲ್ಲ ಎಂದು ತಿಳಿದಾಗಲೇ ಭಕ್ತ-ಭಕ್ತಿ ಎರಡೂ ಹುಟ್ಟಿಕೊಂಡವು. ವಿಭಕ್ತನಾದವನೇ ಭಕ್ತ ಇದು ದ್ವೈತ ಭಾವನೆ ಆರ್ತನಾದ ಭಕ್ತ ಈಶ್ವರನಲ್ಲಿ ದಾಸಭಾವ ತೋರುವುದೇ ದಾಸತ್ವ 'ಶ್ರೀಮನ್ ಮಧ್ವಮತೇ ಹರಿಃ ಪರತರಃ' ಎನ್ನುವ ಮಧ್ವಾಚಾರ್ಯರ ದ್ವೈತ ಸಿದ್ಧಾಂತದ ಪ್ರತಿಪಾದನೆ ಪ್ರಚಾರಕ್ಕೆ ತೊಡಗಿದರೂ ಹರಿದಾಸರು ಎಲ್ಲಿಯೂ ತಮ್ಮ ಸಾಹಿತ್ಯದಲ್ಲಿ ಹರನಿಗೆ ಅಗೌರವ ತೋರಿಸಿಲ್ಲ ಎಂಬುದು ಪ್ರಮುಖವಾಗಿ ವಿಚಾರ ಮಾಡಬೇಕಾದ ಅಂಶ. ನಿಜವಾದ ಜ್ಞಾನಿಗೆ ಉಚ್ಚ-ನೀಚದ ಕಲ್ಪನೆಯೇ ಇರದೆ 'ಭಕ್ತಿ' ಪ್ರಧಾನವಾದ ಸಾಧನೆಯ ಮಾರ್ಗವಾಗಿ ಬೆಳೆದುಬಂದಿದೆ. ಹೀಗೆ ಹರಿದಾಸರಿಗೆ ಸ್ವಮತಾಸಕ್ತಿಯನ್ನು ಎಷ್ಟೇ ಹೊಂದಿದ್ದ ಅನ್ಯ ಮತಗಳ ಜೊತೆಗೆ ಸಮನ್ವಯವನ್ನು ಸಾಧಿಸಿ ವಿಶಾಲ ಧಾರ್ಮಿಕ ದೃಷ್ಟಿಯನ್ನು ಬೆಳೆಸಿ ಕೊಂಡಿರುವುದರಿಂದ ಢಾಂಬಿಕ ಮತಾಚಾರಗಳನ್ನು ಖಂಡಿಸುವಲ್ಲಿ ಮತ್ತು ಅಷ್ಟೇ ತೀಕ್ಷ್ಣವಾಗಿ ತಿರಸ್ಕರಿಸಿರುವರು. ಮತವನ್ನು ಮೀರಿದ ನೀತಿ ಧರ್ಮ ಮೌಲ್ಯಗಳನ್ನು ಹರಿದಾಸರು ಚೆನ್ನಾಗಿ ಅರಿತಿದ್ದರು. ಆದ್ದರಿಂದಲೇ ದಾಸ ಸಾಹಿತ್ಯವು ಸರ್ವಮಾನ್ಯತೆಯನ್ನು ಪಡೆದುಕೊಳ್ಳಲು ಸಾಧ್ಯವಾಯಿತು.

ವಸ್ತು

ರಾಮಾಯಣ ಮಹಾಭಾರತ ಹಾಗೂ ಭಾಗವತ ಈ ಪುರಾಣತ್ರಯಗಳು ಹರಿದಾಸ ಸಾಹಿತ್ಯಕ್ಕೆ ಆಧಾರಗ್ರಂಥಗಳಾಗಿವೆ. ಇವುಗಳ ಸ್ಥೂಲ ಪರಿಚಯವಿರುವ ಭಾರತೀಯರು ವಿರಳ. ಈ ದೃಷ್ಟಿಯಿಂದ ಹಾಗೂ ಕೃತಿಗಳ ಘನತೆ ಗೌರವಗಳನ್ನು ಪ್ರತ್ಯಕ್ಷವಾಗಿ ಬಲ್ಲವರಾದುದರಿಂದಲೂ ಹರಿದಾಸರು ಅವುಗಳನ್ನು ತಮ್ಮ ಭಕ್ತಿ ಮಾರ್ಗದ ಮಾಧ್ಯಮಗಳನ್ನಾಗಿ ಬಳಸಿಕೊಂಡಿದ್ದಾರೆ. ವಿಷ್ಣುವಿನ ಅವತಾರಗಳನ್ನು ಹಾಗೂ ಮಹಿಮೆಗಳನ್ನು ವಿಭಿನ್ನ ಶೈಲಿಯಲ್ಲಿ ಹೇಳುತ್ತಾ ಜೀವನ ಮೌಲ್ಯಗಳನ್ನು ಸಾರುವಲ್ಲಿ ಯಶಸ್ವಿಯಾದರು. ಹನುಮ, ಭೀಮ, ಮಧ್ವ ಅವತಾರತ್ರಯರಲ್ಲಿ ನಂಬಿಕೆ ಇರುವ ಹರಿದಾಸರಿಗೆ ಹನುಮಂತನ ಸಾಹಸದ ಪ್ರತೀಕವೂ ಹರಿಯ ರಾಮಾವತಾರದ ಕಥೆಯೂ ಅಗಿರುವ ರಾಮಾಯಣ ಅಂತೆಯೆ ಮಹಾಭಾರತದ ಕಥೆ ಹರಿದಾಸ ಸಾಹಿತ್ಯಕ್ಕೆ ಸಾಮಗ್ರಿಯನ್ನೊದಗಿಸಿದೆ. ಮಧ್ವಾಚಾರ್ಯರ ದ್ವಿತೀಯ ಅವತಾರವಾದ ಭೀಮನ ಶೌರ್ಯ ಪರಾಕ್ರಮಗಳ ಪ್ರತೀಕವಾಗಿರುವ ಮಹಾಭಾರತದ ಪ್ರಸಂಗಗಳು ದಾಸರಿಗೆ ಮಾನ್ಯವಾಗಿದೆ. ಇನ್ನು ಭಾಗವತವು ಶ್ರೀ ಹರಿಯ ಲೀಲಾವರ್ಣನೆಯ ಕಥೆಯಾಗಿದೆ. ಆದ್ದರಿಂದ ವಿಷ್ಣುಭಕ್ತಿಯ ಆಧಾರಗಳಾಗಿರುವ ಈ ಪುರಾಣಗಳು ಹರಿದಾಸರಿಗೆ ಅತ್ಯಂತ ಪ್ರಭಾವ ಬೀರಿ ಅವುಗಳಲ್ಲಿ ರಾಮಾಯಣದ ರಾಮನ ಆದರ್ಶಮಯ ವ್ಯಕ್ತಿತ್ವ, ಸೀತಾಳ ಪಾತಿವ್ರತ್ಯ, ಹನುಮನ ಸ್ವಾಮಿ ನಿಷ್ಠೆಯನ್ನು ತಮ್ಮ ಕೃತಿಗಳಲ್ಲಿ ವಿವರಿಸುತ್ತಾ ಸಮಾಜದಲ್ಲಿಯ ಬದಲಾವಣೆಯನ್ನು ತರಲು ಪ್ರಯತ್ನಿಸಿದರು. ಹನುಮ, ಭೀಮ, ಮಧ್ವ ಈ ಅವತಾರತ್ರಯರಲ್ಲಿ ಅಪಾರ ನಂಬಿಕೆಯಿಟ್ಟಿದ್ದ ಹರಿದಾಸರು ಮೂರು ವ್ಯಕ್ತಿಗಳ ಮಹತ್ವವನ್ನು ತಮ್ಮ ಕೃತಿಗಳಲ್ಲಿ ವಿಶಿಷ್ಟವಾಗಿ ಹೇಳಿರುವುದು ದಾಸ ಪ್ರತಿಭೆಗೆ ನಿದರ್ಶನವಾಗಿದೆ.

## ೪.೧. ಪಂಚವಿಧ ಭಾವಗಳ ನಿರೂಪಣೆ

ಹರಿದಾಸರು ನವವಿಧ ಭಕ್ತಿ ಮಾರ್ಗದ ಮೂಲಕ ತಮ್ಮ ಭಕ್ತಿಯನ್ನು ಅಭಿವ್ಯಕ್ತಿಸಿದ್ದಾರೆ. ತಮ್ಮ ಸಾಧನಾ ಪಂಥಕ್ಕೆ ಒಂಭತ್ತು ವಿಧ ಭಕ್ತಿಯನ್ನು ಹೆದ್ದಾರಿಯನ್ನಾಗಿ ಮಾಡಿಕೊಂಡಿದ್ದಾರೆ. ಅವರ ಕೃತಿಗಳಲ್ಲಿ ನವವಿಧ ಭಕ್ತಿಗಳಾದ ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ ಸ್ಮರಣ ನವವಿಧ ಭಕ್ತಿಗಳನ್ನು ಹೆಸರಿಸಲಾಗಿದೆ. ಸೂಕ್ಷ್ಮವಾಗಿ ಅವಲೋಕಿಸಿದಾಗ ನವವಿಧ ಭಕ್ತಿಗಳಲ್ಲಿ ಒಂದರಿಂದ ಇನ್ನೊಂದಕ್ಕೆ ಭಾವದ ಬೆಳವಣಿಗೆಯನ್ನು ಗುರುತಿಸಬಹುದು. ಈ ಭಕ್ತಿಯ ವೈವಿಧ್ಯವನ್ನು ಸಾಧಿಸಿರುವಂತಹ ಭಕ್ತರ ಸಾಹಿತ್ಯವನ್ನು ವಿವಿಧ ಭಕ್ತಿ-ಭಾವಗಳಿಗನುಗುಣವಾಗಿ ಐದು ವಿಭಾಗಗಳಲ್ಲಿ ವಿಂಗಡಿಸಲಾಗಿದೆ. ಇವುಗಳನ್ನು ಪಂಚವಿಧ ಭಾವಗಳೆಂದು ಹೆಸರಿಸಲಾಗಿದೆ. "ಒಂದು ಇಡೀ ಕೀರ್ತನೆಯ ಭಾವ ವೈವಿಧ್ಯವನ್ನು ಒಟ್ಟಾಗಿ ಅನುಭವಿಸುವಲ್ಲಿ ಈ ಪಂಚಭಾವಗಳ ವಿಭಜನಯೇ ಸೂಕ್ತವೆನಿಸುತ್ತದೆ". ದಾಸ್ಯ, ಸಖ್ಯ, ಮಧುರ, ವಾತ್ಸಲ್ಯ ಮತ್ತು ಶಾಂತ ಇವೇ ಪಂಚಭಾವಗಳು.

ದಾಸ್ಯದಲ್ಲಿ ಭಕ್ತ ಭಗವಂತನನ್ನು ಒಡೆಯನೆಂದು ಭಾವಿಸಿ ಆರಾಧಿಸುತ್ತಾನೆ. ತಾನು ದಾಸನ ಸ್ಥಾನದಲ್ಲಿದ್ದುಕೊಂಡು ಆತನನ್ನು ಪೂಜಿಸುತ್ತಾನೆ. ಸಖ್ಯದಲ್ಲಿ ಪರಮಾತ್ಮನನ್ನು ಗೆಳೆಯನೆಂದು ಭಾವಿಸಿಕೊಂಡು ಆತನೊಡನೆ ಸಲುಗೆಯಿಂದ ವ್ಯವಹರಿಸುತ್ತಾನೆ. ಮಧುರದಲ್ಲಿ ಇನಿಯನನ್ನಾಗಿ ಭಾವಿಸುವುದು ವಾತ್ಸಲ್ಯದಲ್ಲಿ ಭಗವಂತನನ್ನು ಎಳೆಯನನ್ನಾಗಿ ಭಾವಿಸಿಕೊಂಡು ಮಾತೃ ಹೃದಯ ಪ್ರೇಮದಿಂದ ಮುದ್ದಾಡುವುದು ಹಾಗೂ ಶಾಂತ ಭಾವದಲ್ಲಿ ಪ್ರಶಾಂತ ಮಾನದಿಂದ ಸಮಾಧಾನ ಚಿತ್ತದಿಂದ ಭಗವಂತನನ್ನು ಆರಾಧಿಸುತ್ತಾನೆ. ಹೀಗೆ ಮಾನವ ಸಹಜವಾದ ಲೌಕಿಕ ಸಂಬಂಧಗಳನ್ನು ಕಲ್ಪಿಸಿಕೊಂಡು ಭಕ್ತ ಭಗವಂತನಲ್ಲೂ ಆರೋಪಿಸಿ ಅನುಭವಿಸುತ್ತಾನೆ. ಆ ಅನುಭವವನ್ನು ಆಯಾ ಸಂದರ್ಭಕ್ಕನುಗುಣವಾಗಿ ತನ್ನ ಹೃದಯದ ಭಾವವನ್ನು ವ್ಯಕ್ತಪಡಿಸುವ ರೀತಿ ಸುಮಧುರ, ಸುಂದರ ಹಾಗೂ ಹೃದಯಸ್ಪರ್ಶಿ ಈ ಭಾವಗಳನ್ನು ದಾಸಸಾಹಿತ್ಯದಲ್ಲಿ ಮೊಟ್ಟ ಮೊದಲಿಗೆ ಅನುಷ್ಠಾನಗೊಳಿಸಿದವರು ಶ್ರೀಪಾದರಾಜರು. ಭಕ್ತ ಹಾಗೂ ಭಗವಂತನ ನಡುವಿನ ಸಂಬಂಧ ಗಟ್ಟಿಯಾಗುವಿಕೆಗೆ ಈ ಪಂಚವಿಧ ಭಾವಗಳು ಪ್ರೇರಣೆಯಾಗಿವೆ.

ಇತರ ಹರಿದಾಸರಂತೆಯೇ ಗಿರಿಯಮ್ಮಳು ಕೂಡ ರಂಗನಾಥನನ್ನು ಪಂಚಭಾವಗಳಲ್ಲಿ ಕಂಡು ಸ್ತುತಿಸಿದ್ದಾಳೆ. ಎಲ್ಲ ಭಕ್ತರಲ್ಲೂ ಕಾಣುವ ಭಗವಂತ ಒಡೆಯ ಭಕ್ತ ದಾಸನೆಂಬ ಭಾವ ಇವಳ ಅನೇಕ ಹಾಡುಗಳಲ್ಲಿ ಕಾಣಬಹುದಾಗಿದೆ.

### ದಾಸ್ಯಭಾವ

ಭಕ್ತ ತನ್ನನ್ನು ಭಗವಂತನ ಸೇವಕ, ಆಳು, ದಾಸ ಎಂದು ಭಾವಿಸಿ ಭಗವಂತನನ್ನು ದೊರೆ, ಸ್ವಾಮಿ, ಒಡೆಯ ಮುಂತಾದ ವಿಶೇಷಣಗಳಿಂದ ಸಂಬೋಧಿಸಿ ಆರಾಧಿಸುವಲ್ಲಿ ಈ ದಾಸ್ಯಭಕ್ತಿಯ ನಿರೂಪಣೆಯಾಗಿದೆ. ಯಾವ ಸಂತರ ಸಾಹಿತ್ಯವನ್ನೇ ತೆಗೆದುಕೊಂಡರು ಅಲ್ಲಿ ದಾಸ್ಯ ಭಾವವೇ ಪ್ರಧಾನವಾಗಿ ಪ್ರಕಟವಾಗುತ್ತದೆ. ಹರಿದಾಸರ ರಚನೆಗಳೂ ಇದಕ್ಕೆ ಹೊರತಾಗಿಲ್ಲ. ಶ್ರೀಹರಿಯನ್ನು ಒಡೆಯನೆಂದು ಸಂಬೋಧಿಸಿ ತಾನು ದಾಸನೆಂದು ಆರಾಧಿಸುವ ಭಕ್ತರೇ ಹರಿದಾಸರು. ಅವರ ಸಾಹಿತ್ಯವನ್ನು ದಾಸಸಾಹಿತ್ಯ ಎಂದು ಕರೆಯುವಲ್ಲಿ ಈ ಭಾವ ಅಡಕವಾಗಿದೆ. ಅವರು ಪರಮಾತ್ಮನ ಪಾದಸೇವೆಯನ್ನು ನೀಡುವಂತೆ ಅರಿಕೆ ಮಾಡಿಕೊಳ್ಳುವರು 'ನಾ ನಿನಗೇನು ಬೇಡುವುದಿಲ್ಲ ಎನ್ನ ಹೃದಯ ಕಮಲದೊಳು ನೆಲಸಿರು ಹರಿಯೆ' ಎಂದು ಶ್ರೀಪಾದರಾಜರು ರಂಗ ವಿಠಲನಲ್ಲಿ ಮೊರೆಯಿಟ್ಟಿದ್ದಾರೆ. ತಮ್ಮ ಇಂದ್ರಿಯಗಳೆಲ್ಲ ಅವನಿಗೆ ಮೀಸಲಾಗಲಿ ಎಂದು ಕೋರಿ, ಕಡೆಗೆ 'ಚಿತ್ತ ನಿನ್ನೊಳು ಮುಳುಗಾಡಲೆ ನಿನ್ನ ಭಕ್ತ ಜನರ ಸಂಗ ದೊರಕಲಿ ಹರಿಯೆ, ವೃತ್ತಿ ತತ್ತ್ವ ಯೋಗಾಭ್ಯಾಸಕ್ಕಾಗಲಿ ರಂಗವಿಠಲ ನಿನ್ನ ದಯವಿರಲಿ ಹರಿಯೆ' ಎಂದು ವಿನಂತಿ ಮಾಡಿಕೊಳ್ಳುವರು. ಈ ಆರ್ತಭಾವವೇ ಎಲ್ಲ ಹರಿದಾಸರ ಹಂಬಲವಾಗಿದೆ. ಶ್ರೀವ್ಯಾಸರಾಯರು 'ಆಳಿದ ನೀನು ನಿನ್ನಾಳು ನಾನು, ತಂದೆ ನೀನು ನಿನ್ನ ಕಂದ ನಾನು| ಶರಣ್ಯ ನೀನು ನಿನ್ನ ಶರಣಾಗತ ನಾನು, ದಯಾಳು ನೀನು ನಿನ್ನ ದಯಕೆ ಪಾತುರ ನಾನು, ನೋವ

ನೋಡಿನ್ನು ಕಾವರಿಲ್ಲೆಂದು ಶ್ರೀಕೃಷ್ಣ ಎನ್ನನು ಕಾಯಬೇಕೈ ತಂದೆ ಎಂದು ನೊಂದು ಬೆಂದು ಬೇಡಿಕೊಳ್ಳುವರು. ಶ್ರೀ ವಾದಿರಾಜರು 'ಬಿಡೆನೊ ಬಿಡೆನೊ ನಿನ್ನ ಚರಣ ಕಮಲವ ಎನ್ನ ಹೃದಯ ಮಧ್ಯದೊಳಿಟ್ಟು ಭಜಿಸುವೆ ಅನುದಿನ' ಎಂದು ಪ್ರಾರಂಭದಲ್ಲಿಯೇ ಪ್ರಾರ್ಥನೆಯನ್ನು ಸಲ್ಲಿಸಿ, ಆ ಪಾದ ಮಹಾತ್ಮೆಗೆ ನಿದರ್ಶನಗಳನ್ನು ನೀಡಿ ಕಡೆಗೆ 'ವಜ್ರಾಂಕುಶ ಧ್ವಜ ಪದ್ಮರೇಖೆಗಳಿಂದೊಪ್ಪುವ ಸಿರಿ ಪಾದ ಪದುಮವನು ಭಕುತಿಯಿಂದ ಭಜಿಸಲು ಸಿರಿ ಹಯವದನನೆ ಪ್ರತ್ಯಕ್ಷವಾಗಿ ಸಲಹುವ ನಮ್ಮನು' ಎಂದು ತಮ್ಮ ಅಚಲ ವಿಶ್ವಾಸವನ್ನು ವ್ಯಕ್ತಪಡಿಸುವರು.

'ದಾಸರೆಂದರೆ ಪುರಂದರ ದಾಸರಯ್ಯ' ಎಂದು ತಮ್ಮ ಗುರುಗಳಿಂದಲೇ ಹೊಗಳಿಸಿಕೊಂಡ ಪುರಂದರದಾಸರು 'ದಾಸನ ಮಾಡಿಕೊ ಎನ್ನ ಇಷ್ಟು ಘಾಸಿ ಮಾಡುವರೇನೋ ಕರುಣಾ ಸಂಪನ್ನ' ಎಂದು ದೇವರಲ್ಲಿ ಮೊರೆಯಿಡುವುದನ್ನು ಕಾಣಬಹುದು. 'ದಾಸನಾಗುವುದಕ್ಕೆ ಏಸು ಜನ್ಮದ ಸುಕೃತ ಭಾಸುರ ರವಿ ಕೋಟಿ ಶ್ರೀಶ ಗುಣವಂತ ನಾಶರಹಿತ ನಿನ್ನ ದಾಸರ ದಾಸ್ಯವ ಲೇಸಾಗಿ ಕೊಡು ಕಂಡ್ಯ ಪುರಂದರ ವಿಠಲ' ಎಂದು ದಾಸತ್ವದ ಮಹಿಮೆಯನ್ನು ಮನಗಂಡು ಅವರು ತಾವು ದಾಸರಾಗುವುದಷ್ಟೇ ಅಲ್ಲದೆ ದಾಸರ ದಾಸನಾಗಿರಲೂ ಸಿದ್ಧವಿರುವುದನ್ನು ಕಂಡರೆ ಈ ದಾಸ್ಯ ಭಾವದ ಮೇಲ್ಮೆಯನ್ನು ಗುರುತಿಸಬಹುದು.

ತೇಲಿಸೊ ಇಲ್ಲ ಮುಳುಗಿಸೊ ನಿನ್ನ
ಪಾಲಿಗೆ ಬಿದ್ದನೊ ಪರಮ ಕೃಪಾಳೊ

ಸರ್ವವೂ ಭಗವಂತನ ಅಧೀನವೇನುತ್ತಾ, ಆತನ ಅನಂತ ಮಹಿಮೆಗೆ ಶರಣಾಗಿದ್ದಾರೆ. ಶರಣಾಗಿ ಬಂದ ತನ್ನ ಗುಣದೋಷವನ್ನು ಲೆಕ್ಕಿಸದೆ ರಕ್ಷಿಸೆಂದು ಭಗವಂತನಲ್ಲಿ ಮೊರೆಯಿಡುತ್ತಾರೆ. ಮತ್ತು ತಮ್ಮ ಉಗಾಭೋಗಗಳಲ್ಲಿ ಸರ್ವಸಮರ್ಪಣ ಭಾವದಿಂದ ಅವರು ಆಡುವ ನುಡಿಗಳು ಹೃದಯ ಮಿಡಿಯುವಂತಿವೆ.

ಎನ್ನಕಡೆ ಹಾಯಿಸುವುದು ನಿನ್ನ ಭಾರ
ನಿನ್ನ ನೆನೆಯುತಲಿಹುದು ಎನ್ನ ವ್ಯಾಪಾರ
ಎನ್ನ ಸತಿ ಸುತರಿಗೆ ನೀನೆ ಗತಿ
ನಿನ್ನನೊಪ್ಪಿಸುವುದು ಎನ್ನ ನೀತಿ

ಹೀಗೆ ಹರಿದಾಸರ ಭಕ್ತ ಜೀವನದ ಆತುರ, ಕಾತರ ಆಸೆ, ಆತಂಕ, ಕಳವಳ, ತೊಳಲಾಟ, ಬಯಕೆ, ದೈನ್ಯ, ಸಮಾಧಾನ ಮೊದಲಾದ ವಿವಿಧ ಭಾವಗಳನ್ನು ಪ್ರಕಟಪಡಿಸುವ ದಾಸ್ಯಭಾವ ಕೀರ್ತನೆ, ಉಗಾಭೋಗ, ಸುಳಾದಿಗಳ ರೂಪದಲ್ಲಿ ಹೊರಹೊಮ್ಮಿದೆ.

'ದಾಸಾರ್ಯರ ದಾಸರ ದಾಸ ನಾನು ಬಾಡದೀಶ ಕಾಯ್ದುಕೊಳ್ಳೊ' ಎಂದು ಕನಕದಾಸರು ಶರಣಾಗಿದ್ದಾರೆ. 'ದಾಸದಾಸರ ಮನೆಯ ದಾಸಿಯರ ಮಗ ನಾನು ಸಾಸಿರ ನಾಮದೊಡೆಯ ರಂಗಯ್ಯನ ಮನೆಯ' ಎಂದು ಕನಕದಾಸರು ದೇವರ ನೇರ ದಾಸರಾಗುವುದಕ್ಕಿಂತಲೂ ಆತನ ದಾಸರ ದಾಸನಾಗ

ಬಯಸುವೆನು ಎನ್ನುವ ಭಾವವೆ ದಾಸ್ಯ ಭಾವದ ತೀಕ್ಷ್ಣತೆಯನ್ನು ಅನುಭವಿಸಬಹುದು. ಹಾಗೆಯೇ 'ತನು ನಿನ್ನದು ಜೀವನ ನಿನ್ನದು' ಗೀತೆಯ ಸಮರ್ಪಣ ಭಾವ 'ಬಾಗಿಲನು ತೆರೆದು ಸೇವೆಯನು ಕೊಡು ಹರಿಯೆ' ಹಾಡಿನ ಭಗವಂತನ ಮೊರೆ ಇಲ್ಲೆಲ್ಲ ಅವರ ಸರ್ವಸಮರ್ಪಣ ಭಾವ, ದೈವ ಶ್ರದ್ಧೆ ಸೂಕ್ಷ್ಮ ಚಿಂತನೆಗಳು ಕಂಡುಬರುತ್ತವೆ.

ಹರಿನಾಮ ಸ್ಮರಣೆಯನ್ನೇ ಜೀವನದ ಧ್ಯೇಯವಾಗಿಸಿಕೊಂಡ ಹರಿದಾಸರೆಂದರೆ ವಿಜಯದಾಸರು 'ದಾಸ ದಾಸ ದಾಸರ ದಾಸ್ಯವ ಕೊಡೊ ದೋಷರಾಸಿಯಳಿದು' ಎಂದು ಭಗವಂತನನ್ನು ತಮ್ಮ ಮನಸ್ಸು ಇತರ ಚಿಂತೆಗಳಿಂದ ದೂರವಾಗಿ ಅಹಂಕಾರವನ್ನಳಿದು ಸತತವೂ ಶ್ರೀಹರಿಯ ಧ್ಯಾನದೊಳಿರುವಂತೆ ಅನುಗ್ರಹಿಸಬೇಕೆಂದು ಬೇಡಿಕೊಳ್ಳುತ್ತಾರೆ. ಮತ್ತು ಇನ್ನೊಂದರಲ್ಲಿ 'ಭಕುತಿಯ ಪಾಲಿಸು ಜೀಯ-ಮುಂದೆ ಮುಕುತಿಗೊಡವೆ ಯಾಕೆ ನೀನೊಲಿದ ಮೇಲೆ' ಎಂದು ಹೇಳಿ ತಾವು ನಿರಂತರವೂ ಭಗವಂತನ ಭಕ್ತನಾಗಿ ಪರಮಾತ್ಮನ ಸೇವೆಯಲ್ಲಿ ಇರುವ ಆನಂದ ವಿಧಿತವಾಗುತ್ತದೆ. ಭಕ್ತಿಯಲ್ಲಿ ಭಾಗಣ್ಣನೆಂದು ಪ್ರಖ್ಯಾತರಾದ ಗೋಪಾಲದಾಸರು 'ಬರುವುದೆಲ್ಲ ಬರಲಿ ಸಿರಿ ಹರಿಯ ಕರುಣವಿರಲಿ' ಎಂದು ಉದ್ಗಾರಿಸಿ ಮನುಷ್ಯನಿಗೆ ಬಂದು ಒದಗುವ ಅಪತ್ತುಗಳನ್ನೆಲ್ಲ ಪಟ್ಟಿ ಮಾಡಿ ಹೇಳಿರುವರು. 'ಗುರುಗಳ ಚರಣ ಸರೋರುಹ ಮಧುರಸ ತರತರ ತಪದಿ ಮೈಮರೆತಿರಲಿ' ಎಂಬ ಕೋರಿಕೆಯನ್ನು ವ್ಯಕ್ತಪಡಿಸಿರುವರು. ಗೋಪಾಲದಾಸರ ಶಿಷ್ಯರಾದ ಜಗನ್ನಾಥ ದಾಸರು 'ದಾಸೋಹಂ ತವ ದಾಸೋಹಂ ತವ ದಾಸೋಹಂ ತವ ದಾಸೋಹಂ' ಎಂದು ಪುನಃ ಪುನಃ ದಾಸತ್ವದ ಮಹತ್ವವನ್ನು ಹೇಳಿ ಭಗವಂತನ ವಿಶಿಷ್ಟ ಲಕ್ಷಣಗಳನ್ನೆಲ್ಲ ವಿವರಿಸಿರುವರು. 'ನಿನ್ನ ಸಂಕಲ್ಪಾನುಸಾರ ಮಾಡೋ, ಎನ್ನ ಸಾಕುವ ದೊರೆಯ ಮಾನ್ಯ ಮಾನವ ನೀನು' ಎಂದು ತಮ್ಮ ಸುಖ ದುಃಖಗಳ ಹೊಣೆಯನ್ನೆಲ್ಲ ಭಗವಂತನ ಪಾಲಿಗೆ ಬಿಡುವರು.

ಹಾಗೆಯೇ ಇತರ ಎಲ್ಲ ಹರಿದಾಸರಂತೆ ಹರಿಭಕ್ತೆಯಾದ ಹೆಳವನಕಟ್ಟೆ ಗಿರಿಯಮ್ಮ ಕೂಡ ರಂಗನಾಥನನ್ನು ಪಂಚಭಾವಗಳಲ್ಲಿ ಕಂಡು ಸ್ತುತಿಸಿದ್ದಾಳೆ. ಎಲ್ಲ ಭಕ್ತರಲ್ಲೂ ಕಾಣುವ ಭಗವಂತ ಒಡೆಯ ಭಕ್ತ ದಾಸನೆಂಬ ಭಾವ ಇವಳ ಅನೇಕ ಹಾಡುಗಳಲ್ಲಿ ಕಾಣಬಹುದು.

ಕಡೆಗಣ್ಣಲಿ ನೀ ನೋಡದಿರೆನ್ನಯ್ಯ ಬಿಡಬೇಡವೊ ಕೈಯ್ಯ
ಬಡವರ ಬಂಧು ಬಹುಕೃಪಾಸಿಂಧು
ಒಡೆಯ ನೀನಲ್ಲದೆ ಎನಗೆ ಬ್ಯಾರಿಲ್ಲವೊ ||ಪ||

ಶತ ಅಪರಾಧವ ಮಾಡಿದೆನಯ್ಯ ಸೇರಿದೆ ನಾ ನಿನ್ನ ಬೆನ್ನ
ಅತಿಪಾತಕಿ ಅಜಾಮಿಳನ ಉದ್ಧರಿಸಿದೆ
ಪೃಥವಿಯೊಳಗೆ ಬಿರುದಾಂತ ಶ್ರೀಕಾಂತ ||೧||

ನೆಲೆಗಾಣದೆ ನಾನಾಪರಿ ಚಿಂತೆಗೆ ಒಳಗಾದೆನೊ ನಾಹೀಗೆ
ಬಳಲಿಸಬ್ಯಾಡವೊ ಭಕ್ತಕುಟುಂಬಿ
ನಳಿನ ದಳಾಂಬಕ ನೀ ಸಲಹೆನ್ನನು ||೨||

ಸಾರಿ ಹೇಳುವೆ ಎನ್ನ ಬಳಗದ ಅರಭಾರವು ನಿನ್ನದು
ಹೇರೊಪ್ಪಿಸಿದ ಮೇಲ್ಯಾತರ ಸುಂಕವು
ಕಾರುಣ್ಯನಿಧಿ ಹೆಳವನಕಟ್ಟೆ ರಂಗಯ್ಯ[೬] ||೩||

ಎಂದು ಗಿರಿಯಮ್ಮನ ಸರಳ ಸ್ವಭಾವಕ್ಕೆ ಅನುಗುಣವಾಗಿ ಕೃತಿಯಲ್ಲಿ ತನ್ನ ಸರ್ವಸ್ವವೂ ಶ್ರೀ ಹರಿಯೇ ಎಂದು ನಂಬಿ ಭಗವಂತನ ಪ್ರಾರ್ಥನೆಯಿಂದ ತಮ್ಮನ್ನು ಈ ಲೌಕಿಕ ಜೀವನದ ಜಂಜಾಟಗಳಿಂದ ಪಾರು ಮಾಡಬೇಕೆಂದು ಸರ್ವಸಮರ್ಪಣ ಭಾವದಿಂದ ಆರ್ತವಾಗಿ ಮೊರೆಯಿಟ್ಟಿದ್ದಾಳೆ. ಇನ್ನೊಂದೆಡೆ 'ಪದುಮನಾಭನೆ ನಿನ್ನ ಪಾದಕಿಂಕರ ನಿನ್ನ ಕೈಯ ಬಿಡುವುದುಚಿತವೇ ರಂಗಾ' ಎಂದು ಕೇಳುತ್ತಾಳೆ.

ಮುದದಿಂದ ನಿನ್ನ ಪಾದಗೆರಗುವೆ ನಾನು ತ್ವರಿ
ತದಿ ನೀ ಕಾಯೊ ಎನ್ನೊಡೆಯ ರಂಗ

**ಸಖ್ಯ ಭಾವ**

ಭಕ್ತ ಭಗವಂತನನ್ನು ಪರಸ್ಪರ ಸ್ನೇಹದಿಂದ ಆರಾಧಿಸುವುದೇ ಸಖ್ಯಭಕ್ತಿ. ಪರಮಾತ್ಮನನ್ನು ತನ್ನ ಗೆಳೆಯ, ಒಡನಾಡಿ ಎಂಬ ಭಾವನೆಯಿಂಧ ಭಕ್ತ ಭಗವಂತನನ್ನು ಆರಾಧಿಸುತ್ತಾನೆ. ಆ ಸ್ನೇಹ, ಸಲಿಗೆಯಿಂದ ಅವನನ್ನು ಪ್ರಶ್ನಿಸುವ, ದಂಡಿಸುವ, ಮೂದಲಿಸುವ, ಪರಿಹಾಸ್ಯ ಮಾಡುವ ಹಕ್ಕನ್ನು ಪಡೆದುಕೊಳ್ಳುತ್ತಾನೆ. ಅವನೊಂದಿಗೆ ಹುಸಿ ಮುನಿಸನ್ನು ತೋರುತ್ತಾನೆ. ಆದರೆ ಮರುಕ್ಷಣದಲ್ಲಿಯೇ ರಾಜಿಯಾಗಲೂ ಹಿಂತೆಗೆಯುವುದಿಲ್ಲ. ಭಕ್ತ ಭಗವಂತರ ನಡುವಿನ ಈ ಸ್ನೇಹ ಸಲಿಗೆಗಳು ಹರಿದಾಸ ಸಾಹಿತ್ಯದಲ್ಲಿ ಅತ್ಯಂತ ರಮಣೀಯವಾಗಿ ಮೂಡಿಬಂದಿವೆ. ಕೃಷ್ಣಾರ್ಜುನರ ಸ್ನೇಹ, ಸಲಿಗೆಯೇ ಇದಕ್ಕೆ ಉತ್ತಮೋತ್ತಮ ನಿದರ್ಶವೆಂದು ಸೂಚಿಸಬಹುದು. ಹರಿದಾಸರು ಭಗವಂತನನ್ನು ಕುರಿತು ನಿಂದಾಸ್ತುತಿಗಳನ್ನು ಮಾಡುವಲ್ಲಿಯೋ ಹರಿನಾಮಕ್ಕೆ ಪ್ರಾಶಸ್ತ್ಯವಿತ್ತು ಹರಿಯನ್ನು ಲಘುವಾಗಿ ಟೀಕಿಸುವ ಸಂದರ್ಭಗಳಲ್ಲಿಯೋ, ಪರಮಾತ್ಮನೊಂದಿಗೆ ಪೈಪೋಟಿಯನ್ನು ಹೂಡುವಲ್ಲಿಯೋ ಆತನೊಲಿಯದಿದ್ದಾಗ ನಿಂದಿಸುವಲ್ಲಿ ಇತರ ತೆರನಾದ ಸರಸದ ಧಾಟಿಯಲ್ಲಿಯೋ ಈ ಭಾವದ ಕಾಂತಿಯನ್ನು ಕಾಣಬಹುದು. ಸಖ್ಯ ಭಾವವನ್ನು ಪ್ರತಿಪಾದಿಸುವಲ್ಲಿ ಹರಿದಾಸರು ರಚಿಸಿರುವ ನಿಂದಾಸ್ತುತಿಯ ಕೀರ್ತನೆಗಳು ಬಹಳ ಪ್ರಧಾನ ಪಾತ್ರವನ್ನು ವಹಿಸುತ್ತವೆ.

ಶ್ರೀಪಾದರಾಯರು 'ಯಾಕೆ ಪುಟ್ಟಿಸಿದೆ ನೀ ಸಾಕಲಾರದ ಜಗದೇಕ ಕಾರಣ ಪುರುಷನೆ ಕೃಷ್ಣ' ಎಂದು ಆತನನ್ನೇ ಪ್ರಶ್ನಿಸುವ ಮೂಲಕ ಭಗವಂತನಲ್ಲಿ ಮೊರೆಯಿಟ್ಟಿದ್ದಾರೆ. ಶ್ರೀವ್ಯಾಸರಾಯರು 'ಏನ

ಬೇಡಲೊ ನಿನ್ನ ದೇವಾಧಿದೇವ ಏನಹುದೊ ನಿನ್ನೊಳಗೆ ಮಹಾನುಭಾವ' ಎಂದು ವ್ಯಂಗ್ಯವಾದ ಧಾಟಿಯಲ್ಲಿ ತಮ್ಮದೇ ಆದ ಸರಣಿಯಲ್ಲಿ ನಿರೂಪಿಸಿರುವರು. ಭಕ್ತನಿಗೆ ಭಗವಂತನಿಗಿಂತಲೂ ಆತನ ನಾಮದ ಬಲವೊಂದಿದ್ದರೆ ಸಾಕೆಂದು ಪುರಂದರ ದಾಸರು 'ನೀನ್ಯಾಕೊ ನಿನ್ನ ಹಂಗ್ಯಾಕೊ ನಿನ್ನ ನಾಮದ ಬಲವೊಂದಿದ್ದರೆ ಸಾಕೋ' ಎಂದು ಆ ಮೂಲಕ ಹರಿಯೊಂದಿಗಿರುವ ತಮ್ಮ ಸಲಿಗೆಯನ್ನು ಹರಿನಾಮದ ಮಹಿಮೆಯ ಬಗೆಗಿನ ದೃಢವಿಶ್ವಾಸವನ್ನು ಒಟ್ಟಿಗೆ ನಿರೂಪಿಸಿದ್ದಾರೆ. 'ಎನಗೂ ಆಣೆ ರಂಗ ನಿನಗೂ ಆಣೆ ಎನಗೂ ನಿನಗೂ ಇಬ್ಬರಿಗೂ ಭಕ್ತರಾಣೆ' ಎಂದು ಸಮಾನವಾಗಿ ಕಾಣುವ. ಸಖ್ಯಭಾವದ ಸೊಗಸು ಅಸಾಮಾನ್ಯವಾದದ್ದು ದೇವರೊಂದಿಗೆ ಅವರು ಮಾಡಿರುವ ತರ್ಕವೂ ಅಷ್ಟೇ ಅಸಾದೃಶವಾದುದು. ಹಾಗೆಯೇ ದೇವರನ್ನು ಕುರಿತು ಮಾಡಿರುವ ನಿಂದಾಸ್ತುತಿಗಳು ಅಸಂಖ್ಯಾತವಾಗಿವೆ. ಪುರಂದರದಾಸರು ತಮ್ಮ ಉಗಾಭೋಗವೊಂದರಲ್ಲಿ ಭಗವಂತನೊಂದಿಗೆ ಎಷ್ಟು ಸಲಿಗೆವಹಿಸಿ ತಮ್ಮ ಸ್ವಾಮಿಯ ಹರಿ ಸರ್ವೋತ್ತಮತ್ವವನ್ನೂ ಹರಿಭಕ್ತಿ ಪಾರಮ್ಯವನ್ನು ಸಾಧಿಸಿರುವ ಈ ಕೃತಿ.

ನಿನ್ನಂಥ ಸ್ವಾಮಿ ಎನಗುಂಟು ನಿನಗಿಲ್ಲ
ನಿನ್ನಂಥ ತಂದೆ ಎನಗುಂಟು ನಿನಗಿಲ್ಲ
ನಿನ್ನಂಥ ದೊರೆಯು ಎನಗುಂಟು ನಿನಗಿಲ್ಲ
ನೀನೆ ಪರದೇಶಿ ನಾನು ಸ್ವದೇಶಿ
ನಿನ್ನರಸಿ ಲಕುಮಿ ಎನ್ನ ತಾಯಿ
ನಿನ್ನ ತಾಯ ತೋರೋ ಪುರಂದರವಿಠಲ

ಮೇಲುನೋಟಕ್ಕೆ ಸ್ವಾಮಿಯನ್ನು ಕುರಿತು ಮೂದಲಿಸುವಂತಿದ್ದರೂ ತನ್ನ ಸ್ವಾಮಿಗಿಂತ ಮೇಲ್ಮಟ್ಟದವರು ಯಾರೂ ಇಲ್ಲ ಎನ್ನುವುದು ಇಲ್ಲ ಸಖ್ಯಭಾವದ ವಿಶಿಷ್ಟತೆಯನ್ನು ಗುರುತಿಸಬಹುದು. ಶ್ರೀ ವಾದಿರಾಜರು ಶ್ರೀಹರಿಯ ದಶಾವತಾರಗಳ ವರ್ಣನೆಗಳ ಒಂದು ನಿಂದಾಸ್ತುತಿಯಲ್ಲಿ ಸಖ್ಯಭಾವ ಮನೋಹರವಾಗಿ ಚಿತ್ರಿಸಿದ್ದಾರೆ.

ಹ್ಯಾಂಗೆ ಕೊಟ್ಟನು ಹೆಣ್ಣ ಸಾಗರನು ಈವರೆಗೆ ||ಪ||
ಶೃಂಗಾರ ಪುರುಷರು ಬಹುಮಂದಿಯಿರಲು ||ಅ.ಪ||

ಎಂದು ವಿಸ್ಮಯಗೊಂಡವರಂತೆ ಕಂಡು ತಮ್ಮ ನಿಂದೆಯ ಪಟ್ಟಿಯನ್ನು ದೇವರಿಗೆ ತಿಳಿಸುವರು ದೇವರದೋ ಗುಷ್ಪು ನಾರುವ ಮೈಯಿ | ಬಿಟ್ಟಿದ್ದ ಬಿರುಗಣ್ಣು | (ಮತ್ಸ್ಯಾವತಾರ) ಮುಟ್ಟಿ ನೋಡಿದರೆ ಮೈಯ್ಯತಿ ಕಠಿನವು | (ಕೂರ್ಮಾವತಾರ) ಸುಟ್ಟ ಮೋರೆಯ ಇವಗೆ ಎಷ್ಟುದ್ದ ಹಲ್ಲುಗಳು (ವರಾಹಾವತಾರ) ಇಷ್ಟು ಘೋರ ಮುಖದಲಿಯನೆಲ್ಲಿ ದೊರಕಿದನೊ| (ನರಸಿಂಹಾವತಾರ) ಬಡವನು ಭಿಕ್ಷುಕನು (ವಾಮನಾವತಾರ) ಬಡಬನಂದದಿ ಕೋಪವು | (ಪರಶುರಾಮಾವತಾರ) ನೋಡಿದರೆ ಜಟೆಯು ಕಟ್ಟಿಹುದು|

(ರಾಮಾವತಾರ) ಬೆಡಗು ನುಡಿದಾಗ ಜಾರ ಚೋರ | (ಕೃಷ್ಣಾವತಾರ) ಭಂಡನಾಗಿರುವನು) (ಬೌದ್ಧಾವತಾರ) ಕಂಡವರೊಡನೆ ಕಾಳಗವ ಕೊಂಡು ಬಹ ಬಲು ಉದ್ದಂಡನಿವನು (ಕಲ್ಕ್ಯಾವತಾರ) ಇಷ್ಟು ಬಗೆಯಾದ ವೇಷ ಕಟ್ಟಿ ಮೆರೆಯುವವನಿಗೆ ಸಮುದ್ರ ರಾಜ ತನ್ನ ಮಗಳಾದ ಲಕ್ಷ್ಮಿಯನ್ನು ಹೇಗೆ ಕೊಟ್ಟನೋ ನಾನರಿಯೆ ಎಂದು ಶ್ರೀ ವಾದಿರಾಜರ ಸಲಿಗೆಯ ಸ್ವರೂಪವನ್ನು ವ್ಯಕ್ತಪಡಿಸುತ್ತದೆ. ಇತರ ಹಲವಾರು ದೇವತೆಗಳ ಸ್ತುತಿಯಲ್ಲಿ ಗಿರಿಯಮ್ಮ ತಿರುಪತಿ ಶ್ರೀವೆಂಕಟೇಶನನ್ನು ಕುರಿತು ಸಖ್ಯಭಾವದಲ್ಲಿ 'ಶ್ರೀವೆಂಕಟೇಶ ಎನ್ನ ಸಲಹಲ್ಯಾಕೆ ಬಳಲುವೆ ಎಂದು ದೈನ್ಯತೆಯಿಂದ ಬೇಡಿಕೊಂಡಿದ್ದಾಳೆ.

ಬಂದ ದುರಿತ ಪರಹರಿಸೊ ಬಂದು ತಾಪವನ್ನು ಬಿಡಿಸೊ
ಮಂದ ಬುದ್ಧಿಯನ್ನೆ ಕೆಡಿಸೊ ಮದನನಯ್ಯ ಮಮತೆ
ಯಿಂದ ಇಂದು ಎನ್ನ ಮಾತ ಲಾಲಿಸೊ
ತಂದೆ ಕುಂದು ಎಣಿಸದೆನ್ನ ಪಾಲಿಸೊ ||೧||

ನಕ್ರನ ಭಾಷೆಯೊಳಗೆ ಸಿಲುಕಿ ಗಜವು ನರಳುತಿರಲು ತ್ರಿ
ವಿಕ್ರಮನೆ ಸಲಹೊಯೆಂದು ಕರೆಯಲಾಗ ನಕ್ರನ
ಚಕ್ರದಿಂದ ಹೊಡೆದು ಕೆಡಹಿದೆ ಆ ಗಜಕೆ ಬಂದ
ವಕ್ರವನ್ನು ಬಿಡಿಸಿ ಸಲಹಿದೆ ಎನ್ನ ಮನದ ವಕ್ರವನ್ನು ಬಿಡಿಸಲಾಗದೆ[೭]

ಗಿರಿಯಮ್ಮ ಹರಿಯ ಸರ್ವೋತ್ತಮತ್ವವನ್ನು ಸಾರಿ ಹೇಳುತ್ತಾ ಸರೋವರದಲ್ಲಿದ್ದ ಗಜರಾಜನನ್ನು ಮೊಸಳೆಯ ಬಾಧೆಯಿಂದ (ನಕ್ರನ) ರಕ್ಷಿಸಿದಂತೆ ಶ್ರೀಹರಿಯನ್ನು ತನ್ನನ್ನು ಸಲಹೆಂದು ಮೊರೆಯಿಡುತ್ತಾ ಭಗವತದಲ್ಲಿ ಬರುವ 'ಗಜೇಂದ್ರ ಮೋಕ್ಷ'ದ ಪ್ರಸ್ತಾಪ ಮಾಡಿದ್ದಾಳೆ.

ತರಳ ಧ್ರುವನು ತನ್ನ ಪಿತನ ತೊಡೆಯ ಮ್ಯಾಲೆ ಬಂದು ಕುಳ್ಳಿರೆ
ತರವೆ ನಿನಗೆ ಎಂದು ಸುರುಚಿ ತವಕದಿಂದ ಎಳೆಯಲವನ
ಬರವಿ ಬಂದು ನಿನ್ನ ಚರಣವ ಭಜಿಸಲವಗೆ
ಸ್ಥಿರ ಪದವಿಯಿತ್ತೆ ಕರುಣದಿ ನಾನು ನಿನ್ನ ಸ್ಮರಣೆಗೆವೆದಿವ್ಯನಾಮವ[೮]

ಇಲ್ಲಿ ಗಿರಿಯಮ್ಮ ತನ್ನ ಸರಳವಾದ ಮಾತುಗಳಲ್ಲಿ ಕೇವಲ ನಾಲ್ಕು ಸಾಲುಗಳಲ್ಲೇ ಧ್ರುವನ ವೃತ್ತಾಂತವನ್ನು ಸೆರೆಹಿಡಿದ್ದಾಳೆ. ಮಗು ಧ್ರುವನು ತಂದೆಯ ತೊಡೆಯ ಮೇಲೆ ಕುಳಿತಿರಲು ಅವನ ಮಲತಾಯಿ ಕೈಹಿಡಿದು ಎಳೆಯುತ್ತಿರುವ ಸಂದರ್ಭದಲ್ಲಿ ಧ್ರುವ ಹರಿನಾಮ ಸ್ಮರಣೆ ಮಾಡಿ ಉನ್ನತ ಪದವಿ ಪಡೆದುದನ್ನು ನೆನೆಯುತ್ತಾಳೆ. ಹೀಗೆ ಧ್ರುವನ ಭಕ್ತಿಗೆ ಮೆಚ್ಚಿ ಶ್ರೀ ಹರಿ ಅವನನ್ನು ರಕ್ಷಿಸಿದ ಪ್ರಸಂಗವನ್ನು ನೆನೆದು ಹರಿಯ ಸರ್ವಾಂತರ್ಯಾಮಿತ್ವನೆಂದು ಅವನು ಸರ್ವರಕ್ಷಕನೆಂದು ಭಗವನ್ನಾಮ ಮಹಿಳೆಯನ್ನು ಪಾದ ಭಜನೆಯ ಮಹತ್ವವನ್ನು ಕಂಡು ಸ್ತುತಿಸಿದ್ದಾಳೆ.

ಆರು ಸಲಹುವರು ಎನ್ನ ಪಾರುಗಾಣಿಸುವರ ಕಾಣೆ
ಸೇರಿದೆನೊ ಶೇಷಶಯನ ಶ್ರೀನಿವಾಸ ಎನ್ನನು
ದ್ಧಾರ ಮಾಡಲಾಗದೆ ಸಕಲ ಆರಭಾರ ನಿನ್ನ
ಸೇರಿತಲ್ಲವೆ ಬೇರೆ ವಿಚಾರವಿಲ್ಲದೆ ನಿನ್ನ ನಂಬಿದೆ.'

### ಮಧುರ ಭಾವ

ಭಕ್ತ-ಭಗವಂತನಲ್ಲಿ ಸತಿ-ಪತಿ ಭಾವವನ್ನಾರೋಪಿಸಿಕೊಂಡು ಸಾಧನೆ ಮಾಡುವುದೇ ಮಧುರಭಕ್ತಿ. ಶ್ರೀ ಕೃಷ್ಣನನ್ನು ಇನಿಯನನ್ನಾಗಿ ಭಾವಿಸಿದ ಹರಿದಾಸರು ತಾವು ಗೋಪಿಯಾಗಿ ಆರೋಪಿಸಿಕೊಂಡು ಅವನ ಬರುವಿಕೆಗಾಗಿ ಹಂಬಲಿಸಿದ್ದಾರೆ. ಅವನ ಅಗಲುವಿಕೆಯಿಂದ ಕಣ್ಣೀರು ಸುರಿಸಿದ್ದಾರೆ. ಕಣ್ದಣಿಯ ಅವನನ್ನು ಕಂಡು ಆನಂದಿಸಿದ್ದಾರೆ. ಸರ್ವಸಮರ್ಪಣ ಭಾವದಿಂದ ಪರಮಾತ್ಮನನ್ನು ಪತಿ ಎಂದು ಭಾವಿಸಿ ಆರಾಧಿಸಿದ್ದಾರೆ. ಈ ಮಧುರ ಭಾವವನ್ನು ಪ್ರಮುಖವಾಗಿ ಶ್ರೀಪಾದರಾಜರು ಮತ್ತು ಶ್ರೀವ್ಯಾಸರಾಯರು ಪ್ರತಿಪಾದಿಸಿರುವರು. ಶ್ರೀಪಾದರಾಜರು ಭಾಗವತದಲ್ಲಿ ಉಕ್ತವಾಗಿರುವ ಭ್ರಮರಗೀತ, ಗೋಪಿಗೀತ ಮತ್ತು ವೇಣುಗೀತಗಳು ಸುಪ್ರಸಿದ್ಧವಾಗಿವೆ ಹಾಗೂ ಬಿಡಿ ಬಿಡಿಯಾದ ರಚನೆಗಳಲ್ಲಿ ಗೋಪಿಯರ ಹಾವಭಾವ, ವಿರಹ, ವ್ಯಾಕುಲಗಳನ್ನು ವರ್ಣಿಸಿರುವರು. ಶ್ರೀ ಕೃಷ್ಣನು ಮಧುರೆಗೆ ಹೊರಟು ನಿಂತಿರುವ ಸಂದರ್ಭವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿರುವರು.

ಗೋಪಿಯರು ಶ್ರೀಕೃಷ್ಣನೊಂದಿಗೆ ಬೆರತು ಕಲೆತು ಸಂತೋಷ ಪಡುವುದಕ್ಕಿಂತ ಆತನ ವಿರಹದಿಂದ ಪರಿತಪಿಸುವ ಚಿತ್ರಗಳೇ ಇಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಒಬ್ಬ ಗೋಪಿ ಶ್ರೀಕೃಷ್ಣನ ಅಗಲಿಕೆಯನ್ನು ಸಹಿಸಲಾರದೆ ತನ್ನ ಗೆಳತಿಯಲ್ಲಿ ತನ್ನ ದುಃಖವನ್ನೆಲ್ಲ ಮುಚ್ಚು ಮರೆಯಿಲ್ಲದೆ ಹೀಗೆ ಹೇಳಿಕೊಳ್ಳುತ್ತಾಳೆ.

ಬಲ್ಲೆನವ್ವಾ ಲಕುಮಿಯ ನಲ್ಲ ಬಾರದಿದ್ದರೆ ||ಪ||

ತನು ಹೊರೆಯನೊಲ್ಲೆನವ್ವಾ
ಹಾರ ಕೊರಳಿಗೆ ಭಾರ ಹುವ್ವಿನ
ಭಾರ ಸೈರಿಸಲಾರೆನೆ
ಮಾರನಯ್ಯನು ಬಾರದಿದ್ದರೆ
ಮಾರ ನಂಬಿಗೆ ಗುರಿಮಾಡಿ

ಎಂದು ತನ್ನ ವಿರಹದ ಯಾತನೆಯನ್ನು ತೋಡಿಕೊಂಡಿದ್ದಾಳೆ. ಆಕೆಯ ಅಂತರಂಗದ ವಿಹ್ವಲವನ್ನು ಶ್ರೀಪಾದರಾಜರು ಹಂತಹಂತವಾಗಿ ನಿರೂಪಿಸಿರುವರು. ಶ್ರೀವ್ಯಾಸರಾಯರೋ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ತಮ್ಮನ್ನೇ ಪರಮಾತ್ಮನ ಸಖಿಯೆಂದು ಭಾವಿಸಿಕೊಂಡು ತಮ್ಮ ಅಳಲನ್ನು ಹೃದಯ ಮುಟ್ಟುವಂತೆ ಚಿತ್ರಿಸಿರುತ್ತಾರೆ.

ಎಂದೆಂದೆನ್ನ ಮನದಿಂದ ಅಗಲದಿರೋ
ನಂದ ನಂದನನೆ ಆನಂದ ಮೂರುತಿಯೇ

ಎಂದು ಮೊದಲಾಗುವ ಈ ಕೀರ್ತನೆಯಲ್ಲಿ ತಮ್ಮ ಸಖೀತ್ವದ ಲಕ್ಷಣಗಳನ್ನೆಲ್ಲ ವಿವರಿಸುವರು.

ಬಹುಕಾಲ ನಿನ್ನ ಶ್ರವಣವೆಂಬ ಹೊನ್ನೋತಿಯ
ಬಹುಮಾನದಿಂದೆನ್ನ ಕಿವಿಯೊಳಿಟ್ಟು
ಮಹಿತ ಮಂಗಳಸೂತ್ರವೆಂಬೊ ದಾಸ್ಯವನ್ನು
ಮಹದಾನಂದದಿ ಎನ್ನ ಕೊರಳೊಳ್ ಕಟ್ಟಿದೆಯಾಗಿ
ಸುಲಲಿತ ಸ್ಮರಣೆಯೆಂಬ ಭೂಷಣವಿತ್ತು
ಸಲಹಿದೆ ಬಹು ಪ್ರೀತಿ ಸಖಿಯೆಂದೆನ್ನ
ಬೆಲೆಯಿಲ್ಲದ ಸುಜ್ಞಾನದ ನಿಧಿಯನಿತ್ತು
ಜಲಜಾಕ್ಷ ಎನ್ನನು ಒಲಿದು ಆಳಿದೆಯಾಗಿ
ಎಲ್ಲಿ ನೀ ನಿಲಿಸಿದರೆನಗೇನು ಭಯವಿಲ್ಲ
ಬಲ್ಲೆನೊ ವಿಶ್ವವ್ಯಾಪಕನೆಂಬುದ
ಸಲ್ಲದೋ ಈ ಮುನಿಸೆನ್ನೊಳು ಸಿರಿಕೃಷ್ಣ
ಬಲ್ಲದಿದ್ದರೆ ಸೆರಗ ಪಿಡಿದೆಳೆವೆ

ಶ್ರೀ ವ್ಯಾಸರಾಯರ ಈ ಮಧುರ ಭಾವದ ಪ್ರತಿಪಾದನೆ ಬಹು ವಿಶಿಷ್ಟವಾದುದು. ಇನ್ನು ಗೋವಿಂದನ ಅಗಲಿಕೆಯಿಂದ ಗೋಪಿಯರು ಬಗೆ ಬಗೆಯಾಗಿ ಚಿಂತಿಸುತ್ತಿರಲು ಆಗ ಮಧುರೆಯಿಂದ ಉದ್ಧವನು ಆಗಮಿಸುವನು. ಅವರನ್ನು ಸಂತೈಸಲು ಬಂದ ಆತನನ್ನು ಕಂಡು ಗೋಪಿಯರ ಹೊಳೆಯೇ ಹರಿದಂತಿದೆ. 'ಯಾಕೆ ಬೃಂದಾವನ, ಯಾಕೆ ಗೋಕುಲ ನಮಗೆ, ಯಾಕೆ ಬಂದೆಯೊ ಉದ್ಧವ' ಎಂದು ಕೃಷ್ಣನ ಅಗಲಿಕೆಯನ್ನು ಕುರಿತು ಆಕ್ಷೇಪಿಸತೊಡಗುವರು.

ಶ್ರೀಕೃಷ್ಣನ ಸಾನಿಧ್ಯ ಸುಖವನ್ನರಿತ ಒಬ್ಬ ಗೋಪಿಯ ಹೇಳಿಕೆ ಹೀಗೆ ಇದೆ. ಇದು ಬಲು ಸುಖ ಕಾಣೆ ಕೇಳಿದ ಕೆಣಗಾಣೆ ಒದಗಿ ಬರುವ ಮೃತ್ಯುವ ಪರಿಹರಿಸುವ ಪದುಮನಾಭವ ಪದ ಪದುಮಕ್ಕೆರಗುವ ಎಂಬ ಹಿಗ್ಗಿನಲ್ಲಿ ಮೊದಲಾಗುವ ಕೀರ್ತನೆ ಕಡೆಯಲ್ಲಿ 'ಶರಣ ಜನರ ಪೊರೆವ ದ್ವಾರಕಾಪುರವರಲ್ಲಿ ತಾನಿರುತ್ತಿರುವ ಪರಮ ಪುರುಷ ನಮ್ಮ ಸಿರಿ ಕೃಷ್ಣನ ಮುರಳೀಧರನ ಸೇವಿಸಿ ಸುಖಿಯಾಗುವ ಎಂಬ ಆತ್ಮ ಸಂತೋಷದಿಂದ ಈ ರಚನೆ ಆತ್ಮೀಯವೆನ್ನಿಸುತ್ತದೆ. ಬೃಂದಾವನದ ಅಂದ ಚೆಂದಗಳನ್ನೆಲ್ಲ ಮೇಲಿಂದ ಮೇಲೆ ಚಿತ್ರಿಸಿರುವರು. ಶ್ರೀ ವ್ಯಾಸರಾಯರು 'ಎಂದಿಗಾದರು ಒಮ್ಮೆ ಕೊಡು ಕಂಡ್ಯ ಹರಿಯೆ, ಬೃದಾವನ ಪತಿ ದಯದಿಂದಲೆನಗೆ' ಎಂದು ಭಗವಂತನಲ್ಲಿ ಬಿನ್ನೈಸಿಕೊಂಡು, ತರುಲತೆಯಾಗಿಯೋ,

ಹಂಸ ಪಕ್ಷಿಯಾಗಿಯೋ, ಚಕೋರವಾಗಿಯೋ ಗೋವಾಗಿಯೋ ಗೋಪರಾಗಿಯೋ, ಗೋಪಿಯರಾಗಿಯೋ ರೂಪ ತಾಳಿ ಹುಟ್ಟಬೇಕೆಂಬ ಹಂಬಲದಿಂದ ಪರಮಾತ್ಮನಲ್ಲಿ ಪ್ರಾರ್ಥಿಸಿಕೊಳ್ಳುವರು.

ಶ್ರೀ ವಾದಿರಾಜರ ಕೀರ್ತನೆಗಳ ಸಮೂಹದಲ್ಲಿ ಮಧುರಭಾವ ಪ್ರಧಾನವಾದ ಕೆಲವು ನಿದರ್ಶನಗಳಿವೆ. ಒಬ್ಬ ಗೋಪಿ ತನ್ನ ರಂಗನನ್ನು ಕಾಣಲಾರದೆ ತನ್ನ ಗೆಳತಿಯಲ್ಲಿ ತನ್ನ ಆತಂಕವನ್ನು ವ್ಯಕ್ತಪಡಿಸುವ ಸನ್ನಿವೇಶವೊಂದು ಹೀಗೆ ನಿರೂಪಿತವಾಗಿದೆ.

ಶ್ರೀ ರಂಗ ಬಾರನೆ ||ಪ||

ಕರೆದರಿಲ್ಲಿ ಬಾರನೆ ಕಾಂತೆ ಮುಖವ ತೋರನೆ ಮ
ಧುರ ಪುರದ ಅರಸನೆ ಕೂಡಿ ಎನ್ನ ರಮಿಸನೆ ||ಅ.ಪ||

ಮುನಿಸು ಮನದಲ್ಲಿಟ್ಟನ ಮೋಹವನ್ನು ಬಿಟ್ಟನೆ
ಮನದಿ ಛಲವ ತೊಟ್ಟನ ಮನೆಗೆ ಬಾರದೆ ಬಿಟ್ಟನೆ
ಇಂತು ನಂಬಿ ಇದ್ದೆನೆ ಎಂತು ಗುರುತು ಮರೆತನೆ
ಪಂಥವ್ಯಾತಕೆ ಕಲಿತನೆ ಕಾಂತೇರ ಕೂಡಿ ಮೆರೆದನೆ
ಸೋಳ ಸಾಸಿರ ಗೋಪಿ ಸಹಿತ ಜಲದಲಾಡಿ ಪೋದನೆ
ಸೆಳೆದು ಒಬ್ಬಳ ಬಯ್ದನೆ ಚೆಲುವ ಹಯವದನನೆ

ಹಾಗೆಯೇ ಅವರ ಇನ್ನೊಂದು ಕೀರ್ತನೆಯಲ್ಲಿಯೂ ವಿರಹ, ವ್ಯಾಕುಲತೆಯಿಂದ ಬೆಂದು ಬಸವಳಿದಿದ್ದ ಗೋಪಿ ತನ್ನ ಗೆಳತಿಯೊಂದಿಗೆ ತನ್ನ ನೋವನ್ನು ಹೇಳಿಕೊಳ್ಳುವ ಸನ್ನಿವೇಶವೇ ಬರುತ್ತದೆ.

ಎಲೆ ಸಖಿಯೇ ಪೋಗು ವಿಠಲನ ಬಳಿಗೆ
ಬೇಗವನ ತಾರೆ ಎನ್ನ ಮನೆಗೆ

ಎಂದು ಕೃತಿ ಮೊದಲಾಗುತ್ತದೆ. ಅನಂತರ ಸುತ್ತ ಮುತ್ತಲಿನ ಸೃಷ್ಟಿಯ ಸೌಂದರ್ಯ ಅವಳ ಹೃದಯವನ್ನು ಹೇಗೆ ಮಿಡಿಯುತ್ತದೆ ಎಂಬ ವೇದನೆಯ ಚಿತ್ರಣವನ್ನು ನೋಡಬಹುದು. ವಿಜಯದಾಸರು ಸಹ ತಮ್ಮ ಕೃತಿಗಳಲ್ಲಿ ಮಧುರಭಾವ ನಿರೂಪಣೆಯನ್ನು ಮಾಡಿರುವರು. ಮಧುರೆಗೆ ಹೊರಟು ನಿಂತಿದ್ದ ಕೃಷ್ಣನನ್ನು ಅಡ್ಡಗಟ್ಟಿದ ಗೋಪಿಯರು ತಮ್ಮ ದುಃಖವನ್ನು ತೋಡಿಕೊಳ್ಳುವ ಸಂದರ್ಭವನ್ನೇ ದಾಸರು ಅರಿಸಿಕೊಂಡಿರುತ್ತಾರೆ. 'ನಿನ್ನನಗಲಿ ಹೋಗಲಾರೆವೊ ನಿರಜಾಕ್ಷ ನಿನ್ನ ಸೇರಿ ಸುಖಿಸಬಂದೆವೊ' 'ಮನ್ನಿಸದೆ ಮಮತೆಯಿಂದ ಭಿನ್ನ ನುಡಿಗಳಾಡಿ ನಮಗೆ ಹಣ್ಣು ತೋರಿ ಕಾಳಕೂಟವನ್ನು ಕೊಡುವರೇನೊ ಕೃಷ್ಣಾ' ಎಂದು ಗೋಪಿಯರು ಮೊರೆಯಿಡುವಲ್ಲಿ ಅವರ ಉದ್ವೇಗವೆಷ್ಟು ಎನ್ನುವುದನ್ನು ಊಹಿಸಿಕೊಳ್ಳಬಹುದು. ತಾವು ಆತನಲ್ಲಿ ಶರಣಾಗತರಾಗಿ ಬಂಧು ಬಳಗವನ್ನು ಬಿಟ್ಟು ಬಂದಿರುವುದರಿಂದ ತಮ್ಮನ್ನು ಬಿಟ್ಟು

ತೆರಳುವುದು ಉಚಿತವಲ್ಲವೆಂದು ವಾದಿಸುವರು. ಕೇವಲ ಐದು ನುಡಿಗಳಿರುವ ಈ ಕೀರ್ತನೆಯಲ್ಲಿ ಗೋಪಿಯರ ಹೃದಯ ವೇದನೆಯನ್ನು ಗುರುತಿಸಬಹುದು.

ಹರಿದಾಸ ಸಾಹಿತ್ಯ ಪರಂಪರೆಯಲ್ಲಿ ಮಧುರ ಭಾವದ ಮೇಲ್ಮೆಯನ್ನು ಯತಿಗಳಾದ ಶ್ರೀ ಪಾದರಾಜರು ಮತ್ತು ಶ್ರೀ ವ್ಯಾಸರಾಜರು ಹೇಗೆ ಹೃದಯ ಮಿಡಿಯುವಂತೆ ಚಿತ್ರಿಸಿರುವರೋ ಹಾಗೆ ಹರಿಭಕ್ತೆಯಾದ ಹೆಳವನಕಟ್ಟೆ ಗಿರಿಯಮ್ಮನ ಹಾಡುಗಳಲ್ಲಿ ಮಧುರ ಭಾವವನ್ನು ಕಾಣಬಹುದು. ಗೋವಿಂದನ ಅಗಲಿಕೆಯಿಂದ ಬಳಲಿ, ತೊಳಲಿ, ವಿರಹ ವೇದನೆಯಿಂದ ಸಹಿಸಲಾರದೆ ತನ್ನ ಸಖಿಯರೊಂದಿಗೆ ತನ್ನ ಯಾತನೆಯನ್ನು ಹೇಳಿ ಕೊಳ್ಳುವ ಪರಿಯನ್ನು ಗಿರಿಯಮ್ಮ ತನ್ನ ಕೃತಿಯಲ್ಲಿ ವರ್ಣಿಸಿರುವಳು.

ಹಿರಿಯ ಹರಿದಾಸರ ಮೇಲುಪಂಕ್ತಿಯನ್ನು ಅನುಸರಿಸಿ ಗಿರಿಯಮ್ಮ ತನ್ನ ಗೆಳತಿಯನ್ನು ಕರೆದು ಶ್ರೀಕೃಷ್ಣನನ್ನು ಕರೆದು ತಾರೆಂದು ಕೇಳಿಕೊಳ್ಳುವ ಚಿತ್ರಣವೇ ಕಂಡುಬರುತ್ತದೆ.

'ಇಂದು ನೀ ಕರೆದು ತಾರೆ ಬೇಗನೆ ಪೋಗಿ ಚನ್ನ ವೆಂಕಟರಾಯನ ಮೊನ್ನೆ ಆಡಿದ ಮಾತೂ ಒಂದೂ ನಿಜವಿಲ್ಲಾ ರನ್ನ ಈಗಲೆ ಹೋಗಿ ಸನ್ನೆ ಮಾಡಿ ಬಾರೆ' ಎಂದು ಮೊರೆಯಿಟ್ಟು ತನ್ನ ಮನದ ಸಂತಾಪವನ್ನು ಬಗೆ ಬಗೆಯಾಗಿ ವ್ಯಕ್ತಪಡಿಸುವಳು.

ಅಂಗಜನಯ್ಯನ ಕಾಣದೆ ನಾನು ಹಿಂಗಿರಲಾರೆ ನಮ್ಮ
ಕಂಬುಕುಚದ ಬಾಲೆ ರಂಗನಾ ಕರತಾರೆ
ರಂಗು ಮಾಣಿಕದಹರಳುಂಗುರ ಕೊಡುವೆನು
ಕಾಲಿಗೆ ಎರಗುವೆನೆ ಕೋಮಲ ಮುಖಿ
ಆಲಸ್ಯ ಮಾಡದೆಲೆ ನೀಲ ಕುಂತಳನೀರೆ
ಲೋಲನ ಕರತಾರೆ ವಾಲೆಮೂಗುತಿ ಕಂಠಮಾಲೆಯ ಕೊಡುವೆನು
ಮರೆದಿರಲಾರೆನಮ್ಮ ಬೇಗನೆ ಪೋಗಿ ನೆರೆವಂತೆ ಮಾಡು ನೀನು
ಯರವುತನವು ಬ್ಯಾಡಾ ಮರೆಯಲಾರೆನೆ ನಮ್ಮ
ಕರವ ಪಿಡಿವೆ ಹೆಳವನಕಟ್ಟೆ ರಂಗೈಯ್ಯನ[೦೦]

ಗಿರಿಯಮ್ಮನ ಈ ಕೋರಿಕೆ ಯಾವ ಗೋಪಿಯ ಅಭೀಪ್ಸೆಗೂ ಕಡಿಮೆಯಿಲ್ಲ. ರಂಗನ ಅಗಲಿಕೆಯ ಆತಂಕವನ್ನು ಸಹ ಗಿರಿಯಮ್ಮ ಇಷ್ಟೇ ತೀಕ್ಷ್ಣವಾಗಿ ವ್ಯಕ್ತಪಡಿಸಿರುವಳು.

ಹ್ಯಾಂಗಿರಲಿನ್ನು ರಂಗನ ಬಿಟ್ಟಿನ್ನ ಹ್ಯಾಂಗಿರಲಿಂನು
ಮಂಗಳಾತ್ಮಜ ಹೆಳವನಕಟ್ಟೆರಂಗನ ಬಿಟ್ಟು ಹ್ಯಾಂಗಿರಲಿಂನು
ಸಿರಿ ಮನೋಹಾರಿ ಶರಣರಿಗಂತಃಕರಣವ ತೋರಿ
ತ್ವರಿತದಿ ದಿವ್ಯರಥಗಳನ್ನು ನೀಡಿ

ಪರಮಾ ಸಂಭ್ರಮದಿಂದಾಯಿರುವೋನ
ಮರೆದು ನಾ ಹ್ಯಾಂಗಿರಲಿನ್ನು
ಗಿರಿಮನಿ ಮಾಡಿ ಶರಣಗಲಿತಃಕರುಣವ ನೀಡಿ
ಸರಸದಿ ಮನೋರಥಗಳ ತೋರಿ
ಪರಮ ಸಂಭ್ರಮದಿಂದಾ ಇರುವನ
ಮರದು ನಾ ಹ್ಯಾಂಗಿರಲಿನ್ನೂ
ಶರಣು ಪೊಕ್ಕಿರುವಾ ಗಿರಿಯಮ್ಮಗಾ
ತುರದಿ ವಲಿದಿರುವ ಸರಕಿರಿಗೆಜ್ಜೆ
ಧರಿಸಿ ಕುಣಿದಿರುವ ಸಿರಿನಾರಸಿಂಹನ
ಚರಣವಾ ಮರೆದು ನಾ ಹ್ಯಾಂಗಿರಲಿನ್ನೂ[೧೧]

ಕೃಷ್ಣನ ಚೇಷ್ಟೆಗಳನ್ನು ಕುರಿತು ಒಂದು ಕೀರ್ತನೆಯಲ್ಲಿ ಗೋಪಿಯರೆಲ್ಲ ಜಲಕ್ರೀಡೆಯಲ್ಲಿ ತೊಡಗಿರುವಾಗ ಕೃಷ್ಣ ಮರೆಯಿಂದ ಬಂದು ಅವರ ಸೀರೆಗಳನ್ನೆಲ್ಲ ಎತ್ತಿಕೊಂಡು ಹೋಗಿ ಒಂದು ಮರ ಹತ್ತಿ ಕುಳಿತು ಕೊಂಡಾಗ, ನೋಡಿ ತಡೆಯಲಾರದೆ, ಕೃಷ್ಣನ ಮಿತಿಮೀರಿದ ಚೇಷ್ಟೆಗಳನ್ನು ಕುರಿತು ಒಬ್ಬ ಗೋಪಿಯು ತನ್ನ ಸಖಿಯೊಂದಿಗೆ ತನ್ನ ನೋವನ್ನು ಹೇಳಿಕೊಳ್ಳುವ ಸನ್ನಿವೇಶ ನಿರೂಪಿತವಾಗಿದೆ. ಇಲ್ಲಿ ಗಿರಿಯಮ್ಮಳ ಮಧುರಭಾವ ಅತ್ಯಂತ ವಾಚ್ಯವಾಗಿ ಮೂಡಿಬಂದಿದೆ.

ಏನ ಹೇಳಲಿ ಕೃಷ್ಣನಗುಣವ ನೋಡೆ ಸಖಿಯೆ ||ಪ||

ಜಾರತನದಿ ಶೀರೆಯ ಕಳಕೊಂಡು
ಮಾರನಾಟಕೆ ಎನ್ನ ಮರುಳು ಮಾಡಿದನಮ್ಮ ||೧||

ಚಂಡು ತಾರೆನುತಲಿ ದುಂಡು ಕುಚವ ಪಡಿದು
ಕಂಡು ಕಂಡಲ್ಲಿ ಎನ್ನ ಬಹು ಭಂಡು ಮಾಡುತಲಿಹನಮ್ಮ ||೨||

ತಂದೆ ಹೆಳವನಕಟ್ಟೆ ರಂಗನ ಕೃಪೆಯಿರಲು
ಬಂದ ದುರಿತಗಳು ನಂದಿ ಪೋಗುವವು[೨] ||೩||

ಗಿರಿಯಮ್ಮ ತನ್ನ ಇನ್ನೊಂದು ಕೃತಿಯಲ್ಲಿ ಶ್ರೀರಂಗನಾಥನ ಅಗಲಿಕೆಯಿಂದ ಗೋಪಿಯರು ತಮ್ಮ ವಿರಹ ವೇದನೆಯನ್ನು ಹೀಗೆ ವ್ಯಕ್ತಪಡಿಸುತ್ತಾಳೆ. ಕೃಷ್ಣನ ತುಂಟಾಟ, ಚೇಷ್ಟೆಗಳಿಂದ ನೊಂದು, ಬೆಂದು, ಅವನೊಂದಿಗೆ ತಾವು ಅನುಭವಿಸಿದ ಅಮೃತ ಘಳಿಗೆಗಳನ್ನು ಮೇಲಿಂದ ಮೇಲೆ ನೆನೆಯುವಳು. ಒಬ್ಬ ಗೋಪಿಕೆಯು ತನ್ನ ಒಲಿವಿನ ಕೃಷ್ಣನ ಅಗಲಿಕೆಯನ್ನು ಕುರಿತು ಸಖಿಯೊಂದಿಗೆ ತನ್ನ ದುಃಖ ವ್ಯಾಕುಲವನ್ನು ಹೀಗೆ ವ್ಯಕ್ತಪಡಿಸುವಳು.

'ತಾರಮ್ಮ ಶ್ರೀರಂಗ ಧಾಮನ ತಂದು ತೋರಮ್ಮ ಎನ್ನಯ ಪ್ರೇಮನ ವಾರಿಜಸಖಕೋಟಿ ತೇಜನ ಹೊಂತಕಾರಿಯ ನೀ ಕರತಾರೆ ಸೈರಿಸಲಾರೆ''[೧೯] ಎಂದು ಇದೇ ದಾಟಿಯಲ್ಲಿ ಮುಂದುವರಿಯುತ್ತ ಮೊದಲನೆ ನುಡಿಯಲ್ಲಿ 'ನಂದ ನಂದನ ಗೋವಿಂದನ ಕಾಣದೆ ಒಂದು ನಿಮಿಷ ಯುಗವಾಗಿ ತೋರುತಲಿದೆ ಎರಡನೆ ನುಡಿಯಲ್ಲಿ' ತಡವ್ಯಾತಕೆ ಸಖಿ ತವಕದಿಂದಲಿ ಪೋಗಿ ಎನ್ನೊಡೆಯನ ಕರತಾರೆ 'ಅಡಿಗೆರಗುವೆ ನಾ' ಮೂರನೆ ನುಡಿಯ 'ಆಲಸ್ಯ ವ್ಯಾಕೆನ್ನ ಇನಿಯನ ಕರೆತಾರೆ ಬಾಲೆ ನಿನಗೆ ಕಂಠ ಮಾಲೆಯ ಕೊಡುವೆ' ಎಂಬ ಮಾತುಗಳನ್ನು ಕೇಳಿದಾಗ ಆಕೆಯ ಹೃದಯ ವೇದನೆ ಎಂತಹದೆಂದು ವಿಧಿತವಾಗುತ್ತದೆ. ಹೀಗೆ ರಂಗನಾಥನ ವಿರಹದಿಂದ ತಪ್ತಳಾಗಿ ಆಲಾಪಿಸುವ ಪ್ರಿಯತಮೆಯಾಗಿಯೂ ಗಿರಿಯಮ್ಮ ಅನೇಕ ಹಾಡುಗಳಲ್ಲಿ ಕಾಣಿಸಿಕೊಳ್ಳುತ್ತಾಳೆ. ಹೀಗೆ ಸಖಿಯೊಡನೆ ರಂಗನಾಥನಿಗಾಗಿ ಹಂಬಲಿಸುವಲ್ಲಿ ಕಾಣುವ ಮಧುರಭಾವವೇ 'ಯಾಕೆ ಬಾರನಕ್ಕಯ್ಯ ಎನ್ನಯ ಪ್ರಾಣನಾಥನ ಕರೆತಾರೆ ಸೈರಿಸಲಾರೆ' ಎಂಬ ಹಾಡಿನಲ್ಲಿ ಹರಿಯ ದಶಾವತಾರಗಳೊಂದಿಗೆ ಪ್ರಿಯತಮನ ನಡವಳಿಕೆಯನ್ನು ಬಣ್ಣಿಸಿ ಕಳವಳಿಸುವಲ್ಲಿ ಇನ್ನಷ್ಟು ಮನೋಹರವಾಗಿ ಮೂಡಿಬಂದಿದೆ.

### ವಾತ್ಸಲ್ಯ ಭಾವ

ತಾಯಿಯು ತನ್ನ ಮಗುವಿನಲ್ಲಿ ತೋರುವ ಅಕ್ಕರೆ ಅಭಿಮಾನಗಳೇ ವಾತ್ಸಲ್ಯ ಭಾವವಾಗಿದೆ. ಭಾಗವತದಲ್ಲಿ ಉಕ್ತವಾಗಿರುವ ಶ್ರೀ ಕೃಷ್ಣನ ಬಾಲಲೀಲೆಗಳಿಗೆ ನಿದರ್ಶನವಾಗಿದೆ. ಕೃಷ್ಣನನ್ನು ಕಂಸನ ಸೆರೆಮನೆಯಲ್ಲಿ ಪಡೆದ ಭಾಗ್ಯ ದೇವಕಿಯದಾದರೂ ಕೃಷ್ಣನನ್ನು ಎತ್ತಿ ಆಡಿಸುವ ಭಾಗ್ಯವೆಲ್ಲ ಯಶೋದೆಯದಾಗಿತ್ತು. ತಾಯಿ ಮಗುವಿನ ಅಸದೃಶ ಪ್ರೇಮವನ್ನು ಯಶೋದಾ ಕೃಷ್ಣರ ಆದರ್ಶದಲ್ಲಿ ಪುರಂದರದಾಸರು ಹಲವಾರು ಕೃತಿಗಳನ್ನು ರಚಿಸಿದ್ದಾರೆ. ವಾತ್ಸಲ್ಯ ಭಾವದ ಮೇಲೆ ಸಂಖ್ಯೆ ಹಾಗೂ ಗುಣದೃಷ್ಟಿಯಿಂದ ಹೆಚ್ಚು ಕೃತಿಗಳನ್ನು ರಚಿಸಿದ ಕೀರ್ತಿ ಶ್ರೀ ಪುರಂದರದಾಸರಿಗೆ ಸಲ್ಲುತ್ತದೆ. ಅವುಗಳಿಗೆಲ್ಲ ಆಕರವು ಶ್ರೀಮದ್ಭಾಗವತದ ದಶಮಸ್ಕಂದದಲ್ಲಿಯ ಪೂರ್ವಾರ್ಧ. ಯಶೋದಾ ಕೃಷ್ಣರ ನಿಕಟ ಸಂಬಂಧ ಯಶೋದೆಯ ಶಿಶು ಕೃಷ್ಣನಿಗೆ ಪಾಲನೆ ಪೋಷಣೆ ಕೃಷ್ಣನ ತುಂಟಾಟ ಮುದ್ದಾಟ ಮೊದಲಾದ ತಾಯಿ ಮಗುವಿನ ಶೈಶವ ಹಾಗೂ ಬಾಲ್ಯದಲ್ಲಿಯ ಮಾತೃಪ್ರೇಮ ಸಂಬಂಧವನ್ನು ಭಾಗವತದಲ್ಲಿ ಕಾಣಬಹುದು.

ಹರಿದಾಸರಿಗೆ ಭಾಗವತವು ಆಕರ ಗ್ರಂಥವಾಗಿರುವುದರಿಂದ ಅಲ್ಲಿಯ ದಶಮ ಸ್ಕಂದದ ಕಥೆಯೆಲ್ಲ ಇವರ ರಚನೆಗಳಲ್ಲಿ ಕಂಡುಬರುವುದಷ್ಟೇ ಅಲ್ಲದೆ ಸ್ವಾನುಭವದಿಂದಲೂ ಈ ಆರಾಧನೆ ಅತ್ಯಂತ ಮನೋಜ್ಞವಾಗಿದೆ. ಶ್ರೀ ಮಧ್ವಾಚಾರ್ಯರು ಉಡುಪಿಯಲ್ಲಿ ಪ್ರತಿಷ್ಠಾಪಿಸಿರುವ ಮೂರ್ತಿಯೂ ಕಡೆಗೋಲ ಕೃಷ್ಣನೇ ಆಗಿರುವುದರಿಂದ ಆ ಪುಟ್ಟ ವಿಗ್ರಹವನ್ನು ಕಂಡು ನಮ್ಮ ಭಕ್ತರ ಹೃದಯದಲ್ಲಿ ವಾತ್ಸಾಲ್ಯದ ಭಾವ ಮೂಡುವುದು ಸಹಜವಾಗಿದೆ. ಶ್ರೀಪಾದರಾಜರು ಮೊದಲ್ಗೊಂಡು ಬಹುಮಟ್ಟಿಗೆ ಎಲ್ಲ

ಹರಿದಾಸರಲ್ಲಿಯೂ ಈ ವಾತ್ಸಲ್ಯದ ಭಾವ ಒಂದಲ್ಲ ಒಂದು ಬಗೆಯಾಗಿ ಹರಿದಿರುವುದನ್ನು ಕಾಣಬಹುದು.

ತಾಯಿ ಮಕ್ಕಳ ಸಂಬಂಧವು ಮಾನವೀ ಸಂಬಂಧವನ್ನು ಅತ್ಯಂತ ಶ್ರೇಷ್ಠವೂ ಪ್ರೇಮ ಪೂರ್ಣವೂ ಭಾವಾಭಿವ್ಯಕ್ತಿಗೆ ಅನುಕೂಲವೂ ಆಗಿರುವುದು ಹರಿದಾಸರು ಈ ಸಂಬಂಧವನ್ನು ತಮ್ಮ ಹರಿಯ ನಡುವೆ ಭಾವಿಸಿ ಮಗುವಿನ ಹಟ, ಮುದ್ದು, ಮುಗ್ಧತೆ, ಚೆಲುವು ತುಂಟಾಟ ಎಲ್ಲವನ್ನೂ ಬಾಲಕೃಷ್ಣನಿಗೆ ಆರೋಪಿಸಿ, ತಾವು ಯಶೋದೆಯ ಸ್ಥಾನದಲ್ಲಿದ್ದು ಅನುಭವಿಸಿದ್ದಾರೆ. ಒಬ್ಬ ತಾಯಿ ಎಷ್ಟು ರೀತಿಯಲ್ಲಿ ತನ್ನ ಮಗುವಿನ ತುಂಟಾಟಗಳನ್ನು ಕಂಡು ಆನಂದಿಸಬಹುದೋ ಅಷ್ಟು ರೀತಿಗಳಲ್ಲೂ ಆನಂದಿಸಿದ್ದಾರೆ. ಗೋಪಿಯರ ಜೊತೆ ತಾವೂ ಒಬ್ಬ ಗೋಪಿಯಾಗಿ ಬೆರತು ಯಶೋದೆಯ ಮಗನ ಗಲಾಟೆಯನ್ನು ತಡೆಯಲಾರದೆ ಹೋಗಿ ಯಶೋದೆಯಲ್ಲಿ ದೂರಿದ್ದಾರೆ. ಹೀಗೆ ವಾತ್ಸಲ್ಯ ಭಾವದ ಪ್ರತಿಪಾದನೆಯಲ್ಲಿ ಹರಿದಾಸರು ಚಿನ್ನ ಕೃಷ್ಣನನ್ನು ನೇರವಾಗಿ ಹೊಗಳುವುದುಂಟು ಇಲ್ಲವೇ ತಾವು ಯಶೋಧೆಯಾಗಿಯೇ ಗೋಪಿಯರಾಗಿಯೋ ಅವರ ಅಂತರಂಗದ ಕಳವಳವನ್ನು ವ್ಯಕ್ತಪಡಿಸಿರುವುದು ಕಂಡುಬರುತ್ತದೆ.

ಹರಿದಾಸರ ವಾತ್ಸಲ್ಯ ಭಾವದ ನಿರೂಪಣೆಯ ಮತ್ತೊಂದು ವೈಶಿಷ್ಟ್ಯವೆಂದರೆ ಕೃಷ್ಣನನ್ನು ಮಗುವಾಗಿ ಪಡೆದು ಅದರ ಲಾಲನೆ ಪಾಲನೆಗಳ ಹೊಣೆ ಹೊತ್ತ ಯಶೋದೆಯ ಪುಣ್ಯವನ್ನು ನೆನೆದು ದಾಸರು ತಾವೂ ಅವಳ ಆನಂದದಲ್ಲಿ ಪಾಲ್ಗೊಂಡಿರುವರು. ಈ ವಾತ್ಸಲ್ಯ ಭಾವವನ್ನು ಪುರಂದರದಾಸರು ತಮ್ಮ ಕೃತಿಗಳಲ್ಲಿ ದೇವ ಶಿಶುವಿನ ಆಟ ಪಾಠಗಳೂ, ತಾಯಿಯ ಆರೈಕೆ, ಹಾರೈಕೆಗಳು ಕೃಷ್ಣನ ತುಂಟಾಟ ತಾಯಿಯು ಕೃಷ್ಣನಿಗೆ ಹೆದರಿಸಿ ಗದರಿಸಿ ಎಚ್ಚರಿಸುವುದು ಅಕ್ಕರೆಯಿಂದ ಹಾಲು ಬೆಣ್ಣೆಯ ನೀಡುವುದು ಕೃಷ್ಣನ ಹಟ ಕೃಷ್ಣನ ಮೇಲೆ ಗೋಪಿಯರ ದೂರು ಮೊದಲಾದ ವಿಷಯಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಪುರಂದರದಾಸರು ಬಾಲಕೃಷ್ಣನನ್ನು ವರ್ಣಿಸುವಾಗ ಒಮ್ಮೆ ಆ ಪೋರನನ್ನು ನೇರವಾಗಿ ತಾವೇ ವರ್ಣಿಸಿದಂತೆಯೂ, ಮತ್ತೊಮ್ಮೆ ಯಶೋದೆ ಆಡಿಸಿದಂತೆಯು ಇನ್ನೊಮ್ಮೆ ಗೋಪಿಯರ ಪಾತ್ರದ ಮೂಲಕ ಆಡಿಸಿದಂತೆಯು ಕೃತಿಗಳನ್ನು ರಚಿಸಿದ್ದಾರೆ. 'ಕೂಸನು ಕಂಡಿರಾ ಜ್ಞಾನಿಗಳೆಲ್ಲ ಕೂಸನು ಕಂಡಿರಾ ಸಾಸಿರ ನಾಮದ ಶತಕೋಟಿ ತೇಜದ ಸೂಸುವ ಸುಖಮಯ ಜ್ಞಾನದ ಕೂಸು' ಎಂದು ಭಗವಂತನ ಬಾಲಕ ರೂಪವನ್ನು ಆತನ ಅಲೌಖಿಕ ಗುಣವನ್ನು ಏಕ ಕಾಲದಲ್ಲಿಯೇ ಪ್ರಸ್ತಾಪಿಸಿದ್ದಾರೆ. ಆ ಮುದ್ದು ಗೋಪಾಲನನ್ನು ಎತ್ತಿ ಆಡಿಸುವ ಪುಣ್ಯವನ್ನು ಪಡೆದಿರುವ ಯಶೋದೆಯನ್ನು ಕಂಡು ಒಂದು ಕೀರ್ತನೆಯಲ್ಲಿ "ಗೋಪಿಯ ಭಾಗ್ಯವಿದು ಆ ಪರಮಾತ್ಮನ ಅಪ್ಪಿ ಮುದ್ದಿಸುತ್ತಿರುವುದು"[೧೪] ಎಂದು ಮುಂತಾಗಿ ಯಶೋದೆ ಮಗು ಕೃಷ್ಣನಿಗೆ ಆಟವಾಡಿಸುವುದು. ನೀರೆರೆದು ಹಾಲು ಕುಡಿಸಿ ಊಟ ಮಾಡಿಸುವುದು, ಮಲಗಿಸಿ ತೂಗುವುದು, ಬಟ್ಟೆತೊಡಿಸಿ ಆಭರಣಗಳನ್ನಿಟ್ಟು ಸಿಂಗರಿಸುವುದು ಸರ್ವಾಲಂಕೃತ ವಾದ ಅವನಿಗೆ ಎಲ್ಲಿ ದೃಷ್ಟಿತಾಗುವುದೊ ಎಂದು ಹೆದರಿ ಉಪ್ಪು ಬೇವುಗಳನ್ನು ನಿವಾಳಿಸುವುದು ಇತ್ಯಾದಿ

ಎಲ್ಲ ಸೇವೆಗಳನ್ನೂ ಹೇಳುತ್ತಾ ತಾವೂ ಅನುಭವಿಸಿ ಸುಖಿಸಿದ್ದಾರೆ. ಇನ್ನೊಂದು ರಚನೆಯಲ್ಲಿ ಸರ್ವಾಂತರ್ಯಾಮಿಯನ್ನೇ ಮಗುವಾಗಿ ಆಡಿಸಿದಳೆಂಬುದನ್ನು ಪುರಂದರದಾಸರು

ಜಗದುದ್ಧಾರಕ ತನ್ನ ಮಗನೆಂದು ಬಗೆದು

ನಿಗಮಗೋಚರನ ಆಡಿಸಿದಳು ಯಶೋಧೆ[10]

ಎಂಬ ನುಡಿಯಲ್ಲಿ ಪರಮಾತ್ಮನ ಲೋಕೋದ್ಧಾರ ಮತ್ತು ಸದ್ಗುಣಸಪನ್ನತ್ವಗಳನ್ನು ಹೊಗಳಿರುವುದರೊಂದಿಗೆ ಅಂಥವನನ್ನು ಯಶೋದೆ ತನ್ನ ಮಗನೆಂಬ ಭಾವನೆಯಿಂದಲೇ ಹೇಗೆ ವರ್ತಿಸುತ್ತಿರುವಳೆಂಬ ಚಿತ್ರವನ್ನು ವರ್ಣಿಸಿದ್ದಾರೆ. ನಿಗಮಕೆ ಸಿಲುಕದವನೂ ಅಗಣಿತ ಮಹಿಮನೂ ಮಗುಗಳ ಮಾಣಿಕ್ಯನೂ ಆದವನು. ಅಣೋರಣೀಯನೂ, ಮಹತೋ ಮಹೀಮನೂ, ಅಪ್ರಮೇಯನೂ ಆದ ಭಗವಂತನು ಯಶೋಧೆಯ ಕೈಯಲ್ಲಿ ಹಸುಗೂಸಾಗಿ ಆಕೆಗೆ ಹರುಷವನ್ನುಂಟು ಮಾಡುತ್ತಿದ್ದಾನೆ.

ಬಾಲಕೃಷ್ಣನು ಅಳುವುದೇ ತಡ ಯಶೋದೆಯ ಹೃದಯ ತಲ್ಲಣಿಸುವುದು ತನ್ನ ಮಗ ಸಾಮಾನ್ಯನಲ್ಲವೆಂಬ ಭಾವನೆ ಯಶೋದೆಗೆ ತಿಳಿದುಬಂದಿರುವಾಗ ಆಕೆ ಶ್ರೀಕೃಷ್ಣನ ಬಾಲ ಲೀಲೆಗಳನ್ನು ನೆಪ ಮಾಡಿಕೊಂಡು ಅನಿಮಿತ್ತದಿಂದ ಬಾಲಕನು ಅತ್ತನೋ ಏನೋ ಎಂದು ಆತಂಕ ಪಡುವಳು 'ಅಳುವುದ್ಯಾತಕೊ ರಂಗ, ಅತ್ತರಂಜಿಪ ಗುಮ್ಮ' ಎಂದು ತಾಯಿ ಯಶೋದೆ ಬಾಲ ಕೃಷ್ಣನಿಗೆ ಬೆದರಿಸುವಳು 'ಪುಟ್ಟಿದಳು ದಿವಾಸದಲ್ಲಿ ದುಷ್ಟ ಪೂತನಿಯ ಕೊಂದೆ ಮುಟ್ಟಿ ವಿಷದ ಮೊಲೆಯುಂಡ ಕಾರಣ ದೃಷ್ಟಿ ತಾಕಿತೆ ನಿನಗೆ ರಂಗಯ್ಯ' ಎಂದು ಒಮ್ಮೆ ಹಸುಗೂಸಿದ್ದಾಗಲೇ ಕೃಷ್ಣನು ಪೂತನಿಯನ್ನು ಸಂಹಾರ ಮಾಡಿದ್ದನ್ನು ಸ್ಮರಿಸಿಕೊಳ್ಳುವಳು. ಯಶೋದೆ ಗುಮ್ಮನ ಹೆಸರು ಹೇಳಿ ಹೆದರಿಸಿದರೆ ತುಂಟ ಕೃಷ್ಣ ಬಲು ಹೆದರಿ 'ಗುಮ್ಮನ ಕರೆಯದಿರೆ ಅಮ್ಮ ನೀನು'' ಎಂದು ಗೋಗರೆಯುವುದು ತನ್ನ ನೈಜತೆಯಿಂದ ಚಿತ್ರಿತವಾಗಿದೆ. ಬೆಳಗಾದ ಕೂಡಲೆ ಯಶೋದೆಗೆ ಚಿಂತೆ ಮೊದಲಾಗುವುದು ಬಾಲಕೃಷ್ಣನ ತುಂಟಾಟಗಳು ಹೀಗೆ ಮೊದಲಾಗುವುದೋ ಇನ್ನು ತನ್ನ ಮಗನ ಬಗ್ಗೆ ಇನ್ನು ಎಂತಹ ದೂರುಗಳನ್ನು ಕೇಳಬೇಕಾಗಿ ಬರುವುದೋ ಎಂದು ಆತಂಕದಿಂದ ತಳಮಳಗೊಳ್ಳುವಳು. 'ಪೋಗದಿರೆಲೋ ರಂಗ ಬಾಗಿಲಿಂದಾಚೆಗೆ ಭಾಗವತರು ಕಂಡರೆತ್ತಿಕೊಂಡೊಯ್ವರೋ' ಎಂಬುದಾಗಿ ಮಗನನ್ನು ಬಗೆ ಬಗೆಯಾಗಿ ಬೇಡಿಕೊಳ್ಳುವಳು. ಕೃಷ್ಣ ಎಷ್ಟು ಬುದ್ಧಿ ಮಾತನ್ನು ಹೇಳಿದರೂ ಕೇಳದಿರಲು ಗುಮ್ಮನನ್ನು ಕರೆಯುವೆನೆಂದೋ, ಬೂಚಿ ಬಂದಿದೆಯೆಂದೋ ಬೆದರಿಸುವಳು ಕೃಷ್ಣ ಒಂದೆರಡು ಬಾರಿ ಹೆದರಿದರೂ ಆ ಬಳಿಕ ಅದಕ್ಕೂ ಹೆದರುವವನಲ್ಲ ಆಗ ಕೆಲವು ಗೋಪಿಯರು ಗುಂಪು ಕಟ್ಟಿಕೊಂಡು ಬಂದು 'ನಿನ್ನ ಮಗನ ಬಾಧೆ ಬಹಳವಾಗಿದೆ. ನಾವು ಇನ್ನೆಷ್ಟು ತಾಳುವೆ ಗೋಪಮ್ಮ' ಎಂದು ಮಗನ ಮೇಲೆ ದೂರಿನ ಮಳೆಯನ್ನೇ ಕರೆದರೆ ಅವಳಿಗೆ ಕೇಳಿ ಸಹಿಸುವುದೇ ಕಷ್ಟವಾಗುತ್ತದೆ. ಅವರ ಎದುರಿನಲ್ಲಿ ತನ್ನ ಮಗನನ್ನೆ ವಹಿಸಿಕೊಂಡು ದೂರ ಮಾಡುವರೇನೆ ರಂಗಯ್ಯನ ದೂರು ಮಾಡುವರೇನೆ' ಎಂದು ಪ್ರತ್ಯುತ್ತರವೀಯುವಳು.

ಆದರೂ ಮನೆಗೆ ಬಂದ ಗೋವಿಂದನನ್ನು ಕಂಡು 'ಹೊರಹೋಗಿ ಆಡದಿರು ಹರಿಯೇ ಎನ್ನ ದೊರೆಯೇ, ನೆರೆ ಹೊರೆಯವರು ಕಂಡರೆ ದೂರುವುದರಿಯೆ' ಎಂದು ಹಿತೋಕ್ತಿಗಳನ್ನು ಹೇಳುವಳು. 'ಏನು ಮಾಡಲೊ ಮಗನೆ, ಯಾಕೆ ಬೆಳಗಾಯಿತೊ; ಏನ ಮಾಡಲೊ ಕೃಷ್ಣಯ್ಯ? ಏನು ಮಾಡಲಿ, ಇನ್ನು ಮಾನಿನಿಯರು ಎನ್ನ ಮಾನವ ಕಳೆಯುವರೊ ರಂಗಯ್ಯ' ಎಂದು ಚಿಂತಿಸುವಳು.

ಗೋಪಿಯರ ಹೃದಯಾನುಭವವನ್ನೇ ಇಷ್ಟು ಗಾಢವಾಗಿ ವರ್ಣಿಸಿದ ಪುರಂದರದಾಸರು ತಮ್ಮಲ್ಲಿನ ಅಂತಃಕರಣವನ್ನು ತಿಳಿಸುವಲ್ಲಿ ಇನ್ನೂ ಮಿಗಿಲಾಗಿ ಹರ್ಷ ಪುಲಕಿತರಾಗುತ್ತಾರೆ.

ಯಾದವನ ನೀ ಬಾ ಯದುಕುಲ ನಂದನ
ಮಾಧವ ಮಧುಸೂದನ ಬಾರೊ
ಸೋದರ ಮಾವನ ಮದುರೆಲಿ ಮಡುಹಿದ ಯ
ಶೋದೆನಂದನ ನೀ ಬಾರೊ[2]

ಎಂದು ಕರೆಯುವಲ್ಲಿ ತಾವು ನೋಡಬಯಸುವ ಬಾಲಕೃಷ್ಣನ ವೈಭವವನ್ನು ಬಹಳ ಚಿತ್ತಾಕರ್ಷಕವಾಗಿ ಚಿತ್ರಿಸಿದ್ದಾರೆ.

'ಕಣಕಾಲಂದಿಗೆ ಘುಲು ಘುಲುರೆನುತಲಿ, ಝಣ ಝಣ ವೇಣುನಾದದಲಿ, ಚಿಣಿಕೋಲ್ ಚೆಂಡು ಬುಗುರಿಯನಾಡುತ ಸಣ್ಣ ಸಣ್ಣ ಗೋವಳರೊಡಗೂಡಿ' ಎಂದು ಹೊಗಳುವರು. ಹೀಗೆಯೇ ಇನ್ನೊಂದು ಕೀರ್ತನೆಯಲ್ಲಿ 'ಓಡಿ ಬಾರೈ ಶ್ರೀ ವೈಕುಂಠಪತಿ ನಿನ್ನ ನೋಡುವೆ ಮನದಣಿಯೇ' ಎಂದು ಹೃದಯ ಹಂಬಲವನ್ನು ವ್ಯಕ್ತಪಡಿಸಿ, ಆತನ ಆಗಮನವನ್ನೇ ನಿರೀಕ್ಷಿಸಿ, ನೋಡಿ ಮುದ್ದಾಡಿ ಮಾತಾಡಿ ಸಂತೋಷಗೂಡಿ, ಪಾಡಿ ಪೊಗಳುವೆನು ಪರಮ ಪುರುಷ ಹರಿ' ಎಂದು ತಮ್ಮ ಮನದಾಸೆಯನ್ನು ವ್ಯಕ್ತಪಡಿಸುವರು ಕೆಂದಾವರೆ ಪೋಲ್ವ ಪಾದಗಳಿಂದ ರಂಗ, ಧಿಂ ಧಿಮೆರೆಂದು ಕುಣಿಯುತಲಿ, ಅಂದಿಗೆ ಕಿರುಗೆಜ್ಜೆ ಘುಲು ಘುಲುರೆನ್ನುತ ಚಂದದಿ ಪೀತಾಂಬರ ನಲಿದಾಡುತ' ಬಾರೆಂದು ಬಾಯಿಬಿಟ್ಟು ಕರೆಯುವರು.

ಪುರಂದರದಾಸರ ಕೃತಿಗಳಲ್ಲಿನ ಬಾಲಕೃಷ್ಣನ ವರ್ಣನೆಯ ಶ್ರೀಮಂತಿಕೆಯನ್ನು ಹೆಳವನಕಟ್ಟೆ ಗಿರಿಯಮ್ಮನ ಕೃತಿಗಳಲ್ಲಿ ಕಾಣಬಹುದಾಗಿದೆ. ಗಿರಿಯಮ್ಮ ಮಾತೃ ವಾತ್ಸಲ್ಯದ ಮನಸ್ಸಿನಿಂದ ಆ ಪರಮಾತ್ಮನನ್ನೇ ಮಗುವೆಂದು ಭಾವಿಸಿ ಲಾಲಿಸಿದವಳು. ಆಕೆ ಯಶೋದೆಯಾಗಿ ಕೌಸಲ್ಯೆಯಾಗಿ ತನ್ನನ್ನು ಪರಿಭಾವಿಸಿಕೊಂಡವಳು ರಂಗನಾಥನನ್ನು ಬಾಲಕೃಷ್ಣನ ರೂಪದಲ್ಲಿಯೂ ಕಂಡು ಬಣ್ಣಿಸಿ ನಲಿದಿದ್ದಾಳೆ. ಅವಳ ಹೆಂಗರುಳು ರಂಗನಾಥನನ್ನೇ ಮಗುವಾಗಿ ಕಂಡು ಮುದ್ದಿಸಿ ತಣಿದಿದೆ.

ಕರೆದಳು ತನ್ನ ಮಗನ ಯಶೋದೆ
ಕರೆದಳು ತನ್ನ ಮಗನ

ಅಂದುಗೆ ಕಿರುಗಜ್ಜೆ ಘಲು ಘಲುಕೆನುತಲಿ
ಚಂದದಿ ಕುಣಿವ ಮುಕುಂದನೆ ಬಾರೆಂದು[೧೭]

ರಂಗನಾಥನನ್ನು ತಾನು ಯಶೋದೆಯಾಗಿ ಕರೆದಿದ್ದಾಳೆ. ಅವನ ಚೆಲುವನ್ನೂ ಹಾವಭಾವಗಳನ್ನೂ ಕಂಡು ಮೆಚ್ಚಿದ ಅವಳು ಯಶೋಧೆಯಾಗಿ ನೋಡಿದುದನ್ನು ವರ್ಣಿಸುವ ಮೂಲಕ ತನ್ನ ವಾತ್ಯಲ್ಯವನ್ನು ವ್ಯಕ್ತಪಡಿಸಿದ್ದಾಳೆ.

ಮಕ್ಕಳ ಮಾಣಿಕವೆ ಮೋಹನ್ನ
ಬಾ ರಂಗೈಯ್ಯ ಮಕ್ಕಳ ಮಾಣಿಕವೆ ಮೋಹನ್ನ
ಎನ್ನಕ್ಕರದ ಗುಣನಿಧೆ ಬಾ ರಂಗೈಯ್ಯ
ಅಪ್ಪು ತಪ್ಪು ಹೆಜ್ಜೆ ನಿಕ್ಕುತ ಬಾಯೊಳು ಜೊಲ್ಲು[೧೮]
------------

ಎಂದು ಮುಂತಾಗಿ ಆ ಮಕ್ಕಳ ಮಾಣಿಕ್ಯವನ್ನು ತಾನೇ ಅಲಂಕರಿಸಿದ ಆಭರಣಗಳೆಲ್ಲವೂ ಸಾರ್ಥಕವಾಗುವಂತೆ ಅವನ ಬಾಲಲೀಲೆಗಳನ್ನು ಬಣ್ಣಿಸಿ ಆನಂದಿಸಿದ್ದಾಳೆ ಯಶೋದೆ. ತಾಯಿ ಯಶೋದೆಯಿಂದ ಈ ರೀತಿ ಸೇವೆ ಮಾಡಿಸಿಕೊಂಡ ಕೃಷ್ಣ ಗೋಕುಲದ ಗೋಪಿಯರೊಡನೆಯೂ ಮುದ್ದಾಡಿಸಿಕೊಳ್ಳುತ್ತಾನೆ. ಈ ತುಂಟಾತನ ಕಂಡರೆ ಗೋಪಿಯರೆಲ್ಲರಿಗೂ ಪರಮಾನಂದ ಎಲ್ಲರೂ ಅವನನ್ನು 'ಬಾರೊ ತಮ್ಮ ಮನೆಗೆ ಗೋಪಾಲಕೃಷ್ಣ' ಎಂದು ಅವನ ಚೇಷ್ಟೆಗಳನ್ನು ನೆನೆಯುತ್ತಾ ಅವನನ್ನು ಆಹ್ವಾನಿಸುತ್ತಾರೆ. ಅವನ ಒಂದೊಂದು ಲೀಲೆಯನ್ನು ಅಚ್ಚರಿಯಿಂದ ನೋಡಿದ ಅವರು 'ನೋಡೆ ಗೋಪಿ ಗೋಕುಲದೊಳು ಹರಿ ಮಾಡುವ ಲೀಲೆಗಳ ಪ್ರತಿಯಮ್ಮ' ಎಂದು ಉದ್ಗರಿಸುತ್ತಾರೆ. ಅವನ ಚೆಲುವನ್ನೂ ಹಾವ ಭಾವಗಳನ್ನೂ ಕಂಡು ಮೆಚ್ಚಿದ ಅವರು ಯಶೋದೆಯಲ್ಲಿಗೆ ಬಂದು

ನಿನ್ನ ಮಗನೇನೆ ಗೋಪಿ
ಚೆನ್ನಾರಿ ಚಲುವ ಉಡುಪಿನ ಕೃಷ್ಣರಾಯ
ಮುಂಗುರುಳು ಮುಂದಲೆಗೆ ಭಂಗಾರದರಳೆಲೆ
ರಂಗ ಮಾಣಿಕದುಂಗುರವಿಟ್ಟು
ಪೊಂಗೆಜ್ಜೆ ತೊಡರು ಅಂದಿಗೆ ಘಲು ಘಲುಕಿನೆ
ಅಂಗಳದಲಾಡುತ ಈ ಮುದ್ದು ಬಾಲ[೧೯]

ಎಂದು ನೋಡಿದುದನ್ನು ಮನತುಂಬಿ ವರ್ಣಿಸುವ ಮೂಲಕ ಪುರಂದರದಾಸರು ತಮ್ಮ ವಾತ್ಸಲ್ಯಭಾವವನ್ನು ವ್ಯಕ್ತಪಡಿಸಿದ್ದಾರೆ. ಕೃಷ್ಣನ ತುಂಟಾಟಗಳನ್ನು ಕಂಡ ಗೋಪಿಯರು ಕೃಷ್ಣ ಬರುವ ಮುನ್ನ ತಮ್ಮ ಕೆಲಸಗಳನ್ನು ಮುಗಿಸಿಬಿಡುವ ಯೋಚನೆ ಅವರದು. ಆದರೂ ನೆಲುವಿನ ಮೇಲಿಟ್ಟಿದ್ದ ಬೆಣ್ಣೆ, ಹಾಲು, ಮೊಸರುಗಳೆಲ್ಲವನ್ನೂ ಕದ್ದು ಕರುಗಳನ್ನೆಲ್ಲ ಬಿಚ್ಚಿ ಮೊಲೆಯೂಡಿಸಿ ಬಾಲೆಯರನ್ನೆಲ್ಲ ಭಂಗಿಸಿ,

ಗೋಪಿಯರನ್ನು ಗೋಳು ಹುಯ್ದುಕೊಳ್ಳುತ್ತಿದ್ದ ಕೃಷ್ಣ ಅವನ ಕಾಟವನ್ನು ಸಹಿಸಲಾರದೆ ಗೋಪಿಯರೆಲ್ಲ ಒಟ್ಟಾಗಿ ಬಂದು ಯಶೋದೆಯಲ್ಲಿ ದೂರುತ್ತಾರೆ.

ನೆರೆದು ಗೊಪಿಯರೆಲ್ಲರು ಕೃಷ್ಣಯ್ಯನ ಶೆರಗ ಪಿಡಿದುಕೊಂಡು
ಭರದಿಂದ ಬಂದು ಯಶೋಧೆಗೆ ಛಾಡಿಯ
ಅರುಹಿದರತಿ ಬೇಗದಿ
ಬಲುಕಳ್ಳ ನಿನ್ನ ಮಗ ಗೋಪಮ್ಮ ಕೇಳೆ
ಹಾಲು ಕರವುತಿರಲು
ತೊಲೆಗೆ ನಿಚ್ಚಣಿಕೆಯ ಹಾಕದೆ ಸುರಿದಾನು
ನೆಲವಿನ ಪಾಲ್ಮೊಸರಾ[೨೦]

ಎಂದು ಒಬ್ಬರು ಬಂದು ಮಗನ ತುಂಟಾಟಗಳನ್ನೆಲ್ಲ ಬಯಲಿಗೆಳೆಯುತ್ತಾರೆ. ಈ ಚಾಡಿ ಮಾತುಗಳನ್ನು ಕೇಳಿದ ಯಶೋದೆ ತನ್ನ ಮಗನ ಚೇಷ್ಟೆಗಳನ್ನೆಲ್ಲ ಕೇಳಿದರೂ ಅವನ ಆ ಎಲ್ಲ ತುಂಟತನಗಳನ್ನೂ ಆಕೆಯ ತಾಯ್ತನ ಆಗಲೇ ಕ್ಷಮಿಸಿಬಿಟ್ಟಿರುತ್ತದೆ. ಆದರೂ ಚಾಡಿ ಹೇಳ ಬಂದ ಗೋಪಿಯರನ್ನು ಸಂತೈಸಿ ಕಳುಹಿಸುತ್ತಾಳೆ. ಎಲ್ಲರನ್ನೂ ನೋಡುತ್ತಾ ಎಲ್ಲರ ಮಾತುಗಳನ್ನು ಕೇಳುತ್ತಾ ನಿಂತ ಕೃಷ್ಣ ತನ್ನ ತಪ್ಪೇನೂ ಇಲ್ಲವೆಂದೂ ಗೋಪಿಯರದು ಸುಳ್ಳು ಮಾತೆಂದೂ ಹೇಳಿ ಸಾದಿಸಿದಾಗ

ಅಂವ್ವೆಯ್ಯಾ ಇಲ್ಲಾ ಕಾಣೆ ಇವಳು ಯಂನ್ನಾ
ಸುಂಮ್ಮನೆ ದೂರುವಳು
ಹುಂಮ್ಮಿಂದ ನಾನವಳ ಅಟ್ಟಕ್ಕೆ ನೆಗವೊರೆ
ಬೊಮ್ಮ ಜಟ್ಟಿಗನೆ ನಾನು[೨೧]

ಮಗನ ಮಾತನು ಕೇಳಿದ ತಾಯಿ ಯಶೋದೆ ಮನಕರಗಿ 'ಏಕೆ ದೂರುವಿರೆಂದು ಬಾಲನಾ ಲೋಕದೊಳಿವನಂಥ ಪುಂಡು ಮಕ್ಕಳಿಲ್ಲವೆಂದು' ಎಂದು ಅವರ ಮೇಲೆ ಸಿಟ್ಟಾಗಿ ಕೇಳುತ್ತಾಳೆ. ಅವರೆಲ್ಲರ ಆರೋಪಗಳನ್ನೂ ಒಂದೊಂದಾಗಿ ಅಲ್ಲಗಳೆಯುತ್ತಾ

ಒಂದು ಹೆಜ್ಜೆಯ ನಿಡುವಲ್ಲಿ ಬೀಳುತಲಿಹನೆ
ನಿಂದಿಹವದನ್ನು ನಾ ಕಾಣೆ
ಇಂದು ನಮ್ಮಯ ಮನೆಹೊಕ್ಕು ಬೆಣ್ಣೆಯ ಸವಿದನೆಂಬುದು
ಛಂದ ವೇನೆ ಗೋಪಿ ನಿನ್ನ ಕಂದನ ಸರಿಯಲ್ಲವೆ
ಅನ್ನವನುಣ್ಣಲರಿಯ ಅಮ್ಮಿ ಬೀಡುತಲಿಹನೆ
ಸೊನ್ನಿ ಮಾಡಿ ಕಂದನೆಂಬೋದು ಸೊಲ್ಲು ಸರಿಯೆ ಗೋಪಿ
ಬಲುಹಿಂದ ಹಾಲನೆರೆಯೆ ಬಾಯತೆಗಿಯಲೊಲ್ಲ ಒಲೆಯ

ಮೇಲಿನ ಹಾಲ ಒಬ್ಬನೆ ಕುಡಿದಾನೆಂದು ಹೆಳವನಕಟ್ಟೆ
ರಂಗನಾ ದೂರುವುದೊಳಿತೆ[೨೨]

ಎಂದು ಮೊದಲಾಗಿ ಅವರಿಗೆ ಸಮಾಧಾನ ಹೇಳುವಳು ಮೂರು ಲೋಕಗಳನ್ನು ಕಾಪಾಡಬೇಕಾದ ಬಾಧ್ಯತೆ ಇರುವ ರಂಗಯ್ಯ ಗೊಲ್ಲಕೇರಿ ಹಾಳು ಮಾಡುವನು ಎಂಬ ಆರೋಪಣೆಯಲ್ಲಿ ಸಂತ್ಯಾಂಶವಿಲ್ಲವೆಂದು ಗೋಪಿಯರಿಗೆ ಸಮಾಧಾನ ಪಡಿಸುತ್ತಾಳೆ. ಈ ತರದ ಸಮಾಧಾನಗಳಿಗೆ ಅವರು ಒಪ್ಪದಿದ್ದರು ಅವರ ದೂರುಗಳನ್ನು ಕೇಳಿ ಬೇಸರಗೊಂಡ ಯಶೋದೆಯು ತನ್ನ ಮಗನ ಪಕ್ಷವಹಿಸಿ ವಾದಿಸುತ್ತಾಳೆ. ತನ್ನ ಮಗ ಇನ್ನು ಚಿಕ್ಕ ಬಾಲಕ ಜಾರನಾಗಲಿ, ಚೋರನಾಗಲಿ ಅಲ್ಲ ಎಂದು ತರ್ಕ ಮಾಡುವ ಈ ಕೀರ್ತನೆ ಬಹಳ ಸೊಗಸಾಗಿ ಮೂಡಿಬಂದಿದೆ.

## ಶಾಂತಭಾವ

ಈ ಎಲ್ಲ ಭಾವನೆಗಳನ್ನು ಮೀರಿದ ಸಂಬಂಧಗಳಿಗೂ ಹೊರತಾದ ನಿರ್ಲಿಪ್ತತೆ ಶಾಂತಭಾವ ವೆಂದು ಕರೆಸಿಕೊಂಡಿದೆ. ಶಾಂತಭಾವದಲ್ಲಿ ಭಕ್ತನು ಭಗವಂತನ ಲೀಲಾ ವಿನೋದಗಳನ್ನು ಕಂಡು ಆಶ್ಚರ್ಯಚಕಿತನಾಗಿ ಸಂಭ್ರಮದಿಂದ ಅವುಗಳನ್ನು ಹಾಡಿ ಹೊಗಳುತ್ತಾನೆ. ಆತನ ಅನೇಕ ಮಹಿಮೆಗಳನ್ನು ವರ್ಣಿಸುತ್ತಾನೆ. ಹೀಗೆ ಭಕ್ತನು ಭಗವಂತನ ಮಹಿಮಾತಿಶಯಗಳನ್ನು ಪ್ರಶಾಂತ ಚಿತ್ತದಿಂದ ಹಾಡಿ ಆನಂದಿಸುವುದೇ ಶಾಂತಾಭಾವ. ಗಿರಿಯಮ್ಮ ಶಾಂತಭಾವದ ಹಾಡುಗನ್ನು ಹಾಡಿದ್ದಾಳೆ.

ಕಂಡೆನೀಗ ರಂಗನಾಥನ ಕಾರುಣ್ಯನಿಧಿಯ ||ಪ||

ಕಂಡೆನೀಗ ರಂಗನಾಥನ ಭೂ
ಮಂಡಲದೊಳುದ್ದಂಡ ಮೂರುತಿ
ಹಿಂಡು ದೈತ್ಯರ ತಂಡ ತಂಡದಿ
ತುಂಡು ತುಂಡು ಮಾಡಿದ ಸ್ವಾಮಿಯ ||ಅ.ಪ||

ಕಾಮಪಿತನ ಕೌಸ್ತುಭ ಹಾರನ ಕಸ್ತುರಿ
ನಾಮವ ನೇಮದಿಂದ ಧರಿಸಿದಾತನ
ವಾಮಭಾಗಲಕ್ಷ್ಮಿ ಸಹಿತ ಹೇಮ ಮಂಟಪದೊಳಗೆ ಕುಳಿತು
ಕಾಮಿಸಿದ ಭಕ್ತರಿಗೆ ಕಾಮಿತಾರ್ಥ ಕೊಡುವ ಸ್ವಾಮಿಯ ||೧||

---

ಇಂದುಧರನ ಸಖನೆ ಕೇಳಯ್ಯ ಬಂದಂಥ ದುರಿತ
ಹಿಂದು ಮಾಡಿ ಮುಂದೆ ಸಲಹಯ್ಯ
ತಂದೆ ಅಡಿಯ ಹೊಂದಿದೆನು ಇಂದು ಹೆಳವನಕಟ್ಟೆರಂಗ
ಆನಂದ ಪಡಿಸೊ ರಾಮಲಿಂಗ ಹೊಂದಿದೆನು ನಿನ್ನ ಚರಣ[೨೩] ||೩||

## ೪.೨. ಆತ್ಮನಿವೇದನೆ

ಭಕ್ತ ಭಗವಂತನಿಗೆ ಸರ್ವಾರ್ಪಣ ಭಾವದಿಂದ ತನ್ನನ್ನು ತಾನೇ ಅರ್ಪಿಸಿಕೊಳ್ಳುವುದು ಆತ್ಮ ನಿವೇದನ ಭಕ್ತಿ. ಎಲ್ಲವೂ ಆ ಪರಮಾತ್ಮನಿಗೇ ಮೀಸಲು ಎಂಬ ಭಾವನೆಯಿಂದ ಭಕ್ತನು ನಡೆಯುವುದು. "ಯಾರನ್ನು ಕಂಡರೂ, ಯಾವ ಕೆಲಸ ಮಾಡಿದರೂ ಎಲ್ಲದರಲ್ಲಿಯೂ ಭಗವಂತನನ್ನು ಕಾಣಬಲ್ಲ ಶಕ್ತಿ ಅವನಿಗೆ ಬರುತ್ತದೆ. 'ಸರ್ವಮಿದಂ ಬ್ರಹ್ಮಮಯಂ ಜಗತ್" ಎಂಬ ಭಾವನೆ ಜಾಗೃತವಾಗಿರುತ್ತದೆ. 'ನಾನು' ಎಂಬ ಅಹಂಕಾರ ಭ್ರಮೆಗಳು ನಿರಸನಾಗಿ, ತಾನು ಕೇವಲ ನಿಮಿತ್ತ ಮಾತ್ರ ಎಂಬ ಮನೋಭಾವ ಮೂಡಿಬರುತ್ತದೆ. ಹಿಂದೆ ದೇವರನ್ನು ನೆನೆಯದೆ ಹಲವಾರು ಜನ್ಮದಲ್ಲಿ ಸಂಸಾರದಲ್ಲಿ ಸಿಲುಕಿ ನೊಂದು ಬೆಂದು ಕಾಲಕಳೆದೆನಲ್ಲಾ ಎಂದು ಪರಿತಪಿಸುತ್ತಾ ಹತ್ತು ಹಲವಾರು ಬಗೆಯಲ್ಲಿ ಅವನಲ್ಲಿ ತಮ್ಮ ಸುಖ ದುಃಖಗಳನ್ನು ನಿವೇದಿಸಿ ಆತನನ್ನೇ ನೆನೆದು ಹಂಬಲಿಸುತ್ತಾ ಕರುಣಾಮಯನಾದ ಆತ ಒಲಿಯದಿರಲು ಆತನನ್ನು ನಿಂದಿಸುತ್ತಾ ಕಡೆಗೆ ಆತನಲ್ಲದೇ ಬೇರಿನ್ಯಾರಿಂದಲೂ ನಮ್ಮ ಭವ ದುಃಖ ನಿವಾರಣೆಯಾಗದೆಂಬ ಸತ್ಯದ ಅರಿವು ಮೂಡಿ ಆತನನ್ನೇ ಮತ್ತೆ ಮತ್ತೆ ಸ್ತುತಿಸಿ ಸಾಕ್ಷಾತ್ಕಾರ ಪಡೆದುಕೊಂಡು ತೃಪ್ತಿ ಹೊಂದುತ್ತಾರೆ ಭಗವದ್ಭಕ್ತರು. ಭಗವಂತನು ತನ್ನ ಭಕ್ತನು ಈ ರೀತಿಯಾಗಿ ಹಂಬಲಿಸಿ ನೊಂದು ಬೆಂದು ಪರಿಪಕ್ವನಾಗುವವರೆಗೂ ಕಾಯುತ್ತಾನೆ. ಒಮ್ಮೆ ಒಲಿದ ಮೇಲೆ ಭಕ್ತನು ಆತ್ಮತೃಪ್ತಿಯನ್ನು ಹೊಂದುವನು. ಹರಿದಾಸ ಸಾಹಿತ್ಯ ಪರಂಪರೆಯಲ್ಲಿ ಸರ್ವಸಮರ್ಪಣ ಭಾವದಿಂದ ಅನೇಕ ಹರಿದಾಸರು ತಮ್ಮ ಆತ್ಮ ನಿವೇದನೆಯನ್ನು ಮಾಡಿಕೊಂಡಿದ್ದಾರೆ. ಶ್ರೀ ಪಾದರಾಜರು ಭಗವಂತನಲ್ಲಿ 'ತಪ್ಪು ಮಾಡಿರುವೆ ಕ್ಷಮಿಸಿ ರಕ್ಷಿಸೆಂದು' ಮೊರೆಯಿಡುವುದನ್ನು ಹಲವಾರು ಕೃತಿಗಳಲ್ಲಿ ಕಾಣಬಹುದು.

> ನೀ ಕರುಣೆಯೆಂದು ನಿನ್ನ ನಾ ಮರೆ ಹೊಕ್ಕೆ
> ನೀ ಕರಿಸದೆ ಎನ್ನ ಶ್ರೀಕಾಂತ ಕಾಯಯ್ಯ[೨೩]

ನೀ ಕರುಣಾಕರನೆಂದು ನಾ ನಿನ್ನ ಮೊರೆ ಹೊಕ್ಕಿದ್ದೇನೆ ನನ್ನನ್ನು ಕಾಪಾಡು ಎಂದು ಬೇಡುತ್ತಾರೆ. ಇದನ್ನರಿಯದೆ ಸಂಸಾರದಲ್ಲಿ ಸಿಕ್ಕಿ ನೆಮ್ಮದಿಯನ್ನರಸಿ ಕಾಣದೆ ಕಡೆಗೆ ವ್ರತ ಜಪತಪಗಳನ್ನು ಮಾಡುತ್ತಾ ಮನೆ ಮನೆಗೂ ಅಲೆಯುತ್ತಾ ಕಡೆಗೆ ಹರಿಯ ನಾಮಾಶ್ರಯವಲ್ಲದೇ ಬೇರೆ ದಾರಿಯಿಲ್ಲವೆಂದು ಕಂಡು ಅವನಲ್ಲಿ ಶರಣಾಗಿ ಕೃಪೆದೋರುವಂತೆ ಕೇಳಿಕೊಳ್ಳುತ್ತಾರೆ.

ಶ್ರೀ ವಾದಿರಾಜರು ಶ್ರೀಹರಿಯಲ್ಲದೆ ಮತ್ತಾರೂ ರಕ್ಷಕರಿಲ್ಲವೆಂದು ಅರಿತು ಸತಿ ಸುತರು ಹಿತರು ಎಲ್ಲರೂ ಮತಿಭ್ರಾಂತಿ ತರಿಸಲು ಸಮರ್ಥರು ಆರಿಗೆ ಆರೋ ನಿನ್ನ ಉಳಿದು ಪೊರೆವರ ಕಾಣೆ ಎಂದು ಅವನಲ್ಲಿ ಸರ್ವಸಮರ್ಪಣ ಭಾವದಿಂದ ಮೊರೆಯಿಟ್ಟಿದ್ದಾರೆ. ಸಂಸಾರವಂದಿಗರಾಗಿದ್ದ ಪುರಂದರದಾಸರು ಪಶ್ಚಾತ್ತಾಪ ಪಟ್ಟು 'ದಾಸನ ಮಾಡಿಕೊ ಎನ್ನ ಇಷ್ಟು, ಘಾಸಿ ಮಾಡುವರೇನೋ ಕರುಣಾ ಸಂಪನ್ನ'

'ಬಿನ್ನಹಕೆ ಬಾಯಿಲ್ಲವಯ್ಯ ಅನಂತ ಅಪರಾದ ಎನ್ನಲ್ಲಿ ಇರಲಾಗಿ' ಎಂದು ಮುಚ್ಚು ಮರೆಯಿಲ್ಲದೆ ತಮ್ಮ ಕುಂದು ಕೊರತೆಗಳನ್ನೆಲ್ಲ ಭಗವಂತನಲ್ಲಿ ವಿಜ್ಞಾಪಿಸಿಕೊಳ್ಳುವರು. 'ಬಡವರೊಳಗೆ ಎನ್ನಿಂದಾರು ಬಡವರಿಲ್ಲ ಕೊಡುವರೊಳಗೆ ನಿನ್ನಿಂದಾರು ಕೊಡುವರಿಲ್ಲ' ದೃಢಭಕ್ತಿ ಎನಗೆ ನಿನ್ನಲ್ಲಿ ಕಲ್ಪಿಸಿ ಬಿಡದೆ ಸಲಹಯ್ಯ ಶ್ರೀ ಪುರಂದರ ವಿಠಲ' ಎಂದು ದೇವರಲ್ಲಿ ಮೊರೆಯಿಡುವರು. 'ನಿನ್ನ ಚರಣಕಮಲವನ್ನು ಕೊರಳಲ್ಲಿ ಕಟ್ಟಿ ಕೊಂಬುವೆ ಪುರಂದರ ವಿಠಲ' ಎನ್ನುವರು. ಕನಕದಾಸರು ಆತ್ಮನಿವೇದನಭಾವ ಒಂದು ಸೊಗಸಾದ ಭಾವಗೀತೆಯ ರೂಪದಲ್ಲಿ ಮೂಡಿಬಂದಿದೆ.

ತನು ನಿನ್ನದು ಜೀವನ ನಿನ್ನದು
ಅನುದಿನದಲ್ಲಿ ಬಾಹೊ ಸುಖದುಃಖ ನಿನ್ನದಯ್ಯ

ಎಂದು ಸರ್ವವನ್ನು ಭಗವಂತನಿಗೆ ಅರ್ಪಿಸಿದ್ದಾರೆ. ಇನ್ನೊಂದೆಡೆ 'ಸಾಕು ಸಾಕು ಮನುಜ ಸೇವೆ ಮಾಡಿ ದಣಿದು ನೊಂದೆ ನಾನು ಬೇಕು ನಿನ್ನ ಪಾದ ಭಜನೆ ಕೊಟ್ಟು ಸಲಹೊ ರಂಗಯ್ಯ' ಎಂದು ಕಾಗಿನೆಲೆಯ ಆದಿಕೇಶವನ ಪಾದವನ್ನು ಆಶ್ರಯಿಸಿ ಮೊರೆಯಿಟ್ಟಿದ್ದಾರೆ. ಮಹಿಳಾ ಹರಿದಾಸ ಪರಂಪರೆಯಲ್ಲಿ ಪ್ರಮುಖವಾಗಿ ಗಿರಿಯಮ್ಮನ ಹಾಡುಗಳಲ್ಲಿ ಆತ್ಮನಿವೇದನೆಯನ್ನು ಕುರಿತು ರಚನೆಗಳನ್ನು ಕಾಣಬಹುದು. ಭವಕೋಟಲೆಗಳಿಂದ ನೊಂದು ತನ್ನನ್ನು ಸಲಹು ಎಂದು ದೇವರಲ್ಲಿ ಆಕೆ ಮೊರೆಯಿಟ್ಟ ಪರಿಯೇ ಅನೇಕ ಹಾಡುಗಳ ರೂಪವಾಗಿ ನಿಂತಿವೆ. ಹಾಗಾಗಿ ಹರಿಭಕ್ತೆಯಾದ ಗಿರಿಯಮ್ಮನ ಹಾಡುಗಳಲ್ಲಿ ನಾವು ಕಾಣುವುದು ಪ್ರೌಢ ಕಾವ್ಯವನ್ನಲ್ಲ ಭಕ್ತೆಯೊಬ್ಬಳ ಸಾಮಾನ್ಯ ಸಹಜೋಕ್ತಿಗಳ ಆತ್ಮನಿವೇದನೆಯನ್ನು ಸ್ಪಷ್ಟಪಡಿಸುತ್ತದೆ. ಗಿರಿಯಮ್ಮ ಸಂಸಾರ ಭವದಲ್ಲಿ ಸಿಕ್ಕಿ ಪರದಾಡುವ ಚಿತ್ರವೊಂದನ್ನು ತನ್ನ ಒಂದು ಉಗಾಭೋಗದ ರೂಪದಲ್ಲಿ ನಿವೇದಿಸಿಕೊಂಡಿರುವುದನ್ನು ಮನಗಾಣಬಹುದು.

ಪಾಪಿಯೊಲು ನಾ ಬಂದೆ ಪರದೇಶಿ ನಾನಾದೆ
ಕಾಪಾಡುವರ ಕಾಣೆ ಕೈ ಪಿಡಿದು
ಆಪತ್ತು ಬಂದ ಕಾಲಕ್ಕೆ ಅರೈವರೊಬ್ಬರಿಲ್ಲ
ಶ್ರೀಪತಿಯೆ ಕಡೆಹಾಯಿಸೊ
ತಂದೆ ತಾಯೆಂಬುದನು ನಾ
ನೊಂದು ಗುರುತನರಿಯೆ ನಿಮ್ಮ ಕಂದ
ಳೆಂದೆನಿಸಿ ಕಡೆ ಹಾಯಿಸೊ ಹೆಳವನಕಟ್ಟೆರಂಗ[೨೨]

ತಂದೆ-ತಾಯಿಯರ ಗುರುತು ತಿಳಿಯದೆ ಅನಾಥವಾದ ಜೀವ ತಾನು ನಂಬಿದ ದೇವರಲ್ಲಿ ತೋರುವ ಅನನ್ಯ ಶರಣಾಗತಿ ಮತ್ತು ಭಕ್ತಳ ಹೃದಯದ ಆರ್ತಮೊರೆಯನ್ನು ಕಾಣಬಹುದು. ಹಾಗೆಯೇ ತನ್ನ ಇನ್ನೊಂದು ಕೀರ್ತನೆಯಲ್ಲಿ ಆತ್ಮನಿವೇದನೆಯನ್ನು ಕುರಿತು

ಏನಿದು ಬಯಲ ಪಾಶ ನೋಡಿದರಿಲ್ಲಿ
ಏನು ಹುರುಡುಗಾಣೆನೊ
ನಾನಾ ಜನ್ಮದಿ ಬಂದು ಹೊಂದಲಾರೆನು ನಿನ್ನ
ಧ್ಯಾನವ ಕೊಡೊ ಅಭಿಮಾನದೊಡೆಯ ರಂಗ ||ಪ||

ನೀರಬೊಬ್ಬುಳಿಯಂದದ ದೇಹವ ನೆಚ್ಚಿ
ದೂರ ಹೊತ್ತೆನು ಹರಿಯೆ ಯಾರು ಎನಗೆ ಸರಿಯಿಲ್ಲೆಂಬಹಂ
ಕಾರ ಪ್ರಪಂಚದ ಬಂಧನದೊಳು ಸಿಲುಕಿ ನೊಂದೆನೊ
ಹರಿ ನಿಮ್ಮ ನಾಮವ ನೆನೆಯದೆ ಎಂದೆಂದಿಗೆನಗಿತ್ತು ಸದ್ಗತಿ ತೋರೊ ||೧||

........................

........................

ಆಸೆಯೆಂಬುದು ಬಿಡದು ಈ ಭುವನದೊಳ್
ಲೇಸುಗಾಣೆನು ಹರಿಯೆ
ಭಾಷೆಯ ಕೊಡು ಮುಂದೆ ಜನುಮಬಾರದ ಹಾಗೆ
ಈಶಸನ್ನುತ ಹೆಳವನಕಟ್ಟೆರಂಗಯ್ಯ[೨೫]

ಭಕ್ತಳಾದ ಗಿರಿಯಮ್ಮ ಆತ್ಮನಿವೇದನೆಯಿಂದ ಪರಿ ಪರಿಯಾಗಿ ಬೇಡುತ್ತಾಳೆ. ಸಂಸಾರ ಭವದಲ್ಲಿ ಸಿಲುಕಿ ನೊಂದು ಬೆಂದು ಆಸೆ ನಿರಾಸೆಗಳಿಂದ ಪರಿತಪಿಸಿ ಪಶ್ಚಾತ್ತಾಪದಿಂದ ನೊಂದು ಬೆಂದು ಹರಿಭಕ್ತೆ ಗಿರಿಯಮ್ಮನು ಮತ್ತೊಮ್ಮೆ 'ಮುಂದೆ ಜನುಮ ಬಾರದ ಹಾಗೆ' ಕರುಣಿಸು ಎಂದು ಪರಮಾತ್ಮನಲ್ಲಿ ಮೊರೆಯಿಟ್ಟಿದ್ದಾಳೆ. ಹಾಗೆಯೇ

'ಕಡೆಗಣ್ಣಲಿ ನೀ ನೋಡದಿರೆನ್ನಯ್ಯ ಬಿಡಬೇಡವೊ ಕೈಯ್ಯ
ಬಡವರ ಬಂದು ಬಹುಕೃಪಾಸಿಂಧು
ಒಡೆಯ ನೀನಲ್ಲದೆ ಎನಗೆ ಬ್ಯಾರಿಲ್ಲವೊ[೨೬]

ತಾನು ಮಾಡಿದ ಶತ ಅಪರಾಧಗಳನ್ನು ಮನ್ನಿಸು ಎಂದು ನಿನ್ನ ಬೆನ್ನ ಹಿಂದೆ ಇರುವೆ ಎಂದು ಅತಿ ಪಾತಕಿ ಅಜಾಮಿಳನಿಗೆ ಮೋಕ್ಷ ನೀಡಿ ಉದ್ಧರಿಸಿದ ಪ್ರಸಂಗವನ್ನು ಪ್ರಸ್ತಾಪಿಸಿ 'ಸಾರಿ ಹೇಳುವೆ ಎನ್ನ ಬಳಗದ ಅರಭಾರವು ನಿನ್ನದು | ಹೇರೊಪ್ಪಿಸಿದ ಮೇಲ್ಯಾತರ ಸುಂಕುವು | ಕಾರುಣ್ಯನಿಧಿ ಹೆಳವನಕಟ್ಟೆ ರಂಗಯ್ಯ ಎಂದು ತನ್ನನ್ನು ತಾನು ಅರ್ಪಿಸಿಕೊಂಡು ಸರ್ವಸಮರ್ಪಣ ಭಾವದಿಂದ ರಕ್ಷಿಸೆಂದು ಶ್ರೀ ಹರಿಯಲ್ಲಿ ಆರ್ತವಾಗಿ ಮೊರೆಯಿಟ್ಟಿದ್ದಾಳೆ. ಇನ್ನೊಂದೆಡೆಯಲ್ಲಿ 'ಕಾಯೊ ಕರುಣಾಕರನೆ ನೀಯನ್ನಾ ಕಾಯೋ ಅನಾಥರಕ್ಷಕ ದಯಾಸಿಂಧೂ' ಎಂದು ಪ್ರಾರ್ಥಿಸುತ್ತಾ

ಕಾಯೊಯನ್ನನು ಕರವಿಡಿದು ಕೃಪೆಯಿಂದ ನೀಯನ್ನಾ
ಕಾಯೊ ದೇವರದೇವ ಶ್ರೀ ವೆಂಕಟೇಶ್ವರನೆ ಕಾಯೊ

ನೀನಲ್ಲದೆ ಅನ್ಯತ್ರ ತಾಯಿ ತಂದೆಗಳಿಲ್ಲಾ
ನೀನಲ್ಲದೆ ಬಂದುಬಳಗವೆನಗಿಲ್ಲಾ ನೀ
ಯನ್ನ ಕಾಯೊ ಶ್ರೀ ವೆಂಕಟೇಶ್ವರನೆ[೨೬] ||೧||

ಎಂದು ತಿರುಪತಿ ಶ್ರೀ ವೆಂಕಟೇಶ್ವರನಲ್ಲಿ ಮೊರೆಯಿಡುತ್ತಾ 'ಗಜೇಂದ್ರ ಮೋಕ್ಷ' 'ಪ್ರಹ್ಲಾದ ಚರಿತ್ರೆ', 'ದ್ರೌಪತಿ ವಸ್ತ್ರಾಪಹರಣ' ಪ್ರಸಂಗಗಳನ್ನು ಪ್ರಸ್ತಾಪಿಸಿದ್ದಾಳೆ.

ಶಂಖ ಚಕ್ರಧರ ನಿನ್ನ ಚರಣವನು ನಂಬಿದೆ
ಪಕ್ಷಿವಾಹನಸ್ವಾಮಿ ಕರುಣಾನಿಧೆ
ಹೆಳವನಕಟ್ಟೆಯೊಳು ನಿಂದು
ಭಕ್ತರನ್ನೆಲ್ಲಾ ಕಾಯ್ದು ದೇವರದೇವ ಶ್ರೀ ವೆಂಕಟೇಸ್ವರನೆ

ಎಂದು ನಂಬಿದ ಭಕ್ತರನ್ನೆಂದು ಸಲಹದೆ ಕೈಬಿಡನೆಂದು ದೃಢವಾಗಿ ಹೇಳುತ್ತಾ ಕಡೆಗೆ

ನಂಬಿದೆ ನಂಬಿದೆ ಅಂಬುಜಾಕ್ಷನೆ ನಿನ್ನ
ನಂಬಿದ ಭಕ್ತರಿಗೆ ಬೆಂಬಲನಾಗಿರುವನೆ ||ಪ||

ಮೊರೆಯಿಡೆ ದ್ರೌಪದಿ ತ್ವರಿತದಿ ಪೋಗುತ
ಪೊರೆದ ಮಹಾನುಭಾವ ಮುರಹರನೆ ನಿನ್ನ[೨೭] ||೧||

ಎಂದು ದೃಢವಾದ ನಂಬಿಕೆಯನ್ನು ಎಲ್ಲರಿಗೂ ಸಾರುತ್ತಾ 'ದ್ರೌಪದಿಯನ್ನು ದುಶ್ಯಾಸನ ಅವಮಾನಿಸುತ್ತಿದ್ದ ಸಂದರ್ಭದಲ್ಲಿ ಕೃಷ್ಣ ತನ್ನ ಭಕ್ತೆ ದ್ರೌಪತಿಗೆ ಅಕ್ಷಯವಸ್ತ್ರದ ವರವನ್ನಿತ್ತ ಉದಾಹರಣೆಯನ್ನಿತ್ತು ಭಕ್ತಿಯಿಂದ ಮುಕ್ತಿಯನ್ನು ಪಡೆದ ಖ್ಯಾತಿಯನ್ನು ಹಾಡಿ ಹೊಗಳಿದ್ದಾಳೆ. ಇಲ್ಲಿ ಭಗವಂತ ನಂಬಿದವರನ್ನು ರಕ್ಷಿಸುತ್ತಾನೆ ಎಂಬ ವಿಶ್ವಾಸವನ್ನು ಪ್ರಕಟಿಸುತ್ತದೆ.

ನಿನ್ನ ನಂಬಿದವರ ಕಾಯೊ ನಿಜವುಳ್ಳದೇವ
ಎನ್ನನು ಉದ್ಧರಿಸಿ ಕಾಯೊ ಕರುಣಿವೆಂಕಟ[೨೮] ||ಪ||

ಎಂದು ಭಗವಂತನಲ್ಲಿ ಅಚಲವಾದ ನಂಬಿಕೆಯನ್ನು ವ್ಯಕ್ತಪಡಿಸಿ ಶ್ರೀಕೃಷ್ಣನು ಗೋವರ್ಧನ ಗಿರಿಯನ್ನು ಎತ್ತಿದ ಪ್ರಸಂಗ ಮತ್ತು ಗಜೇಂದ್ರ ಮೋಕ್ಷ ಇನ್ನು ಮುಂತಾದವುಗಳನ್ನು ಉಲ್ಲೇಖಿಸಿ ಗಿರಿಯಮ್ಮ ತನ್ನ ಕೃತಿಯಲ್ಲಿ ಆತ್ಮನಿವೇದನೆಯನ್ನು ಮಾಡಿಕೊಂಡಿದ್ದಾಳೆ. 'ಭಕ್ತವತ್ಸಲನೆಂಬ ಬಿರುದು ಬಿಡದಿರು ದೇವ ಬಹುಪರಾಕೆಲೊ ಮುರಾರಿ' 'ಭಕ್ತಳ ಬನ್ನ ಪರಾಕು ಭಾಗ್ಯದ ನಿಧಿಯೆ ಮುಂತಾದ ಹಾಡುಗಳಲ್ಲಿ ಆತ್ಮ ನಿವೇದನೆಯನ್ನು ನಿರೂಪಿಸಿದ್ದಾಳೆ. ಮತ್ತು ಹರಿನಾಮವನ್ನು ಸ್ತುತಿಸುತ್ತಾ ಪರಾಕು ಹೇಳಿದ್ದಾಳೆ.

'ಭಕ್ತಳ ಬನ್ನ ಪರಾಕು ಭಾಗ್ಯದ ನಿಧಿಯೆ ||ಪ||

ನಿನ್ನ ನಂಬಿದೆ ನೀರಜಾಕ್ಷ ಪರಾಕು
ನಿನ್ನ ರನ್ನೆಯ ಒಲುವೆ ಬೇಕು ಪರಾಕು
ಅನ್ಯರ ಸಂಗವನೊಲ್ಲೆ ಪರಾಕು
ಎನ್ನಪೇಕ್ಷೆಯ ಸಲಿಸೊ ಪರಾಕು[೬೦] ||೧||

## ೪.೩. ದಶಾವತಾರ ಸ್ತುತಿ

ಹರಿದಾಸ ಪರಂಪರೆಯಲ್ಲಿ ಸಾಮಾನ್ಯವಾಗಿ ಪ್ರತಿಯೊಬ್ಬ ಎಲ್ಲ ಹರಿದಾಸರು ಹರಿಯ ದಶಾವತಾರಗಳ ವರ್ಣನೆಯನ್ನು ತಮ್ಮ ಕೃತಿಗಳಲ್ಲಿ ಪ್ರಸ್ತಾಪಿಸಿದ್ದಾರೆ. ಹಾಗೆಯೇ ಹೆಳವನಕಟ್ಟೆ ಗಿರಿಯಮ್ಮಳು ಕೂಡ ಹರಿಯ ದಶಾವತಾರಗಳ ವರ್ಣನೆಯನ್ನು ತನ್ನ ಕೃತಿಗಳ ಮೂಲಕ ಮಾಡಿರುವಳು. ಇಲ್ಲಿ ದಶಾವತಾರಗಳ ವರ್ಣನೆ ವೈವಿಧ್ಯಮಯವಾಗಿ ಬೆಳೆದು ಬಂದಿದೆ. ಶ್ರೀ ಹರಿಸ್ತುತಿಯೇ ಮುಖ್ಯ ಧ್ಯೇಯವಾಗಿರುವುದರಿಂದ ಮಧುರ, ಸಖ್ಯ, ನಿಂದಾತ್ಮಕ ಶೈಲಿಯಲ್ಲಿ ಹರಿಭಕ್ತಿ ಸಾಧನೆಯೆಡೆಗೆ ದೃಷ್ಟಿಯನ್ನು ಕೇಂದ್ರೀಕರಿಸಿದ್ದಾಳೆ.

ಶ್ರೀ ಹರಿಯು ಆಯಾ ಯುಗಧರ್ಮಕ್ಕನುಗುಣವಾಗಿ ಧರ್ಮಜಾಗೃತಿಗಾಗಿ ಅವತಾರವನ್ನೆತ್ತಿ ಬರುವುದನ್ನು ಶ್ರೀಮದ್ ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನೇ ಹೇಳಿಕೊಂಡಿದ್ದಾನೆ.

ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ |
ಅಭ್ಯುಮತ್ಥಾನಯ ಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ||

ಧರ್ಮಕ್ಕೆ ಚ್ಯುತಿ ಉಂಟಾದಾಗಲ್ಲೆಲ್ಲ ಮತ್ತು ಅಧರ್ಮವು ಹೆಚ್ಚಿದಾಗಲೆಲ್ಲ ನಾನು ನನ್ನ ರೂಪವನ್ನು ರೂಪಿಸಿಕೊಳ್ಳುತ್ತೇನೆ. ಸಾಕಾರ ರೂಪದಿಂದ ಎಲ್ಲರಿಗೂ ಗೋಚರಿಸುತ್ತೇನೆ. ಸಾಧು ಸಂತರನ್ನು ಉದ್ಧಾರ ಮಾಡುವುದಕ್ಕಾಗಿಯೂ ದುಷ್ಕರ್ಮಿಗಳನ್ನು ನಾಶಮಾಡುವುದಕ್ಕಾಗಿಯೂ ಮತ್ತು ಧರ್ಮವನ್ನು ಸಂಸ್ಥಾಪನೆ ಮಾಡುವುದಕ್ಕಾಗಿಯೂ ಯುಗ ಯುಗಗಳಲ್ಲಿ ಅವತಾರ ತಾಳುತ್ತೇನೆ ಎಂದು ಅರ್ಜುನನಿಗೆ ಹೇಳೀ ತನ್ನ ಅವತಾರಗಳ ಅಗತ್ಯತೆಯನ್ನು ಸಾರಿದ್ದಾನೆ. ಭಗವಂತನು ತನ್ನ ಮಹಿಮೆಗಳನ್ನು ತೋರಿಸಲು ಇಪ್ಪತ್ತೊಂದು ಅವತಾರಗಳಲ್ಲಿ ಅವತರಿಸಿದ ಸನತ್ಕುಮಾರ, ವರಾಹ, ನಾರದ, ನರ ನಾರಾಯಣ, ಕಪಿಲ, ದತ್ತಾತ್ರೇಯ, ಯಜ್ಞ, ಋಷಭ, ಪೃತು, ಮತ್ಸ್ಯ, ಕೂರ್ಮ, ಧನ್ವಂತರಿ, ಮೋಹಿನಿ, ನರಸಿಂಹ, ವಾಮನ, ಪರಶುರಾಮ, ವೇದವ್ಯಾಸ, ರಾಮ, ಬಲರಾಮ, ಕೃಷ್ಣ, ಬುದ್ಧ, ಕಲ್ಕಿ ಈ ಇಪತ್ತೊಂದು ಅವತಾರಗಳಲ್ಲಿ ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಭಾರ್ಗವ, ರಾಮ, ಕೃಷ್ಣ, ಬುದ್ಧ, ಕಲ್ಕಿ ಈ ದಶಾವತಾರಗಳು ಹೆಚ್ಚಿನ ಪ್ರಾಶಸ್ತ್ಯವನ್ನು ಪಡೆದಿವೆ. ಹೀಗೆ ಪ್ರಮುಖ ಹರಿದಾಸರಲ್ಲಿ ಬರುವ ದಶಾವತಾರದ ವರ್ಣನೆಯನ್ನು ಸ್ಥೂಲವಾಗಿ ಐದು ಭಾಗವಾಗಿ ವಿಂಗಡಿಸಬಹುದು.

೧. ದೇವತಾ ಪ್ರಾರ್ಥನೆಗಳಲ್ಲಿ ಬರುವ ದಶಾವತಾರದ ವರ್ಣನೆ
೨. ವಾತ್ಸಲ್ಯ ಭಾವದ ಕೃತಿಗಳಲ್ಲಿ ,,

೩. ನಿಂದಾಸ್ತುತಿಗಳಲ್ಲಿ ,,

೪. ಸಂಪ್ರದಾಯದ ಹಾಡುಗಳಲ್ಲಿ ,,

೫. ಮಂಗಳದ ಹಾಡುಗಳಲ್ಲಿ ,,

ಶ್ರೀ ಹರಿಯ ದಶಾವತಾರಗಳನ್ನು ಹಿಂದಿನ ದಾಸ ಪರಂಪರೆಯಂತೆ ಹೆಳವನಕಟ್ಟೆ ಗಿರಿಯಮ್ಮ ತನ್ನ ಶೈಲಿಗೆ ಅಳವಡಿಸಿಕೊಂಡಿದ್ದಾಳೆ. ಗಿರಿಯಮ್ಮಳು ತಾನು ನಂಬಿ ನೆಚ್ಚಿದ ಆರಾಧ್ಯ ದೈವ ರಂಗನಾಥನನ್ನು 'ಅವನ ಮಹಿಮಾತಿಶಯಗಳನ್ನು ಎಷ್ಟು ಬಗೆಯಲ್ಲಿ ಬಣ್ಣಿಸಿದರೂ ಆಕೆಗೆ ತೃಪ್ತಿಯಿಲ್ಲ. ಇದಕ್ಕೆ ಆಕೆ ಉಳಿದ ಹರಿದಾಸರಂತೆಯೇ ಹರಿಯ ದಶಾವತಾರದ ಕಥೆಗಳನ್ನೂ ರಾಮಾಯಣ, ಮಹಾಭಾರತಗಳಲ್ಲಿನ ಘಟನೆಗಳನ್ನು ಬಳಸಿಕೊಂಡಿದ್ದಾಳೆ.

ಇಂಥವಗ್ಯಾಂಗೆ ಮನಸೋತೆ ಬಲು
ಪಂಥವಾಡಿದ ಜಗನ್ಮಾತೆ ||ಪ||

ಆವಾಗ ನಾರುವ ಮೈಯ ಬಿಚ್ಚಿ(ಮತ್ಸ್ಯ)
ತೋರಿ ನಲಿಯುವ ಕಾಲು ಕೈಯ್ಯ(ಕೂರ್ಮ)
ಕೋರೆಯ ಮಸೆಯುತ ಕೊಸರಿಕೊಂಡಸುರನ (ವರಾಹ)
ಕರುಳನು ಬಗೆದಂಥ ಅದ್ಭುತ ಮಹಿಮಗೆ (ನರಸಿಂಹ) ||೧||

ಬಡ ಬ್ರಾಹ್ಮಣನಾಗಿ ತಿರಿದ ತನ್ನ (ವಾಮನ)
ಹಡೆದ ತಾಯಿಯ ಶಿರವರಿದ (ಭಾರ್ಗವ)
ಮಡದಿಗಾಗಿ ದೊಡ್ಡಡವಿಯೊಳ್ಮನೆ ಕಟ್ಟಿ (ರಾಮ)
ಬಿಡದೆ ಸ್ತ್ರೀಯರ ಗೋಕುಲದಲ್ಲಿ ಮೆರೆದ (ಕೃಷ್ಣ)
ಬತ್ತಲೆ ನಿಂತಿದ್ದನೀಗ ತೇಜಿ (ಬುದ್ಧ)
ಹತ್ತಿ ಮೆರೆವದೊಂದು ಯೋಗ (ಕಲ್ಕಿ)
ಉತ್ತಮ ಹೆಳವನಕಟ್ಟೆ ಶ್ರೀರಂಗ
ಭಕ್ತವತ್ಸಲ ಸ್ವಾಮಿ ದೇವಕೃಪಾಂಗ[೧೧]

ಗಿರಿಯಮ್ಮನ ಈ ಕೀರ್ತನೆಯಲ್ಲಿ ಹರಿಯ ದಶಾವತಾರದ ವಿವರಗಳು ಬಹು ಸುಂದರವಾಗಿ ಮೂಡಿಬಂದಿದೆ. ಇದೇ ರೀತಿಯ ದಶಾವತಾರದ ವರ್ಣನೆಯ ಕೀರ್ತನೆಯನ್ನು ವಾದಿರಾಜರ ರಚನೆಯ ಒಂದು ನಿಂದಾಸ್ತುತಿಯಲ್ಲಿ ಸಖ್ಯಭಾವ ಮನೋಹರವಾಗಿ ಮೂಡಿಬಂದಿದೆ.

ಹ್ಯಾಂಗೆ ಕೊಟ್ಟನು ಹೆಣ್ಣು ಸಾಗರನು ಈವರೆಗೆ
ಶೃಂಗಾರ ಪುರುಷರು ಬಹುಮಂದಿ ಇರಲು ||ಪ||

ಗುಷ್ಟು ಮೈಯ ಕಂಪು ನಟ್ಟಿದಾತನ ಕಣ್ಣು (ಮತ್ಸ್ಯ)
ಮುಟ್ಟಿ ನೋಡಿದರೆ ಮೈಯತಿ ಕಠಿಣವು (ಕೂರ್ಮ)
ಸೊಟ್ಟು ಮೋರೆಯು ಇವಗೆ ಎಷ್ಟುದ್ದ ಹಲ್ಲುಗಳು (ವರಾಹ)
ಇಷ್ಟು ಘೋರದ ಅಳಿಯ ಎಲ್ಲಿ ದೊರಕಿದನೊ (ನರಸಿಂಹ)
ಕಾಡುವ ಭಿಕ್ಷುಕನು ಮಾಡದುದ ಮಾಡುವನು (ವಾಮನ)
ನೋಡಿದರೆ ತಲೆಯ ಜಟಕಟ್ಟಿಹುದು (ರಾಮ)
ಓಡೋಡುತಲಿ ಕಳುವ ಬೆಡಗು ನುಡಿಗಾರನಿಗೆ (ಕೃಷ್ಣ)
ನೋಡಿ ನೋಡಿ ಹೆಣ್ಣು ಹೇಗೆ ಕೊಟ್ಟನೊ ಇನ್ನು
ಕಂಡವರ ಕೂಡೆಲ್ಲ ಕಾಳಗದ ಕೊಂಡು ಭೂ
ಮಂಡಲದೊಳಗೆ ಉದ್ದಂಡನಿವನು (ಬುದ್ಧ)
ಅಂಡಜವಾಹನಗೆ ಯೋಗ್ಯವಾದ ಹೆಣ್ಣ (ಕಲ್ಕಿ)
ಕಂಡು ಕಂಡೀ ಹಯವದನರಾಯನಿಗೆ[೨]

ವಾದಿರಾಜರು ವಿಷ್ಣು ಲಕ್ಷ್ಮಿಯರ ವಿವಾಹದ ಪ್ರಸ್ತಾಪ ಮಾಡುತ್ತಾ ಸಮುದ್ರರಾಜ ವಿಷ್ಣುವನ್ನು ಹೇಗೆ ಅಳಿಯನನ್ನಾಗಿ ಮಾಡಿಕೊಂಡ ಎಂದು ಆಶ್ಚರ್ಯಪಟ್ಟಿದ್ದಾರೆ. ಏಕೆಂದರೆ ಅವನ ರೂಪ ಲಾವಣ್ಯಗಳನ್ನು ನೋಡಿರೆಂದು ಹೀಗೆ ಬಣ್ಣಿಸಿದ್ದಾರೆ. ಜೊತೆಗೆ ಇಂತಹ ವರನಿಗೆ ಸಾಗರ ಹೇಗೆ ತನ್ನ ಮಗಳನ್ನು ಕೊಟ್ಟನೋ ಎಂಬ ಪಲ್ಲವಿಯನ್ನು ಬೇರೆ ಹಾಡಿದ್ದಾರೆ. ತಿರುಕ, ಕಳ್ಳ, ಜಗಳಗಂಟ, ಉದ್ದಂಡ ಮೊದಲಾದ ನಾಮ ವಿಶೇಷಗಳನ್ನು ಹರಿಗೆ ಆರೋಪಿಸಿದ್ದಾರೆ. ಮೇಲ್ನೋಟಕ್ಕೆ ಕಂಡರೂ ಸೂಕ್ಷ್ಮವಾಗಿ ನೋಡಿದಾಗ ದುಷ್ಟ ಶಿಕ್ಷಕನಾದ ಶ್ರೀಹರಿ ಅಸುರರ ಶಕ್ತಿಗಳ ಮರ್ದನಕ್ಕಾಗಿ ಎತ್ತಿದ ದಶಾವತಾರಗಳನ್ನು ದಾಸರು ಚಿತ್ರಿಸಿರುವುದು ಗೋಚರವಾಗುತ್ತದೆ. ಇನ್ನೊಂದು ಕೀರ್ತನೆಯಲ್ಲಿ ಲಕ್ಷ್ಮೀದೇವಿಯನ್ನು ಛೇಡಿಸುವ ನೆವದಲ್ಲಿ ಹರಿಯ ದಶಾವತಾರಗಳು ಉಗ್ರವಾಗಿ ಅಸಹ್ಯಕರವಾಗಿ ಚಿತ್ರಿಸಿದ್ದಾರೆ. ಲಕ್ಷ್ಮಿಯನ್ನು ಕುರಿತು 'ಹೇಗೆ ಮೆಚ್ಚಿದ ಹೆಂಗಳರನ್ನೆ ಹಲವು ರೂಪ ತಾಳಿದವ' ಎಂದು ಕೇಳಿದ್ದಾರೆ. ಕೋರಹಲ್ಲು, ಸೊಗಡು ಗಂಧ, ಕುಗ್ಗಿದ ಬೆನ್ನು ಇತ್ಯಾದಿಗಳಿಂದ ಮಹಾ ಉಗ್ರರೂಪವಾಗಿ ಚಿತ್ರಿತನಾಗಿದ್ದಾನೆ ಶ್ರೀಹರಿ. ದೇವರೊಂದಿಗೆ ಸಲಿಗೆ ವಹಿಸಿ ಹಾಡುವ ದಾಸರ ನುಡಿಗಳು ಇಂತೆಯೇ ಗಾಂಭೀರ್ಯವನ್ನು ಕಳೆದುಕೊಳ್ಳದೆ ತುಂಬ ಗಹನವಾಗಿದೆ. ಹರಿದಾಸರು ಬೇಕೆನ್ನಿಸಿದರೆ ದೇವರ ಲೀಲೆಗಳನ್ನು ಹೇಗೆ ವಿಡಂಬನೆ ಮಾಡಿ ತಾವೂ ನಕ್ಕು ಪರಮಾತ್ಮನನ್ನೂ ನಗಿಸುವರೆಂಬುದಕ್ಕೆ ಈ ನಿಂದಾಸ್ತುತಿ ಉತ್ತಮವಾದ ಉದಾಹರಣೆ. ಹೀಗೆಯೇ 'ಹೊನ್ನುತಾ ಗುಬ್ಬಿ ಹೊನ್ನ ತಾ' ಎನ್ನುವ ಕೀರ್ತನೆಯಲ್ಲಿ ಹರಿಯ ದಶಾವತಾರದ ಸ್ಮರಣೆ ಸುಂದರವಾಗಿ ಬಂದಿದೆ.

ಹೊನ್ನತಾ ಗುಬ್ಬಿ ಹೊನ್ನ ತಾ
ಚಿನ್ನ ಗೋಪಾಲನ ಚೆಲುವ ಕೃಷ್ಣನ ಕೈಗೆ ||ಪ||

ಆಗಮವನು ತಂದು ಅಜಗಿತ್ತ ಕೈಗೆ (ಮತ್ಸ್ಯ)
ಸಾಗರವನೊತ್ತಿಕ್ಕಿ ಸುದೆಯಿತ್ತ ಕೈಗೆ (ಕೂರ್ಮ)
ತೂಗಿ ನಡೆವ ಸ್ಥೂಲಕಾಯನ ಕೈಗೆ (ವರಾಹ)
ನಾಗಶಯನ ನರಸಿಂಹನ ಕೈಗೆ (ನರಸಿಂಹ)[೩೩] ||೧||

ಎಷ್ಟು ವಿಧದಲ್ಲಿ ಸ್ತುತಿಸಿದರೂ ಭಗವಂತ ಒಲಿಯಲಿಲ್ಲವೆಂದು ದಾಸರಿಗೆ ಮುನಿಸು ಹಾಗೆ ಮುನಿಸಿಕೊಂಡ ಪುರಂದರದಾಸರು ಲಕ್ಷ್ಮೀದೇವಿಯ ಎದುರಿನಲ್ಲಿ ಹರಿಯನ್ನು ಅಲ್ಲಗೆಳೆಯುತ್ತಾರೆ. ಅವನು ಬಾರಿಗುಣವಂತನೆಂದು ಭ್ರಮಿಸಬೇಡ ಎನ್ನುತ್ತಾರೆ.

ಮನಸಿಟ್ಟು ಭ್ರಮಿಸುವರೇನ ಘನ
ಗುಣವಂತನೇನವ ಜಾಣೆ
ಅನುದಿನ ಗೊಲ್ಲಪಳ್ಳಿಗೆ ಕಳ್ಳನೆನಿಸಿದ
ದನಗಾಹಿ ನಿನಗೇನ ಮರುಳು ಮಾಡಿದನೇ
(ಮತ್ಸ್ಯ)ಜಲವಾಸಿ ಮುಖವೊಳಸೆಳೆವ ಇವ(ಕೂರ್ಮ)
(ವರಾಹ)ನೆಲವ ಕೆದರಿ ಕಂಬದಿ ಬಾಯ್ ತೆಗೆವ(ನರಸಿಂಹ)
(ವಾಮನ)ಇಳೆಯ ನಳೆದ ಕೊರಳಗೊಯ್ಕ (ಭಾರ್ಗವ) ವನವಾಸಿಯು (ರಾಮ)
ಕೊಳಲಪಿಡಿದು ಕುರು ಬಲವನಳಿದಾತಗೆ ||೧||

ಬತ್ತಲಿರುವ ಶ್ರೀ ನಿರ್ವಾಣಿ ತೇಜಿ(ಬುದ್ಧ)
ಹತ್ತಿ ಪಿಡಿದ ಖಡ್ಗಪಾಣಿ(ಕಲ್ಕಿ)

ಎಂದು ಅವನ ದಶಾವತಾರಗಳನ್ನು ಲಕ್ಷ್ಮಿಯೆದುರು ಹೇಳುವುದರ ಮೂಲಕ ಮೂದಲಿಸಿದ್ದಾಳೆ.

ದುಷ್ಟ ಶಿಕ್ಷಣ, ಶಿಷ್ಟ ರಕ್ಷಣಾರ್ಥವಾಗಿ ವಿಷ್ಣು ತಾಳಿದ ದಶಾವತಾರಗಳನ್ನು ಎಲ್ಲ ಹರಿದಾಸರೂ ಅನಂತ ವಿಧವಾಗಿ ವರ್ಣಿಸಿರುವುದುಂಟು. ಹೆಳವನಕಟ್ಟೆ ಗಿರಿಯಮ್ಮನ ಕೀರ್ತನ ಸಮುದಾಯದಲ್ಲಿಯೂ ಈ ಪ್ರಸ್ತಾಪ ಮೇಲಿಂದ ಮೇಲೆ ಬಂದಿರುತ್ತದೆ. ದಾಸರು ಪರಮಾತ್ಮನ ಈ ಅವತಾರ ಲೀಲೆಗಳನ್ನು ಒಂದೇ ಕೀರ್ತನೆಯ ಮೂರು ನುಡಿಗಳಲ್ಲಿ ಪುನಃ ಪುನಃ ಹೇಳಿ ತಣಿವಿಲ್ಲವೆಂಬಂತೆ ಹಾಡಿದ್ದಾರೆ

ಏನ ಹೇಳಲಿ ಈತನಿರವ ಭಕ್ತರ ಮನಾ
ಧೀನ ಹೆಳವನಕಟ್ಟೆ ರಂಗ ದೇವೋತ್ತುಂಗನ ||ಪ||

ಹೊಳೆವ ಮೈಯ್ಯವ ಕಲ್ಲಹೊರುವ ಕಡಲೊಳಾಡುವ (ಮತ್ಸ್ಯ, ಕೂರ್ಮ)
ತಿಳಿಯ ಎರಡಂಗನೆ ತಿರಿವ ಪರಶುವಿಡಿವ ಕೋಡಗ (ವಾಮನ, ಪರಶುರಾಮ)
ಕುಲವನಾಳುವ ಗೋವಕಾಯ್ವ ಕಾಂತೆಯ ವ್ರತವ (ರಾಮ, ಕೃಷ್ಣ)
ನಳಿವ ಅಶ್ವವನೇರಿ ಮೆರವನ್ಯಾರೆ ಅಮ್ಮಯ್ಯ (ಬುದ್ಧ, ಕಲ್ಕಿ)
ಜಲವಪೊಕ್ಕು ದೈತ್ಯನ ಸಂಹರಿಸಿ (ಮತ್ಸ್ಯ)
ಕಲಕಿ ಸಮುದ್ರವ ಕಾರಣಕಾಗಿ (ಕೂರ್ಮ)
ನೆಲಗಳ್ಳನ ಮರ್ದಿಸಿ ಹಿರಣ್ಯಾಕ್ಷನ (ವರಾಹ)
ಚಲುವ ಚೆಳ್ಳುಗುರಿಂದೊಡಲನೆ ಬಗಿದು (ನರಸಿಂಹ)
ಸುಲಭವಾಗಿ ಶುಕ್ರನ ಕಣ್ಣಿರಿದು (ವಾಮನ)
ಬಲುಸಾಹಸದಿ ಕ್ಷತ್ರಿಯರನು ಗೆಲಿದು (ಭಾರ್ಗವ)
ಶಿಲೆಯನೊದ್ದು ನಿಜಸತಿಯಳ ಮಾಡಿ (ರಾಮ)
ಗೆಲವ ತೋರಿ ಗೋಪಿಗೆ ಸುತನಾಗಿ (ಕೃಷ್ಣ)
ನಿಲುವ ದಿಗಂಬರಧರ ರಾವುತನಾಗಿ (ಬುದ್ಧ)
ಇಳೆಯೊಳು ಚರಿಸುವ ಈತಕಾಣೆ ಅಮ್ಮಯ್ಯ (ಕಲ್ಕಿ)[೨೪] ||೧||

ಒಂದೊಂದು ಸಾಲುಗಳಲ್ಲಿ ದಶಾವತಾರಗಳ ಚಿತ್ರಣವಿದೆ. ಇದೇ ರೀತಿಯಲ್ಲಿ 'ಇಂಥವಗ್ಯಾಂಗೆ ಮನಸೋತೆಬಲು ಪಂಥವಾಡಿದ ಜಗನ್ಮಾತೆ' 'ಪಾಹಿ ಪರಮಾನಂದ ಪಾಹಿ ಮುನಿಜನ ವಂದ್ಯ' 'ಮೂರು ಜಗವ ಕುಣಿಸುವಂಥ ಗಾರುಡಿಗ ಇವ ದಾರಕ್ಕ ಇತ್ಯಾದಿಡೆಗಳಲ್ಲೂ ದಶಾವತಾರದ ಸ್ಮರಣೆ ವೈವಿಧ್ಯ ಪೂರ್ಣವಾಗಿ ಬಂದಿರುವುದನ್ನು ಗಮನಿಸಬಹುದು. ಒಂದೇ ಹಾಡು ಅಥವಾ ಒಂದೇ ನುಡಿಯಲ್ಲಿ ಹತ್ತೂ ಅವತಾರಗಳ ವರ್ಣನೆ ಬಂದಂತೆಯೇ ಒಂದೊಂದು ಅವತಾರದ ಸ್ತುತಿ ಪ್ರತ್ಯೇಕವಾಗಿ ಕೆಲವೆಡೆ ಬಂದಿದೆ. ಗಿರಿಯಮ್ಮನ ಹಾಡುಗಳಲ್ಲಿ ಕೃಷ್ಣಭಕ್ತಿಯು ಮಡುವುಗಟ್ಟಿದೆ. ದಶಾವತಾರಗಳಲ್ಲಿ ತನ್ನ ಬೇರೆ ಬೇರೆ ಹಾಡುಗಳನ್ನು ವಿಭಿನ್ನ ಸಂದರ್ಭದಲ್ಲಿ ಹೇಳಿದ್ದಾಳೆ. ವಸ್ತು ಒಂದೇಯಾಗಿದ್ದರೂ ಅವನ್ನು ಹೇಳುವ ರೀತಿ ಸಂದರ್ಭ ಒಂದಕ್ಕಿಂತ ಒಂದು ವಿಭಿನ್ನವಾಗಿದೆ. ದಶಾವತಾರದಂತೆಯೇ ರಾಮಾಯಣ, ಮಹಾಭಾರತ, ಭಾಗವತಗಳಲ್ಲಿನ ಘಟನೆಗಳನ್ನು ಸಂದರ್ಭೋಚಿತವಾಗಿ ಗಿರಿಯಮ್ಮ ಬಳಿಸಿಕೊಂಡಿದ್ದಾಳೆ. 'ಶ್ರೀ ನರಸಿಂಹ ದೇವ ಶರಣ ರಕ್ಷಕನೆ' ಎಂಬ ಹಾಡಿನಲ್ಲಿ ವಿಷ್ಣುವಿನ ನಾಲ್ಕನೇ ಅವತಾರವಾದ ನರಸಿಂಹಾವತಾರದ ಸ್ತುತಿಯನ್ನು ಮತ್ತು 'ರಾಮ ಶ್ರೀರಘುನಂದನ ಶರಣು' ಎಂಬ ಹಾಡಿನಲ್ಲಿ ಏಳನೇ ಅವತಾರವಾದ ರಾಮಾವತಾರದ ಸ್ತುತಿಯನ್ನು ಕುರಿತು ವರ್ಣನೆ ಮಾಡಿದ್ದಾಳೆ.

ಶ್ರೀ ನರಸಿಂಹದೇವ ಶರಣ ರಕ್ಷಕನೆ
ದಾನವಾರಿ ಸುಭಕ್ತಾಧೀನ ಮೂರುತಿಯೆ ||ಪ||

ಹರಿ ತನ್ನ ದೈವವೆಂದು ಸ್ಮರಿಸುತಿರಲು ಬಾಲ
ನಿರವ ಕಾಣದೆ ದುಷ್ಟ ಹಿರಣ್ಯಕಾಸುರನು
ಪರಿ ಪರಿ ಹಿಂಸಿಸೆ ಮೊರೆದು ಕೋಪದೊಳೆದ್ದು
ತರಳಗೊಲಿದೆ ಬಹು ಕರುಣಾನಿಧಿಯೆ ||೧||

ಛಿಟಿ ಛಿಟಲೆಂದಾರ್ಭಟಿಸಿ ಕಂಬವು ಸಿಡಿಯೆ
ಕಟಿ ಕಟಿ ಮಸಿದಗ್ನಿ ನಿಟ್ಟುಸಿರಿನಿಂ ಹಲ್ಗಳ
ಕಟಿ ಕಟಿ ಕಡಿವು ತುಬ್ಬಸ ತೋರಿನಿಂದ
ಕಠಿಣ ಮೂರುತಿಯೆ ||೨||

ಕೊಬ್ಬಿದ ಹಿರಣ್ಯಕನುಬ್ಬ ಮುರಿವೆನೆಂದು
ಹೆಬ್ಬಾಗಿಲೊಳು ಸಂಜೆ ಮಬ್ಬಿನಲಿ ಧನುಜನ
ಗರ್ಭವ ನಖದಿಂದ ಇಬ್ಬಾಗವನು ಮಾಡಿ
ಹಬ್ಬಿದ ಕರುಳನು ಹರುಷದಿ ಧರಿಸಿದೆ ||೩||

ಭೀತರಾದ ಸುರವ್ರಾತ ಪ್ರಾರ್ಥಿಸೆ ಬಹು
ಪ್ರೀತಿಯ ಭಕ್ತನ ಮಾತನು ಮನ್ನಿಸಿ ಅತಿ
ಶಾಂತವಾಗಿ ಸಂತೋಷಪಡಿಸಿದ ಅ
ನಾಥ ರಕ್ಷಕನೆ ಕಾತರವಳಿದೆ ||೪||

ಖಳನ ಮರ್ದಿಸಿ ಬಹು ಇಳೆಯ ಪಾಲಿಸಿದೆ
ನಳಿನ ಸಂಭವಗೆ ಬಲು ಹರುಷವನಿತ್ತೆ
ಹೆಳವನಕಟ್ಟೆ ಶ್ರೀ ರಂಗ ದಾಗಿನಕಟ್ಟೆ
ನೆಲವಾಸ ಕಂಬದ ನರಸಿಂಹದೇವ[೩೫] ||೫||

ನರಸಿಂಹಾವತಾರ ಇದು ಹರಿಯ ನಾಲ್ಕನೆ ಅವತಾರ ಸಿಂಹದ ಮುಖ ಮನುಷ್ಯನ ಮೈ ಭಯಂಕರ ರಾಕ್ಷಸನಾದ ಹಿರಣ್ಯಕಶಿಪು ತನ್ನ ಮಗ ವಿಷ್ಣು ಭಕ್ತನಾದ ಪ್ರಹ್ಲಾದನನ್ನು ಬಗೆ ಬಗೆಯಾಗಿ ಹಿಂಸಿಸುತ್ತಿದ್ದಾಗ ತನ್ನ ಭಕ್ತನಾದ ಪ್ರಹ್ಲದನ ಕರೆಗೆ ಓಗೊಟ್ಟು ವಿಷ್ಣು ಕಂಬದಿಂದ ನರಸಿಂಹನಾಗಿ ಮೂಡಿ ಬಂದು ಪ್ರಹ್ಲಾದನ ತಂದೆಯಾದ ರಾಕ್ಷಸ ಹಿರಣ್ಯಕಶಿಪನನ್ನು ಕೊಲ್ಲುತ್ತಾನೆ.

ದಾಸರು ತಮ್ಮ ಕೃತಿಗಳಲ್ಲಿ ಶ್ರೀ ಹರಿಯನ್ನು ಸ್ತುತಿಸಿ ಅವನ ಕಾರುಣ್ಯಕ್ಕೆ ಪಾತ್ರರಾಗಲು ವಯಸ್ಸು ಕಾರಣವಲ್ಲ ಎಂದು ಹೇಳುತ್ತ ಬಾಲ್ಯದಲ್ಲಿಯೇ ಶ್ರೀಹರಿಯನ್ನು ಸಾಕ್ಷಾತ್ಕಾರ ಮಾಡಿಕಂಡ ಭಕ್ತ

ಪ್ರಹ್ಲಾದನ ದೃಷ್ಟಾಂತವನ್ನು ಪ್ರಸ್ತಾಪಿಸಿದ್ದಾರೆ. ಹಾಗೆಯೇ ಹೆಳವನಕಟ್ಟೆ ಗಿರಿಯಮ್ಮ ಹಿಂದಿನ ಹರಿದಾಸರಂತೆ ತನ್ನ ತೀರ್ಥ ಕ್ಷೇತ್ರಗಳ ಪರ್ಯಾಟನೆಯ ಸಂದರ್ಭದಲ್ಲಿ 'ದಾಗಿನಕಟ್ಟೆ' ನರಸಿಂಹದೇವರನ್ನು ಕುರಿತು ಸ್ತುತಿಸಿದ್ದಾಳೆ.ಭಾಗವತ ಸಪ್ತಮಸ್ಕಂದದ ಅನೇ ಅಧ್ಯಾಯದಲ್ಲಿಯ ಕೆಲವು ಶ್ಲೋಕಗಳಲ್ಲಿ ಬರುವ ನರಸಿಂಹ ಪ್ರಾದುರ್ಭಾವ ವರ್ಣನೆಯನ್ನು ಗಿರಿಯಮ್ಮ ಇಲ್ಲಿ ಐದು ನುಡಿಗಳಲ್ಲಿ ಸಂಗ್ರಹಿಸಿದ್ದಾಳೆ. ದಾಸರ ಶಬ್ದ ಪ್ರಯೋಗದ ಜಾಣ್ಮೆಗೆ ಅತ್ಯುತ್ತಮ. ನಿದರ್ಶನವೆಂದು ಈ ಮೇಲಿನ ಸುದೀರ್ಘವಾದ ಕೃತಿಯ ಮೊದಲಿನ ಮೂರು ನುಡಿಗಳಲ್ಲಿ ಪ್ರಹ್ಲಾದನ ಆರ್ತತೆ, ಭಕ್ತವತ್ಸಲನಾದ ಶ್ರೀಹರಿಯ ಪ್ರಾದುರ್ಭಾವ ಹಾಗೂ ದೈತ್ಯ ಸಂಹಾರ ವರ್ಣಿಸಲಾಗಿದೆ. ನಾಲ್ಕನೆ ನುಡಿಯಲ್ಲಿ ಹರ, ಬ್ರಹ್ಮದಿಗಳ ಸ್ತುತಿ ಪ್ರಹ್ಲಾದನಿಂದ ನರಸಿಂಹ ಕೊಟ್ಟ ಅಭಯ, ವರ ಮೊದಲಾದ ವಿಷಯಗಳಿಗೆ. ಕೊನೆಯ ಈ ಕೃತಿಯಲ್ಲಿ ಪ್ರಹ್ಲಾದ ಚರಿತ್ರೆಯನ್ನು ಸಮಗ್ರವಾಗಿರದೆ ಸಂಗ್ರಹವಾಗಿ ಚಿತ್ರಿಸಿದ್ದಾಳೆ ಎನ್ನಬಹುದು. ಪ್ರಹ್ಲಾದನ ಸಚ್ಚಾರಿತ್ರ್ಯಕ್ಕೆ ಮೊದಲನೇ ನುಡಿಯ ಕೊನೆಯಲ್ಲಿ 'ತರಳಗೋಲಿದೆ ಬಹು ಕರುಣಾನಿಧಿಯೆ' ಎಂಬ ಪದ ಪ್ರಯೋಗವನ್ನು ಮಾಡಿದ್ದಾಳೆ. ಛಿಟಿ ಛಿಟಿಲೆಂದಾರ್ಭಟಿಸಿ ಕಂಬವು ಸಿಡಿಯೆ... ಕಠಿಣ ಮೂರುತಿಯಾಗಿ ಬಂದು ಕರುಳಿನ ಮಾಲೆ ಧರಿಸಿದ್ದು, ಮೊದಲನೆಯ ನುಡಿಯ ಕರುಣಾನಿಧಿಯಾಗಿ ಎರಡನೇ ನುಡಿಯಲ್ಲಿ ಕಠಿಣ ಮೂರುತಿ ಪದಗಳಿಂದ ನುಡಿಯು ಎಷ್ಟೊಂದು ಭಯಂಕರ ಸನ್ನಿವೇಶ ಚಿತ್ರಿಸುತ್ತಿದ್ದರೂ ಆ ಭಯಂಕರತೆ ಕೇವಲ ದೈತ್ಯನಾದ ಹಿರಣ್ಯಕಶಿಪುವಿನ ಸಂಹಾರಕ್ಕಾಗಿ ಮಾತ್ರ ಅಲ್ಲಿರುವ ಬಾಲಕ ಪ್ರಹ್ಲಾದ ಮತ್ತು ಇತರ ದೇವತೆಗಳಿಗೆ ಮತ್ತು ಭಕ್ತರಿಗೆ ವರದಾನವಾಗಿದ್ದಾನೆ.

ಪುರಂದರದಾಸರು ಭಾಗವತ ಸಪ್ತಮ ಸ್ಕಂದದಲ್ಲಿ ಮೂರನೇ ಅಧ್ಯಾಯದಿಂದ ಹತ್ತನೇ ಅಧ್ಯಾಯದವರೆಗೆ ನಿರೂಪಿಸಿದ ಪ್ರಹ್ಲಾದ ಚರಿತ್ರೆ ಹಾಗೂ ನರಸಿಂಹ ಅವತಾರದ ಪ್ರಾದುರ್ಭಾವವನ್ನು ಆಕಾರವಾಗಿಟ್ಟುಕೊಂಡು ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಅದರಲ್ಲಿ ಪ್ರಹ್ಲಾದ ಚರಿತ್ರೆಯನ್ನು ಮತ್ತು ನರಸಿಂಹಾವತಾರವನ್ನು ಬಣ್ಣಿಸುವ ಅವರ ಕೃತಿಗಳು ಹೇರಳವಾಗಿವೆ. ಪುರಂದರ ದಾಸರು 'ಕರುಣಿಸೋ ರಂಗ ಕರುಣಿಸೋ' ಎಂದು ಭಗವಂತನ ಅಪಾರ ಕರುಣೆಯನ್ನು ಯಾಚಿಸುತ್ತಾ ಭಕ್ತಿ ಫಲನರಿಯೆ ಪ್ರಹ್ಲಾದನಂತೆ ಎಂದು ತಂದೆಯೊಡನೆಯೇ ವಾದಿಸಿ ಛಲದಿಂದ ಭಗವಂತನನ್ನು ಕಂಬದಲ್ಲಿ ಮೂಡಿ ಬರುವಂತೆ ಮಾಡಿದ ಪ್ರಹ್ಲಾದನಂತೆ ತಾವು ಸಮರ್ಥರಲ್ಲವೆಂದು ನಿವೇದಿಸಿಕೊಂಡು ತಮ್ಮ ಅಸಹಾಯಕತೆಯನ್ನು ತೋಡಿಕೊಂಡಿದ್ದಾರೆ. 'ಎನ್ನ ರಕ್ಷಿಸೋ ನೀನು ದೇವರದೇವ' ಎಂದು ಪ್ರಾರ್ಥಿಸುತ್ತಾ

> ಬಾಲನ ಮೊರೆಯನು ಕೇಳಿ ಕೃಪೆಯಿಂದ
> ಪಾಲಸಿದೆಯೊ ನರಸಿಂಹ ರೂಪದಿಂದ

ಎಂದು ಒಂದು ಕೃತಿಯಲ್ಲಿ ಪ್ರಹ್ಲಾದನ ಮೊರೆಯನ್ನು ಕೇಳಿ ನರಸಿಂಹ ರೂಪದಿಂದ ಕಂಬದಲ್ಲಿ ಮೂಡಿ ಬಂದು ರಕ್ಷಿಸಿದುದನ್ನು ನೆನೆದು ಅಂತೆಯೇ ತಮ್ಮನ್ನು ರಕ್ಷಿಸಬೇಕೆಂದು ಬೇಡಿಕೊಳ್ಳುತ್ತಾರೆ. ಇನ್ನೊಂದರಲ್ಲಿ

ಹಿರಣ್ಯಕಶಿಪುವನು ಸೀಳಿದೆ ಅವನ
ಕರುಳನು ಕೊರಳೊಳು ಹಾಕಿದೆ
ದುರುಳ ಬುದ್ಧಿಯ ತಳೆದ ದೈತ್ಯಾಧಮನ ಕೊಂದು
ಕರುಣದಿಂದಂದಲಿ ಕಂದಗೊಲಿದ ಗೋವಿಂದ

ಎಂದು ಶ್ರೀಹರಿ ನರಸಿಂಹಾವತಾರದಿಂದ ಬಂದು ಹಿರಣ್ಯಕಶಿಪುವನ್ನು ಸೀಳಿ ಪ್ರಹ್ಲಾದನನ್ನು ಒಲಿದನೆಂದಿದ್ದಾರೆ. ಮತ್ತೊಮ್ಮೆ 'ಕಂಡು ಕಂಡು ನೀ ಎನ್ನ ಕೈ ಬಿಡುವರೆ ಕೃಷ್ಣ' ಎಂದು ಆರ್ತರಾಗಿ ಕೇಳುತ್ತಾ 'ಪ್ರಹ್ಲಾದಗೊಲಿದ ನರಹರಿಯೆ' ಎಂದು ಕೇಳುವಲ್ಲಿ ತರಳನಾದ ಪ್ರಹ್ಲಾದನಿಗೆ ಒಲಿದಂತಹ ಹರಿ ತಮ್ಮನೂ ಒಲಿಯಬೇಕೆಂಬ ಅವರ ಆಸೆ ಅಭಿವ್ಯಕ್ತವಾಗಿದೆ.

ಹರಿನಾರಾಯಣನೆಂದು ಪ್ರಹ್ಲಾದ ಬರೆಯಲು
ದುರುಳ ದಾನವ ಅವನಿಗೆ ಮುನಿದು
ಕರೆ ನಿನ್ನ ಒಡೆಯನ ಎಂದು ಗರ್ಜಿಸಿ ನರ
ಹರ ಬಂದು ಒಡನೆಯೆ ಕಾಯ್ದನೆಂಬುದ ಕೇಳಿ

ತಾವುಯ ನಂಬಿದ ಹರಿ ಭಕ್ತ ವತ್ಸಲನೆಂಬುದನ್ನು ಪ್ರಹ್ಲಾದನ ಪ್ರಸಂಗದಿಂದ ತಿಳಿಸಿದ್ದಾರೆ. ಪ್ರಹ್ಲಾದನಿಗೊಲಿದು ನರಸಿಂಹ ಬಂದಂತೆ ಅವರಿಗೂ ಶ್ರೀಹರಿ ಒಲಿದು ಬರುವಂತೆ ತಮ್ಮ ಇನ್ನೊಂದು ಕೀರ್ತನೆಯಲ್ಲಿ 'ಜಯ ಮಂಗಳಂ ನಿತ್ಯ ಶುಭ ಮಂಗಳಂ' ಎಂದು ಶ್ರೀಹರಿಗೆ ಮಂಗಳವನ್ನು ಹಾಡುವಾಗ ಕಂದ ಪ್ರಹ್ಲಾದನನ್ನು ಕಾಯ್ದ ನರಸಿಂಹಗೆ ಮಂಗಳವೆನ್ನುತ್ತಾರೆ. ಹರಿಗೆ ಸುಪ್ರಭಾತವನ್ನು ಹಾಡುವಲ್ಲಿಯೂ 'ದೇವ ಪ್ರಹ್ಲಾದ ಬಲಿ ಮುಖ್ಯರನು ಕಾಯ್ದವನೆ' ಎಂದು ಶ್ರೀ ಹರಿಯನ್ನು ಸಂಬೋಧಿಸಿ ಉಪ್ಪವಡಿಸಯ್ಯ ಹರಿಯೆ ಎಂದು ಪರಾಕು ಹೇಳಿದ್ದಾರೆ.

ತರಳನ ಮೊರೆ ಕೇಳಿ ತವಕದಿಂದಲಿ ಬಂದ
ದುರುಳನ ಕರುಳ ತನ್ನ ಕೊರಳಲಿಧರಿಸಿದ

ಹರಿ ಪ್ರಹ್ಲಾದನ ಮೊರೆ ಕೇಳಿ ತವಕದಿಂದ ಬಂದು ದುರುಳನಾದ ಹಿರಣ್ಯಕಶಿಪುವನ್ನು ಕೊಂದ ಪ್ರಸಂಗವನ್ನು ಸ್ಮರಿಸುತ್ತಾರೆ. ಮತ್ತೊಂದು ಕೀರ್ತನೆಯಲ್ಲಿ ಬಾಲಕ ಕೃಷ್ಣನನ್ನು ಎತ್ತಿ ತೋಳಾಟವನ್ನಾಡಿಸುತ್ತಾ ನರಸಿಂಹಾವತಾರವನ್ನೂ ಪ್ರಹ್ಲಾದನನ್ನು ಕಾಯ್ದ ಹಿರಣ್ಯಕನನ್ನು ಸೀಳಿ ಹಾಕಿದ ಕೃತ್ಯವನ್ನೂ ಕುರಿತು ಹೇಳುತ್ತಾರೆ. ಅಂತೆಯೇ ಈ ಚಿನ್ಮಯನಿಗೆ ಮಂಗಳವನನ್ನು ಹಾಡುತ್ತಾ 'ಕಂದ ಪ್ರಹ್ಲಾದನ ಕಾಯ್ದ ದೇವನಿಗೆ' ಜಯ ಮಂಗಳವೆನ್ನುತ್ತಾರೆ. ಮತ್ತೊಮ್ಮೆ ನಾರಾಯಣನನ್ನು ಧ್ಯಾನಿಸುತ್ತಾ

ನರಸಿಂಹ ರೂಪವ ತಾಳಿ ಬಂದೆ
ಕರೆಯೆ ಕಂಬದಿ ಕಂದನ ಮಾತ ಕೇಳಿ

ದುರುಳ ರಕ್ಕಸನನು ಸೀಳಿ ನಿನ್ನ
ಕೊರಳಲ ಧರಿಸಿದೆ ಕರುಳಿನ ಮಾಲೆ

ಎಂದು ಸ್ತುತಿಸಿದ್ದಾರೆ. ಕಂದ ಪ್ರಹ್ಲಾದನ ನುಡಿಕೇಳಿ ಕಂಬದಿಂದ ಬಂದು ರಾಕ್ಷಸ ಮರ್ಧನ ಮಾಡಿದ ಆ ಮಹಾಮಹಿಮನ ಮಹಾತ್ಮ್ಯಾರ್ಯವನ್ನು ಸ್ಮರಿಸಿದ್ದಾರೆ. ಗೋಪಾಲದಾಸರು ಪಾಲಿಸೆನ್ನನು ದೇವ ಭುವನತ್ರಯುಗಳ ಲೀಲೆಯಿಂದಲಿ ಎಂದು ಪ್ರಾರ್ಥಿಸುತ್ತಾ ಪ್ರಹ್ಲಾದನ ಪ್ರಸ್ತಾಪವನ್ನು ಕೊಂಚ ವಿಸ್ತಾರವಾಗಿಯೇ ಮಾಡಿದ್ದಾರೆ.

ಹಾಟಕ ಕಶಿಪು ಸುತನ ಪಿಡಿದು ಧೂ
ರ್ಜಟಿಯ ಪರವೆಂತೆಂದು ಬಂದು
...................

ನೃಸಿಂಹಾವತಾರ ಹರಿಯನ್ನು ಎದುರಿಗೆ ಕಂಡಂತೆ ಭಾಸವಾಗುತ್ತದೆ. ದಾಸರ ಈ ಚಿತ್ರಣ ಜೊತೆಗೆ ಕಟ ಕಟನೆ ಹಲ್ಲು ಕಡಿದ ಸದ್ದು ಛಟಛಟಯೆಂದು ಕಂಬ ಸೀಳಿದ ಸದ್ದು ಎಲ್ಲವೂ ಕಿವಿಯಲ್ಲಿ ಕೇಳುವಂತೆ ಭಾಸವಾಗುತ್ತದೆ. ತಮ್ಮ ಇನ್ನೊಂದು ಸುಳಾದಿಯಲ್ಲಿ 'ಸಕಲದಲಿ ನೀನು ವ್ಯಾಪಕನೆಂಬುದು ಭಕುತ ಪ್ರಹ್ಲಾದನಿರವ ತೋರಿಸಿದನು' ಎಂಬುದಾಗಿ ಪ್ರಹ್ಲಾದ ಕಂಬದಲ್ಲಿಯೂ ಹರಿಯನ್ನು ತೋರಿಸಿ ಹರಿಯು ಸರ್ವ ವ್ಯಾಪಕತ್ವವನ್ನು ಸ್ಪಷ್ಟಪಡಿಸಿದನೆನ್ನುತ್ತಾರೆ.

ಶ್ರೀ ಹರಿಯ ಸಾನಿಧ್ಯ ಸುಖ ಸುಲಭವಾಗಿ ಸಿಗುವಂತಹುದು ಆ ಭಗವಂತನೇ ಏಕೈಕ ರಕ್ಷಕ. ಅವನು ಭಕ್ತರೋದ್ಧಾರಕ, ನಂಬಿದವರನ್ನು ಕೈಬಿಡುವುದಿಲ್ಲ. ಹರಿಯೇ ಸರ್ವೋತ್ತಮ ದುಷ್ಟಶಿಕ್ಷಕ, ಶಿಷ್ಟ ರಕ್ಷಕ ದಾಸರ ಈ ಎಲ್ಲಾ ನಂಬಿಕೆಗಳೂ ಪ್ರಹ್ಲಾದನ ಪ್ರಸಂಗ ಚಿತ್ರಣದಿಂದ ಅಭಿವ್ಯಕ್ತವಾಗಿದೆ.

ರಾಮ ಶ್ರೀ ರಘುನಂದನ ಶರಣು ಸಾರ್ವ
ಭೌಮ ಭೂಸುರ ವಂದ್ಯ ||ಪ||

ಸೋಮ ಶೇಖರ ಮಿತ್ರ ಕಾಮಿತ ಫಲದಾತ್ರ
ಕಾಮದೇನು ವಿಶ್ವಭೀಮ ಸನ್ನುತ ಸೀತಾ
...................
ಪಾಪ ರಹಿತ ಪಾವನ ಚರಿತ ಅಹಲ್ಯಾ
ಶಾಪ ಹರಣ ದಿವ್ಯರೂಪ ರಮಾರಮಣ[೬೬]

ರಾಮಾಯಣ, ಮಹಾಭಾರತ ಹಾಗೂ ಭಾಗವತಗಳು ಭಾರತೀಯ ಸಂಸ್ಕೃತಿಯ ಹಿಂದೂ ಧರ್ಮದ ಆಧಾರ ಗ್ರಂಥಗಳಾಗಿವೆ. ಭಗವದ್ಭಕ್ತಿ, ಪ್ರಚಾರ, ಹರಿಸ್ತುತಿ ಹರಿಪಾದ ಮಹಿಮಾ ಸಂಕೀರ್ತನೆ ಭಕ್ತಿ ತತ್ವ ನಿರೂಪಣೆಗೆ ಮಹಾಭಾರತದಲ್ಲಿ ಶ್ರೀಕೃಷ್ಣಾವತಾರದ ರಾಯಭಾರವು ಒಂದು ಪ್ರಮುಖ

ಘಟ್ಟವಾದುದರಿಂದ ಮಹಾಭಾರತವನ್ನು ಮತ್ತು ವಿಷ್ಣುವಿನ ಪೂರ್ಣ ಹಾಗೂ ಪ್ರಮುಖ ಅವತಾರ ಕಥೆಯಾದ ರಾಮಾಯಣವನ್ನು ಭಾಗವತದಲ್ಲಿ ಸಂಗ್ರಹವಾಗಿ ಹೇಳಲಾಗಿದೆ.

ರಾಮಾಯಣವನ್ನು ಭಾಗವತದ ಒಂಭತ್ತನೇ ಸ್ಕಂದದ ಮೂರು ಅಧ್ಯಾಯಗಳಲ್ಲಿ ಸಂಗ್ರಹವಾಗಿ ವರ್ಣಿಸಲಾಗಿದೆ. ರಾಮಾಯಣದ ಎಲ್ಲ ಕಾಂಡಗಳಿಗಿಂತಲೂ ಪ್ರಮಾಣದಲ್ಲಿ ದೊಡ್ಡದಾದ ಹಾಗೂ ವಸ್ತುವಿನ ದೃಷ್ಟಿಯಿಂದ ಪ್ರಮುಖವಾದ ಸುಂದರ ಕಾಂಡವನ್ನು ಮತ್ತು ಅದರ ಮುಖ್ಯ ನಾಯಕನಾದ ಹನುಮಂತನನ್ನು ಭಾಗವತದಲ್ಲಿ ಪಕ್ಷಿನೋಟದಿಂದ ವಿವರಿಸಲಾಗಿದೆ. ಶ್ರೀ ಪುರಂದರದಾಸರು ರಾಮಾಯಣದ ಹಲವಾರು ಸನ್ನಿವೇಶಗಳನ್ನು ತಮ್ಮ ಕೃತಿಗಳಲ್ಲಿ ಹೇರಳವಾಗಿ ಬಳಸಿದ್ದಾರೆ. ಬಾಲಕಾಂಡದಿಂದ ಯುದ್ಧ ಕಾಂಡದವರೆಗೆ ಆರು ಕಾಂಡಗಳಲ್ಲಿ ವಿಸ್ತಾರವಾಗಿರುವ ರಾಮಾಯಣದ ಕಥೆಯನ್ನು ದಾಸರು ತಮ್ಮಭಕ್ತಿ ಪ್ರತಿಪಾದನೆಯ ಸಾಧನವಾಗಿ ಎಲ್ಲ ಕಾಂಡಗಳ ಕಥಾ ಭಾಗಗಳನ್ನು ಬಳಸಿಕೊಂಡಿದ್ದಾರೆ. ಬಾಲಕಾಂಡದ ಶ್ರೀರಾಮಜನನ, ಅಹಲ್ಯೆಯ ಉದ್ಧಾರ, ಶಿವಧನುರ್ಭಗ, ಸೀತಾ ಕಲ್ಯಾಣ ಈ ನಾಲ್ಕು ಪ್ರಸಂಗಗಳನ್ನು ದಾಸರಲ್ಲಿ ಕಾಣಬಹುದು. ಶ್ರೀ ಹರಿಯ ದಶಾವತಾರಗಳನ್ನು ಚಿತ್ರಿಸುವಲ್ಲಿ ಶ್ರೀ ರಾಮನ ಜನನದ ಪ್ರಸಂಗ ಬರುತ್ತದೆ. ದಶರಥ ಮಾಡಿದ ಯಾಗದ ಪ್ರಸ್ತಾಪವಿಲ್ಲದಿದ್ದರೂ ಕನಕದಾಸರು, ವಿಜಯದಾಸರು, ಪ್ರಸನ್ನ ವೆಂಕಟದಾಸರುಗಳಲ್ಲಿ ಶ್ರೀ ರಾಮಜನನ ಪ್ರಸಂಗ ವ್ಯಕ್ತವಾಗಿದೆ. ದಶರಥರಾಯ 'ಕೌಸಲ್ಯಾ ನಂದನನಾಗಿ ಋಷಿ ವಿಶ್ವಾಮಿತ್ರಧ್ವರವ ರಕ್ಷಿಸಿ ಎಂದು ಪುರಂದರದಾಸರು ರಾಮ ದಶರಥ ಕೌಸಲ್ಯೆಯರ ಪುತ್ರನಾಗಿ ಹುಟ್ಟಿದುದು ಮತ್ತು ವಿಶ್ವಾಮಿತ್ರ ಋಷಿಯ ಯಾಗರಕ್ಷಣೆ ಮಾಡಿದುದನ್ನೂ ಹೇಳುತ್ತಾರೆ. ಹಾಗೆಯೇ ಕನಕದಾಸರು 'ಅಂದು ಕೌಸಲ್ಯಾಗರ್ಭಚಂದ್ರಮನಾಗಿ' ಎಂದೂ 'ಆತುಮ ಮೂರುತಿ ದಶರಥನಿಗೆ ಮಗನಾದ'ನೆನ್ನುತ್ತಾರೆ ವಿಜಯದಾಸರು ಹಾಗೂ ಪ್ರಸನ್ನವೆಂಕಟದಾಸರು 'ಪಾಲಿಸೊ ಶ್ರೀ ರಾಮಾ' ಎಂಬುದಾಗಿ ಶ್ರೀ ರಾಮನನ್ನು ಬೇಡಿಕೊಳ್ಳುತ್ತಾ 'ಕೌಸಲ್ಯಾ ಪುತ್ರ ಕಮನೀಯಗಾತ್ರಾ ಪಾಲಿಸೋ' ಎಂದು ಆರ್ತರಾಗಿ ಮೊರೆಯಿಂದ ಕೇಳಿಕೊಂಡಿದ್ದಾರೆ. ಶ್ರೀ ಹರಿಯ ಪಾದ ಮಹಿಮೆ, ಹರಿನಾಮ ಮಹಿಮೆ, ಹರಿಯ ಕರುಣೆಯ ಅಪಾರತೆ ಹನುಮಂತನ ಸಖ್ಯಭಕ್ತಿಗಳನ್ನು ಹೇಳುವಾಗ ಅಹಲ್ಯೆಯ ಉದ್ಧಾರದ ಸಂಗತಿಯನ್ನು ಆಧಾರವಾಗಿಟ್ಟುಕೊಂಡಿದ್ದಾರೆ. ಇವುಗಳೊಂದಿಗೆ ರಾಮ ತುಳಿದ ಶಿಲೆಗಳಲ್ಲಿ 'ಅಹಲ್ಯೆಯಿದ್ದ ಶಿಲೆ ಹೆಣ್ಣಾದವೋಲು ಇಂತುಳಿದ್ದು ಹೆಣ್ಣಾಯಿತೆ' ಎಂದು ಯೋಗ್ಯತೆಯಿದ್ದಲ್ಲಿ ಮಾತ್ರ ಫಲಪ್ರಾಪ್ತಿ ಎಂಬ ತಮ್ಮ ಅನುಭವದ ಅಭಿವ್ಯಕ್ತಿಯಲ್ಲಿ ಈ ಪ್ರಸಂಗವನ್ನು ಹರಿದಾಸರು ಸಮರ್ಥವಾಗಿ ಬಳಸಿದ್ದಾರೆ.

ಅಹಲ್ಯೆಯ ಉದ್ದರಣ ಪ್ರಸಂಗವು ಹೆಚ್ಚು ಕಡಿಮೆ ಎಲ್ಲ ಹರಿದಾಸರ ಕೃತಿಗಳಲ್ಲಿ ಮೂಡಿಬಂದಿದೆ. ದಾಸರು ಚಿತ್ರಿಸಿದ ಪ್ರಮುಖ ರಾಮಾಯಣ ಸನ್ನಿವೇಶಗಳಲ್ಲಿ ಪ್ರತಿನಿಧಿತವಾಗಿ ಕೆಲವು ಕೃತಿಗಳಲ್ಲಿ ಪುರಂದರದಾಸರು ಅಹಲ್ಯಶಾಪ ವಿಮೋಚನೆಯಂತಹ ಹರಿಕಾರುಣ್ಯ ಪ್ರಸಂಗವನ್ನು ಅತೀ ಭಕ್ತಿಯಿಂದ ಕೊಂಡಾಡಿದ್ದಾರೆ. ಶ್ರೀಹರಿಯ ಭಕ್ತರ ಆತ್ಮೋದ್ಧಾರ ಮಾಡಿದ ಪ್ರತಿಯೊಂದ ಪೌರಣಿಕ ಸನ್ನಿವೇಶವು ಅವರಿಗೆ ಸ್ಪೂರ್ತಿಯಾಗಿ ಉಪದೇಶದ ಸಾಧನವಾಗಿದೆ. ಹಾಗೆಯೇ ಹೆಳವನಕಟ್ಟೆ ಗಿರಿಯಮ್ಮ ತನ್ನ

ಕೃತಿಯಲ್ಲಿ ಹರಿಯ ದಶಾವತಾರಗಳ ವರ್ಣನೆಯಲ್ಲಿ ರಾಮಾವತಾರವನ್ನು ಈ ರೀತಿ ವರ್ಣಿಸಿದ್ದಾಳೆ. 'ಶಿಲೆಯನೊದ್ದು ನಿಜ ಸತಿಯಳ ಮಾಡಿ' ಎಂದು ಅಹಲ್ಯೆಯ ಶಾಪ ವಿಮೋಚನ ಪ್ರಸಂಗವನ್ನು ಪ್ರಸ್ತಾಪಿಸಿದ್ದಾಳೆ.

ಶ್ರೀರಾಮ ವಿಶ್ವಾಮಿತ್ರರೊಂದಿಗೆ ಮಿಥಿಲೆಗೆ ಹೊರಟಾಗ ದಾರಿಯಲ್ಲಿ ಪತಿಯಾದ ಗೌತಮ ಮಹರ್ಷಿಯಿಂದ ಶಾಪಗ್ರಸ್ತಳಾಗಿ ಶಿಲೆಯ ರೂಪದಲ್ಲಿರುವ ಪತಿತಳಾದ ಅಹಲ್ಯೆಯನ್ನು ಪಾದಸ್ಪರ್ಶದಿಂದ ಶಿಲೆಯ ಜನ್ಮ ವಿಮೋಚನೆ ಮಾಡಿ ಪುನಃ ಋಷಿ ಪತ್ನಿಯಾಗಿಸಿ ಅವಳನ್ನು ಉದ್ಧಾರ ಮಾಡಿದನು ಇದಕ್ಕೆ ರಾಮಾಯಣ ಬಾಲಕಾಂಡದ ೩೮ನೇ ಅಧ್ಯಾಯವು ದಾಸರಿಗೆ ಆಕರವಾಗಿದೆ. ಪುರಂದರದಾಸರು 'ರಕ್ಷಿಸೋ ನೀನು ದೇವರದೇವ ಎನ್ನ ರಕ್ಷಿಸೋ ನೀನು' ಎಂದು ಮೊರೆಯಿಡುತ್ತಾ 'ಪಾಷಣ ಚರಣದಿ ಯೋಷಿದ್ರೂಪವಗೈದೆ (ಕಲ್ಲನ್ನು ಪಾದಸ್ಪರ್ಶದಿಂದ ಹೆಣ್ಣಾನ್ನಾಗಿ ಮಾಡಿದೆ) ದೋಷ ಸಂಹಾರ, ನಿರ್ದೋಷ, ಗುಣಪೂರ್ಣನೆ, 'ಎನ್ನ ರಕ್ಷಿಸೋ' ಎಂದು ಕೇಳಿಕೊಳ್ಳುತ್ತಾನೆ. ತಮಗೆ ಆ ಪರಮಾತ್ಮನಲ್ಲಿರುವ ಅಚಲವಾದ ನಂಬಿಕೆಯನ್ನು ವ್ಯಕ್ತಪಡಿಸುತ್ತಾ

ಸುದತಿ ಗೌತಮ ಸತಿ ಮುನಿಶಾಪದಿಂದಲಿ
ಪಥದಿ ಪಾಷಣವಾಗಿ ಬಿದ್ದಿರಲು
ಮುದದಿಂದಲಾಕೆಯ ಮುಕ್ತ ಮಾಡಿದ ಯೋಗಿ
ಹೃದಯ ಭೂಷಣ ನಿನ್ನ ಪರವೈಭವವ ಕಂಡು

ಶ್ರೀ ಹರಿಯ ಪಾದವನ್ನು ಭಜಿಸಿ ಬದುಕು ಎಂಬುದಾಗಿ ಬೋಧಿಸುತ್ತಾ ಕನಕದಾಸರು ಹರಿಯ ಪಾದದ ಮಹಿಮೆಯನ್ನು ಹೇಳುತ್ತಾ 'ಶಿಲೆಯ ಸತಿಯಳ ಮಾಡಿ ಶುದ್ಧಿಮಾಡಿದ ಪಾದ' ಎಂದು ಹೇಳಿ ಅಹಲ್ಯಾ ಶಾಪ ವಿಮೋಚನೆಯ ಸಂದರ್ಭವನ್ನೂ ಉದಾಹರಿಸಿದ್ದಾರೆ. ವಿಜಯದಾಸರು ಎಲ್ಲೋ ಒಂದೆರಡು ಕಡೆ ಈ 'ಅಹಲ್ಯೋದ್ಧಾರ' ಪ್ರಸಂಗವನ್ನು ಬಳಸಿಕೊಂಡಿದ್ದಾರೆ.

ಒಟ್ಟಿನಲ್ಲಿ ಹರಿಯ ರಾಮಾವತಾರದಲ್ಲಿ ಅಹಲ್ಯೆಯ ಉದ್ಧಾರವನ್ನು ದಾಸರು ಹರಿಯ ನಾಮ ಮಹಾತ್ಮೆ, ಪದಾ ಮಹಾತ್ಮೆಗಳನ್ನು ಅರುಹಲು ಅವನ ಕರುಣೆಯ ಪರಿಚಯ ಮಾಡಿಕ ಕೊಡುಲು ಅವನ ಲೀಲಾ ವಿನೋದಗಳನ್ನು ವರ್ಣಿಸುವಲ್ಲಿ ಮತ್ತು ಹರಿಸರ್ವೋತ್ತಮತ್ವವನ್ನು ಸಾರುವಲ್ಲಿ ಸಾಧನವಾಗಿ ಬಳಸಿಕೊಂಡಿದ್ದಾರೆ.

ಇನ್ನು ಸಂಪ್ರದಾಯ ಹಾಡುಗಳಲ್ಲಿ, ಬರುವ ದಶಾವತಾರ ಚಿತ್ರಣಕ್ಕೆ ಹೆಳವನಕಟ್ಟೆ ಗಿರಿಯಮ್ಮನ 'ಸೀತಾಕಲ್ಯಾಣ ಎಂಬ 'ಉರುಟಾಣೆ' ಹಾಡು ಈ ಹಾಡಿನ ಮೂಲಕ ಹರಿಯ ಹತ್ತವತಾರಗಳನ್ನು ವರ್ಣಿಸಿದ್ದಾಳೆ. 'ಉರುಟಾಣೆ ' ಮತ್ತು 'ಬಾಗಿಲು ಕಟ್ಟುವುದು' ಎರಡೂ ಮದುವೆಯ ಸಂದರ್ಭದಲ್ಲಿ ಆಚರಣೆಯಲ್ಲಿರುವ ಸಂಪ್ರದಾಯಗಳು. 'ಉರುಟಾಣೆ' ಎಂದರೆ ನವದಂಪತಿಗಳಲ್ಲಿ ಸಂಕೋಚ ಮರೆಯಾಗಿ

ಸಲಿಗೆ ಬೆಳೆಯಬೇಕೆಂಬ ಲೌಕಿಕ ಉದ್ದೇಶದಿಂದ ಹಾಡಿನೊಂದಿಗೆ ವಧುವಿನ ಕೈಯಿಂದ ವರನಿಗೆ ಅರಿಶಿನ ಕುಂಕುಮ ಗಂಧಗಳನ್ನು ಹಚ್ಚಿಸಿ, ವೀಳ್ಯ ಕುಸುಮಗಳನ್ನು ಕೊಡಿಸಿ, ಕೊನೆಗೆ ಆರತಿಯೆತ್ತುವ ಒಂದು ಸಂಪ್ರದಾಯ. ಈ ಸಂಪ್ರದಾಯವನ್ನು ಮಾಧ್ಯಮವಾಗಿಟ್ಟುಕೊಂಡು ಹೆಳವನಕಟ್ಟೆ ಗಿರಿಯಮ್ಮ 'ಸೀತಾ ಕಲ್ಯಾಣ'ದ ಹಾಡಿನಲ್ಲಿ ಸೀತೆ ತಮ್ಮ ರಮಣನಾದ ಶ್ರೀರಾಮನಿಗೆ ಉರುಟಾಣೆಯನ್ನು ಮಾಡಿದಂತೆ ವರ್ಣಿಸಿದ್ದಾಳೆ. ಆ ಮೂಲಕ ಹರಿಯ ದಶಾವತಾರಗಳನ್ನು ಪ್ರಸ್ತಾಪಿಸಿದ್ದಾಳೆ.

ಅಚ್ಚುತಾನಂದ ಶ್ರೀ ಹರಿ ರಾಮ
ರಚ್ಚೆಗಿಕ್ಕಿದಳೆನ್ನಲಿ ಬೇಡ
ಹೆಚ್ಚಿನ ತಮನೆಂಬ ದೈತ್ಯವ ಗೇಲಿದಂಥ
ಮತ್ಸ್ಯ ರೂಪದ ಮುಖ ತಾರೆಂದಳು ಜಯ ಜಯ[೩೭]

ಸೋಮಕನೆಂಬ ರಾಕ್ಷಸ ವೇದಗಳನ್ನು ಅಪಹರಿಸಿ ಪ್ರಳಯ ಜಲದಲ್ಲಿ ಅಡಗಿದ್ದಾಗ ವಿಷ್ಣು ಮತ್ಸ್ಯರೂಪವನ್ನು ತಾಳಿ, ವೇದಗಳನ್ನು ಹಿಂದಕ್ಕೆ ತರುತ್ತಾನೆ.

ನಿರ್ಮಳಾತ್ಮಕ ನಿತ್ಯ ರಾಮ ನಿಮ್ಮ
ಪೂರ್ವವನೆತ್ತಿಳೆನ್ನ ಬೇಡ
ಕೂರ್ಪುಪಕಾರದಿ ಸರರಿಗೆ ಅಮೃತವ
ವರ್ಮದಿಂ ತಂದ ಮುಖ ತಾರೆಂದಳು[೩೮]

ದೇವತೆಗಳು ರಾಕ್ಷಸರು ಅಮೃತ ಮಥನಕ್ಕಾಗಿ ಮಂದರ ಪರ್ವತವನ್ನು ಕಡಗೋಲಾಗಿಯೂ, ವಾಸುಕಿಯನ್ನು ಹಗ್ಗವನ್ನಾಗಿಯೂ ಮಾಡಿಕೊಂಡು ಸಮುದ್ರವನ್ನು ಕಡೆಯುತ್ತಿದ್ದಾಗ ಭಾರದ ಆ ಪರ್ವತ ಮೆಲ್ಲನೆ ಮುಳುಗಲಾರಂಭಿಸಿದಾಗ ವಿಷ್ಣು ತನ್ನ ಒಂದು ಅಂಶದಿಂದ ಕೂರ್ಮರೂಪ ತಾಳಿ ಆ ಪರ್ವತವನ್ನು ಬೆನ್ನ ಮೇಲೆ ಧರಿಸಿ ನಿಲ್ಲುತ್ತಾನೆ. ಒಟ್ಟು ೧೦ ನುಡಿಗಳಲ್ಲಿ ವಿಷ್ಣುವಿನ ಹತ್ತಾವತಾರಗಳನ್ನು ಚಿತ್ರಿಸಿ ಅವುಗಳ ಹಿನ್ನೆಲೆಯಲ್ಲಿ ಹರಿಭಕ್ತಿಯೇ ಮುಖ್ಯ ಗುರಿಯಾಗಿರುವುದರಿಂದ ಇವು ಹರಿಸ್ತುತಿ ಪರ ಹಾಡಾಗಿವೆ. ನವವಿಧ ಭಕ್ತಿಗಳಲ್ಲಿ ಶ್ರೀ ಹರಿಯನ್ನು ಮಧುರ, ಸಖ್ಯ, ನಿಂದಾಸ್ತುತಿಗಳಲ್ಲಿ ಸ್ಮರಿಸಿದ್ದಾಳೆ. ಗಿರಿಯಮ್ಮನಲ್ಲಿ ಸಖ್ಯಭಾವದಿಂದ, ಸಲುಗೆಯಿಂದ ಜಗನ್ನಿಯಾಮಕನನ್ನು ಸ್ತುತಿಸುವ ಪರಿ ದಶಾವತಾರ ವರ್ಣನೆಯಲ್ಲಿದೆ. ಅದೇ ರೀತಿ ವಾದಿರಾಜರು 'ಉರುಟಾಣೆ ಹಾಡು' ಮತ್ತು ಬಾಗಿಲುಕಟ್ಟುವ ಹಾಡುಗಳ ಮೂಲಕ ಹರಿಯ ಹತ್ತವತಾರಗಳನ್ನು ಹೇಳುತ್ತಾರೆ. ವಾದಿರಾಜರು ಲಕ್ಷ್ಮೀ ತನ್ನ ಪತಿ ಶ್ರೀಹರಿಗೆ ಉರುಟಾಣೆಯನ್ನು ಮಾಡಿದಂತೆ ವರ್ಣಿಸುತ್ತಾರೆ.

ಲಕುಮಿ ರಮಣಗೆ ಮಾಡಿದಳು ಉರುಟಾಣಿ ||ಪ||
ಇಳೆಯೊಳಗತಿ ಜಾಣೆ ಸುಂದರ ಫಣಿವೇಣಿ ||ಅ.ಪ||

ಮಚ್ಛ ಕಚ್ಛಪಕಿರನೆ ಕೇಸರಿಯೆಂದದ ಮುಖವೆ
ಸ್ವಚ್ಛ ಮುಖವ ತೋರ್‍ಯೆ ಕುಂಕುಮ ಹಚ್ಚುವೆನು ||೧||

ಬಲಿಯ ದಾನವ ಬೇಡಿ ಇಳೆಯ ಈರಡಿ ಮಾಡಿ
ಅಳೆದಡಿಗಳ ತೋರ್‍ಯೆ ಅರಿಶಿನ ಹಚ್ಚುವೆನು ||೨||

ದರುಳ ಕ್ಷತ್ರಿಯರನ್ನು ಕೊರಳ ತಂದ ಹರಿಯೆ
ಹರುಷದಿಂ ಕೊರಳ ತೋರ್‍ಯೆ ಗಂಧವ ಹಚ್ಚುವೆನು" ||೩||

ಎಂದು ಲಕ್ಷ್ಮೀದೇವಿ ಲೌಕಿಕ ಸತಿಯಂತೆ ಶ್ರೀಹರಿಗೆ ಉರುಟಾಣೆ ಮಾಡಿದ್ದಾರೆ. ಅಂತಹ ಮದುವೆಯ ಸಂದರ್ಭದಲ್ಲಿ ಈ ಹಾಡನ್ನೂ ಹಾಡುತ್ತಾರೆ. ಹೀಗೆಯೇ ಬಾಗಿಲು ಕಟ್ಟುವುದು, ತೊಟ್ಟಿಲಿಡುವುದು, ಆರತಿಯೆತ್ತುವುದು ಮೊದಲಾದ ಸಂಪ್ರದಾಯಗಳನ್ನು ಕುರಿತ ದಾಸರ ಹಾಡುಗಳ ಮೂಲಕವೂ ಈ ದಶಾವತಾರದ ಚಿತ್ರಣವಿದೆ. ಹರಪನಹಳ್ಳಿ ಭೀಮವ್ವನ ಹಾಡುಗಳಲ್ಲಿ ಹರಿಯ ದಶಾವತಾರದ ವರ್ಣನೆ ಬೇರೆ ಬೇರೆ ಹಾಡುಗಳಲ್ಲಿ ವಿಭಿನ್ನ ಸಂದರ್ಭದಲ್ಲಿ ಹೇಳಿದ್ದಾಳೆ. ಶ್ರೀ ಕೃಷ್ಣನಿಗೆ ಸತ್ಯಭಾಮೆಯು ಬಾಗಿಲು ಕಟ್ಟೋ ಸಂದರ್ಭದಲ್ಲಿ ಆತನ ಅಪಾರ ಮಹಿಮೆಗಳನ್ನು ಹೇಳುತ್ತಾ ದಶಾವತಾರಗಳನ್ನು ಸ್ಮರಿಸಿಕೊಳ್ಳುತ್ತಾಳೆ. ಇವುಗಳೊಂದಿಗೆ ದಾಸರು ಶ್ರೀಹರಿಗೆ ಮಂಗಳ ಗೀತೆಗಳನ್ನು ಹಾಡುವಾಗಲೂ ದಶಾವತಾರಗಳನ್ನು ಬಣ್ಣಿಸಿದ್ದಾರೆ. ಪುರಂದರದಾಸರು ತಮ್ಮ ಒಂದು ಕೀರ್ತನೆಯಲ್ಲಿ. 'ಮಂಗಳ ಮಾರಮಣಗೆ ಮಂಗಳ ಜಯ ಮಂಗಳ ಭೂರಮಣಗೆ ಮಂಗಳ' ಎಂದು ಹಾಡುತ್ತಾ ಹರಿಯ ಶಿರದಿಂದ ಚರಣದವರೆಗೂ ಪ್ರತಿಯೊಂದು ಅಂಗವನ್ನು ಹೆಸರಿಸಿ ಮಂಗಳವನ್ನು ಹಾಡುತ್ತಾರೆ.

'ಮುಕುಟಕೆ ಮಂಗಳ ಮತ್ಸ್ಯಾವತಾರಗೆ
ಮುಖಕೆ ಮಂಗಳ ಮುದ್ದು ಕೂರ್ಮಗೆ
ಸುಕಂಠಕೆ ಮಂಗಳ ಸುಕರ ರೂಪಗೆ
ನಖರೆ ಮಂಗಳ ಮುದ್ದು ನರಸಿಂಹಗೆ
ವಕ್ಷಕೆ ಮಂಗಳ ವಟು ವಾಮನನಿಗೆ
ಕಕ್ಷಕೆ ಮಂಗಳ ಭಾರ್ಗವಗೆ
ಕಕ್ಷಕೆ ಮಂಗಳ ಕಾತುತ್ಸ್ಥರಾಮನಿಗೆ
ಕುಕ್ಷಿಗೆ ಮಂಗಳ ಶ್ರೀ ಕೃಷ್ಣಗೆ
ಊರುಗಳಿಗೆ ಮಂಗಳ ಉತ್ತಮ ಬುದ್ಧನಿಗೆ
ಚರಣಕ್ಕೆ ಮಂಗಳ ಚೆಲ್ವ ಕಲ್ಕಿಗೆ
ಪರಿಪರಿ ರೂಪಗೆ ಪರಮ ಮಂಗಳ
ಪುರಂದರ ವಿಠಲಗೆ ಶುಭ ಮಂಗಳ

ಹೀಗೆ ಹರಿಯ ಅಂಗಾಂಗಗಳಿಗೆ ಮಂಗಳವನ್ನು ಹಾಡುವ ನೆವದಿಂದ ಹಿರಿಯ ದಶಾವತಾರಗಳನ್ನೂ ಸ್ಮರಿಸಿದ್ದಾರೆ. ಒಂದೊಂದು ಅವತಾರವನ್ನು ಸೂಚಿಸುವಾಗಲೂ ಆ ಹೆಸರಿನ ಮೊದಲ ಅಕ್ಷರವನ್ನು ಪ್ರಾಸಾಕ್ಷರವಾಗಿ ಬಳಸಿ ಒಳ ಪ್ರಾಸವನ್ನು ತಂದಿದ್ದಾರೆ.

ರಾಮಾಯಣದ ಐದನೆಯ ಭಾಗವಾದ ಸುಂದರ ಕಾಂಡದಲ್ಲಿ ಬರುವ ಹನುಮನ ಶಕ್ತಿ ಸಾಹಸ, ಕಾರ್ಯನಿಷ್ಠೆ, ಸ್ವಾಮಿ ಭಕ್ತಿ, ದಾಸ್ಯಭಾವಗಳ ಪ್ರತೀಕವಾದ ಈ ಕಥಾಭಾಗವನ್ನು ಎಲ್ಲ ಹರಿದಾಸರು ಬಳಸಿಕೊಂಡಿದ್ದಾರೆ. ಭಕ್ತ ಭಗವಂತನ ನಡುವಿನ ಮಾಧ್ಯಮವಾದ ಮಧ್ವಾಚಾರ್ಯ ಪ್ರಥಮಾವತಾರನಾದ ಈ ಹನುಮನ ಸ್ತುತಿ ಹರಿದಾಸ ಸಾಹಿತ್ಯದಲ್ಲಿ ಒಂದು ಪ್ರಮುಖವಾದ ಭಾಗವಾಗಿದೆ ದಾಸರು ಸುಂದರ ಕಾಂಡವನ್ನು ಪೂರ್ಣವಾಗಿ ಸ್ವೀಕರಿಸಿದ್ದಾರೆ.

ಹನುಮ, ಭೀಮ, ಮಧ್ವ ಈ ಅವತಾರ ತ್ರಯದಲ್ಲಿ ನಂಬಿಕೆಯಿರುವ ಮಧ್ವ ಸಂಪ್ರದಾಯದ ಹಿನ್ನೆಲೆಯಲ್ಲಿ ಹುಟ್ಟಿ ಬೆಳೆದಿರುವ ಹರಿದಾಸ ಸಾಹಿತ್ಯದಲ್ಲಿ ಹನುಮಂತನ ಸಾಹಸ ಶಕ್ತಿ ಸ್ವಾಮಿಭಕ್ತಿಗಳಿಗೆ ಪ್ರತೀಕವಾಗಿರುವ ಸುಂದರ ಕಾಂಡದ ಕತೆ ಎಲ್ಲ ದಾಸರ ಗಮನವನ್ನು ಸೆಳೆದಿರುವುದು ಮಹತ್ವದ್ದಾಗಿದೆ. ವ್ಯಾಸರಾಯರಲ್ಲಿ ಈ ಪ್ರಸಂಗವು ರಮ್ಯವಾಗಿ ಬಂದಿದೆ. ಹನುಮಂತ ಸಾಗರವನ್ನು ದಾಟಿ ಸೀತೆಯನ್ನು ಹುಡುಕಿ ಆಕೆಗೆ ರಾಮನಿಗೆ ಚೂಡಮಣಿಯಿತ್ತುದು ಈ ಎರಡು ಪ್ರಸಂಗಗಳು ಒಂದೇ ಕೀರ್ತನೆಯಲ್ಲಿ ದೀರ್ಘವಾಗಿ ಪ್ರಸ್ತಾಪಿಸಲ್ಪಟ್ಟಿದೆ.

ಅಂಬುಧಿಯ ಲಂಘಿಸಿ ಭರದಿ
ಲಂಬ ಶಿಖರದಲ್ಲಿ ಧುಮುಕಿ

ಹನುಮ ದ್ವಾಪರ ಯುಗದಲ್ಲಿ ಬಲಶಾಲಿಯಾದ ಭೀಮನಾಗಿಯೂ ಮುಂದೆ ಕಲಿಯುಗದಲ್ಲಿ ಮಧ್ವನಾಗಿಯೂ ಹುಟ್ಟಿದನೆಂಬುದು ದಾಸರ ಅಭಿಮತ ಹನುಮಂತನ ಅವತಾರವನ್ನು ಅವನ ಭೀಮ ಮಧ್ವಾವತಾರಗಳನ್ನು ಹೋಲಿಸಿ ದಾಸರು ಸೊಗಸಾದ ಒಂದು ಕೃತಿಯನ್ನು ರಚಿಸಿದ್ದಾರೆ. ಅದರಲ್ಲಿ

ದಾನವನ ಶೋಕವನ ಕಿತ್ತು ಈಡ್ಯಾಡಂದು
ಶ್ರೀ ನಾಥನೆನುತ ಲಂಕೆಯನುರುಪಿದೆ
ಮಾನವರ ಶೋಕವನ ಬೇರೊರಸೆ ಕಿತ್ತಿಂದು
ದಾನವರಿಹ ಪುರವ ಪೂರೈಸಿ ಮೆರೆದ

ಎಂದು ಹನುಮಂತನ ಕಾರ್ಯವನ್ನು ಶ್ಲಾಘಿಸಿದ್ದಾರೆ. 'ದಾನವನಶಿ 'ೀಕವನ' ಮಾನವರ ಶೋಕವನ' ಎಂದು ಈ ಎರಡು ಶಬ್ದಗಳನ್ನೂ ಅಲಂಕಾರಿಕವಾಗಿ ಬಳಸಿರುವ ಅವರ ಜಾಣ್ಮೆ ಮೆಚ್ಚುವಂತಹುದು. ವಾದಿರಾಜರು 'ಈತನೇ ಲೋಕಗುರು ವೇದ ವಿಖ್ಯಾತ' ಎಂದು ಲೋಕಗುರು ಮಾರುತಿಯನ್ನು ಹೀಗೆ ಪರಿಚಯ ಮಾಡಿಕೊಡುತ್ತಾ

ಅಂದು ಹನುಮಂತ ನಾಗ್ಯಖಿಳ ದಿಕೆಲ್ಲವನು
ಒಂದು ನಿಮಿಷಕ್ಕೆ ಪೋಗಿ ಉದಧಿ ಲಂಘಿಸಿ
ಇಂದೀವರಾಕ್ಷಿಗೊಂದಿಸಿ ಮುದ್ರಿಕೆಯನಿತ್ತು
ಬಂದು ರಾಮನ ಪಾದಕೆರಗಿ ನಿಂತಾತ

ತಮ್ಮ ಇನ್ನೊಂದು ಕೃತಿಯಲ್ಲಿ ಹನುಮಂತನ ದೂತ ಕಾರ್ಯವನ್ನು ಪ್ರಶಂಸಿಸಿ ಬಾಯ್ತುಂಬ ಹೊಗಳಿ ಅವನ ಆ ಸಾಹಸ ಕಾರ್ಯದ ಎಳೆ ಎಳೆಯಾಗಿ ಬಿಡಿಸಿ ಹೇಳಿ ಇಂತಹ ನಿನಗೆ ಸರಿಸಮರಾರೂ ಇಲ್ಲವೆಂದು ನುಡಿಯುತ್ತಾರೆ.

ಎಷ್ಟು ಸಾಹಸವಂತ ನೀನೆ ಬಲವಂತ
ದಿಟ್ಟ ಮೂರುತಿ ಭಳಿ ಭಳಿಕೆ ಹನುಮಂತ

ಎಂದು ಪಲ್ಲವಿಯಿಂದ ಪ್ರಾರಂಭಿಸಿ, ಹನುಮ 'ಪಂಕಜಾಕ್ಷ ಹಯವದನ ಕಟಾಕ್ಷದಿ' ಲಂಕೆಯನ್ನು ಸುಟ್ಟ ರೀತಿಯನ್ನು ಸುಧೀರ್ಘವಾದ ಇಪ್ಪತ್ತು ಮೂರು ನುಡಿಗಳಲ್ಲಿ ಕಥನಕವನವನ್ನಾಗಿ ಹಾಡಿದ್ದಾರೆ. ಹನುಮಂತ ಶರಧಿಯನ್ನು ದಾಟಿ ಲಂಕೆಗೆ ಪ್ರವೇಶಿಸಿ ಸೀತೆಯನ್ನು ಕಂಡು ಶ್ರೀರಾಮನ ಮುದ್ರೆಯುಂಗುರವನ್ನಿತ್ತು. ಆಕೆಯಿಂದ ಚೂಡಾಮಣಿಯನ್ನು ಪಡೆದು ಹಿಂತಿರುಗುವಲ್ಲಿ ಲಕಿಣಿಯನ್ನು ಕೊಂದದ್ದು ಅಶೋಕವನವನ್ನು ಕಿತ್ತಿಹಾಕಿ ರಾವಣನಿಗೆ ಸೆರೆ ಸಿಕ್ಕಿದ್ದು ರಾವಣನು ದೂತರಿಂದ ಹನುಮನ ಬಾಲಕ್ಕೆ ಬೆಂಕಿಯಿಡಿಸಿದ್ದು, ಬೆಂಕಿಯಿಂದ ಲಂಕೆಯನ್ನು ಸುಟ್ಟದನ್ನು ಹೇಳಿದ್ದಾರೆ. ಹೀಗೆ ಪ್ರತಿಯೊಂದು ಘಟನೆಯನ್ನೂ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿರುವರು. ಹನುಮ, ಭೀಮ, ಮಧ್ವ ಈ ಅವತಾರತ್ರಯರನ್ನು ಸ್ತುತಿಸುತ್ತಾ ಪುರಂದರದಾಸರು 'ರಾಮನ ನೋಡಿರೋ ಮಧ್ವರಾಮನ ಪಾಡಿರೊ' ಎಂದು ಮಧ್ವಾಚಾರ್ಯರನ್ನು ಸ್ತುತಿಸಿ ಅವರು ಹನುಮಂತನ ಅವತಾರದಲ್ಲಿ, ಹುಟ್ಟಿ ಕಂಜಾಕ್ಷಿಯ ಸುದ್ದಿಗೆ ಶರಧಿಯ ಲಂಘಿಸಿದುದನ್ನು ಅಂಜದೆ ವನವನ್ನು ಕಿತ್ತಿದ್ದನ್ನೂ ಪುರವನ್ನೇ ಸುಟ್ಟ ಅವನ ದಿಟ್ಟತನವನ್ನೂ ನೆನೆದಿದ್ದಾರೆ.

ಹರಿದಾಸರೆಲ್ಲರೂ ಸಾಮಾನ್ಯವಾಗಿ ಪ್ರಾಣದೇವರ ಅವತಾರತ್ರಯರೆಂದು ಹೇಳುವ ಹನುಮ, ಭೀಮ, ಮಧ್ವರ ಸ್ತುತಿ ಮಾಡಿರುವುದು ಕಂಡುಬರುತ್ತದೆ. ಆದರೆ ಗಿರಿಯಮ್ಮನಲ್ಲಿ ಹನುಮನ ಸ್ತುತಿಯೇ ಮುಖ್ಯವಾಗಿ ಕಾಣಿಸುತ್ತದೆ. ಹರಿಗೆ ಸಲ್ಲಿಸಿರುವ ಎಲ್ಲ ಸೇವೆಗಳು ಗುರುಗಳಾದ ಪ್ರಾಣದೇವರ ಮುಖಾಂಥರವೇ ತಲುಪಬೇಕು. ವಾಯುದೇವರು ಪರಮಾತ್ಮನಿಗೂ ಜೀವಾತ್ಮರಿಗೂ ಸಂಪರ್ಕ ಸೇತುವೆಯಾಗಿದ್ದಾರೆ. ಅಂಥ ವಾಯುದೇವರ ಮಹಿಮೆಯನ್ನು ಹೇಳುತ್ತಾ 'ಈತ ಅಂಜನೆ ಸುತನು ಭೀಮರಾಯ ಎಂಬ ಹಾಡಿನಲ್ಲಿ ಭೀಮನ ಸ್ಮರಣೆ ಇರುವಂತೆ ತೋರಿದರೂ ಇಡೀ ಹಾಡು ಕೊಕ್ಕನೂರಿನ ಹನುಮಂತನ ಸ್ತುತಿಯಾಗಿದ್ದು ಈತನ ಸಾಹಸ ಹಿರಿಮೆಗಳನ್ನು ಬಣ್ಣಿಸಿದ್ದಾಳೆ.

ಈತ ಅಂಜನೆಸುತನು ಭೀಮರಾಯನು ||ಪ||

ಈತ ರಾಮನ ಭಂಟನು
ಈತ ಕೋಟಿಲಿಂಗವನ್ನು ರೋಮರೋಮದಿ ಧರಿಸಿದವನು
ಈತನ ಲೋಕ ಪ್ರಖ್ಯಾತನು ಭೀಮರಾಯನು
ಪುಟ್ಟಿದಾಗಲೆ ಗಗನ ಮಂಡಲವನ್ನು ಮುಟ್ಟಿ ರವಿಯನು ತುಡುಕಿ
ಇಟ್ಟ ಕಪ ಕುಂಡಲವನ್ನು ತೊಟ್ಟು ಮೆರೆವಂಥ ದಿಟ್ಟ ಹನುಮ ರಾಯನು
ಮುಂಚೆಸ್ವಾಮಿಯೆ ಕಂಡು ಅಂದು ಸೇವೆಯ ವಂಚನಿಲ್ಲದೆ ಮಾಡಿದ
ಅಂಚೆಗಮನೆ ಸೀತಾದೇವಿ ಗುಂಗುರವಿತ್ತು ಮಿಂಚುಳ್ಳ
ವನದ ಕಿತ್ತನು ಭೀಮರಾಯನು
ಲಂಕಿಣಿಯರ ತುಡುಕಿ ಮಾಯಾಜಾಲವ ಶಂಕೆಯಿಲ್ಲದ ಗೆಲಿದ
ಲಂಕಾಪಟ್ಟಣವ ಸುಟ್ಟು ರಾವಣೇಶ್ವರನ ಅಹಂಕಾರವಳಿದ ಧೀರ ಭೀಮರಾಯನು
ತಂತ್ರದರಸ ಶೂರನು ಸಂಗ್ರಾಮದಿ ಮರಾಂತ ವೀರರ ಗೆಲಿದ
ಪಂಥದಿ ಸಂಜೀವನದ ತಂದು ಲಕ್ಷ್ಮಣನ ಅಂತರವಳಿದ ಶೂರನು ಭೀಮರಾಯನು
ಲೆಕ್ಕವಿಲ್ಲದೆ ಖಳರ ಗೆಲಿದು ಬಂದು ಕೊಕ್ಕನೂರೊಳು ನಿಂತನು
ರಕ್ಕಸಾಂತಕ ಹೆಳವನಕಟ್ಟೆ ರಂಗಯ್ಯನ ಅಕ್ಕರುಳ್ಳತಿ ದಾಸನು ಭೀಮರಾಯನು[೪೦]

ಎಂಬುದಾಗಿ ಗಿರಿಯಮ್ಮ ಹನುಮನ ಘನ ಕಾರ್ಯವನ್ನು ಪ್ರಶಂಸಿದ್ದಾಳೆ ಮತ್ತು 'ಭೀಮ ಹೋ ಭಲಾರೆ ನಿಸ್ಸೀಮ' ಎಂದು ಹಾಡಿನ ಪ್ರಾರಂಭದಲ್ಲೇ ಭೀಮನ ಹೆಸರಿದ್ದರೂ ಇಡೀ ಹಾಡಿನಲ್ಲಿ ಭೀಮನ ಪರಾಕ್ರಮವನ್ನು ಹೇಳುವ ಯಾವ ಘಟನೆಯೂ ಇಲ್ಲದೆ ಕೇವಲ ರಾಮಾಯಣದಲ್ಲಿ ಇರುವ ಹನುಮನ ಸಾಹಸಗಳನ್ನು ಮಾತ್ರ ಪ್ರಸ್ತಾಪಿಸಲಾಗಿದೆ. ಹಾಗೂ ಉಳಿದ ಹಾಡಿನಲ್ಲಿ ಎಲ್ಲಿಯೂ ಮಧ್ವರ ಪ್ರಸ್ತಾಪ ಇಲ್ಲ. ಗಿರಿಯಮ್ಮ ತನ್ನ ಇನ್ನೊಂದು ಕೀರ್ತನೆ

'ಭೀಮಾ ಹೋ ಭಲಾರೆ ನಿಸ್ಸೀಮ ಹೋ ಬಾಪೂರೆ ಹನುಮ ಹೋ ||ಪ||

ನಿಜಜೀತಕಾಮ ಹೋ ಕಾರುಣ್ಯಧಾಮ ಹೋ
ರಾಮಚಂದ್ರನ ಚರಣ ಕಮಲಸರಾಮ ಕಾರ್ಯಧುರಂದಕನೆ ||ಅ.ನು||

ಆಂಜನೇಯ ಸುಕುಮಾರ ಅದ್ಭುತ ಮಹಿಮ ರಾಮನ ದೂತನೆ
ಅಂಜದುದಧಿಯ ದಾಟಿ ಅಸುರನ ವನವ ಕಿತ್ತನೆ
ಕಂಜಮುಖಿ ಜಾನಕಿಗೆ ಮುದ್ರೆಯನಿತ್ತ ಬಹು ಪ್ರಖ್ಯಾತಗೆ
ರಂಜಿಪ ಲಂಕಾನಗರವನು ಸುಟ್ಟು ರಾಜಕೌರ್ಯವ ಮಾಡಿಸಿದೆ ಕಲಿ[೪೧] ||೧||

ಗಿರಿಯಮ್ಮ ತನ್ನ ಈ ಕೃತಿಯಲ್ಲಿ ಹನುಮಂತನ ದೂತ ಕಾರ್ಯವನ್ನು ಪ್ರಶಂಸಿಸಿ ಹಾಡಿ ಹೊಗಳಿ ಅವನ ಸಾಹಸ ಕಾರ್ಯವನ್ನು ಎಳೆ ಎಳೆಯಾಗಿ ಬಿಡಿಸಿ ವರ್ಣಿಸಿದ್ದಾಳೆ. ತ್ರೇತಾಯುಗದಲ್ಲಿ ಹನುಮಂತನಾಗಿ ಅವತರಿಸಿ, ಅಂಜನೆಯ ಮಗನಾಗಿ, ರಾಮನ ಭಂಟನಾಗಿ ಸಾಗರವನ್ನು ದಾಟಿ, ಜಾನಕಿಗೆ ಮುದ್ರೆಯುಂಗರವನ್ನಿತ್ತು, ಅಶೋಕವನದಲ್ಲಿನ ರಕ್ಕಸರನೆಲ್ಲ ಸದೆಬಡಿದ ಹನುಮನನ್ನು ಭಜಿಸಿ, ಹಾಡಿ ಹೊಗಳಿದ್ದಾಳೆ. ಮತ್ತು 'ಭೀಮ ಹೋ ಭಲಾರೆ ನಿಸ್ಸೀಮ' ಎಂಬ ಹಾಡಿನಲ್ಲಿ ರಾಣೆಬೆನ್ನೂರಿನ ಬಯಲಾಂಜನೆಯ ಸ್ತುತಿ ಹಾಗೂ 'ಮಂಗಳ ಮುಖ್ಯ ಪ್ರಾಣೇಶಗೆ ಜಯ ಮಂಗಳ' ಮೂಜಗವಂದಿತಗೆ' ಎಂಬ ಮಂಗಳ ಹಾಡಿನಲ್ಲಿ ಮುದ್ದೇನಹಳ್ಳಿಯ ಹನುಮನ ಸ್ತುತಿಗಳಿನ್ನೂ ಈ ದೃಷ್ಟಿಯಿಂದ ಗಮನಿಸಬಹುದು. ರಾಮನ ಭಂಟ ಹನುಮನ ಬಗ್ಗೆ ಗಿರಿಯಮ್ಮನಿಗೆ ವಿಶೇಷ ಪ್ರೀತ್ಯಾದರಗಳು ಇರುವುದನ್ನು ಈ ಹಾಡುಗಳಲ್ಲಿ ಕಾಣಬಹುದಾಗಿದೆ.

ಗಿರಿಯಮ್ಮ ರಂಗನಾಥನ ಭಕ್ತೆಯಾದರೂ ತನ್ನ ತವರೂರಿನ ದೈವವಾದ ಮೈಲಾರ ಲಿಂಗನನ್ನು ಮತ್ತು ಹೆಳವನಕಟ್ಟೆ ರಂಗನನ್ನು ಸ್ತುತಿಸಿದ್ದಾಳೆ. 'ಈತ ರಂಗನಾದ ಹರಿಯು ಆತ ಲಿಂಗನಾದ ಹರನು ಮತ್ತು 'ಈತ ಲಿಂಗದೇವ ಶಿವನು ಆಗ ರಂಗಧಾಮ ವಿಷ್ಣು' ಎಂಬ ಹಾಡುಗಳು ಹರಿಹರರ ಸಮನ್ವಯವನ್ನು ಸಾರುವ ಗಿರಿಯಮ್ಮನ ವಿಶಿಷ್ಟ ಮನೋಭಾವವನ್ನು ಪ್ರಕಟಿಸುತ್ತವೆ. ನೀಲಗಿರಿ ಲಿಂಗನನ್ನು ಮಧುರ ಭಾವದಿಂದ ಸ್ತುತಿಸುವ 'ಬಾರನ್ಯಾತಕೆ ನೀರೆ ನೀ ಕರೆತಾರೆ' ಎಂಬ ಹಾಡಿನಲ್ಲಿ ಹೆಳವನಕಟ್ಟೆಯ ರಂಗಗತಿಸಖನಾದ ನೀಲಗಿರಿ ಲಿಂಗ' ಎಂಬ ಮಾತೂ ಬರುತ್ತದೆ. ಶಿವಸ್ತುತಿಯಾದ 'ವಿಶ್ವಪತಿ ಇಂದು ಶೇಖರ ಸುರಮಸ್ತಕಮಣಿ' ಎಂಬ ಹಾಡುಗಳು ಹಾಗೂ 'ರಕ್ಷಿಸೆ ಏಕನಾಥೆ ತಾಯೆ' ಎಂಬ ಹಾಡಿನಲ್ಲಿ ಮಲೆಬೆನ್ನೂರಿನ ಏಕನಾಥೆಯನ್ನು ಪಾರ್ವತಿಯೆಂದೇ ತಿಳಿದು ಸ್ತುತಿಸಿದ್ದಾಳೆ. ಹೀಗೆ ಹಾಡುಗಳು ಹಾಗೂ ಏಕನಾಥೆಯ ಸ್ತುತಿಗಳು ಗಿರಿಯಮ್ಮನ ಸಮಭಾವದ ನಿಲುವನ್ನು ದೃಢಪಡಿಸುತ್ತದೆ.

ರಕ್ಷಿಸೆ ಏಕನಾಥೆ ತಾಯೆ ದಯದಿಂದ ಎನ್ನನು
ಸೊಕ್ಕಿದ ದೈತ್ಯ ಸಂಹಾರೆ ಕರಣ ಜನೋದ್ಧಾರೆ ||ಪ||

ಶ್ರೀ ಶರ್ವಾಣಿ ಶಂಕರಿ ದುರಿತ ದುಃಖ ನಿವಾರಿ
ಶರಣರ ಸಲಹುವ ದಾತೆ ಖಳರೆದೆಗಂತೆ ನಿಡಿ
ಗುರುಳ ಬಾಳೆ ಪಲ್ಲವ ಪಾಣಿ
ಸುರರ ನಾಯಕಿ ಅಖಿಲ ದೇವಮಾತೆ ವಿಖ್ಯಾತೆ ||೧||

.............................

ಮಲೆತ ಮಹಿಷಾಸುರನ ಕೊಂದೆ ಮತಿಬೆನ್ನೂರಿನಲಿ ನಿಂದೆ
ಬಲುನೇವಂತೆ ಸಂತೆಹರಿವಿತಿ ನಿಂತೆ

ಫುಲ್ಲಲೋಚನೆ ಪ್ರಖ್ಯಾತೆ ಪರಶುರಾಮನ ಮಾತೆ
ಹೆಳವನಕಟ್ಟೆ ರಂಗನ ಸಹೋದರಿ[೨೨] ||೫||

ಗಿರಿಯಮ್ಮ ತಾನು ಸಂದರ್ಶಿಸಿದ ತೀರ್ಥಕ್ಷೇತ್ರಗಳನ್ನೂ ಅಲ್ಲಿಯ ದೈವಗಳನ್ನೂ ಕೆಲವು ಹಾಡುಗಳಲ್ಲಿ ಸ್ತುತಿಸಿದ್ದಾಳೆ. 'ಈತ ಅಂಜನೆಸುತನು ಭೀಮರಾಮನು' ಎಂಬ ಹಾಡಿನಲ್ಲಿ ಕೊಕ್ಕನೂರಿನ ಹನುಮಂತನನ್ನು 'ಪಾಹಿ ಪರಮಾನಂದ ಪಾಹಿ ಮುನಿಜನ ವಂದ್ಯ' ಎಂಬ ಹಾಡಿನಲ್ಲಿ ಪಿಳ್ಳಂಗಿರಿ ವೆಂಕಟೇಶನನ್ನು ಕುರಿತು ಸ್ತುತಿಸಿದ್ದಾಳೆ. 'ಬಾರನ್ಯತಕೆ ನೀರೆ ನೀ ಕರೆತಾರೆ ಸುಗುಣ ಗಂಬೀರನ' ಎಂಬ ಹಾಡಿನಲ್ಲಿ ವೈಲಾರ ಲಿಂಗನನ್ನು ಕುರಿತು ಹಾಡಿದ್ದಾಳೆ. ಕೃಷ್ಣಾನದಿಯನ್ನು ಕುರಿತು 'ಬಟ್ಟೆಯ ನೆವದಿಂದ ಬಂದು ತಟ್ಟಕವನೆ ಕಂಡು ಕಣ್ಣ ತೆರೆದ ಕೃಷ್ಣವೇಣಿ ನಿಮ್ಮ ಕಂಡೆ' ಎಂಬ ಹಾಡಿನಲ್ಲಿ ನದೀಸ್ತೋತ್ರ ಇತ್ಯಾದಿಗಳನ್ನು ನೋಡಬಹುದು.

## ೪.೪. ಪಾರಿಜಾತ

ಕಥನಾತ್ಮಕನಾದ ಎರಡು ವಿಶಿಷ್ಟ ಹಾಡುಗಳನ್ನು ಗಿರಿಯಮ್ಮಳು ರಚಿಸಿದ್ದಾಳೆ. 'ಪಾರಿಜಾತ' ಮತ್ತು 'ಅಜಾಮಿಳನ ಮೋಕ್ಷ' ಭಾಗವತದಲ್ಲಿ ಬರುವ ಕಥಾವಸ್ತು. ಇವುಗಳಿಗೆ ಆಧಾರವಾಗಿದೆ. ಪಾರಿಜಾತದಲ್ಲಿ ೯ ಶ್ಲೋಕ ಹಾಗೂ ೯ ಪದಗಳೀಂದ ೧೮ ನುಡಿಗಳಿಂದ ರಚಿತವಾಗಿರುವ ಮತ್ತು ಅಜಾಮಿಳನ ಮೋಕ್ಷದಲ್ಲಿ ೧೫ ನುಡಿಗಳಿವೆ. ಉಳಿದೆಲ್ಲ ಹಾಡುಗಳಿಗಿಂತ ಇವು ಸ್ವಲ್ಪ ದೊಡ್ಡವಾಗಿವೆಯಷ್ಟೇ ಅಲ್ಲ ಭಾಗವತದಲ್ಲಿ ಬರುವ ಕಥಾವಸ್ತುವನ್ನು ಕುರಿತಾಗಿವೆ.

**ಭಾಗವತದ ಕಥೆ :** ಪ್ರಾಗ್‌ಜ್ಯೋತಿಷಪುರದ ರಾಜನಾದ ಭೌಮಾಸುರನು(ನಕಕಾಸುರ) ಭೂದೇವಿಯ ಪುತ್ರನು. ಅವನು ಇಂದ್ರಲೋಕವನ್ನು ಗೆದ್ದು ವರುಣನ ಛತ್ರವನ್ನೂ ಅದಿತಿಯ ಕುಂಡಲವನ್ನೂ ದೇವತೆಗಳ ರಾಜ್ಯವನ್ನೂ ವಶಪಡಿಸಿಕೊಂಡಿದ್ದನು. ಭೂಮಿಯ ಮೇಲಿನ ಎಲ್ಲ ರಾಜರನ್ನು ಸೋಲಿಸಿ ಅವರ ಮಕ್ಕಳಾದ ಹದಿನಾರು ಸಾವಿರ ಸುಂದರಿಯರನ್ನು ಹಿಡಿದೊಯ್ದು ತನ್ನ ಅರಮನೆಯಲ್ಲಿ ಬಂಧಿಸಿದ್ದನು. ಇಂದ್ರನ ವಿನಂತಿಯ ಮೇರೆಗೆ ಕೃಷ್ಣನು ಸತ್ಯಭಾಮೆಯೊಂದಿಗೆ ಭೌಮಾಸುರನಲ್ಲಿ ಹೋಗೆ ಕೋಟೆಯ ಕಾವಲಾದ ಮುರನನ್ನು ಕೊಂದು, ಭೌಮಾಸುರನ ಕೂಡ ಯುದ್ಧಮಾಡಿ ಸೋಲಿಸಿಕೊಂಡು, ಛತ್ರ ಕುಂಡಲಗಳೊಂದಿಗೆ ಹಾಗೂ ಸೆರೆಯಿಂದ ಬಿಡುಗಡೆ ಹೊಂದಿದ ಸುಂದರಿಯರೊಂದಿಗೆ ಮರಳುವಾಗ ಭೌಮಾಸುರನ ತಾಯಿಯಾದ ಭೂಮತೆಯ ಪ್ರಾರ್ಥನೆಯಂತೆ ಭೌಮಸುರನ ಮಗನಾದ ಭಗದತ್ತನಿಗೆ ಅಭಯವಿತ್ತು ೧೬ ಸಾವಿರ ಸುಂದರಿಯರನ್ನು ಲಗ್ನವಾಗಲು ಒಪ್ಪಿ ದ್ವಾರಕಿಗೆ ಕಳಿಸಿದನು. ಕೃಷ್ಣ ಸತ್ಯಭಾಮೆಯರು ಇಂದ್ರ, ಇಂದ್ರಾಣಿಯರಿಂದ ಸತ್ಕಾರ ಹೊಂದಿದರು ಆಗ ಕೃಷ್ಣನು ಅದಿತಿಗೆ ಕುಂಡಲವನ್ನೂ ವರುಣನಿಗೆ ಛತ್ರವನ್ನೂ ಮರಳಿ ಒಪ್ಪಿಸಿ ದ್ವಾರಕಿಗೆ ಬರುವ ಮಾರ್ಗದಲ್ಲಿ ನಂದನದಲ್ಲಿ ಪಾರಿಜಾತ

ವೃಕ್ಷವನ್ನು ಕಂಡು ಸತ್ಯಭಾಮೆಯ ಇಚ್ಛೆಯಂತೆ ಅದನ್ನು ಕಿತ್ತುಕೊಂಡು ಆಗ ಹೋರಾಟಕ್ಕೆ ಬಂದ ಇಂದ್ರನನ್ನು ಸೋಲಿಸಿ ದ್ವಾರಕಿಗೆ ಮರಳಿದನು. ಸತ್ಯಭಾಮೆಯ ಅಂಗಳದಲ್ಲಿ ಪಾರಿಜಾತ ವೃಕ್ಷವನ್ನು ನೆಟ್ಟನು ಶುಭ ಮೂಹೂರ್ತದಲ್ಲಿ ಹದಿನಾರು ಸಾವಿರ ಸತಿಯರನ್ನು ಲಗ್ನವಾದನು.

**ಹರಿವಂಶ ಪುರಾಣದ ಕಥೆ :** ಇದು ನರಕಾಸುರ ವಧೆ ಮತ್ತು ಪಾರಿಜಾತಪಹರಣವೆಂದು ಎರಡು ಭಾಗವಾಗಿ ಹೇಳಲ್ಪಟ್ಟಿದೆ. ನರಕಾಸುರನೇ ಭೌಮಾಸುರನು. ಭಾಗವತದ ಕಥೆಯನ್ನು ನರಕಾಸುರ ವಧೆಯ ಕಥೆಯಾಗಿ ಹೇಳಿ ಇಂದ್ರಕೃಷ್ಣರ ಯುದ್ಧದ ಪ್ರಸಂಗವನ್ನು ಪ್ರತ್ಯೇಕವಾಗಿ ಹೇಳಿ ಪಾರಿಜಾತಾಪಹರಣದ ಕಥೆಯನ್ನಾಗಿ ಮಾಡಲಾಗಿದೆ.

ನರಕಾಸುರ ವಧೆಯ ಕಥೆಯಲ್ಲಿ ಬದಲಾವಣೆಯೇನೂ ಇಲ್ಲ. ಆದರೆ ಪಾರಿಜಾತ ಕಥೆ ಹೀಗಿದೆ : ದ್ವಾರಕೆಯಲ್ಲಿ ಕೃಷ್ಣನು ಒಂದು ದಿನ ರುಕ್ಮಿಣಿಯ ಉಪೋಷಣ ವತ್ರದ ಪಾರಣೆಯ ದಿನ ಸತಿಯೊಂದಿಗೆ ಆನಂದದಿಂದ ಇರುವಾಗ ನಾರದನು ಬಂದು ಪಾರಿಜಾತ ಪುಷ್ಪವನ್ನು ಕೃಷ್ಣನ ಕೈಯಲ್ಲಿ ಕೊಟ್ಟನು ಆತನು ಅದನ್ನು ರುಕ್ಮಿಣಿಯ ಮುಡಿಯಲ್ಲಿ ಇರಿಸಿದನು. ದೂತೆಯ ಮುಖಾಂತರ ಈ ವಾರ್ತೆಯನ್ನು ಕೇಳಿ ಸತ್ಯಭಾಮೆ ಸಿಟ್ಟಾದಳು. ಪ್ರಸಂಗ ತಿಳಿದು ಕೃಷ್ಣನು ಅವಳ ಬಳಿಗೆ ಹೋಗಿ ಸಂತೈಸಿ ಪಾರಿಜಾತ ವೃಕ್ಷವನ್ನೇ ತಂದು ಅವಳ ಅಂಗಳದಲ್ಲಿ ನೆಡುವುದಾಗಿ ವಚನವಿತ್ತನು. ನಾರದನ ಮುಖಾಂತರ ಇಂದ್ರನಿಗೆ ಪಾರಿಜಾತ ವೃಕ್ಷವನ್ನು ಕಳಿಸಲು ಹೇಳಿಕಳಿಸಿದನು. ಅದಕ್ಕೆ ಅವನು ನಿರಾಕರಿಸಿದ ಮೇಲೆ ಪ್ರದ್ಯುಮ್ನ ಮೊದಲಾದವರನ್ನು ತರಲು ಕಳಿಸಿದಾಗ ಅವರು ಪಾರಜಾತ ವೃಕ್ಷವನ್ನು ಕಿತ್ತು ಗರುಡನ ಮೇಲೆ ಹೇರಿಕೊಂಡು ಬರುವಾಗ ಇಂದ್ರನು ಘನ ಘೋರ ಸಂಗ್ರಾಮ ನಡೆಸಿದನು. ತನ್ನ ತಾಯಿ ತಂದೆಗಳಾದ ಕಶ್ಯಪ ಆದಿತಿಯರ ಸಂಧಾನದಿಂದ ಸಂಗ್ರಾಮ ನಿಂತು ಒಪ್ಪಂದವಾಯಿತು. ಆಗ ಕೃಷ್ಣನು ಆ ಪಾರಿಜಾತ ವೃಕ್ಷವನ್ನು ಸತ್ಯಭಾಮೆಯ ಅಂಗಳದಲ್ಲಿ ನೆಟ್ಟನು ಸತ್ಯಭಾಮೆ ವೈಭವದಿಂದ ಪುಣ್ಯಕ ವ್ರತವನ್ನು ಮಾಡಿದಳು.

ಭಾಗವತದಲ್ಲಿಯ ಪಾರಿಜಾತಾಪಹರಣಕ್ಕೆ ಹಿನ್ನೆಲೆಯಾಗಿ ಬರುವ ಈ ಘಟನೆಯನ್ನು ಕುರಿತು ಅನೇಕರು ಬರೆದಿರುವಂತೆ ಕಾಣುತ್ತದೆ. 'ಪಾರಿಜಾತ' ಸತ್ಯಭಾಮೆಯ ಸವತಿ ಮಾತ್ಸರ್ಯವನ್ನು ಬಿಂಬಿಸುವ ಹಾಗೂ ಕೃಷ್ಣನ ಪತ್ನೀ ಪ್ರೇಮವನ್ನು ವ್ಯಕ್ತಗೊಳಿಸುತ್ತದೆ. ಕೃಷ್ಣ ತನ್ನ ಪ್ರೀತಿಯ ಹೆಂಡತಿಯ ಕೋಪಕ್ಕೆ ಮಣಿಯುವ ವಾತ್ಸಲ್ಯಮಯಿ ಗಂಡನಾಗಿ ಕಾಣಿಸಿಕೊಳ್ಳುವ ಈ ಘಟನೆ ಗಿರಿಯಮ್ಮನನ್ನು ಸೆಳೆದ ಪರಿಣಾಮವಾಗಿ ಈ ಹಾಡು ರಚಿತವಾಗಿದೆ. ಕೃಷ್ಣನ ಓಲಗಕ್ಕೆ ನಾರದಮುನಿ ದೇವಲೋಕದಿಂದ ಪಾರಿಜಾತದ ಪುಷ್ಪ ತರುತ್ತಾನೆ. ತಂದ ಪಾರಿಜಾತ ಪುಷ್ಪವನ್ನು ಕೃಷ್ಣನಿಗೆ ಕೊಟ್ಟು ರುಕ್ಮಿಣಿಗೆ ಕೊಡುವಂತೆ ಹೇಳುತ್ತಾನೆ. ಅದರಂತೆ ಕೃಷ್ಣ ಅದನ್ನು ರುಕ್ಮಿಣಿಗೆ ಕೊಡುತ್ತಾನೆ. ಈ ವಿಷಯ ತಿಳಿದ ಸತ್ಯಭಾಮೆ ಕೃಷ್ಣನ ಮೇಲೆ ಸಿಟ್ಟಿಗೆದ್ದು 'ತಲ್ಲಣಿಸುತ ಎದೆ ಧಿಗಿಲೆಂದು ಭುಗಿ ಭುಗಿಲೆಂದು ಮನದಲ್ಲಿ ಅತಿನೊಂದು' ಪ್ರಲಾಪಿಸುವ ಚಿತ್ರ ಸಹಜ ಸುಂದರವಾಗಿ ಬಂದಿದೆ.

ಮೆಚ್ಚಿ ಬಂದನೆ ಮೋಹಕ್ಕೆ ಮರುಳಾದನೆ
ಹೆಚ್ಚಿಕಿ ಮಾತ ಹರಿಯು ತಾ ಕೇಳಿದನೆ
ನೆಚ್ಚಿ ಇದ್ದೆನೆ ಎನ್ನೊಳು ವಂಚಿಸಿದನೆ
ರಚ್ಚಿಗಿಕ್ಕಿದ ರಂಪು ಮಾಡಿದ ಕಾಣೆ[೪೩]

ಎಂದು ಇತ್ಯಾದಿಯಾಗಿ ಕೊರಗುತ್ತಾಳೆ. ಬಗೆ ಬಗೆಯಾಗಿ ಪ್ರಲಾಪಿಸುತ್ತಾ 'ಬಾರದಿದ್ದರೆ ಪ್ರಾಣ ಉಳಿಯದು' ಎಂದು ವಿರಹದಿಂದ ಪರಿತಪಿಸುತ್ತಾಳೆ. ತೊಟ್ಟ ತೊಡಿಗೆಯನ್ನೆಲ್ಲ ಈಡಾಡಿ ಪಟ್ಟೆ ಮಂಚದಲ್ಲಿ ಮಲಗಿರುತ್ತಾಳೆ. ಕೃಷ್ಣನ ಮೇಲೆ ಸಿಟ್ಟಿದ್ದಾರೂ

ಮಳೆಯಿಲ್ಲದ ಮೇಘವಿದ್ಯಾತಕಮ್ಮ
ಬೆಳೆಯಿಲ್ಲದ ಭೂಮಿ ಮತ್ಯಾತಕಮ್ಮ
ಗಿಳಿ ಇಲ್ಲದ ಗೂಡು ತಾನ್ಯಾತಕಮ್ಮ
ತಾಳಲಾರೆನೊ ಶ್ರೀಕೃಷ್ಣನಿಲ್ಲದೆ ಎಲ್ಲ[೪೪]

ಎಂದು ವಿರಹಾಲಾಪ ಮಾಡುವ ಅವಳ ಚಿತ್ರಣ ಮರುಕ ಹುಟ್ಟಿಸುತ್ತದೆ.

ಯಾಕೆನ್ನ ಬ್ರಹ್ಮ ಪುಟ್ಟಿಸಿದನೊ ಸೃಷ್ಟಿಸಿದನೊ
ಮಾತಿನ್ನಾಕೊ ಪಡೆದಲೊ
ಸಾಕಿನ್ನು ಹೆಣ್ಣು ಜನ್ಮದ ಬಾಳು
ಯಾಕೆ ಹೇಳು ತಾಕಲೆನ್ನಯಗೋಳು[೪೫]

ಎಂದು ಹೆಣ್ಣು ಜನ್ಮವನ್ನು ಹಳಿದುಕೊಳ್ಳುತ್ತಾ ನಿಟ್ಟುಸಿರು ಬಿಡುತ್ತಾಳೆ. ಆಕೆಯ ದುಃಖ ನಿರಾಶೆಗಳು ನಿಧಾನವಾಗಿ ಕೋಪವಾಗಿ ಮಾರ್ಪಡುತ್ತವೆ. 'ಎಲ್ಲರೊಡನೆ ಕೋಪಿಸುತ ತೊಟ್ಟ ತೊಡಿಗೆ ಈಡಾಡುತ' ಮಂಚದಲ್ಲಿ ಒರಗುತ್ತಾಳೆ. ಇಲ್ಲಿನ ಸತ್ಯಭಾಮೆ ಪರಿಸ್ಥಿತಿಗೆ ಶರಣಾಗಿ ಕುಳಿತುಕೊಳ್ಳದ ಹೆಣ್ಣಾಗದೆ ಸಿಟ್ಟಿನಿಂದ ಘುಡಿಘುಡಿಸುತ್ತ ಆರ್ಭಟಿಸುತ್ತ ಎಲ್ಲರೊಡನೆ ಕೋಪಿಸುತ್ತ ತೊಟ್ಟ ಆಭರಣವನ್ನು ಕಳಚಿ ಬಿಸಾಡುತ್ತ ಪ್ರತಿಭಟನೆ ವ್ಯಕ್ತಪಡಿಸುತ್ತಾಳೆ. ಕೃಷ್ಣನಿಗೂ ತಾನು ಮಾಡಿದ ಕಾರ್ಯದ ಪರಿಣಾಮದ ಬಗ್ಗೆ ಚಿಂತೆ ಮತ್ತು ಸತ್ಯಭಾಮೆಯ ಬಗ್ಗೆ ಅಳುಕು ಇದ್ದೇ ಇದೆ. ಕೃಷ್ಣನು ಆತಂಕದಿಂದಲೇ ಸತ್ಯಭಾಮೆಯಲ್ಲಿಗೆ ಬರುತ್ತಾನೆ. ತುಂಬ ಸರಳವಾದ ಮಾತುಗಳಲ್ಲೇ ಈ ಚಿತ್ರವನ್ನು ಗಿರಿಯಮ್ಮ ಸೊಗಸಾಗಿ ಚಿತ್ರಿಸಿದ್ದಾಳೆ.

ದೇವಲೋಕದ ಹೂವು ತನಗಿಲ್ಲವಲ್ಲ
ಭಾಮೆ ಎನ್ನೊಳು ಮುನಿಯದೆ ಬಿಡುವಳಲ್ಲ
ಆವ ಪರಿಯಲಿ ತಿಳಿದು ಹೇಳುವೆನು ಸೊಲ್ಲ
ಜೀವದೊಲ್ಲಭೆಯೊಡನೆ ಪಂಥವು ಸಲ್ಲ[೪೬]

ಎಂದು ಚಿಂತಿಸುತ್ತಲೇ ಸತಿಯ ಬಳಿಗೆ ಬರುತ್ತಾನೆ. ಅವಳ ಕೋಪವನ್ನು ಕಂಡು ತನ್ನ ಅಪರಾಧಕ್ಕೆ ಕ್ಷಮೆ ಕೇಳಿ ಪಾರಿಜಾತದ ಮರವನ್ನೇ ತಂದು ನಿಲ್ಲಿಸುತ್ತೇನೆ ಎಂದು ಬಲರಾಮ, ನಂದಗೋಪರ ಮೇಲೆ ಆಣೆಯಿಟ್ಟು ಸಂತೈಸುತ್ತಾನೆ. ಮತ್ತು ಭರವಸೆ ನೀಡಿ ಸಮಾಧಾನ ಮಾಡುತ್ತಾನೆ. ಹೀಗೆ ಸತ್ಯಭಾಮೆಯ ದುಃಖ, ಕೋಪ ತಾಪಗಳು ಬಹು ಚೆನ್ನಾಗಿ ಸಹಜವಾಗಿ ಮೂಡಿಬಂದಿದೆ.

ಇದೇ ವಸ್ತುವನ್ನು ಕುರಿತು ಗಿರಿಯಮ್ಮನ ಸಮಕಾಲೀನರೇ ಆಗಿದ್ದ ಶ್ರೀ ಪ್ರಸನ್ನ ವೆಂಕಟದಾಸರು (ಕ್ರಿ.ಶ.೧೬೮೦-೧೭೫೨) ಇನ್ನಷ್ಟು ವಿಸ್ತಾರವಾಗಿ ೫೧ ನುಡಿಗಳಲ್ಲಿ ಒಂದು ದೊಡ್ಡ ಹಾಡನ್ನೇ ರಚಿಸಿದ್ದಾರೆ. ಗಿರಿಯಮ್ಮ ಇಲ್ಲಿ ಕೃಷ್ಣನು ಸತ್ಯಭಾಮೆಗೆ ಭಾಷೆ ಕೊಡುವಲ್ಲಿಗೆ ನಿಲ್ಲಿಸಿದ್ದರೆ ಪ್ರಸನ್ನ ವೆಂಕಟದಾಸರಲ್ಲಿ ಒಂದು ದಿನ ನಾರದ ದೇವಲೋಕದಿಂದ ತಂದ ಒಂದು ಪಾರಿಜಾತದ ಹೂವನ್ನು ಕೃಷ್ಣನಿಗೆ ಕೊಡುತ್ತಾನೆ. ಕೃಷ್ಣ ಅದನ್ನು ರುಕ್ಮಿಣಿಗೆ ಕೊಡುತ್ತಾನೆ. ಈ ಸುದ್ದಿ ಕೇಳಿದ ಸತ್ಯಭಾಮೆ ಕೃಷ್ಣ ತನ್ನನ್ನು ಅವಮಾನಿಸಿದನೆಂದು ತಿಳಿದು ಕೋಪಗೊಳ್ಳುತ್ತಾಳೆ. ಕೃಷ್ಣ ಪಾರಿಜಾತದ ವೃಕ್ಷವನ್ನೇ ತಂದು ನಿನ್ನ ಮನೆಯಂಗಳದಲ್ಲಿ ನೆಡುತ್ತೇನೆ ಎಂದು ಆಕೆಯನ್ನು ಸಮಾಧಾನಪಡಿಸುತ್ತಾನೆ. ಕಥೆ ಮುಂದುವರೆದು ಕೃಷ್ಣ ನರಕಾಸುರನನ್ನು ಕೊಂದು ಇಂದ್ರಪೂಜಿತವಾಗಿ ಅನಂತರದಲ್ಲಿ ಪಾರಿಜಾತ ವೃಕ್ಷವನ್ನು ಕದ್ದುತರುವಾಗ ದೇವತೆಗಳೊಂದಿಗೂ ಯುದ್ಧ ಮಾಡಿ ಅವರನ್ನು ಸೋಲಿಸುತ್ತಾನೆ. ಹೀಗೆ ಕದ್ದು ತಂದ ಸುರಪಾರಿಜಾತ ವೃಕ್ಷವನ್ನು ಸತ್ಯಭಾಮೆಯ ಮನೆಯೆದುರಲ್ಲಿ ನೆಡುತ್ತಾನೆ. ಅದರ ನೆರಳಲ್ಲಿ ಸತ್ಯಭಾಮೆಯ ಆಪೇಕ್ಷೆಯಂತೆ ಆಕೆಯೊಡನೆ ಲೆತ್ತದಾಟವನ್ನಾಡುತ್ತಾನೆ. ಹೀಗೆ ಸತ್ಯಭಾಮೆಯೊಡನೆ ಲೀಲಾ ವಿನೋದದಲ್ಲಿ ತೊಡಗಿದ ಕೃಷ್ಣನ ಈ ಲೀಲೆಯನ್ನು ಹಾಡಿದವರಿಗೆ ಕೃಷ್ಣ ಸುಖವನೀವ ಎಂಬ ಆಶಯದೊಡನೆ ಕೃತಿ ಕೊನೆಗೊಳ್ಳುತ್ತದೆ. ಭಾಗವತದಲ್ಲಿ ಕೃಷ್ಣನ ಬಾಲಲೀಲೆಗಳನ್ನು ಮನದುಂಬಿ ಹಾಡಿರುವ ದಾಸರು ಇಲ್ಲಿ ಆತನ ವಿವಾಹಿತ ಬದುಕಿನ ಒಂದು ಭಾಗವನ್ನು ಚಿತ್ರಿಸಿದ್ದಾರೆ.

ಪ್ರಸನ್ನ ವೆಂಕಟದಾಸರಲ್ಲಿ ಎರಡು ಶ್ಲೋಕದ ನಂತರ ಎರಡು ಪದ ಈ ಕ್ರಮದಲ್ಲಿ ಇಡೀ ಹಾಡು ರಚಿತವಾಗಿದೆ. ಎರಡು ಹಾಡುಗಳ ಮೂಲಭಾವ ಒಂದೆ ಇದ್ದರೂ ಪ್ರಸನ್ನವೆಂಕಟದಾಸರಲ್ಲಿ ಕಥಾ ವಸ್ತುವನ್ನು ವಿಸ್ತರಿಸುವುದರ ಜೊತೆಗೆ ವರ್ಣನೆಗಳೂ ಹೆಚ್ಚಿವೆ ಮತ್ತು ಭಾಷೆ ಹೆಚ್ಚು ಪ್ರೌಢವಾಗಿದೆ.

### ೪.೫. ಅಜಾಮಿಳ

ಭಾಗವತದಲ್ಲಿ ಷಷ್ಠ ಸ್ಕಂದದಲ್ಲಿ ಪರಮ ಪಾಪಿಯಾದ ಅಜಾಮಿಳನು ಪರಮ ಪದವಿ ಪಡೆದ ಕಥೆ ಕಂಡುಬರುತ್ತದೆ. ಹರಿದಾಸರಿಗೆ ಅತ್ಯಂತ ಪ್ರಿಯವಾದ ಅಜಾಮಿಳನ ಕಥೆಯನ್ನು ಎಲ್ಲ ದಾಸರೂ ವರ್ಣಿಸಿದ್ದಾರೆ. ''ದಯಮಾಡಿ ಸಲಹಯ್ಯ ಭವ ನಿವಾರಣನೆ' ಎಂದು ಪ್ರಾರ್ಥಿಸುತ್ತಾ ಶ್ರೀ ಪಾದರಾಯರು.

ಜಾತಿಧರ್ಮವ ಬಿಟ್ಟು ಅಜಮಿಳನು ಇರುತಿರಲು
ಪ್ರೀತಿಯಿಂದಲಿ ಮುಕುತಿ ಕೊಡಲಿಲ್ಲವೆ

ಎಂದು ಹೇಳಿ 'ಸ್ಮರಣೆ ಮಾತ್ರದಿ ಅಜಮಿಳಗೆ ಮುಕ್ತಿಯನಿತ್ತೆ' ಎಂಬುದಾಗಿ ಆ ಪ್ರಸಂಗವನ್ನು ನೆನೆಯುತ್ತಾ ಅಂತೆಯೇ ತಮ್ಮನ್ನು ಕಾಪಾಡಬೇಕೆನ್ನುತ್ತಾರೆ. ಇನ್ನೊಂದು ಕೃತಿಯಲ್ಲಿ

ಅಜಮಿಳನು ಕುಲಗೆಟ್ಟು ಕಾಲದೂತರು ಬರಲು
ನಿಜ ಸುತನ ಕರೆಯಲವನತಿವೇಗದಿ
ತ್ರಿಜಗದೊಡೆಯನೆ ಪುರಂದರವಿಠಲ ಕರುಣದಿ
ನಿಜದೂತರನು ಕಳುಹಿ ಕಾಯ್ದುಗಡ ಹರಿಯೆ

ಎಂದು ಅಜಾಮಿಳ ತನ್ನ ಮಗನನ್ನು 'ನಾರಾಯಣ' ಎಂದು ಕರೆಯದರೆ ಆ ಕೂಗಿಗೆ ಕಿವಿಗೊಟ್ಟ ಭಗವಂತ ಅವನನ್ನು ಕಾಯ್ದ ಅಂಶವನ್ನರುಹಿದ್ದಾರೆ. 'ಜಯಪಾಂಡುರಂಗ ನಾನಿನ್ನ ಮನಕೆ ಬಾರೆನೆ' ಎಂದು ಕೇಳುತ್ತಾ ಅಂತ್ಯ ಸಮಯದಲ್ಲಿ ಅತಿಭ್ರಷ್ಟ ಅಜಾಮಿಳಗೆ ಅಂತಕನ ಬಾಧೆಯ ಬಿಡಿಸಿದೆಯೋ'' ಎಂದು ಯಮದೂತರನ್ನಟ್ಟಿ ಅಜಾಮಿಳನನ್ನು ತನ್ನ ಬಳಿಗೆ ಕರೆಸಿಕೊಂಡ ವಿಷ್ಣು ತಮ್ಮನ್ನೂ ಕಾಪಾಡಬೇಕೆಂದು ಪ್ರಾರ್ಥಿಸುತ್ತಾರೆ. ಮತ್ತೊಮ್ಮೆ 'ನೀನೆ ದಯಾಸಂಪನ್ನನೋ' ಎಂದು ಕಾವೇರಿರಂಗನ ದಯಾ ಮಮತೆಯನ್ನು ಹಾಡಿಕೊಳ್ಳುತ್ತಾ

ನಿಂದಿತ ಕರ್ಮಗಳೊಂದು ಬಿಡದೆ ಬೇ
ಕೆಂದು ಮಾಡಿದನಂದಜಮಿಳನು
ಕಂದಗೆ ನಾರಗನೆಂದರೆ ಮುಕುತಿಯ
ಕುಂದದಲಿತ್ತ ಮುಕುಂದನು ನೀನೆ

ಎಂದು ಶ್ರೀಹರಿ ಅಜಾಮಿಳನಿಗೆ ಮುಕ್ತಿಯನ್ನಿತ್ತುದನ್ನು ಸ್ಮರಿಸಿದ್ದಾರೆ. ಹಾಗೆಯೇ ಪುರಂದರದಾಸರು ತಮ್ಮ ಒಂದು ಉಗಾಭೋಗದಲ್ಲಿ ಹರಿಯ ಕಾರುಣ್ಯವನ್ನು ಹರಿಯ ನಾಮವನ್ನು ಸ್ಮರಿಸಿದರೆ ದುರಿತದ ಭಯವಿಲ್ಲವೆಂಬ ತಮ್ಮ ನಂಬಿಕೆಯನ್ನೂ ಅಜಾಮಿಳನ ಕಥೆಯ ಮೂಲಕ ಸ್ಪಷ್ಟಪಡಿಸಿದ್ದಾರೆ.

ಶ್ರವಣದಿಂದ ಹೋಯಿತು ಬ್ರಹ್ಮಹತ್ಯಾಪಾಪ
ಸ್ಮರಣೆಯಿಂದ ಹೋಯಿತು ಸೇರಿದ್ದ ಪಾಪವು
ಎಲ್ಲಿದ್ದ ಅಜಾಮಿಳ ಎಲ್ಲಿತ್ತು ವೈಕುಂಠ
ಕೊಟ್ಟಾತನೆ ಬಲ್ಲ ಪುರಂದರ ವಿಠಲ

ಎಂದು ಶ್ರವಣ, ಸ್ಮರಣ ಭಕ್ತಿಗಳಿಂದ ಸಕಲ ಪಾಪಗಳೂ ನೀಗುವುದೆಂಬುದನ್ನು ಮಹಾಪಾಪಿಯಾದ ಅಜಾಮಿಳ ನಾಮ ಸ್ಮರಣೆ ಮಾತ್ರದಿಂದ ವೈಕುಂಠವನ್ನು ಸೇರಿದ ಪ್ರಸಂಗವನ್ನು ಪ್ರಸ್ತಾಪಿಸಿ ಶ್ರೀ ಹರಿಯ ನಾಮ ಬಲದ ಮಹತ್ವವನ್ನು ವರ್ಣಿಸಿದ್ದಾರೆ.

ಮೇಲಿನ ಅಜಾಮಿಳನ ಪ್ರಸಂಗದ ಚಿತ್ರಣವನ್ನು ಇತರ ಹರಿದಾಸರು ತಮ್ಮ ಬೇರೆ ಬೇರೆ ಕೀರ್ತನೆಗಳ ಭಾಗಗಳಾಗಿ ಮಾತ್ರ ಚಿತ್ರಿಸಿದ್ದಾರೆ. ಆದರೆ ಪುರಂದರದಾಸರು. ಈ ಅಜಾಮಿಳನ ವೃತ್ತಾಂತವನ್ನು ಇಡೀ ಒಂದು ಪ್ರತ್ಯೇಕ ಕೀರ್ತನೆಯಲ್ಲಿ ಹರಿನಾಮ ಮಹಿಮೆಯ ಪ್ರತಿಪಾದನೆಗೆ ಪೂರಕವಾಗಿ ಬಳಸಿಕೊಂಡಿದ್ದಾರೆ. ಅಜಾಮಿಳನು ಅಪಾರ ಪಾಪ ಮಾಡಿದರೂ ಅಂತ್ಯಕಾಲದಲ್ಲಿ ನಾರಾಯಣ ಸ್ಮರಣೆ ಮಾತ್ರದಿಂದ ಮೋಕ್ಷ ಹೊಂದಿದ ಸಮಾಚಾರ ಸರ್ವಭಕ್ತ ವಿದಿತವಾಗಿದೆ. ಪ್ರತಿಯೊಬ್ಬ ವ್ಯಕ್ತಿಗೂ ತಾನು ಪಾಪಿ, ತಾನು ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತ ಉಂಟೊ ಇಲ್ಲವೊ ತಾವೆಲ್ಲ ಮೋಕ್ಷವನ್ನು ಪಡೆಯಲು ಅಸಾಧ್ಯ ಎಂಬ ಸಕಲ ಸಂದೇಹಗಳಿಗೆ ವಿವರವಾದ ಹಾಗೂ ಸ್ಪಷ್ಟವಾದ ನಿದರ್ಶನವಾಗಿ ಅಜಾಮಿಳನ ದೃಷ್ಟಾಂತ ಮೂಡಿ ಬಂದಿದೆ. ಪುರಂದರದಾಸರ ಈ ಕೆಳಗಿನ ಇಡಿಯಾದ ಕೃತಿ ಅಜಾಮಿಳನ ಚರಿತ್ರೆಯನ್ನು ಒಳಗೊಂಡಿದೆ.

ನಾರಾಯಣಾ ನಿನ್ನ ನಾಮವನು ನೆನೆದರೆ
ಹಾರಿ ಹೋಹುದು ಪಾಪಾ ಜನ್ಮ ಜನ್ಮಾಂತರದಿ
ಶ್ರೀರಮಣ ನಿನ್ನ ಕೃಪೆಯಿತ್ತೆಮಗೆ ಮುಕ್ತಿಯ
ದಾರಿ ತೋರಿಸೊ ಮುರಾರಿ ||ಪ||

ಸಕಲ ವೇದ ಪುರಾಣ ಶಾಸ್ತ್ರವನ್ನು ತಿಳಿದೋದಿ
ಭಕುತಿಯಿಂ ತಾಯ್ತಂದೆಗಳ ಚಿತ್ತ ವಿಡಿದವರ
ಮುಕನಾಗಿ ನಿಂದು ಮೈಮರೆದ ಪಾತಕಿಯ ಬಹ
ಮರಿತವನ್ನು ತಾನರಿಯದೆ ||೧||

ಎಂದು ಪ್ರಾರಂಭಿಸಿ, ಮುಂದೆ ಮೊದಲನೆಯ ನುಡಿಯಲ್ಲಿ ಸಕಲ ವೇದ ಪುರಾಣ ಶಾಸ್ತ್ರಗಳನ್ನೂ ಓದಿ ತಾಯಿ ತಂದೆಗಳ ಮನಸ್ಸಿನಂತೆ ನಡೆದುಕೊಂಡು, ಅವರನ್ನು ಸಲಹುತ್ತಿದ್ದ ಸುಕುಮಾರನಾದ ಅಜಾಮಿಳನ ಪರಿಚಯ ಮಾಡಿ ಕೊಡುತ್ತಾರೆ. ಒಂದು ದಿನ ಹೋಮಕ್ಕಾಗಿ ಸಮಿತ್ತು ತರಲು ಹೋದ ಅಜಾಮಿಳ ಒಬ್ಬ ಚಾಂಡಾಲಿಕೆಯನ್ನು ಕಂಡು ಕಾಮಾಂಧನಾಗಿ

ನಿಲ್ಲು ನಿಲ್ಲೆಲೆ ಕಾಂತೆ ನಿನಗೊಲಿದೆ ನೀನಾರೆ
ಸೊಲ್ಲಿಸೆನ್ನೊಡನೆ ಸತಿಯರ ಕುಲಕೆ ಕಟ್ಟಾಣಿ
ಚೆಲ್ಲೆನ್ನ ಮೇಲೆ ಕರುಣವನಿಂತು ಕೋಮಲೆಯ ನಿಲ್ಲು

ಎಂದು ಅವಳ ಸೆರಗನ್ನು ಹಿಡಿಯುತ್ತಾನೆ. ಆಗ ಆಕೆ ಬ್ರಾಹ್ಮಣ ಕುಮಾರ ತನ್ನನ್ನು ಮುಟ್ಟಿದುದನ್ನು ನೋಡಿ ತಾನು ಕುಲಹೀನೆಯೆಂದೂ, ಗೋಮಾಂಸ ಭಕ್ಷಣೆ ಮಾಡಿ ಚರ್ಮದ ಹಾಸಿಗೆಯಲ್ಲಿ ಮಲಗುವವಳೆಂದೂ ಹೇಳಿ ಕೊಳ್ಳುತ್ತಾಳೆ. ಆದರೂ ಕಾಮಾಗ್ನಿಯಿಂದ ಪರಿತಪಿಸುತ್ತಿದ್ದ ಅಜಾಮಿಳ.

ಹಾಲಂತ ಕುಲವ ನೀರೊಳಗದ್ದಿ ಪೂರ್ವದಾ
ಶೀಲವನ್ನಳಿದು ಸತಿಯಳ ಕೂಡಿ ತಾನು ಚಾಂ
ಡಾಲತಿಗೆ ಹತ್ತು ಮಕ್ಕಳನ್ನು ಪಡೆಕೊಂಡವರ
ಲೀಲೆ ನೋಡುತಲಿ

ಹಿಗ್ಗುತ್ತಿದ್ದ ಹೀಗಿರಲು ಅವನ ಮೃತ್ಯು ಒದಗಿಬಂತು. ಯಮನ ಆಳುಗಳು ಆ ಕುಲಗೆಟ್ಟವನನ್ನು ಸೆಳೆದೊಯ್ಯಲು ಬಂದರು ಅಂಜಿದ ಅಜಾಮಿಳ ತನ್ನ ಮಗನನ್ನು 'ನಾರಾಗಾ' ಎಂದು ಕರೆಯುತ್ತಲೇ ಯಮದೂತರು ಹೆದರಿ ಭಯದಿಂದ ಓಡಿದರು. ಕೂಡಲೇ

ಪುಂಡರೀಕಾಕ್ಷನೀ ಭೃತ್ಯನನು ಬಾಧಿಸುವ
ಲಂಡರಿವರಾರು ನೂಕಿರಿ ನೂಕಿರೆಂತೆಂದು
ದಂಡವನು ತೆಗೆದು ಬೀಸಾಡಿ ಯಮನವರಿಗು
ದ್ದಂಡರಿವರೆಂದರಾಗ

ಎನ್ನುತ್ತಾರೆ. ಹಾಗೆ ಅವರನ್ನು ದೂಷಿಸಿದ ಹರಿಭಟರು ಅಜಾಮಿಳನನ್ನು ವೈಕುಂಠಕ್ಕೆ ಕರೆದೊಯ್ಯುತ್ತಾರೆ. ಅವನು ಪಶ್ಚಾತ್ತಾಪ ಪಡಲಾರಂಭಿಸುತ್ತಾನೆ. ವಿಪ್ರಕುಲದಲ್ಲಿ ಹುಟ್ಟಿ, ವೇದ ಶಾಸ್ತ್ರಗಳನ್ನೋದಿ ತಾಯಿ, ತಂದೆ, ಕುಲಪತಿ ಎಲ್ಲರನ್ನೂ ಬಿಟ್ಟು ಕಾಮನಿಗೆ ವಶನಾದ ಅವನು ತನ್ನ ಕೃತ್ಯಕ್ಕೆ ತಾನೇ ನಾಚಿ, 'ತಪ್ಪಲಿಲ್ಲವೊ ಹಣೆಯ ಬರಹವಿದು ಭುವನದೊಳು' ಎಂದು ಹೇಳಿ ವಿಧಿಯ ಮೇಲುಗೈಯನ್ನು ಸೂಚಿಸುತ್ತಾನೆ. ಈ ರೀತಿ ಅಜಾಮಿಳನ ಕತೆಯನ್ನು ಹೇಳಿದ ದಾಸರು

ಇಳೆಯೊಳಗೆ ಶ್ರೀ ಪುರಂದರವಿಠಲನಾಮವನು
ನೆಲೆಯರಿತು ನೆನೆವರಿಗೆ ಯಮನ ಬಾಧೆಗಳಿಲ್ಲ
ಸುಲಭದಿಂದಲಿ ಸಾಯುಜ್ಯ ಪದವಿಯು ಸತ್ಯ
ಬಲುನಂಬಿ ಭವಿಸಿ ಜನರು

ಎಂದು ಪುರಂದರದಾಸರು ಉಪದೇಶಿಸುತ್ತಾರೆ. ಹೀಗೆ ಹರಿದಾಸರು ಅಜಾಮಿಳನನ್ನು ಪರಮ ಪದವಿಗೇರಿಸಿ ಈ ಹಿನ್ನೆಲೆಯಲ್ಲಿ ಹರಿಯ ಕರುಣಾಪರತೆ, ಹರಿನಾಮ ಮಹಿಮೆ ವಿಧಿಯ ಕೈವಾಡ ಇವುಗಳ ಹಿರಿಮೆ ಗರಿಮೆಗಳನ್ನು ಬಣ್ಣಿಸಿದ್ದಾರೆ. ಪುರಂದರದಾಸರ ಪ್ರೇರಣೆ ಪ್ರಭಾವದಿಂದ ಹೆಳವನಕಟ್ಟೆ ಗಿರಿಯಮ್ಮಳು ಅಜಾಮಿಳನ ಚರಿತ್ರೆಯನ್ನು ಹರಿಭಕ್ತಿ ಪಾರಮ್ಯದಿಂದ ತನ್ನ ಕೀರ್ತನೆಯಲ್ಲಿ ವರ್ಣಿಸಿದ್ದಾಳೆ.

ನಾರಾಯಣಯೆಂಬೊ ನಾಮವನು ನೆನೆದರೆ
ಹಾರಿ ಹೋಹುದು ಜನ್ಮಜನ್ಮದ ಪಾಪಗಳು
ಶ್ರೀರಮಣ ನಿಮ್ಮ ನಾಮಸ್ಮರಣೆ ನಿತ್ಯನಗೆ ದೊರಕಿಸಿ
ಮುಕ್ತಿದೋರಿಸು ಮುರಾರಿ ||ಪ||

ಸಕಲ ವೇದ ಪುರಾಣ ಶಾಸ್ತ್ರಗಳ ತಿಳಿದೋದಿ
ಭಕ್ತಿಯಲಿ ತಾಯತಂದೆಯ ಚಿತ್ತವಿಡಿದವರ
ರಕ್ಷಣ್ಯವನು ಮಾಡಿ ಜಗದೊಳಗೆ ಖ್ಯಾತಿಯಲಿ
ಸುಕುಮಾರನೆನಿಸಿಕೊಂಡು
ಪ್ರಕೃತಿಯಲಿ ಹೋಮಕ್ಕೋಸ್ಕರ ಸಮಿದೆ ತರಹೋಗಿ
ದುಷ್ಕೃತ್ಯದ ಫಲದಿಂದ ಅಂತ್ಯಜಳನು ಕಂಡು ಕಾ
ಮುಕನಾಗಿ ಮೈಮರೆದು ಅಜಮಿಳ ತಾನು ಪಾತಕವೆಂದು ಅರಿತರಿಯದೆ[೪೭] ||೧||

ಪುರಂದರದಾಸರಲ್ಲಿ 'ಕುಕರುಮಗಳಿಂದ ಚಾಂಡಾಲತಿಯ ಕಂಡು ತಾ' ಎಂದಿದ್ದರೆ ಅದನ್ನು ಗಿರಿಯಮ್ಮ ಸ್ವಲ್ಪ ಮಟ್ಟಿಗೆ ಮಾರ್ಪಾಟು ಮಾಡಿದ್ದಾಳೆ. 'ದುಷ್ಕೃತ್ಯದ ಫಲದಿಂದ ಅಂತ್ಯಜಳನು ಕಂಡು ತಾ' ಎಂದಿದೆ ಆದರೆ ಅವನೇನು ದುಷ್ಕೃತ್ಯ ಮಾಡಿರಲಿಲ್ಲವೆಂದಾದರೂ ಅವಳನ್ನು ನೋಡಿದ್ದೆ ಒಂದು ದುಷ್ಕೃತ್ಯ ಎಂದು ದಾಸರು ಹೇಳುತ್ತಾರೆ. ನೋಡುತ್ತಲೆ ಕಾಮುಕನಾದ ಎಂದು ದಾಸರು ರಚಿಸಿರುವುದರಿಂದ ಅಜಾಮಿಳನ ಚಿತ್ರ ಅವರು ಅಷ್ಟು ಸ್ಪಷ್ಟವಾಗಿ ನೀಡಿಲ್ಲವೆಂದು ತೋರುತ್ತದೆ. ಭಾಗವತದಲ್ಲಿ ಅವನು ಕಾಮುಕನಾಗಲು ಕಾರಣವನ್ನು ಸ್ಪಷ್ಟವಾಗಿ ಹೇಳಿದ್ದಾರೆ. ವನದಲ್ಲಿಯ ಶೂದ್ರ ದಂಪತಿಗಳ ಕಾಮಕೇಳಿ ವೀಕ್ಷಣವೇ ಅವನ ಚಿತ್ತ ಚಂಚಲಕ್ಕೆ ಕಾರಣ ದಾಸರು ಅದನ್ನು ಹೇಳದೆ ಕೇವಲ ಅಂತ್ಯಜಳನ್ನು (ಚಾಂಡಾಲತಿಯನ್ನು) ಕಂಡೊಡನೆ ಕಾಮುಕನಾದ ಎಂದಿದೆ. ಇನ್ನು ಮುಂದಿನ ನುಡಿಯಲ್ಲಿ

ನಿಲ್ಲು ನಿಲ್ಲೆಲೆ ಕಾಂತೆ ನಿನಗೊಲಿದೆ ನೀನಾರು
ಸೊಲ್ಲಿಸೆನ್ನೊಡನೆ ಸತಿಯರ ಕುಲಕೆ ಕಟ್ಟಾಣಿ
ಇಲ್ಲಿ ಬಾ ಅಂಜಬ್ಯಾಡೆಲೆ ಮುಗದವೆಂಗಳೆ
ಹುಲ್ಲೆನೋಟದ ಭಾವಕಿ
ಸಲ್ಲಿಲಿತ ಗಾತ್ರೆ ಸೊಕ್ಕಾನೆ ಮೆಲ್ಲಡಿಯಳೆ
ಮಲ್ಲಿಗೆಗಂಧಿ ಮದನನ ಕೈಯ ಮಸೆದಲಗೆ
ಚೆಲ್ಲೆನ್ನಮ್ಯಾಲೆ ಕರುಣವನು ಕೋಮಲೆನಿಲ್ಲೆಂದು ಸೆರಗ ಪಿಡಿದ[೪೮] ||೨||

ಭಾಗವತದಲ್ಲಿ ಶೂದ್ರ ದಂಪತಿಗಳ ಕಾಮ ಕೇಳಿ ನೋಡಿ ಚಿತ್ತ ಚಾಂಚಲ್ಯದಿಂದ ಮನೆಗೆ ಹೋಗಿ ಶೂದ್ರಳ ಮೇಲೆ ಮನಸೋತು ಅವಳಿಗೆ ಬೇಕು ಬೇಕಾದ ಪ್ರಿಯವಾದ ವಸ್ತುಗಳನ್ನು ತಂದುಕೊಟ್ಟು ಮೋಹಿಸಿದನೆಂದು ಹೇಳುವಲ್ಲಿ ಮಾನವ ಸಹಜ ದೌರ್ಬಲ್ಯ ಕಾಣುತ್ತದೆ. ಆದರೆ ದಾಸರು ಚಿತ್ರಿಸಿದ ಈ ಮೇಲಿನ (೩)ನೇ ನುಡಿಯಲ್ಲಿ ಅಜಾಮಿಳನ ಪಾಶವಿ ಪ್ರವೃತ್ತಿ ಎದ್ದುಕಾಣುತ್ತದೆ. ಮೇಲಾಗಿ ಭಾಗವತದಲ್ಲಿ ಶೂದ್ರ ದಂಪತಿ ಎಂದು ಮಾತ್ರ ಹೇಳಿದರೆ, ದಾಸರು ಚಾಂಡಲ ಸ್ತ್ರೀ ಎಂದು ಉಲ್ಲೇಖಿಸಿದ್ದಾರೆ. ಭಾಗವತದಲ್ಲಿ ಅವಳ ಪತಿಯ ಉಲ್ಲೇಖವೂ ಬರುವುದರಿಂದ ಹಾಗೆ ಚಿತ್ರಿಸಿರಬಹುದು.

ಹಾಗು ದಾಸರು ಸೃಷ್ಟಿಸಿದ ಸನ್ನಿವೇಶದಲ್ಲಿ ಚಾಂಡಾಲ ಸ್ತ್ರೀ ಏಕಾಕಿಯಾದುದರಿಂದ ಅಜಾಮಿಳನ ಕಾಮುಕ ಪ್ರವೃತ್ತಿ ಅಷ್ಟೊಂದು ನಿರಂಕುಶವಾಗಿ ಚಿತ್ರಿಸಿರಬಹುದೆಂದು ಊಹಿಸಬಹುದಾಗಿದೆ.

ಎಲೊ ವಿಪ್ರಕೇಳು ನಾವು ಕುಲಹೀನರೆಮ್ಮ ನೆಯ
ಹೊಲಸಿನ ಮಾಂಸ ಗೋವಿನ ಚರ್ಮದ್ಮಾಸಿಕೆಯು
ಎಲ್ಲವುಗಳ ರಾಶಿ ಬೊಗಳುವ ಹಿಂಡು ನಾಯಿಗಳು
ಬಲು ಘೋರ ಎನಿಸಿಪ್ಪುದು
ಬಲೆಗೆ ಸಿಕ್ಕಿದ ಪಕ್ಷಿ ಬೇಂಟೆಯವಗಲ್ಲದೆ
ಕುಲವ ಕೊಡುವದೆ ಕಾಮಿನಿ ಕೇಳು ನಿನ್ನೊಡನೆ
ಸತಿ ಬಾಳಿ ಬದುಕಿ ನಾ ಸುಖದಲ್ಲಿ ಇಹೆನೆಂಬ
ಛಲವೊಂದೆ ಎನಗೆ ಎಂದ[೪೯] ||೩||

ಈ ನುಡಿಯು ದಾಸರ ಸ್ವಕಲ್ಪಿತ ಈ ಸನ್ನಿವೇಶವು ಭಾಗವತದಲ್ಲಿ ಕಂಡುಬರುವುದಿಲ್ಲ. ಅಜಾಮಿಳನು ಮಹಾಪಾಪಿ ಎಂದು ಓದುಗರಿಗೆ, ಭಕ್ತರಿಗೆ ಮನದಟ್ಟಾಗಲು ಹೆಳವನಕಟ್ಟೆ ಗಿರಿಯಮ್ಮಳು (ದಾಸರು) ಸೇರಿಸಿದ ಹೊಸ ಚಿತ್ರಣವಾಗಿದೆ. ಇದರಲ್ಲಿ ಬಲೆಗೆ ಸಿಕ್ಕ ಪಕ್ಷಿ ಬೇಟೆಗಾರನದಲೆ ಎಂದು ಹೇಳುವಳು. ಅಜಾಮಿಳನ ಪಾತ್ರ ನೋಡಿದರೆ ಅವನೊಬ್ಬ ಸಹಜ ವಿಟ ಪುರುಷನಂತೆ ಕಾಣುತ್ತಾನೆ. ಹಾಗೂ ಛಲದಿಂದ ಬದುಕುವೆನು ಎನ್ನುವಲ್ಲಿ ಸಮಾಜದ ನಿಂದೆಗೆ ಲಕ್ಷಕೊಡಲಿಲ್ಲವೆಂದು ತಿಳಿಯುತ್ತದೆ. ಇಲ್ಲಿ ಸಂಯಮದ ರೇಖೆಯನ್ನು ದಾಟಿ ಮೀತಿ ಮೀರಿ ವರ್ತಿಸುವ ಅಜಾಮಿಳನ ದಿಟ್ಟ ನಿಲುವನ್ನು ಗುರುತಿಸಬಹುದು.

ವ್ಯರ್ಥ ಎನ್ನೊಡನೆ ಮಾತ್ಯಾಕೆಲೊ ವಿಪ್ರ
ಚಿತ್ತವೆನ್ನಲ್ಲಿ ಇದ್ದರೆ ಹೋಗಿ ನೀ ಎನ್ನ
ಹೆತ್ತ ತಂದೆಯ ಕೇಳು ಸಮತವಾದರೆ ಮತ್ತೆ ನಿನಗೊಲಿವೆನೆಂದಳು
ಅತ್ತ ಕಾಮಿನಿಯ ಒಡಗೂಡಿ ಆಕೆಯ ಪಿತನ
ಹತ್ತಿರಕೆ ಹೋಗಿ ಕೇಳಿದರಾತನಿಂತೆಂದ ಇಂಥ
ಉತ್ತಮದ ಕುಲವನೀಡಾಡಿ ನೀ ಪಾತಕದ
ಮೊತ್ತಕೊಳಗಾಗದಿರೊ[೫೦] ||೪||

ಗಿರಿಯಮ್ಮಳು ಸೃಷ್ಟಿಸಿದ ಈ ಸನ್ನಿವೇಶ ಅತ್ಯಂತ ಸೋಜಿಗವಾಗಿದೆ. ಚಾಂಡಾಲ ಪ್ರೇಮಿಯೊಡನೆ ಅಜಾಮಿಳನು ಮನೆಗೆ ಬಂದು ತಂದೆಗೆ ಅವಳೊಡನೆ ಮದುವೆಯಾಗಲು ಅಪ್ಪನ ಕೇಳಬೇಕಾದರೆ ಆಗ ಅವನು ಅದೆಷ್ಟು ಕಾಮಾಂಧನಾಗಿರಬೇಕು. ಅವನ ತಂದೆ ಪೌರಾಣಿಕ ಯುಗದ ಸಂಪ್ರದಾಯಸ್ತ ಮನೆತನದ ಆದರ್ಶ ಬ್ರಾಹ್ಮಣನಾದುದರಿಂದ ನೀತ ಹೇಳಿ ಅವಳನ್ನು ಕೂಡ ಬೇಡಾ ಎಂದು ಹೇಳಿದನು.

ಆಗದಾಗದು ಎನ್ನ ಕುಲಬಂಧು ಬಳಗವನು
ನೀಗಿ ನಿಮ್ಮೊಡನೆ ಕೊಡುವೆನೆಂಬ ಮತವೆನಗೆ
ನಾಗ ಭೂಷಣನ ಪಣೆಗಣ್ಣಿಂದ (ಉರಿದನ) ಬಾಣತಾಗಿತೆನ್ನದೆಯನೆಂದ
ಕೂಗಿ ಹೇಳಿದೆ ನಿನ್ನ ಕುಲವಳಿಯದಿರೆಂದು
ಹೋಗಿ ಕೂಡೊ ಹೆತ್ತ ತಾಯಿ ತಂದೆಗಳ ಅದು
ಆಗದಿದ್ದರೆ ಆಚೆ ಮನೆಯೊಳಗೆ ನೀವಿಬ್ಬರಲ್ಲಿರಿ ಹೋಗೆಂದನು[೫೧] ||೫||

ಅಜಾಮಿಳನು ತಂದೆಯ ಬುದ್ಧಿ ಮಾತನ್ನು ತಿರಸ್ಕರಿಸಿ ತನ್ನ ಕಾಮಿನಿಯನ್ನು ಕೂಡುವುದಕ್ಕೆ ಕುಲ, ಬಂಧು ಬಳಗವನ್ನು ತ್ಯಜಿಸಲು ಸಿದ್ಧವಾಗಿ ಅವಳಿಗೆ ತನ್ನ ಆಶ್ವಾಸನೆ ಹಾಗೂ ಅವಳಿಗೆ ಮಾರು ಹೋಗಿ ತಾನು ಕಾಮನ ಬಾಣಕ್ಕೆ ಗುರಿಯಾದುದನ್ನು ತಿಳಿಸುವನು. ಈ ನುಡಿಯು ಸಹ ದಾಸರು ಸೃಷ್ಟಿಸಿದ ಮೊದಲಿನ ಸನ್ನಿವೇಶಕ್ಕೆ ಪೂರಕವಾಗಿದೆ. ಆದಾಗ್ಯೂ ಆ ಚಾಂಡಾಲತಿ ಇನ್ನೊಮ್ಮೆ ಅವನಿಗೆ ತಿಳಿಯ ಹೇಳುವಳು. ಇಲ್ಲಿ ಅವರಿಬ್ಬರು ಬೇರೆ ಸಂಸಾರರ ಹೂಡುವ ಏರ್ಪಾಡು ಮಾಡಿಕೊಳ್ಳುತ್ತಾರೆ. ಇಲ್ಲಿಯವರೆಗೆ (೨ನೇ ನುಡಿಯಿಂದ ೫ನೇ ನುಡಿಯವರೆಗೆ) ಚಿತ್ರಿಸಿರುವುದೆಲ್ಲಾ ದಾಸರ ಸ್ವಕಲ್ಪಿತದ್ದಾಗಿದೆ. ಇವುಗಳ ಸುಳಿವು ಭಾಗವತದಲ್ಲಿಲ್ಲ. ಇದೊಂದು ನಾಟಕೀಯ ಶೈಲಿಯಲಿ ಓದುವ ಕೀರ್ತನೆ ನುಡಿಗಳು ಒಂದಕ್ಕೊಂದು ಪೂರಕವಾಗಿದ್ದು ಸುಸಂಬದ್ಧವಾಗಿ ರಚಿಸಲ್ಪಟ್ಟಿವೆ. ದಾಸರ ಮನಸ್ಸಿನಲ್ಲಿಯ ಭಾವ ಓದುಗರಿಗೆ ಸಂಪೂರ್ಣ ಅರ್ಥವಾಗುತ್ತದೆ. ದಾಸರು (ಗಿರಿಯಮ್ಮ) ಮಾಡಿದ ಈ ಮಾರ್ಪಾಟನಿಂದ ಭಾಗವತದ ಅಜಾಮಿಳನಿಗಿಂತಲು ದಾಸರು ಚಿತ್ರಿಸಿದ ಅಜಾಮಿಳ ಮಹಾಪಾಪಿ ಅಂತಹ ಪಾತಕಿಯನ್ನು ಸಹ ಮೋಕ್ಷ ಕೊಟ್ಟ ಶ್ರೀಮನ್ನಾರಾಯಣನ ನಾಮಸ್ಮರಣೆಯನ್ನು ಪ್ರಭಾವಶಾಲಿಯಾಗಿ ಬೋಧಿಸಲು ಮಾಡಿಕೊಂಡು ಮಾರ್ಪಾಟೆಂದು ತಿಳಿದುಬರುತ್ತದೆ.

ಹಾಲಂತ ಕುಲವ ನೀರೊಳಗದ್ದಿ ಪೂರ್ವದ
ಶೀಲವನಳಿದು ಸತಿಯೊಡಗೂಡಿ ತಾನು ಚಾಂ
ಡಾಲತಿಗೆ ಹತ್ತುಮಕ್ಕಳ ಪಡೆದು ತಾನವರ ಲೀಲೆಯನು ನೋಡಿ ಹಿಗ್ಗಿ
ಆಲಂಬನದಲಿ ಅಜಾಮಿಳನು ಇರುತಿರಲಾಗ
ಕಾಲ ಬಂದೊದಗಿ ಕರೆಯಿರೊ ಪಾತಕಿಯನೆಂದು
ಜೋಲುದುಟಿ ಡೊಂಕು ಮಾರಿಲಭ್ರದಿಂ ಯಮನಾಳುಗಳು ಇಳಿದರಾಗ[೫೨] ||೬||

ಈ ಮೇಲಿನ ನುಡಿಯು ಭಾಗವತದಲ್ಲಿರುವಂತೆ ಯಥಾವತ್ತಾಗಿದೆ. ಹತ್ತಾರು ಶ್ಲೋಕಗಳ ಅಂತರಾರ್ಥವನ್ನು ಒಂದೆ ನುಡಿ ಪ್ರತಿನಿಧಿಸುತ್ತದೆ. ಒಂದನೆಯ ನುಡಿಯಿಂದ ಆರನೆ ನುಡಿಯವರೆಗೆ ಗೀತ ನಾಟಕದ ರೂಪದಂತಿದ್ದು ಮುಂದಿನ ನುಡಿಗಳ ಗತಿಯು ಸ್ವಲ್ಪ ಹೆಚ್ಚಿದಂತೆ ತೋರುತ್ತಿದ್ದು ಕಥನ

ಕವನದಂತೆ ಮುಂದುವರೆಯುತ್ತದೆ. ಹೀಗಿರಲು ಅವನ ಮೃತ್ಯು ಒದಗಿ ಬಂತು ಯಮನ ಆಳುಗಳು ಆ ಕುಲಗೆಟ್ಟವನನ್ನು ಸೆಳೆದೊಯ್ಯಲು ಬಂದರು. ಅಂಜಿದ ಅಜಾಮಿಳ ತನ್ನ ಮಗನನ್ನು 'ನಾರಾಗ' ಎಂದು ಕರೆಯುತ್ತಲೇ ಯಮದೂತರು ಹೆದರಿ ಭಯದಿಂದ ಓಡಿದರು ಕೂಡಲೇ

ಎಡೆಗೈಯ ಪಾಶಗಳು ಹಿಡಿದ ಚಮ್ಮಟಿಗಳು
ಒಡನೊಡನೆ ಚವುರಿಗಳು ವಜ್ರದ ಮೋಲೆಯ
ತುಡುಕಿ ಹಿಡಿ ಕೆಡಹಿ ಕಟ್ಟಿರೊ ಪಾತಕನನೆಂದು
ಘುಡುಘುಡಿಸುತಲಿ ನಿಂತರು
ಕಡು ಹಸುಳೆ ಕಂದನಿವನೆಷ್ಟು ಅಂಜುವನೆಂದು
ಗಡಗಡನೆ ನಡುಗಿ ಕಂಗೆಟ್ಟು ಅಜಾಮಿಳ ತಾನು
ಪಡೆದ ಮಗನ ನಾರಗನೆಂದು ಕರೆಯಲು ನುಡಿಯಲಾಲಿಸಿದ ಸ್ವಾಮಿ[೫೩] ||೭||

ಈ ನುಡಿಯು ಸಹ ಭಾಗವತದ ಪಡಿನೆಳಲಾಗಿದ್ದು ಯಮದೂತರ ಭಯಂಕರ ರೂಪ ವರ್ಣನೆಯಲ್ಲಿಯು ಸಹ ಸಾಮ್ಯತೆ ಇದೆ. ಯಮಭಟರ ಘೋರ ಸ್ವರೂಪದ ವರ್ಣನೆಯು, ಭಾಗವತದಲ್ಲಿರುವುದೆ. ಆದರೂ 'ತುಡುಕಿ ಹಿಡಿ ಕೆಡಹಿ ಕಟ್ಟಿರೊ ಪಾತಕನನೆಂದು ಘುಡಿ ಘುಡಿಸಿ' ಮೊದಲಾದ ಅಚ್ಚಗನ್ನಡ ಶಬ್ದ ಪ್ರಯೋಗದಿಂದ ದಾಸರು ಸ್ವಂತಿಕೆಯನ್ನು ಮೆರೆದಿದ್ದಾರೆ. ಯವಭಟರ ಅಬ್ಬರ ವರ್ಣನೆ ಭಾಗವತಕ್ಕಿಂತಲು ದಾಸರು ರಚಿಸಿದ ಈ ಹಾಡಿನಲ್ಲಿ ಸಂಗ್ರಹವಾಗಿ ಹಾಗೂ ಸಹಜ ಸುಂದರವಾಗಿ ಚಿತ್ರಿಸಲಾಗಿದೆ ಎಂದು ಹೇಳಬಹುದು. ಅಜಾಮಿಳನ ಅಂತ್ಯಕಾಲದ ಚಿತ್ರವು ಸಹ ದಾಸರು ಭಾಗವತಕ್ಕಿಂತಲೂ ಸ್ಪಷ್ಟವಾಗಿ ಚಿತ್ರಿಸಿದ್ದಾರೆ. ಮೇಲಿನ ನುಡಿಯಲ್ಲಿ ಘುಡಿಘುಡಿಸಿ ಬಂದ ಯವಭಟರನು ನೋಡಿ ಗಡಗಡನೆ ನಡುಗಿ ಭಯಭೀತನಾಗಿ ತನ್ನ ಚಿಕ್ಕ ಮಗನಾದ ನಾರಾಯಣನಿಗೆ 'ನಾರಗ' ಎಂದು ಕರೆದನು. ಭಾಗವತದಲ್ಲಿ ನಾರಾಯಣ ಎಂದಿದೆಯೇ ಹೊರತು 'ನಾರಗ'ನೆಂದಲ್ಲ ಬಹುಶಃ ಭಯಭೀತನಾದ ಅಜಾಮಿಳನ ತೊದಲು ನುಡಿಯ ಸಂದರ್ಭದಲ್ಲಿ ನಾರಾಯಣ ಎಂಬ ಪದ ನಾರಗ ಎಂದು ದಾಸರು ಪ್ರಯೋಗಿಸಿರಬಹುದು.

ಮರಣ ಕಾಲದಿ ಶ್ರೀಹರಿಯೆಂಬ ನಾಮವನು
ಸ್ಮರಣೆಯನು ಮಾಡಲು ಅವನ ಕೋಟಿ ಜನ್ಮದ ಪಾಪ
ಹರಿವುದಾಕ್ಷಣದಲ್ಲಿ ಕರುಣದಿಂದ ಜಮಿಳನ ಕರೆತನ್ನಿರಿಲ್ಲಿಗೆಂದ
ಉರದೊಳೊಪ್ಪುವ ತುಳಸಿದಂಡೆ ಪೀತಾಂ
ಬರವು ಗದೆ ಶಂಖ ಚಕ್ರ ದ್ವಾದಶನಾಮವನು
ಧರಿಸಿ ಕರವೆತ್ತಿ ಅಂಜ ಬ್ಯಾಡೆಲೊ ಎಂದು ಹರಿದಾಸರೈ ತಂದರು.[೫೪] ||೮||

ಈ ನುಡಿಯಲ್ಲಿ ಹರಿಯ ದೂತರ ವೇಷ ಭೂಷಣ ವರ್ಣನೆಯು ಭಾಗವತದಲ್ಲಿದ್ದಂತೆಯೇ 'ದ್ವಾದಶ ನಾಮಗಳನಿಟ್ಟು' ಎಂಬ ಪದ ದಾಸರ ಸ್ವಂತ ಪ್ರಯೋಗವಾಗಿದೆ. ಭಾಗವತವನ್ನು ದ್ವೈತ ತತ್ವದ ದೃಷ್ಟಿಕೋನದಿಂದ ಕಂಡರಿಸಿದ್ದಾರೆ. ದ್ವೈತ ಸಂಕೇತವಾದ ದ್ವಾದಸ ನಾಮಗಳನ್ನು ಇಲ್ಲಿ ಉಲ್ಲೇಖಿಸಿದ್ದಾರೆ.

ಪುಂಡರೀಕಾಕ್ಷನ ಭೃತ್ಯನ ಭಾಧಿಸುವ
ಲಂಡರಿವರ್‍ಯಾರು ನೂಕಿ ನೂಕಿರೊ ಎಂದು ಯಮನ
ದಂಡವರು ಮುರಿದು ಬಿಸಾಡಿ ನಿಮ್ಮಸುವ ಹಿಂಡುವೆವು ಬಂದಾಗ
ಕಂಡ ಹರಿದೂತರಿಗೆ ಯಮನಾಳುಗಳೆರಗಿ ಭೂ
ಮಂಡಲದೊಳಗೆ ಎಮ್ಮೊಡೆಯ ಯಮಧರ್ಮನ
ದಂಡವ ಮುರಿದವರನು ನಾ ಕಾಣೆ ನೀವೆ
ಉದ್ದಂಡರಹುದೆಂದರಾಗ[೧೫] ||೯||

ವಿಷ್ಣುದೂತರು ಅಂತರಿಕ್ಷದಿಂದಿಳಿದು ಬಂದು ಅಜಾಮಿಳನ ಮುಂದೆ ನಿಂತರು. ದಾಸಿ ಪತಿಯಾದ ಅಜಾಮಿಳನ ಪಾಪಿ ಜೀವನವನ್ನು ಹೃದಯದಿಂದ ಬಲಾತ್ಕಾರವಾಗಿ ಎಳೆಯುತ್ತಿರುವ ಯಮದೂತರನ್ನು ತಡೆದು ಬೇಡ ಬೇಡ ಎಂದು ನಿಲ್ಲಿಸಿದರು. ಭಾಗವತದಲ್ಲಿಯ ವಿಷ್ಣುದೂತರು ಈ ಮೇಲೆ ಉದ್ಧರಿಸಿದಂತೆ ನಮ್ರವಾಗಿ ಪ್ರತಿಕ್ರಿಯಿಸಿದರೆ, ದಾಸರ ದೃಷ್ಟಿಯಲ್ಲಿ ವಿಷ್ಣುದೂತರು ಯಮದೂತರ ವಿಷಯದಲ್ಲಿ ಬಹಳ ಉದ್ಧಟವಾಗಿ ನಡೆದುಕೊಂಡಿದ್ದಾರೆ. ಅವರಿಗೆ ಅಜಾಮಿಳನು ಮಾಡಿದ ಹರಿನಾಮ ಸ್ಮರಣಯೆ ಮೂಲ ಕಾರಣವಾಗಿ ಅವರಿಗೆ ಅಜಾಮಿಳನ ಬಗ್ಗೆ ಮಮಕಾರ ಉಂಟಾಗುತ್ತದೆ. ಅಸಹಾಯಕರಾದ ಯಮಧೂತರು ದೈನ್ಯದಿಂದ ಪ್ರಶ್ನಿಸುತ್ತಾರೆ.

ತಂದೆ ಕೇಳೆಮ್ಮ ಬಿನ್ನಪವ ಲಾಲಿಸಿ ನೀವು
ಒಂದು ದಿನ ಹರಿಯೆಂಬ ಧ್ಯಾನವನರಿಯನು ನಾವು
ಬಂದೆಳೆಯಲಾತ್ಮಜನ ನಾರಗಾ ಎನಲು ಕುಂದಿತೆ ಇವನ ಪಾಪ
ಹಂದಿ ಕುರಿಗಳಿರ ನಿಮಗಿಷ್ಟು ಮಾತುಗಳ್ಯಾಕೆ
ನಿಂದಿರದೆ ಹೋಗ್ಯೆಂದು ನೂಕಿ ಯಮನಾಳ್ಗಳನು
ತಂದಪೆವು ದಿವ್ಯ ಪುಷ್ಪಕವನೆಂದೆನುತ ಬಂದರಾ ವೈಕುಂಠಕೆ[೧೬] ||೧೦||

ದಾಸರು ಯಮಭಟರಿಗೆ ತೀರಾ ಅಲಕ್ಷ ಮಾಡಿದ್ದಾರೆ. ಅದೇನೆಂದರೆ ಅವರು ಅಜಾಮಿಳನ ವಿರೋಧವಾಗಿ ಹಾಕಿದ ಪ್ರಶ್ನೆಗೆ ವಾದಕ್ಕಾಸ್ಪದ ಕೊಡದೆ ವಿಷ್ಣುದೂತರು ಅವರಿಗೆ ನಿಮ್ಮೊಡೆಯನಿಗೆ ದೂರು ಹೇಳಬಹುದೆಂದು ತೇಲಿಸಿ ನುಡಿಯುತ್ತಾರೆ. ಮತ್ತು ಹಳಿಯುತ್ತಾರೆ ನಂತರ ಅವರನ್ನು ಅಟ್ಟಿ ಅಜಾಮಿಳನನ್ನು ವೈಕುಂಠಕ್ಕೆ ಕರೆದೊಯ್ಯುತ್ತಾರೆ. ಇನ್ನೂ ಮುಂದಿನ ಮೂರು ನುಡಿಗಳು ಅಜಾಮಿಳನ ಕೊರಗು ಹಾಗೂ ಪಶ್ಚಾತ್ತಾಪಕ್ಕೆ ಮೀಸಲಾಗಿದೆ. ಹಾಗೆ ಅವರನ್ನು ದೂಷಿಸಿದ ಹರಿಭಟರು ಅಜಾಮಿಳನನ್ನು

ವೈಕುಠಕ್ಕೆ ಕರೆದೊಯ್ಯುತ್ತಾರೆ. ಅವನು ಪಶ್ಚಾತ್ತಾಪ ಪಡಲಾರಂಭಿಸುತ್ತಾನೆ. ವಿಪ್ರಕುಲದಲ್ಲಿ ಹುಟ್ಟಿ, ವೇದ ಶಾಸ್ತ್ರಗಳನ್ನೋದಿ, ತಾಯಿ, ತಂದೆ, ಕುಲಸತಿ ಎಲ್ಲರನ್ನೂ ಬಿಟ್ಟು ಕಾಮನಿಗೆ ವಶನಾದ ಅವನು ತನ್ನ ಕೃತ್ಯಕ್ಕೆ ತಾನೇ ನಾಚಿ 'ತಪ್ಪಲಿಲ್ಲವೊ ಹಣೆಯ ಬರಹವಿದು ಭುವನದೊಳು' ಎಂದು ಹೇಳಿ ನಿಧಿಯ ಮೇಲುಗೈಯನ್ನು ಸೂಚಿಸುತ್ತಾನೆ. ತದನಂತರ ಅಜಾಮಿಳನು ಮರುಗುತ್ತ ಗಂಗಾಸ್ನಾನ ಮಾಡಿದ ಮೇಲೆ ಪುನಃ ವಿಷ್ಣುದೂತರು ವಿಮಾನತಂದು ವೈಕುಂಠಕ್ಕೆ ಕರೆದೊಯ್ಯುತ್ತಾರೆ. ಇಂತಹ ಹಲವಾರು ಚಿಕ್ಕ ಬದಲಾವಣೆಗಳನ್ನು ದಾಸರು ಅಲ್ಲಲ್ಲಿ ಮಾಡಿದ್ದಾರೆ. ಅಜಾಮಿಳನ ಕೊರಗು, ಪಶ್ಚಾತ್ತಾಪವನ್ನು ಹರಿದಾಸರು ಭಾಗವತಕಾರರಿಗಿಂತ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಆದ್ದರಿಂದ ಓದುಗರಿಗೆ ಭಕ್ತರಿಗೆ ಹೃದಯಂಗಮವಾಗುತ್ತದೆ.

ಎದ್ದು ಅಜಾಮಿಳನು ಮೂರ್ಛೆಯ ತಿಳಿದು ಎಚ್ಚೆತ್ತು
ಬಿದ್ದ ಕಾಯವನು ಭಾದಿಸಿದವರ್ಯಾರು ಉ
ಪದ್ರವನು ಬಿಡಿಸಿದ ದಿವ್ಯ ಸ್ವರೂಪದ ಸುಧಾತ್ಮರಾರು ಎಂದ
ಮಧ್ಯ ಪಾನವ ಮಾಳ್ಪ ಹೆಂಗಸಿನ ಒಡನಾಡಿ
ಅದ್ದಿದೆ ನೂರೊಂದು ಕುಲವ ನರಕದೊಳೆಂದು
ಹದ್ದಿನ ಬಾಯೊಳಗಿನುರಗನಂತಜಾಮಿಳನು ಇದ್ದ ತಾನತಿ ಮರುಗುತ ||೧೧||
ವಿಪ್ರ ಕುಲದಲಿ ಪುಟ್ಟಿ ವೇದಶಾಸ್ತ್ರವನೋದಿ
ಮುಪ್ಪಾದ ತಾಯಿ ತಂದೆಯ ಬಿಟ್ಟು ಬುಧ ಜನರು
ಒಪ್ಪಿ ಧಾರೆಯ ನೆರೆದ ಕುಲಸ್ತ್ರೀಯಳ ಬಿಟ್ಟು ಮದನ
ಬಾಧೆಗೆ ಸಿಲುಕಿ ದುಷ್ಟ
ತಾಪವ ಪೊತ್ತೆ ಜನನಿಂದಕನಾದೆ
ಅಪ್ರತಿಮ ಅನಂತಪಾತಕಿ ಭುವನದಲಿ
ತಪ್ಪಲಿಲ್ಲವೆ ಪಣೆಯ ಬರದ ಬರಹಗಳು ಇನ್ನುಭಾಪುರೆ ವಿಧಿ ಎಂದನು.[೫೭] ||೧೨||

ಕೊನೆಯ ನುಡಿಯು ಪುರಂದರದಾಸರಂತೆ ಗಿರಿಯಮ್ಮಳು ಓದುಗರಿಗೆ, ಭಕ್ತರಿಗೆ ಸಮಾಜದ ಜನರಿಗೆ ಉಪದೇಶ ಹಾಗೂ ಬೋಧನೆ ಮಾಡಲು ಮೀಸಲಿಟ್ಟಿದ್ದಾಳೆ. ಹರಿನಾಮ ಸ್ಮರಣೆಯಿಂದ ಅಜಾಮಿಳನಂತೆ ಸಾಯಜ್ಯ ಮೋಕ್ಷ ಪಡೆಯಲು ಸಾಧ್ಯ ಎಂದು ಉಪದೇಶಿಸುತ್ತಾಳೆ.

ಜಲಜನಾಭವ ದಿವ್ಯನಾಮವನು ನೆನೆದರೆ
ಕುಲಕೋಟಿ ದೋಷಗಳಿಲ್ಲ ಕುಂದುಗಿಂದುಗಳಿಲ್ಲ
ಛಲವ ಮಾಡದೆ ನೀವು ಬನ್ನಿರೊ ನಮಗವರು
ಸಲುವರಲ್ಲೆಂದ ಯಮನು

ನಲವಿಂದ ಹೆಳವನಕಟ್ಟೆ ಶ್ರೀ ವೆಂಕಟನ
ನೆಲೆಯರಿತು ನೆನೆದವರ್ಗೆಮನ ಭಾದೆಗಳಿಲ್ಲ
ಸುಲಭನಹನು ಸ್ವಾಮಿ ಸಾಯುಜ್ಯ ಪದವೀವ ಬಲು
ನಂಬಿ ಭಜಿಸಿ ಜನರು[೫೮] ||೧೫||

## ೪.೬. ಲೋಕನೀತಿ

ವಚನಕಾರರಂತೆಯೇ ಹರಿದಾಸರೂ ಕೂಡ ಉದ್ದೇಶ ಪೂರ್ವಕವಾಗಿ ಸಾಹಿತ್ಯವನ್ನು ಸೃಷ್ಟಿಸಲಿಲ್ಲ ಯಾರನ್ನೂ ಮೆಚ್ಚಿಸಲು ಅವರು ಬಾಳಲಿಲ್ಲ. ಬರೆಯಲಿಲ್ಲ ತಾವು ಧರ್ಮದ ಹಾದಿಯಲ್ಲಿ ನೀತಿಯ ನಡೆಯಲ್ಲಿ ಸಾಗುವಾಗ ತಮಗೆ ಆದ ಅನುಭವವನ್ನು ಮಾನವನ ಅತಃಕರಣದಿಂದ ನುಡಿದಂತೆ ನಡೆದರು. ಹಾಗೆ ನುಡಿಯುವಾಗ ಅವರು ಅನುಸರಿಸಿದ ರೀತಿ ಅನುಕರಣೀಯ. ಪ್ರೌಢವಾದ ಸಂಸ್ಕೃತದಲ್ಲಿದ್ದ ಸಿದ್ಧಾಂತ ಸಾರವನ್ನು ಜನರ ಬಾಳನ್ನು ಹಸನುಗೊಳಿಸುವ ಮಾರ್ಗವನ್ನು ಆಡುಭಾಷೆಯಲ್ಲೇ ಸರಳವಾಗಿ ಹೇಳಿದರು ಜನ ಸಾಮಾನ್ಯರಿಗೆ ಎಟುಕದ ತಿಳಿಯದೆ ಹೋದ ಆಧ್ಯಾತ್ಮಿಕ ವಿಚಾರಗಳಿಂದ ವಂಚಿತರಾಗಿದ್ದ ಜನ ಸಾಮಾನ್ಯರಿಗೆ ಅಚ್ಚಗನ್ನಡ ಸೊಲ್ಲಿನಲ್ಲಿ ತಿಳಿಯ ಹೇಳಿ ದಾಸರು ಮಾನವ ಜನಾಂಗಕ್ಕೆ ಮಹೋಪಕಾರ ಮಾಡಿದರು. ಅವರ ಹಾಡುಗಳು ವಿವಿಧ ರಾಗ, ತಾಳ, ಲಯಬದ್ಧಗಳ ಮೂಲಕ ತನ್ಮಯವಾಗಿ ಹಾಡುವುದರ ಜೊತೆಗೆ ಭಕ್ತಿರಸ ಪೂರ್ಣವಾಗಿದ್ದು ಹೃದಯವನ್ನು ಪರಿಶುದ್ಧಗೊಳಿಸಲು ಪ್ರಯತ್ನಿಸಿದವು.

ಆತ್ಮೋದ್ಧಾರವನ್ನು ಮುಖ್ಯ ಗುರಿಯಾಗಿಸಿಕೊಂಡ ಈ ದಾಸ ಸಾಹಿತ್ಯ ಕನ್ನಡಕ್ಕೆ ಪಾವಿತ್ರ್ಯತೆಯನ್ನು ತಂದುಕೊಟ್ಟಿದೆ. ಇದರಲ್ಲಿ ಕೇವಲ ಧಾರ್ಮಿಕ, ಆಧ್ಯಾತ್ಮಿಕ ವಿಚಾರಗಳಿಲ್ಲದೆ ನೀತಿ, ಜನರ ಸ್ವಭಾವ, ಮನೋದೌರ್ಬಲ್ಯಗಳು, ಲೋಕ ವಿಡಂಬನೆ ಹಾಸ್ಯ, ಚಮತ್ಕಾರದ ನುಡಿ ಅನುಭವದ ಮಾತು ಎಲ್ಲ ಉಂಟು. ಈ ವಾಙ್ಮಯದಲ್ಲಿ ತಾವು ಹೇಳುವ ಮಾತನ್ನು ಅನುಭವವನ್ನೂ ಅವರು ಜೀವನದಲ್ಲಿ ಅನುಭವಿಸಿ ಹೇಳಿರುವುದರಿಂದ ಅದು ಮತ್ತಷ್ಟು ಸತ್ತ್ವಪೂರ್ಣವಾಗಿ ಹೊರಹೊಮ್ಮಲು ಸಾಧ್ಯವಾಯಿತು.

ದಾಸ ಸಾಹಿತ್ಯದ ಇನ್ನೊಂದು ಗಮನಾರ್ಹ ವೈಶಿಷ್ಟ್ಯವೆಂದರೆ ಸಮಾಜದ ಹಾಗೂ ವ್ಯಕ್ತಿಗಳ ಓರೆ-ಕೋರೆಗಳನ್ನೂ ವಿವಿಧ ಮಾನವ ದೌರ್ಬಲ್ಯಗಳನ್ನೂ ಎತ್ತಿ ತೋರಿ, ಅವುಗಳನ್ನು ನಿವಾರಿಸಲು ದಾರಿ ತೋರಿದ್ದು, ದಾಸರು ಸಮಾಜವನ್ನು ಕುರಿತು ವ್ಯಂಗ್ಯ ವಿಡಂಬನೆ, ಹಾಸ್ಯ, ಕಟು ಟೀಕೆ, ನಿಷ್ಠುರ ನುಡಿಗಳ ಮೂಲಕ ಖಂಡಿಸಿ. ಕುಂದು ಕೊರತೆಗಳನ್ನು ಬಯಲಿಗೆಳೆದಿದ್ದಾರೆ. ಅನ್ಯಾಯವನ್ನು ಕಡ್ಡಿ ತುಂಡಾಗಿ ಖಂಡಿಸಿದ್ದಾರೆ. ರೂಢಿಯಲ್ಲಿದ್ದ ಎಷ್ಟೋ ದುಷ್ಟ ಸಂಪ್ರದಾಯಗಳನ್ನು ಅಂಧಶ್ರದ್ಧೆ ಡಂಬಾಚಾರ. ಮೂಢನಂಬಿಕೆ, ಅಷಾಡಭೂತಿತನ, ಸೋಗಿನ ಮಡಿವಂತಿಕೆ ಮೊದಲಾದವುಗಳನ್ನು ಕಟುವಾಗಿ, ವ್ಯಂಗವಾಗಿ ಟೀಕಿಸಿ ಅಲ್ಲಗಳೆದಿದ್ದಾರೆ. ಅಂತರಂಗ ಶುದ್ಧಿ ಹಾಗೂ ಸಾಮಾಜಿಕ ಶುದ್ಧಿ ಜೊತೆಯಲ್ಲಿಯಲ್ಲಿ

ಸಾಗಬೇಕೆಂದು ಉಪದೇಶಿಸಿದ್ದಾರೆ. ಹೀಗೆ ನಿಜವಾದ ಭಕ್ತಿಯನ್ನು ನಿರೂಪಿಸಿದ್ದಾರೆ. ಯಾವ ಸಿದ್ಧಾಂತವನ್ನೇ ತೆಗೆದುಕೊಳ್ಳಲಿ ಅದರಲ್ಲಿ ಪ್ರಮೇಯದ ಭಾಗ ಆಯಾ ಮತೀಯರನ್ನು ಕುರಿತುದಾದರೆ, ನೈತಿಕ ವಿಚಾರಗಳು ಸಾರ್ವತ್ರಿಕವಾಗಿರುತ್ತವೆ. ಈ ದೃಷ್ಟಿಯಿಂದ ಹರಿದಾಸರ ರಚನೆಗಳನ್ನು ಪರಿಶೀಲಿಸಿದಾಗ ಅವರು ಮಾನವ ಸಮುದಾಯದ ಮೇಲ್ಮೆಗಾಗಿ, ಒಳಿತಿಗಾಗಿ ಅಮೂಲ್ಯವಾದ ಕೃತಿಗಳನ್ನು ರಚಿಸಿರುವುದು ಕಂಡುಬರುತ್ತದೆ. ಮಾನವ ಜೀವನದ ನೈತಿಕ ಮೌಲ್ಯಗಳಿಗೆ ಅವರು ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿರುವುದು ಗಮನಾರ್ಹವಾಗಿದೆ.

೧೮ನೇ ಶತಮಾನದ ದಾಸ ಸಾಹಿತ್ಯದ ಪರಂಪರೆಯಲ್ಲಿ ಹೆಳವನಕಟ್ಟೆ ಗಿರಿಯಮ್ಮಳು ತನ್ನ ಸುತ್ತ ಮುತ್ತಲಿನ ಜೀವನದ ಕಡೆಗೂ ಮಾನವ ಸ್ವಭಾವದ ಕಡೆಗೂ ಅವಳು ತನ್ನ ದೃಷ್ಟಿ ಹರಿಸಿದ್ದಾಳೆ. ಹರಿದಾಸರು ಯಾವ ಸಾಮಾಜಿಕ ಕ್ರಾಂತಿಯನ್ನು ಮಾಡಿದವರಲ್ಲ. ಅವಳು ಮನುಷ್ಯರ ನಡೆ-ನುಡಿಗಳ ಓರೆ-ಕೋರೆಗಳನ್ನು ಕುರಿತು ಹೇಳಿರುವ ಕೆಲವು ರಚನೆಗಳನ್ನು ಪರಿಶೀಲಿಸಿದರೆ ಅವಳು ಸಾತ್ವಿಕ ಜೀವನದ ನಿರ್ವಹಣೆಗೆ ಎಷ್ಟು ಅಮೂಲ್ಯವಾದ ಸಲಹೆಗಳನ್ನು ನೀಡಿರುವಳೆನ್ನುವುದು ವಿಧಿತವಾಗುತ್ತದೆ.

ಯಾಕೆ ಮರುಳಾದೆ ಹೀಗೆ ಎಲೆ ಮನವೆ
ಕಾಕು ಬುದ್ಧಿಯ ಬಿಡು ಬಿಡು ಸುಮ್ಮನೆ ||ಪ||

ಧನದಾಸೆಯನು ಮರಿ ಮನುಮಥನ
ಬಾಣ ಕಳುಕದಿರು ತೊಳಲದಿರು
ನೆಲದಾಸೆಗೆ ನೀನದರ
ಅನುವರಿತು ಹರಿಯ ಸ್ಮರಿಸು ಮನವೆ ||೧||

ಅನ್ಯರಾಗುಣ ದೋಷಯಣಿಸಲೆ
ನಿನ್ನಿರವ ನೋಡು ಕಂಡ್ಯಾ ಮನವೆ
ಬಂಣಗಾರಿಕೆಯ ಬರಿದೆ ಔದಂಬ್ರ
ಹಣ್ಣಿನಂತೀ ಕಾಯವು ಮನವೆ ||೨||

ತಮ್ಮ ಬುದ್ಧಿ ತಲೆಗೆ ಸುತ್ತಿ ಸಂಸಾರ
ಭ್ರಮೆಗೊಂಡು ಬಳಲಾದಿರೋ
ಕಮಲ ಪತ್ರಕ್ಕೆ ಒಳಗಿನ ಜಲದಂತೆ
ನೆಲಕೆ ನಿರ್ಲೇಪನಾಗೋ ಮನವೆ ||೩||

ಈ ದೇಹ ಸ್ಥಿರವಲ್ಲವೊ ಕಾಲನಾ
ಬಾಧೆಗೋಳಗಾಗದಿರೋ ಮನವೆ

ಭೇದ ದುರ್ಗುಣವ ತ್ಯಜಿಸು ನೀ
ಗೇರು ಬೀಜದಂದದಿ ತಿಳಿಯೊ ಮನವೆ ||೪||

ಮಾಡು ಹರಿಸೇವೆಯನ್ನು ಮನದಣಿಯೆ
ಬೇಡು ಹರಿಭಕ್ತಿಯನ್ನು
ಕೂಡು ಹೆಳವನಕಟ್ಟೆಯ ವೆಂಕಟನ
ಬೇಡಿ ಯುಕ್ತಿಯನು ಪಡೆಯೊ ಮನವೆ[೪೯] ||೫||

ದಾಸ ಸಾಹಿತ್ಯದಲ್ಲಿ ಪುರಂದರದಾಸರಿಗೆ ಹಿರಿಯ ಸ್ಥಾನವಿದೆ. ಪುರಂದರದಾಸರಿಗೆ ಹರಿದಾಸ ದೀಕ್ಷೆಯನ್ನು ಅಂಕಿತವನ್ನು ನೀಡಿದ ಶ್ರೀವ್ಯಾಸರಾಯರು ತಮ್ಮ ಶಿಷ್ಯನ ಸಿದ್ಧಿಯನ್ನು ಮೆಚ್ಚಿಕೊಂಡು 'ದಾಸರೆಂದರ ಪುರಂದರ ದಾಸರಯ್ಯ' ಎಂದು ಮುಕ್ತಕಂಠದಿಂದ ಹೊಗಳಿರುತ್ತಾರೆ. ಹೀಗೆ ಪುರಂದರದಾಸರು ಅಪರೋಕ್ಷಾನುಭೂತಿಯಿಂದ ಬದುಕಿನ ಸತ್ಯವನ್ನು ಮನವರಿಕೆ ಮಾಡಿಕೊಂಡು ಭಕ್ತಿಯ ಘನವಾದ ಸಾಧನೆಯಿಂದ ದೈವ ದರ್ಶನ ಪಡೆದು ಬದುಕನ್ನು ಸಾರ್ಥಕವಾಗಿಸಿಕೊಂಡವರು ದಾಸರು ಸನ್ಯಾಸಿಗಳಂತೆ ಸರ್ವಸಂಗ ಪರಿತ್ಯಾಗಿಗಳಾದರೂ ಲೌಕಿಕವನ್ನು ಮರೆತವರಲ್ಲ. ಅವರ ಸಾಮಾಜಿಕ ಪ್ರಜ್ಞೆ ತಮ್ಮ ಅನುಭವ, ಅನುಭಾವಗಳನ್ನು ಇಡಿಯ ಸಮಾಜಕ್ಕೆ ಇತ್ತು ಮಾರ್ಗದರ್ಶನ ಮಾಡಿದರು. ದಾಸರು ಸಮಾಜದ ನಡುವೆಯಿದ್ದು ಪ್ರಾಪಂಚಿಕ ವಿಷಯ ಸುಖಗಳಲ್ಲಿ ಮುಳುಗಿದ ಜನರನ್ನು ವಿಡಂಬಿಸುವಾಗಲಿ, ಸಂಸಾರದ ಅಸಾರತೆಯನ್ನಾಗಲಿ, ಭಕ್ತಿಯ ಮೇಲ್ಮೆಯನ್ನಾಗಲಿ ಬೋಧಿಸುವಾಗ ಹಾಡಿನ ರೂಪದಲ್ಲಿ ಭಕ್ತಿಯೊಂದಿಗೆ ಜೀವನದ ಇತರ ಮಗ್ಗಲುಗಳನ್ನು ವಿಮರ್ಶಿಸುವಂತಾದುದು ಇವರ ಉಪದೇಶವಾಣಿಯ ಬಲದಿಂದಲೇ ಎಂಬುದು ವಿಧಿತವಾಗುತ್ತದೆ. ವೈಯಕ್ತಿಕ ಮತ್ತು ಸಾಮಾಜಿಕ ಮಟ್ಟದಲ್ಲಿ ಜನರ ಲೋಪ ದೋಷಗಳನ್ನು ಎತ್ತಿ ತೋರಿದ ಭಕ್ತಿಯ ಮೂಲಕವಾಗಿಯೇ ಹೀಗೆ ವ್ಯಕ್ತಿ ಮತ್ತು ಸಮಾಜ ಶುದ್ಧವಾಗಿ ಇರಬಲ್ಲದು ಎಂಬುದನ್ನು ಸಾರಿದರು. ಲೌಕಿಕ ಮತ್ತು ಪರಮಾರ್ಥಗಳೆರಡನ್ನೂ ಸಾಧಿಸುವ ಅವರ ಕೀರ್ತನೆಗಳಲ್ಲಿ ಕೆಲವು ಸಾಹಿತ್ಯಿಕವಾಗಿಯೂ ಮೇಲ್ಮಟ್ಟದ್ದಾಗಿವೆ.

ಪುರಂದರದಾಸರು ಜನರ ಡಾಂಬಿಕತನವನ್ನು ಕುರಿತು 'ನಗೆಯು ಬರುತಿದೆ ಎನಗೆ ನಗೆಯು ಬರುತಿದೆ | ಜಗದೊಳಿರುವ ಮನುಜರೆಲ್ಲ ಹಗರಣ ಮಾಡುವುದು ಕಂಡು' ಲೋಕದ ಅಜ್ಞಾನ, ಆಡಂಬರ, ಮೋಹ, ಮೋಸಗಳನ್ನು ಬಯಲಿಗೆಳೆದು ಶುದ್ಧಅಂತರಂಗ, ಜ್ಞಾನಪೂರ್ಣವಾದ ದೈವಭಕ್ತಿಯ ಸಾಧನೆಯ ಮಾರ್ಗವನ್ನು ಸ್ಪಷ್ಟಪಡಿಸಿದ್ದಾರೆ. ಮತ್ತೊಂದು ಕೀರ್ತನೆಯಲ್ಲಿ ಡಂಭಾಚಾರದ ಭಕ್ತಿಯ ಸ್ಪಷ್ಟ ಚಿತ್ರಣವನ್ನು ನೀಡಿದ್ದಾರೆ. ಉದರ ವೈರಾಗ್ಯವಿದು ನಮ್ಮ ಪದುಮನಾಭನಲಿ ಲೇಶ ಭಕುತಿಯಲ್ಲ' ಎಂಬ ರಚನೆಯಲ್ಲಿ ಪುರಂದರದಾಸರು ಆಚಾರದ ಹೆಸರಿನಲ್ಲಿ ನಡೆಯುವ ಅನ್ಯಾಯಗಳನ್ನೆಲ್ಲ ಪಟ್ಟಿ ಮಾಡಿ ಹೇಳಿರುವರು ಯಾಂತ್ರಿಕವಾದ ಪೂಜಾ ವಿಧಾನವನ್ನು ಇಲ್ಲಿ ಮುಚ್ಚುಮರೆಯಿಲ್ಲದೆ ಖಂಡಿಸಿರುತ್ತಾರೆ.

ಸ್ನಾನದ ಸೋಗು ದೇವರ ಪ್ರತಿಮೆಗಳ ಪ್ರದರ್ಶಗಳನ್ನು ತಮ್ಮ ಹರಿತವಾದ ಮಾತುಗಳಲ್ಲಿ ಟೀಕಿಸಿದ್ದಾರೆ. ಇನ್ನು ಮಡಿಯ ಹೆಸರಿನಲ್ಲಿ ನಡೆಯುವ ಆಡಂಬರವನ್ನು ಸಹ ಅಷ್ಟೇ ಕಟುವಾಗಿ ಟೀಕಿಸಿರುವರು. 'ಮಡಿ ಮಡಿಯೆಂದು ಮೂರ್ಮಾರು ಹಾರುತಿ ಮಡಿಯೆಲ್ಲಿ ಬಂತೊ ಬಿಕನಾಸಿ' ಎಂದು ಟೀಕಿಸಿ ಮಡಿ ಮಾಡುವ ರೀತಿ ಬೇರೆ ಇದೆ ಎಂದು ಆ ಹೊಸ ಪರಿಯನ್ನು ಕುರಿತು 'ನಿರ್ಮಲವಾದ ಮನಸ್ಸಿನಿಂದ ದೇವರ ಧ್ಯಾನಿಸುವುದೇ ನಿಜವಾದ ಮಡಿ' ಎಂದರು.

ಮಡಿ ಮಡಿಯೆಂದು ಆಡಿಗಡಿಗ್ಹಾರುವೆ. ಮಡಿಮಾಡುವ ಬಗೆ ಬೇರುಂಟು
ಪೊಡವಿ ಪಾಲಕನ ಪಾದಧ್ಯಾನವನು ಬಿಡದೆ ಮಾಡುವುದು ಮಡಿಯು
ಬಟ್ಟೆಯ ನೀರೊಳದ್ದಿ ಒಣಗಿಸಿ ಉಟ್ಟುಕೊಂಡರೆ ಅದು ಮಡಿಯಲ್ಲ
ಹೊಟ್ಟೆಯೊಳಗಿನ ಕಾಮಕ್ರೋಧ ಮದ ಮತ್ಸರ ಬಿಟ್ಟು ನಡೆದರೆ ಅದು ಮಡಿಯು

ಪ್ರತಿಯೊಬ್ಬರೂ ತಮ್ಮ ತ್ರಿಕರಣ ಶುದ್ಧಿಯನ್ನು ಸಾಧಿಸಿದರೆ ಬಾಳಿನ ಏಳಿಗೆ ಆಗುವುದೆಂದು ಅವರ ಅಭಿಪ್ರಾಯ ಪರಿಶುದ್ಧವಾದ ಬದುಕಿಗೆ ಅಂತರಂಗ ಶುದ್ಧಿ ಅಗತ್ಯವಿದೆ. ಕಾಗೆಯಂತೆ ಮುಳುಗು ಹಾಕಿ ಗಡಗಡನೆ ಗಡುಗುತ್ತಾ ನಿಂತರೆ ಅದು ಸ್ನಾನವಲ್ಲವೆಂದು 'ತನುಮ ನೀರೊಳಗದ್ದಿ ಫಲವೇನು ತನ್ನ ಮನದಲಿ ದೃಢಭಕ್ತಿಯಿಲ್ಲದ ಮನುಜನು' ಎಂದು ಪ್ರಶ್ನಿಸಿ 'ದಾನ ಧರ್ಮಗಳನ್ನು ಮಾಡುವುದೇ ಸ್ನಾನ, ಜ್ಞಾನ, ತತ್ವಂಗಳ ತಿಳಿವುದೆ ಸ್ನಾನ... ಗುರುಗಳ ಶ್ರೀಪಾದ ತೀರ್ಥವೆ ಸ್ನಾನ, ಕರೆದು ಅತಿಥಿಗೆ ಅನ್ನ ಇಡುವುದೆ ಸ್ನಾನ... ದಾಸರು ಸ್ನಾನದ ಸ್ವರೂಪವನ್ನೇ ತಿಳಿಸಿರುವರು. 'ಸತ್ಯವೇ ಸ್ನಾನ' ಜಪನೇಮ ಹೋಮ ಅಸತ್ಯದಲ್ಲಿ ನಡೆದು ಮಾಳ್ಪುದು ವ್ಯರ್ಥಕರ್ಮ' ಎನ್ನುತ್ತಾರೆ. ಮನದಲ್ಲಿ ದೃಢ ಭಕ್ತಿಯಿಲ್ಲದಿದ್ದಲ್ಲಿ ಉಳಿದ ಆಚರಣೆಗಳೆಲ್ಲವೂ ವ್ಯರ್ಥವೆಂದು ಹೇಳಿ, ಆಚಾರಕ್ಕಿಂತಲೂ ವಿಚಾರ ಮುಖ್ಯ. ಬಹಿರಂಗ ಪೂಜೆ ಪುನಸ್ಕಾರಗಳಿಗಿಂತ ಅಂತರಂಗ ಭಕ್ತಿ ಮುಖ್ಯ ಅದಕ್ಕೆ ಮನಸ್ಸು ತಿಳಿಯಾಗಿರಬೇಕು ದೃಢವಾಗಿರಬೇಕು. ನೀರಿನಲ್ಲಿ ಮಿಂದು ಮಡಿಯುಡುವುದಕ್ಕಿಂತಲೂ ಹಲವಾರು ಸತ್ಕಾರ್ಯಗಳಿಂದ ಮನದ ಮಾಲಿನ್ಯವನ್ನು ಹೋಗಲಾಡಿಸಿದರೆ ಅದೇ ನಿಜವಾದ ತನುಶುದ್ಧಿಯೆನ್ನುವರು.

ಮನುಷ್ಯನ ಏಳು ಬೀಳುಗಳಿಗೆಲ್ಲ ಅವನ ಮಾತೇ ಕಾರಣ ಆದ್ದರಿಂದ ಪುರಂದರ ದಾಸರು 'ಆಚಾರವಿಲ್ಲದ ನಾಲಿಗೆ ನಿನ್ನ ನೀಚ ಬುದ್ಧಿಯ ಬಿಡು ನಾಲಿಗೆ ವಿಚಾರವಿಲ್ಲದೆ ಪರರ ದೂಷಿಸುವುದಕ್ಕೆ ಚಾಚಿಕೊಂಡಿರುವಂಥ ನಾಲಿಗೆ' ಎಂದು ನಾಲಿಗೆಯ ದುಷ್ಟ ಗುಣಗಳನ್ನೆಲ್ಲ ಪಟ್ಟಿ ಮಾಡಿ ಕಡೆಗೆ 'ಹರಿಯಸ್ಮರಣೆ ಮಾಡು ನಾಲಿಗೆ' ನರಹರಿಯ ಭಜಿಸು ಕಂಡ್ಯ ನಾಲಿಗೆ ವರದ ಪುರಂದರ ವಿಠಲ ರಾಯನ ಚರಣ ಕಮಲವ ನೆನೆ ನಾಲಿಗೆ' ದೈವ ಸ್ಮರಣೆಯಿಂದ ಅದು ಪುನೀತವಾಗುವುದು ಎಂಬ ಹಿತೋಪದೇಶ ನಿಜವಾಗಿಯೂ ಮನ ಮುಟ್ಟುವಂತಿದೆ. ಎಲ್ಲಕ್ಕಿಂತ ಮನಸ್ಸು ಮಾನವನ ಮರ್ಕಟನಂತಹ ಮನಸ್ಸಿನ

ಚಾಂಚಲ್ಯವನ್ನು ಗುರುತಿಸಿದ 'ವಿಜಯದಾಸರು' ಬಹಳ ಚೆನ್ನಾಗಿ ಎಚ್ಚರಿಸಿರುವರು. 'ಎಚ್ಚತ್ತು ಇರು ಕಂಡ್ಯಮನವೆ, ನಮ್ಮ ಅಚ್ಯುತನಂಘ್ರಿಯ ನೆನೆಕಂಡ್ಯಮನವೆ ಹಾಳು ಹರಟೆಗೆ ಹೋಗಬೇಡ ಕಂಡ ಕೂಳುಗಳನ್ನು ತಿಂದು ಒಡಲ್ಹೊರೆಯ ಬೇಡ. ಕಾಲ ವ್ಯರ್ಥ ಕಳೆಯಬೇಡ ನಮ್ಮ ಪ್ರಾರಬ್ಧ ಕರ್ಮಕ್ಕೆ ಮನ ಸೋಲಬೇಡ' ಎಂದಿದ್ದಾರೆ. ಪುರಂದರದಾಸರು 'ಮನವ ಶೋಧಿಸಬೇಕು ನಿಚ್ಚ ದಿನ ದಿನ ಮಾಡುವ ಪಾಪ ಪುಣ್ಯದ ವೆಚ್ಚ' ಎಂದು ಮಾನವನು ತನ್ನ ಜೀವನದ ಮನಸ್ಸಿನ ಪರಿಶುದ್ಧತೆಯನ್ನು ಪಡೆಯಲು ದಿನವೂ ನಾವು ನಮ್ಮ ಮನಸ್ಸಿನ ವರ್ತನೆಯನ್ನು ಶೋಧಿಸಿಕೊಂಡದ್ದೇ ಆದರೆ ಬಾಳಿನ ಏಳಿಗೆ ಸಾಧ್ಯ ಎಂದಿದ್ದಾರೆ.

ಆದರ್ಶ ಜೀವನದಲ್ಲಿ ತಾಳ್ಮೆಗೆ ಪ್ರಧಾನ ಸ್ಥಾನವುಂಟು ನೂರಿಪ್ಪತ್ತು ವರ್ಷಗಳು ಬಾಳಿ ಬದುಕಿನ ಶ್ರೀವಾದಿರಾಜರು 'ತಾಳುವಿಕೆಗಿಂತ ತಪವು ಇಲ್ಲ ಕೇಳ ಬಲ್ಲವರಿಗೆ ಹೇಳುವೆನು ಸೊಲ್ಲ' ಎಂದು ಮೊದಲು ಮಾಡಿ ಮಾನವನು ಎಂತಂತಹ ಸಂದರ್ಭಗಳಿಗೆ ಸಿಕ್ಕಿ ತನ್ನ ತಾಳ್ಮೆಯನ್ನು ಕಳೆದುಕೊಳ್ಳುವನೆಂಬುದನ್ನು ನಿರ್ದೇಶಿಸಿರುವರು. 'ನೆಟ್ಟ ಸಸಿ ಫಲ ಬರುವ ತನಕ ಶಾಂತಿಯ ತಾಳು' 'ಉಕ್ಕೋ ಹಾಲಿಗೆ ನೀರು ಇಕ್ಕಿದಂದದಿ ತಾಳು' ಎಂಬ ನುಡಿಗಳು 'ತಾಳಿದವನು ಬಾಳಿಯಾನು' ಎಂಬ ಗಾದೆಯ ಮಾತಿನಂತೆ ಇದೆ. ಶ್ರೀ ವಾದಿರಾಜರ ಈ ತಾಳ್ಮೆಯ ಮೇಲ್ಮೆಯ ಕೀರ್ತನೆಯನ್ನು ಹೋಲುವ ಮತ್ತೊಂದು ಕೀರ್ತನೆಯೆಂದರೆ ಕನಕದಾಸರ 'ತಲ್ಲಣಿಸದಿರು ಕಂಡ್ಯ ತಾಳು ಮನವೆ, ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ' ಎಂಬ ಚಿರಪರಿಚಿತ ಕೃತಿ. ಆಸೆ, ಭರವಸೆಗಳ ನೆರವಿನಿಂದ ಮಾನವನ ಜೀವನ ಹಸವಾಗುವುದೆಂದು ಅವರ ದೃಢ ವಿಶ್ವಾಸ 'ಸತ್ಯಂವದ ಧರ್ಮಚರ' ಎಂಬ ಆರ್ಷೇಯ ವಾಕ್ಯವನ್ನು ಹರಿದಾಸರು ತಮ್ಮದೇ ಆದ ರೀತಿಯಲ್ಲಿ ಸಮರ್ಥಿಸಿರುವರು

'ಸತ್ಯವೆಂಬುದೆ ಸ್ನಾನ, ಉಪವಾಸ, ಜಪ ನೇಮ
ಸತ್ಯದಲ್ಲಿ ಮಾಡುವ ಕರ್ಮ ವ್ಯರ್ಥ

ಎಂಬ ಹೇಳಿಕೆಯಿಂದ ಸತ್ಯದ ಮೌಲ್ಯವೇನು ಎನ್ನುವುದು ಸ್ಪಷ್ಟವಾಗುತ್ತದೆ. 'ಧಯೆಯೆಂಬುದು ಧರ್ಮದ ಮೂಲವಯ್ಯ' ಎಂಬ ವಚನಕಾರರ ಮಾತು ಸಕಲ ಜೀವಿಗಳಿಗೆ ಹೇಗೆ ಅನ್ವಯಿಸುವುದೋ ಹಾಗೆಯೇ 'ಧರ್ಮವೇ ಜಯವೆಂಬ ದಿವ್ಯ ಮಂತ್ರ ಮರ್ಮವನರಿತು ಮಾಡಲಿಬೇಕು ತಂತ್ರ' ಎಂದು ಧರ್ಮದ ಬಗ್ಗೆ ಪುರಂದರದಾಸರು ಮಾಡಿರುವ ವ್ಯಾಖ್ಯಾನವಂತೂ ವಿಶಿಷ್ಟವಾಗಿದೆ. 'ದಯೆಯಿಲ್ಲದ ಧರ್ಮವಾವುದಯ್ಯ' ಎಂಬ ನಿಲುವನ್ನು ವಚನಕಾರರು ತಾಳಿದರೆ. ಔದರ್ಯವೇ ಧರ್ಮದ ಮೂಲವೆಂದು ಪುರಂದರದಾಸರು ಪ್ರತಿಪಾದಿಸಿರುವರು.

ವಿಷವಿಕ್ಕಿದವಗೆ ಷಡ್ರಸವನುಣಿಸಲಿಬೇಕು
ದ್ವೇಷ ಮಾಡಿದವನ ಪೋಷಿಸಲಿ ಬೇಕು

ಎಂಬ ದಾಟಿಯಲ್ಲಿ ಮುಂದುವರಿಯುವ ಈ ಕೀರ್ತನೆ ಬಹಳ ಮೇಲ್ಮಟ್ಟದ ಆದರ್ಶವನ್ನು ಸಾರಿ ಹೇಳುತ್ತದೆ. ಸಂಸಾರ ನಿಸ್ಸಾರ ಈ ದೇಹವು ಅನಿತ್ಯ ಎಂದು ದಾಸರು ಪದೇ ಪದೇ ಹೇಳಿದ್ದಾರೆ. ಹೆಣ್ಣು, ಹೊನ್ನು, ಮಣ್ಣುಗಳಿಗೆ ಮರುಳಾಗಿರುವ ಮಾನವರನ್ನೂ ಪುರಂದರದಾಸರು ಬಹಳ ಜಾಣತನದಿಂದ ಎಚ್ಚರಿಸಿರುವರು.

ಆರು ಹಿತವರು ನಿನಗೆ ಮೂರು ಮಂದಿಗಳೊಳಗೆ
ನಾರಿಯೋ ಧಾರುಣಿಯೋ ಬಲು ಧನದ ಸಿರಿಯೋ

ಎಂದು ಪ್ರಶ್ನಿಸಿ ಆ ಮೂವರ ಅಸ್ಥಿರತೆಯ ಕಡೆಗೆ ನಮ್ಮ ಗಮನವನ್ನು ಸೆಳೆದಿರುವರು. ಹರಿದಾಸರ ಈ ಬಗೆಗಿನ ಚಿಂತನೆಯಲ್ಲಿ ಒಂದು ಸೂಕ್ಷ್ಮ ವಿಚಾರವೂ ಅಡಕವಾಗಿದೆ. ಸಂಸಾರದ ಹೇಯಯನ್ನು ದೇಹದ ನಶ್ವರತೆಯನ್ನು ಕುರಿತು ಅವರು ಮೇಲಿಂದ ಮೇಲೆ ಹೇಳಿದ್ದರೂ ಸಂಸಾರ ಕೆಟ್ಟದ್ದೆಂದು ಅವರು ಬೇಡವೆಂದಿಲ್ಲ. ದೇಹ ನಶ್ವರವಾದದ್ದೆಂದು ಅದನ್ನು ದೂಷಿಸಿಲ್ಲ ದೂರೀಕರಿಸಿಲ್ಲ. ಮನುಷ್ಯ ದೈವವಾದಿಯಾಗಿರುವುದಕ್ಕಿಂತ ಪ್ರಯತ್ನ ವಾದಿಯಾಗಿರಬೇಕೆಂಬುದೇ ಅವರ ಆಶಯ. ಹಣೆಬರಹವಿದ್ದಂತೆ ಎಂದು ಕೈಕಟ್ಟಿ ಕೂಡುವುದಾಗಲಿ ಕೆಲಸ ಮಾಡಲಾಗದೆ ಹೇಡಿಯಾಗಿ ಕುಳಿತುಕೊಳ್ಳುವುದಾಗಲೀ ಪಾಪವೆಂದು ಅವರು ಭಾವಿಸಿದ್ದರು. ಬಾಳಿನ ವಿಷಮತೆಯನ್ನು ಕಂಡು ಕಂಗೆಡದೆ, ವಿಚಲಿತರಾಗದೆ ಅದರಲ್ಲೇ ಸಮತೆಯನ್ನು ಕಂಡುಕೊಂಡು ಸಾಧನೆ ಮಾಡಬೇಕು ಎಂಬುದು ಅವರು ಕಂಡುಕೊಂಡ ನೀತಿ ಸಂಸಾರದ ಹೇಯತೆಯ. ದೇಹದ ನಶ್ವರತೆಯ ಅರಿವು ಮನುಷ್ಯನಾಗಿರಬೇಕು ಅವುಗಳ ಮೇಲಣ ಅತ್ಯಾಭಿಮಾನ, ಮೋಹಗಳು ಇರಬಾರದು ಎಂಬುದೇ ಅವರ ಅಭಿಪ್ರಾಯ. ಮನುಷ್ಯ ಸಂಸಾರದಲ್ಲಿ ಹೇಗಿರಬೇಕು ಎಂಬುದನ್ನು ಅವರು ಉತ್ತಮ ದೃಷ್ಟಾಂತಗಳ ಮೂಲಕ ಸ್ಪಷ್ಟಪಡಿಸಿದ್ದಾರೆ. ಗೇರುಹಣ್ಣಿನಲ್ಲಿ ಬೀಜ ಸೇರಿದಂತೆ ಸಂಸಾರದಲ್ಲಿದ್ದು, ಆಸೆ ಮಾಡದೆ ನೀರ ತಾವರೆಯಂತೆ ಇದ್ದೂ ಇಲ್ಲದಂತೆ ವರ್ತಿಸಬೇಕು.

ಹ್ಯಾಂಗೆ ಇರಬೇಕೋ ಸಂಸಾರದಲ್ಲಿ ಹ್ಯಾಂಗೆ ಬರದೀತೋ ಪ್ರಾಚೀನದಲ್ಲಿ
ಪಕ್ಷಿ ಅಂಗಳದಲ್ಲಿ ಬಂದು ಕೂತಂತೆ ಆ ಕ್ಷಣದಲ್ಲಿ ಹಾರಿಹೋದಂತೆ
ನಾನಾ ಪರಿಯಲಿ ಸಂತೆ ನೆರೆದಂತೆ ನಾನಾ ಪಥವ ಹಿಡಿದು ಹೋದಂತೆ
ಮಕ್ಕಳಾಡಿ ಮನೆ ಕಟ್ಟಿದಂತೆ ಆಟ ಸಾಕೆಂದು ಅಳಿಸಿ ಹೋದಂತೆ
ವಸತಿಕಾರನು ವಸತಿ ಕಂಡಂತೆ ಹೊತ್ತಾರೆದ್ದು ಹೊರಟು ಹೋದಂತೆ
ಸಂಸಾರ ಪಾಶವೆ ನೀನೆ ಬಿಡಿಸಯ್ಯ ಪುರಂದರ ವಿಠಲರಾಯ |

ಎಲ್ಲರೂ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ತುತ್ತು ಹಿಟ್ಟಿಗಾಗಿ ಎಂಬ ವಾಸ್ತವಿಕ ಅಂಶ ಅವರಿಗೆ ಗೊತ್ತು. ಆದರೆ ಸಂಸಾರಕ್ಕೆ ಅಂಟದೆ ಹೇಗೆ ನಿರ್ಲಿಪ್ತವಾಗಿ ಇರಬೇಕು ಎಂಬ ಬಗ್ಗೆ

ಅವರ ಚಿಂತನೆ ವಿಶಿಷ್ಟವಾಗಿದೆ. ಈ ವಿಚಾರದಲ್ಲಿ ಅವರು ತೋರಿರುವ ಒಂದು ಅತ್ಯುನ್ನತ ಮಟ್ಟದ ನಿಲುವೆಂದರೆ ಸಕಲವೂ ಹರಿಸೇವೆ ಎಂಬ ಭಾವನೆ ಬೆಳೆಸಿಕೊಳ್ಳಬೇಕು. ಹರಿನಾಮಸ್ಮರಣೆ ಮಾಡುತ್ತ 'ಹರಿಚಿತ್ತ ಸತ್ಯ ಹರಿಚಿತ್ತ' ಎಂದು ಸಮಚಿತ್ತರಾಗಿರುವುದೇ ಪರಮಸುಖ. ಹೀಗೆ 'ಅಂತರಂಗದಿ ಹರಿಯ ಕಾಣದವ ಹುಟ್ಟು ಕುರುಡ'ನೆಂದು ಹೇಳಬಹುದು 'ಸಕಲವೂ ಹರಿಸೇವೆಯನ್ನಿ' 'ಬಂದದ್ದೆಲ್ಲಾ ಬರಲಿ ಗೋವಿಂದನ ದಯವೊಂದಿರಲಿ' ಎಂದು ಸಂಪೂರ್ಣ ಹರಿ ಸಮರ್ಪಣೆ ಮಾಡಿ ಬದುಕುವದೇ ಬಹುದೊಡ್ಡ ಧ್ಯೇಯ. ಆಗ 'ಸಾಕು ಸಾಕಿನ್ನು ಸಂಸಾರ ಸುಖವು' ಎಂದು ಗೋಣಗಬೇಕಾಗಿಲ್ಲ. ಈ ಸಂಸಾರದಿಂದಲೇ ಪಾರಮಾರ್ಥಿಕವನ್ನು ಸಾಧಿಸಬಹುದೆಂದು ಪುರಂದರದಾಸರು ತಿಳಿಸಿರುವರು 'ಸಂಸಾರವೆಂಬಂಥ ಭಾಗ್ಯವಿರಲಿ ಕಂಸಾರಿ ನೆನೆವೆಂಬ ಸೌಭಾಗ್ಯವಿರಲಿ' ಎಂದು ದೈವ ಚಿಂತನೆಯಿಂದ ಸಂಸಾರ ಸಾಗರವನ್ನು ದಾಟುವ ಸುಲಭೋಪಾಯವನ್ನು ಕಂಡುಕೊಂಡರು. ದಾಸರು ಎಂದೂ ಸಂಸಾರವನ್ನು ನಿರಾಕರಿಸಿಲ್ಲ ಸಂಸಾರದಲ್ಲಿದ್ದುಕೊಂಡೆ ಲೌಕಿಕ ಮತ್ತು ಪಾರಮಾರ್ಥಿಕ ಯಶಸ್ಸನ್ನು ಗಳಿಸಬೇಕೆಂದು, ಮತ್ತು ಮಾನವನ ಜೀವನದಲ್ಲಿ ಎಷ್ಟೇ ಕಷ್ಟ ಪರಂಪರೆಗಳಿರಲಿ ದಾಸರು ಹೇಳಿರುವಂತೆ ಸಂಸಾರ ಸಾಗರವನ್ನು 'ಈಸಬೇಕು ಇದ್ದು ಜಯಿಸಬೇಕು ಹೇಸಿಗೆ ಸಂಸಾರದಲಿ ಆಸೆಲೇಶ ಇಡದ ಹಾಗೆ' ಸಂಸಾರದಲ್ಲಿದ್ದರೂ ಅದರಲ್ಲಿ ಪೂರ್ಣ ಮುಳುಗದೆ ಅದು ಅಶಾಶ್ವತ ಎಂಬ ಪ್ರಜ್ಞೆ ಇರಬೇಕೆಂದು ಹಲವು ದೃಷ್ಟಾಂತಗಳಿಂದ ಸ್ಪಷ್ಟಪಡಿಸಿದ್ದಾರೆ.

ಮಾನವ ಜನ್ಮ ದೊಡ್ಡದು ಇದ
ಹಾನಿ ಮಾಡಲಿಬೇಡಿ ಹುಚ್ಚಪ್ಪಗಳಿರಾ
ಕಣ್ಣು ಕೈ ಕಾಲ್ಕಿವಿ ನಾಲಿಗೆ ಇರಲಿಕ್ಕೆ
ಮಣ್ಣು ಮುಕ್ಕಿ ಮರುಳಾಗುವರೆ
ಹೆಣ್ಣು ಮಣ್ಣಿಗಾಗಿ ಹರಿಯ ನಾಮಾಮೃತ
ಉಣ್ಣದೆ ಉಪವಾಸ ಇರುವರೆ ಖೋಡಿ
ಕಾಲನದೂತರು ಕಾಲ್ಪಿಡಿದೆಳೆವಾಗ
ತಾಳು ತಾಳೆಂದರೆ ತಾಳುವರೆ?
ಧಾಳಿ ಬಾರದ ಮುನ್ನ ಧರ್ಮವ ಗಳಿಸಿರೊ
ಸುಳ್ಳಿನ ಸಂಸಾರ ಸುಳಿಗೆ ಸಿಕ್ಕಲು ಬ್ಯಾಡಿ

ಮಾನವ ಜನ್ಮದ ಸಾರ್ಥಕತೆಗೆ ದಾಸರು ನೀಡಿದ ಸಂದೇಶವಿದು. ಅಪೂರ್ವವಾಗಿ ದೊರೆತಿರುವ ಈ ಮಾನವ ಜನ್ಮದಲ್ಲಿ ಪಾರಮಾರ್ಥಿಕವನ್ನು (ಆಧ್ಯಾತ್ಮಿಕ) ಸಾಧನೆಯನ್ನು ಕೈಗೊಳ್ಳಬೇಕೆಂದು ಜೀವನ ಸಾರ್ಥಕಪಡಿಸಿಕೊಳ್ಳಬೇಕೆಂಬುದನ್ನು ಈ ಕೀರ್ತನೆಯಲ್ಲಿ ವ್ಯಕ್ತಪಡಿಸಿರುವರು. 'ಕಾಲನ ದೂತರು ಕಾಲ್ಪಿಡಿದೆಳದಾಗ ತಾಳುತಾಳೆಂದರೆ ತಾಳುವರೆ' 'ದಾಳಿ ಬಾರದ ಮುನ್ನ ಧರ್ಮವ ಗಳಿಸಿರೊ' ಎನ್ನುವ

ಹಿತೋಕ್ತಿಯನ್ನು ಮನಗಾಣಬಹುದು. ನಾವು ದೃಢವಾಗಿರುವಾಗಲೆ ದೈವ ಚಿಂತನೆಯಲ್ಲಿ ತೊಡಗಬೇಕೆಂದು ಎಚ್ಚರಿಸಿರುವರು.

## ೪.೭. ಭಕ್ತಿಯಿಂದ ಮುಕ್ತಿ ಮಾರ್ಗ

ಕನ್ನಡ ಸಾಹಿತ್ಯದಲ್ಲಿರುವ ವಿವಿಧ ಪ್ರಕಾರಗಳಲ್ಲಿ ದಾಸ ಸಾಹಿತ್ಯ ಒಂದು ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ವಚನ ಸಾಹಿತ್ಯದ ಅನಂತರ ಜನಸಾಮಾನ್ಯರ ಸ್ವತ್ತಾಗಿ ಪರಿಣಮಿಸಿದ ಸಾಹಿತ್ಯವೆಂದರೆ ದಾಸರ ಹಾಡುಗಳು. ದಾಸರು ತಾವು ಬದುಕಿನಲ್ಲಿ ಕಂಡ ಅಂಕುಡೊಂಕುಗಳನ್ನು ಖಂಡಿಸಿ ತಿದ್ದಬಯಸಿದ್ದಾರೆ. ಎಲ್ಲರನ್ನೂ ಸರಿಯಾದ ಮಾರ್ಗದಲ್ಲಿ ನಡೆಯ ಹೇಳಿದ್ದಾರೆ. ಸಾಮಾನ್ಯವಾಗಿ ಜನತೆ ಭಾವಿಸಿರುವ ಒಳಿತು ಕೆಡಕುಗಳ ಬಗೆಗೆ ಉತ್ತಮ ರೀತಿಯಲ್ಲಿ ತಿಳಿಯಹೇಳುವ ತತ್ತ್ವೋಪದೇಶ ಇವರ ಹಾಡುಗಳಲ್ಲಿ ಅಡಗಿದೆ. ಹೀಗೆ ರಚಿತವಾದ ಭಕ್ತಿ ಪ್ರಧಾನವಾದ ಹಾಡುಗಳು ಸಂಗೀತಕ್ಕೆ ಅಳವಡುವುದರಿಂದ ಹಾಡಲು ಅನುಕೂಲವಾಗಿ ಅದರಿಂದ ಜನ ಹೆಚ್ಚು ಪ್ರಭಾವಿತರಾಗಲು ಸಹಕಾರಿಯಾಗಿದೆ. ಸಂಗೀತಮಯವಾಗಬಲ್ಲದೆ ಸಾಮಾನ್ಯ ಪದಪುಂಜಗಳಿಂದ ಆಡುಮಾತುಗಳಿಂದ ಕೂಡಿದ್ದು ಉಪಮೆ ದೃಷ್ಟಾಂತಗಳ ಮೂಲಕ ತಿಳಿಯ ಹೇಳುವುದರಿಂದ ಸಾಮಾನ್ಯ ಜನತೆಗೂ ಮನಮುಟ್ಟುವಂತಹುದಾಗಿದೆ. ಈ ಹಾಡುಗಳಲ್ಲಿ ಮೋಕ್ಷ ಸಿದ್ಧಿಗೆ ಮಾರ್ಗ ಸೂಚಿಯನ್ನು ಕಾಣಬಹುದು. ದಾಸರ ಗುರಿ ಸಮಾಜ ಸುಧಾರಣೆಯಾಗಿದೆ. ಅದು ಆರ್ಥಿಕ ಸುಧಾರಣೆಯಾಗದಿದ್ದರೂ ಆತ್ಮೋನ್ನತಿಗೆ ಸಹಕಾರಿಯಾದ ಕರ್ಮವಿಮುಕ್ತಿಗೆ ಕಾರಣವಾಗಿದೆ. ಅವರು ಗಳಿಸಿದ ಲೋಕಾನುಭವ ಅಪಾರ. ಅನುಭವಗಳೇ ಅವರ ಹಾಡುಗಳಲ್ಲಿ ಮೈದಳೆದಿವೆ. ಇವುಗಳಲ್ಲಡಗಿರುವ ಜನಪ್ರಿಯ ಮೌಲ್ಯಗಳೇ ಈ ಹಾಡುಗಳ ಶ್ರೇಷ್ಠತೆಯ ಸಂಕೇತವಾಗಿವೆ.

ಕನ್ನಡ ನರಹರಿ ತೀರ್ಥರೇ ಕೀರ್ತನೆಯ ಪ್ರಥಮ ಕರ್ತೃವೆಂದು ಪರಿಗಣಿತರಾಗಿದ್ದಾರೆ. ಅನಂತರ ಬಂದ ಪುರಂದರದಾಸ ಕನಕದಾಸ ದಾಸ ಸಾಹಿತ್ಯದ ಅಶ್ವಿನೀ ದೇವತೆಗಳೆಂದು ಹೆಸರು ಪಡೆದರು ತರುವಾಯ ಪ್ರಸನ್ನ ವೆಂಕಟದಾಸರು, ವಿಜಯದಾಸರು ಗೋಪಾಲದಾಸರು, ಹೆಳವನಕಟ್ಟೆ ಗಿರಿಯಮ್ಮ ಮೊದಲಾದವರು. ಎರಡನೆಯ ಘಟ್ಟದ ಹೆಸರಾಂತ ವ್ಯಕ್ತಿಗಳಾದರು. ಒಬ್ಬೊಬ್ಬರೂ ತಮ್ಮದೇ ಆದ ರೀತಿಯಲ್ಲಿ ವಿಷಯವಿರೂಪನೆ ಮಾಡಿದ್ದರೂ ಎಲ್ಲರ ಉದ್ದೇಶವೂ ಮೋಕ್ಷಮಾರ್ಗದ ಏಕೈಕ ಗುರಿಯಾಗಿದೆ.

ಶ್ರೀ ಪಾದರಿಂದ ರಚಿತವಾದ ಕೆಳಗಿನ ಪದ್ಯ ಮಧ್ವಮತದ ಸ್ವರೂಪವನ್ನು ಸ್ಪಷ್ಟಪಡಿಸುತ್ತದೆ.

ಶ್ರೀಮನ್ಮಧ್ವಮತೇ ಹರಿಃ ಪರತರಃ ಸತ್ಯಂ ಜಗತ್ತತ್ವತೋ
ಭೇದೋ ಜೀವಗಣಾ ಹರೇರನುಚರಾಃ ನೀಚೋಚ್ಚಭಾವಂಗಿತಾಃ
ಮುಕ್ತಿರ್ನೈಜ ಸುಖಾನುಭೂತರಮಲಾ ಭಕ್ತಿಶ್ಚತತ್ಸಾಧನಂ
ಹ್ಯಕ್ಷಾದಿತ್ರಿತಮಂ ಪ್ರಮಾಣಮುಖಿಲಾಮ್ನಾಯೈಕ ವೇದ್ಯೋ ಹರಿಃ[೦]

ಇದರ ಪ್ರಕಾರ ೧. ಶ್ರೀ ಹರಿಯು ಸರ್ವೋತ್ತಮ ೨. ಜಗತ್ತು ಪರಮಾರ್ಥಿಕ ಸತ್ಯ ೩. ಪಂಚಭೇದವು ಪಾರಮಾರ್ಥಿಕ ಸತ್ಯ ಮತ್ತು ನಿತ್ಯ. ೪. ಜೀವಗಣಗಳು ಶ್ರೀಹರಿಯ ಅನುಚರರು. ೫. ನಿತ್ಯತಾರತಮ್ಯವುಳ್ಳವರು. ೬. ಸ್ವರೂಪ ಸುಖಾನುಭವವೇ ಮುಕ್ತಿ ೭. ನಿರ್ಮಲವಾದ ಭಕ್ತಿಯು ಮುಕ್ತಿಗೆ ಸಾಧನ. ೮. ಪ್ರತ್ಯಕ್ಷ ಅನುಮಾನ ಆಗಮಗಳು ಸಾಧಕ ಪ್ರಮಾಣಗಳು ೯. ಶ್ರೀ ಹರಿಯು ಆಗಮ ಮಾತ್ರ ವೇದ್ಯನು. ಈ ಎಲ್ಲ ಅಂಶಗಳೂ ಮಧ್ವಾಚಾರ್ಯರ ತತ್ವವಾದದ ಸಂಗ್ರಹ ಸ್ವರೂಪ.

ದಾಸ ಸಾಹಿತ್ಯ ಮಧ್ವಾಚಾರ್ಯರ ತತ್ವ ಸಿದ್ಧಾಂತಗಳನ್ನು ಅನುಸರಿಸಿ ಹರಿದಾಸ ದೀಕ್ಷೆಯನ್ನು ಪಡೆದುಕೊಂಡು ಇದೇ ಮಾರ್ಗದಲ್ಲಿ ಮುಂದುವರೆದ ದಾಸರು ತಮ್ಮ ಅನುಭವಗಳನ್ನು ಹಾಡುಗಳ ರೂಪದಲ್ಲಿ ಅಭಿವ್ಯಕ್ತಿಸಿ ಮಧ್ವ ಮತ ತತ್ವಗಳನ್ನು ಜನ ಸಾಮಾನ್ಯರಲ್ಲಿ ಪ್ರಚಾರ ಮಾಡುವುದಕ್ಕಾಗಿ ಹುಟ್ಟಿಕೊಂಡಿತು. ಹರಿದಾಸರು ಮೋಕ್ಷ ಸಾಧನೆಯನ್ನು ಕುರಿತು ತಮ್ಮ ಕೃತಿಯಲ್ಲಿ ಹೀಗೆ ಹೇಳಿದ್ದಾರೆ.

ಮೋಕ್ಷ ಸಾಧನೆಗೆ ಉತ್ತಮ ಮಾಧ್ಯಮವೆಂದರೆ ಮಾನವ ಜನ್ಮವೆಂದು ದಾಸರ ಅಭಿಪ್ರಾಯವಾಗಿದೆ. ಆದುದರಿಂದಲೇ ಪುರಂದರದಾಸರು

ಮಾನವ ಜನ್ಮ ದೊಡ್ಡದು ಇದ
ಹಾನಿ ಮಾಡವ ಬೇಡಿ ಹುಚ್ಚಪ್ಪಗಳಿರಾ[೬೧]

ಎಂದು ಸಾರಿ ಹೇಳಿದರು ಈ ಜೀವವು ಕರ್ಮಸಾರದಿಂದ ಕ್ರಿಮಿಕೀಟಾದಿ ಜೀವಿಗಳಾಗಿ ಅನೇಕ ಜನ್ಮಗಳಲ್ಲಿ ನಡೆದು ಯಾವುದೋ ಸುಕೃತದಿಂದ ಮಾನವಜನ್ಮ ಪಡೆಯುತ್ತದೆ. ಮಾನವನು ಮೋಕ್ಷ ಸಿದ್ಧಿಯನ್ನು ಪಡೆಯಬೇಕಾದರೆ ಮಾನವನು ಈ ದೇಹದ ನಶ್ವರತೆಯನ್ನು ಅರಿತಿರಬೇಕು. ಆದುದರಿಂದಲೇ ದಾಸರು ನಿತ್ಯವಲ್ಲ ನಿತ್ಯವಲ್ಲ ಅನಿತ್ಯ, ದೇಹವಿದಣ್ಣ' ನಂಬಿದಿಯ ಈ ದೇಹ ನಿತ್ಯವಲ್ಲ' ಎಂದು ಮೊದಲಾಗಿ ಹೇಳಿ ಜೀವನದ ಅಲ್ಪತೆಯನ್ನು ಸಾರಿದರು. ಮಾನವ ಜನ್ಮದಲ್ಲಿ ಗಳಿಸಿದ ಧನಧಾನ್ಯ ಕನಕಾದಿಗಳು ಶಾಶ್ವತವಲ್ಲ. ಬಡನಿರ್ದ ಸತಿ. ಮಕ್ಕಳು ಬಂಧು ಬಳಗಗಳಾರೂ ಜೊತೆಯಲ್ಲಿ ಬರಲಾರರು. ಶಾಶ್ವತವಾದುದು ಹಾಗೂ ತಮ್ಮೊಡನೆಯೇ ಬರುವಂತಹುದೂ ಆದ ಜೀವನ್ಮುಕ್ತಿಯೇ ಪ್ರಧಾನವಾದುದೆಂಬುದನ್ನು ಮನದಟ್ಟು ಮಾಡಿಕೊಟ್ಟರು.

ನೆಚ್ಚದಿರು ಈ ಭಾಗ್ಯ ಆರಿಗೂ ಸ್ಥಿರವಲ್ಲ ನಿಶ್ಚಯವೆಚ್ಚರಿಕೆ
ಹೆಚ್ಚದೆ ಹಿಗ್ಗದ ಇದ್ದರೆ ಲೋಕಕ್ಕೆ
ಮೆಚ್ಚು ಕೇಳೆಚ್ಚರಿಕೆ[೬೨]

ಎಂದರು. ಜೀವನದಲ್ಲಿ ಹೆಣ್ಣು, ಹೊನ್ನು, ಮಣ್ಣು ಈ ಮೂರರ ಬಂಧನದಲ್ಲಿರಿಸಿ ಮುಕ್ತನಾಗುವುದು ದುಸ್ತಾರವೆಂದು ಕಂಡುಬಂದರೂ ಇದನ್ನು ಪೂರ್ಣವಾಗಿ ತ್ಯಜಿಸಬೇಕೆಂದೇನೂ ದಾಸರು ಹೇಳಲಿಲ್ಲ ಇದರಲ್ಲಿದ್ದೂ ಇಲ್ಲಿದಂತೆ ಭಾಗ್ಯವನ್ನೂ ಹೊಂದಿ ಹೊಂದವನಂತೆ ನಿರ್ಲಿಪ್ತನಾಗಿ ದೈವದತ್ತ ಮನಸ್ಸನ್ನು

ನೆಲೆಗೊಳಿಸುವುದು ಅತಿ ಮುಖ್ಯವೆಂದರು ಆದುದರಿಂದಲೇ ಅವರು ಬದುಕಿನಲ್ಲಿ ಬಡತನ ಸರಿತನಗಳು ಮುಖ್ಯವಲ್ಲ ಇವು ಯಾವುವೂ ಶಾಶ್ವತವಲ್ಲ. ಶಾಶ್ವತ ಸುಖವನ್ನು ಪಡೆಯಲು ಇವಾವುವೂ ನೆರವಾಗಲಾರವು ಎಂತಹ ಐಶ್ವರ್ಯದಿಂದ ಕೂಡಿದವನಾದರೂ ದೈವಶಕ್ತಿಯಿಂದ ವಿಮುಖನಾಗಿದ್ದರೆ ಅವನು ದರಿದ್ರನೆಂದೇ ಪರಿಗಣಿತನಾಗುತ್ತಾನೆ. ದೈವಭಕ್ತನಾದವನು ಎಂತಹ ಕಠಿಣ ಪರಿಸ್ಥಿತಿಯಲ್ಲಿದ್ದರೂ ಎಲ್ಲ ಸುಖ ಸೌಭಾಗ್ಯಗಳನ್ನು ಹೊಂದಿದವನಾಗುತ್ತಾನೆ ಎಮದು ಪ್ರತಿಪಾದಿಸಿದರು. ಇದಕ್ಕೆ ನೈತಿಕ ಸಿದ್ಧತೆ ಡಂಬಾಚಾರವನ್ನು ತ್ಯಜಿಸುವಿಕೆ ಅವಶ್ಯವೆಂಬುದನ್ನು ಒತ್ತಾಯ ಪೂರ್ವಕವಾಗಿ ಹೇಳಿದರು.

ಕುಟಿಲವ ಬಿಡದಿಹ ಕುಜನರು ಮಂತ್ರದ
ಪಠಣೆಯ ಮಾಡಿದರೇನು ಫಲ

ನೈತಿಕ ಜೀವನ ಸಮಾಜದಿಂದ ಬಳುವಳಿಯಾಗಿ ಬರುವುದಿಲ್ಲ. ಮಾನವನು ತಾನು ಪ್ರಯತ್ನಪಟ್ಟು ನಡೆಯುವ ರೀತಿ ನೀತಿಗಳಿಂದ ಅದು ದೊರೆಯುತ್ತದೆ. ಅದಕ್ಕಾಗಿ ಸಂಸಾರ ತ್ಯಜ್ಯವಾಗಲಿ ದೇಹ ದಂಡನೆಯಾಗಲಿ ಮಾಡಬೇಕಾಗುವುದಿಲ್ಲ; ಬೇಕಾದದ್ದು ಉತ್ತಮ ನಡವಳಿಕೆ ಪರಿಶುದ್ಧ ಮನಸ್ಸು.

ಸಂಸಾರದಲ್ಲಿ ಗಳಿಸಿದ ಯಾವ ಆಸ್ತಿಯೇ ಆಗಲಿ ಜೊತೆಯಲ್ಲಿ ಬರುವುದಿಲ್ಲ. 'ಮಂಚಬಾರದು ಮಡದಿ ಬಾರಳು ಕಂಚು ಕನ್ನಡಿಬಾರದು' ಸಂಚಿತಾರ್ಥದ ದ್ರವ್ಯ ಒಡವೆಯೊಸೆಗೆ ಬಿಡಲ ಕಿಚ್ಚಿಗೆ ಮಡದಿ ಬೆನ್ನಲಿ ಬಾಹಳು ಬಾರದು' ಎಂದು ಪುರಂದರದಾಸರು ಅರ್ಥ, ಪುತ್ರ, ಮಿತ್ರ ಬಾಂಧವರಾರೂ ಜೊತೆಯಲ್ಲಿ ಬರುವುದಿಲ್ಲವೆಂಬುದನ್ನು ವಿವರಿಸಹೇಳಿದ್ದಾರೆ.

ಎಚ್ಚರಿಕೆ ಭಾಗ್ಯ ಯಾರಿಗೂ ಸ್ಥಿರವಲ್ಲ
ನಿಶ್ಚಯವೆಚರಿಕೆ
ಹೆಚ್ಚದೆ ಹಿಗ್ಗದೆ ಇದ್ದರೆ ಲೋಕಕ್ಕೆ
ವೆಚ್ಚು ಕೇಳೆಚ್ಚರಿಕೆ[೩]

ಎಂದು ಎಚ್ಚರಿಕೆಯಿತ್ತಿದ್ದಾರೆ.

ಮುಕ್ತಿ ಸಾಧನೆಗೆ ಯಾವ ಜಾತಿ ಮತ ಭೇದವಿಲ್ಲ ಸ್ತ್ರೀ ಪುರುಷ ಎಂಬ ಭೇದಭಾವವಿಲ್ಲ. ಉತ್ತಮ ನಡವಳಿಕೆಯುಳ್ಳವರೆಲ್ಲರೂ ಇದಕ್ಕೆ ಅರ್ಹರು. ಆದುದರಿಂದಲೇ ಪುರಂದರದಾಸರು ಸಾತ್ವಿಕ ಜೀವರ ಮುಕ್ತಿಯಲ್ಲಿ ಐದು ಬಗೆ.

ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯ ಸಾರಿಷ್ಟಿಯುಗಳು
ಯೋಗ್ಯ ಜೀವರಿಗೆ ಲೋಕದಲ್ಲಿಪುದು ಸಾಲೋಕ್ಯವೆಮಬುದ
ಆ ಪಟ್ಟಣ ಸಮೀಪದಲ್ಲಿಪ್ಪುದು ಸಾಮೀಪ್ಯವೆಂಬುದು
ಶಂಕ ಚಕ್ರಗದ ಪದುಮಧರನಾಗಿ ಸರ್ವರು

ಸಾರುಪ್ಯ ಮುಕುತಿಯೆಸೆವುವು||
ಹರಿವಾಯುಗಳಲ್ಲಿ ತತ್ವಾಭಿಮಾನಿ ದೇವತೆಗಳಿಗೆ
ಸಾಯುಜ್ಯವೆಂಬ ಮುಕುತಿ ನೋಡಯ|
ಎಂಬುವದು ಪಂಚ ವಿದ ಮುಕುತಿಯೆಂಬುವರು||

ಹರಿನಾಮ ಸ್ಮರಣೆಯೊಂದೆ ಮೋಕ್ಷದಾಯಕವೆನ್ನುತ್ತಾರೆ ಪುರಂದರದಾಸರು. ಭಕ್ತಿಯು ಜೀವಾತ್ಮನ ಮೋಕ್ಷ ಸಾಧನೆಗಳಿಗೆ ಅನುಸರಿಸಬಹುದಾದ ಒಂದು ಮಾರ್ಗ ನಿಜವಾದ ಸುಖಾನುಭವವನ್ನು ಹೊಂದಬೇಕೆಂದರೆ ಮುಕ್ತಿ ಹೊಂದಬೇಕು.

"ಪರಮಾತ್ಮನ ಮರೆವಿನಿಂದ ಜೀವನಿಗೆ ಸಂಸಾರ ಬಂಧನ ಉಂಟಾಗಿದ್ದರೆ, ಪರಮಾತ್ಮನ ಅರಿವಿನಿಂದ ಅವನಿಗೆ ಸಂಸಾರ ವಿಮೋಚನೆ ಸಾಧ್ಯವಾಗುತ್ತೆ, ಜೀವನಿಗೆ ಪರಮಾತ್ಮನಿಂದ ಸಂಸಾರ ಬಂಧನ ಒದಗುವಂತೆ ಅವನಿಂದಲೇ ಸಂಸಾರ ಮುಕ್ತ ಸಹ ಪ್ರಾಪ್ತವಾಗುತ್ತದೆ.

ಎಲ್ಲ ಲೋಕಗಳಲ್ಲಿರುವ ಭಗವಂತನ ವಿಶೇಷ ರೂಪದ ದರ್ಶನದ ಭಾಗ್ಯ ಹಾಗೂ ಸುಖಭೋಗ 'ಸಾಲೋಕ್ಯ'ವೆನಿಸಿದರು. ಭಗವಂತನ ಸಮೀಪ್ಯದಲ್ಲಿದ್ದು ಸುಖಭೋಗ ಪಡೆಯುವುದು 'ಸಾಮೀಪ್ಯ' ಭಗವಂತನಂತೆ ಶಂಖಚಕ್ರಾದಿ ಚತುರ್ಭುಜ ಸರೂಪರಾಗಿ ಸುಖಭೋಗ ಪಡೆಯುವುದು. 'ಸಾರೂಪ್ಯ'ವೆಂದು ಕರೆಯಲ್ಪಟ್ಟರೆ. ಭಗವಂತನ ವಿವಿಧ ಅವಯವಗಳಲ್ಲಿದ್ದು ಭೋಗ ನಡೆಯುವುದು 'ಸಾಯುಜ್ಯ' ಮುಕ್ತಿ ಎನಿಸಿಕೊಳ್ಳುತ್ತದೆ. ಜ್ಞಾನ, ಕರ್ಮ, ಭಕ್ತಿ ಇವುಗಳು ಮೋಕ್ಷ ಸಾಧನೆಗೆ ಮಾಧ್ಯಮಗಳು. ಪರಮಾತ್ಮನು ಪ್ರಸನ್ನನಾಗುವುದೂ ಸಹ ಕೇವಲ ಭಕ್ತಿಯಿಂದಲೇ ಹೊರತು ಇತರ ಐಶ್ವರ್ಯ ಅಧಿಕಾರಗಳಿಂದಲ್ಲ ಈ ಭಕ್ತಿಯೂ ಸಹ ನಿರ್ಮಲ ಅಥವಾ ಶುದ್ಧವಾದಾಗ ಮಾತ್ರ ಅದರಿಂದ ಪರಮಾತ್ಮನ ಪ್ರಸನ್ನತೆ ಸಾಧ್ಯ. ಈ ಭಕ್ತಿ ನಿರ್ಮಲವಾಗುವುದೂ ಸಹ ಪರಮಾತ್ಮನ ಜ್ಞಾನದೊಂದಿಗೆ ಎಲ್ಲಕ್ಕಿಂತ ಹೆಚ್ಚಾದ ದೃಢವಾದ ಸ್ನೇಹವು ಬೆರೆತಾಗ ಮಾತ್ರ ಭಗವಂತನನ್ನು ನಿರ್ಮಲ ಭಕ್ತಿಯಿಂದ ಒಲಿಸಿಕೊಳ್ಳಬಹುದು ಎಂದು ನಂಬಿದ್ದ ಗಿರಿಯಮ್ಮ ಭಗವಂತನಿಗೆ ತನ್ನನ್ನು ತಾನು ಅರ್ಪಿಸಿಕೊಂಡಾಗ ಮೋಕ್ಷ ಸಾಧ್ಯ ಎಂಬುದನ್ನು ಅರಿತಿದ್ದಳು.

ಯಾಕೆ ಮರುಳಾದೆ ಹೀಂಗೆ ಎಲೆ ಮನವೆ
ಕಾಕು ಬುದ್ದಿಯ ಬಿಡು ಬಿಡು ಸುಮ್ಮನೆ ||ಪ||

......................

ಈ ದೇಹ ಸ್ಥಿರವಲ್ಲವೊ ಕಾಲನಾ
ಬಾಧೆಗೋಳಗಾಗದಿರೋ ಮನವೆ
ಭೇದ ದುರ್ಗಣವ ತ್ಯಜಿಸು ನೀ

ಗೇರು ಭೀಜದಂದದಿ ತಿಳಿಯೊ ಮನವೆ ||೪||

ಮಾಡು ಹರಿಸೇವೆಯನ್ನು ಮನದಣಿಯೆ
ಬೇಡು ಹರಿಭಕ್ತಿಯನ್ನು
ಕೂಡು ಹೆಳವನಕಟ್ಟೆಯ ವೆಂಕಟನ
ಬೇಡಿ ಮುಕ್ತಿಯನು ಪಡೆಯೊ ಮನವೆ ||೫||

ಹೆಳವನಕಟ್ಟೆ ಗಿರಿಯಮ್ಮ ತನ್ನ ಕೃತಿಗಳ ಮೂಲಕ ದ್ವೈತ ಸಿದ್ಧಾಂತವನ್ನು ಹೇಳುತ್ತಾ ಜನ ಸಾಮಾನ್ಯರಿಗೆ ತತ್ವವನ್ನು ಸುಲಭವಾಗಿಸಿದ್ದಾಳೆ. ಸಂಪ್ರದಾಯದ ಹಾಡುಗಳಲ್ಲಿಯೂ ಹಾಗೂ ಭಗವಂತನ ಮಹಿಮೆಯನ್ನು ಸಾರುವ ಹಾಡುಗಳಲ್ಲಿಯೂ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾಳೆ. ಯಾವುದೇ ಶಾಸ್ತ್ರಾಧ್ಯಾಯನ ಮಾಡದಿದ್ದರೂ ಕೇವಲ ಪುರಾಣ ಪ್ರವಚನದಿಂದ ಅನುಭವ ಜನ್ಯ ಶೈಲಿಯಿಂದ ಗಹನವಾದ ತತ್ವಗಳನ್ನು ಸರಳೀಕೃತಗೊಳಿಸಿದ್ದಾಳೆ. ಜನ ಸಾಮಾನ್ಯರಿಂದ ದೂರವಿದ್ದ ಸಿದ್ಧಾಂತಗಳನ್ನು ಕಬ್ಬಿಣದ ಕಡಲೆಯಂತಿದ್ದ ಪ್ರಮೇಯಗಳನ್ನು ಸರಳವಾಗಿ ದ್ವೈತ ಸಿದ್ಧಾಂತವನ್ನು ಸಾಮಾನ್ಯ ಜನರಿಗೆ ತಲುಪಿಸಿದ ಕೀರ್ತಿ ಗಿರಿಯಮ್ಮನಿಗೆ ಸಲ್ಲುತ್ತದೆ. ಶ್ರದ್ಧೆ ಏಕಾಗ್ರತೆಗಳು ಭಗವಂತನ ಸಾಮೀಪ್ಯವನ್ನು ದೊರೆಯುವಂತೆ ಮಾಡುತ್ತವೆ ಎಂಬುದನ್ನು ಪ್ರಮಾಣಭೂತವಾಗಿ ನಿರೂಪಿಸುವಲ್ಲಿ ಅವು ತನ್ನದೇ ಆದ ವಿಶಿಷ್ಟತೆಯನ್ನು ಮೆರೆದಿದ್ದಾಳೆ.

**ಅಡಿ ಟಿಪ್ಪಣಿಗಳು**

೦೧. ಲೀಲಾವತಿ ಎಸ್.ರಾವ್(ಸಂ), **ಹೆಳವನಕಟ್ಟೆ ಗಿರಿಯಮ್ಮನ ಕೀರ್ತನೆಗಳು**, ೨೦೦೩, ಪು.೫

೦೨. ಅದೇ, ಪು.೨೩

೦೩. ಅದೇ, ಪು.೭೦

೦೪. ಅದೇ, ಪು.೫೩

೦೫. ಅದೇ, ಪು.೫೪

೦೬. ಅದೇ, ಪು.೩೩

೦೭. ಅದೇ, ಪು.೪೨

೦೮. ಅದೇ, ಪು.೪೨

೦೯. ಅದೇ, ಪು.೪೨

೧೦. ಅದೇ, ಪು.೪

೧೧. ಅದೇ, ಪು.೨೩

೧೨. ಅದೇ, ಪು.೬

೧೩. ಅದೇ, ಪು.೮

೧೪. ಬಸವರಾಜ ಸಬರದ(ಸಂ). **ಪುರಂದರ ದಾಸರ ಕೀರ್ತನೆಗಳು**, ಭಾಗ ೧, ೨೦೦೩, ಪು.೮೬

೧೫. ಅದೇ, ಪು.೯೩

೧೬. ಅದೇ, ಪು.೧೨೬

೧೭. ಲೀಲಾವತಿ ಎಸ್.ರಾವ್(ಸಂ), **ಹೆಳವನಕಟ್ಟೆ ಗಿರಿಯಮ್ಮನ ಕೀರ್ತನೆಗಳು**, ೨೦೦೩, ಪು.೭

೧೮. ಅದೇ, ಪು.೧೬

೧೯. ಬಸವರಾಜ ಸಬರದ(ಸಂ). **ಪುರಂದರ ದಾಸರ ಕೀರ್ತನೆಗಳು**, ಭಾಗ ೧, ೨೦೦೩, ಪು.೧೦೭

೨೦. ಲೀಲಾವತಿ ಎಸ್.ರಾವ್(ಸಂ), **ಹೆಳವನಕಟ್ಟೆ ಗಿರಿಯಮ್ಮನ ಕೀರ್ತನೆಗಳು**, ೨೦೦೩, ಪು.೧೩

೨೧. ಅದೇ, ಪು.೧೩

೨೨. ಅದೇ, ಪು.೧೮

೨೩. ಎಚ್ಚೆಸ್ಕೆ(ಸಂ), **ದಾಸ ಸಾಹಿತ್ಯದರ್ಶನ**, ೧೯೮೪, ಪು.೮೬

೨೪. ಲೀಲಾವತಿ ಎಸ್.ರಾವ್(ಸಂ), **ಹೆಳವನಕಟ್ಟೆ ಗಿರಿಯಮ್ಮನ ಕೀರ್ತನೆಗಳು**, ೨೦೦೩, ಪು.೩೮

೨೫. ಅದೇ ಪು.೩೨

೨೬. ಅದೇ, ಪು.೩೩

೨೭. ಅದೇ, ಪು.೩೪

೨೮. ಅದೇ, ಪು.೩೬

೨೯. ಅದೇ, ಪು.೩೬

೩೦. ಅದೇ, ಪು.೩೯

೩೧. ಅದೇ, ಪು.೩

೩೨. ನಾಗರತ್ನ ಟಿ.ಎನ್.(ಸಂ), **ಶ್ರೀ ವಾದಿರಾಜರ ಕೀರ್ತನೆಗಳು**, ೨೦೦೩, ಪು.೩೫೪

೩೩. ಲೀಲಾವತಿ ಎಸ್.ರಾವ್.(ಸಂ), **ಹೆಳವನಕಟ್ಟೆ ಗಿರಿಯಮ್ಮನ ಕೀರ್ತನೆಗಳು**, ೨೦೦೩, ಪು.೨೨

೩೪. ಅದೇ, ಪು.೪

೩೫. ಅದೇ, ಪು.೨೧

೩೬. ಅದೇ, ಪು.೨೦

೩೭. ಅದೇ, ಪು.೧೪೫

೩೮. ಅದೇ, ಪು.೧೪೫

೩೯. ನಾಗರತ್ನ ಟಿ.ಎನ್.(ಸಂ), **ಶ್ರೀ ವಾದಿರಾಜರ ಕೀರ್ತನೆಗಳು**, ೨೦೦೩, ಪು.೩೭೪

೪೦. ಲೀಲಾವತಿ ಎಸ್.ರಾವ್.(ಸಂ), ಹೆಳವನಕಟ್ಟೆ ಗಿರಿಯಮ್ಮನ ಕೀರ್ತನೆಗಳು, ೨೦೦೩, ಪು.೨೪

೪೧. ಅದೇ, ಪು.೨೫

೪೨. ಅದೇ, ಪು.೨೯

೪೩. ಅದೇ, ಪು.೪೫

೪೪. ಅದೇ, ಪು.೪೬

೪೫. ಅದೇ, ಪು.೪೬

೪೬. ಅದೇ, ಪು.೪೯

೪೭. ಅದೇ, ಪು.೪೯

೪೮. ಅದೇ, ಪು.೫೦

೪೯. ಅದೇ, ಪು.೫೦

೫೦. ಅದೇ, ಪು.೫೦

೫೧. ಅದೇ, ಪು.೫೦

೫೨. ಅದೇ, ಪು.೫೧

೫೩. ಅದೇ, ಪು.೫೧

೫೪. ಅದೇ, ಪು.೫೧

೫೫. ಅದೇ, ಪು.೫೧

೫೬. ಅದೇ, ಪು.೫೨

೫೭. ಅದೇ, ಪು.೫೩

೫೮. ಅದೇ, ಪು.೪೩

೫೯. ಎಚ್ಚೆಸ್ಕೆ(ಸಂ), ದಾಸಸಾಹಿತ್ಯ ದರ್ಶನ, ೧೯೮೪, ಪು.೩೩೬

೬೦. ಅದೇ, ಪು.೩೯೨

೬೧. ಅದೇ, ಪು.೩೯೩

೬೨. ಅದೇ, ಪು.೩೮೫

೬೩. ಅದೇ, ಪು.೩೮೯

## ಅಧ್ಯಾಯ ೫

# ಗಿರಿಯಮ್ಮನ ಕಥನ ಕಾವ್ಯಗಳು

೫.೧. ಚಂದ್ರಹಾಸನ ಕಥೆ

೫.೨. ಶಂಕರಗಂಡನ ಹಾಡು

೫.೩. ಲವಕುಶರ ಕಾಳಗ

೫.೪. ಸೀತಾ ಕಲ್ಯಾಣ

೫.೫. ಬ್ರಹ್ಮ ಕೊರವಂಜಿ

೫.೬. ಉದ್ದಾಳಿಕನ ಕಥೆ

೫

# ಗಿರಿಯಮ್ಮನ ಕಥನ ಕಾವ್ಯಗಳು

## ೫.೧. ಖಂಡಕಾವ್ಯಗಳು

ಕಂಠಸ್ಥ ಸಂಪ್ರದಾಯದಲ್ಲಿ ಉಳಿದು ಬಂದು ಭಾವಗೀತೆಗಿಂತ ವಿಸ್ತಾರವಾದ ಕಥನಾತ್ಮಕವಾದ ವಿಶಿಷ್ಟ ಮಟ್ಟುಗಳಲ್ಲಿ ಹಾಡಲಾಗುವ ಸಾಂಪ್ರದಾಯಿಕ ಕಥನ ಕವನಗಳನ್ನು 'ಲಾವಣಿ' ಎಂದು ಸೌಲಭ್ಯದ ದೃಷ್ಟಿಯಿಂದ ಕರೆಯಬಹುದಾದರೂ ಕೆಲವು ಸುದೀರ್ಘ ರಚನೆಗಳನ್ನು ಬೇರೊಂದು ಹೆಸರಿನಿಂದಲೇ ಗುರುತಿಸುವುದು ಉಚಿತವಾಗಿದೆ. ಲಾವಣಿ ಅಥವಾ ನೀಳ್ಗವನಗಳು ಗಾತ್ರದಲ್ಲಿ ಚಿಕ್ಕವು ಕಥಾಸಂವಿಧಾನ ಸರಳ ಮತ್ತು ನೇರವಾಗಿದ್ದು, ಘಟನೆಗಳ ಜಟಿಲತೆಯಲ್ಲಿದೆ ಪಾತ್ರಗಳು ಹೆಚ್ಚಿಲ್ಲದೆ, ಕಥಾ ವಸ್ತು ಸಂವಿಧಾನ ಚಮತ್ಕಾರಯುತವಾಗಿದ್ದು, ಘಟನೆಗಳಿಂದ ಕೂಡಿದ್ದು ನಾಲ್ಕಾರು ಗಂಟೆಗಳ ಕಾಲ ಅಥವಾ ಇಡೀ ರಾತ್ರಿಯೆಲ್ಲ ಹಾಡುವಷ್ಟು ದೀರ್ಘವಾಗಿರುವ ಕೃತಿಗಳು ಪ್ರತ್ಯೇಕ ವರ್ಗವೆಂದು ಪರಿಗಣಿಸಿದರೂ ಹಬ್ಬ ಹರಿದಿನಗಳಲ್ಲಿ ಬೇಸಗೆಯ ಸಮಯದಲ್ಲಿ ಬೇಸರವಿಲ್ಲದೆ ಕಾಲ ಕಳೆಯಬೇಕಾದಾಗ ಕಥಾ ಕಾಲಕ್ಷೇಪ ಅನಿವಾರ್ಯವಾದಾಗ ನೀಳ್ಗವನವಾಗಲಿ, ಲಾವಣಿಯಾಗಲಿ ಸಾಕಾಗುವುದಿಲ್ಲ. ಒಂದು ರಾತ್ರಿಯಲ್ಲಿ ನಾಲ್ಕಾರು ಗಂಟೆಗಳ ತನಕ ಕಥೆ ಹರಿದರೂ ಸಾಮಾನ್ಯರಿಗೆ ನೀತಿ ಧರ್ಮ. ತತ್ವಬೋಧೆ ಸೊಗಸು ಕಥೆ ಚಮತ್ಕಾರವಾಗಿದ್ದು ಅದ್ಭುತಗಳಿಂದ ಕೂಡಿದ್ದರೆ. ವೀರ, ರೌದ್ರ, ಕರುಣ, ರಸಗಳಿಂದ ಕೂಡಿದ್ದು ಅಖ್ಯಾನ ಉಪಖ್ಯಾನಗಳಿಂದ ರೋಮಂಚನಕಾರಿಯಾದ ದೀರ್ಘವಾದ ರಚನೆಗಳನ್ನು 'ಖಂಡಕಾವ್ಯ'ಗಳೆಂದು ಕರೆಯಬಹುದು.

ಶಿಷ್ಟ ಕಾವ್ಯಗಳ ಮಾದರಿಯಲ್ಲಿ ಇಲ್ಲಿಯೂ ಸಹಿತ ಪೀಠಿಕಾ ಭಾಗ, ಕಾವ್ಯ ಶರೀರ ಮುಕ್ತಾಯಗಳಲ್ಲಿ ಒಂದು ಕ್ರಮಬದ್ಧತೆ ತೋರಿಬರುತ್ತದೆ. ಹಾಡಿಸಿದವರ ಹಾಡು ಕಲಿಸಿದವರ ಕುಲ ದೈವಗಳ ಸ್ಮರಣೆ ಅನೇಕ ಕಾವ್ಯಗಳಲ್ಲಿ ಲಭ್ಯವಾಗುತ್ತವೆ. ಕಾವ್ಯವನ್ನು ಕೇಳುವುದರಿಂದ ದೊರೆಯುವ ಪುಣ್ಯ ನಿರ್ಲಕ್ಷಿಸುವುದರಿಂದ ಕಾದಿರುವ ಶಿಕ್ಷೆ ಮುಂತಾದವುಗಳ ಪ್ರಸ್ತಾಪವೂ ಬರುತ್ತದೆ.

ಸುದೀರ್ಘ ಕಾವ್ಯಗಳನ್ನು ಹಾಡುವ ಕಲಾವಿದರು ಪ್ರತಿ ಹಳ್ಳಿಯಲ್ಲೂ ದೊರೆಯುವುದಿಲ್ಲ. ಲಾವಣಿಗಳು ಬಹು ಸಂಖ್ಯೆಯಲ್ಲಿ ಲಭ್ಯವಾದರೂ ಎಲ್ಲ ಊರುಗಳಲ್ಲಿಯೂ ಇರಬಹುದಾದರೂ

ಕಾವ್ಯಗಳನ್ನು ಕರಗತ ಮಾಡಿಕೊಂಡ ಕುಶಲಿಗಳು ಹತ್ತು ಹಳ್ಳಿಗೆ ಒಬ್ಬರಂತೆ ಸಿಗಬಹುದು. ಕಾವ್ಯಗಳ ಹಿನ್ನೆಲೆ ಭವ್ಯವಾದುದು ಆಹ್ಲಾದಕರ ವಾತಾವರಣದಲ್ಲಿ ಅನನ್ಯ ಶ್ರದ್ಧೆ ಭಕ್ತಿಗಳಿಂದ ಕೂಡಿದ ಮಂಗಳಮಯ ಆವರಣದಲ್ಲಿ ಅವುಗಳ ಗಾಯನ ಸಾಗುತ್ತದೆ. ಅವೆಲ್ಲ ಒಂದು ರೀತಿಯಲ್ಲಿ 'ಪುಣ್ಯ ಕಥೆಗಳು' ಹರಿಸಿಕೊಂಡೋ ಅನಿಷ್ಟ ಪರಿಹಾರಕ್ಕೋ ಮಡಿದವರಿಗೆ ಸದ್ಗತಿಯನ್ನು ಕೋರಿಯೋ ಶುಭಕಾರ್ಯಗಳನ್ನು ಕಳೆಗಟ್ಟಿಸಲಾಗಿಯೇ ಜನಪದ ಕಾವ್ಯಮೇಳಗಳನ್ನು ನಡೆಸಲಾಗುತ್ತದೆ. ಹೀಗೆ ಲಾವಣಿಗಳ ವಿಸ್ತೃತ ರೂಪವಾಗಿ ಮೂಡಿಬಂದಿರುವ ಖಂಡಕಾವ್ಯಗಳು ಉದ್ದೇಶದಲ್ಲಿ ವ್ಯಾಪ್ತಿಯಲ್ಲಿ ಎರಡರ ನಡುವೆ ಸ್ವಲ್ಪ ಮಟ್ಟಿನ ಅಂತರವನ್ನು ಗುರುತಿಸಬಹುದು. ಎರಡರ ಉದ್ದೇಶವೂ ಕಥೆ ಹೇಳುವುದೇ ಆದರೂ 'ಲಾವಣಿ' ಲೌಕಿಕ ಚೌಕಟ್ಟಿನಲ್ಲಿ ನಿಲ್ಲುತ್ತದೆ. ಲೌಖಿಕ ಕಥೆಯೇ ಆದರೂ 'ಖಂಡಕಾವ್ಯ' ಪುಣ್ಯಕಥೆ ಎನಿಸಿ ಧಾರ್ಮಿಕ ಆವರಣವನ್ನು ಪಡೆದುಕೊಳ್ಳುತ್ತದೆ. ಈ ಅಧ್ಯಾಯದಲ್ಲಿ ಹೆಳವನಕಟ್ಟೆ ಗಿರಿಯಮ್ಮ ಸಾಂಗತ್ಯದಲ್ಲಿ ರಚಿಸಿದ ಖಂಡಕಾವ್ಯಗಳ ಕಥೆಯ ಸ್ವರೂಪವನ್ನು ಕುರಿತು ವಿವೇಚಿಸಲಾಗಿದೆ.

## ೫.೧. ಚಂದ್ರಹಾಸನ ಕಥೆ

ಹೆಳವನಕಟ್ಟೆ ಗಿರಿಯಮ್ಮನ ಕಥನ ಕಾವ್ಯಗಳಲ್ಲಿ ಪ್ರಮುಖವಾದ ಚಂದ್ರಹಾಸನ ಕಥೆಯು ನಾಲ್ಕು ಸಂಧಿಗಳ ೩೫೫ ನುಡಿಗಳಲ್ಲಿ ಸಾಂಗತ್ಯದಲ್ಲಿದ್ದು ತುಂಬ ಪ್ರಸಿದ್ಧವಾದ ಕಥಾವಸ್ತುವನ್ನೊಳಗೊಂಡಿದೆ. ಹರಿಯಂತೆ ಹರಿಭಕ್ತರ ಕಥೆಗಳನ್ನು ಗಿರಿಯಮ್ಮ ಅಷ್ಟೇ ಭಕ್ತಿ ಪ್ರೀತಿಗಳಿಂದ ತನ್ನ ಹಾಡುಗಳ ವಸ್ತುವನ್ನಾಗಿಸಿಕೊಂಡಿರುವುದನ್ನು ಅಜಾಮಿಳನ ಕಥೆ ಮತ್ತು ಚಂದ್ರಹಾಸನ ಕಥೆಗಳಲ್ಲಿ ಕಾಣಬಹುದಾಗಿದೆ. ಲಕ್ಷ್ಮೀಶನ ಜೈಮಿನಿ ಭಾರತದ ಚಂದ್ರಹಾಸೋಪಾಖ್ಯಾನವೇ ಚಂದ್ರಹಾಸನ ಕಥೆಗೆ ಮೂಲ ಎನ್ನುವುದನ್ನು ಗಿರಿಯಮ್ಮನೇ ತನ್ನ ಕಾವ್ಯಾರಂಭದಲ್ಲಿ ಹೇಳಿಕೊಂಡಿದ್ದಾಳೆ.

> ಸುರಪುರವಾಸ ಲಕ್ಷ್ಮೀಯಕಾಂತ ಭಕ್ತರ್ಗೆ
> ಬರೆದಂಥ ಜೈಮಿನಿಯೊಳಗೆ
> ಪರಮಭಕ್ತ ಚಂದ್ರಹಾಸನ ಕಥೆಯನು ಚರಿತೆಯ
> ಮಾಡಿ ವರ್ಣಿಸುವೆ'

ಎಂದು ಹೇಳಿಕೊಂಡಿರುವುದರಿಂದ ವಸ್ತುವಿನ ಆಯ್ಕೆಯಲ್ಲಿ ಸ್ವಂತಿಕೆಯೇನೂ ಇಲ್ಲ. ಲಕ್ಷ್ಮೀಶನ ಜೈಮಿನಿ ಭಾರತದಲ್ಲಿಯ ಕಥಾನಕವನ್ನೇ ಸಾಂಗತ್ಯದಲ್ಲಿ ಜನ ಸಾಮಾನ್ಯರಿಗೆ ಅರ್ಥವಾಗುವಂತೆ ಸರಳವಾಗಿ ಹೇಳಿದ್ದಾಳೆ. ವೈಷ್ಣವ ಭಕ್ತಿ ನಿರೂಪಣೆ ಚಂದ್ರಹಾಸನ ಕಥೆಯನ್ನು ಆವರಿಸಿಕೊಂಡಿರುವುದು ಸಮುಚಿತವೇ ಆಗಿದೆ. ಶೈಶವದಲ್ಲಿಯೇ ತಂದೆ ತಾಯಿಗಳನ್ನು ಕಳೆದುಕೊಂಡು ಅನಾಥ ಶಿಶುವಾಗಿ ಬೆಳೆದು ಎಷ್ಟೋ ಕಷ್ಟ ಪರಂಪರೆಗಳು ಬಂದರೂ ಹರಿ ಕರುಣೆಯಿಂದ ಪಾರಾಗಿ ಕುಂತಳಾಧಿಪತಿಯಾಗಿ ಕೊನೆಗೆ ಮೆರೆವ

ವೈಷ್ಣವ ಭಕ್ತ ಶ್ರೇಷ್ಠವಾದ ಚಂದ್ರಹಾಸನ ಕಥೆಯೇ ಕಾವ್ಯದ ವಸ್ತು ಗಿರಿಯಮ್ಮ ತನ್ನ ಕಾವ್ಯದ ಆರಂಭದಲ್ಲಿ ಹೀಗೆ ಹೇಳಿದ್ದಾರೆ.

ಶೃಂಗಾರ ಪುರದ ನೆಲವಾಸೆ ಸಜ್ಜನ ಪೋಷೆ
ಸಂಗೀತ ಲೋಲೆ ಸುಶೀಲೆ
ಮಂಗಳಗಾತ್ರ ಶಾರದೆ ಎನ್ನಜಿಹ್ವೆಯಲಿ
ಹಿಂಗದೆ ನೆಲಸೆನ್ನ ತಾಯೆ
ನಿತ್ಯಾನಂದ ರಜತಾಚಲವಾಸನ
ಭಕ್ತವತ್ಸಲ ಭಾಳನೇತ್ರ
ಹೆತ್ತೂರ ಮನೆ ದೈವ ಶ್ರೀಮೈಲಾರಗೆ
ಹಸ್ತವ ಮುಗಿದು ವಂದಿಸುವೆ
ಪೃಥಿವಿ ಆಕಾಶ ಸೂರ್ಯ ಚಂದ್ರರಿಗೆರಗುವೆ
ಪತಿಯ ಚರಣವನ್ನು ನೆನೆವೆ
ಸ್ತುತಿಸುವೆ ಗುರುಹಿರಿಯರಿಗೇಕ ಚಿತ್ತದಿ
ಮತಿಗೆ ಮಂಗಳವಾಗಲೆಂದು[3]

ಈ ಕಾವ್ಯದಲ್ಲಿ ಮೊದಲು ಶಾರದೆಯನ್ನು ಕುರಿತು ಸಂಗೀತ ಲೋಲೆ ಮಂಗಳಗಾತ್ರ ಶಾರದೆ ಎನ್ನ ಜಿಹ್ವೆಯಲಿ ಹಿಂಗದೆ ನೆಲಸು ತಾಯಿ ಎಂದು ಆರಂಭಿಸಿ ವಿಘ್ನೇಶ್ವರನನ್ನು ಮೈಲಾರೇಶ್ವರನನ್ನು ವಂದಿಸಿ ಪತಿಯನ್ನು ಅಭಿನಂದಿಸಿದ ಮೇಲೆ ಕಥೆ ಪ್ರಾರಂಭವಾಗುತ್ತದೆ. ಕಥೆಯ ಸಾರಾಂಶ ಹೀಗಿದೆ.

ಯಜ್ಞ ಕುದುರೆಯನ್ನು ಬೆನ್ನಟ್ಟಿ ಬಂದ ಅರ್ಜುನನಿಗೆ ತನ್ನ ಕುದುರೆ ಕಾಣದಾಗಲು ಯಾರು ಕಟ್ಟಿರಬಹುದೆಂದು ಚಿಂತಿಸುತ್ತಿರಲು ನಾರದರ ಆಗಮನವಾಗಲು ಸತ್ಕಾರಾದಿಗಳನ್ನು ಮುಗಿಸಿ ತನ್ನ ಸಂದೇಹವನ್ನು ವ್ಯಕ್ತಪಡಿಸಲು ನಾರದರು ಚಂದ್ರಹಾಸನ ಕಥೆಯನ್ನು ಭಿನ್ನವಿಸುನ ಸಂದರ್ಭ.

ಕುಂತಳ ಪುರದರಸ ಚಂದ್ರಹಾಸನು ಅರ್ಜುನನ ಕುದುರೆಯನ್ನು ಬಂಧಿಸುವನು ಕುದುರೆಯನ್ನು ಕಾಣದ ಅರ್ಜುನನು. ಅಲ್ಲಿಗೆ ಆಗಮಿಸಿದ ನಾರದರಲ್ಲಿ ತುರದ ಬಗ್ಗೆ ಕೇಳಲು ನಾರದರು ಚಂದ್ರಹಾಸನು ಬಂಧಿಸಿರುವನೆಂದು ಹೇಳುವರು ಮತ್ತು ನಾರದರು ಚಂದ್ರಹಾಸನ ಚರಿತೆಯನ್ನು ವಿವರಿಸುವರು ಚಂದ್ರಹಾಸನು ಮಹಾವಿಷ್ಣು ಭಕ್ತನು ಆತನನ್ನು ಗೆಲ್ಲುವ ವೀರರಿಲ್ಲ ಎಂದು ಹೇಳಿದನು. ಧಾರ್ಮಿಕ ಎಂಬ ಕೇರಳದರಸ ಬಾಳ ಎಂಬುವನು ಅವನ ಪ್ರಧಾನಿಯಾಗಿದ್ದನು. ಆ ರಾಜನು ನೀತಿಯಿಂದ ರಾಜ್ಯವಾಳುತ್ತಿರಲು ಅವನಿಗೆ ಒಬ್ಬ ಮಗ ಮೂಲಾನಕ್ಷತ್ರದಲ್ಲಿ ಜನಿಸಿದನು. ಅವನಿಗೆ ಜಾತಕರ್ಮ ನಾಮಕರಣಗಳನ್ನು ಮಾಡುವ ಮೊದಲೇ ರಾಜನು ಮರಣ ಹೊಂದಿದನು. ರಾಣಿಯು ಸಹಗಮನದಿಂದ

ರಾಜ್ಯ ವೈರಿಗಳ ವಶವಾಗುವುದು. ಅನಾಥವಾದ ಮಗುವನ್ನು ಒಬ್ಬ ದಾಸಿ ತೆಗೆದುಕೊಂಡು ಬಂದು ಕುಂತಳಪುರದಲ್ಲಿ ಸಾಕುವಳು.

ಹೆಳವನಕಟ್ಟೆ ಗಿರಿಯಮ್ಮ ಕಥೆಯನ್ನು ಎಲ್ಲಿಯೂ ಬದಲಾವಣೆ ಮಾಡಿಕೊಂಡಿಲ್ಲ ೪ ಸಂಧಿಗಳಲ್ಲಿ ಚಂದ್ರಹಾಸನ ಶೈಶವದಿಂದ ಹಿಡಿದು ಕಾಳಿಯನ್ನು ಸಾಕ್ಷಾತ್ಕರಿಸಿಕೊಂಡು ಮಾವ ಭಾವ ಮೈದುನರನ್ನು ಬದುಕಿಸಿಕೊಳ್ಳುವವರೆಗಿನ ಕಥೆಯನ್ನು ವಿವರಿಸಿದ್ದಾಳೆ.

ಲಕ್ಷ್ಮೀಶನ ದಟ್ಟ ಛಾಯೆ ಗಿರಯಮ್ಮನ ಕಾವ್ಯದ ಮೇಲಾಗಿದೆ. ಹಲವು ಪದ್ಯಗಳಂತೂ ಲಕ್ಷ್ಮೀಶನ ಪದ್ಯಗಳ ಸರಳೀಕರಣವಾಗಿದೆ. ಉದಾಹರಣೆಗೆ ಅನಾಥಭಾವ ಶಿಶುವಿನ ಬಗ್ಗೆ ಕನಿಕರವನ್ನು ತಳೆದು ವೃದ್ಧ ದಾಸಿಯೊಬ್ಬಳು ಶಿಶುವನ್ನು ಎತ್ತಿಕೊಂಡು ಕುಂತಳ ನಗರಕ್ಕೆ ಬಂದಾಗ ಅತಿ ಪ್ರೀತಿಯಿಂದ ಕಷ್ಟಪಟ್ಟು ಮಗುವನ್ನು ಸಾಕಿದಳು ಆದರೆ ಅವಳು 'ಎಳೆಯಂಗೆ ಬೇಕಾದುದಿಲ್ಲದಿರೆ ಮರುಗುವಳ್' ಎಂದು ಲಕ್ಷ್ಮೀಶನು ಜೈಮಿನಿ ಭಾರತದಲ್ಲಿ ಹೇಳಿರುವ ರೀತಿಯಲ್ಲೇ ಗಿರಿಯಮ್ಮ 'ತರಳಗೆ ಬೇಕಾದುದಿಲ್ಲದಿರಲು ದಾಸಿ ಮರುಗುತಿರ್ದಳು ಮನದೊಳಗೆ' ಎಂದು ಸರಳವಾಗಿ ಹೇಳಿದ್ದಾಳೆ.

ತಿರಿದು ಹಾಕುವಳು ಪಾಲ್ಬೆಣ್ಣೆಯ ಶಿಶುವಿಗೆ
ಎರೆದು ಪೋಷಣೆಯ ಮಾಡುವಳು
ತರಳಂಗೆ ಬೇಕಾದುದಿಲ್ಲದಿರಲು ದಾಸಿ
ಮರುಗುತಿರ್ದಳು ಮನದೊಳಗೆ[೩]

ಈ ಕೃತಿಯು ಸ್ತ್ರೀ ಸಹಜವಾದ ಅನುಕಂಪೆ ಕರುಣಾಜನಕವಾದಂತಹ ಸನ್ನಿವೇಶಗಳಲ್ಲಿ ಉಕ್ಕಿ ಹರದು ಕಾವ್ಯ ಸಿದ್ಧಿಯನ್ನು ಪಡೆದಿದೆ. ತಂದೆ ತಾಯಿಗಳನ್ನು ಕಳೆದುಕೊಂಡ ಅನಾಥ ಶಿಶು ಚಂದ್ರಹಾಸನನ್ನು ನೋಡಿ ಅವನನ್ನು ಸಾಕುತಿದ್ದ ದಾಸಿ ಹೇಳುವ ಮಾತುಗಳು

ದೇಶಾಧಿಪತಿಯ ಗರ್ಭದಿ ಬಂದು ನಿನಗೀಗ
ಹಾಸುವ ವಸ್ತ್ರಗಳಿಲ್ಲ
ಬೀಸಿ ತೂಗುವರೆ ತೊಟ್ಟಿಲುಯಿಲ್ಲ ಎನುತಲಿ
ಬೇಸತ್ತು ಅಳಲುವಳೊಮ್ಮೆ[೪]

ಸಾಕುವ ದಾಸಿಯೂ ತೀರಿ ಹೋದ ಮೇಲೆ ಮತ್ತಷ್ಟು ಕಷ್ಟಕ್ಕೆ ಸಿಕ್ಕ ಚೆಲ್ವ ಶಿಶುವ ಮನಸ್ಥಿತಿ ಸೋಚನಿಯವಾದುದು.

ಚೆಲ್ವಶಿಶು ಬೀದಿಯೊಳ್ ಬಂದು ದೇಸಿಗನಾಗಿ
ನಿಲ್ವಿನಂ ಕಂಡ ಕಂಡಬಲೆಯರ್ ಕರೆಕರೆದು
ಮೆಲ್ಲ ತನಿವಣ್ಣಳಂ ಕಜ್ಜಾಯ ಸಕ್ಕರೆಗಳು ಕೊಡುವರೆತ್ತಿಕೊಂಡು

ಸೊಲ್ಪ ಮಾತುಗಳನಾಲಿಸಿ ಮುದ್ದಿಸುವರೀವ
ರೊಲ್ಪುದಂ ಮಜ್ಜನಂಗೈಸಿ ಮಡಿಯಂ ಪೊದಿಸಿ
ಮೆಲ್ಪಾಸಿಯೊಳ್ ಮಲಗಿಸುವರರ್ತಿಯಿಂದೊಸೆದು ತಂತಮ್ಮ ಮಕ್ಕಳೊಡನ್

ಇದನ್ನೇ ಗಿರಿಯಮ್ಮ ಈ ರೀತಿಯಾಗಿ ಹೇಳಿದ್ದಾಳೆ.

ಇರುತಿರೆ ದಾಸಿ ಅಂತರಿಸಿ ಪೋದಳು ಬಾಲ
ಪರಪುಟ್ಟನಾದುದ ಕಂಡು
ನೆರೆಯ ನಾರಿಯರೆಲ್ಲ ತಮ್ಮ ಮಕ್ಕಳ ಕೂಡೆ
ಎರೆದು ಮಡಿಯ ಪೊದಿಸುವರು.

ಮಾಗಾಯಿ ಮುರವಿಟ್ಟು ಮನ್ನಿಸಿ ಕೆನೆ ಮೊಸ
ರೋಗರವನ್ನು ಉಣಿಸುವರು
ತೂಗುವರು ತೊಟ್ಟಿಲೊಳಗಿಟ್ಟು ತರಳನ
ರಾಗ ಗಾನದಲಿ ಪಾಡುವರು

ಓರಗೆ ಮಕ್ಕಳು ಒಡಗೊಂಡು ಹೋಗಿ ಎ
ಣ್ಣುರಿಗೆಯ ಕೊಡಿಸುವರು
ಕೇರಿ ಕೇರಿಗಳೊಳು ಕೊಡವರೆಲ್ಲರ
ಕಾರುಣ್ಯದ ಕಂದನಾಗಿ

ಸೂಳೆವೆಣ್ಣುಗಳಲ್ಲ ಸೆಳೆದೆತ್ತಿಕೊಂಡು ತ
ಮ್ಮಾಲಯ ದೊಳು ಕರೆದೊಯ್ದು
ಕಾಲ ತೊಳೆದು ಕಸ್ತುರಿಯನಿಟ್ಟು ಮಲ್ಲಿಗೆ
ಮಾಲೆಯನವಗೆ ಹಾಕುವರು.

ಕದಳಿ ಖರ್ಜೂರ ಕಿತ್ತಳೆ ಜಂಬು ನೇರಿಲು
ಮಧುರ ಮಾವಿನ ಫಲಗಳನು
ಚದುರೆಯರೆಲ್ಲರು ಕೊಟ್ಟು ಮನ್ನಿಸುವರು
ಮದನನಯ್ಯನ ಕಿಂಕರಣೆ ಎಂದು ವಿವರಿಸಿದ್ದಾಳೆ.[೬]

ಹೆಣ್ಣಾದ ಗಿರಿಯಮ್ಮನ ಹೃದಯ ಈ ಸಂದರ್ಭಗಳಲೆಲ್ಲಾ ವಾತ್ಸಲ್ಯಭಾವ ಮನಃ ತುಂಬಿ ಮೂಡಿ ಬಂದಿದೆ ಸ್ವಾನುಭವದ ಅಭಿವ್ಯಕ್ತಿಗಳಂತೆ ಕಾಣುತ್ತದೆ. ಲಕ್ಷ್ಮೀಶನಲ್ಲಿರುವಷ್ಟು ವಿಸ್ಕೃತ ವಿವರಣೆಗಳಿಲ್ಲ ವ್ಯರ್ಥವಾದ ಮಾತುಗಳಾಗಲಿ ಉಪಮೆ ರೂಪಕಗಳಾಗಲೀ ಇಲ್ಲ. ನೇರವಾಗಿ ಕಥೆಯನ್ನು ಹೇಳಿಕೊಂಡು ಹೋಗಿರುವುದು ಕಂಡುಬರುತ್ತದೆ.

ವ್ಯಾಸಾಂಬರೀಷ ವಿಭೀಷಣ ಕ್ರೂರಪ
ರಾಶರ ಧ್ರುವ ಪ್ರಹಲ್ಲಾದ
ಈಸು ಮಂದಿ ಭಕ್ತರಿಗಧಿಕನು ಚಂದ್ರ
ಹಾಸನೆಂಬಾ ಹರಿಭಕ್ತ[೭]

ಎಂದು ಮಹಾಭಗವದ್ಭಕ್ತನಾದ ಚಂದ್ರಹಾಸನ ಕಥೆ ಹೇಳಲು ಗಿರಿಯಮ್ಮ ತೊಡಗುತ್ತಾಳೆ. ಭಗವಂತನ ಕೃಪೆ ಇದ್ದರೆ ಎಂಥ ಕಷ್ಟ ಬಂದರೂ ಪಾರಾಗಬಹುದು ಎಂಬುದಕ್ಕೆ ಚಂದ್ರಹಾಸನ ಕಥೆಯೊಂದು ನಿದರ್ಶನ.

ಭಯದಿಂದಲಿದ್ದ ಬಾಲಗೆ ದೊರಕಿತು
ಪುಣ್ಯೋದಯದಿ ಸಾಲಗ್ರಾಮ ಶಿಲೆಯು
ಕೈಯ ದುಡುಕಿಲಿ ತೆಕ್ಕೊಂಡನು ಹರುಷದಿ
ಲಕ್ಷ್ಮೀ ನಾರಾಯಣ ಮೂರುತಿಯ[೮]

ಚಂದ್ರಹಾಸನು ಜನಿಸಿದಾಗಲೇ ಹೆತ್ತವರನ್ನು ಕಳೆದುಕೊಂಡು ಕುಂತಳಪುರದ ದಾಸಿಯೊಬ್ಬಳ ಆಶ್ರಯದಲ್ಲಿ ಬೆಳೆದು ತನ್ನ ಸದ್ಗುಣಗಳಿಂದ ಎಲ್ಲರ ಮೆಚ್ಚಿಗೆ ಗಳಿಸಿದ್ದ ಚಂದ್ರಹಾಸನಿಗೆ ಒಮ್ಮೆ ಗೋಲಿಯಾಕಾರದ ಸಾಲಿಗ್ರಾಮ ಶಿಲೆಯೊಂದು ದೊರೆಯುತ್ತದೆ. ಅದುವೆ ಅದೃಷ್ಟವಾಗಿ ಪರಿಣಮಿಸುತ್ತದೆ ಓರಗೆಯ ಮಕ್ಕಳೊಡನೆ ಆಟ ಪಾಟಗಳಲ್ಲಿ ದಿಗ್ವಿಜಯ ಪಡೆಯುತ್ತಿದ್ದ ಅದನ್ನು ದಿನವೂ ಪೂಜಿಸುತ್ತಾ ಇಡಲು ಸರಿಯಾದ ಸ್ಥಳವಿಲ್ಲದ ತನ್ನ ಬಾಯೊಳಗಿಟ್ಟುಕೊಂಡು ಕಾಪಾಡಿಕೊಳ್ಳುತ್ತಾನೆ.

ಕುಂತಳಪುರದ ಮಂತ್ರಿ ದುಷ್ಟಬುದ್ಧಿಯ ಮನೆಗೆ ಭೋಜನಕ್ಕೆ ಎಂದು ಬಂದಿದ್ದ ಬ್ರಾಹ್ಮಣರು ಪರದೇಶಿಯಾದ ಚಂದ್ರಹಾಸನ ಮುಖದಲ್ಲಿದ್ದ ರಾಜಲಕ್ಷಣಗಳನ್ನು ಕಂಡು ದುಷ್ಟಬುದ್ಧಿಯನ್ನು ಕೇಳಲು ಆತನು ಈ ಅನಾಥ ಬಾಲಕನ ಪರಿಚಯ ತನಗಿಲ್ಲವೆಂದನು. ಅತಿ ಲಕ್ಷಣ ಸಂಪನ್ನ ಸುಶೀಲನು, ಬುದ್ಧಿವಂತ, ಮಹಾಧೀರನಾಗಿರುವ, ಶುಭಲಕ್ಷಣದಿಂದ ಕೂಡಿರುವ ಈ ಬಾಲಕನು ಈ ರಾಜ್ಯದೊಡೆಯನಾಗುವನು ನಿನ್ನ ಸಂಪತ್ತಿಗೆ ಇವನೇ ಉತ್ತರಾಧಿಕಾರಿಯಾಗುವನೆಂದು ಬ್ರಾಹ್ಮಣರು ನುಡಿದರು. ಹೀಗೆ ಅವನ ವಿಚಾರವಾಗಿ ಭವಿಷ್ಯವೇ ಅವನಿಗೆ ಮೃತ್ಯುವಾಗುತ್ತದೆ. ಚಕ್ರವರ್ತಿ ಲಕ್ಷಣಗಳುಳ್ಳ ಈ ಬಾಲಕನೇ ಮುಂದೆ ಕುಂತಳಾಧಿಪತಿಯಾಗುತ್ತಾನೆನ್ನುವ ಭವಿಷ್ಯವು ದುಷ್ಟಬುದ್ಧಿಯ ನೆಮ್ಮದಿಯನ್ನು ಕೆಡಿಸುತ್ತದೆ. ತನಗೆ ಪ್ರತಿಸ್ಪರ್ಧಿಯೊಬ್ಬ ಹುಟ್ಟಿಕೊಂಡನೆಂದು ಮಂತ್ರಿ ದುಷ್ಟಬುದ್ಧಿಗೆ ಸಹಿಸಲಾಗುವುದಿಲ್ಲ. ಆ ಪರದೇಶಿ ಮಗುವಿನ ಪ್ರಾಣಾಪಹರಣದಿಂದ ತನ್ನ ಮಾರ್ಗವನ್ನು ನಿಷ್ಕಳಂಕವಾಗಿ ಮಾಡಿಕೊಳ್ಳಬಹುದೆಂಬ ಆಲೋಚನೆಯನ್ನು ಕ್ರಿಯಾ ರೂಪಕ್ಕಿಳಿಸುತ್ತಾನೆ. ಚಂದ್ರಹಾಸನನ್ನು ಕೊಲ್ಲಲು ಕಟುಕರನ್ನು ಕಳುಹಿಸುತ್ತಾನೆ. ಬಾಲಕ ಚಂದ್ರಹಾಸನನ್ನು ಕಟುಕರು ಹೆಡೆ ಮುರಿಕಟ್ಟಿ ಎಳೆದೊಯ್ಯಲು ಆರ್ತನಾಗಿ ಹರಿಸ್ಮರಣೆಗೆ ತೊಡಗುತ್ತಾನೆ.

ಪಾತಕರೊಳಗಿರ್ದ ಪರಮಾತ್ಮನಂತೆ
ದೂತರೆಳೆದು ಅಜಾಮಿಳನಂತೆ
ಕಾತರಿಸಿ ಕಂಗೆಟ್ಟು ಮರುಗುತಿರ್ದನು ಭಯ
ಭೀತನಾಗಿರ್ದ ಬಾಲಕನು

ಕಾಲ ರಕ್ಕಸರು ಪ್ರಹಲ್ಲಾದನ ಪಿಡಿದಂತೆ
ಗೋಳುವಳಿದ ಹೆಂಗಳಂತೆ
ಗಾಳಿಗೊಡ್ಡಿದ ಸೊಡರಂತೆ ತಲ್ಲಣಿಸುತ
ಗೋಳಿಟ್ಟು ಹರಿಗೆ ದೂರಿದನು

'ಗಾಳಿ ಗೊಡ್ಡಿದ ಸೊಡರಂತೆ ತಲ್ಲಣಿಸುತ ಗೋಳಿಟ್ಟು ಹರಿಗೆ ದೂರಿದನು' ಎಂದು ಭಯದಿಂದ ಒಂದೇ ಸಮನೆ ನಾರಾಯಣ ಹರಿ ಎನ್ನುತ್ತ ಕಾಡಿನಲ್ಲಿ ಹೆದರಿ ಅಳುತ್ತಿದ್ದ ಬಾಲಕನ್ನು ನೋಡಿ ಕಟುಕರ ಮನಸ್ಸು ಕರಗಿತು ಕರುಣೆಯಿಂದ ಅವನನ್ನು ಕೊಲ್ಲದೆ ಮನೋಹರವಾದ ಬಾಲಕನ ಎಡಗಾಲಿನಲ್ಲಿ ಆರು ಬೆರಳುಗಳಿರುವುದನ್ನು ನೋಡಿ ಆರನೆಯ ಬೆರಳೊಂದನ್ನು ಕತ್ತರಿಸಿಕೊಂಡು ಹೋಗಿ ಮಂತ್ರಿಗೆ ತೋರಿಸಿದರು. ಇತ್ತ ಬಾಲಕ ಕಾಲುಗಾಯದ ನೋವಿನಲ್ಲಿ ನರಳುತ್ತ ಕಾಡಿನಲ್ಲಿರುವ ಚಂದ್ರಹಾಸನ ಅಳುವ ಧ್ವನಿಯನ್ನು ಕೇಳಿ ಕಾಡಿನಲ್ಲಿರುವ ಬಗೆ ಬಗೆಯ ಪ್ರಾಣಿ, ಪಕ್ಷಿಗಳು ಬಾಲಕನಿಗೆ ಉಪಚರಿಸಿ ರಕ್ಷಿಸುತ್ತವೆ.

ರಾವು ತುಡಿಕಿದ ಚಂದ್ರನಂತೆ ಅರಗಿಳಿಯನ್ನು
ಬಾವುಗ ಪಿಡಿದೆಳೆದಂತೆ
ತಾವರೆವೊಳಗಣ ಉದಕದಂದದಿ ಬಾಲ
ಜೀವ ತಲ್ಲಣಿಸುತಲಿಹನು

ರಾವು ತುಡಿಕಿದ ಚಂದ್ರನಂತೆ ಮೊದಲಾಗಿ ವರ್ಣಿಸಿ ಅವನ ಅಸಹಾಯಕ ಸ್ಥಿತಿಯನ್ನು ನಿರೂಪಿಸಿದ್ದಾಳೆ. ಹರಿಭಕ್ತನದ ಚಂದ್ರಹಾಸನಿಗೆ ಈ ಸಂದರ್ಭದಲ್ಲಿ ಹರಿಯಿಲ್ಲದೆ ಧನ್ಯರಿಲ್ಲವೆನಿಸಿರಬೇಕು ಭೀತನಾಗಿ ಆರ್ತನಾಗಿ ತಲ್ಲಣಗೊಂಡು ಹರಿಗೆ 'ಹರಿ ನಾರಾಯಣ' ಎಂದು ಮೊರೆಯಿಡುತ್ತಾನೆ.

ಇಲ್ಲಿನ ವರ್ಣನೆಗಳೆಲ್ಲವೂ ಮತ್ತೆ ಲಕ್ಷ್ಮೀಶನಿಂದ ಎರವಲು ಪಡೆದಂತಿವೆ. ಭಗವಂತನು ಭಕ್ತರ ಪರಾಧೀನ ನಂಬಿದವರನ್ನು ಕೈಬಿಡಲಾರ ಎನ್ನುವ ಗಿರಿಯಮ್ಮನ ನಂಬಿಕೆಗೆ ಇದೊಂದು ಸ್ಪಷ್ಟ ನಿದರ್ಶನವೆಂಬಂತೆ ಆರ್ತಸ್ವರದಿಂದ ಅಳುವ ಬಾಲಕನನ್ನು ಪಶು, ಪಕ್ಷಿ, ಪ್ರಾಣಿಗಳು ಆದರಿಸಿ ಸಮಾಧಾನ ಪಡಿಸುವ ಚಿತ್ರಣ ಹೃದಯಂಗಮವಾಗಿದೆ.

ಎಲ್ಲಿಯ ರಭಸವಿದೇನೆಂದು ವನದೇವಿ
ಮೆಲ್ಲಡಿಯಿಡುತ ತಾ ಬಂದು

ಗಲ್ಲವ ಪಿಡಿದು ತೊಡೆಯೊಳಿಟ್ಟು ರಂಬಿಸಿ
ಬಲ್ಲದನಾಗೆಂದು ಹರಿಸಿ''

ಸ್ವತಃ ವನದೇವಿಯೇ ಬಂದು ವಾತ್ಸಲ್ಯ ಭಾವದಿಂದ ಮುದ್ದಿಸುತ್ತಾ ಸಮಾಧಾನಪಡಿಸುತ್ತಾ ಮನದ ಅಳಲನ್ನು ಹೋಗಲಾಡಿಸಿದ್ದು ಅಲ್ಲದೆ ಪರಾಕ್ರಮಶಾಲಿಯಾಗು ಎಂದು ಹರಕೆ ನೀಡುತ್ತಾಳೆ. ಒಟ್ಟಿನಲ್ಲಿ ಇಡೀ ಪ್ರಕೃತಿಯೇ ಅವನ ಸೇವೆಗೆ ನಿಲ್ಲುತ್ತದೆ. ಅದನ್ನು ನೋಡಿದಾಗ ಯಾವ ಮನಸ್ಸಿಗಾದರೂ "ಊರಿಗಿಂತ ಕಾಡು ಲೇಸಾಯಿತು" ಎಂದು ಎನಿಸುವುದರಲ್ಲಿ ಆಶ್ಚರ್ಯವಿಲ್ಲ. ಹರಿಯನ್ನು ನಂಬಿದವರ ಭಾರ ಹರಿಯದು.

ಕಾಡಿನಲ್ಲಿ ದುಷ್ಟ ಮೃಗಗಳ ಭಾದೆ ಹೆಚ್ಚಾಗಿರುವುದನ್ನು ಕೇಳಿದ ಪುಳಿಂದ(ಬೇಡ) ಅವುಗಳ ಹಾವಳಿಯನ್ನು ತಡೆಯಬೇಕೆಂದು ಬೇಟೆಗೆ ಬಂದಿದ್ದ ಚಂದನಾವತಿಯ ಪುಳಿಂದರಾಯ ಮಗುವನ್ನು ಕಂಡು ಊರಿಗೆ ಕರೆತರುತ್ತಾನೆ.

ಪಾಪ ಕೆಳಸಿ ಬಂದು ಪೂರ್ವದಲಿ ಪುಣ್ಯ
ರೂಪವ ಕಂಡಂತೆ ಮನದಿ
ಚಾಪವನಿಳುಹಿದ ರಾಯನು ಬೇಗದಿ
ಶ್ರೀಪತಿಗೆ ಶರಣೆಂದೆನುತ

ಬಡವಗೆ ಭಾಗ್ಯದ ಲಕ್ಷ್ಮಿ ದೊರೆ ತಂದದಿ
ಎಡಹಿ ನಿಧಾನ ಕಂಡಂತೆ
ಪಡೆದೆ ಆಯಾಸವಿಲ್ಲದೆ ಬಾಲಕನ ನೆಂದು
ಕಡು ಹರುಷವನು ತಾಳಿದನು''

'ಪಾಪವನ್ನು ಬಯಸಿ ಬಂದವನಿಗೆ ಪುಣ್ಯರೂಪ ಕಂಡಂತೆ' ಬಾಲಕನು ಕಣ್ಣಿಗೆ ಬೀಳುವುದು ವಿಧಿನಿಯಮಕವಾಗಿ ಮಕ್ಕಳಿಲ್ಲದ ಪುಳಿಂದ ದಂಪತಿಗಳಿಗೆ ಬಡವನಿಗೆ ಭಾಗ್ಯದ ನಿಧಿ ದೊರೆತಂತೆ ಎಡಹಿ ಐಶ್ವರ್ಯವನ್ನು ಪಡೆದಂತೆ ಬಾಲಕ ದೊರೆತುದು ಅವರ ಸಂತೋಷ ಸಂಭ್ರಮಗಳಿಗೆ ಎಣೆಯಿಲ್ಲದಂತಾಗುತ್ತದೆ. ಅವರ ಸಂತಾನ ಹೀನತೆಯ ಅಳಲನ್ನು ಪರಿಹರಿಸಲೆಂದೇ ನಾರಾಯಣನು ಕಂದನನ್ನು ಕರುಣಿಸಿದನೆಂಬ ಭಾವನೆ ದಂಪತಿಗಳಿಗೆ ಬಲವಾಗುತ್ತದೆ. ಮೇಧಾವತಿಯ ಮಕ್ಕಳಿಲ್ಲದ ಕೊರಗು ದೂರವಾಗಿ ಅವಳ ಬರಿದಾದ ಮಡಿಲು ತುಂಬಿ ಬದುಕಿಗೊಂದು ಅರ್ಥ ಬರುತ್ತದೆ.

ಕಂದರ್ಪ ಕೋಟಿ ಲಾವಣ್ಯದ ತರಳಗೆ
ಚಂದದಾಭರಣವನಿಟ್ಟು
ಚಂದ್ರಹಾಸವೆಂಬೊ ಪೆಸರಿಟ್ಟು ಕರೆದರು ಮು
ಕುಂದನ ಕರುಣದ ಸುತಗೆ

ಕತ್ತಲ ಮನೆಗೆ ದೀವಿಗೆಯನಿತ್ತಂತೆ ದೇ
ವೊತ್ತುಮ ಕವಿಗಳಿಗೆ
ಚಿತ್ರಕ್ಕೆ ಚದುರ ನುಡಿಗಳು ದೊರೆದ ಹಾಗೆ
ಬತ್ತಿದ ಕೆರೆ ತುಂಬಿದಂತೆ.[೧೨]

ಪುಳಿಂದ ಸಂತೋಷದ ಹಿಗ್ಗು ಊರ ಹಿಗ್ಗಾಗುತ್ತದೆ. ಮನೆಯ ಹಬ್ಬ ಊರಿಗೆಲ್ಲಾ ಹಬ್ಬವಾಗುತ್ತದೆ. ''ಚಂದ್ರಹಾಸ'ನೆಂಬ ಹೆಸರಿನಿಂದ ಬಾಲಕ ತಂದೆ ತಾಯಿಯರ ಬತ್ತಿದ ಸಂತಸವನ್ನು ಚಿಮ್ಮಿಸುತ್ತಾನೆ. ಕತ್ತಲೆ ಮನೆಗೆ ದೀಪವಾಗುತ್ತಾನೆ.

ಅಕ್ಷರಾಭ್ಯಾಸವ ಮಾಡಬೇಕೆನುತ ಗಂ
ಧಾಕ್ಷತೆ ಫಲಪುಷ್ಪದಿಂದ
ಸಾಕ್ಷಾತು ಗಣಪತಿಗರ್ಪಿಸಿ ತರಳನ
ಶಿಕ್ಷೆ ಗುರುವಿಗೆ ಒಪ್ಪಿಸಿದ[೧೩]

ಚಂದ್ರಹಾಸನಿಗೆ ಅಕ್ಷರಾಭ್ಯಾಸವನ್ನು ಮಾಡಿಸಬೇಕೆಂದು ಪುಳಿಂದನು ಗಂದಾಕ್ಷತೆ ಫಲಪುಷ್ಪಗಳಿಂದ ಗಣಪತಿಯನ್ನು ಪೂಜಿಸಿ ಬಾಲಕನನ್ನು ಗುರುಗಳಿಗೆ ಒಪ್ಪಿಸಿದರೆ ಹರಿಭಕ್ತಿಯಲ್ಲಿ ಮುಳುಗಿರುವ ಚಂದ್ರಹಾಸನಿಗೆ ಹರಿನಾಮವಲ್ಲದನ್ಯಕ್ಷರವು ಬೇಡವಾಗುತ್ತದೆ. ಹರಿ, ಕೃಷ್ಣ ಎನ್ನೊಡೆಯ ಶರಣೆಯ ಬರೆದ ಬಾಲಕನನ್ನು ಕಂಡು ಗುರುವಿಗೆ ಸಹಿಸಲು ಅಸಾಧ್ಯವಾಗುತ್ತದೆ. ತಂದೆಗೆ ದೂರತ್ತ ಗುರುವಿನ ಮಾತಿಗೆ

ಹಿಂದಕ್ಕೆ ಹಿರಣ್ಯಕಶ್ಯಪ ತನಯ
ಮುಕುಂದನ ಭಜಕನೆಂದೆನದೆ
ಬಂಧಿಸಿ ಬಸುರ ಬಗಿಸಿಕೊಂಡಾತನ ಮನಸು
ಬಂದ ಹಾಂಗಿರಲೆಂದು ಸುತನ್[೧೪]

ಎಂದು ವಿವೇಕದ ಉತ್ತರ ನೀಡುತ್ತಾನೆ. ಪುಳಿಂದನಿಗೆ ತನ್ನ ಮಗನ ಹರಿಭಕ್ತಿ ಅನುಪಮವಾದುದು. ಧ್ರುವ ಪ್ರಹ್ಲಾದ, ಅಕ್ರೂರ, ಅಂಬರೀಷ ಮೊದಲಾದ ವೈಷ್ಣವ ಭಕ್ತರಿಗಿಂತ ಉತ್ತಮನೆಂಬ ದೃಢವಾದ ನಂಬಿಕೆಯಾಗಿತ್ತು.

ಮುಂದೆ ಮುಂಜಿ, ಕ್ಷತ್ರಿಯೋಚಿತವಾದ ವಿದ್ಯಾಭ್ಯಾಸಗಳು ವೇದ ಶಾಸ್ತ್ರಗಳಲ್ಲಿ ಪಾಂಡಿತ್ಯ ಕೃಷ್ಣ ಭಕ್ತಿಯಲ್ಲಿ ತನ್ಮಯತೆ ಇವಿಷ್ಟು ಚಂದ್ರಹಾಸನಿಗೆ ಸಾಧಿಸಲಾಗಿ ತಾನೊಬ್ಬ ವೈಷ್ಣವನಾದರೆ ಸಾಲದೆಂಬಂತೆ ನಾಡಿಗೆ ನಾಡನ್ನೆ ಪರಿವರ್ತಿಸಿ ಬಿಡುತ್ತಾನೆ. ವೈಷ್ಣವ ಕ್ರಾಂತಿಯ ರೂಪದಲ್ಲಿ ತನ್ನೊಬ್ಬನ ಉದ್ಧಾರವಲ್ಲದೆ ಪತಿತರಾದ ಸಮಸ್ತ ಮಾನವರ ಉದ್ಧಾರವಾಗಬೇಕೆಂಬ ಉದ್ದೇಶದಿಂದ ಪ್ರತಿಯೊಬ್ಬ ಪ್ರಜೆಗೂ ತುಲಸೀ

ಮಾಲೆ ಶ್ರೀ ಮುದ್ರಿಕೆ ದ್ವಾದಶನಾಮ ಏಕಾದಶಿ ಉಪವಾಸಗಳ ಶಾಸನ ವಿಧಿಸಲಾಗುತ್ತದೆ. 'ನಾರಾಯಣ' 'ಹರಿ' ಎಂಬ ನಾಮಸ್ಮರಣೆಯಲ್ಲದೆ ಬೇರೆ ಮಾತಿಲ್ಲ ಕತೆಯಿಲ್ಲ. ಶಕ್ತಿ ಜ್ಞಾನ ಪರಾಕ್ರಮಗಳ ತವರಾಗಿದ್ದ ಚಂದ್ರಹಾಸನಿಗೆ ಅಧಿಕಾರವಹಿಸುವ ಸಾಮರ್ಥ್ಯವನ್ನು ಪಡೆದಿರುವನೆಂದು ಪುಳಿಂದನಿಂದ ಅಧಿಕಾರವನ್ನು ಪ್ರಧಾನ ಮಾಡಲಾಗುತ್ತದೆ.

ಜವಾಬ್ದಾರಿ ಹೊತ್ತುದರ ಮೊದಲನೇ ಪರೀಕ್ಷೆಯಂತೆ ಕುಂತಳೇಶ್ವರನಿಗೆ ಕಪ್ಪ ಕಾಣಿಕೆಗಳನ್ನು ಒಪ್ಪಿಸಿ ಬರಬೇಕಾಗುವುದು ದೂತರು ತಂದುದಕ್ಕೆ ಸಂತೋಷವಿಲ್ಲದೆ ತಡ ಮಾಡಿದಕ್ಕೆ ಗದರಿಸಿ ಮಾತನಾಡಿದ ಮಂತ್ರಿಯನ್ನು ಸಮಾಧಾನದಿಂದ ಸಹಿಸುತ್ತಾರೆ. ಚಂದ್ರಹಾಸನ ಕಡೆಯ ದೂತರ ತೀರಾ ಅಸೌಜನ್ಯವಾದೀತೆಂದು ಅತಿಥ್ಯ ಸ್ವೀಕಾರಕ್ಕೆ ಕರೆದಾಗ ಪುಳಿಂದ ಕುಮಾರನ ಅಪ್ಪಣೆಯಂತೆ ಏಕಾದಶಿಯಾದ್ದರಿಂದ ಉಪವಾಸವೆನ್ನಲು ದುಷ್ಟಬುದ್ಧಿಯ ಸ್ವಾಭಿಮಾನಕ್ಕೆ ಧಕ್ಕೆ ಬಂದಂತೆನಿಸಿದರೂ ಅದಕ್ಕಿಂತ ಕುತೂಹಲಕರವಾದ ಎಮ್ಮೊಡೆಯನ ಸುಕುಮಾರ ಎಂಬ ಮಾತು ಆ ಪ್ರಧಾನವೆನಿಸುವಂತೆ ಮಾಡುತ್ತದೆ. ಬಂಜೆಯಾದ ಪುಳಿಂದನ ಮಡದಿಗೆ ಮಗನೆಂಬುದು ವಿಚಿತ್ರ ಸಂಗತಿ ಆಶ್ಚರ್ಯವನ್ನುಂಟು ಮಾಡಿತು. ಅವನ ಕುತೂಹಲಕ್ಕೆ ಚಂದ್ರಹಾಸನು ಅಡವಿಯಲ್ಲಿ ದೊರತ ವಾರ್ತೆ ಅವನನ್ನು ಮುದ್ದಿನಿಂದ ಸಾಕಿ ಬೆಳೆಸಿ, ಅಧಿಕಾರವಹಿಸಿದ ಸುದ್ದಿ ತಿಳಿದಾಗ ಮಂತ್ರಿಗೆ

> ಎಂದ ಮಾತನು ಕೇಳಿ ಎದೆಯೊಳು ಅಲಗು
> ನಟ್ಟಂದದಿ ಮನದೊಳು ಮರುಗಿ
> ಅಂದು ಮಾಡಿದ ಕಾರ್ಯ ಆಗಲಿಲ್ಲವು ಸಿದ್ಧ
> ಎಂದು ತಾ ಮನದೊಳು ತಿಳಿದ
>
> ಮನಜರ ತನದಿಂದತೀನ ದೈವ
> ಅನುಕೂಲವಾದ ಕಾರ್ಯವು
> ನೆನೆದಂತೆ ಅಹುದೆನ್ನುತ ದುಷ್ಟಬುದ್ಧಿಯು
> ಮನದಲಿ ಚಿಂತೆ ಮಾಡಿದನು.[೨೫]

ಎಂದು ಕೊಂಡರೂ ಮರುಗಳಿಗೆಯಲ್ಲಿಯೇ ಮತ್ತೊಮ್ಮೆ ಮನುಷ್ಯ ಪ್ರಯತ್ನದ ಪರೀಕ್ಷೆಗೆ ತೊಡಗುತ್ತಾನೆ. ಕೃಷ್ಣ ಕರುಣೆಯ ರಕ್ಷಣೆಯ ಕವಚವಿರುವ ಚಂದ್ರಹಾಸನ ಸಾವಿನ ವಿಧಾನವನ್ನು ಯೋಚಿಸಿ ರಾಜಕೀಯ ಬುದ್ಧಿಯಿಂದ ಪುಳಿಂದನಲ್ಲಿಗೆ ನಡೆದು ಅವನ ಮನ್ನಣೆ ಸತ್ಕಾರಗಳನ್ನು ಗೆಲು ಮೊಗದಿಂದಲೇ ಸ್ವೀಕರಿಸಿ ದುಷ್ಟಬುದ್ಧಿಯು ಕಪಟತನವನ್ನು ಮನದೊಳಿಟ್ಟುಕೊಂಡು ಮೇಲ್ನೋಟಕ್ಕೆ ಕೃತ್ರಿಮ ನಗೆ ತೋರಿಸಿದನು ಚಂದ್ರಹಾಸನನ್ನು ಕೊಲ್ಲುವ ಉಪಾಯವನ್ನು ಯೋಚಿಸಿ ಕಾರ್ಯಭಾರವನ್ನು ಒಪ್ಪಿಸುತ್ತಾನೆ. ದುಷ್ಟುಬುದ್ಧಿಯು ಚಂದ್ರಹಾಸನಿಗೆ ಕುಂತಳಪುರಕ್ಕೆ ಹೋಗಿ ಏಕಂತದಲ್ಲಿ ತನ್ನ ಮಗನಾದ ಮದನನಿಗೆ ಪತ್ರವೊಂದನ್ನು ಕೊಡೆಂದು ಒಪ್ಪಿಸುತ್ತಾನೆ.

ವಿನಯ ವಿಧೇಯ ಸಂಪನ್ನನಾದ ಚಂದ್ರಹಾಸನಿಗೆ ಗುರುಹಿರಿಯರ ಹರಕೆ ಹರಿಯ ರಕ್ಷಣೆ ಇರುವಾಗ ಪ್ರಯಾಣದ ಮೊದಲ ಹಂತದಲ್ಲೇ ಶುಭ ಶಕುನಗಳಾಗಿ ತುಂಬಿದ ಕೊಡಗಳು, ವೇದ ಪಾಠಕರಿಬ್ಬರು, ಮುತ್ತೈದೆಯರು, ಹಣ್ಣು, ಗಂಧ, ಪುಷ್ಪ, ಮದುವಣಿಗರು ಮುಂತಾದವುಗಳು ಎದುರಿಗೆ ಬಂದವು.

ಚಂದ್ರಹಾಸನು ಸೇವಕರೊಡನೆ ಕುಂತಳಪುರಕ್ಕೆ ಹೊರಟನು ಮಾರ್ಗ ಪರಿಶ್ರಮ ಪರಿಹಾರಕ್ಕಾಗಿ ನಿಲ್ಲುವನು ಫಲಪುಷ್ಪ, ಸಮೃದ್ಧ ವೃಕ್ಷಗಳ ದಟ್ಟ ನೆರಳಿನ ತಂಪಿಗೆ ಮನಸೋತು ಉಪವನವನ್ನು ಪ್ರವೇಶಿಸುತ್ತಾನೆ. ವಿಧಿ ವಿಲಾಸವೋ ಹರಿಯ ಕೈವಾಡವೋ ಎಂಬಂತೆ ಅದು ಕುಂತಳಪುರದ ಅರಸನ ರಾಜ್ಯೋಧ್ಯಾನವಾಗಿರುತ್ತದೆ. ಅಲ್ಲಿಯೂ ಮೈಮರೆತು ಮಲಗದೆ ಕೆಂದಾವರೆಯ ಕೊಳ ಕಂಡಾಗ ಅವನಿಗೆ ಮೊದಲು ಹರಿ ಪೂಜೆ, ಸ್ನಾನ, ಜಪ, ತಪ, ಪೂಜೆ, ಪ್ರಸಾದ ಸ್ವೀಕಾರದ ನಂತರವೇ ಚಿಗುರ ಹಾಸಿನ ಮೇಲೆ ಮರದಡಿಯಲ್ಲಿ 'ತೋಳ್ಗಳ ತಲೆಗಿಂಬಲಿಟ್ಟು'ಕೊಂಡು ಮಲಗಿದನು.

ಅದೇ ಸಮಯದಲ್ಲಿ ಕುಂತಳೇಶನ ಮಗಳು ಚಂಪಕ ಮಾಲಿನಿ ಮತ್ತು ವಿಷಯೆ ಸಖಿಯರೊಡನೆ ಆ ಉಪವನಕ್ಕೆ ಜಲಕ್ರೀಡೆಗೆ ಬರುವರು ಸಖಿಯರ ಗುಂಪಿನಿಂದ ದೂರ ಸರಿದ ವಿಷಯೆ ಚಂದ್ರಹಾಸನನ್ನು ನೋಡುವಳು. ಸಖಿಯರೊಡಗೂಡಿ ವನ ವಿಹಾರಕ್ಕೆಂದು ಹೊರಟು ಬಂದ ಗಾಡಿಕಾರ್ತಿಯರು ನೀರಾಟಕ್ಕಿಳಿದಾಗ ಪೊಳಕುವ ಮೀನುಗಳ ಕೆಂದಾವರೆಗಳೇ ಬೆರಗಾಗಿ ನೋಡಿದುವಂತೆ.

ತರುಣಿಯರುಟ್ಟ ತಂಗಲ ವಸ್ತ್ರಮೈಯೊಳು
ಒರೆದು ದಿವ್ಯಾಂಗ ತೋರುತಲಿ
ಗುರುಕುಚದ ಬಾಲೆಯರು ನಿಂತರು ಕಾಮನ
ಹೆರೆಯ ಕೂರಂಬಿನಂದದಲಿ[೧೬]

ಶೃಂಗಾರದಿಂದ ಇಮ್ಮಡಿಸಿದ ತಮ್ಮ ಸೌಂದರ್ಯಕ್ಕೆ ತಾವೇ ಮುಗ್ಧರಾಗಿ ತಮ್ಮ ಸುಂದರವಾದ ಸುಮಧುರ ಹಿತಕರ ವಾತಾವರಣ ಪ್ರಕೃತಿಯ ಸೌಂದರ್ಯದ ಮಡಿಲಲ್ಲಿ ಸ್ವೇಚ್ಛೆಯಾಗಿ ಮನಬಂದಂತೆ ವಿಹರಿಸುತ್ತಿದ್ದ ಸಖಿಯರಿಗೆ ತಮನಾಗಿ ಹೂ ತಳೆದು ನಿಂತಂತೆ ಕಂಡುಬಂದವು ತಮ ತಮಗೆಂದಾ ಮನ ಬಂದ ಫಲ, ಪುಷ್ಪಗಳನ್ನು ಕೊಯ್ದುಕೊಂಡರು.

ಸಖಿಯರಿಂದ ಹಿಂದುಳಿದ ಮಂತ್ರಿ ಮಗಳು ವಿಷಯೆ ವೃಕ್ಷದ ಕೆಳಗೆ ಮಲಗಿದ್ದ ಪುರುಷನನ್ನು ಕಂಡು ಬೆರಗಾಗಿ ನಿಂತಳು. ಲೋಕಾತೀತವಾದ ಚಂದ್ರಹಾಸನ ಚೆಲುವನ್ನು ಕಂಡು ಮೂರ್ಛಿತಳಾದಳು. ಆದರೆ ಪ್ರಕೃತಿಯ ಗಾಳಿ ಬೀಸಿ ಮೂರ್ಛೆಯಿಂದ ಎಚ್ಚರಗೊಂಡು ಇವನು ಭೂಮಿಯಲ್ಲಿ ಮನುಷ್ಯ ಮಾತ್ರನಾಗಿರುವನೆಂಬುದಕ್ಕೆ ನಂಬಿಕೆಯಿಲ್ಲ.

ಶಿವ, ವಿಷ್ಣು, ಇಂದ್ರ, ಚಂದ್ರ, ಸೂರ್ಯ, ಇವರು ಯಾರಾದರೂ ಆಗಿರಬಹುದೇ ಎಂಬ ಯೋಚನೆ ಬಂದಾಗ ಲಾಂಛನಗಳಿಗಾಗಿ ಹುಡುಕಿ ಸೋಲುತ್ತಾಳೆ. ಮನ್ಮಥ-ಯಕ್ಷ ಗಂಧರ್ವ ಯಾರೂ ಅಲ್ಲವೆನ್ನುವುದು ವಿಸ್ಮಯವಾಗುತ್ತದೆ. ಅನುಪಮ ರೂಪ ಲಾವಣ್ಯ ಹೊಂದಿರುವ ಆ ಪುರುಷನ ಸ್ಪರ್ಶಕ್ಕೆ ಮನ ಕಾತರಿಸಿದರು ಭಯದಿಂದ ಹಿಂಜರಿಯುತ್ತಾಳೆ. ಆದರೂ ಕ್ಷಣ ಮಾತ್ರ ಹತ್ತಿರ ನಿಂತಾಗ ಚೊಗೆಯ(ಕವಚ) ಕುಪ್ಪಸದ ಕೊನೆಯಲ್ಲಿ ಕಟ್ಟಿದ ಪತ್ರಿಕೆಯನ್ನು ತೆಗೆದು ಓದುವ ಸಾಹಸ ಮಾಡುತ್ತಾಳೆ. ಪತ್ರದ ಬರವಣಿಗೆ ತನಗನುಕೂಲಕರವಾದ ವಿಷವನ್ನು ಕೊಡುವುದು ಒಳ್ಳೆಯದು ಎಂಬ ತಂದೆಯ ಮಾತು ಅವಳ ಹೃದಯವನ್ನರಳಿಸುತ್ತದೆ. ತಂದೆಯ ಕೈ ತಪ್ಪೆಂದು ಭಾವಿಸಿ 'ವಿಷಯೆ' ಎಂದು 'ವ'ಕಾರವನ್ನು 'ಯೆ'ಕಾರವನ್ನಾಗಿ ತನ್ನ ಕಿರುಬೆರಳಿನ ಉಗುರಿನಿಂದ ತಿದ್ದುತ್ತಾಳೆ. ಚಂದ್ರಹಾಸನಿಗೆ ಮನಸೋತ ವಿಷಯೆ ವಿರಹ ಪೀಡಿತೆಯಾದಳು. ನಿದ್ರೆಯಿಂದ ಎಚ್ಚೆತ್ತ ಚಂದ್ರಹಾಸನು ಕುಂತಳ ಪುರಕ್ಕೆ ಬಂದು, ದ್ವಾರಪಾಲಕರಿಂದ ಚಂದ್ರಹಾಸನು ಬಂದ ವಿಷಯ ತಿಳಿದು ಸಿಂಹಾಸನದಿಂದಿಳಿದು ಚಂದ್ರಹಾಸನನ್ನು ಸ್ವಾಗತಿಸಿ ಕೈಹಿಡಿದು ಸಭೆಗೆ ಕರೆ ತಂದ ಮೇಲೆ ಆ ರಹಸ್ಯ ಪತ್ರವನ್ನು ಮಗ ಮದದನಿಗೆ ಮುಟ್ಟಿಸುವನು. ಪತ್ರವನ್ನು ಓದಿದ ಮದನನು ರಹಸ್ಯ ಪತ್ರದ ಆಶೆಯವನ್ನರಿತು ತಿದ್ದಿರುವುದನ್ನರಿಯದೆ ತಂಗಿಗೆ ತಕ್ಕ ವರನೀತನೆಂದು ತಿಳಿದನು ತಂದೆಯಪ್ಪಣೆಯೆಂದೇ ಭಾವಿಸಿ ವೈಭವದಿಂದ ಮದನನು. ತನ್ನ ತಂಗಿಯ ಮದುವೆಯನ್ನು ಮಾಡಿಸುತ್ತಾನೆ.

ಚಂದನಾವತಿಯಲ್ಲಿ ದುಷ್ಟಬುದ್ಧಿಯು ಪುಳಿಂದನನ್ನು ಸೆರೆಮನೆಯಲ್ಲಿಟ್ಟು ಕುಂತಳಪುರಕ್ಕೆ ಬಂದನು. ತನ್ನ ಕೃತಿಗೆ ತಾನೇ ಸಂತಸ ಪಡುತ್ತಾ ಒಮ್ಮೆ ವಂಚಿಸಿದ ವಿಧಿಯನ್ನು ತಾನೀಗ ಸರಿಯಾದ ರೀತಿಯಲ್ಲಿ ವಂಚಿಸಿದೆನೆಂದು ಗರ್ವದಿಂದ ಬಂದ ದುಷ್ಟಬುದ್ಧಿಗೆ ಗೋಚರಿಸಿದ್ದು ಹಬ್ಬದುಲ್ಲಾಸದ ಪರಿಸರ ನಿರ್ಮಾಣದಿಂದ ತಂಗಿಯ ಮದುವೆಯನ್ನು ಅದ್ದೂರಿಯಿಂದ ಮಾಡಿದ್ದೇ ಅಲ್ಲದೆ, ಮುಕ್ತ ಕೈಗಳಿಂದ ಬಯಸಿದಷ್ಟು ದಾನ ಧರ್ಮಗಳನ್ನು ಮಾಡಿ ಪ್ರಜೆಗಳನ್ನು ಸಂತೋಷಪಡಿಸಿದನು. ಪರಿಸ್ಥಿತಿಯ ವೈಪರೀತ್ಯದ ಅರಿವಾದಾಗ ತನ್ನ ಉದ್ದೇಶಗಳು ಈಡೇರದೆ ತಲೆ ಕೆಳಗಾದಾಗ ಮಗ, ಮಗಳು ಎನ್ನುವ ಕರುಳ ಸಂಬಂಧವನ್ನು ಮರೆತು ತಂದೆಯ ಮೆಚ್ಚುಗೆಯನ್ನು ಪಡೆಯಬೇಕೆಂದು ನಿರೀಕ್ಷಿಸಿ ಬಂದ ಮದನನಿಗೆ ತಂದೆಯು ತಿರಸ್ಕಾರದಿಂದ ನುಡಿಯುತ್ತಾನೆ.

ಪೊಡವಿಗೆ ಅಧಿಪತಿಯ ಮಾಡೇನೆನುತಿರ್ದೆ
ಜಡಮತಿ ನಿನಗೆ ದೊರಕುವದೆ
ಕೆಡಸಿದೆ ಕಾರ್ಯವ ಕುಲಗೇಡಿ ನಿನಗೆ
ಅಡಲು ಅರಣ್ಯವೆ ಗತಿಯು[೧೭]

ಆದರೆ ಇದರಿಂದ ಮದನನ ಮನಸ್ಸು ಅಳುಕಲಿಲ್ಲ, ಅಂಜಲಿಲ್ಲ ರಾಮ ತಂದೆಯಾಜ್ಞೆಯಿಂದ ಅರಣ್ಯಕ್ಕೆ ಹೋದರೆ ತಂಗಿಗೆ ಮದುವೆ ಮಾಡಿ ಅರಣ್ಯಕ್ಕೆ ಹೋಗುವೆನೆಂದು ಸಮಾಧಾನದಿಂದಲೇ

ನುಡಿಯುತ್ತಾನೆ. ಬಂದೆರಗಿದ ನವ ದಂಪತಿಗಲನ್ನು ಕಡೆಗಣಿಸಿ ಕಾಣುವುದಲ್ಲದೆ ಮಗಳು ವಿಧವೆಯಾದರೂ ಚಿಂತೆಯಿಲ್ಲವೆಂದು ಚಂದ್ರಹಾಸನನ್ನು ಕೊಲ್ಲಬೇಕೆಂದು ಯೋಚಿಸಿ ಸಂಚು ಮಾಡಿ ಕಟುಕರನ್ನು ಯೋಜಿಸುತ್ತಾನೆ.

ಮೂರನೆಯ ಬಾರಿ ಸವಾಲಿನಂತೆ ತನ್ನ ಪ್ರಯತ್ನಕ್ಕೆ ಕೈ ಹಾಕುತ್ತಾನೆ. ಮನಸ್ಸಿನಲ್ಲಿ ದುಷ್ಟ ಭಾವನೆಗಳನ್ನು ಅಡಗಿಸಿಕೊಂಡು ಕೃತಕ ನಗೆಯನ್ನು ತೋರಿ ಚಂದ್ರಹಾಸನನ್ನು ಕರೆದು ಒಂಟಿಯಾಗಿ ಮಾರಿಯ ಗುಡಿಗೆ ಮದುವೆಯ ನಾಲ್ಕನೆಯ ದಿನದಂದು ಹೋಗಿ ಪೂಜೆ ಸಲ್ಲಿಸಿ ಬರಬೇಕೆಂದು ಹೇಳುತ್ತಾನೆ. ಯಾವುದಕ್ಕೂ ಪ್ರತಿವಾದಿಸದೆ ಚಂದ್ರಹಾಸ ಮಾವನ ಅಪ್ಪಣೆಯನ್ನು ಮನ್ನಿಸಿ ನಡೆದರೆ, ನಂಬಿದ ಹರಿ ಮದನನ ರೂಪದಲ್ಲಿ ಬಂದನೆಂಬಂತೆ ಮದನನೇ ಎದುರಾಗಿ ಬಂದು ಚಂದ್ರಹಾಸನಿಗೆ ರಾಜನ ಕರೆಯನ್ನು ಮನ್ನಿಸಲು ಹೋಗೆನ್ನುತ್ತಾನೆ.

ಕುಂತಳಾಪುರದರಸು ತಲೆಯಿಲ್ಲದೆ ತನ್ನ ಬಿಂಬವನ್ನು ಕನ್ನಡಿಯಲ್ಲಿ ನೋಡಿ ಮುಂದೆ ಬರುವ ಸಾವಿನ ಸೂಚನೆಯಾಗಿ ಮಗಳನ್ನು ಮಂತ್ರಿಯ ಅಳಿಯನಾದ ಚಂದ್ರಹಾಸನಿಗೇ ಕೊಟ್ಟು ವಿವಾಹ ಮಾಡಿ ನಿಶ್ಚಿಂತವಾಗಿ ವನಕ್ಕೆ ತೆರಳಲು ಆಲೋಚಿಸುತ್ತಾನೆ.

ಕುಂತಳೇಶ ಚಂದ್ರಹಾಸನಿಗೆ ರಾಜ್ಯವಿತ್ತು ಪಟ್ಟಕಟ್ಟಿ ಗಾಂಧರ್ವ ವಿವಾಹದಿಂದ ಮಗಳಾದ ಚಂಪಕಮಾಲಿನಿಯನ್ನಿತ್ತು ಮದುವೆ ಮಾಡಿ ವನಕ್ಕೆ ತೆರಳಿದನು. ಚಂದ್ರಹಾಸನಿಗೆ ಆ ದೇಶದ ದೊರೆತನ ಹಾಗೂ ದೊರೆಯ ಮಗಳ ಸಾಂಗತ್ಯ ಎರಡೂ ಒಟ್ಟಿಗೆ ಲಭಿಸುತ್ತದೆ. ಮಾವನ ನೆನಪಾಗಿ ಆಶೀರ್ವಚನ ಪಡೆಯಲು ಬಂದವನನ್ನು ಕ್ರೂರವಾಗಿ 'ಯಾವ ಕಾರ್ಯವ ಮಾಡು' ಎಂದರೆ ಮತ್ತೆ ನೀನಾವ ಕಾರ್ಯವ ಮಾಡಿದೆ? ಎಂದು ನಿಷ್ಠುರವಾಗಿ ಪ್ರಶ್ನಿಸಲು ತನ್ನ ಬದಲಾಗಿ ಹೋದ ಮದನನ ಸಂಗತಿಯನ್ನು ಹೇಳುತ್ತಾನೆ. ಕ್ಷಣ ಮಾತ್ರದಲ್ಲಿ ಭಯಂಕರ ಪರಿಣಾಮದ ಕಲ್ಪನೆಯಿಂದ ಗಡ ಗಡ ನಡುಗಿ ಜರ್ಝರಿತನಾಗುತ್ತಾನೆ. ಮಗನ ಮೇಲಿನ ಮೋಹತಿರೇಕದಿಂದ ಹುಚ್ಚನಂತೆ ಧಾವಿಸಿ ಕೊಳ್ಳಿದೆವ್ವಗಳ (ಉರಿಯುವ ಕಟ್ಟಿಗೆ, ಕೊಳ್ಳಿ ಹಿಡಿದು ಓಡಾಡುವ ಹಾಗೆ ಕಾಣುವ ಪಿಶಾಚಿ) ಭೀತಿಯನ್ನು ಮೀರಿ ಕಾಳಿಕಾದೇವಿಯ ಗುಡಿಯನ್ನು ಪ್ರವೇಶಿಸಿದಾಗ ಎದೆಯೊಡೆಯುತ್ತದೆ. ಈ ಒಂದೇ ಒಂದು ಘಟನೆ ಅವನನ್ನು ಪಶ್ಚಾತ್ತಾಪದ ಬೆಂಕಿಯಿಂದ ದಹಿಸುತ್ತದೆ. ಜೀವನದಲ್ಲಿ ಬಹುಶಃ ಮೊದಲ ಬಾರಿಗೆ ತಾನು ಮಾಡಿದ ದ್ರೋಹಗಳ ಬಗ್ಗೆ ಪರಿತಪಿಸುತ್ತಾನೆ. ಹೀಗೆ ದುಷ್ಟಬುದ್ಧಿಯ ವಿಲಾಪ ಮನಕರಗಿಸುವಂತೆ ಚಿತ್ರಿತವಾಗಿದೆ.

ನಿದ್ರೆಗೈದೆಯದುಚಿತವೆ ಎನ್ನಯ್ಯ
ಎದ್ದು ಬಾರಯ್ಯ ಎಂದು ಬಿದ್ದ

ನೆನೆಯ ಬೇಡೆನ್ನ ನಿಷ್ಠುರ ವಾಕ್ಯದ ಕಂದ
ಕನಸೆಂದು ಭಾವಿಸು ಮಗನೇ

ಎಂದು ದುಷ್ಟಬುದ್ಧಿಯು ಮಗನಿಗೆ ನಿನ್ನ ಮನಸ್ಸಿನ ಇಚ್ಛೆಯಂತೆ ತಂಗಿಯ ಮದುವೆಯ ಮಾಡು ಎಂದು ಆರ್ತವಾಗಿ ಅವನಲ್ಲಿ ಮೊರೆಯಿಡುತ್ತಾನೆ. ನಿಷ್ಕಲ್ಮಶ ಪ್ರೀತಿ, ವಾತ್ಸಲ್ಯದ ಅತಿರೇಕದಲ್ಲಿ ಮದನನು ಸತ್ತಿರುವನೆಂಬ ಪ್ರಜ್ಞೆ ಕುಂದುತ್ತದೆ. ಹಲವು ವಿಧದಲ್ಲಿ ಹಂಬಲಿಸಿದರೂ ಪ್ರಯೋಜನವಿಲ್ಲವೆಂದು ಕಂಭಕ್ಕೆ ತಲೆ ಹಾಯ್ದು ಸಾಯುತ್ತಾನೆ.

ಚಂದ್ರಹಾಸನಿಗೆ ಅರ್ಚಕನಿಂದ ಭಯಂಕರ ಸುದ್ಧಿ ತಿಳಿದು ಕಾಲ್ನಡಿಗೆಯಲ್ಲಿ ದೇವಾಲಯಕ್ಕೆ ಬರುತ್ತಾನೆ. ತುಂಡಾಗಿ ಬಿದ್ದ ಮಾವ ಭಾವಂದಿರನ್ನು ಕಂಡ ಚಂದ್ರಹಾಸನಿಗೆ ತನ್ನ ಹರಿಭಕ್ತಿಯ ಅಗ್ನಿ ಪರೀಕ್ಷೆಯಾಗುತ್ತದೆ. ತನಗೆ ಅಪಕೀರ್ತಿ ಬಂದ ಕಾರಣ ತನ್ನ ಪ್ರಾಣವನ್ನು ದೇವಿಗೊಪ್ಪಿಸುವ ಶಪಥ ಮಾಡುತ್ತಾನೆ. ಹೋಮ ಕುಂಡವನ್ನೇರ್ಪಡಿಸಿ ಅಗ್ನಿಗೆ ದೇಹದ ಮಾಂಸವನ್ನು ಕತ್ತರಿಸಿ ತುಂಡು ಮಾಡಿ ಅರ್ಪಿಸಿ ದೀಪಾರತಿಗೆ ತನ್ನನ್ನೇ ಉರಿಸಿಕೊಂಡು ಪೂರ್ಣಾಹುತಿಗೆ ತಲೆಕೊಡಲು ಸಿದ್ಧನಾಗುತ್ತಾನೆ. ಅವನು ಪರೀಕ್ಷೆಯಲ್ಲಿ ಸಫಲವಾಗುತ್ತಾನೆ. ನಂಬಿದ ಹರಿಯ ರಕ್ಷಣೆಯ ಭದ್ರವಾದ ಕವಚವಿರುವ ಚಂದ್ರಹಾಸನಿಗೆ ಶಾಂಭವಿಯು ಚಂದ್ರಹಾಸನ ನಿಷ್ಠೆ, ಧೈರ್ಯ, ಶಪಥ, ಭಕ್ತಿಗೆ ಮೆಚ್ಚಿ ದೇವಿ ನೀಡಿದ ಎರಡು ವರಗಳಿಂದ ಒಂದು ತನಗೆ ಜನ್ಮ ಜನ್ಮಾಂತರಗಳಲ್ಲಿ ಹರಿಭಕ್ತಿ ದೊರಕಿಕೊಳ್ಳಲೆಂದೂ ಮತ್ತು ಮಡಿದ ಮಂತ್ರಿ ಅವನ ಮಗನ ಪ್ರಾಣ ಪಡೆಯಲೆಂದು ಪ್ರಾರ್ಥಿಸುವನು. ಅವನ ಪ್ರಾರ್ಥನೆಯನ್ನು ಮನ್ನಿಸಿದ ದೇವಿ ಭಕ್ತಿಗೆ ಮೆಚ್ಚಿ ಸತ್ತವರನ್ನು ಬದುಕಿಸುತ್ತಾಳೆ. ವೈಷ್ಣವ ಶಕ್ತಿಯಾಯುಧವನ್ನು ಕೊಟ್ಟು ಹರಿಸಿದಳು.

ಕಾವ ಕೊಲ್ಲುವ ಶ್ರೀ ಹರಿಯಲ್ಲದೆ
ಭೂವಳಯದೊಳು ಬೇರುಂಟೆ

ಈ ಲೋಕದಲ್ಲಿ ರಕ್ಷಿಸುವವನೂ ಶಿಕ್ಷಿಸುವವನೂ ಶ್ರೀಹರಿಯಲ್ಲದೆ ಬೇರೆ ಉಂಟೆ ಎನ್ನುವ ಸತ್ಯವನ್ನು ಚಂದ್ರಹಾಸನ ಬಾಯಿಂದ ನುಡಿಸುತ್ತಾಳೆ. ಬಳಿಕ ಚಂದ್ರಹಾಸ ದುಷ್ಟಬುದ್ಧಿ ಮದನರು ಪುರಕ್ಕೆ ಹಿಂತಿರುಗಿ ಬಂದರು ಚಂದ್ರಹಾಸನಿಗೆ ರಾಜ್ಯ ದೊರೆಯಿತು. ಚಂದ್ರಹಾಸನು ಮುನ್ನೂರು ವರ್ಷಗಳು ರಾಜ್ಯವಾಳಿದನು ಈ ಮಧ್ಯ ವಿಷಯೆಯಲ್ಲಿ ಪದ್ಮಾಕ್ಷನು ಕಿರಿಯ ಹೆಂಡತಿ ಚಂಪಕ ಮಾಲಿನಿಗೆ ಮಕರ ಧ್ವಜನು ಜನಿಸಿದರು. ಸಾಲಿಗ್ರಾಮ ಶಿಲೆಯನ್ನು ಭಕ್ತಿ ಭಾವದಿಂದ ಪೂಜಿಸುವರೋ ಅವರಿಗೆ ದೇವರು ಮುಕ್ತಿಯನ್ನು ಕರುಣಿಸುತ್ತಾನೆ ಎಂದು ಕಥೆ ಸುಖಾಂತವಾಗುತ್ತದೆ.

ಚಂದ್ರಹಾಸನ ಬಾಲ್ಯಜೀವನದ ಚಿತ್ರಣ ವಿಶಿಷ್ಟತರವಾಗಿದ್ದು ವೈವಿಧ್ಯಮಯದಿಂದ ಕೂಡಿದೆ. ಅವನು ಮೂಲ ನಕ್ಷತ್ರದಲ್ಲಿ ಹುಟ್ಟಿ ತಂದೆ ತಾಯಿಗಳನ್ನು ಕಳೆದುಕೊಂಡ ನತದೃಷ್ಟ ಶಿಶು. ಆದರೂ ದಾಸಿಯ ಆರೈಕೆಯಲ್ಲಿ ಬೆಳೆಯುತ್ತಿರುವಾಗ ದಾಸಿಯು ಸಾವನ್ನಪ್ಪುವ ಪುರ ಪುಟ್ಟನಾದ ಇಲ್ಲಿ

ಸರ್ವಸ್ವವನ್ನು ಕಳೆದುಕೊಂಡು ನಿರ್ಗತಿಕ ಶಿಶುವನ್ನು 'ಅನಾಥೋ ದೈವ ರಕ್ಷಿತಃ' ಎಂಬಂತೆ ಚೆಲುವಾದ ಶಿಶುವನ್ನು ಆ ನಗರದ ಸ್ತ್ರೀಯರು ಆರೈಕೆ ಮಾಡಿ ಪ್ರೀತಿಯಿಂದ ಪೋಷಿಸುತ್ತಾರೆ. ಆ ಶಿಶುವು ಹೊಸ ಜೀವನವನ್ನು ಪಡೆದು ಪುಣ್ಯವಶದಿಂದ ಸಾಲಿಗ್ರಾಮ ಶಿಲೆಯು ಆ ಮಗುವಿಗೆ ಮುಂದಿನ ಗಂಡಾಂತರಗಳಿಂದ ಪಾರು ಮಾಡುವ ದೈವಶಕ್ತಿಯಾಗಿ ಪರಿಣಮಿಸುವುದು ಚಂದ್ರಹಾಸನ ಜೀವನಕ್ಕೆ ಹೊಸ ತಿರುವನ್ನು ನೀಡುತ್ತದೆ. ರಾಜಕುಮಾರನಾಗಿ ಹುಟ್ಟಿ ನಿರ್ಗತಿಕನಾದ ಶಿಶುವು ಬಲಿಯಾಗಿ ಹೋಗಬಹುದೆಂಬ ವಿಚಾರದ ಸಂದರ್ಭದಲ್ಲಿ, ಸಾಲಿಗ್ರಾಮ ಶಿಲೆಯಿಂದ ಇಡೀ ಕಲ್ಪನೆಯೇ ಬದಲಾಗಿ ಕಥೆಗೆ ಹೊಸ ಚೈತನ್ಯ ಹಾಗೂ ಉತ್ಸಾಹವನ್ನು ನೀಡಿದಂತಾಗುತ್ತದೆ. ದುಷ್ಟಬುದ್ಧಿಯ ಕುತಂತ್ರಕ್ಕೆ ಸಿಲುಕಿ ಕಟುಕದ ಖಡ್ಗಕ್ಕೆ ಬಲಿಯಾಗುತ್ತಿದ್ದ ಶಿಶುವು ಸಾಲಿಗ್ರಮ ಶಿಲೆಯ ಮಹಿಮೆಯಿಂದ ಹರಿ ನಾಮಸ್ಮರಣೆ ಮಾಡಿ ಬದುಕುಳಿದಾಗ ಆ ಶಿಶುವಿನ ಜೀವನದ ಮೊದಲನೆಯ ಗಂಡಾಂತರದಿಂದ ತಪ್ಪಿದಂತಾಗುತ್ತದೆ. ಮಾತ್ರವಲ್ಲದೆ ತಂದೆ ತಾಯಿಗಳನ್ನು ಪಡೆಯುತ್ತದೆ.

ಬೇಟೆಗೆಂದು ಬಂದಿದ್ದ ಪುಳಿಂದನು ಆ ಶಿಶುವನ್ನು ತನ್ನ ದತ್ತಕ ಮಗನನ್ನಾಗಿ ಸ್ವೀಕರಿಸುತ್ತಾನೆ. ಚಂದ್ರಹಾಸನೆಂದು ಹೆಸರಿಟ್ಟು ಶಿಕ್ಷಣಕೊಟ್ಟು ಬೆಳೆಸಿ ತನ್ನ ನಗರಕ್ಕೆ ಅಧಿಪತಿಯನ್ನಾಗಿ ನೇಮಿಸುತ್ತಾನೆ. ಕಪ್ಪಕಾಣಿಕೆಗಳನ್ನು ಒಪ್ಪಿಸಬೇಕೆಂದು ಬಂದ ದೂತರಿಂದ ಚಂದ್ರಹಾಸನು ಬದುಕುಳಿದ ವೃತ್ತಾಂತವು ದುಷ್ಟಬುದ್ಧಿಗೆ ತಿಳಿಯಲು ಆತನು ಚಂದ್ರಹಾಸನಲ್ಲಿಗೆ ಬಂದು ಆತನ ಕೈಯಲ್ಲಿ ತನ್ನ ಮಗನಿಗೆ ಪತ್ರವೊಂದನ್ನು ಬರೆದುಕೊಡುವನು. ಅದರಲ್ಲಿ 'ವಿಷವ' ಕೊಡುವುದು ಎಂದು ಬರೆದರೂ ವಿಧಿಕೃತವನ್ನು ಮೀರುವವರುಂಟೆ ಎಂಬಂತೆ ವರ್ಣಪಲ್ಲಟ ದೋಷವೆಂದು 'ವಿಷವ'ವನ್ನು 'ವಿಷಯೆ' ಎಂದು ತಿದ್ದಲ್ಪಟ್ಟು ವಿಷದ ಬದಲಿಗೆ ವಿಷಯೆಯನ್ನು ವರಿಸಿದಲ್ಲಿ ಚಂದ್ರಹಾಸನು ಎರಡನೆ ಬಾರಿಗೆ ಮೃತ್ಯುವಿನಿಂದ ಪಾರಾದನು ಮತ್ತು ವಿಷಯೆಯನ್ನು ವಧುವನ್ನಾಗಿ ವರಿಸಿದನು.

ಮಗಳು ವಿಧವೆಯಾದರೂ ಚಿಂತೆಯಿಲ್ಲ. ಚಂದ್ರಹಾಸನನ್ನು ಕೊಲ್ಲಬೇಕೆಂದು ಚಂಡಾಲತನದ ದುಷ್ಟಬುದ್ಧಿಯು ಕಾಳಿಕಾಲಯಕ್ಕೆ ಚಂದ್ರಹಾಸನನ್ನು ಕಳುಹಿಸಿ ಕೊಲೆಗೈವ ಪ್ರಯತ್ನ ಮಾಡಿದ. ಆದರೆ ಮದನನು ಚಂದ್ರಹಾಸನನ್ನು ಕುಂತಳೇಂದ್ರನಲ್ಲಿಗೆ ಕಳುಹಿಸಿ ತಾನೇ ಕೊಲೆಗಡುಕರ ಖಡ್ಗಕ್ಕೆ ಬಲಿಯಾದಾಗ ಚಂದ್ರಹಾಸನು ಜೀವದಿಂದುಳಿದನು ಅಲ್ಲದೆ ಕುಂತಳ ಪುರ ರಾಜ್ಯವನ್ನು ರಾಜ ಕುಮಾರಿಯನ್ನು ಪಡೆದು ಅರಸನಾದನು.

ಹೀಗೆ, ಚಂದ್ರಹಾಸನು ಗಂಡಾಂತರಗಳಿಂದ ಪಾರಾದುದು ಮಾತ್ರವಲ್ಲ ಪ್ರತಿ ಸಲವೂ ಉನ್ನತಿಯನ್ನೇ ಪಡೆದದ್ದು ಮಹತ್ವದ ಸಂಗತಿಯಾಗಿದೆ. ನಿರ್ಗತಿಕನಾಗಿದ್ದ ಶಿಶುವು ತನ್ನ ಮೊದಲನೆಯ ಗಂಡಾಂತರದಿಂದ ಪಾರಾಗಿ ತಂದೆ ತಾಯಿಯನ್ನು ಪಡೆದು ಗತಿಯನ್ನು ವಾತ್ಸಲ್ಯ ಮಮತೆಯನ್ನು ಪಡೆದು ಉತ್ತಮ ವ್ಯಕ್ತಿತ್ವ ಪಡೆಯುವಲ್ಲಿ ಯಶಸ್ವಿಯಾದ. ಎರಡನೆಯ ಗಂಡಾಂತರದಿಂದ ಪಾರಾಗಿ ತನ್ನ ಜೀವನ ಸಂಗಾತಿಯನ್ನು

ಸರ್ವಸ್ವವನ್ನು ಕಳೆದುಕೊಂಡು ನಿರ್ಗತಿಕ ಶಿಶುವನ್ನು 'ಅನಾಥೋ ದೈವ ರಕ್ಷಿತಃ' ಎಂಬಂತೆ ಚೆಲುವಾದ ಶಿಶುವನ್ನು ಆ ನಗರದ ಸ್ತ್ರೀಯರು ಆರೈಕೆ ಮಾಡಿ ಪ್ರೀತಿಯಿಂದ ಪೋಷಿಸುತ್ತಾರೆ. ಆ ಶಿಶುವು ಹೊಸ ಜೀವನವನ್ನು ಪಡೆದು ಪುಣ್ಯವಶದಿಂದ ಸಾಲಿಗ್ರಾಮ ಶಿಲೆಯು ಆ ಮಗುವಿಗೆ ಮುಂದಿನ ಗಂಡಾಂತರಗಳಿಂದ ಪಾರು ಮಾಡುವ ದೈವಶಕ್ತಿಯಾಗಿ ಪರಿಣಮಿಸುವುದು ಚಂದ್ರಹಾಸನ ಜೀವನಕ್ಕೆ ಹೊಸ ತಿರುವನ್ನು ನೀಡುತ್ತದೆ. ರಾಜಕುಮಾರನಾಗಿ ಹುಟ್ಟಿ ನಿರ್ಗತಿಕನಾದ ಶಿಶುವು ಬಲಿಯಾಗಿ ಹೋಗಬಹುದೆಂಬ ವಿಚಾರದ ಸಂದರ್ಭದಲ್ಲಿ, ಸಾಲಿಗ್ರಾಮ ಶಿಲೆಯಿಂದ ಇಡೀ ಕಲ್ಪನೆಯೇ ಬದಲಾಗಿ ಕಥೆಗೆ ಹೊಸ ಚೈತನ್ಯ ಹಾಗೂ ಉತ್ಸಾಹವನ್ನು ನೀಡಿದಂತಾಗುತ್ತದೆ. ದುಷ್ಟಬುದ್ಧಿಯ ಕುತಂತ್ರಕ್ಕೆ ಸಿಲುಕಿ ಕಟುಕದ ಖಡ್ಗಕ್ಕೆ ಬಲಿಯಾಗುತ್ತಿದ್ದ ಶಿಶುವು ಸಾಲಿಗ್ರಮ ಶಿಲೆಯ ಮಹಿಮೆಯಿಂದ ಹರಿ ನಾಮಸ್ಮರಣೆ ಮಾಡಿ ಬದುಕುಳಿದಾಗ ಆ ಶಿಶುವಿನ ಜೀವನದ ಮೊದಲನೆಯ ಗಂಡಾಂತರದಿಂದ ತಪ್ಪಿದಂತಾಗುತ್ತದೆ. ಮಾತ್ರವಲ್ಲದೆ ತಂದೆ ತಾಯಿಗಳನ್ನು ಪಡೆಯುತ್ತದೆ.

ಬೇಟೆಗೆಂದು ಬಂದಿದ್ದ ಪುಳಿಂದನು ಆ ಶಿಶುವನ್ನು ತನ್ನ ದತ್ತಕ ಮಗನನ್ನಾಗಿ ಸ್ವೀಕರಿಸುತ್ತಾನೆ. ಚಂದ್ರಹಾಸನೆಂದು ಹೆಸರಿಟ್ಟು ಶಿಕ್ಷಣಕೊಟ್ಟು ಬೆಳೆಸಿ ತನ್ನ ನಗರಕ್ಕೆ ಅಧಿಪತಿಯನ್ನಾಗಿ ನೇಮಿಸುತ್ತಾನೆ. ಕಪ್ಪಕಾಣಿಕೆಗಳನ್ನು ಒಪ್ಪಿಸಬೇಕೆಂದು ಬಂದ ದೂತರಿಂದ ಚಂದ್ರಹಾಸನು ಬದುಕುಳಿದ ವೃತ್ತಾಂತವು ದುಷ್ಟಬುದ್ಧಿಗೆ ತಿಳಿಯಲು ಆತನು ಚಂದ್ರಹಾಸನಲ್ಲಿಗೆ ಬಂದು ಆತನ ಕೈಯಲ್ಲಿ ತನ್ನ ಮಗನಿಗೆ ಪತ್ರವೊಂದನ್ನು ಬರೆದುಕೊಡುವನು. ಅದರಲ್ಲಿ 'ವಿಷವ' ಕೊಡುವುದು ಎಂದು ಬರೆದರೂ ವಿಧಿಕೃತವನ್ನು ಮೀರುವರುಂಟೆ ಎಂಬಂತೆ ವರ್ಣಪಲ್ಲಟ ದೋಷವೆಂದು 'ವಿಷವ'ವನ್ನು 'ವಿಷಯೆ' ಎಂದು ತಿದ್ದಲ್ಪಟ್ಟು ವಿಷದ ಬದಲಿಗೆ ವಿಷಯೆಯನ್ನು ವರಿಸಿದಲ್ಲಿ ಚಂದ್ರಹಾಸನು ಎರಡನೆ ಬಾರಿಗೆ ಮೃತ್ಯುವಿನಿಂದ ಪಾರಾದನು ಮತ್ತು ವಿಷಯೆಯನ್ನು ವಧುವನ್ನಾಗಿ ವರಿಸಿದನು.

ಮಗಳು ವಿಧವೆಯಾದರೂ ಚಿಂತೆಯಿಲ್ಲ. ಚಂದ್ರಹಾಸನನ್ನು ಕೊಲ್ಲಬೇಕೆಂದು ಚಂಡಾಲತನದ ದುಷ್ಟಬುದ್ಧಿಯು ಕಾಳಿಕಾಲಯಕ್ಕೆ ಚಂದ್ರಹಾಸನನ್ನು ಕಳುಹಿಸಿ ಕೊಲೆಗೈವ ಪ್ರಯತ್ನ ಮಾಡಿದ. ಆದರೆ ಮದನನು ಚಂದ್ರಹಾಸನನ್ನು ಕುಂತಳೇಂದ್ರನಲ್ಲಿಗೆ ಕಳುಹಿಸಿ ತಾನೇ ಕೊಲೆಗಡುಕರ ಖಡ್ಗಕ್ಕೆ ಬಲಿಯಾದಾಗ ಚಂದ್ರಹಾಸನು ಜೀವದಿಂದುಳಿದನು ಅಲ್ಲದೆ ಕುಂತಳ ಪುರ ರಾಜ್ಯವನ್ನು ರಾಜ ಕುಮಾರಿಯನ್ನು ಪಡೆದು ಅರಸನಾದನು.

ಹೀಗೆ, ಚಂದ್ರಹಾಸನು ಗಂಡಾಂತರಗಳಿಂದ ಪಾರಾದುದು ಮಾತ್ರವಲ್ಲ ಪ್ರತಿ ಸಲವೂ ಉನ್ನತಿಯನ್ನೇ ಪಡೆದದ್ದು ಮಹತ್ವದ ಸಂಗತಿಯಾಗಿದೆ. ನಿರ್ಗತಿಕನಾಗಿದ್ದ ಶಿಶುವು ತನ್ನ ಮೊದಲನೆಯ ಗಂಡಾಂತರದಿಂದ ಪಾರಾಗಿ ತಂದೆ ತಾಯಿಯನ್ನು ಪಡೆದು ಗತಿಯನ್ನು ವಾತ್ಸಲ್ಯ ಮಮತೆಯನ್ನು ಪಡೆದು ಉತ್ತಮ ವ್ಯಕ್ತಿತ್ವ ಪಡೆಯುವಲ್ಲಿ ಯಶಸ್ವಿಯಾದ. ಎರಡನೆಯ ಗಂಡಾಂತರದಿಂದ ಪಾರಾಗಿ ತನ್ನ ಜೀವನ ಸಂಗಾತಿಯನ್ನು

ಪಡೆದು ಸಂಸಾರ ಜೀವನಕ್ಕೆ ಬಂದನು. ಆದರೆ ಮೂರನೆಯದರಲ್ಲಿ ಮೊದಲು ಮಾವ ಮೈದುನರನ್ನು ಕಳೆದುಕೊಂಡರೂ ಹರಿಭಕ್ತಿಯಿಂದ ದೇವಿಯನ್ನು ಒಲಿಸಿಕೊಂಡು ದರ್ಶನ ಪಡೆದು ದೇವಿಯಿಂದ ಸತ್ತ ಮಾವ ಮೈದುನನನ್ನು ಬದುಕಿಸಿದ 'ಕಾವ ಕೊಲ್ಲವು ಶ್ರೀ ಹರಿಯಲ್ಲದೆ ಭೂವಳೆಯದೊಳು ಬೇರುಂಟೆ' ಎಂದು ವಿಷ್ಣುಭಕ್ತಿಯನ್ನು ನಿರೂಪಿಸಿದನು. ಚಂದ್ರಹಾಸನು ಬಾಲ್ಯದಲ್ಲಿ ಸರ್ವಸ್ವವನ್ನು ಕಳೆದುಕೊಂಡು ಅವನತಿಯನ್ನು ಹೊಂದಿದರೂ ಅನಂತರ ಉನ್ನತಿಯ ಮೆಟ್ಟಲನ್ನೇರಿ ವಧು ರಾಜ್ಯವನ್ನು ಪಡೆದು ದೇವಿ ದರ್ಶನದಿಂದ ಹರಿಯಭಕ್ತಿಯನ್ನು ಸ್ಥಿರಗೊಳಿಸಿ ಅತ್ಯುನ್ನತ್ತಕ್ಕೇರಿದನು.

ತಂದೆ ತಾಯಿಯರನ್ನು ಕಳೆದುಕೊಂಡು ನಿರ್ಗತಿಕವಾದ ಶಿಶುವನ್ನು ದಾಸಿಯೊಬ್ಬಳು ಅತಿ ಪ್ರೇಮದಿಂದ ಸಾಕುವ ಚಿತ್ರಣ ಹೃದಯಂಗಮವಾದುದು. ಮಗುವಿನ ದುರ್ದೆಶೆಯನ್ನು ಕಂಡು ಮರಗುವ ಅವಳ ಅಂತರಂಗದ ಯಾತನೆ ಹೃದಯ ಸ್ಪರ್ಶಿಯಾಗಿದೆ.

ತಿರಿದು ಹಾಕುವಳು ಪಾಲ್ಬೆಣ್ಣೆಯ ಶಿಶುವಿಗೆ
ಎರೆದು ಪೋಷಣೆಯ ಮಾಡುವಳು
ತರಳಂಗೆ ಬೇಕಾದುದಿಲ್ಲದಿರಲು ದಾಸಿ
ಮರಗುತಿರ್ದಳು ಮನದೊಳಗೆ

ಎಂದು ಪ್ರಲಾಪಿಸುವಲ್ಲಿ ದಾಸಿಯ ತಾಯ್ತನದ ಹಿರಿಮೆ ಕನಿಕರದಿಂದ ಮನಕರಗುವಂತೆ ಚಿತ್ರಿಸಿರುವ ಈ ಸನ್ನಿವೇಶ ಶೋಕ ಮತ್ತು ಕರುಣ ರಸಗಳಿಂದ ತುಂಬಿ ಕೊಂಡಿದ್ದು ಮಗುವಿನ ಅನಾಥಭಾವದ ನಿರ್ಗತಿಕತೆಯ ಚಿತ್ರಣ ಹೃದ್ಯವಾಗಿ ನಿರೂಪಿತಗೊಂಡಿರುವುದು ಗಮನೀಯವಾಗಿದೆ.

ಅಳುವ ಧ್ವನಿಯು ಆಲಿಸುವ ತುಂಬಿಯು ಅರ
ಗಿಳಿ ನುಡಿಸುತ್ತಲ್ಲಿಹವು
ಎಳದಳಿರನೆ ತಂದು ಹಾಸುವ ಗರಿಗಳು
ಸುಳಿಗಾಳಿ ಬೀಸುವ ಖಗನು

ಪಸರಿಸಿ ಗರಿಯ ಮಯೂರ ಪಕ್ಷಿಗಳೆಲ್ಲ
ಬಿಸಿಲಿಗೆ ಮರೆಯ ಮಾಡುವವು
ಬಿಸರುವ ಕಣ್ಣೀರು ಒರಸುವ ಕಪಿಗಳು
ಬಸವಳಿದಿರ್ದ ಬಾಲಕಗೆ

ಪರಿಪರಿ ಪಕ್ಷಿ ಮೃಗಾದಿಗಳೆಲ್ಲವು
ನೆರೆದುಪಚಾರ ಮಾಡುವವು
ಧರೆಗಿಳಿದನು ಚಂದ್ರಯೆನುತಾ ಘಾಯವ ಹುಲ್ಲೆ
ಮರಿಗಳು ಜಿಹ್ವೆಯಿಂದೊರಸಿ"

ಎಂದು ಮಾನವರಿಗಿಂತಲೂ ಅಧಿಕವಾಗಿ ಮೃಗ ಪಕ್ಷಿಗಳು ಅನಾಥ ಮಗುವಿನ ದೀನ ಸ್ಥಿತಿಯನ್ನು ಕಂಡು ಕನಿಕರದಿಂದ ಮನಕರಗಿ ಶೋಕರಸದಿಂದ ಕರುಣೆ ತುಂಬಿ ಮರಗುವ ಚಿತ್ರಣವನ್ನು ಗಿರಿಯಮ್ಮ ಹೃದ್ಯವಾಗುವಂತೆ ಚಿತ್ರಿಸಿದ್ದಾಳೆ.

ಸಂತಾನವಿಲ್ಲದ ಪುಳಿಂದ ಮೇಧಾವತಿಯರು ಶಿಶು ಚಂದ್ರಹಾಸನನ್ನು ದತ್ತು ಮಗನನ್ನಾಗಿ ಸ್ವೀಕರಿಸಿ ಅವನೇ ಸರ್ವಸ್ವವು ಎಂದು ನಡೆದುಕೊಂಡ ರೀತಿ ತೋರಿದ ಪ್ರೀತಿ, ವಾತ್ಸಲ್ಯ ವಿಶಿಷ್ಟತರವಾಗಿದೆ.

ಲೇಸಾತು ಎನ್ನ ದೋಷ ಹಿಂಗಿತು ಎಂದು
ಏಸು ಜನ್ಮದ ಪುಣ್ಯಫಲವೊ
ಪೂಸಾರನಯ್ಯನ ಕೃಪೆಯಿಂದ ಮಗನಾದ
ವಾಸಿಯಾಯಿತು ಬಾಳ್ವೆಯೆಂದು
ಆಡಿಸುವಳು ಮೇಧಾವತಿ ಅಣುಗಲ ಬಾಲ
ಕ್ರೀಡೆಯ ನೋಡಿ ಹರುಷದಿ
ರೂಢಿಯೊಳಗೆ ತನ್ನ ಸುತನ ಲಾವಣ್ಯಕ್ಕೆ
ಜೋಡಿಲ್ಲವೆಂದು ಹಿಗ್ಗುವಳು[೨೦]

ಹೀಗೆ ನಲಿವ ಮೇಧಾವತಿಯ ತಾಯ್ತನ ಪುತ್ರವಾತ್ಸಲ್ಯದ ಚಿತ್ರಣ ಸಹಜವಾಗಿ ಬಂದಿದೆ. ಚಂದ್ರಹಾಸನಿಗೆ ಅಕ್ಷರಾಭ್ಯಾಸಕ್ಕೆ ಅನುಕೂಲವಾಗಿದ್ದಾಗ ಗುರುವು ಪುಳಿಂದನಿಗೆ ದೂರಲು

ಹಿಂದಕ್ಕೆ ಹಿರಣ್ಯಕಶ್ಯಪ ತನ್ನ ತನಯ ಮು
ಕುಂದನ ಭಜಕನೆಂದೆನದೆ
ಬಂಧಿಸಿ ಬಸುರ ಬಗಿಸಿಕೊಂಡಾತನ ಮನಸು
ಬಂದ ಹಾಂಗಿರಲೆಂದು ಸುತನ[೨೧]

ಪುಳಿಂದನು ತನ್ನ ಪುತ್ರ ವಾತ್ಸಲ್ಯವನ್ನು ವ್ಯಕ್ತಪಡಿಸಿದ ಬಗೆ ಅಸಾಮಾನ್ಯವಾದುದು ಹೀಗೆ ಅನಾಥ ಶಿಶುವಿನ ಬಗ್ಗೆ ಸಮಾಜದ ಜನರ ಪ್ರೀತಿ ಸ್ನೇಹ ಮೃಗಪಕ್ಷಿಗಳ ದಯೆ ಇತ್ಯಾದಿಗಳನ್ನು ಮನಕರಗುವಂತೆ ರಸಾತ್ಮಕವಾಗಿ ಚಿತ್ರಿಸಿರುವ ಗಿರಿಯಮ್ಮನ ಕಾವ್ಯ ಪ್ರತಿಭೆ ಉತ್ತಮವಾಗಿ ನಿರೂಪಿತಗೊಂಡಿದೆ.

ಸಂಪ್ರದಾಯ ಪರಂಪರೆಯ ಅನುಗುಣವಾಗಿರುವ ಶಕುನ, ನಂಬಿಕೆಗಳು ಪ್ರಭಾವಶಾಲಿಯಾಗಿ ಈ ಕಥೆಯಲ್ಲಿ ಅಡಕವಾಗಿದೆ. ಅದರೊಂದಿಗೆ ವಿಧಿಲಿಖಿತ ಕೈವಾಡದ ಪವಾಡವು ಅಷ್ಟೇ ಪ್ರಭಾವವನ್ನು ಬೀರಿದೆ ಸಾಲಿಗ್ರಾಮ ಶೀಲೆಯ ಮಹಿಮೆ ಗಮನೀಯವಾಗಿದೆ. ಚಂದ್ರಹಾಸನ ಹುಟ್ಟಿನಿಂದ ಮೋಕ್ಷದವರೆಗೆ ಜೀವನದ ಅವಿಭಾಜ್ಯ ಅಂಗವೆಂಬಂತೆ ಕಥನದುದ್ದಕ್ಕೂ ಪೋಷಕವಾಗಿ ಮೂಡಿಬಂದಿರುವುದು ವಿಶಿಷ್ಟವಾಗಿದೆ. ಚಂದ್ರಹಾಸನು ಮೂಲನಕ್ಷತ್ರ ಅರಿಷ್ಟಾಂಶದಲ್ಲಿ ಜನಿಸಿದನು ಶತ್ರುಗಳ ಆಕ್ರಮಣದಿಂದ ರಾಜನು ಮರಣ ಹೊಂದಿದನು. ರಾಣಿಯು ಸಹಗಮನ ಮಾಡಿದಳು. ರಾಜ್ಯ ವೈರಿಗಳ ವಶವಾಗುವುದು.

ನೀತೀಲಿ ರಾಜ್ಯವನಾಳುತಿರಲು ಕಂದ
ಭೂತ ಮೂಲದಲಿ ಪುಟ್ಟಿದನು
ಜಾತಕರ್ಮ ನಾಮಕರಣ ಮಾಡದೆ ಅವ
ರ್ತಾತ ಕಾಲವಾಗಿ ಪೋದ[೨೨]

ಚಂದ್ರಹಾಸನು ಮೂಲನಕ್ಷತ್ರ ಅರಿಷ್ಟಾಂಶದಲ್ಲಿ ಹುಟ್ಟಿದುದು ಅನಿಷ್ಟಾಕಾರಕವೆಂಬುದನ್ನು ಜನ್ಮ ಜಾತಕ ಕುಂಡಲಿ ರಾಶಿ ಫಲಗಳಿಗೆ ಅನ್ವಯಿಸಿ ಹೇಳುವ ರೂಢಿಯು ಶಾಸ್ತ್ರ ಸಮ್ಮತವೆಂಬುದು ಸರ್ವವಿಧಿತ ವಿಚಾರವಾಗಿದೆ. ಆದರೆ ಸಾಲಿಗ್ರಾಮ ಶಿಲೆಯು ಪ್ರಭಾವದಿಂದ ನುಡಿದ ನಾರಾಯಣ ಹರಿ ಎಂಬುವನ ಪಿಡಿದೊಯ್ದು ವೃಂದದೊಳಿಟ್ಟು ಅಡವಿಯೊಳಗೆ ಅಂಜಿ ಅಳುವ ಬಾಲಕನ ಕಂಡು ಕಟುಕರ ಮನ ಕರಗಿತು. ಪರಿಣಾಮವಾಗಿ ಕಟುಕರು ಬಾಲಕನನ್ನು ದಯೆ ತೋರಿ ಕೊಲ್ಲದೆ ಬಿಟ್ಟರು.

'ಪುಳಿಂದನು ಹರಿ ತಂದು ಹರಿ ಬೆಂಬತ್ತಿ ಪುಳಿಂದನು ಹರಿಯ ಧಾನ್ಯದಲ್ಲಿ ಇರುವ ಬಾಲಕನ ಕಂಡು... ಪಾಪಕಳಸಿ ಬಂದು ಪೂರ್ವದಲ್ಲಿ ಪುಣ್ಯ ರೂಪವ ಕಂಡಂತೆ ಮನದಿ' ಎನ್ನುವಲ್ಲಿ ಪಾಪ, ಪುಣ್ಯದ ನಂಬಿಕೆ ದೃಢವಾಗಿದೆ.

ಚಂದ್ರಹಾಸನಿಗೆ ದುಷ್ಟಬುದ್ಧಿ ಪತ್ರವೊಂದನ್ನು ಕೊಟ್ಟು ಕುಂತಳಪುರಕ್ಕೆ ಕೊಟ್ಟು ಬಾರೆಂದು ಹೇಳುತ್ತಾನೆ. ಆ ಪತ್ರವನ್ನು ತೆಗೆದುಕೊಂಡು, ಹೋಗುವಾಗ ಶುಭದ ಸಂಕೇತವಾಗಿ ಬರುವ ವಸ್ತುಗಳನ್ನು ತುಂಬ ಸೋಗಸಾಗಿ ಹೇಳಿದ್ದಾಳೆ.

ಬೀದಿವರಿದು ಬಾಲ ಬರುತಿರೆ ಕಂಡನು
ವೇದ ಪಾಠಕಲಿಬ್ಬರನು
ಸಾಧಿಸಿ ಮುತ್ತೈದೆಯರ ಕಂಡನು ಇದು ಶುಭ
ಕಾಧಾರವೆಂದು ನಡೆದನು[೨೩]

ಮಧುರ ಮಾವಿನ ಹಣ್ಣು ಗಂಧ ಪುಷ್ಪಗಳನ್ನು
ಇದುರಲಿ ತಂದು ಕೊಡುವರು
ಮದುವಣಿಗರ ಹೊನ್ನಕಳಿಸುವ ಕಂಡನು
ಇದು ಲೇಸು ಎಂದು ನಡೆದನು
........
ಇಂತು ಪರಿಯ ಶಕುನವ ಮನ್ನಿಸಿಕೊಂಡು
ಸಂತೋಷದಿಂದ ಬರುತಿರಲು
ಕುಂತಳ ಪುರದ ಬಾಗಿಲ ಹೊನ್ನ ಕಳಸವ
ನಂತರವನೆ ಕಂಡ ಇದಿರ[೨೪]

ಚಂದ್ರಹಾಸನು ದುಷ್ಟಬುದ್ಧಿಯು ನೀಡಿದ ಪತ್ರವನ್ನು ತಲುಪಿಸಲು ಹೊರಟಾಗ ಕುಂತಳಪುರದ ದಾರಿಯುದ್ದಕ್ಕೂ ಶುಭ ಶಕುನಗಳೇ ಕಂಡುಬರುತ್ತವೆ. ತುಂಬಿದ ಕೊಡ, ಫಲಪುಷ್ಪಗಳು ಮದುವಣಿಗರ ಹೊನ್ನ ಕಳಸ ಇಬ್ಬರು ವೇದ ಪಾಠಕರು (ಬ್ರಾಹ್ಮಣರು) ಎದುರುಗೊಂಡಂತೆ ಶುಭ ಶಕುನವೆಂದು ತಿಳಿಯಲಾಗುವುದು. ಇಂತಹ ನಂಬಿಕೆಗಳು ಮೊದಲು ವೈಯಕ್ತಿಕ ಮನಸ್ಸಿನಿಂದ ರೂಪುಗೊಂಡು ಬರುಬರುತ್ತಾ ಸಾಮೂಹಿಕ ಮನ್ನಣೆಯನ್ನು ಪಡೆದುಕೊಳ್ಳುತ್ತವೆ.

ತಂದೆ ಬರೆದ ಪತ್ರವನ್ನೋದಿದ 'ವಿಷಯೆ' ಸಂದೇಹವಿಲ್ಲದೆ ವಿಷವ ಕೊಡುವುದು ಪತ್ರದ ವರ್ಣಪಲ್ಲಟ ದೋಷವ ತಿದ್ದುವುದು ವಿಧಿ ಕೈವಾಡವೇ ಎಂಬಂತೆ ನಿಸ್ಸಂದೇಹವಾಗಿದೆ. ಹಾಗೆಯೇ ದುಷ್ಟಬುದ್ಧಿಯು ತಾನು ಬರೆದಿರುವ ಪತ್ರವನ್ನು ತರಿಸಿದಾಗ ಓಲೆಯ ಮಂತ್ರಿಯು ನೋಡಿ ಒರೆಸಿ ತಿದ್ದಿದರೆಂಬೊದರಿಯ ಪುರುಷನ ಪುಣ್ಯವ ಕಂಡವರಾರುಂಟು ಕೈ ತಪ್ಪ' ಎಂದು ಮದನನ ಮೇಲೆ ತಪ್ಪಿಲ್ಲ. ಇಲ್ಲಿ ಕೂಡಾ ವಿಧಿ ಲಿಖಿತದಂತೆ ಬ್ರಾಹ್ಮಣರ ನುಡಿಗಳಲ್ಲಿರುವ ಗಾಢವಾದ ವಿಶ್ವಾಸವು ವ್ಯಕ್ತವಾಗಿದೆ. ಮತ್ತು ಆ ಕಾಲದ ಸಾಮಾಜಿಕ ನಂಬಿಕೆಯೂ ಆಗಿರುತ್ತದೆಂಬುದು ಅತ್ಯಂತ ಗಮನೀಯ ಅಂಶವಾಗಿದೆ. 'ಆ ಪುರದರಸು ದರ್ಪಣವ ನೋಡಲು' ಇಲ್ಲಿ ಅಶುಭ ಶಕುನ ಸೂಚನೆಯಂತೆ ಕುಂತಳಾಧೀಶನಿಗೆ ಅಶುಭ ಶಕುನವಾದರೆ ಚಂದ್ರಹಾಸನಿಗೆ ಅದೇ ಶುಭ ಶಕುನ ಅಥವಾ ಅಭ್ಯುದಯಕಾರಿಯಾಗಿರುವುದನ್ನು ಶಕುನ ಶಾಸ್ತ್ರದ ವೈಶಿಷ್ಟ್ಯವಾಗಿದೆ. ಮದನನು ಕಾಳಿ ದೇವಾಲಯದಲ್ಲಿ ಸತ್ತುಬಿದ್ದಾಗ ಚಂದ್ರಹಾಸ ಕುಂತಳಾಪುರದಿಂದ ಬರುವಾಗ ಅಂಧಕಾರವಾಗಿ ಗೂಗಿ ಕೂಗಿದವು. ಕುಂದದೆ ಒಳ್ಳು ಬೇರಿದವು' ಎನ್ನುವಲ್ಲಿ ಅಪಶಕುನ ಚಿತ್ರಣವನ್ನು ಗಿರಿಯಮ್ಮಳು ನೀಡಿರುವುದು ಔಚಿತ್ಯ ಪೂರ್ಣವಾಗಿದೆ.

ಮನುಷ್ಯರ ಭಾಗ್ಯರೇಖೆ ಯಾವ ಕ್ಷಣದಲ್ಲಿ ಬದಲಾಗುವುದು ಹೇಗೆ ಮೇಲಕ್ಕೆ ಕೆಳಗೆ ಒಯ್ಯಬಹುದೆಂಬುದನ್ನು ಯಾರಿಂದಲೂ ಹೇಳಲೂ ಸಾಧ್ಯವಿಲ್ಲವೆಂಬಂತೆ ಚಂದ್ರಹಾಸನ ಜೀವನದ ಇಳಿ-ಏರುಗಳು ಕಂಡವು. 'ಪುರುಷಸ್ಯ ಭಾಗ್ಯವೆಂಬುದಂ ನಿಜ' ಎಂಬಲ್ಲಿ ಅರ್ಥಪೂರ್ಣವಾಗಿ ಇಡೀ ಕಥೆಗೆ ಅನ್ವಯಿಸುವಂತೆ ಕವಿ ಲಕ್ಷ್ಮೀಶ ಹೇಳಿರುವುದು ಸೂಕ್ತವಾಗಿದೆ.

> ಹಾಹಾ ಮಗನೆ ನಾ ಮಾಡಿದ ಅಪರಿಮಿತ
> ದ್ರೋಹಂಗಳಿಂದಲಿ ನಿನ್ನ
> ದೇಹ ಹತ್ಯವಾಯಿತು ಎಂದು ಮಂತ್ರಿಯು
> ಅತಿ ಮುದದಿಂದಲಿ ಮರಗಿದನು.[೨೫]

ಎಂದು ದುಷ್ಟಬುದ್ಧಿ ಶೋಕದಿಂದ ಪ್ರಲಾಪಿಸುವಲ್ಲಿ ದುಷ್ಟವಾದ ಅವನಲ್ಲೂ ತಾನು ಮಾಡಿದ ದ್ರೋಹದಿಂದ ಎಂತಹ ವಿಪತ್ತನ್ನು ಎದುರಿಸಬೇಕಾಯಿತು ಎಂಬ ಅರಿವು ಇರುವುದು ಸ್ಪಷ್ಟವಾಗುತ್ತದೆ. ದೈವದ ವಿರುದ್ಧ ಹೋರಾಡುವಲ್ಲಿ ಕೊನೆಗೆ ದೈವಶಕ್ತಿಯ ಅರಿವಾಗುವ ಸನ್ನಿವೇಶ ನಂಬಿಕೆ ಇಲ್ಲಿ ಯುಕ್ತವಾಗಿ ನಿರೂಪಿತಗೊಂಡಿದೆ.

ಹೀಗೆ ಇಡೀ ಚಂದ್ರಹಾಸನ ಕಥೆಯಲ್ಲಿ ನಕ್ಷತ್ರ ಫಲ, ವಿಧಿ ಲಿಖಿತ, ಬ್ರಾಹ್ಮಣರ ನುಡಿ, ಶುಭ ಶಕುನ, ಅಪಶಕುನ, ದೈವ ಬಲ ಜೀವನದಲ್ಲಿ ಸಂಬಂಧಿತವಾಗಿವೆ. ಅವುಗಳ ಬಗ್ಗೆ ವಿಶ್ವಾಸ ಎಷ್ಟೊಂದು ಬೇರೂರಿದೆ. ಇವುಗಳೆಲ್ಲವು ಚಂದ್ರಹಾಸನ ಕಥೆಯಲ್ಲಿ ಹಾಸುಹೊಕ್ಕಾಗಿ ಇಡೀ ಕಥೆಯಲ್ಲಿ ಪೂರಕವಾಗಿ ಜೀವನಾಡಿಯಂತೆ ಸೇರಿಕೊಂಡಿರುವುದು ಕಥೆಯ ವೈಶಿಷ್ಟ್ಯವಾಗಿದೆ.

ಮೃಗ ಪಕ್ಷಿಗಳು ಚಂದ್ರಹಾಸನ ವೇದನೆಯನ್ನು, ರೋದನವನ್ನು ಕಂಡು ಶೋಕದಿಂದ ಮರುಗುವ, ಉಪಚರಿಸುವ ಸನ್ನಿವೇಶ ಕಾವ್ಯೋಚಿತವಾಗಿದೆ. 'ಪರಿ ಪರಿ ಪಕ್ಷಿ ಮೃಗಾದಿಗಳೆಲ್ಲವು ನೆರದುಪಚಾರ ಮಾಡುವವು' ಬುದ್ಧಿ ವಿಚಾರಗಳಿಲ್ಲದ ಮೃಗ ಪಕ್ಷಿಗಳು ಬುದ್ಧಿ ವಿವೇಚನಾಶಾಲಿಗಳಾದ ಮನುಷ್ಯರಿಗಿಂತ ಎಷ್ಟು ಶ್ರೇಷ್ಠವೆಂಬ ವಿಚಾರವನ್ನು ಈ ಮೇಲಿನ ಸನ್ನಿವೇಶದಲ್ಲಿ ನಿರೂಪಿತವಾಗಿದೆ. ಅದಕ್ಕನುಗುಣವಾಗಿ ಬಂದಿರುವ 'ವಸುಮತಿಯೊಳಾರ್ತರಂ ನೋಡಿ ಮಿಗೆ ಮರುಗದಿಹ ಮಾನವಂ ಪಾಪಿಯಲ್ತೆ' ಎಂದು ಸಮಾಜದಲ್ಲಿ ಮನುಷ್ಯ ಮೃಗ ಪಕ್ಷಿಗಳನ್ನಾದರೂ ನೋಡಿ ತನ್ನ ದುಷ್ಟತನವನ್ನು ನಿವಾರಿಸಿಕೊಳ್ಳಲಿ, ಮಾನವತೆಯಿಂದ ಬಾಳಲಿ ಎಂಬ ಸಂದೇಶವನ್ನು ಕಣ್ತೆರೆಸುವಂತೆ ಕವಿ ಲಕ್ಷ್ಮೀಶ ಸೂಚ್ಯವಾಗಿ ಸಾರಿದ್ದಾನೆ.[೩೬]

ಚೆಲುವನಾದ ಚಂದ್ರಹಾಸನನ್ನು ಕಂಡು ಮೋಹಗೊಂಡ ವಿಷಯೆ ವಿಷಯಾಸಕ್ತೆಯಾಗಿ ವರ್ಣ ಪಲ್ಲಟದ ದೋಷವನ್ನು ತಿದ್ದಿ ವಿರಹ ಪೀಡಿತಳಾಗಿ ಸಖಿಯರಲ್ಲಿಗೆ ಬರುತ್ತಿದ್ದಳು.

ತೆಗೆದು ಚಾಪವ ಕಿವಗೇರಿಸಿ ಮನ್ಮಥ
ಬಿಗಿದು ಕಟ್ಟಿದ ಭರದಿಂದ
ತಗುಲಿತು ಎದೆಗೆ ಕೂರಂಬು - ಬೆನ್ನಲಿ
ತಟ್ಟುಗಿಯಿತು ತಲೆಯನು ಎತ್ತಿ[೩೭]

ಮನ್ಮಥ ಬಿಲ್ಲನ್ನು ತೆಗೆದು ಹೆದೆಯೇರಿಸಿದನು. ಆತನು ಹೊಡೆದ ಪುಷ್ಪಬಾಣ ಎದೆಯನ್ನು ತಾಗಿದಂತೆ ಆಕೆಗೆ ವಿರಹಾವಸ್ಥೆಯುಂಟಾಯಿತು ಎಂದು ಕಾಮತಾಪದಿಂದ ವಿರಹಾಗ್ನಿಯಿಂದ ಪೀಡಿತಳಾದ ವಿಷಯೆ ವಿರಹ ಸ್ಥಿತಿಯ ನೈಜ ಚಿತ್ರಣವನ್ನು ಗಿರಿಯಮ್ಮ ಮಾಡಿದ್ದಾಳೆ.

ಮದುವೆ ಸಮಾರಂಭಕ್ಕೆ ಅಲಂಕೃತಳಾದ ವಿಷಯೆಯ ಅಲಂಕಾರ ವರ್ಣನೆಯನ್ನು ಗಿರಿಯಮ್ಮ ಕಣ್ಮುಂದೆ ಕಟ್ಟುವಂತೆ ಚಿತ್ರಿಸಿದ್ದಾಳೆ.

ಇಟ್ಟರು ತೋಳ ಚಳರಕ್ಷೆ ಮಣಿಗಳ
ಗಟ್ಟಿಕಂಕಣ ಚಳಕಗಳ
ಉಟ್ಟರೇಕೆಯ ಹಿಡಿವಾಳ ಕಡಗ ಅಳ
ವಟ್ಟಿಹ ಬೆರಳ ಮುದ್ರಿಕೆಯು
....................

.....................

ಬಾಳೆಯ ಕದಳಿಯು ಹೋವಿವ ತೊಡೆ ಕಣ
ಕಾಲುಗಳೆಸೆವ ಭಾವರೆಯು
ಸಾಲುಗಂಟೆ ಗೆಜ್ಜೆ ಸರಪಳಿ ಘಲಿರೆಂಬ
ಕಾಲಂದಿಗೆಯ ನಿಡುವರು.[೨೮]

ತೋಳುಗಳಿಗೆ ರಕ್ಷಾಬಂಧನವನ್ನು ಕಟ್ಟಿದರು. ಬೆರಳುಗಳಿಗೆ ಉಂಗುರವನ್ನಿಟ್ಟು ಕೈಗೆ ಕಡಗ, ಮುತ್ತಿನ ಹಾರ, ಮುತ್ತಿನ ಕಡಗ, ಚಿನ್ನದ ಸರ, ಚಿಂತಾಕು ಇವನ್ನು ಸಖಿಯರು ವಿಷಯೆಗೆ ತೊಡಿಸಿರು. ಪಚ್ಚೆಸರ, ಕಂಠಿಸರ, ಬಿಲ್ಲಸರ, ಕಾಂಚೀದಾಮಗಳನ್ನು ತೊಡಿಸಿದರು. ಗೆಜ್ಜೆಗಳಿಂದ ಕೂಡಿದ ಸರಪಳಿಯನ್ನು ಘಲಿರೆಂಬ ದನಿ ಮಾಡುವ ಕಾಲಂದಿಗೆಗಳನ್ನು ತೊಡಿಸಿದರು. ಇದು ಆ ಕಾಲದ ಸಾಂಸ್ಕೃತಿಕ ವಿದ್ಯಾಮಾನವನ್ನು ಚಿತ್ರಿಸುತ್ತದೆ.

ದುಷ್ಟಬುದ್ಧಿಯು ಮಗ ಮದನನ್ನು ನೋಡಲು ಕಾಳಿ ದೇವಾಲಯಕ್ಕೆ ಹೋಗುವ ಸಂದರ್ಭದಲ್ಲಿ ಮುಂದೆ ಇರುವ ವಿಪತ್ತನ್ನು ಅಪಶಕುನ ಸೂಚನೆಯಾಗಿ ಕಂಡು ಇರುವ ದೃಶ್ಯವನ್ನು ಈ ರೀತಿ ಚಿತ್ರಿಸಲಾಗಿದೆ.

ಕಾರುಗತ್ತಲೆ ಕವಿದವು ಎಡವುತ್ತ
ಏಳುತ್ತ ನೆಲಕೆ ಬೀಳುತಲಿ
ಸುಡುಗಾಡಲಿ ಬೇವ ಹೆಣವ ಕೊಳ್ಳಿಯ ಪಿಡಿದು
ಅಡಿಯಿಟ್ಟನು ಅತ್ತ ಮಂತ್ರಿ

ಸುಂದಿರ್ದ ಬಣ್ಣಗೂಳಿನ ಸುತ್ತ ಮುತ್ತಲ
ಕುರಿ ಕೋಳಿ ತಲೆಯ ಮಾಂಸವು
ನಾರಿ ನಾಯಿ ಪ್ರೇತ ಪಿಶಾಚಿಗಳೆಲ್ಲವು ಆ
ಹಾರ ಮಾಡುತಲಿರ್ದವಲ್ಲಿ[೨೯]

ಕಗ್ಗತ್ತಲೆಯಲ್ಲಿ ಮಂತ್ರಿ ಸುಡುಗಾಡಿನಲ್ಲಿ ಬೇಯುತ್ತಿದ್ದ ಹೆಣದ ಒಂದು ಕೊಳ್ಳಿಯನ್ನು ಹಿಡಿದುಕೊಂಡು ಹೋದಂತೆ ಕೊಳ್ಳಿ ಹಿಡಿದ ಭೂತಗಳು ಕಾಡುತ್ತಿದ್ದವು. ಅಲ್ಲಿದ್ದ ನಾಯಿ, ಕೋಳಿ, ಬೆಕ್ಕು, ಹಂದಿಗಳನ್ನು ಎಣಿಸಲು ಸಾಧ್ಯವಿಲ್ಲದಷ್ಟು ಭೂತಗಳು ಇವನನ್ನು ಅಣಕಿಸುತ್ತಿರುವಂತೆ ಸ್ಮಶಾನದಲ್ಲಿ ಬಣ್ಣ ಬಣ್ಣದ ಅನ್ನ ಕುರಿ, ಕೋಳಿಗಳ ಮಾಂಸವನ್ನು ನರಿ, ನಾಯಿ, ಪ್ರೇತ, ಪಿಶಾಚಿಗಳು ತಿನ್ನುತ್ತಿದ್ದವು. ಹೀಗೆ ಇಲ್ಲಿ ಸುಡುಗಾಡಿನ (ಸ್ಮಶಾನ) ಭಯಾನಕ ಭೀಭತ್ಸದ ದೃಶ್ಯವನ್ನು ಗಿರಿಯಮ್ಮ ನೈಜವಾಗಿ ಚಿತ್ರಿಸಿರುವಳು. ಭಯ, ಬೀಭತ್ಸವು ಸ್ಮಶಾನದ ವರ್ಣನೆಯಲ್ಲಿ ಭಾವಪೂರ್ಣವಾಗಿ ಮೂಡಿಬಂದಿದೆ.

ಗಿರಿಯಮ್ಮಳ ಚಂದ್ರಹಾಸನ ಕಥೆಯಲ್ಲಿ ಭಕ್ತಿ ಮತ್ತು ಕರುಣರಸ ಪ್ರಧಾನವಾಗಿ ಕಾವ್ಯದುದ್ದಕ್ಕೂ ಭಾವ ಪೂರ್ಣವಾಗಿ ಹರಿದು ಬಂದಿದೆ. ಗಿರಿಯಮ್ಮ ಕಾವ್ಯವನ್ನು ಭಕ್ತಿ ಪ್ರಧಾನ ಕೃತಿಯನ್ನಾಗಿಸಿದ್ದಾಳೆ. ಚಂದ್ರಹಾಸನ ಕಥೆಯಲ್ಲಿ ಭಕ್ತಿರಸವೇ ಇಡೀ ಕಥಾನಕದಲ್ಲಿ ಹಾಸುಹೊಕ್ಕಾಗಿ ಮೂಡಿ ಬಂದಿರುವುದನ್ನು ಕಾಣಬಹುದು. ಕಥೆಯ ಆರಂಭದಲ್ಲಿ ಶಿಶು ಚಂದ್ರಹಾಸನನ್ನು ಕಟುಕರು ಕೊಲ್ಲಲು ಕಾಡಿಗೊಯ್ಯುತ್ತಿರುವ ಸಂದರ್ಭದಲ್ಲಿ ದಿವ್ಯ ಸಾಲಿಗ್ರಾಮದ ಮಹಿಮೆಯಿಂದ ನುಡಿ ನುಡಿಗೆ ನಾರಾಯಣ ಹರಿ ಎಂಬುವನ ಪಿಡಿದೊಯ್ದು ವೃದದೊಳಿಟ್ಟು ಅಡವಿಯೊಲಗೆ ಅಂಜಿ ಅಳುವ ಬಾಲಕನ ಕಂಡು ಕಟುಕರ ಮನ ಕರಗಿತು. ಶಿಶು ಹರಿನಾಮ ಸ್ಮರಿಸುತ್ತಾ ಸಲಹೆಂದು ಪ್ರಾರ್ಥಿಸುವ ಭಕ್ತಿಭಾವವು ಮತ್ತು ಸಾಲಿಗ್ರಾಮ ಶಿಲೆಯ ಮಹಿಮೆಯು ಮಹತ್ವವಾಗಿ ನಿರೂಪಣೆಗೊಂಡಿದೆ. ಚಂದ್ರಹಾಸನು ಕಾಳಿದೇವಸ್ಥಾನದಲ್ಲಿ ಮಹಾದೇವಿಯ ವರ್ಣನೆಯನ್ನು ಭಕ್ತಿಭಾವದಿಂದ ಸ್ತುತಿಸಿರುವುದನ್ನು ಗಿರಿಯಮ್ಮ ಬಣ್ಣಿಸಿರುವಳು.

ಶಾಂಭವಿ ಪಾರ್ವತಿಗೀರ್ವಾಣಿ ತ್ರಿಯಂಬಿಕೆ
ಅಂಬುಜ ಮುಖಿಯೆ ಸೌಂದರಿಯೆ
ಜಾಂಬಾರಿಸುತೆ ಜಗದಾದಿ ಮೂರುತಿ
ಕೃಪಾಂಬೆ ನೀ ಕರುಣೆಯು ಎಂದ

ನವ ದುರ್ಗಿ ನಾರಾಯಣಿ ನರ ರೂಪಿಣಿ
ರಮಿಸುವೆ ಸರ್ವೇಶರೊಡನೆ
ಭವ ಭವ ಹಾರಿಣಿ ಭವಾನಿ ಶಂಕರಿ
ಗವುರಿ ಕರುಣಿಸು ಕೃಪೆಯಿಂದ[೩೦]

ಚಂದ್ರಹಾಸ ಆ ಕಾಳಿಕಾದೇವಿಯನ್ನು ನೋಡಿ ಶಾಂಭವಿ, ಪಾರ್ವತಿ, ಗೀರ್ವಾಣಿ, ತ್ರಿಯಂಬಿಕೆ ಜಾಂಬಾರಿಸುತೆ ಜಗದಾದಿ ಮೂರುತಿಯೇ ನೀನು ಕರುಣಾಳು ಎಂದು ಸ್ತುತಿಸಿದನು. ದುರ್ಗಿಯ ನಾರಾಯಣಿಯ ನರ ರೂಪಿಣಿಯೆ, ಭವಾನಿಯೆ, ಶಂಕರಿಯೆ, ಗೌರಿಯೆ ಕಾಪಾಡು ಎಂದು ಚಂದ್ರಹಾಸನ ಪ್ರಾರ್ಥನೆಯಲ್ಲಿ ಪಾರ್ವತಿಯನ್ನು ಸ್ತುತಿಸುವಲ್ಲಿ ಭಕ್ತಿರಸ ತುಂಬಿದೆ. ಶಕ್ತಿ ಸ್ವರೂಪಿಣಿಯ ವಿಭಿನ್ನಗುಣ ರೀತಿಗಳ ವರ್ಣನೆಯು ಸುಂದರವಾಗಿ ಮೂಡಿಬಂದಿದೆ.

ಆರಂಭದಲ್ಲಿ ಹರಿಸ್ತುತಿಯನ್ನು ಮಾಡಿ ಕೊನೆಯಲ್ಲಿ ದೇವಿ ಸ್ತುತಿ ಮಾಡಿರುವುದು ಮಹತ್ವದ್ದಾಗಿದೆ. ಇಡೀ ಕಾವ್ಯದಲ್ಲಿ ಬಂದಿರುವ ಹರಿಸ್ತುತಿಯನ್ನು ಹೊರತುಪಡಿಸಿ ಪುನರಾವೃತ್ತಿಯಾಗದಂತೆ, ಕಾವ್ಯರಚನೆಯಲ್ಲಿ ಗಿರಿಯಮ್ಮ ಯಶಸ್ವಿಯಾಗಿದ್ದಾಳೆ. ಹಾಗೆಯೇ ಚಂದ್ರಹಾಸನು ಬಾಲ್ಯದಲ್ಲಿ ಹರಿಸ್ತುತಿ ಮಾಡಿರುವುದನ್ನು ಈ ಸಂದರ್ಭದಲ್ಲಿ ಗಮನಿಸಬಹುದಾಗಿದೆ.

ಚಂದ್ರಹಾಸನ ಕಥೆಯಲ್ಲಿ ಹರಿ ಪೂಜೆ ಕಾಳಿಕಾದೇವಿ ಪೂಜೆ, ಏಕಾದಶಿ ವ್ರತಾಚರಣೆಯನ್ನು ಸಂದರ್ಭೋಚಿತವಾಗಿ ನಿರೂಪಿತವಾಗಿದ್ದು, ಸಾಮಾಜಿಕ ಜೀವನದಲ್ಲಿರುವ ಧಾರ್ಮಿಕತೆಯನ್ನು ಎತ್ತಿ

ತೋರಿಸಲಾಗಿದೆ. ಹರಕೆ, ಮಕ್ಕಳಾಟ, ವಿಪ್ರಸಂತರ್ಪಣೆ, ಭವಿಷ್ಯ ನುಡಿ, ಪಾಪ ಭೀತಿ, ಪುಣ್ಯ ಫಲ, ಪರಮಾತ್ಮನಿಂದ ಪುತ್ರ ಪ್ರಾಪ್ತಿ, ನಂಬಿಕೆ, ಸಂಪ್ರದಾಯ ಇತ್ಯಾದಿಗಳನ್ನು ಸನ್ನಿವೇಶ ಪಾತ್ರ ಸಂದರ್ಭ ಘಟನೆಗಳಿಗನುಗುಣವಾಗಿ ನಿರೂಪಿಸುವಲ್ಲಿ ಗಿರಿಯಮ್ಮ ಕಾವ್ಯ ಕೌಶಲ್ಯವನ್ನು ಮೆರೆದಿರುವಳು.

ಚಂದ್ರಹಾಸನ ಕಥೆಯನ್ನು ಅವಲೋಕಿಸಿದಾಗ ಚಂದ್ರಹಾಸನ ಸಮಗ್ರ ಜೀವನವು ವೈಶಿಷ್ಟ್ಯ ವೈವಿಧ್ಯತೆಗಳಿಂದ ನಿರೂಪಿತವಾಗಿರುವುದು ಕಂಡುಬರುತ್ತದೆ. ಈ ಕಥೆಯಲ್ಲಿ ಆದಿಯಿಂದ ಅಂತ್ಯದವರೆಗೆ ಚಂದ್ರಹಾಸನೇ ಈ ಕಥೆಯ ನಾಯಕನಾಗಿ ಬೆಳೆದುಬಂದಿದ್ದಾನೆ. ಚಂದ್ರಹಾಸನ ಹುಟ್ಟು ಅನಾಥತನ, ಬಾಲ್ಯ, ಮಾತಾಪಿತರು ದೊರಕುವುದು, ತಾರುಣ್ಯ, ಶಿಕ್ಷಣ, ರಾಜ್ಯದ ಅಧಿಪತ್ಯ ಮದುವೆ, ಮಕ್ಕಳು, ವೃದ್ಧಾಪ್ಯ, ಮೋಕ್ಷದವರೆಗಿನ ಅರ್ಥಾತ್ ಕಥಾ ಸಂವಿಧಾನದಲ್ಲಿ ಹುಟ್ಟಿನಿಂದ ಮೋಕ್ಷದವರೆಗಿನ ಜೀವನದಲ್ಲಿ ನಡೆದ ವಿವಿಧ ಘಟನೆಗಳ ಸನ್ನಿವೇಶಗಳ ಸಮಗ್ರ ಚಿತ್ರಣವನ್ನು ಗಿರಿಯಮ್ಮ ತನ್ನ ಅಸಾಧಾರಣ ಪ್ರತಿಭಾ ಶಕ್ತಿಯಿಂದ ಶ್ರೇಷ್ಠವಾದ ರೀತಿಯಲ್ಲಿ ಕಾವ್ಯರಚಿಸಿ ತನ್ನ ಕಾವ್ಯ ಪ್ರತಿಭೆಯನ್ನು ಮೆರೆದಿರುವಳು.

ರಾಜಕುಮಾರನಾಗಿ ಹುಟ್ಟಿ, ವಿಧಿ ವಿಲಾಸಕ್ಕೆ ಸಿಲುಕಿ ಬೀದಿ ಪಾಲಾಗಿ ಜನರ ಪ್ರೀತಿ ವಿಶ್ವಾಸಗಳನ್ನು ಗಳಿಸಿ, ಸಾಲಿಗ್ರಾಮ ಶಿಲೆಯ ಮಹಿಮೆಯಿಂದ ಕೃಷ್ಣಭಕ್ತಿಯಿಂದ ಕಟುಕರ ಖಡ್ಗದಿಂದ ಪಾರಾಗಿ, ಪುಳಿಂದನ ದತ್ತಕ ಮಗನಾಗಿ ಚಂದನಾವತಿಯ ಅಧಿಪತ್ಯ ಪಡೆದು, ವಿಷಯೆಯನ್ನು ವಿವಾಹವಾಗಿ ಸತ್ತ ಮಾವ ಮೈದುನರನ್ನು ಬದುಕಿಸಿದ ಸನ್ನಿವೇಶ ರಸಾತ್ಮಕವಾಗಿರುವುದು ಪ್ರಸ್ತುತ ಕಥೆಯ ವಿಶೇಷತೆಯಾಗಿದೆ.

ಚಂದ್ರಹಾಸನ ಕಥನಕದಲ್ಲಿ ಸಂಪತ್ತಿನಿಂದ ದಾರಿದ್ರ್ಯಕ್ಕೆ, ದಾರಿದ್ರ್ಯದಿಂದ ಅಧಿಕಾರಕ್ಕೆ ಅನಾಥತನದಿಂದ ನಾಥಪದವಿಗೆ ಮೃತ್ಯುವಿನಿಂದ ಸಮೃದ್ಧ ಜೀವನಕ್ಕೆ ಆಚಾರದಿಂದ ಸಫಲತೆಗೆ, ಭಕ್ತಿಯಿಂದ ಮುಕ್ತಿಗೆ ಸಲ್ಲುವ ಚಂದ್ರಹಾಸನ ಕಥೆಯು ಒಂದು ಆದರ್ಶ ಕಥನ ಕಾವ್ಯವಾಗಿದೆ.

ಜೀವನದಲ್ಲಿ ಬರುವ ತಿರುವು ಏರಿಳಿತಗಳು ವಿಧಿಕೈವಾಡದಿಂದ ನಿರ್ದಿಷ್ಟ ಗುರಿಯನ್ನು ತಲುಪುತ್ತದೆಂಬ ಸುಂದರ ಕಲ್ಪನೆಯು ಈ ಕಥೆಯಲ್ಲಿ ಉತ್ತಮವಾಗಿ ನಿರೂಪಣೆಗೊಂಡಿದೆ. ಎಂತಹ ವಿಪತ್ತಿನ ಕಾಲದಲ್ಲೂ ಧೈರ್ಯಗೆಡದೆ, ನಿಷ್ಠೆಯಿಂದ ಪಾಲಿಸಿದರೆ, ದೈವವು ರಕ್ಷಿಸಿ ಕೈಹಿಡಿದು ನಡೆಸುವುದೆಂಬ ಸ್ಪಷ್ಟ ಕಲ್ಪನೆಯ ವಿಚಾರಧಾರೆಯನ್ನು ಚಂದ್ರಹಾಸನ ಕಥೆಯು ಸಾರುತ್ತದೆ. ಹೀಗೆ ಈ ಕಥೆಯ ಕಥಾ ನಾಯಕ ಚಂದ್ರಹಾಸನ ಸಮಗ್ರ ಜೀವನ ವಿಭಿನ್ನ ಮುಖಗಳ ಪರಿಚಯ ಸ್ವಾರಸ್ಯಕರವಾಗಿ ಅರ್ಥಪೂರ್ಣವಾಗಿ ರಸವತ್ತಾಗಿ ಮನ ಮಿಡಿಯುವಂತೆ ನಿರೂಪಿತವಾಗಿದೆ.

### ೫.೨. ಶಂಕರಗಂಡನ ಹಾಡು

ಹೆಳವನಕಟ್ಟೆ ಗಿರಿಯಮ್ಮನ ಕಥನ ಕಾವ್ಯಗಳಲ್ಲಿ ಮತ್ತೊಂದು ಗಮನ ಸೆಳೆಯುವ ಖಂಡಕಾವ್ಯ, ಶಂಕರಗಂಡನ ಹಾಡು ಎಂಬುದು ಈ ಕಾವ್ಯದಲ್ಲಿಯ 'ಶಂಕರಗಂಡ' ಎಂಬ ಪದವು ಮೊದಲು

ಬಳಕೆಗೊಂಡದ್ದು ಹರಿಹರನ 'ಶಂಕರದಾಸಿಮಯ್ಯನ ರಗಳೆ' ಹಾಗೂ 'ಬಾಹೂರ ಬೊಮ್ಮತಂದೆಯ ರಗಳೆ'ಗಳಲ್ಲಿ ಬಹುಪಾಲು ಹರಿಹರನ ರಗಳೆಯನ್ನೇ ಆಕರವಾಗಿಟ್ಟುಕೊಂಡು ಪುರಾಣ ರಚಿಸಿರುವ ಪಂಡಿತ ಮಲ್ಲಿಕಾರ್ಜುನನು ಇಲ್ಲಿಯೂ ಅವನನ್ನೇ ಅನುಸರಿಸಿದ್ದಾನೆ. ಭೀಮಕವಿ, ಶಾಂತಲಿಂಗದೇಶಿಕ ಮುಂತಾದ ವೀರಶೈವ ಕವಿಗಳು ಈ ಇಬ್ಬರೂ ಶರಣರ ಕಥಾಸಂದರ್ಭಾನುಸಾರವಾಗಿ 'ಶಂಕರಗಂಡ' ಎಂಬ ಪದವನ್ನು ಬಳಸಿದ್ದಾರೆ.[೩೧] ವೈಷ್ಣವ ಕವಯಿತ್ರಿ ಹೆಳವನಕಟ್ಟೆ ಗಿರಿಯಮ್ಮ 'ಶಂಕರ ಗಂಡನ ಹಾಡು' ಎಂಬ ಸ್ವತಂತ್ರ ಕಾವ್ಯವನ್ನು ರಚಿಸಿರುವುದು ವಿಶೇಷವಾಗಿದೆ.

'ಶಂಕರಗಂಡ' ಪ್ರಸಂಗವು ಹರಿಹರನ 'ಶಂಕರದಾಸಿಮಯ್ಯನ ರಗಳೆ'ಯಲ್ಲಿ ಪ್ರಾರಂಭದಲ್ಲಿಯೇ ಅಂದರೆ ಶಂಕರದಾಸಿಮಯ್ಯನು ಜಡೆಯ ಶಂಕರನಿಂಗ ಹಣೆಗಣ್ಣು ಪಡೆದುಕೊಂಡ ಕೂಡಲೆ ಬರುತ್ತಿದ್ದರೆ, ಪಂಡಿತ ಮಲ್ಲಿಕಾರ್ಜುನನಲ್ಲಿ ಕೊನೆಗೆ ಅಂದರೆ ಶಂಕರದಾಸಿಮಯ್ಯನು ಪರಮತ ಪರದೈವಗಳನ್ನು ಸೋಲಿಸಿ ನವಿಲೆಗೆ ಬಂದು ಮುಟ್ಟಿದ ನಂತರ ಚಿತ್ರತವಾಗಿದೆ.

ಭಿಕ್ಷೆಗಾಗಿ ಹೋದ ಶಂಕರದಾಸಿಮಯ್ಯನ ಶಿಷ್ಯ ವಕ್ರಪಾದನಿಗೆ ಬಂದು ಮನೆಯವರು ಹೆಚ್ಚಿದುದೆಂದು ಶಂಕರಗಂಡ ದೇವರೆ ಎನ್ನುತ್ತಾರೆ. ಶಂಕರಗಂಡನೆಂದರೇನು? ಎಂಬ ಆತನ ಪ್ರಶ್ನೆಗೆ ಅವರು 'ಜೋಳ' ಎನ್ನುತ್ತಾರೆ. ವಕ್ರಪಾದನಿಂದ ಇದನ್ನರಿತ ಶಂಕರದಾಸಿಮಯ್ಯನು 'ಶಂಕರಗಂಡನಾಮಂ ಜೋಳ ಕೊಳವೆಂದರಿದುದಿಲ್ಲಾವಿಷ್ಟು ಪರಿಯಂತೆ' ಎಂದು ಕಳವಳಿಸುತ್ತಾನೆ. ಇದನ್ನು ಗಮನಿಸಿದರೆ ಜೋಳಕ್ಕೆ 'ಶಂಕರಗಂಡ' ಎಂದು ಕರೆಯುತ್ತಿದ್ದುದು ಆವರೆಗು ಶಂಕರದಾಸಿಮಯ್ಯನಿಗೂ ಗೊತ್ತಿರಲಿಲ್ಲವೆನಿಸುತ್ತದೆ.

ಜೋಳಕ್ಕೆ 'ಶಂಕರಗಂಡ' ಎಂಬ ಹೆಸರು ಪ್ರಚಾರದಲ್ಲಿ ಬರುವ ಮೊದಲು ಅದನ್ನು ದೇವಧಾನ್ಯ ಶಂಕರ ಧಾನ್ಯ ಎಂಬುದಾಗಿ ಕರೆಯುತ್ತಿದ್ದಂತಿದೆ. ಕ್ರಿ.ಶ.೧೦೫೦ ಯಾದವ ಪ್ರಕಾಶ, ಕ್ರಿ.ಶ.೧೧೬೩ರ ಹೇಮಚಂದ್ರನ ದೇಶಿನಾಮಾ ಮಾಲಾ ಮತ್ತು ಅಭಿದಾನ ಚಿಂತಾಮಣಿ, ಕ್ರಿ.ಶ.೧೩೬೪ರ ಮದನ ಪಾದನ 'ಮದನ ನಿಘಂಟು'ಗಳಲ್ಲಿ ಜೋಳವನ್ನು 'ದೇವಧಾನ್ಯ' ಎಂದು ಕರೆಯಲಾಗಿದೆ.[೩೨] ಕ್ರಿ.ಶ.೧೦೫೦ರಷ್ಟು ಹಿಂದೆಯೇ ಜೋಳವು 'ದೇವಧಾನ್ಯ' ಎಂದು ಕರೆಯಿಸಿಕೊಳ್ಳುತ್ತಿದ್ದುದು ಗಮನಾರ್ಹ ಸಂಗತಿಯಾಗಿದೆ. ಹನ್ನೊಂದನೆಯ ಶತಮಾನದ ಪೂರ್ವಾರ್ಧದವನೆನ್ನಲಾದ ವಜ್ರಭಟ್ಟನ ವೀರಾವಳಿಯಲ್ಲಿ

ಬೇಳಾಗದೆ ನೆಲದರಸರು
ಜೋಳಕ್ಕಾಳಪ್ಪರೆಂದು ಗುರು ಕೈಕೊಂಡಾ
ಜೋಳಮನೆ ಬೆಳೆಯಿಕುಂ ಗಡ
ಜೋಳಕ್ಕಗ್ಗಳದ ಧಾನ್ಯಮುಂ ಪೆರತುಂಟೆ[೩೩]

ಎಂಬ ಪದ್ಯವಂತೂ ತುಂಬಾ ವಿಶೇಷತೆಯಿಂದ ಕೂಡಿದೆ. ಗುರುಗ್ರಹದ ಬಂದಿಂದ ಜೋಳ ಸಮೃದ್ಧವಾಗಿ ಬೆಳೆಯುವುದೆಂದೂ ಅದು ಧಾನ್ಯಗಳಲ್ಲಿಯೇ 'ಅಗ್ಗಳ'ವಾದುದೆಂದೂ ಜೋಳ ಪ್ರಜೆಗಳು ಆಳಾಗುವರೆಂದು

(ಜೋಳವಾಳಿ) ಅರಸರು ಜೋಳವನ್ನೇ ಹೆಚ್ಚು ಬೆಳೆಸುವರೆಂದೂ ಹೇಳುವ ಈ ಪದ್ಯವು ಅಂದು ಧಾನ್ಯಗಳಲ್ಲಿ ಜೋಳಕ್ಕಿದ್ದ ಮಹತ್ವವನ್ನು ಎತ್ತಿ ತೋರುತ್ತದೆ.

ಇಂಥ ಧಾನ್ಯವನ್ನು 'ದೇವಧಾನ್ಯ'ವೆಂದು ಕರೆದಿರುವುದರ ಹಿನ್ನೆಲೆ ಹೀಗಿರಬಹುದು. ಅರಮನೆ ಮುಂತಾದೆಡೆಗಳಲ್ಲಿನ ಸೇವಾ ಪರಿವಾರದವರಿಗೆ ಅವರ ಸೇವೆಗೆ ಪ್ರತಿಯಾಗಿ ಜೋಳವನ್ನೇ ಕೊಡುತ್ತಿರಬೇಕು. ಹಾಗೆಯೇ ದೇವಾಲಯದ ಸೇವಾ ಪರಿವಾರದವರಿಗೂ ಪಡಿಧಾನ್ಯವೆಂದು ಜೋಳವನ್ನೇ ಕೊಡುವ ಪದ್ಧತಿ ಇರಬೇಕು. ಕೊಡುವ ಧಾನ್ಯ ಎಂಬರ್ಥದಲ್ಲಿ ಅದನ್ನು 'ದೇವಧಾನ್ಯ' ಎಂದು ಕರೆದಿರಬೇಕು.

ಶೈವರು ಶಿವದೇವಾಲಯಗಳಲ್ಲಿ ಕೊಡುತ್ತಿದ್ದ ಈ ಜೋಳದ ಪಡಿಗೆ ಶಂಕರಧಾನ್ಯ (=ದೇವಧಾನ್ಯ) ಎಂದು ಕರೆಯುತ್ತಿದ್ದಿರಬೇಕು. ಶೈವರು ಜೋಳಕ್ಕೆ ಅನ್ನುತ್ತಿದ್ದಿರಬಹುದಾದ ಈ ಹೆಸರು ಇತರ ಮತೀಯರಿಗೆ ಅಪರಿಚಿತವಾಗಿರಬೇಕು. ಹರಿಹರನ ಬಾಹೂರಬೊಮ್ಮತಂದೆಯ ರಗಳೆಯಲ್ಲಿ ಸವಣನೊಬ್ಬನು 'ಜೋಳದ ಹೆಸರು ಶಂಕರನಾಮವೆಂತಾಯ್ತು' ಎನ್ನುವಲ್ಲಿ ಇದೇ ಭಾವವು ವ್ಯಕ್ತವಾಗುತ್ತದೆ. ಇದರೊಡನೆ ಹರಿಹರನ ರಗಳೆಯಲ್ಲಿ ಶಂಕರದಾಸಿಮಯ್ಯನು 'ಜೋಳದ ಪೆಸರಂ ನಿನ್ನ ಪೆಸರಾಗಿರ್ದಪುದು ಎನಗರಿದು' ಎನ್ನುವಲ್ಲಿ (ಜೋಳ=ಶಂಕರ) ಜೋಳವನ್ನು 'ಶಂಕರಧಾನ್ಯ'ವೆಂದೇ ಕರೆಯುತ್ತಿದ್ದರೆನಿಸುತ್ತದೆ.

ಇನ್ನು ಶಂಕರ ಧಾನ್ಯವೆನ್ನಲಾಗುತ್ತಿದ್ದ ಜೋಳದ ಹೆಸರು 'ಶಂಕರ ಗಂಡ'ವಾದುದರ ಹಿನ್ನೆಲೆಯನ್ನು ನಾರಸಿಂಹನ ಅನುಭವ ಶಿಖಾಮಣಿಯಲ್ಲಿ ಶಿವ-ಶಿವೆಯರು ತಮ್ಮಲ್ಲಿ ಯಾರ ತೂಕ ಹೆಚ್ಚೆಂದು ತೂಗಿಕೊಳ್ಳುವಲ್ಲಿ ಶಿವೆಯ ತೂಕ ಕಡಿಮೆಯಾಗಲು ಅಲ್ಲಿ ಒಂದು ಜೋಳದ ಕಾಳು ಹಾಕಿ ಅವರಿಬ್ಬರ ತೂಕ ಸರಿದೂಗಿಸಲಾಯಿತು. ಅಂದಿನಿಂದ ಜೋಳಕ್ಕೆ 'ಶಂಕರಗಂಡ'ನೆಂದು ಹೆಸರಾಯಿತು ಎಂದು ಹೇಳಲಾಗಿದೆ. ಜನಪದ ಮೂಲದ್ದಾಗಿರಬಹುದಾದ ಈ ಕಥೆಯಿಂದಾಗಿ ಜೋಳಕ್ಕೆ 'ಶಂಕರ ಗಂಡ' ಎಂಬುದು ರೂಢಿಯಾಗಿರಬೇಕು.[೩೪]

ಬಾಹೂರಬೊಮ್ಮತಂದೆಯ ರಗಳೆಯಲ್ಲಿ 'ಬಿಳಿಯ ಜೋಳದ ರಾಶಿ'ಯನ್ನು ಮುಂದಿಟ್ಟುಕೊಂಡು ವ್ಯಾಪಾರಿಯು 'ಎಲೆಲೆ ಶಂಕರ ಗಂಡನಂ ಕೊಳ್ಳಿರೇ' ಎಂದು ಕೂಗುತ್ತಾನೆ. ಅಂದರೆ ಈ ಪದವು ವ್ಯವಹಾರಿಕವಾಗಿಯೂ ಬಳಕೆಗೊಂಡು ಪ್ರಚಲಿತವಾಗಿತ್ತು ಎಂದು ತಿಳಿದುಬರುತ್ತದೆ. ಆದುದರಿಂದ ಜೋಳವು ಶಿವಮತಾನುಯಾಯಿಗಳಲ್ಲಿ ದೇವಧಾನ್ಯ ಶಂಕರಧಾನ್ಯವೆಂದು ಜನಪದ ಹಾಗೂ ವ್ಯವಹಾರಿಕ ಸ್ತರದಲ್ಲಿ 'ಶಂಕರಗಂಡ' ಎಂದೂ ಪ್ರಚುರವಾಗಿದ್ದಿರಬೇಕು.

ಕಾಲಗತಿಸಿದಂತೆ ಧಾನ್ಯದ ಹೆಸರಾಗಿದ್ದ 'ಶಂಕರಗಂಡ' 'ಶಿವ' ಎಂಬ ಅರ್ಥವನ್ನು ಹೊಂದಿದಂತಿದೆ. 'ಜೋಳದ ಪೆಸರು ಶಂಕರಗಂಡನ ಪೆಸರೆ? ಎಂದು ಶಂಕರದಾಸಿಮಯ್ಯನು ಪ್ರಶ್ನಿಸುವಲ್ಲಿ ಶಂಕರಗಂಡ-ಶಿವ-ಜೋಳ ಎಂಬ ಅರ್ಥಸ್ಫುರಿತವಾಗುತ್ತದೆ. ೧೩ನೆಯ ಶತಮಾನದ ಹರಿಹರನ ರಗಳೆಗಳಲ್ಲಿ

ಶಂಕರದಾಸಿಮಯ್ಯನ ರಗಳೆಯು ಒಂದು ಈ ರಗಳೆ ಮೂರು ಸ್ಥಲಗಳಿಂದ ಕೂಡಿದೆ. ಮೊದಲ ಸ್ಥಲದಲ್ಲಿ ದಾಸಿಮಯ್ಯನು ಶಿವಭಕ್ತಿ ಸ್ವೀಕರಿಸಿ ಈಶ್ವರನಿಂದ ಹಣೆಗಣ್ಣನ್ನು ಪಡೆಯುವವರೆಗಿನ ಪೂರ್ವ ವೃತ್ತಾಂತವಿದೆ. ಎರಡು ಮತ್ತು ಮೂರನೆ ಸ್ಥಲದಲ್ಲಿ ದೇವರ ದಾಸಿಮಯ್ಯನ ಅಹಂಕಾರ ಶಮನ ಕಲ್ಯಾಣದಲ್ಲಿ ನರಸಿಂಹ ವಿಗ್ರಹವನ್ನು ಶಂಕರದಾಸಿಮಯ್ಯನು ಹಣೆಗಣ್ಣಿನಿಂದ ಸುಟ್ಟುಹಾಕಿದ ಮತ್ತು ಅರಸ ಜನಸಿಂಹನ ಅಹಂಕಾರವನ್ನು ಶಮನ ಮಾಡಿದ ಪವಾಡಗಳಿವೆ. ಜೊತೆಗೆ ಮೈಲಾರದೇವನ ಮಹಿಮೆಯನ್ನು ತಗಿಸಿ ಮರುಳ ತಂಡಗಳಿಂದ ಕೊಟ್ಟಣ ಕುಟ್ಟಿಸಿದ ಪವಾಡಗಳೂ ಇವೆ. ಮೊದಲನೆ ಸ್ಥಲದಲ್ಲಿ ಶಂಕರದಾಸಿಮಯ್ಯನ ಸಾಧಕ ಜೀವನದ ಆರ್ಥಭಕ್ತಿ ಹಾಗೂ ವಿನಮ್ರ ಭಾವ ವ್ಯಕ್ತವಾದರೆ ಎರಡು ಮತ್ತು ಮೂರನೆ ಸ್ಥಲಗಳಲ್ಲಿ ಅವನ ಸಿದ್ಧ ಜೀವನದ ಅಗಾಧತೆ ಮತ್ತು ಸ್ಥೈರ್ಯ ವ್ಯಕ್ತವಾಗಿದೆ. ಇವುಗಳ ಜೊತೆಗೆ ತೀರ್ಥಕ್ಷೇತ್ರಾದಿ ಯಾತ್ರೆಗಳ ನಿರಸನ ನಿರಹಂಕಾರಯುತ ಶುದ್ಧ ದಾಸೋಹದ ನೆಲೆ, ಕ್ಷುದ್ರ ದೈವಗಳ ಖಂಡನೆಯೂ ಈ ರಗಳೆಯಲ್ಲಿದೆ.

ಶಿವನ ಅನುಗ್ರಹ ಪಡೆಯಲು ತೀರ್ಥಯಾತ್ರೆ ಮಾಡಬೇಕಾಗಿಲ್ಲ ಎಂಬುದು ಹರಿಹರನ ನಂಬಿಕೆಗಳಲ್ಲಿ ಒಂದಾಗಿತ್ತು. ಆ ನಂಬಿಕೆಯನ್ನು ಪ್ರತಿಪಾದಿಸುವ ಕಥೆಯೊಂದನ್ನು ಶಂಕರ ದಾಸಿಮಯ್ಯನ ರಗಳೆಯಲ್ಲಿ ಹೇಳುತ್ತಾನೆ. ಈ ಕಥೆಯಲ್ಲಿ ಬರುವ ನಾಯಕ ಶಂಕರದಾಸಿಮಯ್ಯ ಆರಂಭದಲ್ಲಿ ಸಾಂಸಾರಿಕ ಸುಖಭೋಗಗಳ ನಡುವೆ ಬದುಕುತ್ತಿದ್ದ ಒಬ್ಬ ಸಾಮಾನ್ಯ ಮನುಷ್ಯ. ಅವನ ಮೊದಲ ಹೆಸರು ಗೋವಿಂದದೇವ, ನಿರಂತರ ಸಾಂಸಾರಿಕ ಸುಖಭೋಗಗಳಿಂದ ಬೇಸತ್ತ ಆತ, ವೈರಾಗ್ಯದ ಬಯಕೆಯಿಂದ ವಾರಣಾಸಿಗೆ ಹೋಗುವ ಮೊದಲು ಅವನ ಊರಿಗೆ ಗಾವುದ ದೂರದ ನವಿಲೆಯಲ್ಲಿನ ಶಿವನಿಲಯವೊಂದಕ್ಕೆ ಹೋಗುತ್ತಾನೆ. ಅಲ್ಲಿನ ರಂಗಮಂಟಪದಲ್ಲಿ ಗಂಗಾಧರನಿಗೆ ನಮಸ್ಕರಿಸಿ ಶಂಕರದಾಸಿಮಯ್ಯನು ಕುಳಿತಿರುವಾಗ ಶರಣ ಸಂಕುಲವು ಶಿವ ಪೂಜಾ ವೈಭವದಲ್ಲಿ ತೊಡಗಿರುವುದನ್ನು ಕಾಣುತ್ತಾನೆ. ಆಗ ಅವನಲ್ಲಿಯೂ ಶಿವಭಕ್ತಿಯ ಸಂಚಾರ ಆರಂಭವಾಗತೊಡಗುತ್ತದೆ. ಆ ಸಂಭ್ರಮದಲ್ಲಿ ವಾರಣಾಸಿಯನ್ನೇ ಮರೆತು ಮತ್ತೆ ತಮ್ಮೂರಿಗೆ ಹೋಗಿ ಜೆಡೆಯ ಶಂಕರದೇವನ ದರ್ಶನ ಮಾಡುತ್ತಾನೇ. ಕುಣಿದು ಕುಪ್ಪಳಿಸಿ ಕಂಪಿಸಿ ಪುಳಕಿಸುತ್ತಾ ಆನಂದ ಪರವಶನಾಗಿ

ಎನಗೆ ವಾರಾಣಸಿಯುಮಮರನದಿಯುಂ ನೀನೆ
ಎನಗೆ ದಿವ್ಯ ಕ್ಷೇತ್ರಮಂತ್ರಂ ತಂತ್ರಂ ನೀನೆ[೩೫]
...............

ಎನ್ನುತ್ತಾ ಶಿವಸ್ತುತಿಗೈಯ್ಯುತ್ತಾನೆ. ಹಗಲು ಇರುಳು ಗಾಳಿ, ಮಳೆ ಬಿಸಿಲೆನ್ನದೆ ಇಂದುಧರನನ್ನು ಅನುದಿನವೂ ಮರೆಯದೆ ನೆನೆಯುತ್ತಾನೆ. ಅವನ ಆರ್ತಭಾವದ ಭಕ್ತಿಗೆ ಮೆಚ್ಚಿ ಶಿವ ಪ್ರತ್ಯಕ್ಷನಾಗಲು

ದೇವ ಕರುಣಿಸಿತಕ್ಕೆ ನೊಸಲಕಣ್ಣಂ ಕೊಟ್ಟು
ದೇವ ಕರತಳವನೆನ್ನುತ್ತಮಾಂಗದೊಳಿಟ್ಟು
ಅಪ್ರತಿಮಗುರುವೆ ಸುರತರುವೆ ಕರುಣಿಪುದೆನಗೆ[೩೬]

ಎಂದು ಬೇಡುತ್ತಾರೆ. ಅಂತೆಯೇ ಶಿವನಿಂದ ನೊಸಲಕಣ್ಣನ್ನು ಪಡೆಯುತ್ತಾನೆ. 'ಜ್ಯೋತಿಯಂ ಜ್ಯೋತಿಯಂ' ಹೊತ್ತಿಸಿದ ರೀತಿಯಲ್ಲಿ ನೊಸಲಕಣ್ಣನ್ನು ಪಡೆಯುವ ಮೂಲಕ ಶಂಕರದಾಸಿಮಯ್ಯನ ಜ್ಞಾನದ ಮಹತ್ವವನ್ನು ನಿರೂಪಿಸುವುದಕ್ಕಾಗಿ ಹಲವು ಸನ್ನಿವೇಶಗಳು ಸೃಷ್ಟಿಯಾಗಿವೆ. ಅಲ್ಲಿ ಮೊದಲೇ ಹೇಳಿದಂತೆ ದಾಸಿಮಯ್ಯನ ಕ್ಷುದ್ರ ದೈವಗಳ ಖಂಡನೆ ನಿರಹಂಕಾರದಿಂದ ಕೂಡಿದ ಶುದ್ಧ ದಾಸೋಹದ ಮಹತ್ವ ಕುರಿತ ಪ್ರತಿಪಾದನೆಯನ್ನು ಕಾಣುತ್ತೇವೆ.

ಅಸಮಾಕ್ಷ ನೀಡಿದ ಸಿಡಿಲೆರಕೆಯಂತಿರುವ ನೊಸಲಕಣ್ಣನ್ನು ಪರೀಕ್ಷಿಸುವ ಸಲುವಾಗಿ ಒಮ್ಮೆ ಶಂಕರದಾಸಿಮಯ್ಯ ನೊಸಲಕಣ್ಣನ್ನು ತೆರೆಯುತ್ತಾನೆ. ಹಾಗೆ ತೆರೆಯುತ್ತಿದ್ದಂತೆಯೇ ಘುಡು ಘುಡಿಸುವ ಜ್ವಾಲೆಗಳೇಳುತ್ತವೆ. ಆ ಜ್ವಾಲೆಗೆ ಸಿಕ್ಕ ವಿಷ್ಣು ಪ್ರತಿಮೆಗಳು, 'ಸಿಕ್ಕನೆ' ಸೀಳುತ್ತವೆ. ಸಪ್ತ ಮಾತೃಕೆಯರು ಉರಿದು ಮಣ್ಣಲ್ಲಿ ಬೀಳುತ್ತಾರೆ. ಸುತ್ತಲಿನ ಪ್ರತಿಮೆಗಳೆಲ್ಲ ಹೇಳ ಹೆಸರಿಲ್ಲದಂತಾಗುತ್ತವೆ. ಆಗ ಶಿವ ಪ್ರತ್ಯಕ್ಷನಾಗಿ

ಪುರವುರಿದು ಜಗವುರಿದು ಧರೆವುರಿವುದೆಲೆ ಮಗನೆ
ನರರೊಬ್ಬರುಳಿಯದಂತಪ್ಪುದಿನ್ನೆಲೆ ಮಗನೆ
ಬೇಡಯ್ಯ, ಬೇಡ[೩೭]

ಎನುತ್ತಾ ಉರಿವಗ್ನಿಯನ್ನು ವಂದಿಸುತ್ತಾನೆ. ಅನಂತರ ಗೋವಿಂದದೇವನಿಗೆ, ಶಂಕರದಾಸಿಮಯ್ಯ ಎಂಬ ಹೆಸರನ್ನಿಟ್ಟು ಲಿಂಗದಲ್ಲಿ ಐಕ್ಯವಾಗುತ್ತಾನೆ. ಶಿವ ಮತ್ತು ದಾಸಿಮಯ್ಯರ ನಡುವಿನ ಅತ್ಯಂತ ಆತ್ಮೀಯ ಸಂಬಂಧ ಮತ್ತು ಅನ್ಯಮತಗಳ ದುರ್ಬಲತೆ ಈ ಭಾಗದಲ್ಲಿ, ವ್ಯಕ್ತವಾಗುತ್ತದೆ.

ನೊಸಲ ಕಣ್ಣನ್ನು ಪಡೆದ ಶಂಕರದಾಸಿಮಯ್ಯ ದೇಶ ಪರ್ಯಟನೆಯಲ್ಲಿ ತೊಡಗುತ್ತಾನೆ. ಗೌಳ, ಲಾಳ, ಮಗಧ, ಮಾಳವ ಮುಂತಾದ ಕಡೆ ಸುತ್ತಿ ಕೊನೆಗೆ ಮುದನೂರಿಗೆ ಬರುತ್ತಾನೆ. ಅಲ್ಲಿ ಗರ್ವದಿಂದ ಮೆರೆಯುತ್ತಿದ್ದ ಜೇಡರ ದಾಸಿಮಯ್ಯನ ಅಹಂಕಾರವನ್ನು ನಿರಸನಗೊಳಿಸುತ್ತಾನೆ. ತವನಿಧಿಯುಂಟೆಂಬ ಗರ್ವದಿಂದ ಮೆರೆಯುತ್ತಿದ್ದ ದಾಸಿಮಯ್ಯ 'ಶೀತಕರನಿಗೆ ತಂಪನ್ನು ನೀಡುವ ಹಾಗೆ 'ಎನ್ನಮನೆಯೊಳು ಸುಕುಮಾರ ಧಾನ್ಯ ಮುಂಟು ಇಲ್ಲಿ ನೀ ವಿರ್ಪನ್ನೆವರಂ ಧಾನ್ಯಕ್ಕೆ ಪೋಗಲಾಗದಾವ ನಿರೋಧಂ ಬೇಡ ಹತ್ತಿಪ್ಪತ್ತು ಸಾವಿರ ನೆಲ್ಲಹೇರಂ ಕಳುಹುವೆಂ' ಎಂದು ತನ್ನ ಸಿರಿಯನ್ನು ಶಂಕರದಾಸಿಮಯ್ಯನಿಗೆ ತಿಳಿಸುತ್ತಾನೆ. ಆಗ ಶಂಕರದಾಸಿಮಯ್ಯನು ತಿರಿದಾಡಿದನ ಮಕ್ಕಳೆ ಸಿರಿಯಲ್ಲಿಯದೆಲೆ ದಾಸ? ನೀಂ ಕುಡುವವಂ ನಾಂ ಕೊಳುವನನುಂಟು ಎಂದು ಕಟಕಿಯನ್ನಾಡುತ್ತ ಬಿಡಾರದ ಮನೆಯ ಮುಂದಿದ್ದ

ತಿಪ್ಪೆಯನ್ನು ಆತನಿಂದ ತೆಗೆಯಿಸಿ ಕಡವರವನ್ನು ತೋರಿ ಬೇಕಾದಷ್ಟನ್ನು ತೆಗೆದುಕೊಳ್ಳುವಂತೆ ಸೂಚಿಸುತ್ತಾನೆ. ಶಂಕರದಾಸಿಮಯ್ಯನ ಶಕ್ತಿಸಾಮರ್ಥ್ಯವನ್ನರಿತ ದುಗ್ಗಳೆ (ಜೇಡರ ದಾಸಿಮಯ್ಯನ ಹೆಂಡತಿ) ಶಿವ ಶಿವ ಕಾಲಾಗ್ನಿಯಂ ಕೆಣಕುವರೆ? ನೊಸಲ ಕಣ್ಣ ಮುಸುಂಕಂ ತೆಗೆವರೆ?... ಶಿವಾರ್ಚನ ಸಂಪನ್ನ, ಕರುಣಿಸು ಕರುಣಿಸೆಂದು ಪತಿಯ ಅಪರಾಧವನ್ನು ಮನ್ನಿಸುವಂತೆ ಕೇಳಿಕೊಳ್ಳುತ್ತಾಳೆ. ಹೀಗೆ ದೇವರ ದಾಸಿಮಯ್ಯನ ಗರ್ವವನ್ನು ಭಂಗಗೊಳಿಸಿ ಶಂಕರದಾಸಿಮಯ್ಯ ಮುದನೂರಿನಲ್ಲಿರುತ್ತಾನೆ. ಇಲ್ಲಿ ದುಗ್ಗಳೆ ತನ್ನ ಪತಿಯ ಅಪರಾಧವನ್ನು ಮನ್ನಿಸುವಂತೆ ಶಂಕರದಾಸಿಮಯ್ಯನನ್ನು ಪ್ರಾರ್ಥಿಸುವ ದೃಶ್ಯ ಬಹಳ ಸುಂದರವಾಗಿ ಮೂಡಿಬಂದಿದೆ. ಅದು ದೇವರ ದಾಸಿಮಯ್ಯನಿಗಿಂತಲೂ ದುಗ್ಗಳೆಯೇ ಶ್ರೇಷ್ಠ ಎಂದು ಗುರುತಿಸುವುದರ ಜೊತೆಗೆ ಸ್ತ್ರೀಯ ಅಂತರಂಗದ ಭಕ್ತಿಯನ್ನು ಎತ್ತಿ ಹಿಡಿದು ಪ್ರತಿಪಾದಿಸುತ್ತದೆ.

ಮುಂದೆ ಇಂಥದ್ದೇ ಸಂದರ್ಭದಲ್ಲಿ ಅರಸ ಜಯಸಿಂಹರಾಯನ ಗರ್ವವನ್ನು ಶಮನಗೊಳಿಸುತ್ತಾನೆ. ದೇವಕಳಾಸಾನಿಧ್ಯಯಾದ ನರಸಿಂಹ ಪ್ರತಿಮೆಯಂ ನಿಮ್ಮ ನೊಸಲಗಣ್ಣಿಂ ನೋಡಲು ಘನ ಪ್ರತಿಷ್ಠೆಯಾದಪುದು ನೋಡಿ ಕರುಣಿಸಬೇಹುದೆನೆ ಎಂದು ಕಟಕಿಯಾಡಿದ ಜಯಸಿಂಹರಾಯನಿಗೆ ತನ್ನ ನೊಸಲಕಣ್ಣನ್ನು ತೆರೆಯುವ ಮೂಲಕ ನರಸಿಂಹ ಪ್ರತಿಮೆಯನ್ನೇ ಸುಟ್ಟುಹಾಕುತ್ತಾನೆ. ಶಂಕರದಾಸಿಮಯ್ಯನ ಈ ಸಾಮರ್ಥ್ಯಕ್ಕೆ ಬೆರಗಾದ ಜಯಸಿಂಹ ಮತ್ತು ಇತರ ವೈಷ್ಣವರೆಲ್ಲ ದಾಸಿಮಯ್ಯನ ಚರಣದಲ್ಲಿ ಬಿದ್ದು ಮನ್ನಿಸುವಂತೆ ಕೇಳಿಕೊಳ್ಳುತ್ತಾರೆ. ಹರಿಹರನು ಜಯಸಿಂಹನ ಕಥೆ ಹೇಳುವ ಮೂಲಕ ಶಂಕರದಾಸಿಮಯ್ಯನು ವೈಷ್ಣವ ಮತ ಖಂಡನೆಯಲ್ಲಿ ತೊಡಗಿದ್ದನೆಂಬುದನ್ನು ವೈಷ್ಣವ ಮತ ವಿರೋಧಿ ಎಂಬುದನ್ನು ಪ್ರಸ್ತುತಪಡಿಸುತ್ತಾನೆ.

ಕ್ಷುದ್ರ ದೈವಗಳ ಖಂಡನೆಯನ್ನು ಹರಿಹರ ಈ ರಗಳೆಯಲ್ಲಿ ಚಿತ್ರಿತವಾಗಿದೆ. ಶಂಕರ ದಾಸಿಮಯ್ಯ ಒಮ್ಮೆ ಶಿವದಾಸಿಯೊಡನೆ ಹೆಂಬೇರ ಪಟ್ಟಣಕ್ಕೆ ಬರುತ್ತಾನೆ. ಆ ಪಟ್ಟಣದ ಪ್ರಮುಖ ದೇವರೆಂದರೆ 'ಮೈಲಾರ ದೇವ' ದೇವರ ಬಗ್ಗೆ ವಿಶೇಷ ಭಕ್ತಿ ಗೌರವಗಳೂ ಜನರಲ್ಲಿ ತುಂಬಿಕೊಂಡಿರುತ್ತವೆ. ಆದರೆ ಶಂಕರದಾಸಿಮಯ್ಯ ಮೈಳಂಗೆ ಎಂಬುವಳು ಮೈಲಾರದೇವನಿಗೆ ಅರ್ಪಿಸಲು ನೀಡಿದ ವೀಳಯವನ್ನು ತಾನೇ ಭೋಗಿಸಿದುದಲ್ಲದೆ ತನ್ನ ಬಾಯ ತಂಬುಲವನ್ನೇ ಮೈಲಾರದೇವನಿಗೂ ಇಕ್ಕಿ ದೇವರ ಪಾವಿತ್ರ್ಯವನ್ನು ನಾಶ ಮಾಡುತ್ತಾನೆ. ವಿಷಯ ತಿಳಿದ ಹೆಂಬೇರ ಪಟ್ಟಣದ ಜನ ಬೆರಗಾಗಿ ಈ ಚೋದ್ಯವನ್ನು ನೋಡಲು ನೆರೆಯುವರು. ಆ ಸಂದರ್ಭದಲ್ಲಿ ಮೈಲಾರ ದೇವರು ಶಂಕರದಾಸಿಮಯ್ಯನ ಹಿಂದೆ ಕೊಡೆ ಹಿಡಿದು ನಡೆಯುತ್ತಿರುವುದನ್ನು ಕಂಡು ಅಚ್ಚರಿಪಡುತ್ತಾರೆ. ಬೇಡವೆಂದರೂ ಬಿಡದೆ

> ದೇವ ಈ ಕೊಡೆಯೆನಗೆ ತೊಡೆವೆನಗೆ ಶಂಕರಾ
> ದೇವ ಈ ಕೊಡೆಯನಾಂ ಕೊಡೆ ಬಿಡೆಂ ಶಶಿಧರಾ[೬೮]

ಎನ್ನುತ್ತಾ ಮೈಲಾರದೇವ ಶಂಕರದಾಸಿಮಯ್ಯನ ಹಿಂದೆ ನಡೆಯುತ್ತಾನೆ. ಲೋಕವೇ ಪೂಜಿಸುತ್ತಿದ್ದ ದೈವವೊಂದು ಸಾಮಾನ್ಯ ಮನುಷ್ಯನಂತೆ ಕಾಣುವ ಶಿವಾನುಗ್ರಹಿಯಾದ ಶಂಕರದಾಸಿಮಯ್ಯನ ಹಿಂದೆ ನಡೆಯುವ ದೃಶ್ಯ ದಾಸಿಮಯ್ಯನ ಮಹಿಮೆಯ ಬಣ್ಣನೆಯಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಹಾಗೆಯೇ ಇನ್ನೊಂದು ಪ್ರಸಂಗದಲ್ಲಿ ಬೆನ್ನು ಹತ್ತಿದ ಭೈರವನನ್ನು ಉದ್ಧರಿಸಿ ಊರ್ಜಿತಗೊಳಿಸುತ್ತಾನೆ. ಕೊನೆಯದಾಗಿ ಮಾರಿ ಮಸಣಿಗಳಿಂದ ಕೊಟ್ಟಣ ಕುಟ್ಟಿಸುವ ಪವಾಡವೊಂದು ಬರುತ್ತದೆ. ಈ ಪವಾಡ ಶಿವನ ಬೆಂಬಲವುಳ್ಳ ಭಕ್ತನಿಗೆ ಈ ಲೋಕದಲ್ಲಿ ಅಸಾಧ್ಯವೆನ್ನವಂಥದ್ದು ಯಾವುದೂ ಇಲ್ಲ ಎಂಬುದನ್ನು ತಿಳಿಸುತ್ತದೆ. ಮಾರಿ, ಮಸಣಿಯರೆಲ್ಲ ಒಂದೆಡೆ ಸೇರಿ ಭತ್ತ ಕುಟ್ಟುವ ದೃಶ್ಯ, ಅತ್ಯಂತ ನೈಜವಾಗಿ ಚಿತ್ರಣಗೊಂಡಿದೆ. ಹೀಗೆ ಶಿವನ ಕಾರುಣ್ಯ ಪಡೆದ ಶಂಕರದಾಸಿಮಯ್ಯ ಲೋಕದಲ್ಲೆಲ್ಲಾ ಸಂಚರಿಸಿ ಶಿವ ಮಹಿಮೆಯನ್ನು ಮೆರೆಯುತ್ತಾನೆ. ಶಿವನ ಮಹಿಮೆಯನ್ನು ಸಾರುವ ಒಂದು ಅಂಶ ಹರಿಹರನ ಶಂಕರದಾಸಿಮಯ್ಯನ ರಗಳೆಯಲ್ಲಿ ಪ್ರಮುಖವಾಗಿ ಮಾಡಿಬಂದಿದೆ.

೧೮ನೆಯ ಶತಮಾನದ ಹೆಳವನಕಟ್ಟೆ ಗಿರಿಯಮ್ಮನ ಕಾವ್ಯ 'ಶಂಕರಗಂಡನ ಹಾಡು' ಶಿವ ಸಂಬಂಧಿಯಾಗಿದೆ. ಪ್ರಾಯಶಃ ಈ ಹಾಡಿಗೆ ಹರಿಹರನ 'ಗಿರಿಜಾಕಲ್ಯಾಣ', ಹರಿಹರನ 'ಶಂಕರದಾಸಿಮಯ್ಯನ ರಗಳೆ', ನಂಜುಂಡ ದೇವ ಕವಿಯ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರದ 'ಕಾಮ ಮದ ಪ್ರಹಾರಿ' ಎಂಬ ಕಥೆಗಳು ಪ್ರಭಾವ ಬೀರಿವೆ. ವೈದಿಕ ರಾಮಾಯಣ, ಮಹಾಭಾರತ, ಭಾಗವತ, ಪುರಾಣಗಳನ್ನು ಅಧ್ಯಯನ ಮಾಡಿದ ಗಿರಿಯಮ್ಮನಿಗೆ ವೀರಶೈವ ಸಾಹಿತ್ಯದ ತಿಳಿವಳಿಕೆ ಇತ್ತೆಂಬುದು ಇದರಿಂದ ತಿಳಿಯುತ್ತದೆ.

ಹೆಳವನಕಟ್ಟೆ ಗಿರಿಯಮ್ಮ 'ಶಂಕರ ಗಂಡನ ಹಾಡ'ನ್ನು ಸಾಂಗತ್ಯದ ಮಟ್ಟುವಿನಲ್ಲಿ ಬರೆದಿದ್ದಾಳೆ. ಈ ಹಾಡು ೬೨ ನುಡಿಗಳಿಂದ ಕೂಡಿದೆ. ಇದರ ಕಥಾವಸ್ತು ಶಿವನಿಂದ ಕಾಮನ ಗರ್ವಭಂಗ ಮಾಡುವುದಾಗಿದೆ. ಈ ಕಾವ್ಯದಲ್ಲಿನ ಕಥೆ ಹೀಗಿದೆ.

ಗಿರಿಜೆಯ ವರಸುತ ಕರಿಮುಖಗೊಂದಿಸಿ
ಸರಸ್ವತಿ ಗಭಿನಂದಿಸುವೆ
ಪರಮ ದಯಾರು ಹೆಳವನಕಟ್ಟೆ ರಂಗಯ್ಯ
ಒಡೆಯನು ನಿನ್ನ ಮನದೊಡೆಯ[೩೯]

ಎಂದು ಗಣೇಶ, ಸರಸ್ವತಿಯರ ಸ್ತುತಿಯಿಂದ ಪ್ರಾರಂಭವಾಗುವ ಈ ಹಾಡು ತಾನಾಗಿ ಶಿವ ಶಂಕರಗಂಡನ ತಂಗಿಗೆ ವಿವಾಹ ಮಾಡೋ ಸಂಭ್ರಮದ ಮತ್ತು ತಂಗಿಯ ಮದುವೆಯಾದ ನಂತರ ಭಾವ ಮೈದುನರ ಕಥೆಯನ್ನು ಕುರಿತದ್ದಾಗಿದೆ. ತ್ರೈಲೋಕ್ಯ ವಂದ್ಯ, ಕೈಲಾಸಾಧಿಪತಿ ಶಂಕರಗಂಡನೆಂದರೆ ಶಿವ ಅವನ ಪ್ರೀತಿಯ ತಂಗಿ ಕೋಗಿಲೆಯಂತೆ ಹಾಡುತ್ತಾ ಗಿಳಿಯಾಡಿಸುತ್ತಾ ಚಿನ್ನದ ಮಣೆಯ ಮೇಲೆ ಕುಳಿತು

ಪಗಡೆಯಾಡುತ್ತಾ ಕಾಲ ಕಳೆಯುತ್ತಿದ್ದಾಳೆ. ನವ ಲಾವಣ್ಯವತಿಯಾದ ತಂಗಿಗೆ ಮನ್ಮಥನೇ ಸರಿಯಾದ ವರನೆಂದು ಆಲೋಚಿಸಿ ಬುದ್ಧಿವಂತರನ್ನು ಮನ್ಮಥನಲ್ಲಿಗೆ ಕಳಿಸುತ್ತಾನೆ. ರತಿಯ ಚೆಲುವನ್ನು ಕೇಳಿದ್ದ ಮನ್ಮಥನಿಗೂ ಮನದಲ್ಲಿ ಆಸೆ ಉಂಟಾಗಿ ಕೈಲಾಸ ಪುರಕ್ಕೆ ಬರುತ್ತಾನೆ. 'ಹೊಂಬಣ್ಣದ್ದರಿವಾಣದೊಳಗೆ ತಾಂಬೂಲವತಂದಿಡುವರು ಮನ್ಮಥಗೆ' ಸ್ವಾಗತಿಸಿ ಉಪಚರಿಸುತ್ತಾರೆ. ಮನ್ಮಥನೇ ಮುಂದಾಗಿ ವಿವಾಹದ ಪ್ರಸ್ತಾಪ ಮಾಡುತ್ತಾನೆ. ಆಗ ಶಿವ ಮತ್ತು ಕಾಮನ ನಡುವೆ ನಡೆಯುವ ಮಾತುಕತೆ, ಬಹು ಸ್ವಾರಸ್ಯಕರವಾಗಿದ್ದು, ಆಡು ಮಾತುಗಳಲ್ಲಿ ಸಂಭಾಷಣೆಯಂತೆ ಮೂಡಿ ಬಂದಿದೆ.

ಬಲ್ಲಿದರು ನೀವು ಬಹು ಪರಾಕ್ರಮಿಗಳು
ಮಲ್ಲಿಗಿಸರ ಕಬ್ಬು ಬಿಲ್ಲು
ಸಲ್ಲದು ನಿಮ್ಮೊಳು ಸಲಿಗಿ ನಮಗೆಂದು ಬಲ್ಲ
ಹಿರಿಯರು ಹೇಳುವರು
ಸರ್ವ ಲಕ್ಷಣವುಳ್ಳ ಸರಸಿಜನೇತ್ರೆಯ
ಒಬ್ಬಳೇ ರತಿ ನಮ್ಮ ತಂಗಿ
ಹಬ್ಬ ಹುಣ್ಣಿಮೆಗೆ ಕಳಿಸದೆ ನಮ್ಮನೆಗೆ
ನಿರ್ಬಂಧ ಮಾಡುವಿರೆಂದ
ಅನುಮಾನ ಮಾಡುವುದೇಕೋ ನಿ ಇಷ್ಟೊಂದು
ಅವಳಿಗೆ ಸ್ವಾತಂತ್ರವಿಲ್ಲೇನು
ನೆನೆದಾಗ ಕಳುಹುವೆ ನಿಮ್ಮ ಮನೆಗೆಂದು
ಮನಸಿಜ ನುಡಿದ ದೈನ್ಯದಲಿ[೪೦]

ಪ್ರೀತಿಯ ತಂಗಿಯ ವಿವಾಹವಾದ ಮೇಲೆ ಆಗಾಗ ಹಬ್ಬ ಹುಣ್ಣಿಮೆಗೆ ತನ್ನ ಮನೆಗೆ ಬರುತ್ತಿರಬೇಕೆಂಬ ಇಚ್ಛೆ ಅಣ್ಣ ಶಂಕರಗಂಡನಿಗೆ ಬೇಕಾದಾಗ ತವರುಮನೆಗೆ ಹೋಗಿ ಬರುವ ಸ್ವಾತಂತ್ರ್ಯ ಹೆಣ್ಣಾಗಿರಬೇಕೆಂಬ ಆಧುನಿಕ ವಿಚಾರ ಗಿರಿಯಮ್ಮನಿಗೆ ಇತ್ತೆಂದು ತೋರುತ್ತದೆ. ಕೊನೆಗೆ ಶಂಕರಗಂಡ ರಾಶಿಕೂಟ ನೋಡಿ ಶುಭಲಗ್ನದಲ್ಲಿ ರತಿ-ಮನ್ಮಥರ ವಿವಾಹ ಮಾಡಿ ಅನೇಕ ಬಳುವಳಿಗಳನ್ನು ಕೊಟ್ಟು ವಿಲಾಸ ಪಟ್ಟಣಕ್ಕೆ ಕಳಿಸಿ ಕೊಡುತ್ತಾನೆ. ಕೆಲವು ದಿನಗಳಾದ ಮೇಲೆ ಶಂಕರಗಂಡ ತಂಗಿಯನ್ನು ನೋಡಬೇಕೆಂದು ಹೋಗುತ್ತಾನೆ.

ಬಿಗಿದು ಸುತ್ತಿದ ದೊಡ್ಡ ಚೆಂಡಿಯ ಬೆನ್ನಿಗೆ
ಬಿಗಿದ ನಾಡಗಂಬಳಿಯ
ಹೆಗಲ ಮೇಲಿನ ಬಾರಿಕೋಲು ಮನ್ಮಥರಾಯ
ನಗುವಂತೆ ಮಾಡಿ ರೂಪವನು[೪೧]

ಬಿಗಿದು ಸುತ್ತಿದ್ದ ದೊಡ್ಡ ಚೆಂಡಿನಂತಿದ್ದ ತಲೆಯ ಮೇಲಿನ ರುಮಾಲು ಬೆನ್ನಿನ ಮೇಲೆ ಬಿಗಿದಿದ್ದ ಕಂಬಳಿ ಹೆಗಲ ಮೇಲಿನ ಬಾರಿಕೋಲು ಕಂಡು ಮನ್ಮಥನು ಶಿವನ ವೇಷವನ್ನು ರತಿಯಲ್ಲಿ ಅಪಹಾಸ್ಯ ಮಾಡಿ ನುಡಿಯುತ್ತಾನೆ.

ನೋಡೆಲೆ ರತಿ ನಿನ್ನ ಒಡಹುಟ್ಟಿದಣ್ಣನು
ರೂಢಿಯೊಳಗೆ ಅತಿ ಚೆಲುವ
ಗಂಡು ಕೆರವ ಮೆಟ್ಟಿ ಗಮಕದಿ ಬರತಾನ ನೋಡೆಂದು
ಸತಿಗೆ ತೋರಿದನು.[೪೨].ಕೂಡಲೆ ರತಿ

ಬಡವನಲ್ಲವೊ ಆತ ಬಹು ಪರಾಕ್ರಮಿ
ಒಡಹುಟ್ಟಿದಣ್ಣ ತಾ ಮುನಿಯೆ
ಕೆಡುವುದೋ ನಮ್ಮ ಐಶ್ವರ್ಯ ಆತನಗೊಡವೆ
ನಮಗೆ ಬೇಡವೆಂದ್ನು[೪೩]

ಬಹು ಪರಾಕ್ರಮಿಯಾದ ನಮ್ಮಣ್ಣನನ್ನು ಹೀಯಾಳಿಸಬೇಡ ಎಂದು ರತಿ ಇಷ್ಟು ಹೇಳಿದರೂ, ಮದನ ಶಿವನನ್ನು 'ತಲೆಯೆತ್ತಿ ನೋಡಲಿಲ್ಲ, ಆತನ ಕೂಡ ನಗುಮುಖದಿಂದ ಮಾತನಾಡಲಿಲ್ಲ' ಕೊನೆಗೆ ಶಿವನೇ ತಂಗಿಯನ್ನು ಕಳುಹಿಸಿಕೊಡುವಂತೆ ಮನ್ಮಥನನ್ನು ಕೇಳಿದಾಗ

ಹೂವಿನ ಮಂಚ ಪಂಚಭಕ್ಷ್ಯ ಪರಮಾನ್ನವುದಾವಾಗ
ನಮ್ಮನೆಯಲಿ
ಉಣ್ಣಲಾರಳು ಜೋಳದನ್ನವ ನಮ್ಮಾಕೆ
ನಾವೀಗ ಕಳಿಸುವ್ವೋರಲ್ಲ[೪೪]

ಎಂದು ಅಹಂಕಾರದಿಂದ ನುಡಿಯುತ್ತಾನೆ.

ಲಕ್ಷ್ಮಿದೇವಿ ಭಾರತಿದೇವಿ ಗೌರಿಯರು
ತೌರುಮನೆಯ ಹಾರೈಸುವರು
ನಮ್ಮ ಮನೆಯಲ್ಲಿದ್ದ ಅಂಬಲಿಯನ್ನೇ
ಉಂಡು ಸಂಭ್ರಮದಿಂದ ಬಾಹೋಳೆಂದ
ಸಿರಿ ಮುಡಿಯ ಮೇಲೆ ಹುಲ್ಲು ಹೊರಿಸುವೆನು
ಕರುವ ಕಾಯಿ ನಮ್ಮ ಮನೆಯ
ಅರಿವ ಉಡಿಸಿ ಮೂರು ಬೊಗಸೆ ಅಂಬಲಿಯನ್ನು
ಮರೆಯದೆ ಹೊಯ್ಸುವೆನೆಂದ

ಬಹಳ ಮಾತಾಡೋದು ಯಾಕೋ ನಿ ಇಷ್ಟೊಂದು
ಜೋಳವ ಕೊಂಡು ಹೋಗೆನಲು
ಬೇಡವೊ ಕಾಮ ನಿನ್ನ ಐಶ್ವರ್ಯವ ಹಾಳು
ಮಾಡುವೆ ನೊಂದು ಗಳಿಗೆಯಲಿ[೪೫]

ಗೌರಿ, ಲಕ್ಷ್ಮಿ, ಭಾರತಿಯರೆಲ್ಲ ತಮ್ಮ ತವರು ಮನೆಯ ಅಂಬಲಿಯನ್ನು ಕುಡಿಯಲಿಲ್ಲವೆ ಎಂದು ಕೇಳಿದಾಗ ಮನ್ಮಥನು ಬಹಳ ಮಾತಾಡೋದು ಯಾಕೋ ನಿ ಇಷ್ಟೊಂದು ಜೋಳವ ಕೊಂಡು ಹೋಗು' ಎಂದು ತಿರಸ್ಕಾರದಿಂದ ನುಡಿಯುತ್ತಾನೆ. ಆಗ ಶಿವನು ಅದೃಶ್ಯನಾಗುತ್ತಾನೆ. ಕೂಡಲೆ ಶಿವ ಮನ್ಮಥನಿಗೆ ಬುದ್ಧಿ ಕಲಿಸಲು ಇದೇ ಒಳ್ಳೆಯ ಅವಕಾಶವೆಂದು ಭಾವಿಸಿ ಅವನ ಸಕಲ ಸಂಪತ್ತನ್ನು ಕಳೆದು ನಿರ್ಗತಿಕನನ್ನಾಗಿ ಮಾಡುತ್ತಾನೆ.

ಹೊಟ್ಟೆ ಹಸಿದಿತು ಭೋಜನ ಮಾಡುವೆನೆಂದರೆ
ಅಟ್ಟ ಅಡಿಗೆ ಮನೆಯೊಳಿಲ್ಲ
ಕುಟ್ಟಿದ ಭತ್ತ ಮನೆಯೊಳಗಿಲ್ಲ ಬಿಟ್ಟು
ಹೋಯಿತು ಮಾರ್ಬಲವು

ಮಂದಗಮನೆ ಮೆಲ್ಲಡಿಯ ನಿಡುವಳಂದು ಕಂದಿತು
ವರನಿಗೆ ಮುಖವು
ಕಂದರ್ಪ ಬಾಹ ದಾರಿಯಲಿ ಶಂಕರಗಂಡ ಒಂದು
ಹೊಲವ ನಿರ್ಮಿಸಿದ.[೪೬]

ಕೂಡಲೆ ಮನ್ಮಥನಿಗೆ ದಾರಿದ್ರ್ಯ ಬೆನ್ನಟ್ಟಿ ಕಾಡಿಸುತ್ತದೆ. ಹೊಟ್ಟೆ ಹಸಿದಿತು ಭೋಜನ ಮಾಡೋಣವೆಂದರೆ ಅಟ್ಟಡಗಿ ಮನೆಯೊಳಗಿಲ್ಲ. ಕುಟ್ಟಿದ ಭತ್ತ ಮನೆಯೊಳಿಲ್ಲ, ಪರದೇಶಿಯಂತೆ ಕಾಮನು ರತಿಯೊಡನೆ ದೇಶಾಂತರ ಹೋಗುತ್ತಾನೆ. ಶಿವನು ದಾರಿಯಲಿ ಒಂದು ಹೊಲ ನಿರ್ಮಿಸುತ್ತಾನೆ. ಹಸಿದ ಕಾಮ ಹೊಲದ ಬೆಳೆಗೆ ಕೈಯಿಕ್ಕುತ್ತಾನೆ. ಶಿವ ಕವಣೆ ಕಲ್ಲಿಂದ ಹೊಡೆದು ಕೇಳುತ್ತಾನೆ. ನಿಮ್ಮಪ್ಪನ ಹೊಲವೊ ಹೇಳೆನುತ ದರ್ಪದಿಂದಲಿ ಶಂಕರಗಂಡ ನಿಗ್ರಹಿಸೆ ಸೊಪ್ಪಿಯ ಮರೆಯಲ್ಲಡಗಿದನು. ಕೊನೆಗೆ

ನೆರೆ ಹೊರೆಯವರ ಮನ್ಮಥನೆಂದು ಕರೆವೋರು
ಪರದೇಶಿ ತಾನೆಂದು ನುಡಿದ
ಕರುಗಳ ಕಾಯಿ ಮೂರು ಬೊಗಸೆ ಅಂಬಲಿಯನ್ನು
ಮರೆಯದೆ ಹೋಯ್ಸುವೆನೆಂದ[೪೭]

ಕೊನೆಗೆ ಶಂಕರನು ಕಾಮನನ್ನು ಕರುಕಾಯಲು ನೇಮಿಸಿಕೊಂಡು ಒಂದೊಂದು ಬೊಗಸೆ ಅಂಬಲಿಯನ್ನು ಹೊಯಿಸುತ್ತಾನೆ. ಅವನ ಕಷ್ಟವನ್ನು ನೋಡಲಾರದೆ ರತಿ ದೇವಿ ಕಣ್ಣಲ್ಲಿ ಉದಕವ

ತುಂಬಿ ಇನ್ನಾದರೂ ಬಿಡಿಸೆನುತ ಅಣ್ಣನಿಗೆ ಬೇಡಿಕೊಂಡು ಭಿನ್ನೈಸುತ್ತಾಳೆ. ಮನಕರಗಿದ ಶಂಕರ ಮತ್ತೆ ಪುನಃ ಐಶ್ವರ್ಯ, ಮಾರ್ಬಲ ಎಲ್ಲವೂ ಮನ್ಮಥನಿಗೆ ದೊರೆಯುತ್ತವೆ.

ಮೇಲಿನ ಕಥೆಯಲ್ಲಿ ಜೋಳ, ಜೋಳದ ಅನ್ನ, ಅಂಬಲಿ ಇವುಗಳ ಪ್ರಸ್ತಾಪ ಬಂದಿದೆಯಾದರೂ 'ಶಂಕರಗಂಡ' ಎಂಬುದನ್ನು ಎಲ್ಲ ಗಂಡರ ಗಂಡ 'ಶಿವ'ನಿಗೆ ಅನ್ವಯಿಸಿ ಹೇಳಿದೆ. ಹಿಂದಿನ ಕಥೆಗಳಂತೆ ಈ ಕಥೆಯಲ್ಲೂ ಶಿವನಿಗೂ ಜೋಳಕ್ಕೂ ಇರುವ ಸಂಬಂಧವನ್ನು ಕಾಣಬಹುದು. ಹೀಗೆ 'ಶಂಕರಗಂಡ' ಪದವು ಒಟ್ಟು ಎರಡು ಅರ್ಥದಲ್ಲಿ ಅಂದರೆ ಜೋಳ-ಶಂಕರಗಂಡ, ಶಿವ-ಶಂಕರಗಂಡ ಎಂಬರ್ಥದಲ್ಲಿ ಬಳಕೆಗೊಂಡಿರುವುದನ್ನು ಕಾಣಬಹುದು.

ಶಂಕರಗಂಡನ ಹಾಡಿನ ವಸ್ತು ಶಿವನಿಂದ ಕಾಮನ ಗರ್ವಭಂಗ ಈ ಕಥಾವಸ್ತು ಯಾವ ಶಿಷ್ಟ ಪುರಾಣದಲ್ಲೂ ಕಂಡುಬರುವುದಿಲ್ಲ. ಆದರೆ ಪಾತ್ರಗಳ ಹೆಸರು ಪುರಾಣದಲ್ಲಿ ಕಂಡುಬರುತ್ತದೆ. ಇಲ್ಲಿನ ಪ್ರಮುಖ ಪಾತ್ರಗಳು ಶಿವ ಕಾಮ(ಮನ್ಮಥ) ಮತ್ತು ರತಿ ಶಿವನು ತನ್ನ ತಂಗಿ ರತಿಯನ್ನು ಮನ್ಮಥನಿಗೆ ಕೊಟ್ಟು ಮದುವೆ ಮಾಡುವ ಪ್ರಸಂಗ ಮತ್ತು ನಂತರದಲ್ಲಿ ಶಿವನಿಂದ ಮನ್ಮಥನ ಗರ್ವಭಂಗ ಇಲ್ಲಿನ ಕಥಾವಸ್ತು. ಪ್ರಸ್ತುತ ಕತೆಯಲ್ಲಿ ಶಿವನು ನಾಯಕನಿಗೆ ಪ್ರತಿಸ್ಪರ್ಧಿಯಾಗುವಂತೆಯೇ ದಾನಿಯೂ ಪರೀಕ್ಷಕನೂ ಆಗಿದ್ದಾನೆ. ಇದು ಶಿವ ಮತ್ತು ಮನ್ಮಥನ ಸಂಬಂಧವನ್ನು ಮಾತ್ರವೇ ಹೇಳದೆ ಎರಡು ವರ್ಗಗಳ ಸಂಘರ್ಷವನ್ನು ದಾಖಲಿಸುತ್ತದೆ.

ಇಲ್ಲಿನ ಕಥಾನಾಯಕ ಮನ್ಮಥನು ಒಪ್ಪಿದ ಷರತ್ತುಗಳನ್ನು ಮೀರುವುದರಿಂದ ಹಲವಾರು ಪರೀಕ್ಷೆಗಳಿಗೆ ಗುರಿಯಾಗುತ್ತಾನೆ. ಇದಲ್ಲದೆ ನಾಯಕನ ದುರ್ಗುಣ ಮತ್ತು ಅಹಂಕಾರಗಳೂ ಕೂಡ ಇದಕ್ಕೆ ಕಾರಣವಾಗಿವೆ. ತನ್ನ ಅಹಂಕಾರದಿಂದಾಗಿ ಎಲ್ಲ ಸಂಪತ್ತನ್ನು ಕಳೆದುಕೊಂಡ ಮನ್ಮಥ ಗುಲಾಮನಾಗಿ ಶಿವನ ಬಳಿ ದುಡಿಯುವ ಪ್ರಸಂಗ ಬರುತ್ತದೆ.

ಪ್ರಸ್ತುತ ಕತೆಯಲ್ಲಿ ಶಿವನು ಕೃಷಿ ಪ್ರಧಾನ ಸಂಸ್ಕೃತಿಯ ಪ್ರತಿನಿಧಿಯಾಗಿ ಕಾಣುತ್ತಾನೆ. ಶಿವ ಮಧ್ಯಮ ವರ್ಗದ ಪ್ರತಿನಿಧಿಯಾದರೆ ಕಾಮ ಮೇಲು ವರ್ಗದ ಸಂಕೇತವಾಗಿ ಕಂಡುಬರುತ್ತಾನೆ. ಹೀಗೆ ಕಥೆ ಮೇಲುವರ್ಗದ ಮತ್ತು ಮಧ್ಯಮವರ್ಗದ ನಡುವಿನ ಸಂಬಂಧಗಳನ್ನು ವಿವರಿಸಲು ಪ್ರಯತ್ನಿಸುತ್ತದೆ. ಇದು ಕಥೆಯ ಒಂದು ಘಟ್ಟ. ಕಥೆಯ ಎರಡನೆಯ ಘಟ್ಟದಲ್ಲಿ ಕಾಮನ ಐಶ್ವರ್ಯ ನಾಶವಾಗಿ ಅವನು ಶಿವನ ಬಳಿ ಜೀತದವನಾಗಿ ಕೆಲಸದಲ್ಲಿ ತೊಡಗುತ್ತಾನೆ. ಇಲ್ಲಿ ಶಿವ ಅದೇ ಮಧ್ಯಮವರ್ಗವನ್ನು ಪ್ರತಿನಿಧಿಸಿದರೆ ಕಾಮ ಸಮಾಜದ ತೀರ ಕೆಳವರ್ಗದ ಪ್ರತಿನಿಧಿಯಾಗುವನು.

ಕಥೆ ನಿರೂಪನೆಯಲ್ಲಿ ಕೆಲವು ಘಟನೆಗಳು ಅಸಹಜತೆಯಿಂದ ಕೂಡಿದೆ. ಈ ಅಸಹಜತೆ ಜಾನಪದ ಜಾಯಮಾನ. ಒಟ್ಟಾರೆ ಕಥೆಯು ವರ್ಗಭೇದದಿಂದ ಪ್ರಾರಂಭಗೊಂಡು ಅದರ ನಿವಾರಣೆಯಲ್ಲಿ

ಮುಕ್ತಾಯವಾಗುತ್ತದೆ. ಶಿವನು ತನ್ನ ತಂಗಿಯನ್ನು ಮನ್ಮಥನಿಗೆ ಕೊಡುವಾಗಲೇ ತಮ್ಮ ಸ್ಥಿತಿಯನ್ನು ಪರಿಚಯಿಸುತ್ತಾನೆ. ಇದನ್ನು ತಿಳಿದುಕೊಂಡಿದ್ದ ಮನ್ಮಥನು ಮದುವೆಯ ನಂತರದಲ್ಲಿ ತೋರುವ ನಡವಳಿಕೆ ಕಥೆಯ ಮುಂದುವರಿಕೆಗೆ ಕಾರಣವಾಗಿದೆ.

ಕಡಿಮೆ ಮಾಡಿದ ಒಂದು ಬೊಗಸೆ ಅಂಬಲಿಯನ್ನು
ಒಡಲಿಗೆ ಸಾಲದಂಗಜಗೆ
ಎರಡು ಕೈಯಿಂದಲಿ ಕೊಯ್ದನು ಹುಲ್ಲನು
ಎನ್ನೊಡೆಯ ಮೆಚ್ಚುವನೆನುತ[೪೮]

ಮನ್ಮಥನು ಬಡವನಾಗಿ ತನಗೆ ಒದಗಿದ ಯಾವುದೇ ಕಷ್ಟಗಳ ಪರಿಹಾರಕ್ಕೆ ಶಿವನನ್ನು ಬೇಡುವುದಿಲ್ಲ. ತಾನು ಜೀತದಾಳು. ಆಗಿದ್ದಾಗಲೂ ಒಡೆಯನು ಒಪ್ಪಿಸಿದ ಕರು ಕಾಯುವ ಕೆಲಸವನ್ನು ಶ್ರದ್ಧೆಯಿಂದ ಮಾಡುತ್ತಾನೆ. ತನಗೆ ತಿನ್ನುವ ಗಂಜಿಯನ್ನು ಕಡಿಮೆ ಮಾಡಿದಾಗಲೂ ಹಿಂತಿರುಗಿ ಕೇಳುವುದಿಲ್ಲ. ಹೆಚ್ಚು ಗಂಜಿ ಪಡೆಯಲು ಮತ್ತಷ್ಟು ಶ್ರಮಪಟ್ಟು ದುಡಿಯುತ್ತಾನೆ. ಈ ಘಟನೆಗಳು ಪ್ರತಿಷ್ಠಿತ ವ್ಯಕ್ತಿಯ ಅಸಹಾಯಕ ಸ್ಥಿತಿ ನೆಲೆಯನ್ನು ವ್ಯಕ್ತಪಡಿಸುತ್ತವೆ. ಗಂಡನ ಕಷ್ಟವನ್ನು ನೋಡಲಾರದೆ ರತಿಯು ಅಣ್ಣ(ಶಿವ)ನಲ್ಲಿ ಮೊರೆ ಹೋಗುತ್ತಾಳೆ. ಶಿವನಿಗೆ ಮನ್ಮಥನಲ್ಲಿ ಪ್ರೀತಿ ಮೂಡುತ್ತದೆ. ಕಷ್ಟ ಪರಿಹಾರವಾಗುತ್ತದೆ. ಮನ್ಮಥ ತನ್ನ ಸಂಪತ್ತನ್ನು ಮತ್ತು ರಾಜ್ಯವನ್ನು ಹಿಂತಿರುಗಿ ಪಡೆಯುತ್ತಾನೆ. ಕೆಟ್ಟ ವರ್ತನೆಗೆ ಶಿಕ್ಷೆ ಅನಿವಾರ್ಯವೆಂಬುದು ಈ ಕಥೆಯ ಒಟ್ಟು ಸಂದೇಶವಾಗಿದೆ. ಹೀಗೆ ಪುರಾಣಗಳು ಲೋಕದ ಅಂಕುಡೊಂಕುಗಳನ್ನು ಪರಿಚಯಿಸುತ್ತವೆ. ಅವುಗಳ ಮೂಲಕ ಲೋಕಕ್ಕೆ ನೀತಿಯನ್ನು ಸಾರುತ್ತವೆ.

ದಾಸರಲ್ಲಿ ಜನಪದ ಕಥೆಗಳನ್ನು ಆಧರಿಸಿ ಕೃತಿ ರಚಿಸಿದವರು ಗಿರಿಯಮ್ಮನನ್ನು ಬಿಟ್ಟರೆ ಕನಕದಾಸರೊಬ್ಬರೇ ಎನ್ನಬಹುದು. ಇವರು ದಾಸಕೂಟಕ್ಕೆ ಸೇರಿ ಕೀರ್ತನೆಗಳನ್ನು ರಚಿಸಬೇಕೆಂಬ ಪರಂಪರೆಗೆ ಒಳಗಾಗದೆ ಇವರಲ್ಲಿನ ಕಾವ್ಯಪ್ರಜ್ಞೆ ಕಾವ್ಯಗಳ ರೂಪದಲ್ಲಿ ತನ್ನ ಅಭಿವ್ಯಕ್ತಿಯನ್ನು ಕಂಡುಕೊಂಡಿದೆ. ಇವರ ಕೀರ್ತನೆಗಳು ಮತ್ತು ಹರಿಭಕ್ತಿಸಾರವನ್ನು ಒಂದು ಅಭಿಮುಖವಾಗಿ ಕಂಡುಬಂದರೆ ಇವರ ನಳಚರಿತ್ರೆ, ಮೋಹನ ತರಗಿಣಿ, ರಾಮಧಾನ್ಯ ಚರಿತೆ ಇವುಗಳು ಬೇರೊಂದು ಅಭಿಮುಖವಾಗಿ ಮೂಡಿಬಂದಿವೆ. ಮೋಹನ ತರಂಗಿಣಿ ಮತ್ತು ನಳಚರಿತ್ರೆಗಳ ವಸ್ತು ಪುರಾಣೇತಿಸದಿಂದ ಎತ್ತಿ ಕೊಂಡವಾದರೆ ಇವರ 'ರಾಮಧಾನ್ಯಚರಿತೆ'ಯ ವಸ್ತು ಜನಪದ ಮೂಲದ್ದು. ಕವಿ ಜನಪದರ ಆಶಯಗಳನ್ನೇ ಪ್ರಮುಖವಾಗಿ ಅಭಿವ್ಯಕ್ತಿಸಿದ್ದಾನೆ. ದೇವರು ಬಡವರ ಪರ ಮತ್ತು ಸತ್ಯವಂತರ ಪರ ಜಯ ಎಂದಿಗೂ ಸತ್ಯದ ಪರವೇ ವಿನಹ ಪ್ರತಿಷ್ಠಿತರ ಪರವಾಗಿ ನಿಲ್ಲುವುದಿಲ್ಲವೆಂಬುದು ಇದರ ಪ್ರಮುಖ ಆಶಯ.

ವಸ್ತುವಿನ ದೃಷ್ಟಿಯಿಂದ ಕನ್ನಡ ಸಾಹಿತ್ಯದಲ್ಲಿಯೇ ಕನಕದಾಸರ 'ರಾಮಧಾನ್ಯ ಚರಿತೆ'ಯು ಒಂದು ಅಪೂರ್ವವಾದ ವಿಶಿಷ್ಟ ಕೃತಿಯಾಗಿದೆ. ಧಾನ್ಯಗಳೇ ಇಲ್ಲಿ ಪಾತ್ರಗಳಾಗಿ ಜೀವ ಪಡೆದಿವೆ. ನವಧಾನ್ಯಗಳಲ್ಲಿ ರಾಗಿ ನಾಯಕನಾದರೆ ಅಕ್ಕಿ ಖಳನಾಯಕನಾಗಿದೆ. ಕನಕದಾಸರು ಧಾನ್ಯಗಳ ಮುಖಾಂತರ ಕೆಲಸ ಮಾಡುವುದರ ಮೂಲಕ ಅಸಡ್ಡೆಗೊಳಗಾಗಿದ್ದ ಧಾನ್ಯ ರಾಗಿಗೆ ಮಹತ್ವವು ಸಿಕ್ಕಿದೆ. ತನ್ಮೂಲಕ ಅಸಡ್ಡೆಗೆ ತುಳಿತಕ್ಕೆ ಒಳಗಾದ ಜನರ ಪ್ರತಿನಿಧಿಯಾಗಿ ಚಿತ್ರಿತವಾಗಿದೆ. ಮೇಲುವರ್ಗದವರ ಪ್ರತಿಷ್ಠೆ ಅಹಂಕಾರಗಳ ರೂಪದಲ್ಲಿ ಭತ್ತ ಕಾಣಿಸಿಕೊಳ್ಳುತ್ತದೆ. ಇದರಲ್ಲಿ ಯಾರು ಶ್ರೇಷ್ಠ ಎಂದು ಆರು ತಿಂಗಳ ಸೆರೆಮನೆ ವಾಸ ವಿಧಿಸಿದ ನಂತರ ರಾಮನು ತೀರ್ಪು ನೀಡುತ್ತಾನೆ. ರಾಗಿ ಗೆಲ್ಲುತ್ತದೆ. ಇದೊಂದು ರೂಪಕ ಕಾವ್ಯವಾಗಿ ಮೂಡಿಬಂದಿದೆ.

'ರಾಮಧಾನ್ಯ ಚರಿತೆ' ಕೃತಿಯ ವಸ್ತು ಬಹು ಅರ್ಥಪೂರ್ಣವಾಗಿದೆ. ಬಹುಶಃ ಕವಿಯ ಕಾಲದಲ್ಲಿ ಜನ ತಾವು ಬಳಸುತ್ತಿದ್ದ ಧಾನ್ಯವೊಂದರ ಸಮರ್ಥನೆಗಾಗಿ ಹೇಳಿಕೊಳ್ಳುತ್ತಿದ್ದ ಜಾನಪದ ಸ್ವರೂಪ ವಸ್ತು ಭತ್ತ ಮತ್ತು ರಾಗಿಗೆ ಸ್ಪರ್ಧೆ ಬಂದು ಅವುಗಳಲ್ಲಿ ಭತ್ತಕ್ಕಿಂತ ರಾಗಿಯೇ ಶ್ರೇಷ್ಠವೆಂದು ಶ್ರೀರಾಮ ಎಲ್ಲ ಜನರ ತೀರ್ಮಾನವನ್ನು ಒಪ್ಪಿಕೊಂಡು 'ರಾಮಧಾನ್ಯ' 'ರಾಘವ' ಎಂದು ಹೆಸರನ್ನೆ ಕೊಟ್ಟು 'ದೇವರು ಬಡವರ ಪರ' ಎಂಬುದನ್ನು ಸಾಬೀತು ಮಾಡುತ್ತಾನೆ. ಮೇಲುವರ್ಗದವರ ಪ್ರತಿನಿಧಿಯಾದ ಭತ್ತ ಮಾನಭಂಗವಾಗಿ ತಲೆತಗ್ಗಿಸಿ ನಿಲ್ಲುತ್ತದೆ. ಮತ್ತು ರಾಗಿಗೆ 'ರಾಘವ' ಎಂಬ ಹೆಸರು ಭಾಷಿಕವಾಗಿ ವಿವರಿಸಿ ಮತ್ತು ಅದು ಪ್ರಮುಖವಾಗಿ ಬಡಜನರ ಆಹಾರ ಎಂಬುದನ್ನು ಸ್ಥಾಪಿಸಲು ಹುಟ್ಟುಕೊಂಡ ಪುರಾಣ ಕಥೆಯಾಗಿದೆ.

ರಾಮಧಾನ್ಯ ಚರಿತೆಯಲ್ಲಿ ಭತ್ತ ಮತ್ತು ರಾಗಿಯ ನಡುವೆ ನಡೆಯುವ ಘರ್ಷಣೆ ಸಮಾಜದ ಎರಡು ವರ್ಗ ಮತ್ತು ಜಾತಿಗಳ ನಡುವಿನ ಭೇದವನ್ನು ಪರಿಚಯಿಸುತ್ತದೆ. ಭತ್ತ ಮೇಲ್ಜಾತಿಯ ಸಂಕೇತವಾದರೆ ರಾಗಿ ಕೆಳಜಾತಿಯ ಸಂಕೇತವಾಗುತ್ತದೆ. ಭತ್ತ ತನ್ನನ್ನು ತಾನು ಹೊಗಳಿಕೊಳ್ಳುವಾಗ ಮೇಲು ವರ್ಗದ ಜಾತಿಯ ಜನರು ಯಾವ ಯಾವ ಕಾರ್ಯಗಳಿಗೆ ಭತ್ತವನ್ನು ಬಳಸುತ್ತಾರೆಂಬ ಪಟ್ಟಿಯನ್ನು ನೀಡುತ್ತದೆ.

ಜನಪರಿಗೆ ಶಿಶುಗಳಿಗೆ ಬಾಂಧವ
ಜನರೆಡೆಗೆ ಬ್ರಹ್ಮರ ಸಮಾರಾ
ಧನೆಗೆ ವಿದ್ಯಾರಂಭ ಕಾಲಿಕೆ ಸಕಲ ಭೂಸುರರ
ಮನೆಗಳಲಿ ಹರಿದಿವಸದಾಪಾ | ಸನೆಗಳಲಿ ತಾಯೋಗ್ಯನಹುದು
ಹೊಸ ಮನೆಯ ಪುಣ್ಯಾರ್ಚನೆಗೆ ಮಿಗೆ
ಯೆಸೆವ ಮಧುವಕ್ಕಳಿಗೆ ಸೇಸೆಗೆ
ವಸುವಲೇಶಕ ಗರುಡಿಯಲಿ ಶಸ್ತ್ರಾಸ್ತ್ರದರ್ಚನೆಗೆ"

ಇಂತಹ ಶುಭಕಾರ್ಯಗಳಿಗೆ ನಾನು ಯೋಗ್ಯವಾಗಿರುವೆ. ಇಲ್ಲೆಲ್ಲಾ ನಿನ್ನನ್ನು ಸೇರಿಸದೆಯೇ ಜನರು ನಿನ್ನ ದೂರ ನೂಕಲು, ನೀನು ಶೂದ್ರರ ಆಹಾರವಾದೆ ಎಂದು ಭತ್ತ ಜರೆಯುತ್ತದೆ. ಭತ್ತದ ಮಾತುಗಳನ್ನು ಕೇಳಿ ರಾಗಿ ಸುಮ್ಮನೆ ಕೂರುವುದಿಲ್ಲ. ತನ್ನ ಪ್ರತಿಷ್ಠೆಯನ್ನು ಹೇಳಿಕೊಳ್ಳುವುದರ ಜೊತೆಗೆ ಭತ್ತವನ್ನು ಶುಭಕಾರ್ಯಕ್ಕೆ ಉಪಯೋಗಿಸುವಂತೆಯೇ ಸೂತಕದ ದಿನಗಳಲ್ಲೂ ಬಳಸುವುದನ್ನು ಹೇಳಿ ಟೀಕಿಸುತ್ತದೆ. ರಾಗಿ ತನ್ನ ಗುಣವನ್ನು ಪ್ರಕಟಪಡಿಸುವುದು ಹೀಗೆ

ಮಳೆದೆಗೆದು ಬೆಳೆಯಡಗಿ ಕ್ಷಾಮದ
ವಿಲಯಕಾಲದೊಳನ್ನವಿಲ್ಲದೆ
ಅಳಿವ ಪ್ರಾಣಿಗಳಾದರಿಸಿ ಸಲಹುವೆನು ಜಗವರಿದು
ಎಲ್ಲವೊ ನೀನೆಲ್ಲಿಹೆಯೊ ನಿನ್ನಯ
ಬಳಗವನು ತಾನೆಲ್ಲಿಹುದುಯಿ
ಹಲವು ಹುಲು ಧಾನ್ಯಗಳೆನಗೆ ಸರಿದೊರೆಯೆ ಕೇಳೆಂದ"[೦]

ಹೀಗೆ ರಾಗಿ ಬಡವರ ಪರವೆಂದು ಹೇಳಿಕೊಂಡು ಕಷ್ಟದ ಕಾಲಕ್ಕೆ ತಾನೇ ಪ್ರಾಣವನ್ನು ಉಳಿಸಿ ರಕ್ಷಿಸುವವನೆಂದು ಹೇಳಿಕೊಳ್ಳುತ್ತದೆ. ಹೀಗೆ ಎರಡೂ ಧಾನ್ಯಗಳ ನಡುವೆ ನಡೆಯುವ ವಾಗ್ಯುದ್ಧವನ್ನು ಕೇಳಿದ ರಾಮ ಅವುಗಳನ್ನು ಸೆರೆಯಲ್ಲಿಟ್ಟು ಪರೀಕ್ಷಿಸುತ್ತಾನೆ. ಆರು ತಿಂಗಳ ನಂತರ ಸೆರೆಮನೆಯಿಂದ ತೆಗೆದು ನೋಡಲು ರಾಗಿ ಚೆನ್ನಾಗಿಯೂ ಭತ್ತ ಕೆಟ್ಟಿರುತ್ತದೆ. ರಾಮ ಮೆಚ್ಚಿ ರಾಗಿಯನ್ನು 'ರಾಘವ' ಎಂದು ಕರೆಯುತ್ತಾನೆ. ಸೋತ ಭತ್ತವನ್ನು ಸಮಾಧಾನಪಡಿಸಲು ಪ್ರಯತ್ನಿಸುತ್ತಾನೆ.

ದೇವರಿಗೆ ಪರಮಾತ್ನ ನೀ ಮನು
ಜಾವಳಿಗೆ ಪಕ್ವಾನ್ನ ಮೀತನು
ನೀನು ಧರೆಯೊಳಗಿಬ್ಬರತಿ ಹಿತದಲ್ಲಿ ನೀವಿಹುದು"[೧]

ಅಂದರೆ ಕಾವ್ಯ ರಚನೆಯನ್ನು ಮಾಡಿದ ಕನಕದಾಸರ ಮನಸ್ಸು ಕೂಡ ರಾಗಿಯನ್ನು ದೇವರಿಗೆ 'ಪರಮಾನ್ನ' (ದೇವರ ನೈವೇದ್ಯಕ್ಕೆ ಇಡುವ ಅನ್ನ) ಮಾಡಲು ಇಷ್ಟಪಟ್ಟಿಲ್ಲ. ಅಂದರೆ ಜಾತಿ ಮತ್ತು ವರ್ಗ ಕಲ್ಪನೆಯನ್ನು ಜನರೇ ನಂಬಿದ್ದರು ವ್ಯಕ್ತಿಯು ಪೂರ್ವಜನ್ಮದ ಪುಣ್ಯದಿಂದ ಮಾತ್ರ ಉತ್ತಮ ಜಾತಿಯಲ್ಲಿ ಹುಟ್ಟಲು ಸಾಧ್ಯವೆಂಬುದನ್ನು ನಂಬಿದ್ದರು. ಐಶ್ವರ್ಯ ಪಡೆಯುವುದು ಕೂಡ ಪುಣ್ಯ ಪ್ರಾಪ್ತಿಯಿಂದ ಮಾತ್ರವೆಂದು ಗ್ರಹಿಸಿದ್ದರು. ಹೀಗಾಗಿ ವ್ಯವಸ್ಥೆಯನ್ನು ಕಂಡು ಸಿಟ್ಟಾದರೂ ಎಲ್ಲೊ ಒಂದು ಕಡೆ ವ್ಯವಸ್ಥೆಯನ್ನು ಒಪ್ಪಿ ನಡೆಯುತ್ತಿದ್ದ ರೀತಿ ವ್ಯಕ್ತವಾಗುತ್ತದೆ. ರಾಗಿಯನ್ನು ಹೆಚ್ಚೆಂದು ರಾಮ ಹೇಳುವುದಕ್ಕೆ ಕಾರಣ

ಧರೆಗೆ ಹೊದ್ದಿದ ಕ್ಷಾಮಗಾಲದಿ
ಕರುಣದಿಂ ನಡೆತಂದು ಲೋಕವ
ಹೊರೆವನದು ಕಾರಣವೆ ಪತಿಕರಿಸಿದೆವು ಕೇಳೆಂದ[೫೨]

ಬಡವರೊಂದಿಗೆ ತಾದಾತ್ಮ್ಯ ಪಡೆದಿರುವ ಬಡವರ ಆಹಾರವಾದ, ಕ್ಷಾಮ ಡಾಮರ ಕಾಲಕ್ಕೆ ನೆರವಾಗಿ ನಿಂತು ಜನರನ್ನು ರಾಗಿ ರಕ್ಷಿಸುವುದು, ಎಷ್ಟು ದಿವಸವಾದರೂ ಕೆಡದ ರಾಗಿಯೇ ಇತರ ಧಾನ್ಯಗಳಿಗಿಂತ ಶ್ರೇಷ್ಠ ಎಂದು ಹೀಗಾಗಿ ನಾವು ರಾಗಿಯನ್ನು ಗೌರವಿಸಬೇಕಾಗಿದೆ ಎಂಬ ಮಾತು ರಾಮನಿಗೆ ಭತ್ತದ ಮೇಲಿರುವ ಪ್ರೀತಿ ಮತ್ತು ಆದರಗಳನ್ನು ತಿಳಿಸುತ್ತದೆ. ಹೀಗೆ ಪುರಾಣ ಕಾವ್ಯಗಳು ಕಥೆಗಳು ವ್ಯವಸ್ಥೆಯನ್ನು ಇರುವಂತೆಯೇ ರಕ್ಷಿಸಿಕೊಳ್ಳುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಸಮಾಜದ ಕೆಳವರ್ಗದ ಜನರಿಗೆ ದೇವರು ಮೆಚ್ಚಿದರೆಂಬುದೇ ಒಂದು ದೊಡ್ಡ ವಿಷಯವಾಗುತ್ತದೆ. ಇದರಲ್ಲೇ ಸಂತೋಷಗೊಂಡವರು ರಾಜಿ ಭಾವನಗೆಳನ್ನು ಬಹುಬೇಗ ಒಪ್ಪಿಕೊಳ್ಳುತ್ತಾರೆ. ರಾಗಿಯ ಪರೀಕ್ಷೆಯಲ್ಲಿ ಗೆದ್ದು ಭತ್ತಕ್ಕೆ ಸಮಾನವಾದ ಸ್ಥಾನವನ್ನು ಪಡೆಯುತ್ತದೆ. ಆದರೆ ಸೋತ ಭತ್ತ ರಾಮನಿಂದ ತಿರಸ್ಕೃತವಾಗುವುದಿಲ್ಲ ಶಿಕ್ಷೆಗೆ ಒಳಗಾಗುವುದಿಲ್ಲ. ಭತ್ತ ಮತ್ತು ರಾಗಿಯ ನಡುವೆ ಎದುರಾದ ಮೂಲಭೂತ ಸಂಘರ್ಷ (ಸಮಸ್ಯೆ) ಬಗೆಹರಿಯುತ್ತದೆ. ಇದು ಹೀಗೆ ರಾಗಿ ಸ್ಥಾನಪಲ್ಲಟವಾದ ರೀತಿಯನ್ನು ಗುರುತಿಸಬಹುದಾಗಿದೆ. ಶೂದ್ರಾನ್ನವೆಂದು ಭತ್ತಕ್ಕೆ ಎಂದೂ ಸಮಾನವಲ್ಲವೆಂದು ಜರಿದ ಭತ್ತದ ಎದುರಲ್ಲಿಯೇ ರಾಮನಿಂದ ಅಭಿನಂದನೆಗೆ ಗುರಿಯಾಗುತ್ತದೆ. ಹೀಗೆ ಹೆಳವನಕಟ್ಟೆ ಗಿರಿಯಮ್ಮನ ಮತ್ತು ಕನಕದಾಸರ ಕೃತಿಗಳು ವ್ಯವಸ್ಥೆಯಲ್ಲಿ ಇರುವ ಸ್ಥಿತಿಯನ್ನು ತಿಳಿಸುತ್ತವೆ. ಇದರ ಜೊತೆಗೆ ವ್ಯವಸ್ಥೆಗೆ ಹೊಂದಿ ಸಮಾಜ ಅಂಗೀಕರಿಸಿದ ಮೌಲ್ಯಗಳನ್ನು ಒಪ್ಪಿ ನಡೆಯುವ ಚಿತ್ರಣವನ್ನು ನೀಡುತ್ತವೆ. ಸಮಾಜ ಒಪ್ಪಿದ ಮೌಲ್ಯಗಳಿಂದ ಬಿಡಿಸಿಕೊಳ್ಳುವ ಪ್ರಯತ್ನ ಮಾನವ ಸಹಜ ಗುಣ. ಇದನ್ನು ಈ ಕಥೆಗಳು ಹೇಳುತ್ತವೆ. ಇವು ಸತ್ಯ ಮತ್ತು ನ್ಯಾಯಕ್ಕೆ ಜಯವನ್ನು ಹೇಳುತ್ತವೆ. ಅಹಂಕಾರ ನಿರಸನದೊಂದಿಗೆ ಶ್ರಮದ ಮತ್ತು ಬಡತನದ ಮಹತ್ವವನ್ನು ಎತ್ತಿ ಹಿಡಿಯುತ್ತವೆ.

## ೫.೩. ಲವಕುಶರ ಕಾಳಗ

ಹೆಳವನ ಕಟ್ಟೆ ಗಿರಿಯಮ್ಮನ ದೀರ್ಘ ಹಾಡುಗಳಲ್ಲಿ 'ಲವಕುಶರ ಕಾಳಗ'ವೂ ಒಂದು. ಈವರೆಗೆ ಅಪೂರ್ಣವಾಗಿ ದೊರೆತಿರುವ ಈ ಕೃತಿ ಪ್ರಥಮ ಬಾರಿಗೆ ಈಗ ಪೂರ್ಣ ರೂಪದಲ್ಲಿ ದೊರೆತಿದೆ. ಸಾಂಗತ್ಯದ ಮಟ್ಟಿನಲ್ಲಿ ೨೬೮ ನುಡಿಗಳಲ್ಲಿ ರಚಿತವಾಗಿರುವ ಈ ಹಾಡಿಗೆ 'ಪಠದ ಸಂಧಿ' ಎಂಬ ಇನ್ನೊಂದು ಹೆಸರು ಈ ಕೃತಿಗೆ ಇದೆ. ಚಿತ್ರಪಟದ ಕಲ್ಪನೆಯೊಂದನ್ನು ಗಿರಿಯಮ್ಮ ಹೊಸದಾಗಿ ಸಂಯೋಜಿಸಿಕೊಂಡಿದ್ದಾಳೆ. 'ಲವಕುಶರ ಕಾಳಗ' ಇದು ಹೆಸರೇ ಸೂಚಿಸುವಂತೆ ತಂದೆಯ ಜೊತೆ ಮಕ್ಕಳು ಮಾಡುವ ಕಾಳಗ ಆದರೆ ಈ ಕಥೆಯಲ್ಲಿ ಕಾಳಗದ ವಿವರಗಳೇ ಪ್ರಮುಖವಾಗಿ ಬಂದಿಲ್ಲ. ಇದರ ವಸ್ತು

ಉತ್ತರ ರಾಮಾಯಣದ ಕಥಾಭಾಗವನ್ನು ಆಧರಿಸಿದ ಗಿರಿಯಮ್ಮನ ಲವಕುಶರ ಕಾಳಗವು ಜಾನಪದದಲ್ಲಿ ಬರುವ ಚಿತ್ರಪಟ ರಾಮಾಯಣದಿಂದ ಪ್ರೇರಣೆ ಪಡೆದು ಸಿದ್ಧಗೊಂಡಿರುವುದರಿಂದ ಸಾಂಪ್ರದಾಯಿಕ ಶಿಷ್ಟ ರಾಮಾಯಣಗಳಿಗಿಂತ ಭಿನ್ನ ರೂಪವನ್ನು ಹೊಂದಿದೆ. ಕೃತಿಯ ಆರಂಭದಲ್ಲಿ ಸೀತೆಯು ಮಕ್ಕಳ ಸಲುವಾಗಿ

ಮಡದಿ ಜಾನಕಿ ದೇವಿ ಮಕ್ಕಳಿಲ್ಲೆನುತಲಿ
ಮನದಿ ಚಿಂತೆಲಿ ಸೊರಗಿದಳು
ಕಂದರಿಲ್ಲದ ಬಾಳು ದುಡುಕೆನುತಲಿ
ಕಂಗಳ ಜಲವ ತುಂಬಿದಳು[೫೩]

ಎಂದು ಸೀತೆಗೆ ಮಕ್ಕಳಿಲ್ಲವೆಂಬ ಚಿಂತೆಯಿಂದ ಶೋಕಿಸುವಾಗ ಬಂಜೆಯ ಬಾಳಿನ ನೋವು ಮನಮಿಡಿಯುವಂತಿದೆ. ಸೀತೆ ಗರ್ಭವತಿಯಾಗುವಳು. ಸೀತೆಗೆ ಹಿಂದಿನ ದಿನಗಳು ನೆನಪಾಗಿ

ಅಯೋಧ್ಯಾಪುರದ ವಾನರರನ್ನೆಲ್ಲಾ ಬಿಟ್ಟು
ಕೈಹಿಡಿದ ಪುರುಷನಬಿಟ್ಟು
ಸಕಲ ಸೌಭಾಗ್ಯ ಸಂಪತ್ತು ಎಲ್ಲವ ಬಿಟ್ಟು
ನೆನೆದಾಳು ಋಷಿಗಳಾಶ್ರಮವ[೫೪]

ಮಕ್ಕಳಿಲ್ಲದ ಬೇಸರ ಹೆಣ್ಣಾದ ಸೀತೆಯನ್ನು ಕಾಡುತ್ತದೆ. ಮಕ್ಕಳಿಗಾಗಿ ಹಂಬಲಿಸಿದ ಸೀತೆಗೆ ದೈವ ಕಾರುಣ್ಯದಿಂದ ದೀರ್ಘಕಾಲದ ನಂತರವಾದರೂ ಗರ್ಭವತಿಯಾಗುತ್ತಾಳೆ. ಗರ್ಭಿಣಿಯರಿಗೆ ಬಯಕೆಗಳಾವುದೆಂಬುದು ಸಾಮಾನ್ಯ ನಂಬಿಕೆ ಆದರೆ ಗರ್ಭಿಣಿಯಾದ ಸೀತೆಗೆ ಅಸಾಮಾನ್ಯ ಬಯಕೆಯೊಂದು ಕಾಡುತ್ತದೆ. ಹಿಂದಿನ ದಿನಗಳ ಸ್ಮರಣೆಯಾಗಿ ಋಷಿ ಪತ್ನಿಯರೊಡನೆ ಕೂಡಿ ತಪೋವನದ ಪವಿತ್ರ ಪರಿಸರದಲ್ಲಿ ಕಾಲ ಕಲೆಯಬೇಕೆಂದು ಬಯಸುತ್ತಾಳೆ. ಬೇಟೆಗೆಂದು ಹೊರಟ ರಾಮ ಲಕ್ಷ್ಮಣರು ಈ ಅವಕಾಶವನ್ನು ಉಪಯೋಗಿಸಿಕೊಂಡು ಆಕೆಯ ಬಯಕೆಯನ್ನು ಪೂರೈಸಲು ನಿರ್ಧರಿಸುತ್ತಾರೆ.

ವಾಯುವೇಗ ಮನೋವೇಗ ವೆಂಬೋರಥ
ಏರಿದರು ರಾಮ ಲಕ್ಷ್ಮಣರು
ಬಾಣನೆಂಬೋ ಸೂರ್ಯತಾನೇ ರಥವ ನಡಸೆ
ಕೂಡ ಬೇಟೆಗೆ ತೆರಳಿದನು.[೫೫]

ಬೇಟೆಯಾಡಿ ದಣಿದ ರಾಮ ಮರದ ತಂಪಾದ ನೆರಳಿನಲ್ಲಿ ಮಲಗಿದ್ದಾಗ ತಾಟಕಿಯೊಬ್ಬಳು ಬಂದು ಸೀತೆಯ ಮುಡಿ ಪಿಡಿದೆಳೆಯುತ್ತಿರುವ ಕೆಟ್ಟ ಕನಸು ಕಾಣುತ್ತಾನೆ. ಇತ್ತ ಶೂರ್ಪನಖಿಯು ಕೊರವಿಯ ವೇಷಧರಿಸಿ ಅಯೋಧ್ಯೆಗೆ ಬರುತ್ತಾಳೆ. ಸೀತೆಯಲ್ಲಿಗೆ ಬಂದು ನಾಗಸಂಪಿಯ ಹೂವನ್ನು ಮುಡಿ ಎಂದು ನೀಡಿದಾಗ ಸೀತೆಗೆ ಸಂದೇಹ ಬರುತ್ತದೆ.

ದಾವದೇಶ ನೀವು ಏನು ಕಾರಣ ಬಂದಿ
ಈ ನಾಡಗರತಿ ನೀನಲ್ಲ
ದಾವದು ಸ್ಥಳ ಕುಲದಾರು ಬಂಧುಗಳುಂಟು
ದಾರ ಬಳಿಗೆ ನೀ ಬಂದೀ[೫೬]

ಎಂದೆಲ್ಲಾ ಸೀತೆ ವಿಚಾರಿಸುತ್ತಾಳೆ. ಈರೇಳು ಲೋಕದ ಸುತ್ತಿ ತಿರುಗಿ ಬಂದೆ ಎಂದು ಮುಂತಾಗಿ ಕೊರವಿ ಹೇಳುತ್ತಾಳೆ. ಹೊನ್ನು, ಹಣ, ಅನ್ನ, ವಸ್ತ್ರ ಎಲ್ಲಾ ಕೊಡುವುದಾಗಿ ಸೀತೆ ಹೇಳಿದಾಗ.

ಹೊನ್ನು ಹಣವನೊಲ್ಲೆ ಅನ್ನವಸ್ತ್ರವನೊಲ್ಲೆ
ನಿನ್ನ ಭಾಗ್ಯವು ನಾನೊಲ್ಲೇ
ಮುನ್ನಿನ ಅಸುರರೂಪ ಇನ್ನು ನೀ ಬರೆ
ಚೆನ್ನಾಗಿ ಹರಣ ಹೊರುವೆನು[೫೭]

ಎಂದು ಒತ್ತಾಯಿಸುತ್ತಾಳೆ. ಸೀತೆ ಒಪ್ಪದಿರಲು ಭಸ್ಮವನ್ನು ತೊಡೆದು ಅವಳನ್ನು ವಶಪಡಿಸಿಕೊಳ್ಳುತ್ತಾಳೆ. ಆಗ ಸೀತೆ ವನಕ್ಕೆ ಬಂದಿದ್ದಾಗ ರಾವಣನ ಉಂಗುಷ್ಟವನ್ನು ಮಾತ್ರ ಕಂಡು ಬಲ್ಲೆ ಎಂದು ಹೇಳುತ್ತಾಳೆ.

ಉಂಗುಷ್ಟ ದಂದಕ್ಕೆ ಮುಂದೆ ಪಾದವ ಬರಿ
ಹಿಂದೆ ಹಿಂಬುಡ ಮೊಣಕಾಲು
ಚಂದಾದ ನಡುದೊಡಿ ಎದೆ ಭುಜ ಇದ
ಹೊಂದಿಸಿ ಬರೆ ಎಂದಳವಳು[೫೮]

ಎಂದೆಲ್ಲಾ ಹೇಳುತ್ತಾ ಚೆಂದಾದ ಕಾಗದ ಲೆಕ್ಕಣಿಕೆ ಕೊಟ್ಟು ಬರೆಸುತ್ತಾ ಹೇಳಿ ಬರೆಸುತ್ತಾ ಬರೆಸುತ್ತಾ 'ತಂದು ನಿಲ್ಲಿಸಿದಳು ರಾವಣನಾ' ಎಂದೆಂದು ಅಳಿಯದ ಹಾಗೆ ವರಕೊಡು ಎಂದು ಕೊರವಿ ಒತ್ತಾಯಿಸಿ ಬರೆಸಿದಾಗ

ಅಳಿದು ಉಳಿಯದಿರು ಉಳಿದು ನೀ ಕೆಡದಿರು
ಧರಿಯ ವಳಗೆ ಅಡಗದಿರು
ಕಿರಿಯ ಲಕ್ಷ್ಮಣ ದೇವ ಹೊಡೆದರೆ ಮಡಿ ಎಂದು
ವರವ ಕೊಟ್ಟಳು ಸೀತೆ.[೫೯]

ಕಿರಿಯ ಲಕ್ಷ್ಮಣದೇವ ಹೊಡೆದರೆ ಮಡಿ ಎಂದು ಸೀತೆ ಹೇಳುತ್ತಾಳೆ. ಕೊರವಿ ರಾವಣನ ಚಿತ್ರಪಟವನ್ನು ಮೇಲಕ್ಕೆ ಹಾರಿಸಿ ಅಸುರೆ ಗಗನಕ್ಕೆ ಹಾರಿ ಮರೆಯಾಗುತ್ತಾಳೆ. ಸೀತೆ ಚಿಂತಿತಳಾಗಿ ಮಂಚದ ಮೇಲೆ ಒರಗುತ್ತಾಳೆ. ಆ ಚಿತ್ರಪಟ ಕೂಡ ಅಲ್ಲಿಯೇ ಬಂದು ಒರಗುತ್ತದೆ.

ಅಂದು ಶ್ರೀರಾಮನು ಬಂದು ಬೇಟೆಯನಾಡಿ
ಕಂಡರು ಅಪಶಕುನವನೂ

ಆನಿ ಕುದರಿ ಮಂದಿ ಮುಗ್ಗರಿಸೋದು ಕಂಡು
ನಿಂದನು ಹರಿ ಹರಿ ಎಂದೂ[೬೦]

ಇತ್ತ ಶ್ರೀರಾಮ ಬೇಟೆಯಾಡಿ ಮುಗಿಸಿಕೊಂಡು ಹಿಂತಿರುಗಿ ಬರುತ್ತಾನೆ. ಆಗ ಅಪಶಕುನಗಳಾಗುತ್ತವೆ. ನಂತರ ರಾಮ ಅರಮನೆಗೆ ಬಂದು ಸೀತೆಗೆ ಹೇಳಿ ಕಳುಹಿಸುತ್ತಾನೆ. 'ಇಂದು ರಾಮನ ಶೈಲಿ ಅಳಿವೇನೂ ಇಂದು ಗೆದ್ದರೆ ಮುಂದೆ ಜಯವು' ಎಂದು ಅಳುಕುತ್ತಾ ಜಾನಕಿ ಬರುತ್ತಾಳೆ. ಅಮೇಲೆ ಊಟವಾಗುತ್ತದೆ. ಸೀತೆಗೆ ಊಟ ರುಚಿಸುವುದಿಲ್ಲ. ಊಟ ಮುಗಿಸಿ ಬಂದ ರಾಮ ಮಂಚದ ಮೇಲೆ ಕುಳಿತರೆ ಅದು ಎರಡು ತುಂಡಾಗಿ ಮುರಿಯುತ್ತದೆ. ತಂದೆಯ ಕಾಲದ ದೊಡ್ಡ ಮಂಚ ತುಂಡಾಗಿ ಮುರಿದು ಬೀಳಲು ಕಾರಣವೇನು ಎಂದು ಹಾಸಿಗೆ ತೆಗೆಯಲು ಹತ್ತು ತಲೆಯ ರಾವಣನ ಚಿತ್ರಪಟವನ್ನು ಕಂಡು ರಾಮ

ಹಾಸುಕೆ ತೆಗೆಯಲು ಹತ್ತು ತಲೆಯ ಕಂಡು
ಆಶ್ಚರ್ಯ ಪಟ್ಟು ನಸುನಕ್ಕು
ಏಸು ದಿವಸ ಗಾಸಿಯಾಗಿ ಬರೆದೆ ಇವನ
ಏಸು ದಿವಸ ಭೋಗಿಸಿದೆ.
ಮೋಸ ಮಾಡಿದೆ ಸೀತೆ ಎನಕೂಡ ಹೇಳದೆ
ಘಾತವಾಯಿತು ದೇವಿ ಎಂದ
ಇಂದು ನಿನ್ನ ಪ್ರಿಯನು ಎಂಬೋದುಂಟಾದರೆ
ಹೊಂದಿಸಿ ಬಿಡುವೆನಿಬ್ಬರನು.
ಇಂದ್ಯಾಕೆ ಈ ಮಯಾಕೊಳಗಾದಿ ಎಲೆದೇವಿ
ಕೊಂದು ಹಾಕುವೆ ರಾವಣನ
ಹೆಂಗಸು ಹೆಡತಾಲಿಮಿತ್ರ್ತು ಎಂಬೋರು ಜನರು
ಇಂದು ಕಂಡೆನೆ ಸಾದೃಶವ[೬೧]

ಹೀಗೇಕೆ ಆಯಿತೆಂದು ಲಕ್ಷ್ಮಣ ಹಾಸಿಗೆಯನ್ನು ಎತ್ತಿ ನೋಡಿದರೆ ಹತ್ತು ತಲೆಯ ರಾವಣನ ಆ ಪಟ ಮುತ್ತೆ ಕುಣಿಯ ತೊಡಗುತ್ತದೆ. ರಾಮಲಕ್ಷ್ಮಣರಿಬ್ಬರಿಗೂ ದುಃಖ ಕೋಪ ಒಟ್ಟಿಗೇ ಆಗುತ್ತದೆ. ರಾಮನು 'ಏಸು ದಿವಸ ಭೋಗಿಸಿದೆ? ಎಂದು ಸೀತೆಯನ್ನು ಕೇಳುತ್ತಾನೆ. ಹೆಂಗಸು ಹೆಡತಲೆಲೆ ಮಿತ್ರ್ತು ಎಂಬೋರು ಜನರು ಇಂದು ಕಡೆ ಸಾದೃಶ್ಯವ ಎನ್ನುತ್ತಾನೆ. ರಾಮ

ಭೂಮಿದೇವಿ ಮಗಳೆಂದು ನಾತ
ನಾಡೊಳಗೆ ಪತಿವ್ರತೆ ಎಂದೂ
ಪ್ರಾಣದೊಲ್ಲಬೆ ಸತಿ ಎಂದು ನಂಬಿದೆ
ರಾವಣಗೆ ಮರುಳಾಗೋದರಿಯೆ[೬೨]

ಭೂಮಿ ದೇವಿಯ ಮಗಳೆಂದು ಸೀತೆ ನಾಡೊಳಗೆ ಪತಿವ್ರತೆ ಎಂದೂ ಪ್ರಾಣಕ್ಕಿಂತ ಹೆಚ್ಚಿನ ಸತಿ ಎಂದು ನಂಬಿದ ಸೀತೆ ರಾವಣನಿಗೆ ಮರುಳಾದದ್ದನ್ನು ನಾನು ಅರಿಯನು ಎಂದು ರಾಮನು ನೊಂದು ನುಡಿಯುತ್ತಾನೆ. ಸೀತೆ ನಡೆದುದ್ದನ್ನು ವಿವರಿಸುತ್ತಾಳೆ. ಕೊನೆಗೆ ಲಕ್ಷ್ಮಣನು ಅ ಪಟವನ್ನು ಹರಿದು ಹಾಕುತ್ತಾನೆ. ಅಲ್ಲಿಗೆ ಪಟದ ಸಂಧಿ ಮುಗಿಯುತ್ತದೆ. ಮುಂದಿನ ಕಥೆ ಹೆಚ್ಚು ಕಡಿಮೆ ಉತ್ತರ ರಾಮ ಚರಿತ್ರೆಯನ್ನು ಹೋಲುತ್ತದೆ.

ಭೂಮಿದೇವಿ ಮಗಳಾಗಿ ನಾ ಜನಿಸಿದೆ
ನಾಡ ದೇವರ ಮರೆಹೊಕ್ಕ
ರಾಮರ ಪಾದವೆ ಗತಿ ಎಂದು ನಂಬಿದೆ
ಮಾರಿ ಬಾಹೋದು ನಾ ಕಾಣಲಿಲ್ಲ.[೬೩]

ಎಂದು ಸೀತೆ ಪರಿ ಪರಿಯಾಗಿ ತಿಳಿಸಿ ಹೇಳಲು ಪ್ರಯತ್ನಿಸುತ್ತಾಳೆ. ರಾಮ ಸೀತೆಯನ್ನು ತ್ಯಜಿಸುವ ನಿರ್ಧಾರಕ್ಕೆ ಬರುತ್ತಾನೆ. ಸೀತೆಯನ್ನು ಕಾಡಿಗೆ ಕರೆದುಕೊಂಡು ಹೋಗಿಕೊಂದು ಬರುವಂತೆ ಲಕ್ಷ್ಮಣನಿಗೆ ಹೇಳುತ್ತಾನೆ. ಸ್ತ್ರೀ ಹತ್ಯೆ, ಶಿಶುಹತ್ಯೆ, ಗೋಹತ್ಯೆ ಬ್ರಹ್ಮಹತ್ಯೆ' ಮಾಡಿದವರಿಗೆ ಮಹಾಪಾತಕ ಬರುವುದು ಎಂದು ಲಕ್ಷ್ಮಣ ನುಡಿದಾಗ ರಾಮನು

ಆಳುಕೊಂದ ಪಾಪ ಅರಸಿ ಮಾಡಿದ ಪಾಪ
ಭೂಮಿಯನಾಳುವ ರಾಯರಿಗೆ[೬೪]

ಎಂದು ಸಮಾಧಾನ ಹೇಳಿ ಒಪ್ಪಿಸುತ್ತಾನೆ. ಅರಣ್ಯದಲ್ಲಿ ಸೀತೆ ತನ್ನನ್ನು ಕೊಲ್ಲುವಂತೆ ಲಕ್ಷ್ಮಣನಲ್ಲಿ ಬೇಡಿಕೊಂಡರು. ಅವನು ಅದಕ್ಕೆ ಒಪ್ಪುವುದಿಲ್ಲ ಆಗ ಸೀತೆ ರಾಮನರಸಿ ಸೀತೆ ಓಡಿಹೋದಳೆಂಬೋ ನಾಡೊಳಗೆ ಅಪಕೀರ್ತಿ' ಬರಬಹುದು ಎನ್ನುತ್ತಾಳೆ. ಅದಕ್ಕೆ ಲಕ್ಷ್ಮಣನು

ಕೆಂಡಕ್ಕೆ ಇರುವೆ ಮುತ್ತುವುದುಂಟೆ ಎಲೆ ದೇವಿ
ಚಂದ್ರಮಕೆ ಕವಿ ಬೀಸುಲುಂಟೆ
ಮುಂದೇಳು ಲೋಕವನ ಹೊರುವ ಜಗನ್ಮಾತೆಗೆ
ನಿಂದ್ಯಾಪಕೀರ್ತಿಗಳುಂಟೇ
ಕಿಚ್ಚಿನೊಳಗೆ ಸರಸ ಬೆರಸಿದವರುಂಟೆ
ಸರ್ಪನೊಳಗೆ ಸ್ನೇಹವುಂಟೆ
ಸಪ್ತ ಸಾಗರದಲ್ಲಿ ಹುಟ್ಟಿದ ಲಕ್ಷ್ಮೀಗೆ
ಮತ್ತಪಕೀರ್ತಿಗಳುಂಟೆ[೬೫]

ಎನ್ನುತ್ತಾನೆ. ಕಡೆಗೆ ಅಡವಿ ಮೃಗವೊಂದನ್ನು ಕೊಂದು ಆ ರಕ್ತವನ್ನು ರಾಮನಿಗೆ ತೋರಿಸಿ ಲಕ್ಷ್ಮಣ ಸೀತೆಯನ್ನು ಕೊಂದು ಬಂದೆ ಎನ್ನಲು ರಾಮ ಪಶ್ಚಾತ್ತಾಪ ಪಟ್ಟು ಪರಿತಪಿಸುತ್ತಾನೆ. ಆಗ ಲಕ್ಷ್ಮಣ

'ಸಿಟ್ಟೀನಾ ವ್ಯಾಳ್ಯಾಕೆ ಮೂಗು ಕೊಯ್ದುಕೊಂಡರೆ ಅಣ್ಣ ಶಾಂತ ವ್ಯಾಳ್ಯಾಕೆ ಹತ್ತಬಹುದೆ' ಎಂದು ಪ್ರಶ್ನಿಸುತ್ತಾನೆ.

ಇತ್ತ ಗಂಗೆಯ ನೀರಿಗೆ ಬಂದ ನಾರಿಯರು ಸೀತೆಯನ್ನು ಕಂಡು ವಾಲ್ಮೀಕಿಗೆ ತಿಳಿಸುತ್ತಾರೆ. ಅವನು ಅವಳನ್ನು ಆಶ್ರಮಕ್ಕೆ ಕರೆತರುತ್ತಾನೆ. ಆರು ತಿಂಗಳು ತುಂಬಿದ ಮೇಲೆ ಸೀಮಂತ ಮಾಡುತ್ತಾರೆ. 'ರಾಮರನಗಲಿದ ನಮಗೆ ಸೀಮಂತವೇತಕೆ? ಎಂದು ಜಾನಕಿ ಕೇಳುತ್ತಾಳೆ. ತವರು ಮನೆಯಲ್ಲಿ ಹುವ್ವ ಮುಡಿಸುವ ಶಾಸ್ತ್ರ ಎಂದು ಹೇಳಿ ಅವಳಿಗೆ ಸಂಭ್ರಮದಿಂದ ಆಶ್ರಮದ ನಾರಿಯರೆಲ್ಲಾದ ಸೇರಿ ಹೂ ಮುಡಿಸಿ ಆರತಿ ಎತ್ತುತ್ತಾರೆ. ನವ ಮಾಸ ತುಂಬಿ ಸೀತೆ ಲವನನ್ನು ಹೆರುತ್ತಾಳೆ. ಹತ್ತನೆಯ ದಿನ ಅವಳು ಮಗುವನ್ನು ಕರೆದುಕೊಂಡು ಹೊಳೆಗೆ ಸ್ನಾನಕೆ ಹೋಗುತ್ತಾಳೆ. ತೊಟ್ಟಿಲಲ್ಲಿ ಮಗು ಇಲ್ಲದ್ದನ್ನು ಕಂಡು ವಾಲ್ಮೀಕಿ, ವಾನರಗಳು ಮಗುವನ್ನು ಕೊಂಡು ಹೋಗಿರಬೇಕು ಸೀತೆಗೆ ತಿಳಿದರೆ ಶಪಸಿಯಾಳು ಎಂದು ದರ್ಭೆಯಿಂದ ಬಾಲಕನನ್ನು ನಿರ್ಮಿಸಿ 'ರಾಮ ಮಂತ್ರ' ಎಂಬ ಜೀವಕಳೆಯನ್ನು ಅದಕ್ಕೆ ತುಂಬುತ್ತಾನೆ. ಹಿಂತಿರುಗಿದ ಸೀತೆ ಮತ್ತೊಂದು ಮಗುವನ್ನು ನೋಡಿ ಆಶ್ಚರ್ಯಗೊಂಡು ವಾಲ್ಮೀಕಿಯನ್ನು ಕೇಳಿದಾಗ ಕುಶನ ಜನನವಾದ ಬಗೆ ತಿಳಿಯುತ್ತಾಳೆ. ಹೀಗೆ ಅವಳು ಲವಕುಶರಿಬ್ಬರಿಗೂ ತಾಯಿಯಾಗುತ್ತಾಳೆ.

'ತಂದೆಯ ತೋಳು ತೊಡೆಯ ಮೇಲೆ ಆಡದೆ ಕಂದರಿನ್ಯಾರಿಗೆ ಮುದ್ದೆ' ಎಂದು ಆಗಾಗ ಕೊರಗುತ್ತಾಳೆ. ಮಕ್ಕಳು ದೊಡ್ಡವರಾಗುತ್ತಾರೆ. ಸೀತೆ ರಾಮನ ಕಥೆಯನ್ನು ಅವರಿಗೆ ಹೇಳುತ್ತಾಳೆ. ವಾಲ್ಮೀಕಿ ಬಾಲಕರಿಗೆ ವಿದ್ಯೆಯನ್ನು ಕಲಿಸುತ್ತಾರೆ. ಈ ಕಡೆ ಅಯೋಧ್ಯೆಯಲ್ಲಿ ಶ್ರೀರಾಮ ಅಶ್ವಮೇಧಯಾಗ ಮಾಡುತ್ತಾನೆ. ಎಲ್ಲೆಲ್ಲೂ ಸಂಭ್ರಮ, ಸಂತಸದಿಂದಿರಲು ಕುದುರೆ ವಾಲ್ಮೀಕಿಯ ಆಶ್ರಮಕ್ಕೆ ಬರಲು ಬಾಲಕರು ಯಜ್ಞ ಅಶ್ವವನ್ನು ಕಟ್ಟಿಹಾಕುತ್ತಾರೆ. ಅನಂತರ ಸೀತೆಗೆ ಬಂದು ಈ ವಿಚಾರವನ್ನು ಹೇಳುತ್ತಾರೆ. ಬಾಲರೆ ನಿಮಗಿಂತ ತೇಜಿ ವಶವಾಗುವುದೇ ತಳುವುದೊ ಮೆಟ್ಟಿ ಕೊಲ್ಲುವುದೊ ಎಂದು ಶಂಕೆ ಪಟ್ಟರೂ ಸೀತೆ ಕುಶದರ್ಭೆಯಿಂದಲಿ ಬಿಲ್ಲು ಬಾಣವ ಮಾಡಿ ಬಾಲಕರಿಗೆ ಕೊಡುತ್ತಾಳೆ. ಶತ್ರುಘ್ನ ಭರತ ಒಬ್ಬೊಬ್ಬರಾಗಿ ಯುದ್ಧಕ್ಕೆ ಬರುತ್ತಾರೆ. ಸ್ವಾರಸ್ಯಕರವಾದ ಸಂಭಾಷಣೆ ನಡೆಯುತ್ತದೆ. ಭರತನ ಬಾಣ ತಾಗಿ ಲವ ಮೂರ್ಛೆ ಹೋಗುತ್ತಾನೆ. ಅವನನ್ನು ಎತ್ತಿಕೊಂಡು ಹೋಗಿ ರಾಮನ ಮುಂದೆ ಇಳಿಸಿದಾಗ ಅವನಿಗೆ ಮೋಹ ಉಂಟಾಗುತ್ತದೆ. ಬಾಲಕನನ್ನು ಜೋಪಾನದಿಂದ ಕಾಪಾಡುವಂತೆ ಮಂಥರೆಗೆ ಒಪ್ಪಿಸುತ್ತಾರೆ. ಅವಳು ಅವನನ್ನು ಮಾರಿಗೆ ಬಲಿಕೊಡಲು ನಿರ್ಧರಿಸುತ್ತಾಳೆ. ಇತ್ತ ಕುಶ ಬಂದು ಸೀತೆಗೆ ವಿಷಯ ತಿಳಿಸಿದಾಗ ಸೀತೆ ಮೈ ಮರೆತು ಬೀಳುತ್ತಾಳೆ. ಎಚ್ಚೆತ್ತು ಲವನಿಗಾಗಿ ಹಂಬಲಿಸುತ್ತಾಳೆ. ಕುಶ ಉಪಾಯದಿಂದ ಲವನನ್ನು ರಕ್ಷಿಸುತ್ತಾನೆ. ಇಬ್ಬರೂ ಸೇರಿ ಮಂಥರೆಯನ್ನು ಕೊಂದು ಊರ ಬಾಗಿಲಲ್ಲಿ ಹಾಕುತ್ತಾರೆ. ಊರ ಬಾಗಿಲ ಮುಂದೆ ಮಡಿದ ಮಂತುಣಿ ಕಂಡು ಬೆರಗಾದ ರಾಮ ಭೂಪಾಲಿ' ಇದೆಲ್ಲ ಕುದುರೆ ಕಟ್ಟಿದ ಬಾಲಕರ ಕೆಲಸ ಎಂದು ತಿಳಿದು ಮಕ್ಕಳ ಕಾಳಗವನ್ನು ನೋಡಲು ಶ್ರೀರಾಮನೇ

ಬರುತ್ತಾನೆ. ವಿಷಯ ತಿಳಿದು ಮಕ್ಕಳು ತಾಯಿಗೆ ಎರಗಿ ಬುದ್ಧಿ ಹೇಳಮ್ಮ ಎಂದು ಕೇಳಿಕೊಳ್ಳುತ್ತಾರೆ.

ಮುಂದೆ ಬುದ್ಧಿಯ ನಾನು ಏನು ಹೇಳಲಿ ಮಗನೆ
ಕೊಂಡವರ ತೇಜಿಯ ಕೊಟ್ಟು
ಮುಂದೆ ಶ್ರೀರಾಮರ ಪಾದವೆ ಗತಿ ಎಂದು
ಮುಂದಿನ್ನು ಸುಖದಲ್ಲೀರೆಂದ್ನು[೬೬]

ಶ್ರೀರಾಮನ ಪ್ರಶ್ನೆಗಳಿಗೆ ತರ್ಕಬದ್ಧವಾಗಿ ಮಕ್ಕಳು ನೀಡಿದ ದಿಟ್ಟ ಉತ್ತರಗಳನ್ನು ಕೇಳಿ ರಾಮ ಮೆಚ್ಚುತ್ತಾನೆ. ಕುಲ, ಗೋತ್ರಗಳನ್ನು ವಿಚಾರಿಸುತ್ತಾನೆ. 'ನಿಮ್ಮ ಕುಲ ಗೋತ್ರವೇ ನಮ್ಮದು' ಎನ್ನುತ್ತಾರೆ. ಮಕ್ಕಳು ಕಡೆಗೆ ಯುದ್ಧ ಪ್ರಾರಂಭವಾಗುತ್ತದೆ. ಬಾಲಕರ ಬಾಣ ತಾಗಿ ರಾಮ ಲಕ್ಷ್ಮಣರಿಬ್ಬರು ಮೂರ್ಛೆ ಹೋಗುತ್ತಾರೆ. ಹನುಮ ಜಾಂಬವಂತನ ಹೆಗಲ ಮೇಲಿರಿಸಿಕೊಂಡು ತಾಯಿಯಲ್ಲಿಗೆ ಅವರನ್ನು ಕರೆದು ತರುತ್ತಾರೆ. ಅವರನ್ನು ಕಂಡು ಸೀತೆ ಮೂರ್ಛೆ ಹೋಗಿ ಎಚ್ಚೆತ್ತು ಸೀತೆ ಬಹುವಾಗಿ ಶೋಕಿಸುತ್ತಾಳೆ.

ಆಗ ವಾಲ್ಮೀಕನು ಬ್ರಹ್ಮದೇವರ ಕುರಿತು
ರಾಮರಿಗೆ ಜಪವು ಮಾಡಿದನು
ತಂದು ಕಮಲದಳದುದಕವ ತೊಳೆದಾರು
ಎದ್ದಾರು ರಾಮ ಲಕ್ಷ್ಮಣರು[೬೭]

ವಾಲ್ಮೀಕಿ ಮಹರ್ಷಿಗಳು ಎಲ್ಲ ವಿಷಯಗಳನ್ನು ಸವಿಸ್ತಾರವಾಗಿ ರಾಮನಿಗೆ ತಿಳಿಸುತ್ತಾರೆ. ದಶರಥ ಮಗನಾದ ರಾಮನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ಲವಕುಶರು ಎಂದು ಋಷಿಗಳು ತಿಳಿಸಿದಾಗ ಸತಿಯು ನಮಗಿಲ್ಲ ಸುತರೆಲ್ಲ ಬಂದರು ಋಷಿಗಳೆ ಹಾಸ್ಯ ಮಾಡುವಿರ ಎನ್ನಲು ಹಾಸ್ಯವಲ್ಲವಿದು ಈಶ್ವರನ ಸಾಕ್ಷಿಯಾಗಿ ಸೀತೆ ನಮ್ಮ ಆಶ್ರಮದೊಳಗೆ ಬಂದಾಗ ಆರು ತಿಂಗಳು ಗರ್ಭಿಣಿಯಾಗಿದ್ದಳು. ಮುಂದೆ ಮೂರು ತಿಂಗಳಿಗೆ ಕಂದರನ್ನು ಪಡೆದಳು ಎಂದು ಇಂದಿಗೆ ಹನ್ನೆರಡು ವರ್ಷಗಳು ಎಂದು ಋಷಿ ವಾಲ್ಮೀಕಿ ತಿಳಿಸಿದಾಗ ಶ್ರೀರಾಮನು ಸಂದೇಹ ಪಟ್ಟು ಲಕ್ಷ್ಮಣನನ್ನು ಸೀತೆಯನ್ನು ಕರೆದೊಯ್ದು ಕೊಲ್ಲಲಿಲ್ಲವೇ ಹೇಳು ಎಂದು ಕೇಳಿದಾಗ ಜ್ಞಾನಿಯಾದ ಲಕ್ಷ್ಮಣನು ಸೀತಾದೇವಿಯನ್ನು ಕೊಲ್ಲದೆ ಉಳಿಸಿದೆನು ಎಂದು ಹೇಳುತ್ತಾನೆ. ರಾಮನು ಯಾಕೆ ಉಳಿಸಿದೆ ಎಲ್ಲಿರಿಸಿ ಬಂದೆ ಯಾರ ವಶದಲ್ಲಿರಿಸಿ ಬಂದೆ ಹೇಳು ಎಂದು ಮತ್ತೆ ಕೇಳಿದಾಗ ಲಕ್ಷ್ಮಣನು ಸಮರ್ಥಿಸಿಕೊಳ್ಳುವುದು ಹೀಗೆ.

ಸೀತೆ ಓಡಿ ಹೋಗಿ ಸುತರ ಪಡೆದಾಳೆಂ
ಲೋಕದೊಳಗೆ ಅಪಕೀರ್ತಿ
ಕೆಂಡಕ್ಕೆ ಇರುವೆ ಮುತ್ತವದುಮಟೆ ಎಲೆಸ್ವಾಮಿ
ಚಂದ್ರಮಗೆ ರವಿ ಬಿಸಲುಂಟೆ

ಕಿಚ್ಚಿನೊಳಗೆ ಸರಸ ಬೆರಸಿದವರುಂಟೆ
ಸರ್ಪನೊಳಗೆ ಸ್ನೇಹವುಂಟೇ
ಸಪ್ತ ಸಾಗರದಲ್ಲಿ ಹುಟ್ಟಿದ ಲಕ್ಷ್ಮೀಗೆ ಮತ್ತಪಕೀರ್ತಿಗಳುಂಟೇ[೭೮]

ಎಂದು ಲಕ್ಷ್ಮಣನು ಹೇಳಿದಾಗ ಶ್ರೀರಾಮನು ನಂಬಿಕೆಪಟ್ಟು ಸೀತೆಯನ್ನು ಕರೆದು ಕೊಂಡು ಬಾ ಎಂದು ಹೇಳಿದಾಗ ವಾಲ್ಮೀಕಿ ಋಷಿಗಳು ಮಗಳನ್ನು ಸಂತೈಸಿದರು.

ಸಾರಾವಳಿಯನುಡಿಸಿ ಸೋಗಿಲಕ್ಕಿಯ ಹೊಯ್ದು
ದೇವಿಯ ಕರತಂದನಾಗ
ದೇವಿ ನಿನ್ನನಗಲಿ ಆಳಿದೆನೆ ಪಟ್ಟ
ಬಾಲಾರನೆಂದು ಪಡೆದಿಯೆ[೭೯]

ರಾಮನು ದೇವಿಯನ್ನು ಕುರಿತು ಸಂಶಯದಿಂದ ದೇವಿ ನಿನ್ನನ್ನು ಅಗಲಿ ರಾಜ್ಯವನ್ನಾಳಿದನು ಆದರೆ ಬಾಲಕರನ್ನು ಹೇಗೆ ಪಡೆದೆ ಎಂದು ಕೇಳಿದಾಗ.

ದೇವ ನೀನಲ್ಲದೆ ಬೇರೆ ಪರ ಪುರಷನ
ಮಾರಿಯ ನೋಡಿದರೆ ನಾನು
ಭೂಮಿದೇವಿ ಸಾಕ್ಷಿ ಬಾಲರಿಬ್ಬರ ಸಾಕ್ಷಿ
ದೇವ ಋಷಿಗಳ ಪಾದ ಸಾಕ್ಷಿ

ಎಂದು ಸೀತೆಯು

ದೇವ ನೀ ಪ್ರಾಣವ ಉಳುಹಿದ ಕಾರಣ
ಬಾಲರು ಜನಿಸೂ ಕಾರಣವು
ದೇವ ವಾಲ್ಮಿಕನು ಸಲಹಿದ ಕಾರಣ
ಅರಣ್ಯ ಅಯೋಧ್ಯವಹುದು[೮೦]

ಎಂದು ಸೀತೆಯ ನುಡಿಯುತ್ತಾಳೆ. ಬಾಲಕರು ಭರತ ಶತ್ರುಘ್ನರಿಗೆ ಪ್ರೇಮದಿಂದಲಿ ಕಾಲಿಗೆ ಎರಗಿದರು. ಕೊನೆಗೆ ರಾಮ ಸೀತೆ ಮತ್ತು ಮಕ್ಕಳೊಂದಿಗೆ ಅಯೋಧ್ಯೆಗೆ ಹಿಂತಿರುಗುತ್ತಾನೆ. ಅವರಿಗೆ ಅಯೋಧ್ಯೆ ಪುರದ ಜನರಿಂದ ಭವ್ಯವಾದ ಸ್ವಾಗತ ದೊರೆಯುತ್ತದೆ. ರಾಮಸೀತೆಯರು ಇಬ್ಬರು ಒಂದಾದರು. ಎಂಬ ಫಲಶ್ರುತಿಯೊಂದಿಗೆ ಕಾವ್ಯ ಮುಗಿಯುತ್ತದೆ.

ಸಾಂಗತ್ಯದ ಮಟ್ಟಿನಲ್ಲೇ ರಚಿತವಾಗಿರುವ ಈ ಹಾಡಿನ ಕಥಾವಸ್ತು ರಾಮಾಯಣದ ಉತ್ತರ ಕಾಂಡಕ್ಕೆ ಸೇರಿದ್ದಾಗಿದೆ. ಇದು ಸುಮಾರು ಐದುನೂರು ನುಡಿಗಳ ದೊಡ್ಡ ಹಾಡೆಂದು ಮಹಿಷಿಯವರು ಹೇಳಿದ್ದಾರೆ. ಇಲ್ಲಿ ಬಂದಿರುವ 'ಪಟ್ಟದ ಕಲ್ಪನೆ' ಮತ್ತು ಸೀತೆಯನ್ನು 'ಕಾಡಿಗೆ ಕೊಲ್ಲ'ಲೆಂದು ಕಳಿಸುವ

ವಿಚಾರ ಹೊಸದಾಗಿವೆ. ಲವಕುಶರಿಗೂ ಶತುಘ್ನ ಮೊದಲಾದವರಿಗೂ ನಡೆಯುವ ಸಂಭಾಷಣೆಯಲ್ಲಿ 'ಭವಭೂತಿಯ ಉತ್ತರ ರಾಮಚರಿತದ' ಪ್ರಭಾವ ಇರಬಹುದೆಂದೂ ಮಹಿಷಿಯವರು ಗುರುತಿಸಿದ್ದಾರೆ.

'ತಿಣಕಿದನು ಫಣಿರಾಮ ರಾಮಾಯಣಗಳ ಭಾರದಲಿ' ಎಂಬ ಮಾತಿನಿಂದ ಭೂಮಿಗೆ ಭಾರವಾಗುವಷ್ಟು ಸಂಖ್ಯೆಯಲ್ಲಿ ರಾಮಾಯಣಗಳು ರಚಿತವಾಗಿವೆ ಎಂದು ತಿಳಿದುಬರುತ್ತದೆ. ಸಂಸ್ಕೃತದ ವಾಲ್ಮೀಕಿ ಹಿಂದಿಯ ತುಳಸಿದಾಸ ತಮಿಳಿನ ಕಂಬನ್ ಕನ್ನಡದ ನಾಗಚಂದ್ರ, ಆಧುನಿಕ ಸಂದರ್ಭದಲ್ಲಿ ಕುವೆಂಪು ಮುಂತಾದವರ ರಾಮಾಯಣಗಳು ಪ್ರಸಿದ್ಧವಾಗಿವೆ. ಇವರಷ್ಟು ಪ್ರಸಿದ್ಧರಲ್ಲದ ಇನ್ನೂ ಎಷ್ಟೋ ಕವಿಗಳು ಪುರಾಣಕಾರರು ಅನೇಕ ಭಾಷೆಗಳಲ್ಲಿ ರಾಮಾಯಣದ ಕಥೆಯನ್ನು ಬರೆದಿದ್ದಾರೆ. ಟಿಬೆಟ್ , ಮಲಯ, ಜಾವ, ಇಂಡೋನೇಶಿಯ ಸಿಂಹಳ ಮುಂತಾದ ದಕ್ಷಿಣ ಪೂರ್ವ ಏಷ್ಯದ ದೇಶಗಳಲ್ಲೂ ಅನೇಕ ರಾಮಾಯಣಗಳು ರಚಿತವಾಗಿವೆ.

ಒಬ್ಬ ಅಗಸನಾಡಿದ ಮಾತನ್ನು ತಿಳಿದ ಶ್ರೀರಾಮನು ಜನಾಪವಾದಕ್ಕೆ ಹೆದರಿ ಸೀತೆಯನ್ನು ಕಾಡಿಗೆ ಕಳಿಸಿದ ಕಥೆಯನ್ನು ಅನೇಕ ಕವಿಗಳು ವಿವರಿಸಿದ್ದಾರೆ. ಕೆಲವು ರಾಮಾಯಣಗಳ ಪ್ರಕಾರ ಸೀತಾ ಪರಿತ್ಯಾಗಕ್ಕೆ ಕಾರಣವಾದ ಘಟನೆ ಬೇರೊಂದು ರೀತಿಯಾಗಿದೆ. ಸೀತೆ, ರಾಮ ಮತ್ತು ರಾವಣರ ಪಾತ್ರಗಳ ಮೇಲೆ ಈ ಘಟನೆ ಹೊಸ ಬೆಳಕನ್ನು ಚೆಲ್ಲುವಂತಿದೆ. 'ಲವಕುಶರ ಕಾಳಗ' ಉತ್ತರ ರಾಮಚರಿತ್ರೆಯಿಂದ ವಸ್ತು ಪಡೆದಿದ್ದರೂ ಗಿರಿಯಮ್ಮನ 'ಲವಕುಶರ ಕಾಳಗ'ದ ಮೊದಲರ್ಧ ಭಾಗದ ಪಠದ ಕಲ್ಪನೆ ಅತ್ಯಂತ ಹೊಸದು. ಸಾಮಾನ್ಯವಾಗಿ ಎಲ್ಲ ಉತ್ತರ ರಾಮಾಯಣಗಳಲ್ಲೂ ಸೀತಾ ಪರಿತ್ಯಾಗಕ್ಕೆ ಕಾರಣವಾದ ಅಗಸನ ಕಥೆ ಬಂದೇ ಬರುತ್ತದೆ. ಆದರೆ ಇಲ್ಲಿ ಗಿರಿಯಮ್ಮ ಅಗಸರವನ ಪಾತ್ರಕ್ಕೆ ಬದಲು ಕೊರವಿಯ ಪಾತ್ರವನ್ನು ಸೃಷ್ಟಿಸಿದ್ದಾಳೆ. ಅದು ಗಿರಿಯಮ್ಮನ ಮಹತ್ವಪೂರ್ಣವಾದ ಬದಲಾವಣೆಯಾಗಿದೆ. ಸೀತೆಯ ಆಂತರಿಕೆ ತೊಳಲಾಟವನ್ನು ನಿರೂಪಿಸಲು ಗಿರಿಯಮ್ಮ ಅತ್ಯಂತ ಮಾರ್ಮಿಕವಾದ ಸನ್ನಿವೇಶವನ್ನು ಸೃಷ್ಟಸಿದ್ದಾಳೆ.

'ಲವಕುಶರ ಕಾಳಗದ ಮೊದಲರ್ಧ ಭಾಗದಲ್ಲಿ ಸೀತಾ ಪರಿತ್ಯಾಗಕ್ಕೆ ಕಾರಣವಾದ ಸನ್ನಿವೇಶ ನಿರೂಪಿತವಾಗಿದೆ. ರಾಮ ಲಕ್ಷ್ಮಣರು ಬೇಟೆಗಾಗಿ ಅರಣ್ಯಕ್ಕೆ ಹೋಗಿರುತ್ತಾರೆ. ಶೂರ್ಪನಖಿಯು ಕೊರವಿಯ ವೇಶದಲ್ಲಿ ಸೀತೆಯ ಬಳಿಗೆ ಬರುತ್ತಾಳೆ. 'ಆವ ಕುಲವೆ ನೀನು ಏನು ಕಾರಣ ಬಂದಿ ಈ ನಾಡ ಕೊರವಿ ನೀನಲ್ಲ' ಎಂದು ಸೀತೆ ಕೇಳುತ್ತಾಳೆ. ಕೊರವಿ ನಾಗಮಲ್ಲಿಗೆ ಹೂವನ್ನು ನೀಡಿದಾಗಲೂ ಸೀತೆಗೆ ಸಂದೇಹವೇ ಆಗುತ್ತದೆ. ಅನ್ನ ವಸ್ತ್ರವ ನಾನೊಲ್ಲೆ ಹೊನ್ನು ಹಣವನೊಲ್ಲೆ ನಿನ್ನ ಭಾಗ್ಯವ ನಾನೊಲ್ಲೆ ಮುನ್ನಿನಸುರನ ರೂಪು ನೀ ಬರೆದರೆ ಚೆನ್ನಾಗಿ ಹರನ ಗೆಲ್ಲುವೆನು' ಎಂದು ಕೊರವಿ ಬೇಡುತ್ತಾಳೆ. ಸೀತೆ ಒಪ್ಪದಿದ್ದರೂ ಕೊರವಿ ಮರಳು ತಂದು ಹಾಸುತ್ತಾಳೆ. ಮೊದಲು ಸೀತೆ ರಾವಣನ

ಅಂಗುಷ್ಟವನ್ನು ಮಾತ್ರ ಬಲ್ಲೆನೆನುತ್ತಾಳೆ. ಅಂಗುಷ್ಟ ಎಂಬುದಕ ಮುಂದೆ ಪಾದವ ಬರಿ ಎಂದು ಕೊರವಿ ಗೋಗರೆಯುತ್ತಾಳೆ. ಹೀಗೆ ಮುಂದುವರಿದು ಕೊನೆಗೆ ಸೀತೆ ದೈನ್ಯದಿಂದ ಬೇಡಿದಳು 'ಚೆಂದವಾದೀತು ಸೀತೆ ವರವ ಕೊಡೆಂದಾಳು ಎಂದೆಂದಿಗು ಅಳಿಯದಂತೆ' ಸೀತೆ ಒಂದು ಷರತ್ತಿನ ಮೇಲೆ ಆ ಪಟ ಅಳಿಯದಂತೆ ವರವಕೊಟ್ಟಳು ಕಿರಿಯ ಲಕ್ಷ್ಮಣದೇವ ಹೊಡೆದರೆ ಮಡಿಯೆಂದು ವರವಕೊಟ್ಟಳು ಶ್ರಿ ಪಟಕೆ ಕೂಡಲೇ ಕೊರವಿ ಆ ಪಟವನ್ನು ಮೇಲಕ್ಕೆ ಹಾರಿ ಬಿಟ್ಟು ತಾನು ಮಾಯವಾದಳು ಆ ಪಟ ಯಾರ ಕೈಗೂ ಸಿಗದೆ ಕುಣಿಯತೊಡಗಿತು. ಸೀತೆ ಇಂದಿನ ವಿಧಿಯನೆ ಕಳೆಯಲಾರೆನೆಂದು ಬಂದೊರಗಿದಳು ಮಂಚದಲೆ ಛಂದಾಗಿ ಸೀರೆಯ ಮುಸುಕಿನಲಿ ಆ ಪಟ ಬಂದೆರಗಿತು ತೋಳ ಎಡಗೆ'

ಸೀತೆಯಿಂದ ಅಳಿಯದಂತಹ ವರವನ್ನು ಪಡೆದ ಆ ಪಟ ಉರಿಯಲ್ಲಡಗಲಿಲ್ಲ ಶರಧಿಯಲ್ಲಿ ಮುಳುಗಲಿಲ್ಲ ಸೀತೆ ಕುಣಿಯುತ್ತಿದ್ದ ಪಟವನ್ನು ಹಾಸಿಗೆಯ ಕೆಳಗೆ ಹಿಡಿದಿಟ್ಟು ಮಲಗಿದಳು. ಬೇಟೆಯಿಂದ ಹಿಂದಿರುಗಿದ ರಾಮನನ್ನು ಎದುರುಗೊಳ್ಳಲು ಸೀತೆ ಹೋಗಲಿಲ್ಲ ರಾಮನೇ ಸೀತೆಯನ್ನು ಕಾಣಲು ಬಂದಾಗ ಅವಳ ಭಯವನ್ನು ಕಂಡು ಶ್ರೀರಾಮನು ಮಂಚದ ಮೇಲೆ ಕುಳಿತೊಡನೆ ಆ ಮಂಚ ಮುರಿದು ಬೀಳುತ್ತದೆ. ತಂದೆಯ ಕಾಲದಿಂದಲೂ ಇದ್ದ ದೊಡ್ಡ ಮಂಚ ಮುರಿಯಲು ಕಾರಣವೇನೆಂದು ಲಕ್ಷ್ಮಣ ಬಂದು ಹಾಸುಗೆಯನ್ನು ತೆಗೆದು ಪರೀಕ್ಷಿಸಲು ಹತ್ತು ತಲೆ ರಾವಣನ ಪಟ ಎದ್ದು ಕುಣಿಯತೊಡಗಿತು. ರಾಮ ಲಕ್ಷ್ಮಣರಿಬ್ಬರಿಗೂ ಆಶ್ಚರ್ಯ, ದುಃಖ, ಕೋಪ ಉಂಟಾಗಿ ರಾಮ

ಏಸು ದಿವಸ ಘಾಸಿಯಾಗಿ ಬರೆದೆ ಇವನ
ಏಸು ದಿವಸ ಭೋಗಿಸಿದೆ
ಮೋಸ ಮಾಡಿದೆ ಸೀತೆ ಏನಕೂಡ ಹೇಳದೆ
ಘಾತವಾಯಿತು ದೇವಿ ಎಂದ[೭೧]

ಎಂದು ರಾಮನು ಕೋಪದಿಂದ ಕೆರಳಿ ಕೇಳಿದಾಗ 'ಭೂಮಿದೇವಿ ಮಗಳೆಂದು ನಾ ತಂದೆನೆ ನಾಡೊಳಗೆ ಪತಿವ್ರತೆ ಎಂದು ಪ್ರಾಣದೊಲ್ಲಭೆ ಸತಿ ಎಂದು ನಂಬಿದೆ ರಾವಣಗೆ ಮರುಳಾಗೋದರಿಯೆ' ಎಂದು ರಾಮ ನೊಂದು ನುಡಿದಾಗ ಕೊನೆಗೆ ಲಕ್ಷ್ಮಣನು ಪಟವನ್ನು ಹರಿದು ಹಾಕುತ್ತಾನೆ. ರಾಮನು ಸೀತೆಯನ್ನು ಕಾಡಿನಲ್ಲಿ ಕೊಂದು ಬರುವಂತೆ ಲಕ್ಷ್ಮಣನಿಗೆ ಅಪ್ಪಣೆ ಮಾಡುತ್ತಾನೆ. ಅದರಂತೆ ಲಕ್ಷ್ಮಣನು ಸೀತೆಯನ್ನು ಕೊಲ್ಲದೆ ಕಾಡಿಗೆ ಹೋಗಿ ಬಿಟ್ಟು ಬರುತ್ತಾನೆ.

ಇಲ್ಲಿ ರಾಮ ಸೀತೆ ಮತ್ತು ರಾವಣರ ಪಾತ್ರಗಳ ರಚನೆ ಬೆರಗುಗೊಳಿಸುತ್ತವೆ. ಮತ್ತು ವಿನೂತನವಾಗಿವೆ. ಸೀತೆ ಕೊರವಿಯ ಪ್ರೇರಣೆಯಿಂದ ರಾವಣನ ಚಿತ್ರವನ್ನು ಬರೆಯಲು ಸಂಕೋಚಪಟ್ಟು ಪಾದದಿಂದ ಆರಂಭಿಸಿ ಹತ್ತು ತಲೆಗಳನ್ನು ಬರೆದು ಮುಗಿಸುತ್ತಾಳೆ. ಅದಕ್ಕೆ ಪ್ರಾಣವನ್ನೂ ನೀಡುತ್ತಾಳೆ. ಆದರೆ ಚಿತ್ರ ಬರೆಯುವಾಗ ರಾವಣನ ಬಗೆಗಿದ್ದ ಸೀತೆಯ ಭಾವನೆಗಳು ಎಲ್ಲೂ ವ್ಯಕ್ತವಾಗಿಲ್ಲ. ಅದು

ಮೆಚ್ಚಿಗೆಯೊ, ತಿರಸ್ಕಾರವೊ ಅಥವಾ ಕೇವಲ ನೆನಪೋ ತಿಳಿಯುವುದಿಲ್ಲ. ತನ್ನ ಇಚ್ಛೆಗೆ ವಿರುದ್ಧವಾಗಿ ತನ್ನನ್ನು ಅಪಹರಿಸಿದರೂ ಗೌರವದಿಂದ ಕಂಡು ಕೊನೆಗೆ ತನಗಾಗಿ ತನ್ನ ಪ್ರಾಣವನ್ನೇ ತೆತ್ತ ರಾವಣನ ಬಗ್ಗೆ ಸೀತೆಯ ಭಾವನೆ ಏನೆಂಬುದನ್ನು ಆ ಚಿತ್ರ ಸಂಕೇತಿಸುತ್ತಿರಬಹುದೆ? ಅಗ್ನಿ ಪರೀಕ್ಷೆಯ ನಂತರ ಸೀತೆಯನ್ನು ಸ್ವೀಕರಿಸಿದ್ದ ರಾಮ ರಾವಣನ ಚಿತ್ರವನ್ನು ಸೀತೆಯ ಬಳಿಯಲ್ಲಿ ಕಂಡ ಕೂಡಲೆ ಕೆರಳಿದ್ದೇಕೆ? ರಾವಣನ ಸಾವಿನ ನಂತರವೂ ಪುರುಷ ಸಹಜವಾದ ಅಸೂಯೆ ಸಂಶಯಗಳು ರಾಮನನ್ನು ಇಂಹತ ಕ್ರೂರ ಕೆಲಸಕ್ಕೆ ತಳ್ಳಿದುವೆ? ಇಂತಹ ಅನೇಕ ಭಾವನೆಗಳು ಓದುಗರ ಮನಸ್ಸಿನಲ್ಲಿ ಸಹಜವಾಗಿ ಮೂಡುತ್ತವೆ. 'ಲವಕುಶರ ಕಾಳಗ' ಉತ್ತರ ರಾಮಾಯಣಕ್ಕೆ ಸಂಬಂಧಿಸಿದ ಕಥೆಯಾದರೂ ಕೆಲವೊಂದು ಅಪೂರ್ವ ಬದಲಾವಣೆಗಳು ಇಲ್ಲಿ ಕಂಡುಬರುತ್ತವೆ. ಶೂರ್ಪನಖಿಯು ಕೊರವಿಯ ವೇಷದಲ್ಲಿ ಬಂದು ಸೀತೆಗೆ ರಾವಣನ ಚಿತ್ರ ಬರೆಯಲು ಪ್ರೇರೇಪಿಸುವುದು. ಸೀತೆ ಚಿತ್ರ ಬರೆಯುವುದು. ಕೊರವಿ ಅದಕ್ಕೆ ಜೀವ ಕಳೆ ತುಂಬುವುದು ಇತ್ಯಾದಿ. ಈ ವಿಷಯಗಳನ್ನು ಗಿರಿಯಮ್ಮ ಜಾನಪದ ಮೂಲಗಳಿಂದ ಪಡೆದುಕೊಂಡಂತೆ ತೋರುತ್ತದೆ. ಈ ಕಥಾಸ ಭಾಗವನ್ನೇ ಆಧರಿಸಿ ಚದುರಂಗರು 'ಬಿಂಬ' ಎಂಬ ನಾಟಕವನ್ನು ರಚಿಸಿದ್ದಾರೆ.

ವಾಲ್ಮೀಕಿ ರಾಮಾಯಣದಲ್ಲಿ ಒಬ್ಬ ಅಗಸನ ಮಾತು ರಾಮನಿಗೆ ನೋವುಂಟು ಮಾಡುತ್ತದೆ. ಆದುದರಿಂದ ಸೀತೆಯನ್ನು ಕಾಡಿಗೆ ಅಟ್ಟಿದನೆಂಬುದಾಗಿದೆ. ಆದರೆ ಜನಪದರು ಅಷ್ಟಕ್ಕೆ ರಾಮ ಸೀತೆಯನ್ನು ಕಾಡಿಗೆ ಅಟ್ಟಿದನೆಂದು ಹೇಳಿದರೆ ನಂಬರು. ಬೇರೆಯೇ ಆದ ಬಲವಾದ ತಪ್ಪು ಇರಬಹುದೆಂದು ಕಲ್ಪಿಸಿದರು. ಹೀಗಾಗಿ ಕಥೆಯ ತಿರುವನ್ನು ಇನ್ನೊಂದು ಮುಖದಿಂದ ಊಹಿಸಿದ್ದಾರೆ.

ಸೀತೆ ರಾವಣನ ಪಟವನ್ನು (ಚಿತ್ರವನ್ನು) ಬರೆದಿರುವುದನ್ನು ಇವರು ಒಪ್ಪುವುದಿಲ್ಲ. ವಿಧಿಯ ಕರಾಳ ಛಾಯೆಯಿಂದಲೇ ಸೀತೆಯ ಶೀಲವನ್ನು ರಾಮ ಶಂಕಿಸುವಂತಾಗಿದೆ ಎಂದು ಸಮರ್ಥಿಸುವರು. ಇವರಿಗೆ ರಾಮನ ಮೇಲೆ ತಪ್ಪು ಹಾಕಲು ಇಷ್ಟವಿಲ್ಲ. ಸೀತೆಯನ್ನು ಪತಿವ್ರತೆ ಅಲ್ಲವೆಂದು ಅಲ್ಲಗಳೆಯಲೂ ಸಾಧ್ಯವಿಲ್ಲ. ಇಂತಹ ಸಂದಿಗ್ಧತೆಯ ಸ್ಥಿತಿಯಲ್ಲಿ ಜನಪದರಿಗೆ ನಂಬಿಕೆಗಳು ನೆರವಿಗೆ ಬರುತ್ತವೆ. ಇದನ್ನು ಗಿರಿಯಮ್ಮ ಕಥೆಯ ಓಟಕ್ಕೆ ಚೆನ್ನಾಗಿ ಬಳಸಿಕೊಳ್ಳುವಲ್ಲಿ ನಿಪುಣತೆಯಿಂದ ಸೀತೆಯನ್ನು ಸಮರ್ಥಿಸುವುದು ಹೀಗೆ.

ಕೆಂಡಕ್ಕೆ ಇರುವೆ ಮುತ್ತುವುದುಂಟೆ ಎಲೆ ದೇವಿ
ಚಂದ್ರಮಕೆ ರವಿ ಬೀಸಲುಂಟೆ
ಮುಂದೇಳು ಲೋಕವನ ಹೊರುವ ಜಗನ್ಮಾತೆಗೆ
ನಿಂದ್ಯಾ ಪಕೀರ್ತಿಗಳುಂಟೇ[೨೨]

ಲೌಕಿಕದ ವ್ಯಕ್ತಿಗಳನ್ನು ಅಲೌಕಿವಾಗಿಸುವ ಪ್ರಯತ್ನ ನಮ್ಮ ಜನಪದ ಕಥೆಗಳ ತಂತ್ರವಾಗಿದೆ. ಲವಕುಶರ ಮೂಲಕ ರಾಮ ಸೀತೆಯರು ಒಂದಾಗುತ್ತಾರೆ. ಕಥೆ ಸುಖಾಂತವಾಗಿ ಮುಗಿಯುತ್ತದೆ. ಸೀತೆಯನ್ನು ಮತ್ತು ಲವಕುಶರನ್ನು ರಾಮಸ್ವೀಕರಿಸುವುದು ಅವನ ದೊಡ್ಡತನದಿಂದ ಇಲ್ಲಿ ಸ್ವೀಕರಿಸುವ ವ್ಯಕ್ತಿಯ ದೊಡ್ಡತನವನ್ನು ವ್ಯಕ್ತಪಡಿಸುವುದರ ಜೊತೆಗೆ ಮಾನವೀಯ ಮೌಲ್ಯ ದೊಡ್ಡಗುಣವೆಂದು ಗುರುತಿಸಲಾಗಿದೆ.

ಉತ್ತಮರು ರಾಮಲಕ್ಷ್ಮಣರಾದ ಕಾರಣ
ಮತ್ತೆ ಕೈ ಹಿಡಿದರು ನಿಮ್ಮ

ಎಂಬ ಮಾತು ನಮ್ಮ ಜನರಲ್ಲಿ ರಾಮನ ಪಾತ್ರ ಪಡೆದುಕೊಂಡ ಸ್ಥಾನವನ್ನು ಪರಿಚಯಿಸುತ್ತದೆ. ಎಲ್ಲ ರೀತಿಯಿಂದಲೂ ರಾಮ ಶ್ರೇಷ್ಠ ಧರ್ಮಿಷ್ಟ ಮತ್ತು ಸದ್ಗುಣ ಸಂಪನ್ನ ಅವನ ಒಳ್ಳೆಯ ನಡತೆ ಯಾರನ್ನು ನೋವಿಗೆ ಗುರಿಪಡಿಸುವುದಿಲ್ಲ ಹೀಗಾಗಿ ಕಥೆ ಜನಪದ ಸಮಾಜದ ಮೌಲ್ಯಗಳನ್ನು ಪರಿಚಯಿಸುವಲ್ಲಿ ಪ್ರಮುಖ ಸ್ಥಾನವನ್ನು ಪಡೆಯುತ್ತದೆ.

ಇಲ್ಲಿ ಕಂಡುಬರುವ 'ಲವಕುಶರ ಕಾಳಗ'ದ ರಾವಣನ ಚಿತ್ರಪಟ ಸನ್ನಿವೇಶವು ಕರ್ನಾಟಕದ ಧಾರವಾಡ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಮೇಲಿನ ಕಥೆಯನ್ನು ಆಧರಿಸಿ 'ಚಿತ್ರಪಟ ರಾಮಾಯಣ' ಎಂಬ ಬಯಲಾಟದ ರೂಪದಲ್ಲಿ ಇತ್ತೀಚಿನವರೆಗೂ ಪ್ರದರ್ಶಿಸಲಾಗುತ್ತಿತ್ತು.

ಜಾನಪದ ಅಂತಸ್ಸತ್ವವುಳ್ಳ ಈ ದೇಶೀ ರಾಮಾಯಣಗಳು ವಾಲ್ಮೀಕಿ, ಭವಭೂತಿ ತುಳಸಿದಾಸರ ಕೃತಿಗಳಿಗಿಂತಲೂ ಭಿನ್ನವಾಗಿದ್ದರೂ ಭಾಷಾ ಮತ್ತು ಭೌಗೋಳಿಕ ವೈವಿಧ್ಯತೆಗಳಿಂದ ಕೂಡಿದ್ದು ಇಂದಿಗೂ ಜನಮನದಲ್ಲಿ ಜೀವಂತಿಕೆಯನ್ನು ಉಳಿಸಿಕೊಂಡು ಬಂದಿದೆ.

ಹೆಳವನಕಟ್ಟೆ ಗಿರಿಯಮ್ಮನ 'ಲವಕುಶರ ಕಾಳಗ'ದ ಪ್ರಭಾವದಿಂದ ಚಿತ್ರಪಟದ ಸನ್ನಿವೇಶದ ಕಥೆಯ ಮೂಲದಿಂದ ಹಟ್ಟಿಯಂಗಡಿ ರಾಮಭಟ್ಟರು ಲವಕುಶರ ಕಾಳಗದ ಯಕ್ಷಗಾನದ ಪ್ರಸಂಗವನ್ನು ನಿರ್ಮಿಸಿದ್ದಾರೆ".[೨೪] ಕಥೆಯು ಹೀಗೆ ಇದೆ. ರಾವಣಾದಿಗಳ ವಧೆಯ ಅನಂತರ ಸೀತೆಯೊಂದಿಗೆ ರಾಮನು ರಾಜ್ಯವಾಳುತ್ತಿರಲು ಒಂದು ದಿನ ಕಾಡಿನ ಮೃಗಗಳ ಬಾಧೆಯ ಬಗ್ಗೆ ಪ್ರಜೆಗಳು ದೂರು ಹೇಳಿದರು. ಅವರಿಗೆ ಅಭಯವಿತ್ತು ಭರತನೊಂದಿಗೆ ರಾಮನು ಭೇಟೆಗೆ ಹೊರಟನು. ಆಗ ಕಾಡಿನಲ್ಲಿದ್ದ ಶೂರ್ಪನಖಿಯು ಹಿಂದಿನ ಅಪಮಾನವನ್ನು ನೆನೆದು ರಾಮಸೀತೆಯರನ್ನು ಅಗಲಿಸುವ ಉಪಾಯವನ್ನು ಮಾಡಿ ಯೋಗಿನಿಯಾದ ಮುದುಕಿಯ ವೇಷದಲ್ಲಿ ಅಯೋಧ್ಯೆಗೆ ಬಂದು ಸೀತೆಯನ್ನು ಕಂಡು, ಸೀತೆ ಸತ್ಕರಿಸಿದಾಗ ಆಕೆಯು ರಾವಣನ ಚಿತ್ರವನ್ನು ಬರೆಯುವಂತೆ ಹೇಳಿ ಆ ಚಿತ್ರವನ್ನು ಸೀತೆಯಿಂದ ಬರೆಸಿ ತೆಗೆದುಕೊಂಡು ಅದರಿಂದ ಹೊಟ್ಟೆ ಹೊರೆಯುವುದಾಗಿ ಹೇಳಿದಳು. ಮೊದಲು ಅರಿಯೆನೆಂದ ಸೀತೆ

ಚರಣದುಂಗುಷ್ಠದ ಚಿತ್ರವನ್ನು ಬರೆದಳು. ಅದನ್ನು ಮುದುಕಿಯೇ ಪೂರ್ತಿ ಮಾಡಿ ಅದಕ್ಕೆ ಜೀವವನ್ನು ನೀಡುವಂತೆಯೂ ಲಕ್ಷ್ಮಣನಿಂದಲ್ಲದೆ ಮರಣವಿಲ್ಲದಂತೆಯೂ ಸೀತೆಯಿಂದ ವರವನ್ನು ಬೇಡಿ ಪಡೆದಳು. ಇದು ತನ್ನ ಗಂಡನಿಗೆ ತಿಳಿದರೆ ಕೋಪಿಸುವನೆಂದು ಸೀತೆಯೆಂದಾಗ ಆ ಚಿತ್ರಪಟವನ್ನು ಅಲ್ಲಿಯೇ ಬಿಟ್ಟು ತನ್ನ ಘೋರ ರೂಪವನ್ನು ತೋರಿಸಿ ಕಾಣದಾದಳು. ಸೀತೆ ಆ ಚಿತ್ರಪಟವನ್ನು ನಾಶಮಾಡಲು ಸಾಧ್ಯವಾಗದೆ ದುಃಖಿಸಿದಳು. ರಾಮನು ಬರುವಾಗ ಪಟವನ್ನು ಹಾಸಿಗೆಯಡಿಯಲ್ಲಿ ಅಡಗಿಸಿಟ್ಟಳು.

ರಾಮನು ಬಂದು ಮಂಚದಲ್ಲಿ ಕುಳಿತಾಗ ಮಂಚ ಮುರಿಯಿತು. ರಾಮನು ಹಾಸಿಗೆಯನ್ನೆತ್ತಿ ನೋಡಿದಾಗ ರಾವಣನ ಪಟವನ್ನು ಕಂಡನು. ರಾಮನು ಕೋಪದಿಂದ ಸೀತೆಯನ್ನು ಬಯ್ಯು ಕೌಸಲ್ಯಾದಿಗಳೂ ಬಂದು ಪಟವನ್ನು ನೋಡಿದರು. ಕೌಸಲ್ಯೆ ಸೀತೆಯನ್ನು ವಿಚಾರಿಸಲು ಆಕೆ ತನ್ನ ನಡತೆಯ ಸತ್ಯತೆಯನ್ನು ನಿರೂಪಿಸಿದಳು. ರಾಮನು ಲಕ್ಷ್ಮಣನನ್ನು ಕರೆದು ದನುಜ ಪಟವನ್ನು ಬ್ರಹ್ಮಾಸ್ತ್ರದಿಂದ ನಾಶಪಡಿಸಲು ಹೇಳಿದಾಗ ಅವನು ಹಾಗೆಯೇ ಮಾಡಿದನು. ರಾಮನು ಅನಂತರ ಸೀತೆಯನ್ನು ಕಾಡಿನಲ್ಲಿ ಕೊಂದು ಬರುವಂತೆ ಹೇಳಿದನು. ಆಗ ಲಕ್ಷಣನು ರಾಮನಿಗೆ ಸಮಾಧಾನದ ಮಾತುಗಳನ್ನು ಹೇಳಿದನು.

ಕಾಡಿನಲ್ಲಿ ರಾಮನು ಹೇಳಿದಂತೆ ಸೀತೆಯನ್ನು ಕೊಲ್ಲಲು ಲಕ್ಷ್ಮಣನು ಖಡ್ಗವನ್ನೆತ್ತಲು ಸೀತೆಯು ಗರ್ಭಿಣಿ ಎಂದು ತಿಳಿದು ತನಗೆ ಆರು ತಿಂಗಳೆಂದು ಸೀತೆ ಹೇಳಿದಾಗ ಲಕ್ಷ್ಮಣನು ಸೀತೆಯನ್ನು ಕೊಲ್ಲದೆ ನಿಶ್ಚಯಿಸಿ ಆಕೆಯನ್ನು ಕಾಡಿನಲ್ಲಿ ಬಿಟ್ಟು ಹೊರಟು ಹೋಗಲು ಸೀತೆ ಮೂರ್ಚಿತಳಾದಳು. ಲಕ್ಷ್ಮಣನು ನೆತ್ತರ ಹೊನ್ನೆಯೆಂಬ ಮರದ ರಸವನ್ನು ರಕ್ತವೆಂದು ರಾಮನಿಗೆ ತೋರಿಸಲು ರಾಮನು ಸೀತೆಯ ವಿಯೋಗದಿಂದ ದುಃಖಿಸುತ್ತಾನೆ. ಆಗ ಜಾಂಬವನು ರಾಮನನ್ನು ಬಹುವಿಧದಿಂದ ಸಂತೈಸುತ್ತಾನೆ.

ಇತ್ತ ಕಾಡಿನಲ್ಲಿ ಸೀತೆ ತನ್ನ ಸ್ಥಿತಿಗಾಗಿ ದುಃಖಿಸುತ್ತಿರಲು ಶಿವಪಾರ್ವತಿಯು ಸೀತೆಯ ದುಃಖವನ್ನು ಕಂಡು ಆಕೆಯ ರಕ್ಷಣೆ ನೀಡುವಂತೆ ಶಿವನನ್ನು ಕೇಳಲು ಶಿವನು ರಕ್ಷಿಸುವುದಾಗಿ ಭರವಸೆ ನೀಡಿದನು. ಆಗ ನಾರದ ಮುನಿಯು ಬರಲು ಶಿವನು ಅವನನ್ನು ಸೀತೆಯೆಡೆಗೆ ಕಳುಹಿಸಿದನು. ಸೀತೆಯೆಡೆಗೆ ಬಂದ ನಾರದನು ಸೀತೆಯ ವಿಷಯಗಳನ್ನೆಲ್ಲ ತಿಳಿದು ಸಮೀಪದಲ್ಲಿರುವ ವಾಲ್ಮೀಕಿಯಾಶ್ರಮಕ್ಕೆ ಹೋಗಲು ಹೇಳಿದನು. ಆಶ್ರಮದಲ್ಲಿದ್ದ ವಾಲ್ಮೀಕಿಯು ಸೀತೆಯನ್ನು ಸ್ವಾಗತಿಸಲು ವಟುಗಳನ್ನು ಕಳುಹಿಸಿದನು. ಆಗಮಿಸಿದ ಆಕೆಯನ್ನು ಸ್ವಾಗತಿಸಿ ಪುತ್ರಿಯಂತೆ ಸಲಹುವುದಾಗಿ ತಿಳಿಸಿ ಆಕೆಯ ಪರಿಚರ್ಯೆಗೆ ಮುನಿವಧುಗಳನ್ನು ನೇಮಿಸಿದನು.

ಸೀತೆ ಆಶ್ರಮದಲ್ಲಿ ಮಗುವನ್ನು ಹೆರಲು ಆ ಮಗುವಿಗೆ ಲವನೆಂದು ವಾಲ್ಮೀಕಿಯು ಹೆಸರಿಟ್ಟರು. ಬೆಳೆಯುತ್ತಿರುವ ಮಗುವನ್ನು ತೊಟ್ಟಿಲಲ್ಲಿ ಮಲಗಿಸಿ ಸ್ನಾನಕ್ಕಾಗಿ ಸರೋವರಕ್ಕೆ ಬಂದ ಸೀತೆಯು ಕೋಡಗಗಳು ಮರಿಗಳನ್ನು ಮುದ್ದಾಡುವ ದೃಶ್ಯವನ್ನು ನೋಡಿ ಮಗುವಿನ ನೆನಪಾಗಿ ಹಿಂದೆ ಬಂದು

ತೊಟ್ಟಿಲಲ್ಲಿದ್ದ ಶಿಶುವನ್ನು ಎತ್ತಿಕೊಂಡು ಸರೋವರದೆಡೆಗೆ ಹೋದಳು ತೊಟ್ಟಿಲಲ್ಲಿದ್ದ ಶಿಶುವನ್ನು ಕಾಣದ ವಾಲ್ಮೀಕಿಯು ಕುಶವೊಂದನ್ನು ಮಂತ್ರಿಸಿ ಮಗುವನ್ನಾಗಿ ಮಾಡಿ ತೊಟ್ಟಿಲಲ್ಲಿರಿಸಿದನು. ಸ್ನಾನ ಮಾಡಿ ಬಂದ ಸೀತೆ ಆ ಮಗುವನ್ನು ಕಂಡು ಆಶ್ಚರ್ಯಪಡಲು ಮುನಿಯು ಸತ್ಯಸಂಗತಿಯನ್ನು ತಿಳಿಸಿದನು. ಸೀತೆಯು ಹೀಗೆ ಇಬ್ಬರು ಮಕ್ಕಳ ತಾಯಿಯಾದಳು. ಬೆಳೆಯುತ್ತಿದ್ದ ಮಕ್ಕಳಿಗೆ ಸಕಾಲದಲ್ಲಿ ಮುನಿಯು ಉಪನಯನಾದಿಗಳನ್ನು ಮಾಡಿ ಧನುರ್ವೇದಾದಿ ವಿದ್ಯೆಗಳನ್ನು ಕಲಿಸಿದನು. ಇಲ್ಲಿಗೆ ಮೊದಲನೆಯ ಸಂಧಿ ಮುಗಿಯುತ್ತದೆ.

'ಲವಕುಶರ ಕಾಳಗ'ವು ಉತ್ತರ ರಾಮಾಯಣದ ಕಥೆ ಯಕ್ಷಗಾನ ಕವಿಗಳು ಮೂಲಕೃತಿಗಳು ನೇರವಾದ ಅನುಕರಣೆಯನ್ನು ಮಾಡದೆ ಅಷ್ಟಿಷ್ಟು ಬದಲಾವಣೆಗಳನ್ನೂ ರಂಗಕ್ಕೆ ಉಚಿತವಾದ ವ್ಯತ್ಯಾಸಗಳನ್ನೂ ಮಾಡಿಯೇ ಮಾಡುತ್ತಾರಾದರೂ ಕೆಲವು ಕೃತಿಗಳು ಅನ್ಯಮೂಲಗಳನ್ನೂ ಅವಲಂಬಿಸಿ ಮೂಲಗ್ರಂಥಗಳಿಂದ ತುಂಬ ದೂರ ಹೋದುದುಂಟು. ಹಾಗೆ ದೂರವಾಗಲು ಇತರ ಜನಪ್ರಿಯಗ್ರಂಥಗಳೋ ಆ ಕಾಲದಲ್ಲಿ ಜನಜನಿತವಾಗಿದ್ದ ಕಥೆಗಳೋ ಕಾರಣವಿರಬಹುದು. ಈ ರೀತಿ ಜನಪ್ರಿಯವಾಗಿ ತಿಳಿದಿರುವ ಲವಕುಶರ ಕಾಳಗವು ಉತ್ತರ ರಾಮಾಯಣದ ಕಥೆಗಿಂತ ಭಿನ್ನವಾದ ಕಥೆ ನಿರೂಪಣೆಯಿರುವ ಪ್ರಸಂಗವಾಗಿದೆ.

ಶ್ರೀ ರಾಮನು ಸೀತಾ ಪರಿತ್ಯಾಗ ಮಾಡಿ ಅನಂತರ ಅಶ್ವಮೇಧ ಯಾಗ ಮಾಡಿದ ಕತೆ ಉತ್ತರ ರಾಮಾಯಣದಲ್ಲಿದೆ. ಲಕ್ಷ್ಮೀಶ ಕವಿಯ ಜೈಮಿನಿ ಭಾರತದಲ್ಲಿ ಅಂತರ್ಗತವಾದ ಉತ್ತರ ರಾಮಾಯಣದ ಕಥೆ (ಅಥವಾ ಶ್ರೀರಾಮಾಶ್ವಮೇದದ ಕಥೆ) ಕರ್ನಾಟಕದಲ್ಲಿ ಹೆಚ್ಚ ಜನಪ್ರಿಯವಾದುದು. ಮುದ್ದಣನೂ ಶ್ರೀರಾಮಾಶ್ವಮೇಧವನ್ನು ಬರೆದು ಪ್ರಸಿದ್ಧನಾದನು. ಅವನು ಇದಕ್ಕೆ ಶೇಷ ರಾಮಾಯಣವನ್ನು ಮೂಲವೆಂದಿದ್ದಾನೆ. ಆದರೂ ನಿರೂಪಣೆಯಲ್ಲಿ ಜೈಮಿನಿ ಭಾರತವನ್ನು ಅನುಸರಿಸಿದ್ದಾನೆ. ಈ ಎರಡೂ ಕೃತಿಗಳಲ್ಲಿರುವ ಕಥಾ ಭಿತ್ತಿ ಸಾಮಾನ್ಯವಾಗಿ ಒಂದೇ ರೀತಿಯಲ್ಲಿದೆ. "ಅದೇ ರೀತಿ ಜೈಮಿನಿ ಭಾರತದ ಕಥೆಯನ್ನು ಅನುಸರಿಸಿ ಯಕ್ಷಗಾನ ಅಗ್ರಕವಿ ಪಾರ್ತಿಸುಬ್ಬನು ಕುಶಲವರ ಕಾಳಗ ಎಂಬ ಪ್ರಸಂಗವನ್ನು ರಚಿಸಿದ್ದಾರೆ".[೨೫] ಅದು ಯಕ್ಷಗಾನ ಕ್ಷೇತ್ರದಲ್ಲಿ ಹೆಚ್ಚು ಪರಿಚಿತವಾದ ಪ್ರಸಂಗವೂ ಆಗಿದೆ.

ರಾವಣಾದಿಗಳನ್ನು ಸಂಹರಿಸಿ ಶ್ರೀ ರಾಮನು, ಸೀತೆಯೊಂದಿಗೆ ಅಯೋಧ್ಯೆಯಲ್ಲಿ ಸುಖದಿಂದ ರಾಜ್ಯವಾಳುತ್ತಿರಲು ತಮಗೆ ಮಕ್ಕಳಾಗಲಿಲ್ಲವೆಂಬ ಚಿಂತೆಯಿಂದ ಸೀತೆಯೊಡನೆ ಮಾತಾಡುತ್ತಿರುವಲ್ಲಿ, ಇವರ ಅಂತರಂಗದ ಕಳವಳವನ್ನರಿತು ವಸಿಷ್ಠ ಮುನಿಯು ಆಗಮನದಿಂದ ಪುತ್ರೋತ್ಪತ್ತಿಯಾಗುವಂತೆ ಮಂತ್ರೋಪದೇಶವನ್ನು ಪಡೆಯುತ್ತಾರೆ. ಆಗಲೇ ವಸಂತಋತು ಬಂದಿರುತ್ತಾ ಫಲಪುಷ್ಪಗಳಿಂದ ಸಮೃದ್ಧವಾದ ವನಗಳಲ್ಲಿ ಕಾಡುಮೃಗಗಳ ಹಾವಳಿ ಹೆಚ್ಚಾಗಿರುವುದೆಂದು ವನಪಾಲಕರು ಬಂದು ಭಿನ್ನೈಸಲು ರಾಮನು

ಸೀತಾಸಮೇತನಾಗಿ ಮೃಗಬೇಟೆಗೆ ತೆರಳುತ್ತಾನೆ. ಅಲ್ಲಿ ಪುಷ್ಪವತಿಯಾದ ಸೀತೆಯು ಮುನಿಯ ಮಂತ್ರೋಪದೇಶದ ಫಲವಾಗಿ ಗರ್ಭವತಿಯಾಗುತ್ತಾಳೆ.

ಮುಂದೆ ನಾಲ್ಕು ತಿಂಗಳು ಕಳೆಯುತ್ತಾ ಸೀತೆ, ಹಿಂದೆ ವನವಾಸದಲ್ಲಿ ತನ್ನ ಒಡನಾಡಿಯಾಗಿದ್ದ ಋಷಿಪತ್ನಿಯರನ್ನು ನೋಡಿಬರಬೇಕೆಂಬ ಬಯಕೆಯುಂಟಾಗಲು ಸೀತೆಯು ತನ್ನ ಬಯಕೆಯನ್ನು ರಾಮನಲ್ಲಿ ಅರಿಕೆ ಮಾಡಿಕೊಳ್ಳುತ್ತಾಳೆ. ಆಮೇಲೆ ಒಂದು ದಿನ ಶ್ರೀರಾಮನು ರಾವಣನ ವಶದಲ್ಲಿದ್ದ ಸೀತೆಯನ್ನು ಮರಳಿ ತಂದು ಅಂಗೀಕರಿಸಿ ಸ್ವೀಕರಿಸಿದ ವಿಚಾರವಾಗಿ ತನ್ನ ಮೇಲೆ ಜನಾಪವಾದವುಂಟಾಗಿದೆ ಎಂಬುದನ್ನು ನಗರ ಸಂಚಾರಿಗಳಾದ ದೂತರಿಂದ ತಿಳಿಯುತ್ತಾನೆ. ಮತ್ತು ಆ ದೋಷಪರಿಹಾರಕ್ಕಾಗಿ ಆಗಲೇ ಸೀತೆಯನ್ನು ಪರಿತ್ಯಜಿಸಬೇಕೆಂದು ನಿರ್ಧರಿಸಿ ಆ ಕ್ಷಣವೇ ಸೀತೆಯನ್ನು ಕೊಂಡೊಯ್ದು ಕಾಡಿನಲ್ಲಿ ಬಿಟ್ಟುಬರುವಂತೆ ತಮ್ಮನಾದ ಲಕ್ಷ್ಮಣನಿಗೆ ಆಜ್ಞಾಪಿಸುತ್ತಾನೆ.

ಆ ಪ್ರಕಾರ ಲಕ್ಷ್ಮಣನು ಋಷ್ಯಾಶ್ರಮಕ್ಕೆಂಬ ನೆಪದಿಂದ ಸೀತೆಯನ್ನು ಕಾಡಿಗೆ ಕೊಂಡೊಯ್ದು ನಿಜಸಂಗತಿಯು ಕಂಡು ಸಂತೈಸಿ ತನ್ನ ಆಶ್ರಯಕ್ಕೆ ಕರೆದುಕೊಂಡು ಹೋಗಿ ಸಂರಕ್ಷಿಸುತ್ತಾನೆ. ನವಮಾಸ ತುಂಬಲು ಸೀತೆಯು ಕುಶಲವರೆಂಬ ಅವಳಿ ಮಕ್ಕಳನ್ನು ಪಡೆಯುತ್ತಾಳೆ. ಹಾಗೆ ಮುಂದೆ ವಾಲ್ಮೀಕಿಯ ಸಂರಕ್ಷಣೆಯಲ್ಲಿ ಕುಶಲವರು ರಾಜೋಚಿತವಾದ ಶಾಸ್ತ್ರವಿದ್ಯೆಗಳನ್ನೂ ಶಸ್ತ್ರವಿದ್ಯೆಗಳನ್ನೂ ಕಲಿತು ಬೆಳೆಯುತ್ತಿರಲು, ಇತ್ತ ಆಯೋಧ್ಯೆಯಲ್ಲಿ ಶ್ರೀರಾಮನು ಅಶ್ವಮೇಧಯಾಗಕ್ಕಾಗಿ ದೀಕ್ಷೆಯನ್ನು ಕೈಕೊಂಡು ಯಜ್ಞಾಶ್ವವನ್ನು ಬಿಡುತ್ತಾನೆ. ಕುದುರೆಯು ಶತ್ರುಘ್ನನ ಬೆಂಗಾವಲಿನಲ್ಲಿ ದೇಶದೇಶಗಳಲ್ಲಿ ಸಂಚರಿಸುತ್ತಾ ವಾಲ್ಮೀಕಿಯ ಆಶ್ರಮದ ಕಡೆಗೆ ವನವನ್ನು ಪ್ರವೇಶಿಸುತ್ತದೆ. ಆಗ ಅಲ್ಲಿ ಮುನಿ ಬಾಲಕರೊಡನೆ ತಿರುಗಾಡುತ್ತಿದ್ದ ಲವನು ಯಜ್ಞಾಶ್ವದ ಹಣೆಯಲ್ಲಿ ಕಟ್ಟಿದ ಲಿಖಿತವನ್ನೋದಿ ಕುದುರೆಯನ್ನು ಬಂಧಿಸುತ್ತಾನೆ. ಮತ್ತು ಬೆಂಗಾವಲಿನ ಸೈನಿಕರೊಡನೆ ಯುದ್ಧಕ್ಕೆ ನಿಲ್ಲಲು ಶತ್ರುಘ್ನನ ಬಾಣದಿಂದ ಮೂರ್ಛೆ ಹೊಂದಿತ್ತಾನೆ.

ಈ ವರ್ತಮಾನವನ್ನು ಋಷಿಮುನಿ ಪುತ್ರರು ಆಶ್ರಮದಲ್ಲಿರುವ ಸೀತೆಗೆ ತಿಳಿಸಲು ಆಕೆಯು ಲವನನ್ನು ಕರೆತರುವುದಕ್ಕಾಗಿ ಕುಶನನ್ನು ಕಳುಹಿಸುತ್ತಾಳೆ. ತಮ್ಮನ್ನು ಅಸಹಾಯಕನಾಗಿ ಸೋತು ಬಿದ್ದಿರುವುದನ್ನು ಅರಿತ ಕುಶನು ಒಡನೆಯೇ ಬಂದು ವೀರಾವೇಶದಿಂದ ಕಾದಾಡಿ ಶತ್ರುಘ್ನನನ್ನು ಕೊಲ್ಲುತ್ತಾನೆ. ಈ ವಾರ್ತೆಯನ್ನು ದೂತರು ಅಯೋಧ್ಯೆಗೆ ಬಂದು ರಾಮನಿಗೆ ಭಿನ್ನೈಸಲು ಶ್ರೀರಾಮನು ಯಜ್ಞಾಶ್ವವನ್ನು ಬಿಡಿಸಿತರುವುದಕ್ಕಾಗಿ ಅಪಾರವಾದ ಸೈನ್ಯ ಸಮೇತ ಲಕ್ಷ್ಮಣನನ್ನು ಕಳುಹಿಸುತ್ತಾನೆ.

ಹಾಗೆ ನಡೆದ ಮರುಕಾಳಗದಲ್ಲಿ ಕುಶಲವರ ಬಾಣಗಳು ತಾಗಿ ಲಕ್ಷ್ಮಣನೂ ಮಡಿಯುವುದಲ್ಲದೆ, ಆತನ ಬೆಂಬಲಕ್ಕೆ ಬಂದ ಭರತನೂ ಅಸುನೀಗುತ್ತಾನೆ. ಇದನ್ನರಿತ ಶ್ರೀರಾಮನು ದೀಕ್ಷೆಯಿಂದೆದ್ದು

ಹನುಮ ಜಾಂಬವಾದಿ ವಾನರ ವೀರರೊಡನೆ ತಾನೇ ಯುದ್ಧಕ್ಕೆ ಬಂದು ಮಕ್ಕಳೊಡನೆ ಕಾದಾಡಲು ವೀರ ಪುತ್ರರಾದ ಕುಶಲವರು ರಾಮನನ್ನು ತಮ್ಮ ಬಾಣಗಳಿಂದ ಮೂರ್ಛೆಗೊಳಿಸಿ ಹನುಮ ಜಾಂಬವರನ್ನು ಬಂಧಿಸಿ ಆಶ್ರಮಕ್ಕೆ ಕೊಂಡೊಯ್ದು ತಾಯಿಯ ಮುಂದೆ ತಮ್ಮ ಯುದ್ಧದ ಪರಾಕ್ರಮವನ್ನು ಶಕ್ತಿ ಸಾಮರ್ಥ್ಯವನ್ನು ಹೇಳಿಕೊಳ್ಳುತ್ತಾರೆ. ರಾಮ ಲಕ್ಷ್ಮಣಾದಿಗಳು ನಿಧನರಾಗಿರುವುದನ್ನು ಕೇಳಿದ ಸೀತೆಯು ಮಕ್ಕಳನ್ನು ಹಳಿದು ದುಃಖಿಸುತ್ತಿರಲು ವರುಣನ ಯಜ್ಞಾರ್ಥವಾಗಿ ಪಾತಾಳಲೋಕಕ್ಕೆ ಹೋಗಿದ್ದ ವಾಲ್ಮೀಕಿ ಋಷಿಯು ಹಿಂತಿರುಗಿ ಬಂದು, ಯುದ್ಧದಲ್ಲಿ ಮೈ ಮರೆತು ಬಿದ್ದಿರುವ ರಾಮ ಲಕ್ಷ್ಮಣಾದಿಗಳನ್ನೆಲ್ಲ ಮಂತ್ರೋದಕ ಪ್ರೋಕ್ಷಣದಿಂದ ಎಬ್ಬಿಸುತ್ತಾರೆ. ಅನಂತರ ಶ್ರೀರಾಮನು ವಾಲ್ಮೀಕಿಯು ಶ್ರುತಪಡಿಸಿದಂತೆ ಕುಶಲವನು ತನ್ನ ಮಕ್ಕಳೆಂಬುದನ್ನು ತಿಳಿದು ಸಂತೋಷದಿಂದ ಸೀತೆಯೊಡನೆ ಮಕ್ಕಳನ್ನು ಆಯೋಧ್ಯೆಗೆ ಕರೆದುಕೊಂಡು ಬಂದು ಅಶ್ವಮೇಧ ಯಾಗವನ್ನು ಸಾಂಗವಾಗಿ ಪೂರೈಸಿ ಬಹುಕಾಲ ಸುಖದಿಂದ ರಾಜ್ಯವಾಳಿಕೊಂಡಿದ್ದನು ಎಂಬಲ್ಲಿಗೆ ಉತ್ತರಕಾಂಡ ರಾಮಾಯಣದ 'ಕುಶಲವರ ಕಾಳಗ'ವೆಂಬ ಈ ಮಹಾಪ್ರಸಂಗಕ್ಕೆ ಮಂಗಲವಾಗುವುದು.

ಹಟ್ಟಿಯಂಗಡಿ ರಾಮಭಟ್ಟರ 'ಲವಕುಶರ ಕಾಳಗ - ಪಠದ ಸಂಧಿ' ಪ್ರಸಂಗದ ಕಥೆಯು ಈ ಕಥಾಭಿತ್ತಿಗಿಂತ ಭಿನ್ನವಾದುದು. ಹಟ್ಟಿಯಂಗಡಿ ರಾಮಭಟ್ಟರ ಈ ಪ್ರಸಂಗಕ್ಕೆ ಖಚಿತ ಮೂಲ ಯಾವುದೆಂದು ಹೇಳುವುದು ಕಷ್ಟಸಾಧ್ಯವಾಗಿದೆ. ೧೮ನೆಯ ಶತಮಾನದ ಕವಯಿತ್ರಿ ಹೆಳವನಕಟ್ಟೆ ಗಿರಿಯಮ್ಮನ 'ಲವಕುಶರ ಕಾಳಗ'ದ ಪಠದ ಸಂಧಿ ಎಂಬ ಕೃತಿಯ ಕಥಾಭಾಗವನ್ನನುಸರಿಸಿಕೊಂಡು ಯಕ್ಷಗಾನ ಪ್ರಸಂಗವನ್ನು ರಚಿಸಿದಂತೆ ತಿಳಿಯುತ್ತದೆ. ಗಿರಿಯಮ್ಮನ ಕೃತಿಯ ಕಥೆಯನ್ನು ಒಳಗೊಂಡಂತೆ ಕನ್ನಡದ ಖ್ಯಾತ ಲೇಖಕ ಚದುರಂಗರು 'ಬಿಂಬ' ಎಂಬ ನಾಟಕವನ್ನು ರಚಿಸಿದ್ದಾರೆ. ಆ ನಾಟಕದಲ್ಲಿ ಕಥೆಯನ್ನು ನಾಟಕೋಚಿತವಾಗಿ ಅಷ್ಟಿಷ್ಟು ವ್ಯತ್ಯಾಸಗಳನ್ನು ಮಾಡಲಾಗಿದ್ದರೂ ಶೂರ್ಪನಖಿಯ ದ್ವೇಷ, ಚಿತ್ರಪಟದಲ್ಲಿ ಆಕೆ ರಾವಣನ ಚಿತ್ರ ಬರೆದುದೇ ಕಾರಣವಾಗಿ ಸೀತೆಗೆ ಆಗುವ ವನವಾಸ ಇತ್ಯಾದಿಗಳನ್ನು ಇರಿಸಿಕೊಳ್ಳಲಾಗಿದೆ. ಹೆಳವನಕಟ್ಟೆ ಗಿರಿಯಮ್ಮನ ಪಠದ ಸಂಧಿಯ ಕಥೆಯೂ ರಾಮಭಟ್ಟರ ಪ್ರಸಂಗದ ಕಥೆಯೂ ಒಂದೇ ಮೂಲವನ್ನು ಅನುಸರಿಸಿದಂತಹ ಕೃತಿಗಳೆಂದು ತಿಳಿಯಬಹುದಾಗಿದೆ.

ಹಿಂದಿನ ಗ್ರಂಥಗಳಲ್ಲಿ ಆನಂದ ರಾಮಾಯಣವೆಂಬುದು ರಾಮಾಯಣದ ಕಥೆಗಳಿಗೆ ಸಂಬಂಧಿಸಿದ ಒಂದು ವಿಶಿಷ್ಟ ಕೃತಿ. ಇದರಲ್ಲಿ ವಾಲ್ಮೀಕಿ ರಾಮಾಯಣದಲ್ಲಿಲ್ಲದ ಆದರೆ, ರಾಮಾಯಣದ ಅನೇಕ ಘಟನೆಗಳಿಗೆ ಸಂಬಂಧಿಸಿದ ಕಥೆಗಳು ಕಾಣಸಿಕ್ಕುತ್ತವೆ. ಹಟ್ಟಿಯಂಗಡಿ ರಾಮಭಟ್ಟರು ಈ ಗ್ರಂಥವನ್ನು ನೋಡಿರುವ ಸಾಧ್ಯತೆ ಬಹಳವಾಗಿದೆ. ಏಕೆಂದರೆ ರಾಮಭಟ್ಟರ ಲವಕುಶರ ಕಾಳಗದ ಕಥೆ ಉತ್ತರ ರಾಮಾಯಣದ ಕಥೆಗಿಂತ ಭಿನ್ನವಾಗಿ ಇಲ್ಲಿ ನಿರೂಪಿತವಾಗಿದೆ. ಈ ಕಥೆಯ ಪ್ರಕಾರ ರಾಮನು ಮಾಡಿದ ಸೀತಾ ಪರಿತ್ಯಾಗವು ಪೂರ್ವನಿಶ್ಚಿತ. ಅದನ್ನು ರಾಮನು ಸೀತೆಗೆ ಪೂರ್ವಭಾವಿಯಾಗಿ ತಿಳಿಸಿದ್ದನು. ಈ

ಕಥೆಯಲ್ಲಿ ರಜಕನ ವೃತ್ತಾಂತವೂ ಇದೆ. ಚಿತ್ರಪಟದ ವೃತ್ತಾಂತವೂ ಇದೆ. ರಾವಣನ ಚಿತ್ರವನ್ನು ಸೀತೆಯಿಂದ ಬರೆಯಿಸುವವಳು ಪ್ರಸಂಗದಲ್ಲಿ ಹೆಳವನಕಟ್ಟೆ ಗಿರಿಯಮ್ಮನ ಕೃತಿಯಲ್ಲಿ ಮತ್ತು 'ಬಿಂಬ' ನಾಟಕದಲ್ಲಿ ಶೂರ್ಪನಖಿಯಾಗಿದ್ದರೆ, ಆನಂದ ರಾಮಾಯಣದಲ್ಲಿ ಕೈಕೇಯಿ ಸೀತೆಯ ಮುಂಗೈಯನ್ನು ವಿಶ್ವಕರ್ಮನು ನಿರ್ಮಾಣಮಾಡಿಕೊಟ್ಟ ಲಕ್ಷ್ಮಣನು ಅದನ್ನು ಗುರುತಿಗಾಗಿ ತರುವ ವೃತ್ತಾಂತ ಆನಂದ ರಾಮಾಯಣದಲ್ಲಿದೆ. ಪ್ರಸಂಗದಲ್ಲಿ ಲವನು ಹಿರಿಯ ಮಗ. ಕುಶನು ವಾಲ್ಮೀಕಿ ಸೃಷ್ಟಿಸಿದ ಕುಮಾರನಾದರೆ ಆನಂದ ರಾಮಾಯಣದಲ್ಲಿ ಅದು ತದ್ವಿಪರೀತವಾಗಿದೆ. ಶೂರ್ಪನಖಿಯ ಕೊರವಂಜಿ ರೂಪದ ಕಥೆ ಆನಂದ ರಾಮಾಯಣದಲ್ಲಿಲ್ಲ. ಆನಂದ ರಾಮಾಯಣದಲ್ಲಿ ಲಕ್ಷ್ಮಣ ಮತ್ತು ಲವನಿಗೆ ಯುದ್ಧವಾಗಲು ಲವನು ತಾಯಿಗಾಗಿ ಶ್ರೀರಾಮನ ಉಪವನದಿಂದ ಕಮಲಗಳನ್ನು ತರುತ್ತಿದ್ದುದೇ ಕಾರಣ. ಹೀಗೆ ಈ ಕಥೆಗಳಲ್ಲಿ ತುಂಬ ವ್ಯತ್ಯಾಸಗಳಿವೆ. ಒಟ್ಟಿನಲ್ಲಿ ಜೈಮಿನಿ ಭಾರತಕ್ಕಿಂತ ಭಿನ್ನವಾದ ಅನ್ಯಮೂಲವನ್ನು ಪ್ರಸಂಗಕರ್ತರು ಅನುಸರಿಸಿರುವುದು ನಿಶ್ಚಯ. ಅದು ಜಾನಪದ ಮೂಲವೇ ಆಗಿರುವ ಸಾಧ್ಯತೆ ಅಧಿಕವಾಗಿದೆ. ಆದರೆ ಹೆಳವನಕಟ್ಟೆ ಗಿರಿಯಮ್ಮನಿಗೂ ಅದೇ ಮೂಲವಾಗಿರುವ ಸಾಧ್ಯತೆಯಿರುವುದರಿಂದ ಜಾನಪದ ಮೂಲದ ಆ ಕಥೆಯು ಆ ಮೊದಲೇ ಕೃತಿ ರೂಪದಲ್ಲಿ ಬಂದಿರಬಹುದೆಂದು ತರ್ಕಿಸಬಹುದಾಗಿದೆ.

ಲವಕುಶರ ಕಾಳಗವು ರಂಗದ ಮೇಲೆ ಬಹಳ ಜನಪ್ರಿಯವಲ್ಲ. ಜೈಮಿನಿ ಭಾರತಾನುಸಾರಿಯಾದ ಕಥೆಯುಳ್ಳ ಪಾರ್ತಿಸುಬ್ಬನ ಕುಶಲವರ ಕಾಳಗವೇ ಹೆಚ್ಚು ಜನಪ್ರಿಯವಾದುದು. ಕಥೆಯ ವಿಶಿಷ್ಟತೆಯಿಂದಲೂ ನಿರೂಪಣೆಯ ಸೊಗಸಿನಿಂದಲೂ ಪ್ರಸ್ತುತ ಪ್ರಸಂಗ ಗಮನ ಸೆಳೆಯುತ್ತದೆ. "ರಾಮಭಟ್ಟರ ಉಳಿದ ಪ್ರಸಂಗಗಳ ರಚನೆಯ ಅನಂತರ ಈ ಕೃತಿಯನ್ನು ಬರೆದಿರಬೇಕೆಂಬ ಅಭಿಪ್ರಾಯವನ್ನು ಡಾ. ಶಿವರಾಮ ಕಾರಂತರು ನೀಡಿದ್ದಾರೆ. ಈ ಕೃತಿಯನ್ನು ಬರೆಯುವಾಗ ಕವಿಯ ಕೈ ಹೆಚ್ಚು ಪಳಗಿತ್ತೆಂಬುದು ಅವರ ಅಭಿಪ್ರಾಯ."[೬೬] ಅದುದರಿಂದ ರಂಗದಲ್ಲಿ ಹೊಸವಸ್ತುಗಳನ್ನು ಪ್ರಸಂಗಗಳನ್ನಾಗಿಸಿ ಹಟ್ಟಿಯಂಗಡಿ ರಾಮಭಟ್ಟರು ಯಶಸ್ವಿಯಾದರು ಎಂದು ಹೇಳಬಹುದು. ಅದೇ ರೀತಿ ಹೆಳವನಕಟ್ಟೆ ಗಿರಿಯಮ್ಮನಿಗೆ ಜೈಮಿನಿ ಭಾರತದ ಅಧ್ಯಯನವಿತ್ತೆಂಬ ಬಗೆಗೆ ಅವಳ ಇತರ ಕೃತಿಗಳಿಂದ ಆಧಾರ ದೊರಕುತ್ತದೆ. ಆದರೆ ಈ ಲವಕುಶರ ಕಾಳಗ'ದ ಕಾವ್ಯಕಥೆಯಲ್ಲಿ ಜೈಮಿನಿ ಭಾರತದ ಕಥಾಭಾಗವನ್ನು ಅನುಸರಿಸಿದರೂ 'ಸೀತಾಪರಿತ್ಯಾಗ'ದ ಸನ್ನಿವೇಶದ ಕಥಾವಸ್ತುವಿನ ದೃಷ್ಟಿಯಿಂದ ಭಿನ್ನ ಸ್ವರೂಪವನ್ನು ಹೊಂದಿರುವುದು ಒಂದು ವಿಶಿಷ್ಟತೆಯಾಗಿದೆ.

## ೫.೪. ಸೀತಾ ಕಲ್ಯಾಣ

ಹಿಂದೂ ಸಂಪ್ರದಾಯದಲ್ಲಿ ಮದುವೆ ಎರಡು ಜೀವಿಗಳನ್ನು ಒಂದುಗೂಡಿಸುವ ಪವಿತ್ರ ಬಂಧನ. ಇದು ಜನ್ಮ ಜನ್ಮಾಂತರಗಳಿಂದ ಅವಿಚ್ಛಿನ್ನವಾಗಿ ಬೆಳೆದು ಬರುತ್ತದೆನ್ನುವ ಭಾವನೆಯೂ ಉಂಟು. ಇಹ

ಪರ ಸೌಖ್ಯಗಳಿಗೆ ಮದುವೆ ಮೂಲ ಕಾರಣವೆಂಬ ಭಾವನೆಯಿರುವುದರಿಂದ ಅದು ಜೀವನದ ಅತ್ಯಂತ ಪ್ರಮುಖವಾದ ಘಟನೆಯಾಗಿ ಪರಿಣಮಿಸಿದೆ. ಲೋಕ ಕಲ್ಯಾಣಕಾರಿ ಎಂಬ ಭಾವನೆಯಿಂದ ಹರ ಗಿರಿಜೆಯರ ಕಲ್ಯಾಣ ಪ್ರಸಂಗವನ್ನು ಅನೇಕ ಕಾವ್ಯಗಳು ಪುರಾಣಗಳು ಸೃಷ್ಟಿಸಿವೆ. ಇಂಥ ಮಹತ್ಪೂರ್ಣವಾದ ಘಟನೆಯ ಸುತ್ತ ಕಾಲ ಕಾಲಕ್ಕೆ ಅನೇಕ ಆಚಾರ, ಶಾಸ್ತ್ರ ಸಂಪ್ರದಾಯಗಳು ಬೆಳೆದು ಬಂದವು. ಸಮಾಜ ಉಚ್ಚ ವರ್ಗದ ಜನ ಧರ್ಮಶಾಸ್ತ್ರದ ಕಟ್ಟು ಕಟ್ಟಳೆಗಳನ್ನು ಅನುಸರಿಸುತ್ತಿದ್ದರೂ ಗ್ರಾಮೀಣ ಜನ ತಮ್ಮದೇ ಆದ ರೀತಿ ನೀತಿಗಳನ್ನು ಆಚರಣೆಗೆ ತಂದರು.

ಕಾಲದಿಂದ ಕಾಲಕ್ಕೆ, ಕುಲದಿಂದ ಕುಲಕ್ಕೆ ದೇಶದಿಂದ ದೇಶಕ್ಕೆ ಸಮಾಜದಿಂದ ಸಮಾಜಕ್ಕೆ ನಡೆ ನುಡಿಗಳು ವ್ಯತ್ಯಾಸ ಹೊಂದುವುದು ಸಹಜ. ಆಹಾರ ಪಾನೀಯಗಳಲ್ಲಿ, ವೇಷ ಭೂಷಣಗಳಲ್ಲಿ ವ್ಯತ್ಯಾಸಗಳು ಕಂಡುಬರುವಂತೆ ವಿವಾಹ ಸಂಸ್ಕಾರಾದಿಗಳಲ್ಲಿ ತಾರತಮ್ಯವಿರುವುದು ಸಹಜವಾಗಿದೆ. ಅದರಲ್ಲಿಯೂ ಹಲವು ದೇವತೆಗಳನ್ನು ಪೂಜಿಸುವ ಜನರಿರುವ ನಾಡಿನಲ್ಲಿ ಹಲವು ರೂಢಿ, ಶಾಸ್ತ್ರ, ಸಂಪ್ರದಾಯಗಳು ಸಹಜವಾಗಿಯೇ ಹುಟ್ಟಿಕೊಳ್ಳುತ್ತವೆ. ಆದ್ದರಿಂದ ಒಂದೊಂದು ಕಡೆ ಒಂದೊಂದು ವಿಧವಾದ ಮದುವೆ ಸಂಪ್ರದಾಯಗಳನ್ನು ಕಾಣಬಹುದಾಗಿದೆ.

ಮೊದಮೊದಲು ಮದುವೆಯು ತಿಂಗಳಗಟ್ಟಲೆ ನಡೆಯುತ್ತಿದ್ದವು. ಆಗ ಒಂದೊಂದು ದಿವಸವೂ ಒಂದೊಂದು ಶಾಸ್ತ್ರ ಸಂಪ್ರದಾಯಗಳನ್ನು ನಡೆಸುತ್ತಿದ್ದರು. ಅದಕ್ಕೆಲ್ಲಾ ಸೋಬಾನೆ ಪದಗಳೇ ಬೀಜಮಂತ್ರಗಳು ಮದುವೆಯ ಪದಗಳನ್ನು ಕುರಿತು ಶ್ರೀ ಎಚ್.ಎಲ್.ನಾಗೇಗೌಡರು ''ಸೋಬಾನೆ ಚಿಕ್ಕಮ್ಮನ ಪದಗಳೆಂಬ'' ಒಂದು ಕೃತಿಯನ್ನೇ ತಂದಿದ್ದಾರೆ. ''ಕೂಸುಕೊಡಿ ನಮ್ಮ ಕೋಮರಾಗೆ'' ಎಂಬ ಕೃತಿ ಉತ್ತರ ಕನ್ನಡ ಜಿಲ್ಲೆಯ ಮದುವೆ ಸಂಪ್ರದಾಯವನ್ನು ಪರಿಚಯಿಸುತ್ತದೆ.[೨೨]

**ಮದುವೆ ಹಾಡುಗಳು :** ಹೆಸರೇ ಸೂಚಿಸುವಂತೆ ಮದುವೆಯ ವಿವಿಧ ಶಾಸ್ತ್ರಾಚಾರಣೆಗಳಿಗೆ ಸಂಬಂಧಿಸಿದ ಹಾಡುಗಳು ಇವನ್ನು 'ಸೋಬಾನೆ ಪದ'ಗಳೆಂದೂ ಕರೆಯುತ್ತಾರೆ. 'ಸೋಬಾನೆ' ಶುಭವನ್ನು ಸೂಚಿಸುವ ಶಬ್ದ.... ಹಾಡುಗಳ ಮೂಲಕ ಶುಭವನ್ನು ಹಾರೈಸುವುದೇ ಸೋಬಾನೆ 'ಶುಭವೆನ್ನಿ' ಎಂಬ ಶಬ್ದ ಸೋಬಾನೆಯಾಗಿದೆ.[೨೮] ಸೋಬಾನೆ ಹಾಡುವವರು ಹೆಂಗಸರು ಅವರನ್ನು 'ಸೋಬಾನದವರು' ಎಂದೇ ಕರೆಯುತ್ತಾರೆ. ಸೋಬಾನವಿಲ್ಲದೆ ಹಿಂದೆ ಮದುವೆ ನಡೆಯುತ್ತಿರಲಿಲ್ಲ. ಆಗ ಮದುವೆ ಹತ್ತಾರು ದಿನಗಳ ಕಾಲ ನಡೆಯುತ್ತಿದ್ದು ಸುತ್ತಲಿನ ಎಲ್ಲ ಊರುಗಳ ಸಮಸ್ತರು ಮದುವೆಯ ಕಾರ್ಯಗಳಲ್ಲೂ ಭಾಗವಹಿಸಬೇಕಾಗಿತ್ತು. ಆ ವೇಳೆಯ ಕೆಲಸದ ಶ್ರಮವನ್ನು ಮರೆಯಲು ಗಂಡು ಹೆಣ್ಣುಗಳು ಶಾಸ್ತ್ರಾಚರಣೆಗಳಲ್ಲಿ ಉತ್ಸಾಹದಿಂದ ಭಾಗವಹಿಸಲು ಎರಡು ಜೀವಗಳು ಒಂದಾಗಲು ಈ ಹಾಡುಗಳು ಸಾಧನವಾದವು.

ಇಂದಿಗೂ ಮದುವೆಯಲ್ಲಿ ಶಾಸ್ತ್ರಕ್ಕಾಗಿ ಸೋಬಾನೆ ಹೇಳಿಸುವ ಪದ್ಧತಿಯುಂಟು. ಹಿಂದಿನ ಪದ್ಧತಿಯಂತೆ ಮದುವೆ ಕ್ರಮಬದ್ಧವಾಗಿ ನಡೆಯಬೇಕು ಆಕ್ರಮ ತಪ್ಪಿಹೋದರೆ ಗಂಡು ಹೆಣ್ಣಿನ ಜೀವನದಲ್ಲಿ ಮುಂದೆ ಅನಾಹುತ ಅಮಂಗಲವಾಗಬಹುದೆಂಬ ಆತಂಕ ಅದಕ್ಕಾಗಿ ಯಾವ ಶಾಸ್ತ್ರಾಚರಣೆಯೂ ತಪ್ಪಿ ಹೋಗದಂತೆ ಮೊದಲಿನಿಂದ ಕೊನೆಯವರೆಗೆ ಒಂದೊಂದು ಶಾಸ್ತ್ರಕ್ಕೂ ಒಂದೊಂದು ಹಾಡು ಹಾಡುತ್ತಾರೆ. ಶಾಸ್ತ್ರದ ನೀರು ತರುವಾಗ, ಶಾಸ್ತ್ರದ ಬತ್ತ ಕುಟ್ಟುವಾಗ, ವೀಳೆಯ ಶಾಸ್ತ್ರ ಮಾಡುವಾಗ, ಅರಿಶಿನೆಣ್ಣೆ ಮಾಡುವಾಗ ಗಂಡು ಹೆಣ್ಣಿನ ಮನೆಗೆ ನೆರೆ ಹೊರಡುವಾಗ ಹೆಣ್ಣಿನ ಮನೆಯಲ್ಲಿ ಮದು ಮಕ್ಕಳನ್ನು ಇದಿರುಗೊಳ್ಳುವಾಗ, ಆರತಿ, ಎತ್ತುವಾಗ, ಬೂವ ಇಕ್ಕುವಾಗ, ಸಸಿಮರಕ್ಕೆ ನೀರು ಹುಯ್ಯುವಾಗ ಹೆಣ್ಣು ಕರೆಯಲು ಬಂದಾಗ ಹೀಗ ಹತ್ತಾರು ಸಂದರ್ಭಗಳಲ್ಲಿ ಶಾಸ್ತ್ರಗಳು ಹಾಡಿನ ಮೂಲಕ ನೇರವೇರುತ್ತವೆ. ಬ್ರಾಹ್ಮಣ, ಸಮಾಜದಲ್ಲಿ ವಾಕ್ಸಂಪ್ರದಾಯದಲ್ಲಿ ಪರಂಪರಾಗತವಾಗಿ ಉಳಿದು ಬಂದಿರುವ ಹಾಡುಗಳು 'ಸಂಪ್ರದಾಯದ ಹಾಡುಗಳು' ಎಂದು ಪ್ರಚಲಿತವಾಗಿವೆ. ಹಳೆಯ ತಲೆಮಾರಿನ ಬ್ರಾಹ್ಮಣ ಹೆಂಗಸರು ಸಂಪ್ರದಾಯದ ಹಾಡುಗಳನ್ನು ವಿಶೇಷವಾಗಿ ಹಾಡುತ್ತಿದ್ದರು. ಬೆಳಿಗ್ಗೆ ಏಳುತ್ತಲೇ ಉದಯರಾಗ ಹಾಡಲು ಪ್ರಾರಂಭಿಸಿದರೆ ಅಂಗಳಸಾರಿಸಿ ರಂಗವಲ್ಲಿ ಇಡುವಾಗ, ಹಸೆಯಹಾಡು, ಮಡಿಯುಟ್ಟು ದೇವರ ಪೂಜೆ ಮಾಡುವಾಗ ದೈವ ಸ್ತುತಿ ಪರವಾದ ಹಾಡುಗಳು ಇದಲ್ಲದೆ ಮದುವೆ ಮುಂಜಿ ಮೊದಲಾದ ಸಂದರ್ಭಗಳಲ್ಲಿ ನಡೆಯುವ ಶಾಸ್ತ್ರ ಸಂಬಂಧವಾದ ಹಾಡುಗಳು ವ್ರತಕಥೆ ಮಹಿಮೆಗಳನ್ನರಹುವ ಹಾಡುಗಳು ರಾಮಾಯಣ, ಮಹಾಭಾರತ, ಭಾಗವತ, ಪೌರಾಣಿಕ ವಸ್ತುಗಳುಳ್ಳ ಸಾವಿರಾರು ಹಾಡುಗಳನ್ನು ಹಾಡುತ್ತಿದ್ದರು. ಅವು ಹೆಚ್ಚಾಗಿ ದೈವ ಪರವಾಗಿರುತ್ತಿದ್ದವು.

ಬ್ರಾಹ್ಮಣ ಸ್ತ್ರೀಯರು ಆಸ್ತಿಕ ವಾತಾವರಣದಲ್ಲಿ ಬದುಕುತ್ತಿದ್ದರಿಂದ ಅವರು ಹಾಡುತ್ತಿದ್ದ ಹಾಡುಗಳು ಹೆಚ್ಚಾಗಿ ದೈವಪರವಾಗಿರುತ್ತಿದ್ದವು ಈ ಹಾಡುಗಳು ಕೃರ್ತಗಳು ತಮ್ಮ ಭಾವನೆಗಳನ್ನು ದೈವಪರ ಮಾಧ್ಯಮದ ಮೂಲಕ ತಮಗೆ ಬೇಕಾದ ವರಗಳನ್ನು ದಯಪಾಲಿಸುವಂತೆ ಪ್ರಾರ್ಥಿಸುವಾಗ ದೇವರನ್ನು ಸರ್ವ ಸಮರ್ಥನೂ ಅಲೌಕಿಕ ಶಕ್ತಿಯುಳ್ಳವನನ್ನಾಗಿಯೂ ವರ್ಣಿಸುತ್ತಿದ್ದರು. ಈ ಹಾಡುಗಳಲ್ಲಿ ಬರುವ ರಾಮ, ಕೃಷ್ಣ, ಶಿವ, ಸೀತೆ, ಸತ್ಯಭಾಮೆ, ರುಕ್ಮಿಣಿ, ಗಂಗೆ, ಗೌರಿ ಮೊದಲಾದವರು ಅಲೌಕಿಕ ವ್ಯಕ್ತಿಗಳಾಗಿ ನಮ್ಮಿಂದ ದೂರ ನಿಲ್ಲುವುದಿಲ್ಲ. ಉಳಿದಂತೆ ದೇವರಿಗೂ ಮಾನವನ ಎಲ್ಲ ಲೋಪ ದೋಷಗಳನ್ನು ಆರೋಪಿಸಿ ಸಂಸಾರದ ಜಂಜಡದಲ್ಲಿ ಆತನನ್ನೂ ಸಿಲುಕಿಸಿ ನಲಿಯುತ್ತಿದ್ದರು ಅವರೂ ಕಾಮಕ್ರೋಧಗಳನುಳ್ಳ ಸಾಮಾನ್ಯ ಮಾನವರಾಗಿರುತ್ತಾರೆ. ಹುಟ್ಟು ಸಾವುಗಳು ಅವರಿಗೂ ಉಂಟು ಹೆಣ್ಣಿಗಾಗಿ ಕಾದಾಡುವುದು ಸವತಿಯರ ಜಗಳ ಕ್ಷುಲ್ಲಕ ವಿಷಯಕ್ಕಾಗಿ ಕೋಪ ತಾಳುವುದು ಪೂರ್ವಾಪರ ವಿಚಾರ ವಿವೇಚನಾಶಕ್ತಿಯಿಲ್ಲದೆ ವರ್ತಿಸುವುದು. ವಾಸ್ತವಿಕತೆಗೆ ಹೊಂದಿಕೊಳ್ಳಲಾಗದೆ ಅವರೂ ದುಡಿಕಿ ಆತ್ಮಹತ್ಯೆಗೆ ಕೈ ಹಾಕುವುದು ಮುಂತಾದ ಪ್ರಸಂಗಗಳು ದೇವರಿಗೂ ಒದಗುತ್ತದೆ.

ಆದರೆ ಜನಪದರ ಜೀವನ ದೃಷ್ಟಿಗನುಗುಣವಾಗಿ ಯಾವುದೋ ದೈವೀಶಕ್ತಿ ಅವರನ್ನು ಸಾವಿನಿಂದ ಪಾರುಮಾಡಿ ಅವರ ಕಷ್ಟ ಪರಿಹಾರ ಮಾಡಿ ಹಾಡನ್ನು ಸುಖಾಂತಗೊಳಿಸುತ್ತದೆ. ಹೀಗೆ ಇವರು ಹಾಡುವ ಹಾಡುಗಳ ನಾಯಕರು ದೇವರಾದರೂ ಅವರ ವ್ಯಕ್ತಿತ್ವ ಮಾನವರದೇ ಆಗಿದ್ದು ಅವರು ಲೌಕಿಕ ಬದುಕಿಗೆ ಹತ್ತಿರದವರಾಗುತ್ತಾರೆ. ಬಾಲಕೃಷ್ಣನ ಬಾಲಲೀಲೆಗಳನ್ನು ವರ್ಣಿಸುವಾಗ ತಮ್ಮ ಮಕ್ಕಳ ಬಾಲಕ್ರೀಡೆಗಳನ್ನೇ ವಿವರಿಸಿರುತ್ತಾರೆ. ತಮ್ಮ ರಾಗಭಾವಗಳನ್ನು ದೈವ ಮಾಧ್ಯಮದ ಮೂಲಕ ಹೊರಗೆ ತರಲು ಪ್ರಯತ್ನಿಸಿದ್ದಾರೆ.

ಗೇಯ ಪ್ರಧಾನವಾದ ಈ ಹಾಡುಗಳನ್ನು ಹಾಡುವಾಗ ಯಾವುದೇ ವಾದ್ಯದ ಹಿನ್ನೆಲೆಯಾಗಲಿ ಹಿಮ್ಮೇಳ ಮುಮ್ಮೇಳಗಳಾಗಲಿ ಕಂಡು ಬರುವುದಿಲ್ಲ. ಕೆಲವು ಹಾಡುಗಳನ್ನು ಹಾಡುವಾಗ ಪ್ರತಿಚರಣದ ಅಂತ್ಯದಲ್ಲಿ 'ರಾಮ ರಾಮ' 'ರಾಮ ಗೋವಿಂದ', ಅಚ್ಯುತಾನಂತ, ನಾರಾಯಣ ಕೃಷ್ಣ ಮುಂತಾದ ದೇವರ ಹೆಸರು ಸೇರಿಸಿ ಹಾಡುವುದು ಕಂಡುಬರುತ್ತದೆ. ಇವುಗಳನ್ನು ಮನೆಗಳಲ್ಲಿ ಹೆಂಗಸರು ಒಬ್ಬೊಬ್ಬರೇ ಹಾಡುತ್ತಿರುತ್ತಾರೆ. ಸಾಮೂಹಿಕವಾಗಿ ಹಾಡುವುದು ಕಂಡುಬರುವುದಿಲ್ಲ. ವ್ರತ ಪರ್ವಾದಿಗಳಲ್ಲಿ, ಮದುವೆ ಮುಂಜಿಗಳಲ್ಲಿ ಹೆಂಗಸರು ಒಂದೆಡೆ ಸೇರಿದಾಗ ಒಂದು ಹಾಡನ್ನು ಬಲ್ಲವರು ಒಬ್ಬರಿಗಿಂತ ಹೆಚ್ಚು ಜನ ಇದ್ದರೆ ಅವರು ಒಟ್ಟಿಗೆ ಹಾಡುತ್ತಾರೆ. ಅಕ್ಕಿ ಆರಿಸುವಾಗ ದೇವರ ದೀಪಕ್ಕೆ ಅರಳ ಬತ್ತಿ ಮಾಡುವಾಗ ಬಟ್ಟೆ ಒಗೆಯಲು ನದಿ ಅಥವಾ ಕೆರೆಗೆ ಹೋಗುವಾಗ, ಹಪ್ಪಳ ಸಂಡಿಗೆ ಮಾಡುವಾಗ ಹೀಗೆ ಹೆಂಗಸರು ಒಟ್ಟಾಗಿ ಕೆಲಸ ಮಾಡುವಾಗ ಒಬ್ಬರಿಗೆ ಬರುವ ಹಾಡನ್ನು ಮತ್ತೆ ಮತ್ತೆ ಹೇಳಿಸಿ ಅವರೊಂದಿಗೆ ದನಿಗೂಡಿಸಿ ಇತರರು ಕಲಿಯುತ್ತಿದ್ದರೆಂಬ ಅಂಶ ಸಂಪ್ರದಾಯದ ಹಾಡುಗಳಿಂದ ತಿಳಿದುಬರುತ್ತದೆ.

ಹರಿದಾಸ ಸಾಹಿತ್ಯದ ಕೀರ್ತನೆಗಳಲ್ಲಿ ಬಹುಪಾಲು ಕೃತಿಗಳಲ್ಲಿ ಹೆಚ್ಚಾಗಿ ಮದುವೆಯ ಉಲ್ಲೇಖಗಳಷ್ಟೇ ಕಂಡುಬರುತ್ತವೆ. ಮದುವೆಯ ವಿವರಗಳು ಅಲ್ಲಿ ಬಂದಿಲ್ಲ. ಆದರೆ ಹೆಳವನಕಟ್ಟೆ ಗಿರಿಯಮ್ಮ ಮತ್ತು ಹರಪನಹಳ್ಳಿ ಭೀಮವ್ವನ ಹಾಡುಗಳಲ್ಲಿ ಮದುವೆಯ ಆಚರಣೆಗಳ ವಿವರಗಳು ಪ್ರಸ್ತಾಪಗೊಂಡಿವೆ. ಇವರ ರಚನೆಗಳಲ್ಲಿ ಸಾಂಪ್ರದಾಯಿಕ ಆಚರಣೆಗಳು ಮತ್ತು ಸಾಂಪ್ರದಾಯಿಕ ಮನಸ್ಸು ಕೂಡ ಕಂಡುಬರುತ್ತದೆ. ಇವರ ಹಾಡುಗಳಲ್ಲಿ 'ಸೀತಾಕಲ್ಯಾಣ' 'ರತಿಕಲ್ಯಾಣ ಸುಭದ್ರಾಕಲ್ಯಾಣ, ಮುಯ್ಯದಹಾಡು ಮುಂತಾದ ದೊಡ್ಡ ಹಾಡುಗಳು ಮದುವೆಯ ಸಂಪ್ರದಾಯಗಳನ್ನು ಪರಿಚಯಿಸುತ್ತವೆ. ಇಲ್ಲಿ ದೀರ್ಘವಾಗಿ ಮದುವೆಯ ವರ್ಣನೆಗಳನ್ನು ಕೊಟ್ಟಿದ್ದಾರೆ. ಇವು ಪುರಾಣದ ಕಥೆಯನ್ನು ಆಧರಿಸಿವೆ. ಹಾಗೂ ಮದುವೆಯ ಸಮಯದಲ್ಲಿ ಮದುವಣಿಗನನ್ನೂ ಮತ್ತು ಮದುಮಗಳನ್ನು ಹಸೆಗೆ ಕರೆಯುವ ಹಾಡು, ಆರತಿ ಎತ್ತುವ ಹಾಡು ಮುಂತಾದ ಸಂದರ್ಭಗಳನ್ನು ಕುರಿತು ಹಾಡುವ ಹಾಡಿನ ಮಾದರಿಗಳನ್ನು ಕಾಣಬಹುದು.

ಶ್ರೀರಾಮ ಸೀತೆಯರ ವಿವಾಹ ಸಂದರ್ಭವನ್ನು ಕಥಾ ವಸ್ತುವಾಗುಳ್ಳ 'ಸೀತಾಕಲ್ಯಾಣ' ಒಂದು ಉರುಟಣೆ ಹಾಡುಗಳ ಕಿರುಕಾವ್ಯ ಸಾಂಗತ್ಯದ ಮಟ್ಟನ್ನು ಹೋಲುವ ೮೭ ನುಡಿಗಳಲ್ಲಿರುವ ಚಿಕ್ಕ ಕೃತಿ

ಮೊದಲಲ್ಲಿ 'ಹೆಣವನಕಟ್ಟೆರಂಗಯ್ಯ' ಎಂತಲೂ ಇರುವುದರಿಂದ ಇದನ್ನು ಗಿರಿಯಮ್ಮನ ಕೃತಿ ಎಂದು ಹೇಳಬಹುದು. 'ಸೀತಾಕಲ್ಯಾಣ' ದೊಡ್ಡ ಕಾವ್ಯವಲ್ಲ ವರ್ಣನೆಗಳಾಗಲಿ ಕಥಾವಸ್ತುವಾಗಲಿ ಇದರಲ್ಲಿ ಇಲ್ಲ. ಮದುವೆಯ ಮನೆಯಲ್ಲಿ ಹೆಣ್ಣು ಮಕ್ಕಳು ಹಾಡಬಹುದಾದಂತಹ ಒಂದು ದೊಡ್ಡ ಹಾಡು ಗಿರಿಯಮ್ಮನೇ ಕೃತಿಯ ಕೊನೆಯಲ್ಲಿ 'ಉರುಟಣೆ ಪದ' ಎಂದು ಹೇಳಿದ್ದಾಳೆ.

ಹಿಂದಿನ ಕಾಲದ ಬ್ರಾಹ್ಮಣರ ಮದುವೆಗಳಲ್ಲಿ ವಧುವು ಹೇಳುತ್ತಿದ್ದ 'ಉರುಟಣೆ'ಯ ಹಾಡುಗಳು ಸ್ವಾರಸ್ಯಕರವಾಗಿರುತ್ತಿದ್ದವು. ಧಾರೆಯಾದ ಮೇಲೆ ಪ್ರತಿದಿನವೂ ಬೆಳಿಗ್ಗೆ ಮತ್ತು ಸಂಜೆ 'ಉರುಟಣೆ' ಅಥವಾ 'ಅರಿಶಿನ ಎಣ್ಣೆ ಶಾಸ್ತ್ರ' ನಡೆಯುತ್ತಿತ್ತು. ಆಗ ವಧೂವರರು ಪರಸ್ಪರ ಕೆನ್ನೆ, ಮುಂಗೈ ಹಾಗೂ ಹೆಜ್ಜೆಗಳಿಗೆ 'ಅರಿಶಿನ ಎಣ್ಣೆ' ಹಚ್ಚುತ್ತಿದ್ದರು. ಕುಂಕುಮ ಇಟ್ಟು, ಗಂಧ ಹಚ್ಚಿ, ಹಾರ ಹಾಕಿ ತಾಂಬೂಲ ಕೊಡುತ್ತಿದ್ದರು. ಹೆಣ್ಣು ಕಡೆಯಲ್ಲಿ ಆರತಿ ಎತ್ತಿ ಬೆಳಗುತ್ತಿದ್ದಳು. ಆಗ ಗಂಡು ಆರತಿಗೆ ದುಡ್ಡು ಹಾಕಬೇಕು. ಈ ಎಲ್ಲ ಕಾರ್ಯಗಳನ್ನು ಮಾಡುವಾಗಲೂ ಹೆಣ್ಣುಮಕ್ಕಳು ಹಾಡು ಹೇಳಲೇಬೇಕಾಗಿತ್ತು. ಒಮ್ಮೆ ಹೇಳಿದ ಹಾಡನ್ನು ಮತ್ತೊಮ್ಮೆ ಹೇಳಲಾಗದು. ಆದರಿಂದ ವಧುವು ಹಲವು ಹಾಡುಗಳನ್ನು ಕಲಿತಿರಬೇಕಾಗಿರುತ್ತಿತ್ತು.

ಮದುವೆಯ ನಾಲ್ಕು ದಿವಸದಲ್ಲಿ
ಮಧುವಣಿಗನು ರಾಮ ಜಾನಕಿಗೆ
ಮುದದಿಂದ ಅರಿಷಿಣೆಣ್ಣೆಯ ಮಾಡೊ ಸಂಭ್ರಮದ
ಪದನ ಹೇಳುವೆ ಸುಜನರು ಕೇಳಿ ಜಯ ಜಯ[೭೯]

ಎಂದು ಗಿರಿಯಮ್ಮ ಪ್ರಾರಂಭದಲ್ಲಿ ಹೇಳಿದ್ದಾಳೆ. ಕೃತಿಯ ಹೆಸರು ಸೀತಾಕಲ್ಯಾಣವಾದರೂ ಕಲ್ಯಾಣದ ವರ್ಣನೆಯಾಗಲಿ, ಅದಕ್ಕೆ ಹಿಂದಿನ ಬಿಲ್ಲು ಮುರಿದ ವಿಷಯವಾಗಲಿ ಇಲ್ಲಿ ಬಂದಿಲ್ಲ. ಮದುವೆಯಾದ ನಾಲ್ಕನೇ ದಿನ ಮಾಡಿದ ಅರಿಸಿನೆಣ್ಣೆಯ ಶಾಸ್ತ್ರದ ವರ್ಣನೆಯೇ ಈ ಹಾಡಿನ ವಸ್ತುವಾಗಿದೆ. ಪ್ರತಿಯೊಂದು ನುಡಿಯ ಕೊನೆಗೆ ಸೊಲ್ಲಿನಂತೆ 'ಜಯ ಜಯ' ಎಂದು ಬರುತ್ತದೆ. ಅದೇ ರೀತಿ ಸಂಪ್ರದಾಯದ ಹಾಡುಗಳಲ್ಲಿ ಕಂಡುಬರುವ 'ದತ್ತಾತ್ರೇಯನ ಹುಟ್ಟು' ಎಂಬ ಹಾಡಿನ ಪ್ರಾರಂಭದಲ್ಲಿ

ಯುಕ್ತಾಯುಕ್ತ ಯಾವುದೊಂದರಿಯೆನು ರಾಮ ರಾಮ
ಸತ್ಯಾಸತ್ಯ ಯಾವುದೊಂದರಿಯೆನು ರಾಮ ರಾಮ
ಮತ್ತೆ ಪುರಾಣದ ಸಾರವ ಕಥೆಯಿದು ರಾಮ ರಾಮ
ಭಕ್ತ ಜನರ ಕೈಲಿ ಕೇಳಿನಾ ಹೇಳುವೆ ರಾಮ ರಾಮ
ಆದಿ ಪುರಾಣದ ಸಾರದ ಕಥೆಯಿದು ರಾಮ ರಾಮ
ಭಾಗವತರ ಕೈಲಿ ಕೇಳಿನಾ ಹೇಳುವೆ[೮೦]

ಎಂದು ಹಾಡುವಲ್ಲಿ ವಾಕ್ಸಂಪ್ರದಾಯದಲ್ಲಿ ಪರಂಪರಾಗತವಾಗಿ ಮುಂದುವರಿದ ಹಾಡುಗಳಿವು ಎನ್ನುವುದಕ್ಕೆ ಸ್ಪಷ್ಟ ನಿದರ್ಶನವಾಗಿ ಕಂಡುಬರುತ್ತದೆ.

ಪಾಕ ಶೇಷಾದ್ರಿ ಬ್ರಹ್ಮಕೆ ಶರಣು
ಲೋಕ ನಾಯಕ ಹೆಳವನಕಟ್ಟೆ ವೆಂಕಟ
ನೀ ಕರುಣಿಸಿ ಸಲಹುವೆನಗೆ ಜಯ ಜಯ[೮೧]

ಎಂಬ ಪಲ್ಲವಿಯಿಂದ ಸೀತಾ ಕಲ್ಯಾಣದ ಹಾಡು ಪ್ರಾರಂಭವಾಗುತ್ತದೆ. ಶ್ರೀ ರಾಮನಿಗೆ ಅರಿಸಿನೆಣ್ಣೆಯ ಮಾಡಲು ಕೌಸಲ್ಯ ದೇವಿ ಕೇರಿ ಕೇರಿಯ ಗುಂಟ ಮುತ್ತೈದೇರನು ಕರೆಸಿದಳು. ರಾಮನ ಮಾತೆಯರೆಲ್ಲಾ ಪಿತಾಂಬರವನ್ನುಟ್ಟು ಸಿದ್ಧರಾದರು ಉಳಿದವರು

ಚೀಣಾ ಚೀಣಾಂಬರಗಳನುಟ್ಟು
ವೇಣಿ ಕಸ್ತೂರಿಯ ಪಣೆಗಿಟ್ಟು
ಜಾಣೆಯರೆಲ್ಲ ಶೃಂಗಾರವಾಗಿ ಮಲ್ಲಿಗೆ
ಬಾಣನ ಪಟ್ಟದಾನೆಗಳಂತೆ ಜಯ ಜಯ[೮೨]

ಹೊರಟರಂತೆ ಈ ಶಾಸ್ತ್ರವನ್ನು ನೋಡಲು ಮತ್ತು ಮಾಡಲು ದೇವಲೋಕದ ನೆಂಟರು ಸಹ ಬಂದರಂತೆ

ಗರುಡನ್ವಲ್ಲಭೆ ಸೌಂದರದೇವಿ
ವರುನ್ವಲ್ಲಭೆ ಕಾಳಕದೇವಿ
ಹರನ್ವಲ್ಲಭೆ ಪಾರ್ವತಿ ಗಂಗೆ ಸಹಿತಲಿ
ಅರಿಷಿನೆಂಣೆಯ ಮಾಡ ಬಂದರಾಗ ಜಯ ಜಯ[೮೩]
ಬ್ರಹ್ಮವಲ್ಲಭೆ ಶಾರದಾದೇವಿ ವಾ
ಯುರಮಣಿ ಅಂಜನಾದೇವಿ
ಹರುಷದಿ ಕೌಸಲ್ಯೆ ಕೈಕೆ ಸೌಮಿತ್ರೆಯರು
ಅರಿಷಿಣೆಣ್ಣೆಯ ಮಾಡಬಂದರಾಗ ಜಯ ಜಯ[೮೪]

ಸೌಂದರ ದೇವಿ, ಕಾಳಕದೇವಿ, ಪಾರ್ವತಿ, ಗಂಗೆ ಸಹಿತ ಇವರಷ್ಟೇ ಅಲ್ಲದೆ ಶಾರದಾದೇವಿ, ಅಂಜನಾದೇವಿಯು ಮತ್ತು ಕೌಸಲ್ಯೆ, ಕೈಕೆ, ಸೌಮಿತ್ರೆಯರೂ ಬಂದರಂತೆ, ಅರಿಸಿನೆಣ್ಣೆಯ ಶಾಸ್ತ್ರ ಹೆಣ್ಣಿನವರಾದ ಜನಕನ ಮನೆಯಲ್ಲಿ ನಡೆಯುತ್ತದೆ. ಆದ್ದರಿಂದ ದಶರಥ ಮಹಾರಾಜ ಬರುವಾಗ

ಅಲ್ಲಲ್ಲಿ ನಡೆವ ನಾಟಕ ಶಾಲೆ
ಬಿಲ್ಲಾಳು ಚಿತ್ರ ಕಾಟನವರು

ಸೊಲ್ಲು ಸೊಲ್ಲಿಗೆ ಓಡಿ ಹೊನ್ನನು ತ್ಯಾಗವ
ಚೆಲ್ಲುತ ದಶರಥ ನಡೆದನಾಗ ಜಯ ಜಯ[೮೫]

ಹೀಗೆ ರಾಜನಿಗೆ ತಕ್ಕಂತೆ ದಾನಗಳನ್ನು ನೀಡುತ್ತ ದಶರಥ ಮಿಥಿಲನಗರಕ್ಕೆ ಬರುವುದನ್ನು ಗಿರಿಯಮ್ಮ ವಿಸ್ತಾರವಾಗಿ ವರ್ಣಿಸುತ್ತ ಮುಂದೆ ಸಾಗುತ್ತಾಳೆ. ದಶರಥನ ಮಹಾರಾಜ ದೂರದಲ್ಲಿ ಬರುವುತ್ತಿರುವುದನ್ನು ಕಂಡು

ಭರದಿಂದಲೆದ್ದು ಜನಕ ರಾಯಾ
ತರಿಸಿ ನಿವಾಳಿಗಳನ್ನು ಹಾಕಿ
ಹರುಷದಿ ಕೈಲಾಗವ ಕೊಟ್ಟಯೋಧ್ಯವ
ಅರಸ ಮನ್ನಿಸಿ ಒಡಗೊಂಡನಾಗ ಜಯ ಜಯ[೮೬]

ಹೀಗೆ ಮರ್ಯಾದೆಯಿಂದ ಎದುರುಗೊಂಡು ಬಂದು ಗದ್ದಗೆಯನ್ನು ಹಾಸಿ ಬೀಗರಿಗೆ ಉಪಚಾರ ಮಾಡಿದನಂತೆ. ವಿಸ್ತಾರವಾದ ಮಂಟಪದೊಳಗೆ ರತ್ನಗಂಬಳಿಗಳನ್ನು ಹಾಸಿ ಸುತ್ತಣ ರಾಯರನ್ನೆಲ್ಲಾ ಕೂಡಿಸಿದರು. ನಾಗಭೂಷಣನು ಸಹ ಬಂದು ಕುಳಿತ.

ಸುತ್ತಣ ರಾಯ ರಾಯರಿಗೆಲ್ಲ
ರತ್ನಗಂಬಳಿಗಳ ಹರಹಿದರು
ಅರ್ತಿಯಿಂದಲಿ ಸುರರೆಲ್ಲರು ಕುಳಿತರು
ವಿಸ್ತರಿಸಿದ ಮಂಟಪದೊಳಗೆ ಜಯ ಜಯ[೮೭]

ಇಷ್ಟೆಲ್ಲಾ ಸಂಭ್ರಮಗಳ ನಡುವೆ ಹೆಂಗಳೆಯರು ರಾಮನನ್ನು ವಿಧ ವಿಧವಾಗಿ ಸ್ತುತಿಸಿ ಹಸಗೆ ಕರೆದರು. ಕ್ರಮದಂತೆ ಇಷ್ಟದೇವರ ಪೂಜೆ ಮಾಡುವಾಗ ಮೊದಲು ಘಂಟೆ ಬಾರಿಸಿ ದೇವರನ್ನು ಪೂಜಾಸ್ಥಾನಕ್ಕೆ ಆಹ್ವಾನಿಸಲಾಗುತ್ತದೆ. ಈ ಕ್ರಮವೇ ಕನ್ನಡದಲ್ಲಿ 'ಹಸೆಗೆ ಕರೆಯುವ' ಆಚರಣೆಯಾಗಿದೆ. ಸಂಸ್ಕೃತ ಮಂತ್ರಗಳ ಬದಲು ಕನ್ನಡದ ಹಾಡು ಹೇಳಿ ಹಸೆಗೆ ಅಂದರೆ ಪೀಠಕ್ಕೆ ಬರುವಂತೆ ಕರೆಯುವ ಸಂಪ್ರದಾಯ ನಮ್ಮ ಪೂಜಾ ಸಮಾರಂಭಗಳ ಅವಿಭಾಜ್ಯ ಅಂಗವಾಗಿ ಬೆಳೆದುಬಂದಿದೆ. ದೇವರ ಪೂಜೆ ಮಾಡುವಾಗ ವ್ರತ ಮಾಡುವಾಗ ಹಾಗೂ ಹಬ್ಬ ಹುಣ್ಣಿಮೆ ಮದುವೆ, ಮುಂಜಿ ಮುಂತಾದ ಶುಭ ಸಮಾರಂಭಗಳಲ್ಲಿ ಮಹಿಳೆಯರು ಹಸೆಗೆ ಕರೆಯುವ ಹಾಡುಗಳನ್ನು ತಪ್ಪದೆ ಹೇಳುತ್ತಾರೆ. ದೇವರುಗಳನ್ನು ಹಸೆಗೆ ಕರೆಯುವಾಗ ಆಯಾ ದೇವರ ಅವತಾರಕ್ಕೆ ಸಂಬಂಧಿಸಿದ ಕಥೆಯನ್ನು ವರ್ಣಿಸುವ ಹಾಡು ಹೇಳುತ್ತಾರೆ. ನಾಮಕರಣ, ಮುಂಜಿ, ಮದುವೆಯಂಥ ಸಮಾರಂಭಗಳಲ್ಲಿ ಮಗು, ವಟು, ವಧೂವರರು ಅಥವಾ ಬಸುರಿ ಬಾಣಂತಿಯರನ್ನು ಹಸೆಗೆ ಕರೆಯುವಾಗ ಸಹ ಅವರಿಗೆ ರಾಮ, ಕೃಷ್ಣ, ಲಕ್ಷ್ಮಿ, ಪಾರ್ವತಿ, ಸರಸ್ವತಿ, ಸೀತೆ, ಮೊದಲಾದವರ ದೈವತ್ವವನ್ನು ಆರೋಪಿಸಿ ಆ ದೇವ ದೇವಿಯರ ಗುಣಗಾನ ಮಾಡಿ ಹಾಡುಗಳ ಮೂಲಕ ಸ್ವಾಗತ ಕೋರುತ್ತಾರೆ.

ಮಣಿಮಂಟಪದೊಳು ಹಸೆಹಾಸಿ ಕನಕ
ಮಣಿಯ ತಂದಿಳುಹಿದರು
ದಿನಕರಕುಲರಾಮ ಹಸೆಗೇಳೆನುತಲಿ
ಗುಣಾವಳಿಗಳ ಕೊಂಡಡಿದರು ಜಯ ಜಯ

ಪೊಕ್ಕಳೊಳಜನ ಪೆತ್ತವನೇಳು
ಅಕ್ರೂರಜನ ಪೆತ್ತವನೇಳು
ಮುಕ್ಕಣ್ಣನ ರಿಪುಬಲವ ಸಂಹರಿಸಿದ
ಭಕ್ತ ವತ್ಸಲ ಹಸೆಗೇಳೆಂದರು ಜಯ ಜಯ[೧೨]

ದಶರಥರಾಜನಂದನನೇಳು
ಅಸುರಸಂಹಾರ ಕಾರಣನೇಳು
ವಸುಧೆಗೊಡೆಯ ರಾಮ ಹಸೆಗೇಳೆನುತಲಿ
ಋಷಿಗಳೆಲ್ಲರು ಶೃತಿಗರೆದರಾಗ ಜಯ ಜಯ[೮೮]

ಹೀಗೆ ಹೆಂಗಸರೆಲ್ಲ ಸೇರಿ ರಾಮನನ್ನು ವಿಧ ವಿಧವಾಗಿ ಸ್ತುತಿಸಿ ಹಸೆಗೆ ಕರೆದರು. ಕಡೆಗೆ ಋಷಿಗಳು ಸಹ ದಶರಥರಾಜ ನಂದನನೇಳೂ ಅಸುರ ಸಂಹಾರ ಕಾರಣನೇಳೂ ಎಂದು ಹಸೆಗೆ ಕರೆದರು. ವಾಲ್ಮೀಕಿ ಮೊದಲಾದವರು ರಾಮನ ಹಣೆಗೆ ಬಾಸಿಂಗವನ್ನು ಕಟ್ಟಿ ವಸುದೇವನಾಗೆಂದು ಹರಸಿದರು.

ಹೀಗೆ ಸಾಮಾನ್ಯವಾಗಿ ಹಸೆಗೆ ಕರೆದ ಹಾಡುಗಳು ದೀರ್ಘವಾಗಿರದೆ ಮೂರು ನುಡಿ, ಐದು ನುಡಿಗಳ ಹಾಡುಗಳೇ ಹೆಚ್ಚು ಮತ್ತಿಘಟ್ಟ ಕೃಷ್ಣಮೂರ್ತಿಯವರು ಸಂಗ್ರಹಿಸಿರುವ ಸಂಪ್ರದಾಯದ ಹಾಡುಗಳಲ್ಲಿ ೬-೮ ಸಾಲುಗಳ ದೊಡ್ಡ ದೊಡ್ಡ ೯-೧೦ ನುಡಿಗಳುಳ್ಳ ಹಾಡುಗಳಿರುವುದು ಕಂಡುಬರುತ್ತವೆ. ಆದರೆ ಅಂಥ ಹಾಡುಗಳ ಸಂಖ್ಯೆ ಕಡಿಮೆ. ಹಾಡು ಸಣ್ಣದಾಗಿದ್ದರೆ ಸಂಬಂಧಿಸಿದ ದೇವರ ಕಥೆ ಸಂಕ್ಷೇಪವಾಗಿರುತ್ತದೆ. ದೊಡ್ಡದಾಗಿದ್ದರೆ, ಕಥೆ ಸ್ವಲ್ಪ ವಿಸ್ತಾರವಾಗಿರುತ್ತದೆ. ಆರತಿಹಾಡು, ಲಾಲಿಹಾಡುಗಳಂತೆ, ಹಸೆಗೆ ಕರೆದ ಹಾಡುಗಳೂ, ಹಿಂದಿನ ಕಾಲದಲ್ಲಿ ಓದು ಬರಹವರಿಯದ ಮಕ್ಕಳು ಹಾಗೂ ಮಹಿಳೆಯರಿಗೆ ನಮ್ಮ ಸನಾತನ ಧರ್ಮದ ಹಾಗೂ ಪುರಾಣದ ಪುಣ್ಯಕಥೆಗಳ ಪರಿಚಯ ಮಾಡಿಕೊಡುವುದರಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸುತ್ತಿದ್ದವು. ಅಂತೆಯೇ ವೇದೋಪನಿಷತ್ತುಗಳ ಸಾರವನ್ನೂ ಸರಳ ಮಾತುಗಳಲ್ಲಿ ಸಾರುವ ಈ ಹಾಡುಗಳು ಹಿಂದಿನಂತೆಯೇ ಈಗಲೂ ಉತ್ತಮವಾದ ತಿಳುವಳಿಕೆಯನ್ನು ನೀಡಬಲ್ಲವು.

ಮತಿಘಟ್ಟ ಕೃಷ್ಣಮೂರ್ತಿಯವರು ಸಂಗ್ರಹಿಸಿರುವ 'ಗೃಹಿಣಿ ಗೀತೆಗಳು' ಎಂಬ ಗ್ರಂಥದಲ್ಲಿ ಇಂಥದ್ದೆ 'ಹಸೆಗೆ ಕರೆದ' ಹಾಡಿಗೆ ಉದಾಹರಣೆಯನ್ನು ನೋಡಬಹುದು.

ಹಸೆಗೀಗಽ ಬಾರೋ ಬೇಗನೇ
ದಶರಥ ಸುತ ರಾಮನೇ ||ಪ||
ದಶರಥನುದುರದಿ ಜನಿಸಿದನೆ
ಶಿಲೆಯಾದಹಲ್ಯೆಯ ಸಲಹಿದನೆ
ಮುನಿಯಾಗ ಪಾಲಿಸಿ ಧನುವನ್ನೆ ಮುರಿಯುತ
ಜಾನಕಿಯ ತಂದಾತನೇ
ಮಾತೆಯ ವಾಕ್ಯವ ಕೇಳುತ್ತಲಿಽ
ಸೀತಾ ಸಮೇತ ತೆರಳಿದನೆ
ಪ್ರೀತಿಯೊಳನುಜನ ಕೂಡಿ ವನದಿ
ಸಂಚಾರ ಮಾಡಿದಾತನೇ
ಮಾರೀಚ ಮಾಯವ ತೋರುತಲಿ
ಧೀರ ದಶಕಂಠನು ಚೋರನಾಗಿ
ನಾರಿಯನೊಯ್ಯಲು ಘೋರನರಸುತ ಬಂದ
ಧೀರ ರಾಮಚಂದ್ರನೇ
ಪಕ್ಷಿಯ ವಚನವ ಕೇಳುತ್ತಲೆ
ಅಕ್ಷಣ ಮಾರುತಿ ಸಾರಿದನೆ
ಕಿಷ್ಕಿಂದೆ ಸೇರುತ್ತ ಸುಗ್ರೀವನ ಸ್ನೇಹ ಮಾಡಿ
ವಾಲಿಯ ಕೊಂದಾತನೆ
ದೂತರ ಲಂಕೆಗೆ ಕೇಳುಹಿದನೆ
ಸೀತೆಯ ವಾರ್ತೆಯ ಕೇಳಿದನೆ
ಸೇತುವೆ ಕಟ್ಟಿಸಿ ವಿಭೀಷಣನಿಗೆ
ಪಟ್ಟವ ಕಟ್ಟಿದಾತನೇ
ರಾಕ್ಷಸರ ವಂಶವ ನಾಶಗೈದು
ರಾವಣನನುಜನ ಸಂಹರಿಸಿ
ನಾರಿಯ ಕದ್ದಂಥ ಚೋರನ ಕೊಂದ
ಧೀರ ರಾಮಚಂದ್ರನೇ[೯೯]

ಹೀಗೆ ಹಸೆಗೆ ಕರೆಯುವ ಹಾಡಿನಲ್ಲಿ ಸೀತಾ ಕಲ್ಯಾಣದ ಅನಂತರದ ಘಟನೆಗಳನ್ನು ವರ್ಣಿಸಿವುದನ್ನು ಕಾಣಬಹುದು. ಹೀಗೆ ಒಂದು ಕಡೆ ರಾಮನನ್ನು ಹಸೆಗೆ ಕರೆದು ಎಬ್ಬಿಸುತ್ತಿದ್ದರೆ ಮತ್ತೊಂದು ಕಡೆ ಸೀತೆಯ ಶೃಂಗಾರ ನಡೆದಿದೆ.

ಅರಳುಗಂಗಳಿಗೆ ಅಂಜನ ಹಚ್ಚಿ
ಬೆರಳಿಗೆ ಮುದ್ರೆ ಉಂಗುರವಿಟ್ಟು
ಕೊರಳಿಗೆ ಯೇಕಾವಳೀಯವೇ ಹಾಕೋರು
ತರಳಾಕ್ಷಿಯರಾ ಜಾನಕಿಗೆ[೧೦೦]

ಅಲಂಕೃತಳಾದ ಸೀತೆ ಕುಳಿತಿದ್ದ ಹಸೆಯೆಡೆಗೆ ರಾಮ ಬಂದ ಎನ್ನುವುದನ್ನು ಗಿರಿಯಮ್ಮ ಭಕ್ತಿ ಭಾವದಿಂದ ಮನ ತುಂಬಿ ತನ್ಮಯಳಾಗಿ ಹಾಡಿದ್ದಾಳೆ. ಹಾಗೆ ಹಾಡುವಾಗ ರಾಮಾಯಣದ ಎಷ್ಟೋ ವಿಷಯಗಳನ್ನು ಹೇಳುತ್ತಾ ಸೀತಾಕಲ್ಯಾಣದ ಅನಂತರದ ಘಟನೆಗಳಾದ ಮಾರೀಚ ವಧೆ, ಸೇತುಬಂಧನ, ಸುಗ್ರೀವರಕ್ಷಣೆ ಇತ್ಯಾದಿ ಅನೇಕ ಘಟನೆಗಳನ್ನು ಹೇಳಿದ್ದಾಳೆ

ಭಕ್ತವತ್ಸಲ ರಾಘವ ಬಂದ
ಯುಕ್ತಿದಾಯಕ ಶ್ರೀರಾಮ ಬಂದ
ಅರ್ಕನು ಶತಕೋಟಿತೇಜನು ಜಗಕತಿ
ಶಕ್ತ ತಾ ಬಂದನೆಂದವೆ ಕಹಳೆ ಜಯ ಜಯ

ಸಿಂಧು ಬಂಧವ ರಾಘವ ಬಂದ ಪು
ರಂದರವರದ ಶ್ರೀರಾಮ ಬಂದ
ಇಂದು ವದನೆಪತಿ ರಾಮ ಬಂದನು ರಾಮ
ಚಂದ್ರ ತಾ ಬಂದನೆಂದವೆ ಕಹಳೆ ಜಯ ಜಯ[೧]

ರಾಮ, ಲಕ್ಷ್ಮಣ, ಸೀತೆಯರು ವನವಾಸದಲ್ಲಿದ್ದಾಗ ಶೂರ್ಪನಖಿಯನ್ನು ಅಪಮಾನಗೊಳಿಸಿದರ ಸಲುವಾಗಿ ಸೇಡು ತೀರಿಸಿಕೊಳ್ಳಬೇಕೆಂದು ಶೂರ್ಪನಖಿಯು ಅಣ್ಣನಾದ ರಾವಣನಲ್ಲಿ ಬಂದು ತಿಳಿಸಿದಾಗ ಲಂಕಾಧಿಪತಿಯಾದ ರಾವಣನು ಮಾರೀಚನ ಸಹಾಯದಿಂದ ಸೀತೆಯನ್ನು ಅಪಹರಿಸುತ್ತಾನೆ. ರಾಮನು ಸೀತೆಯನ್ನು ಕಳೆದುಕೊಂಡು ದುಃಖದಿಂದ ಅರಣ್ಯದಲ್ಲಿ ಶೋಧಿಸುತ್ತಿರುವಾಗ ವಾನರರ ಸಹಾಯದಿಂದ ರಾವನು ಸೀತಾನ್ವೇಷಣೆಗೆ ತೊಡಗುತ್ತಾನೆ. ಆಗ ವಾಲಿ ಮತ್ತು ಸುಗ್ರೀವರ ಯುದ್ಧ ನಡೆದು ರಾಮನು ವಾಲಿಯನ್ನು ವಧಿಸುತ್ತಾನೆ. ಅನಂತರ ಸುಗ್ರೀವನಿಗೆ ಪಟ್ಟಾಭಿಷೇಕವಾದ ಮೇಲೆ ಸುಗ್ರೀವನ ವಾನರ ಸೇನೆಯ ಸಹಾಯದಿಂದ ಲಂಕೆಯ ಮೇಲೆ ಆಕ್ರಮಣವನ್ನು ಹೇಗೆ ಮಾಡುವುದು ಎಂದಾಗ ಸಮುದ್ರವನ್ನು ದಾಟಲು ಸಮುದ್ರರಾಜನ ಸಲಹೆಯಂತೆ ಸೇನಾ ಸಾಗರದ ಅಧಿಪತಿಯು ವಾನರ ಪ್ರಮುಖನಾದ ನಲನು ಸಾಗರದ ಮೇಲೆ ಸೇತುವೆಯನ್ನು ಕಟ್ಟಬಲ್ಲ ತಜ್ಞನೆಂದು ತಿಳಿಸಿದನು. ಈ ಸೇತುವೆಯ ಮೂಲಕ ಲಂಕೆಯ ದಡವನ್ನು ವಾನರ ಸೇನೆಯು ತಲುಪಬಲ್ಲದೆಂದು ತಿಳಿಸಿದನು. ಸಮುದ್ರರಾಜನ ಮಾತನ್ನು ಕೇಳಿ ನಲ ರಾಮನ ಹತ್ತಿರ ಬಂದು ಸವಿನಯವಾಗಿ ರಾಮನಿಗೆ ವಂದಿಸಿ ಸಮುದ್ರರಾಜನು ಹೇಳಿದಂತೆ ನಾನು ವಿಶ್ವಕರ್ಮನ ಮಗ ನಾನು ಸೇತುವೆಯನ್ನು ಕಟ್ಟಲು ಸಿದ್ಧನಾಗಿದ್ದೇನೆ ಎಂದು ನಲನು ಅಪ್ಪಣೆಯನ್ನು ಪಡೆದ. ವಿಶ್ವಕರ್ಮನ ಮಗ ನಲ ಮಂದರ ಪರ್ವತ ಪ್ರದೇಶದಲ್ಲಿ ಋಷಿಗಳು ತಪಸ್ಸು ಮಾಡುತ್ತಿದ್ದಾಗ ಬಾಲಕನಾಗಿದ್ದ ನಲ ಅವರ ಕಮಂಡಲು, ಕೃಷ್ಣಾಜಿನ ಮುಂತಾದ ವಸ್ತುಗಳನ್ನು ತೆಗೆದುಕೊಂಡು ಹೋಗಿ ನದಿಯಲ್ಲಿ ಬಿಸಾಡುತ್ತಿದ್ದ ವಾನರ ಸಹಜವಾದ ಚೇಷ್ಟೆ ಮಾಡುತ್ತಿದ್ದ ಋಷಿಗಳು ಜ್ಞಾನಿಗಳು ಅವರು ನಲನಿಗೆ ನೀನು ಹಾಕುವ ವಸ್ತುಗಳು ನೀರಿನಲ್ಲಿ ಮುಳುಗದೆ ಹಾಗೆಯೇ ತೇಲುತ್ತಿರಲಿ ಅಲ್ಲದೆ ನಿನ್ನ

ಈ ಸಾಮರ್ಥ್ಯ ಇನ್ನೊಬ್ಬರು ಹೇಳಿದಾಗ ಮಾತ್ರವೇ ನಿನಗೆ ನೆನಪಿಗೆ ಬರಲಿ ಎಂದು ಹೇಳಿದ್ದರು. ಅದರಂತೆ ನಲನಿಗೆ ತನ್ನ ಸಾಮರ್ಥ್ಯದ ಅರಿವೇ ಮರೆತಿತ್ತು. ಈಗ ಸಮುದ್ರರಾಜ ಜ್ಞಾಪಿಸಿದ್ದರಿಂದ ಅದು ನೆನಪಿಗೆ ಬಂದಿತು ಎಂದು ಹೇಳಿದ. ರಾಮನು ಸಮುದ್ರಕ್ಕೆ ಸೇತುವೆಯನ್ನು ಕಟ್ಟಲು ಅಜ್ಞಾಪಿಸಿದ.

ಹೀಗೆ ನಲನಿಗೆ ಸೇತುವೆ ಕಟ್ಟಲು ರಾಮ ಆಜ್ಞಾಪಿಸಿದ್ದೇ ತಡ ಕಪಿಗಳ ಗುಂಪು ನಾನಾ ದಿಕ್ಕಿಗೂ ಹೊರಟು ದೊಡ್ಡ ದೊಡ್ಡ ಸಾಲ, ಅರ್ಜುನ, ಅಶೋಕ ವೃಕ್ಷಗಳನ್ನು ಬೇರು ಸಹಿತ ಕಿತ್ತು ತಂದರು. ಪರ್ವತ ಶಿಖರಗಳನ್ನೂ ತಂದು ರಾಶಿ ಹಾಕಿದರು ಎಲ್ಲ ಕಡೆಯಲ್ಲೂ ಮಹಾ ಪರಾಕ್ರಮಶಾಲಿಗಳಾದ ಆ ವಾನರರು ಆ ಮಹಾರಣ್ಯದಲ್ಲಿದ್ದ ಸಾಲ, ತಾಲ, ಧನ, ಬಿದಿರು, ಆಶೋಕ, ಬಿಲ್ವ ಸಪ್ತಪರ್ಣಿ ಕರ್ಣಿಕಾರ, ಚೂತ ಇತ್ಯಾದಿ ಮಹಾವೃಕ್ಷಗಳನ್ನೆಲ್ಲ ಕೆಲವನ್ನು ಬುಡಸಹಿತ ಮತ್ತು ರಂಬೆ ಕೊಂಬೆಗಳನ್ನು, ದೊಡ್ಡ ದೊಡ್ಡ ಬಂಡೆಗಲ್ಲುಗಳನ್ನೇ ಎತ್ತಿ ತಂದುಹಾಕಿದರು. ಅವುಗಳನ್ನು ಸಮುದ್ರದಲ್ಲಿ ಹಾಕಿ ಉತ್ತಮವಾದ ಭದ್ರವಾದ ತಳಪಾಯವನ್ನು ಕಟ್ಟಲಾಯಿತು. ಆ ಅಡಿಪಾಯದ ಮೇಲೆ ಸೇತುಬಂಧನ ಕಾರ್ಯ ಪ್ರಾರಂಭವಾಯಿತು. ಹೀಗೆ ನಲನಿಗೆ ಸೇತುವೆ ಕಟ್ಟಲು ವಾನರರು ತಂದು ಕೊಟ್ಟಪರ್ವತ ಶಿಖರಗಳನ್ನು ನಲ ತನ್ನ ಕೈಯಿಂದ ಸ್ಪರ್ಶಿಸಿ ಸಮುದ್ರಕ್ಕೆ ಎಸೆಯುತ್ತಿದ್ದನು. ನಲನ ಮೇಲ್ವಿಚಾರಣೆಯಲ್ಲಿ ಅದ್ಭುತವಾದ ಸೇತುವೆ ನಿರ್ಮಾಣವಾಗುತ್ತಿತ್ತು. ಶ್ರೀರಾಮ ಕಾರ್ಯಕ್ಕಾಗಿ ವಾನರ ಸಮೂಹ ತೋರಿದ ಉತ್ಸಾಹವನ್ನು ವರ್ಣಿಸಿರುವುದು 'ಈ ಸೇತುಬಂಧನ' ಪ್ರಕರಣ ರಾಮಭಕ್ತರಿಗೆಲ್ಲ ಬಹಳ ಇಷ್ಟವಾಗಿದೆ. ಭಕ್ತಿರಸವನ್ನು ಹೊಮ್ಮಿಸುವಂಥ ಪ್ರಮುಖ ಘಟನೆಯಾಗಿದೆ.

ಯಜ್ಞರಕ್ಷಕ ರಾಘವ ಬಂದ
ಯಜ್ಞಶಿಕ್ಷಾಮಿತ್ರ ರಾಮ ಬಂದ
ಸುಗ್ರೀವ ರಕ್ಷಕಾರಣ ಬಂದ ಲಕ್ಷ್ಮ
ಣಾಗ್ರಜ ಬಂದನೆಂದವೆ ಕಹಳೆ ಜಯ ಜಯ"[೨]

ಸೀತಾಪರಣವಾದ ಮೇಲೆ ರಾಮ ಲಕ್ಷ್ಮಣರು ಸೀತೆಯನ್ನು ಹುಡುಕುತ್ತ ಋಷ್ಯಮುಖ ಪರ್ವತದ ಸಮೀಪದಲ್ಲಿ ಸಂಚರಿಸುತ್ತಿದ್ದಾಗ ಸುಗ್ರೀವನ ದೃಷ್ಟಿಗೆ ರಾಮ ಲಕ್ಷ್ಮಣರು ಕಂಡುಬಂದರು. ಅವನು ಭಯದಿಂದ ವಾಲಿಯೇ ತನ್ನನ್ನು ನಾಶಗೊಳಿಸಲೆಂದು ಇವರನ್ನು ಕಳಿಸಿರಬೇಕೆಂದು ಸುಗ್ರೀವ ಋಷ್ಯಮುಕ ಪರ್ವತವನ್ನು ಬಿಟ್ಟು ವಲಯ ಪರ್ವತಕ್ಕೆ ಹೋದನು. ಸುಗ್ರೀವನು ವಿಚಾರ ಮಾಡಲಾಗಿ ಮಾರುತಿಯನ್ನು ರಾಮ ಲಕ್ಷ್ಮಣರಲ್ಲಿ ಕಳಿಸಿದನು. ಸುಗ್ರೀವನ ಮಾತಿನಂತೆ ಹನುಮಂತ ವಾನರ ರೂಪವನ್ನು ತ್ಯಜಿಸಿ ತಪಸ್ವಿಯಂತೆ ವೇಷಧರಿಸಿ ಹನುಮಂತನು ತನ್ನ ಗೌರವಯುತ ಮಾತುಗಳಿಂದ ರಾಮನ ಮೈತ್ರಿಯನ್ನು ಸಂಪಾದಿಸಿದನು. ರಾಮ ಲಕ್ಷ್ಮಣರನ್ನು ತನ್ನೊಂದಿಗೆ ಸುಗ್ರೀವನ ಹತ್ತಿರ ಕರೆದುಕೊಂಡು ಬಂದನು ಸುಗ್ರೀವನು ಅವರ ಕಾರ್ಯದಲ್ಲಿ ಸಹಾಯ ಮಾಡುವುದಾಗಿಯೂ ಸಹ ಆಶ್ವಾಸನೆಯನ್ನು ನೀಡಿದನು.

ಅಗ್ನಿಸಾಕ್ಷಿಯಾಗಿ ಮೈತ್ರಿಬಂಧನವನ್ನು ಸ್ವೀಕರಿಸಿದ ಅನಂತರ ರಾಮನು ಸುಗ್ರೀವನನ್ನು ಕುರಿತು ಅವನ ಸಮಸ್ಯೆಯನ್ನು ಕೇಳಿದನು. ಆಗ ಸುಗ್ರೀವನು ನಿನ್ನಂತೆ ನಾನೂ ನನ್ನ ಸೋದರನಿಂದ ರಾಜ್ಯವಂಚಿತನಾಗಿರುವೆನು ನನ್ನ ಹೆಂಡತಿಯನ್ನು ಅವನು ಅಪಹರಿಸಿರುವನು ಹೀಗಾಗಿ ಅವನ ವೈರವನ್ನು ಸ್ವೀಕರಿಸಿ ಈ ಅರಣ್ಯದಲ್ಲಿ ವಾಸವಾಗಿರಬೇಕಾದರೆ ನೀನು ಅವನ ಭೀತಿಯಿಂದ ಮುಕ್ತಗೊಳಿಸು ಎಂದು ಕೇಳಿಕೊಂಡನು. ಅವನ ವಿನಂತಿಯಂತೆ ರಾಮನು ವಾಲಿಯ ವಧೆಯನ್ನು ಮಾಡುವುದಾಗಿ ವಚನವಿತ್ತನು. ಸುಗ್ರೀವನು ವಾಲಿಯನ್ನು ಯುದ್ಧಕ್ಕೆ ಆಹ್ವಾನಿಸಬೇಕು ವಾಲಿ ಸುಗ್ರೀವರು ಯುದ್ಧ ಮಗ್ನರಾದಾಗ ಮರೆಯಲ್ಲಿದ್ದ ರಾಮನು ತನ್ನ ಬಾಣಗಳಿಂದ ವಾಲಿಯನ್ನು ಹಿಂದಿನಿಂದ ವಧಿಸಬೇಕು ಎಂದು ನಿಶ್ಚಯಿಸಿದರು.

ಈ ರೀತಿ ನಿರ್ಧಾರವನ್ನು ಕೈಗೊಂಡ ಸುಗ್ರೀವನು ವಾಲಿಯನ್ನು ಯುದ್ಧಕ್ಕಾಗಿ ಆಹ್ವಾನಿಸಿದನು. ರಾಮ ಲಕ್ಷ್ಮಣರು ಒಂದು ಗಿಡದ ಮರೆಯಲ್ಲಿ ಅಡಗಿ ನಿಂತರು. ವಾಲಿಯು ಕೂಡಲೇ ಯುದ್ಧಕ್ಕೆ ಬಂದು ಸುಗ್ರೀವನನ್ನು ಸ್ವಲ್ಪ ಸಮಯದಲ್ಲೆ ಪರಾಜಿತನನ್ನಾಗಿ ಮಾಡಿದನು. ಸುಗ್ರೀವನು ಓಡಿ ಹೋದನು ವಾಲಿ ಹಾಗೂ ಸುಗ್ರೀವರು ನೋಡಲು ಒಂದೇ ರೀತಿಯಾಗಿದ್ದರು. ಅವನ ಧ್ವನಿ, ಮಾತಿನ ರೀತಿ, ನಡಿಗೆ, ನೋಟ ಕಾಂತಿ ಹಾಗೂ ವೇಷ ಭೂಷಣಗಳು ಇತ್ಯಾದಿ ಎಲ್ಲವೂ ಒಂದೇ ರೀತಿಯಾಗಿದ್ದವು ಆದ್ದರಿಂದ ರಾಮನಿಗೆ ವಾಲಿಯನ್ನು ಸುಗ್ರೀವನ ಕೈಯಲ್ಲಿ ಸೋಲಿಸಲು ಫಜೀತಿಪಟ್ಟನು. ಸುಗ್ರೀವನಿಗೆ ರಾಮನ ಮೇಲೆ ತುಂಬಾ ಕೋಪವುಂಟಾಯಿತು ವಸ್ತು ಸ್ಥಿತಿಯನ್ನರಿತ ನಂತರ ಪುನಃ ಪ್ರಯತ್ನಿಸುವ ವಿಚಾರವನ್ನು ಮಾಡಿದನು.

ಈ ಬಾರಿ ಲಕ್ಷ್ಮಣನು ಸುಗ್ರೀವನ ಕೊರಳಲ್ಲಿ ನಾಗವಲ್ಲಿ ಪುಷ್ಪದ ಒಂದು ಹಾರವನ್ನು ಗುರುತು ಸಿಗುವುದಕ್ಕಾಗಿ ಹಾಕಿದನು. ಸುಗ್ರೀವನು ಈ ರೀತಿ ಸನ್ನದ್ಧನಾಗಿ ಪುನಃ ವಾಲಿಯನ್ನು ಯುದ್ಧಕ್ಕೆಂದು ಆಹ್ವಾನಿಸಿದನು. ವಾಲಿಯು ಕೂಡಲೇ ಹೊರಟು ನಿಂತನು ಆಗ ಪತ್ನಿ ತಾರಾಳು ಈಗ ಯುದ್ಧಕ್ಕೆ ಹೋಗದಿರಿ, ನಾಳೆ ಬೆಳಗಾದ ಆನಂತರದ ಯುದ್ಧ, ಮಾಡುವುದು ಒಳಿತು ಇದರಲ್ಲಿ ಏನೋ ಮೋಸ ಅಡಗಿರುವ ಸಾಧ್ಯತೆ ಇದೆ ಸುಗ್ರೀವನಿಗೆ ಯಾರೋ ಬಲಶಾಲಿಯಾದವರ ಸಹಾಯ ದೊರಕಿರುವಂತಿದೆ ನಮ್ಮ ಗುಪ್ತಚರರು ಅಂಗದನಿಗೆ ಇಕ್ಷ್ವಾಕುವಂಶದ ರಾಮಲಕ್ಷ್ಮಣರು ಸುಗ್ರೀವನ ಹತ್ತಿರ ಬಂದು ಮಾತುಕತೆಯಾಡಿ ಅವನಿಗೆ ಸಹಾಯ ವಚನವಿತ್ತ ವಿಷಯವನ್ನು ಹೇಳಿರುವುದಾಗಿ ತಿಳಿದುಬಂದಿದೆ ಆದ್ದರಿಂದ ನೀವು ಸುಗ್ರೀವನ ಜತೆಗೆ ಸಖ್ಯ ಬೆಳೆಸುವುದು ಒಳಿತು ಅವನನ್ನು ಕ್ಷಮಿಸುದರಲ್ಲಿ ಹಿತವುಂಟು. ಎಂದು ಅವನಿಗೆ ವಿನಂತಿಸಿದಳು. ವಾಲಿಗೆ ಅವಳ ಮಾತುಗಳು ಹಿಡಿಸಲಿಲ್ಲ. ಸುಗ್ರೀವನ ಈ ಉದ್ದಟತನವನ್ನು ನಾನು ಸಹಿಸಲಾರೆ ಅವನೊಡನೆ ಯುದ್ಧ ಮಾಡಲೇ ಬೇಕು ಅವನ್ನೇನೂ ಕೊಲ್ಲುವುದಿಲ್ಲ ರಾಮನ ವಿಷಯವಾಗಿ ನೀನು ಚಿಂತಿಸದಿರು ಅವನು ಧರ್ಮವೇತ್ತನೂ ಕೃತಜ್ಞನೂ ಆಗಿರುವನು ಎಂದು ತಾರೆಗೆ ಹೇಳಿದನು. ವಾಲಿಗೆ ಎದುರಾಗಿ ರಾಮನು ಯುದ್ಧಕ್ಕೆ ಬಂದಿದ್ದರೆ ರಾಮನನ್ನು ಜಯಿಸುವಂತದ

ಶಕ್ತಿ ವಾಲಿಗಿತ್ತು. ಆದ್ದರಿಂದಲೇ ಈ ಪ್ರಸಂಗದಲ್ಲಿ ಅವನು ಭಯಭೀತನಾಗದೆ ತಾರೆಯನ್ನು ಸಂತೈಸಿ ವಾಲಿಯು ಯುದ್ಧಕ್ಕೆ ಹೊರಟನು. ಯುದ್ಧವು ಪ್ರಾರಂಭವಾಯಿತು. ಸುಗ್ರೀವನು ಪುನಃ ವಾಲಿಯಿಂದ ಬಲವಾದ ಪೆಟ್ಟನ್ನು ತಿನ್ನುತ್ತಾ ಸಹಾಯಕ್ಕಾಗಿ ಅಚೀಚೆ ನೋಡಿದನು. ದೊಡ್ಡದಾದ ಮರದ ಮರೆಯಲ್ಲಿದ್ದ ರಾಮ ಸುಗ್ರೀವನ ಸ್ಥಿತಿಯನ್ನು ಗಮನಿಸಿದ ತಕ್ಷಣ ಆಗ ರಾಮ ಬಿಟ್ಟ ಒಂದು ಶಕ್ತಿಶಾಲಿಯಾದ ಪ್ರಚಂಡ ಬಾಣವು ವಾಲಿಯ ಎದೆಯನ್ನು ತಾಕಿತು. ಮಹಾವೃಕ್ಷವು ಕಳಚಿ ಬಿದ್ದಂತೆಯೆ ಆ ಪ್ರಚಂಡ ದೇಹಿಯಾದ ವಾಲಿಯು ನೆಲಕ್ಕುರುಳಿದನು. ಹೀಗೆ ರಾಮನು ವಾಲಿಯ ಬಾಧೆಯಿಂದ ಸುಗ್ರೀವನನ್ನು ಸಂರಕ್ಷಿಸಿದನು. ಅನಂತರ ಹನುಮಂತನು ರಾಮನಿಗೆ ಕಿಷ್ಕಿಂದೆಯಲ್ಲಿ ಬಂದಿರಲು ಆಮಂತ್ರಿಸಿದನು ಆದರೆ ರಾಮನು ತನ್ನ ಪ್ರತಿಜ್ಞೆ ನಿಮಿತ್ತನಾಗಿ ನಿರಾಕರಿಸಿದನು. ಹೀಗಾಗಿ ಸುಗ್ರೀವನ ಪಟ್ಟಾಭಿಷೇಕವು ಅವನು ವಾಸವಾಗಿದ್ದ ಗುಹೆಯಲ್ಲಿಯೇ ನಡೆಯಿತು. ಸುಗ್ರೀವನು ರಾಮನ ಸಹಾಯದಿಂದ ಕಳೆದುಹೋದ ರಾಜ್ಯ ಮತ್ತು ಹೆಂಡತಿ ರುಮೆಯನ್ನು ಹಿಂತಿರುಗಿ ಪಡೆದನು ಮತ್ತು

> ದೂಷಕಹರಣ ಶ್ರೀರಾಮ ಬಂದ ವಿ
> ಭೀಷಣವರದ ರಾಘವ ಬಂದ
> ಭಾಷೆ ಪಾಲಿಪ ರಾಮಚಂದ್ರ ಬಂದನು ಜಗ
> ದೀಶ ತಾ ಬಂದನೆಂದವೆ ಕಹಳೆ[೯]

ದೂಷಣ ಒಬ್ಬ ರಾಕ್ಷಸ ರಾವಣನ ಚಿಕ್ಕ ತಾಯ ಮಗ ಖರಾಸುರನ ತಮ್ಮ ಇವನು ಖರದೊಂದಿಗೆ ಜನಸ್ಥಾನದಲ್ಲಿ ವಾಸವಾಗಿದ್ದರು. ರಾಮ ಲಕ್ಷ್ಮಣರು ದಂಡಕಾರಣ್ಯದಲ್ಲಿ ಅನೇಕ ವರ್ಷಗಳ ಕಾಲ ವಾಸವಾಗಿದ್ದು ಪಂಚವಟಿ ಪ್ರದೇಶದಲ್ಲಿ ಪರ್ಣಕುಟಿಯನ್ನು ಕಟ್ಟಿಕೊಂಡು ಗೋದಾವರಿ ನದಿಯ ತೀರದಲ್ಲಿ ಎರಡು ಮೂರು ವರ್ಷಗಳ ಕಾಲ ರಾಮನು ಸುಖದಿಂದ ಕಳೆದನು. ಒಂದು ದಿನ ಆ ಸ್ಥಳಕ್ಕೆ ಒಬ್ಬಳು ರಾಕ್ಷಸಿಯು ಅಲ್ಲಿಗೆ ಬಂದಳು. ಅವಳ ಹೆಸರು 'ಶೂರ್ಪನಖಾ' ಅವಳು ಮನೋಹರ ರೂಪಿಯಾದ ತರುಣ ರಾಮನನ್ನು ಕಂಡಾಗ ಅವಳು ಕಾಮ ಮೋಹಿತಳಾಗಿ ನೇರವಾಗಿ 'ರಾಮನನ್ನು ವಿವಾಹವಾಗು ಎಂದು ಕೇಳಿಕೊಂಡಳು. ಆಗ ಅವಳು ತನ್ನ ವಂಶವನ್ನು ಕುರಿತು ರಾಮನಿಗೆ ಹೇಳಿದಳು ತಾನು ರಾವಣನ ಸೋದರಿಯೆನ್ನುವ ಪರಿಚಯವನ್ನು ಮಾಡಿಕೊಂಡಳು. ರಾಮನು ನಾನು ಏಕಪತ್ನೀ ವ್ರತಸ್ಥ ನನ್ನ ವಿವಾಹವಾಗಿದೆ. ಅಲ್ಲದೆ ಮಡದಿ ಪಕ್ಕದಲ್ಲಿದ್ದಾಳೆ. ನನ್ನ ಸಹೋದರ ಲಕ್ಷಣನು ಅವಿವಾಹಿತನು ಅವನ ಹತ್ತಿರ ಹೋಗು ಅವನನ್ನು ಮದುವೆಯಾಗು ಎಂದು ಹೇಳಿದನು ಅದರಂತೆ ಶೂರ್ಪನಖಿಯು ಲಕ್ಷ್ಮಣನ ಬಳಿಗೆ ಬಂದು ತನ್ನನ್ನು ವಿವಾಹವಾಗಲು ದುಂಬಾಲು ಬಿದ್ದಳು. ಆಗ ಲಕ್ಷ್ಮಣನು ನಾನು ನನ್ನ ಅಣ್ಣನಿಗೆ ದಾಸನು. ದಾಸನನ್ನು ಮುದುವೆಯಾದರೆ ನೀನೂ ದಾಸಿ ಆಗಬೇಕಾಗುತ್ತದೆ. ಆದ್ದರಿಂದ ರಾಮನ ಹತ್ತಿರವೇ ಹೋಗು ಅವನನ್ನೇ ಮದುವೆಯಾಗು ಎಂದು

ಲಕ್ಷ್ಮಣನು ಹೇಳಿದನು. ಅದೂ ಸರಿ ಎಂದು ಶೂರ್ಪನಖಿಯು ಪುನಃ ರಾಮನ ಬಳಿಗೆ ಬಂದು 'ನನ್ನನ್ನು ನೀನೇ ಮದುವೆಯಾಗು' ಎಂದಳು ರಾಮನು ಪುನಃ ಲಕ್ಷ್ಮಣನ ಬಳಿ ಕಳುಹಿಸಿದ ಲಕ್ಷ್ಮಣನು ಅವಳನ್ನು ರಾಮನ ಹತ್ತಿರ ಕಳುಹಿಸಿದ ಶುರ್ಪನಖಿಗೆ ಕೋಪಬಂದಿತು. ಈಗ ನಾನು ನಿನ್ನ ಸಮಕ್ಷ ಈ ಸ್ತ್ರೀಯನ್ನು ಭಕ್ಷಿಸುವೆನು. ಅನಂತರ ಇಗ ನಾನು ನಿನ್ನ ಸಮಕ್ಷ ಈ ಸ್ತ್ರೀಯನ್ನು ಭಕ್ಷಿಸುವೆನು ಅನಂತರ ನಿನ್ನ ಸಂಗಡ ಸಂಸಾರ ಮಾಡಿಕೊಂಡು ಇರುವೆನೆಂದು ಹೇಳಿ ಸೀತೆಯನ್ನು ಭಕ್ಷಿಸಲು ಬಂದಳು ಅದನ್ನು ನೋಡಿದ ರಾಮ ಲಕ್ಷ್ಮಣನಿಗೆ ಅವಳನ್ನು ವಿರೂಪಗೊಳಿಸುವಂತೆ ಆಜ್ಞಾಪಿಸಿದನು. ಕೂಡಲೇ ಲಕ್ಷ್ಮಣನು ಹರಿತವಾದ ಕತ್ತಿಯಿಂದ ಶೂರ್ಪನಖಿಯ ಕಿವಿ ಮೂಗುಗಳನ್ನು ಕತ್ತರಿಸಿ ಹಾಕಿದನು. ಆಗ ಅವಳು ಭಯಂಕರವಾಗಿ ಕಾಡೆಲ್ಲಾ ಪ್ರತಿಧ್ವನಿಸುವಂತೆ ಕಿರುಚುತ್ತ 'ಹೋ' ಎಂದು ಅಳುತ್ತಾ ಶೂರ್ಪನಖಿಯು ತನ್ನ ಸೋದರನಾದ 'ಖರ'ನ ಬಳಿಗೆ ಹೋದಳು. ಅವನು ಆ ಪ್ರದೇಶದ ರಾಕ್ಷಸರ ನಾಯಕನಾಗಿದ್ದನು. ಅವಳ ಅವಸ್ಥೆಯನ್ನು ಕಂಡು ಅವನು ಕೋಪಯುಕ್ತನಾಗಿ ಈ ರೀತಿ ನಿನ್ನನ್ನು ವಿರೂಪಗೊಳಿಸಿದವನು ಯಾರೂ? ಎಂದು ವಿಷಯ ತಿಳಿದ 'ಖರ' ರಾಕ್ಷಸನು ಕೂಡಲೇ ತನ್ನ ಹದಿನಾಲ್ಕು ಜನ ರಾಕ್ಷಸ ವೀರರನ್ನು ರಾಮ ಲಕ್ಷ್ಮಣರನ್ನು ವಧಿಸಲು ಕಳುಹಿಸಿದನು. ಅವರನ್ನೆಲ್ಲ ರಾಮ ಒಬ್ಬನೇ ಸಂಹರಿಸಿದನು. ಶೂರ್ಪನಖಿಯು ಪುನಃ ಈ ಸಂಗತಿಯನ್ನು ಖರನಿಗೆ ಬಂದು ತಿಳಿಸಿದಳು. ಕೋಪೋದ್ರಿಕ್ತನಾದ ಖರನು ಸೋದರನೂ ಹಾಗೂ ಸೇನಾಪತಿಯೂ ಆದ 'ದೂಷಣ'ನನ್ನು ಹಾಗೂ ಹದಿನಾಲ್ಕು ಸಾವಿರ ರಕ್ಷಸರನ್ನು ಕರೆದುಕೊಂಡು ಸ್ವತಃ ಹೊರಟನು ಈ ರಾಕ್ಷಸರು ಭಯಂಕರ ಗರ್ಜನೆಯನ್ನು ಮಾಡುತ್ತಾ ಮಹನ್ ಸೈನ್ಯ ಬರುತ್ತಿರುವುದನ್ನು ಕಂಡ ರಾಮನು ಲಕ್ಷ್ಮಣನನ್ನು ಕುರಿತು 'ನಾನು ಇವರನ್ನೆಲ್ಲ ಸಂಹರಿಸುವೆನು ನೀನು ಯೋಚಿಸದಿರು ಸೀತೆಯನ್ನು ಕರೆದುಕೊಂಡು ಯಾವುದಾದರೊಂದು ಗವಿಯಲ್ಲಿ ಅಡಗಿರು ಎಂದು ಹೇಳಿದನು. ಅದರಂತೆ ಲಕ್ಷ್ಮಣನು ಮಾಡಿದನು. ರಾಮನು ಕವಚವನ್ನು ಧರಿಸಿ ಧನುಸ್ಸನ್ನು ಹಿಡಿದು ಯುದ್ಧಕ್ಕೆ ಸಿದ್ಧನಾದನು. ಅಷ್ಟರಲ್ಲಿ ಅವರೆಲ್ಲ ರಾಮನ ಮೇಲೆ ಸಾಗಿ ಬಂದ ಖರನೊಡನೆ ಬಂದಿದ್ದ ಹದಿನಾಲ್ಕು ಸಾವಿರ ರಕ್ಷಸರ ಸೈನ್ಯವನ್ನು ರಾಮನು ಸೆದೆಬಡಿದು ನಾಶ ಮಾಡಿದನು. ಖರ-ದೂಷಣರು ಸಾವನ್ನಪ್ಪಿದರು.

ತಾಟಕ ಪ್ರಾಣಾಪಹಾರ ಬಂದ
ಜಟಾಯು ಮುಕ್ತಿಕಾರಣ ಬಂದ
ತಾಟಂಕ ಧರ ನಾರಾಯಣ ರವಿಕುಲ
ಕೋಟಿ ತಾ ಬಂದನೆಂದವೆ ಕಹಳೆ"

ತಾಟಕಾ ಒಬ್ಬ ರಾಕ್ಷಸಿ, ಸುಕೇತುವೆಂಬ ಯಕ್ಷನ ಮಗಳು ಸುಕೇತುವಿಗೆ ಸಂತಾನವಿರಲಿಲ್ಲವಾಗಿ ಬ್ರಹ್ಮನನ್ನು ಕುರಿತು ತಪಸ್ಸು ಮಾಡಿ ಸಾವಿರ ಆನೆಗಳ ಬಲವುಳ್ಳ ಒಬ್ಬ ಮಗಳನ್ನು ಪಡೆದ ಇವಳು

ತಾಟಕಿ ಎಂಬ ಹೆಸರಿನಿಂದ ಬೆಳೆದು ಯಕ್ಷನ ಮಗನಾದ ಸುಂದನೆಂಬುವನನ್ನು ಮದುವೆಯಾಗಿ ಮಾರೀಚ ಸುಬಾಹುಗಳೆಂಬ ಪುತ್ರರನ್ನು ಪಡೆದಳು. ಕೆಲವು ಕಾಲದ ಬಳಿಕ ಸುಂದನು ಮರಣವನ್ನಪ್ಪಿದನು. ತಾಟಕೆ ತನ್ನ ಮಕ್ಕಳನ್ನು ಕರೆದುಕೊಂಡು ಮಲದ ಕರೂಶ ದೇಶಗಳ ನಡುವೆ ವನದಲ್ಲಿ ವಾಸ ಮಾಡಿಕೊಂಡಿದ್ದಳು. ಒಮ್ಮೆ ತಾಟಕೆ ಕಾಮಪೀಡಿತೆಯಾಗಿ ಮನೋಹರವಾಗಿ ಗಾನ ಮಾಡುತ್ತ ಮೈಮೇಲೆ ಪ್ರಜ್ಞೆಯಿಲ್ಲದೆ ಮಗನ ಸಂಗಡ ಸಂಚರಿಸುತ್ತಿರುವಲ್ಲಿ ಅಗಸ್ತ್ಯ ಮುನಿ ಅವಳ ರೂಪ ಲಾವಣ್ಯಭರಿತವನ್ನು ಕಂಡು ಕೋಪಭರಿತವಾಗಿ ನಿನ್ನ ಈ ಮೋಹಕ ರೂಪವು ತರುಣರಾದ ಕಾಮುಕರಿಗೆ ಭಯಂಕರವಾಗಿ ತೋರಲಿ ನಿನ್ನ ಮಕ್ಕಳಿಬ್ಬರೂ ರಾಕ್ಷಸರಾಗಲಿ ಎಂದು ಶಾಪವಿತ್ತ ಬಳಿಕ ಇವಳ ಇಬ್ಬರು ಮಕ್ಕಳೂ ಇವಳೂ ಸೇರಿ ಅಲ್ಲಿದ್ದ ಮುನಿಗಳನ್ನು ಪೀಡಿಸತೊಡಗಿದರು. ಮಲದ, ಕರೂಶ ದೇಶಗಳೂ ಇವರ ಹಾವಳಿಯಿಂದ ಹಾಳುಬಿದ್ದವು. ಇವಳು ವಾಸ ಮಾಡುತ್ತಿದ್ದ ಪ್ರದೇಶಕ್ಕೆ ಸ್ವಲ್ಪ ದೂರದಲ್ಲಿಯೇ ವಿಶ್ವಾಮಿತ್ರ ಮಹರ್ಷಿಯ ಆಶ್ರಯವಿತ್ತು. ಆತನು ಯಾಗ ಮಾಡತೊಡಗಿದಾಗೆಲ್ಲ ಇವರು ಆತನ ಯಜ್ಞಕ್ಕೆ ವಿಘ್ನವನ್ನುಂಟು ಮಾಡುತ್ತಿದ್ದರು. ಬಳಿಕ ವಿಶ್ವಾಮಿತ್ರ ಆಯೋಧ್ಯೆಗೆ ಅರಸನಾದ ದಶರಥನ ಮಕ್ಕಳಾದ ರಾಮ ಲಕ್ಷ್ಮಣರನ್ನು ಜೊತೆಗೆ ಕರೆದುಕೊಂಡು ಸಿದ್ಧಾಶ್ರಮಕ್ಕೆ ಬರುವಾಗ ದಾರಿಯಲ್ಲಿ ನಿರ್ಜನವಾಗಿದ್ದ ಮಲದ ಕರೂಶ ದೇಶಗಳನ್ನು ಕಂಡು ಕುತೂಹಲ ಭರಿತರಾದ ರಾಮ ಲಕ್ಷ್ಮಣರು ಇದೇನೆಂದು ಕೇಳಲಾಗಿ ಅವುಗಳ ವೃತ್ತಾಂತವನ್ನು ಸಮಗ್ರವಾಗಿ ತಿಳುಹಿ ಶ್ರೀರಾಮನ ಮೂಲಕ ತಾಟಕೆಯನ್ನು ಕೊಲ್ಲಿಸಿದ.

**ಜಟಾಯು ಮುಕ್ತಿಕಾರಣ :** ಜಟಾಯು ಒಬ್ಬ ಪಕ್ಷಿರಾಜ ವಿನತೆಯ ಪುತ್ರನಾದ ಅರುಣನಿಂದ ಶ್ಯೆನಿಯೆಂಬವಳಲ್ಲಿ ಜನಿಸಿದ ಕಿರಿಯಮಗ ಸಂಪಾತಿ ಇವನ ಅಣ್ಣ ಶ್ರೀರಾಮನು ಸೀತಾಲಕ್ಷಣರೊಂದಿಗೆ ಅಗಸ್ತ್ಯಾಶ್ರದಿಂದ ಪಂಚವಟಿಯ ಕಡೆಗೆ ಬರುತ್ತಿದ್ದಾಗ ನಡುದಾರಿಯಲ್ಲಿ ಕಂಡುಬಂದ ಜಟಾಯುವನ್ನು 'ರಾಮ' ನೀನು ಯಾರು? ಎಂದು ಮುಂತಾಗಿ ಪ್ರಶ್ನೆಯಾಡಲಾಗಿ ಜಟಾಯು ತನ್ನ ಪೂರ್ವೋತ್ತರಗಳನ್ನೆಲ್ಲ ವಿವರಿಸಿ, ತಾನೂ ದಶರಥನೂ ಬಾಲ್ಯದಿಂದಲೂ ಸ್ನೇಹಿತರೆಂಬುದಾಗಿ ಹೇಳಿದ ಬಳಿಕ ರಾಮನು ನಾವು ಇಲ್ಲಿಯೇ ಪಂಚವಟಿಯಲ್ಲಿ ವಾಸ ಮಾಡಲು ಬಂದಿದ್ದೇವೆ. ನೀನು ನಮ್ಮ ಯೋಗ ಕ್ಷೇಮಗಳನ್ನು ನೋಡಿಕೊಂಡಿರು ಎಂದು ಹೇಳಿದ (ರಾಮ, ಅರಣ್ಯ ೧೪) ಖರ, ದೂಷಣ, ತ್ರಿಶಿರಸರನ್ನು ರಾಮನು ಕೊಂದ ಕಾರಣ ಸೀತೆಯನ್ನು ಅಪಹರಿಸುವುದಕ್ಕಾಗಿ ರಾವಣನು ಯತಿವೇಷದಿಂದ ಬಂದು ರಾಮ ಲಕ್ಷ್ಮಣರು ಆಶ್ರಮದಲ್ಲಿಲ್ಲದಂತೆ ಮಾಡಿ ಸೀತೆಯನ್ನು ಒಯ್ಯುತ್ತಿರಲಾಗಿ ಸೀತೆಯ ಗೋಳನ್ನು ಕೇಳಿ ಜಟಾಯು ರಾವಣನ್ನು ಇದಿರಿಸಿ ಹೋರಾಡಿದ ರಾವಣ ಯುಕ್ತಿಯಿಂದ ಜಟಾಯುವಿನ ರೆಕ್ಕೆಗಳನ್ನು ಕತ್ತರಿಸಲಾಗಿ ಜಟಾಯು ಕೆಳಗೆ ಬಿದ್ದನು. ರಾಮಲಕ್ಷ್ಮಣರು ಸೀತೆಯನ್ನು ಆಶ್ರಮದಲ್ಲಿ ಕಾಣದೆ ಹುಡುಕುತ್ತ ಮುಂದೆ ನಡೆದುಬರಲಾಗಿ ಜಟಾಯುವು ಸೀತೆಯನ್ನು ರಾವಣನು ಅಪಹರಿಸಿದ ನಾನು ಅವಳನ್ನು ಬಿಡಿಸಲು ಅವನೊಡನೆ ಕಾದಾಡಿ ಅವನ ರಥವನ್ನು ಮುರಿದು ಸಾರಥಿಯನ್ನು ಕೊಂದುಹಾಕಿದೆ

ಕೊನೆಗೂ ಅವನು ನನ್ನನ್ನು ಘಾಸಿಗೊಳಿಸಿದ ನನ್ನ ರೆಕ್ಕೆಗಳನ್ನು ಕತ್ತರಿಸಿ ಮರಣಾಂತಿಕ ಪೆಟ್ಟನ್ನಿತ್ತ ನಾನು ಕೆಳಗೆ ಬಿದ್ದಾಗ ರಾವಣನು ಆಕಾಶ ಮಾರ್ಗವಾಗಿ ಸೀತೆಯನ್ನು ಕೊಂಡೊಯ್ದ ಎಂದು ಹೇಳಿದನು. ಅಷ್ಟರಲ್ಲಿ ಜಟಾಯುವಿನ ಪ್ರಾಣವು ಹೋಯಿತು. ರಾಮನು ಅವನ ದೇಹಕ್ಕೆ ಅಗ್ನಿ ಸಂಸ್ಕಾರ ಮಾಡಿದ ದಹನ ಕ್ರಿಯೆ ಮುಗಿದ ಮೇಲೆ ಗೋದಾವರಿಯಲ್ಲಿ ಸ್ನಾನ ಮಾಡಿ ವಿಧಿವತ್ತಾಗಿ ಜಲತರ್ಪಣವನ್ನು ನೀಡಿದ ರಾಮನು ಜಟಾಯುವನ್ನು ಕುರಿತು 'ಗಚ್ಛ ಲೋಕಾನ್ ಅನುತ್ತಮನ್' ಎಂದಿದ್ದಾನೆ. ಇದಕ್ಕೆ ಆಚಾರ್ಯರು ಆಳ್ವಾರುಗಳು ವ್ಯಾಖ್ಯಾನ ಮಾಡಿದ್ದಾರೆ. ಅನುತ್ತಮವಾದ ಲೋಕಕ್ಕೆ ಎಂದರೆ 'ವೈಕುಂಠ' ಎಂದಿದ್ದಾರೆ. ರಾಮ ಜಟಾಯುವಿಗೆ ಅನುತ್ತಮವಾದ ಲೋಕ ಅಂದರೆ ಮೋಕ್ಷಕ್ಕೆ ಹೋಗು ಎಂದ ಜಟಾಯುವಿಗೆ ಮೋಕ್ಷ ನೀಡಿದ. ಈ ಪ್ರಸಂಗದಲ್ಲಿ ರಾಮನ ಪರತತ್ವವು. ಪ್ರಕಾಶಕ್ಕೆ ಬರುತ್ತದೆ. ರಾಮ ತನ್ನನ್ನು 'ಆತ್ಮನಂ ಮಾನುಷಂ ಮನ್ಯೇ ರಾಮಂ ದಶರಥಾತ್ಮಜಂ' ಎಂದುಕೊಂಡಿದ್ದಾನೆ. ನಾನು ದಶರಥನ ಮಗ ಮನುಷ್ಯ ಎಂದುಕೊಂಡಿದ್ದಾನೆ. ಮನುಷ್ಯನಿಗೆ ಇಷ್ಟೊಂದು ಶಕ್ತಿ ಎಲ್ಲಿಯದು ಎಂದರೆ ಸತ್ಯದಿಂದ ಎಂದಿದ್ದಾನೆ.

'ಪರೋಪಕಾರಾರ್ಥ ಮಿದಂ ಶರೀರಂ' ಎಂಬ ಉಕ್ತಿಯಂತೆ ಜಟಾಯು ತನ್ನ ದೇಹವನ್ನು ಪರೋಪಕಾರಕ್ಕಾಗಿಯೇ ವಿನಿಯೋಗಿಸಿತು. ಶರೀರವು ಧರ್ಮವನ್ನು ಗಳಿಸಲು ಸಾಧನ ಆದರಿಂದ ಧರ್ಮ ಕಾರ್ಯಗಳಲ್ಲೇ ತೊಡಗಬೇಕು ಆದರಿಂದ ಮೋಕ್ಷ ತಾನಾಗಿಯೇ ಲಭ್ಯವಾಗುತ್ತದೆ ಎಂಬುದನ್ನು ಜಟಾಯು ತನ್ನ ಕಾರ್ಯದಿಂದ ಸಮರ್ಥಿಸಿತು ಒಂದು ಪಕ್ಷಿಯೇ ತನ್ನ ದೇಹವನ್ನು ಪರೋಪಕಾರಕ್ಕಾಗಿ ವಿನಿಯೋಗಿಸಿತು. ಮನುಷ್ಯನು ಹಾಗೆ ಧರ್ಮದ ಹಾದಿಯಲ್ಲಿ ನಡೆಯಬೇಕು ಎಂಬುದಕ್ಕೆ ಮಾರ್ಗದರ್ಶಿಯಾಯಿತು. ಇದರಿಂದ ಜಟಾಯುವಿಗೆ ಬಂದ ಫಲ ಅನುಪಮವಾದುದು

ವೀರ ವಿಕ್ರಮರಾಘವ ಬಂದ
ಮಾರೀಚಮರ್ದನ ರಾಮ ಬಂದ
ನಾರಿ ಶ್ರೀ ಜಾನಕಿ ರಮಣ ಬಂದನು
ಹರಿ ರಾಮತಾ ಬಂದನೆಂದವೆ ಕಹಳೆ"

ಮಾರೀಚನು ಸುಂದನೆಂಬ ರಾಕ್ಷಸನಿಂದ ಸುಕೇತು ಪುತ್ರಿಯಾದ ತಾಟಕಿಯೆಂಬ ಯಕ್ಷಸ್ತ್ರೀಯಲ್ಲಿ ಜನಿಸಿದ. ಅಗಸ್ತ್ಯನ ಶಾಪದಿಂದ ರಾಕ್ಷಸನಾದ ರಾವಣ ಸೀತೆಯನ್ನು ಅಪಹರಿಸುವುದಕ್ಕೆ ತನಗೆ ಸಹಾಯ ಮಾಡಬೇಕೆಂದು ರಾವಣ ಮಾರೀಚನಲ್ಲಿಗೆ ಹೋಗಿ ತನ್ನ ದುರವಸ್ಥೆಯನ್ನು ಹೇಳಿಕೊಂಡ ಮಾರೀಚ ರಾಮನ ಪರಾಕ್ರಮವನ್ನು ಬಣ್ಣಿಸಿ ಆತನ ಗೋಜಿಗೆ ಹೋಗದಿರುವಂತೆ ರಾವಣನಿಗೆ ತಿಳಿಯಪಡಿಸಿದನು. ರಾವಣ ಲಂಕೆಗೆ ಹೋಗಿ ಶೂರ್ಪನಖಿಯ ಪ್ರೇರಣೆಯಿಂದ ಮರಳಿ ಮಾರೀಚನಲ್ಲಿಗೆ ಬಂದ ರಾವಣನನ್ನು ಸತ್ಕರಿಸಿ ಕುಶಲಪ್ರಶ್ನೆ ಮಾಡಿದ ರಾವಣನು ಹಿಂದೆ ನಾ ಹೇಳಿದಂತೆ ರಾಮಪತ್ನಿಯಾದ ಸೀತೆಯನ್ನು

ಅಪಹರಿಸಲೇಬೇಕು ಎಂದು ಸಂಕಲ್ಪಿಸಿದ್ದೇನೆ. ನೀನು ನನಗೆ ಸಹಾಯ ಮಾಡು ಎಂದ ತಾಟಕಿಯ ವಧೆಯ ಅನಂತರ ರಾವನು ಮಾರೀಚನನ್ನು ಭಂಗ ಮಾಡಿ ಓಡಿಸಿದ್ದನು. ಸೇಡಿನಿಂದ ಪ್ರವೃತ್ತನಾಗಿ ಮಾರೀಚನು ಒಂದು ಸಲ ರಾಮನು ವನವಾಸದಲ್ಲಿದ್ದಾಗ ಇನ್ನಿಬ್ಬರು ರಾಕ್ಷಸರನ್ನು ಕರೆದುಕೊಂಡು ಬಂದು ಅವನ ಮೇಲೆ ದಾಳಿ ಮಾಡಿದ್ದ ಆದರೆ ರಾಮನು ಅವನ ಸಂಗಡಿಗರನ್ನು ವಧಿಸಿದಾಗ ತಪ್ಪಿಸಿಕೊಂಡು ಓಡಿಹೋಗಿದ್ದನು. ಈ ಎರಡು ಅನುಭವಗಳಿಂದ ಮಾರೀಚನಿಗೆ 'ರಾಮ'ನ ಹೆಸರು ಕೇಳಿದರೆ ನಡುಕಹುಟ್ಟುತ್ತಿತ್ತು. ಅವನು ಸ್ವತಃ ರಾವಣನೆದುರು 'ರಾಮ' ಎನ್ನುವ ಹೆಸರಷ್ಟೆ ಅಲ್ಲ 'ರ' ಎಂದು ಪ್ರಾರಂಭವಾಗುವ 'ರಥ' 'ರತ್ನ' ಇತ್ಯಾದಿ ಶಬ್ದಗಳನ್ನು ಕೇಳಿದರೂ ನನಗೆ ಭಯವಾಗುವುದು ಎಂದು ಹೇಳಿದನು. ಆದರೆ ರಾವಣನು ಅವನ ಮಾತುಗಳನ್ನು ಕೇಳಲಿಲ್ಲ. ರಾವಣನ ಆಜ್ಞೆಯನ್ನು ಧಿಕ್ಕರಿಸಿದರೆ ರಾವಣನು ಕೊಂದುಹಾಕುತ್ತಿದ್ದನು. ರಾಮನ ತಂಟೆಗೆ ಹೋದರೆ ರಾಮನೂ ಸಹ ಅವನನ್ನು ಕೊಲ್ಲುತ್ತಿದ್ದನು. ಇಂತಹ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಸಿಲುಕಿ ಕೊನಗೆ ರಾಜನ ಆಜ್ಞೆಯನ್ನು ಪಾಲಿಸಲೇಬೇಕಾಯಿತು. ರಾವಣನೊಡಗೂಡಿ 'ಆಕಾಶ ಮಾರ್ಗದಿಂದ ಪರ್ವತಗಳನ್ನು ವನಗಳನ್ನು ದಾಟಿ ದಂಡಕಾರಣ್ಯಕ್ಕೆ ಬಂದು ಮಾರೀಚನು 'ಮಾಯಾವಿ'ಯಾದ ಒಂದು ಸ್ವರ್ಣಮೃಗದಂತಹ ಜಿಂಕೆಯ ಉಡುಪನ್ನು ಧರಿಸಿ ಸೀತೆಯ ದೃಷ್ಟಿಗ ಬೀಳುವಂತೆ ಅತ್ತಿತ್ತ ಅಲೆದಾಡತೊಡಗಿದನು. ಈ ಚಿಗರೆಯ ಸೌಂದರ್ಯವನ್ನು ಕಂಡು ಸೀತೆಯು ಮುಗ್ಧಳಾದಳು. ರಾಮನಿಗೆ ಅದನ್ನು ಹಿಡಿದು ತರುವಂತೆ ದುಂಬಾಲು ಬಿದ್ದಳು. ಮಾರೀಚನು ಮೃಗರೂಪ ಧರಿಸಿ ಋಷಿ, ಮುನಿಗಳನ್ನು ಮೋಸಗೊಳಿಸು ಕೊಲ್ಲುತ್ತಿದ್ದ ಸಂಗತಿಯನ್ನು ಲಕ್ಷ್ಮಣನು ಅರಿತಿದ್ದನು. ರಾಮನಿಗೂ ತಿಳಿಸಿದನು. ಆದರೆ ರಾಮನು ಸೀತೆಯನ್ನು ಸಂತುಷ್ಟಗೊಳಿಸುವುದಕ್ಕಾಗಿ ರಾಮನು ಲಕ್ಷ್ಮಣನಿಗೆ ಸೀತೆಯನ್ನು ರಕ್ಷಿಸಲು ತಿಳಿಸಿ ಸ್ವರ್ಣಮೃಗದ ಬೇಟೆಗಾಗಿ ಧಾವಿಸಿದನು. ಸ್ವರ್ಣಮೃಗುವ ತಪ್ಪಿಸಿಕೊಮಡು ಓಡುತ್ತ ಓಡುತ್ತ ಬಹುದೂರ ಸಾಗಿ ಕೊನೆಗೆ ರಾಮನ ಬಾಣಕ್ಕೆ ಬಲಿಯಾಗಿ ಪ್ರಾಣಬಿಟ್ಟಿತು.

> ನಿರುಪಮಚರಿತ ರಾಘವ ಬಂದ
> ದುರಿತದಲ್ಲಣ ರಾಮದೇವ ಬಂದ
> ಭರತ ಶತ್ರುಘ್ನರ ಸಹೋದರಯೋಧ್ಯದ
> ಸುರಪತಿ ಬಂದನೆಂದವ ಕಹಳೆ

ಎಂದು ಮುಂತಾಗಿ ಮೊಳಗುತ್ತಿದ್ದ ಕಹಳೆಗಳು ಹೇಳುತ್ತಿರುವಂತೆ ಭಾಸವಾಗುತ್ತಿತ್ತಂತೆ ಮಂಗಳ ವಾದ್ಯಗಳ ನಡುವೆ ಬಂದ ರಾಮ.

> ಹೇಮ ಖಚಿತ ರನ್ನ ಪೀಠದಲಿ
> ಭೂಮಿಜೆ ಸಹಿತ ಕುಳಿತ ರಾಮ

ವಾಮ ಭಾಗದಿ ಒಪ್ಪಿರ್ದಳು ಜಾನಕಿ
ಆ ಮಹಾಸಭೆಯನು ಬೆಳಗುತಲಿ[೯೭]

ಹೀಗೆ ಕುಳಿತ ರಾಘವ ಜಾನಕಿಯೊಡನೆ ಲಾಜ ತಂದುಲ ಆಹುತಿಕೊಟ್ಟ ವಿಘ್ನೇಶ್ವರನನ್ನು ಪೂಜಿಸಿದನಂತೆ ಇದನ್ನು ಕಂಡು ದೇವತೆಗಳು ಹರ್ಷದಿಂದ ಚಪ್ಪಾಳೆ ತಟ್ಟಿದರಂತೆ. ಮುಂದೆ ಶ್ರೀರಾಮ ಸೀತೆಯ ಕರಗಳ ಪಿಡಿದೆತ್ತಿದ ಎಂದು ಒಂದು ಸಂಪ್ರದಾಯವನ್ನು ಗಿರಿಯಮ್ಮ ಹೇಳಿದ್ದಾಳೆ. ಆ ಸಂದರ್ಭದಲ್ಲಿ ಆಕೆಯ ಹಾಸ್ಯ ಪ್ರವೃತ್ತಿ ಮಿನುಗುವುದನ್ನು ಕಾಣಬಹುದು.

ಇಳೆಯ ಜಗಂಗಳನುದರದಲಿ
ಅಳವಡಿಸಿದ ಮಹಾತ್ಮಕನೂ
ಇಳೆಯ ಮಗಳನ್ನು ಯೆತ್ತಲಾರದೆ ರಾಮಾ
ಬಳಲದನೆಂದು ನಕ್ಕರು ಜನರೂ[೯೮]

ಅನಂತರ ಕೌಶಲ್ಯಾದೇವಿ ಶ್ರೀರಾಮನಿಗೆ ತೊಡೆಯೆಂದು ಹೇಳಿ ಅರಿಶಿನವನ್ನು ಸೀತೆಯ ಕೈಗೆ ಕೊಡುತ್ತಾಳೆ. ಸೀತೆ ನಾಚುತ್ತಾ ನಿಂದು ಶ್ರೀರಾಮನ ಸಿರಿಮುಖವನ್ನು ತೋರೆಂದು ಬೇಡುತ್ತಾ ಗಿರಿಯಮ್ಮ ಶ್ರೀಹರಿಯ ದಶಾವತಾರಗಳನ್ನು ವರ್ಣಿಸಿ ಹಾಡಿ ಹೊಗಳಿದ್ದಾಳೆ.

ಅಚ್ಯುತನಂತ ಶ್ರೀ ಹರಿ ರಾಮಾ
ರಚ್ಚೆಗಿಕ್ಕೆದಳೆನ್ನಲಿ ಬ್ಯಾಡಾ
ಹೆಚ್ಚನ ತಮನೆಂಬ ದೈತ್ಯನ ಗೆಲಿದಂತ
ಮತ್ಸ ರೂಪದ ಮುಖ ತಾರೆಂದಳು.

ಕಾಯಜ ಕೋಟಿ ಲಾವಣ್ಯ ರೂಪ
ಹಯವಾಹನ ಮೂರ್ಲೋಕದೊಡೆಯ
ರಾಯ ರಾಘವ ರಾಜೀವ ಲೋಚನಯನ್ನ
ಜೀಯ್ಯ ಪಾಲಿಸಿ ಮುಖತಾರೆಂದಳು[೯೯]

ಎಂದು ಪ್ರಥಮ ಅವತಾರದಿಂದ ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಾಮ, ಕೃಷ್ಣ, ಬುದ್ಧ, ಕಲ್ಕಿ ಅವತಾರದವರೆಗೆ ಸ್ತುತಿಸುತ್ತಾಳೆ. ಅವಳ ನುಡಿ ಕೇಳ ಮೆಚ್ಚಿ ರಾಮ ಮುಖ ತೋರುತ್ತಾನೆ. ಅರಿಶಿನ ಹಚ್ಚಿ ಜಾನಕಿ ಅವನ ಚರಣವ ತೋರೆಂದು ಬೇಡುತ್ತಾಳೆ.

ಕಲ್ಲೊಳು ಕಾಂತೆ ಮಾಡಿದ ಚರಣ
ಬಲ್ಲಿದ ಬಲಿಯ ವತ್ತಿದ ಪಾದ ಮಲ್ಲದ
ಮರ್ದಿಸಿ ಮದನಾರಿಯ ಬಲ
ಅಲ್ಲಿ ಮುರಿದ ಪಾದ ತಾರೆಂದಳು.[೧೦೦]

ಮುಂತಾಗಿ ಅವನ ಪಾದ ಮಹಿಮೆಯನ್ನು ಹಾಡಿ ಶ್ರೀಚರಣಕ್ಕೆ ಹೂವ್ವಿನಕ್ಷತೆಯನ್ನು ಎರಗಿ ಅಗಲದೆನ್ನುರದೊಳು ಸ್ವಾಮಿಯಾಗಿರುಯೆಂದು ಸತಿಗೆ ತಕ್ಕದನ್ನು ಹೇಳಿ ಪ್ರಾರ್ಥಿಸಿದ್ದಾಳೆ. ಸೀತೆ ರಾಮನಿಗೆ ಅರಿಶಿನ ಹಚ್ಚಿದಾದ ಮೇಲೆ ಇನ್ನು ರಾಮ ವೈದೇಹಿಗೆ ಅರಿಶಿನ ಹಚ್ಚಬೇಕು. ಈ ಕಾರ್ಯವನ್ನು ಪಾರ್ವತಿ ಹಿರಿಯ ಮುತ್ತೈದೆಯಾಗಿ ನಿಂತು ನಡೆಸಿ ಕೊಡುತ್ತಾಳೆ. ಅರಿಶಿನ ತೆಗೆದು ರಾಮನಕೈಗೆ ಕೊಟ್ಟು ಸಿರಿದೇವಿಗೆ ತೊಡೆಯೆಂದು ಹೇಳಿದಾಗ ರಾಮ ಕುಳಿತೇ ಹಚ್ಚೋಣ ಎಂದು ಕುಳಿತಿದ್ದನೆಂದು ಕಾಣುತ್ತದೆ ಅದನ್ನು ಕಂಡು ಪಾರ್ವತಿ ಛೇಡಿಸುತ್ತಾಳೆ.

ಬಲ್ಲೆವೋ ದೇವೋತ್ತಮ ನಿಮ್ಮಾ
ಪುಲ್ಲಲೋಚನೆ ಜಾನಕಿಯೊಡನೆ
ಸಲ್ಲದು ಸಲ್ಲಿಗೆಯು ರಾಘವ ನೀ
ನಿಲ್ಲಬೇಕೆನುತ ಪಾರ್ವತಿ ನುಡಿದೊ[೧೦೧]

ಆಕೆಯ ಮಾತಿನಂತೆ ರಾಮ ನಿಂತು ತಲೆ ಬಾಗಿಸಿರುವ ಸೀತೆಯ ಮುಖವನ್ನು ತೋರೆಂದು ಕೇಳುತ್ತಾನೆ.

ಲೋಕದೊಳೆಣೆಗಾಣೆ ನಿಮಗೆಂದೂ
ಯೇಕ ಪತ್ನೀವ್ರತ ಕೈಕೊಂಡೇ
ನೀ ಕರುಣಿಸಿ ಮುಖ ಕಮಲದ ತಾರೆಂದೂ
ಕಾಕುಸ್ತ ರಾಮ ನುಡಿಸಿದ ಸತಿಯಾ[೧೦೨]

ಪ್ರಥಮತಃ ರಾಮನ ಏಕಪತ್ನೀ ವ್ರತವನ್ನು ಗಮನಿಸಬೇಕಾಗುವುದು ರಾಮನು ಜನಿಸಿದಾಗ ಅವನ ತಂದೆಯಾದ ದಶರಥನಿಗೆ ಮೂರು ನೂರಾ ಐವತ್ತು ಹೆಂಡಂದಿರಿದ್ದರು. ಬಹಳಷ್ಟು ಜನ ಹೆಂಡಂದಿರಿದ್ದಾಗ ಪುರುಷನು ಸಾಧಾರಣವಾಗಿ ಒಬ್ಬಳನ್ನೇ ಪೂರ್ಣ ಪ್ರೇಮದಿಂದ ಕಾಣುವುದಿಲ್ಲ ಇದರಿಂದಾಗಿ ಯಾವ ಸ್ತ್ರೀಗೂ ಸಮಾಧಾನ ದೊರಕದು. ಮನೆಯಲ್ಲಿ ಸುಖ-ಶಾಂತಿಗಳು ಇಲ್ಲದೆ ಪುರುಷನಿಗೂ ಸಮಾಧಾನ ದೊರೆಯದು ಹೀಗಾಗಿ ಏಕ ಪತ್ನಿ ವ್ರತವು ಒಂದು ಮಹತ್ವವನ್ನು ಪಡೆಯುತ್ತದೆ. ಸ್ತ್ರೀಗೆ ಕೂಡ ಆತ್ಮವಿದೆ, ಮನಸ್ಸಿದ ಅವಳದೆ ಆದ ವಿಚಾರಗಳಿವೆ. ಪುರುಷ ಹಾಗೂ ಸ್ತ್ರೀ ಇಬ್ಬರೂ ಸಮಾಜದ ಮಹತ್ವದ ಘಟಕಗಳು ಆದ್ದರಿಂದ ಇಬ್ಬರಿಗೂ ಸಮಾನವಾದ ನ್ಯಾಯ ದೊರಕಬೇಕು ಎನ್ನುವ ದೃಷ್ಟಿಯಿಂದ ರಾಮನ ಏಕಪತ್ನೀ ವ್ರತವು ಮಹತ್ವದ್ದಾಗಿದೆ. ತನ್ನ ಮನೆಯ ತಾಯಂದಿರ ಸ್ಥಿತಿಗತಿಗಳನ್ನು ಲಕ್ಷಿಸಿಯೇ ರಾಮಪೂರ್ಣ ವಿಚಾರಾನಂತರ ಏಕಪತ್ನೀ ವ್ರತವನ್ನು ಸ್ವೀಕರಿಸಿದ ಆದ್ದರಿಂದಲೇ ಅವನು ಯುಗ ಪುರುಷನೆಂದು ಪ್ರಸಿದ್ಧಿ ಪಡೆದನು. ಅನಂತರ ಅರಿಶಿನ ಹಚ್ಚಿಯಾದ ಮೇಲೆ ಪರಸ್ಪರರು ಮುತ್ತು ರತ್ನ ಹಿಡಿದು ನಿವಾಳಿ ತೆಗೆಯುತ್ತಾರೆ. ಅನಂತರ ವಧೂವರರು ಕುಂಕುಮದೋಕುಳಿಯಾಡುತ್ತಾಳೆ.

ವಳ್ಳಿಯ ಕುಂಕುಮದೋಕುಳಿಯ
ಬೆಳ್ಳಿಯ ಬಟ್ಟಲೊಳಗೆ ತುಂಬಿ
ವೀಳ್ಯದ ಯಾಲೆಯ ತೆಗೆದು ಜಾನಕಿ ದೇವಿ
ಚಳ್ಳುಗುರ್ಗೊನೆಯಿಂದ ಚಿಂಮಿದಳು.[೧೦೩]

ಆದರೆ ರಾಮ ಸೀತೆಯ ಮೇಲೆ ಓಕುಳಿ ಚೆಲ್ಲದ ಬೆನ್ನಿಗೆ ಲೇಪಿಸುತ್ತಾನೆ.

ಚಂನಿಗ ರಾಮ ಸಂತೋಷದಿಂದಾ
ತಂನ ವಲ್ಲಬೆ ತೊಟ್ಟರಿಕೆಯನ್ನು
ಬಿನ್ನಾಣದಿ ಸಡಿಲಿಸಿ ವೋಕುಳಿಯನ್ನು
ಬೆಂನಿಗೆ ಲೇಪಿಸಿದನೇ ಸತಿಯಾ[೧೦೪]

ಓಕುಳಿಯಾಟದೊಡನೆ ಉರುಟಣೆ ಮುಗಿಯುತ್ತದೆ. ಹಸೆಯ ಮೇಲೆ ಕುಳಿತ ರಾಮ ಸೀತೆಯರಿಗೆ ಮುತ್ತೈದೆಯರು ವೈಡೂರ್ಯದ ಆರತಿ ಬೆಳಗಿ ತಾಂಬೂಲ ಕೊಡುತ್ತಾರೆ. ಸುರರು ಅಕ್ಷತೆ ಹಾಕಿ ಆಶೀರ್ವದಿಸುತ್ತಾರೆ. ನಾರದ ಅವರ ನಗರಿಗೆ ಹಿಂದಿರುಗುತ್ತಾನೆ.

ತುಂಗ ವಿಕ್ರಮ ರಾಮ ಜಾನಕಿಯರ
ಮಂಗಳುತ್ಸವರುಟಣೆಯ ಪದವ
ಸಂಗೀತದಿ ಹೇಳಿ ಕೇಳಿದ ಜನರಿಗೆ ಹೆಳವನಕಟ್ಟೆ
ರಂಗಯ್ಯ ನೊಲಿಪಿಹನು ಜಯಾ ಜಯ

ಎಂಬ ಮಂಗಳ ಫಲಶ್ರುತಿಯೊಡನೆ ಹಾಡು ಮುಗಿಯುತ್ತದೆ.[೧೦೫] ಗಿರಿಯಮ್ಮನ ಸೀತಾ ಕಲ್ಯಾಣದಲ್ಲಿ ಅಂತಹ ಮೇಲ್ಮಟ್ಟದ ಕಾವ್ಯಾಂಶವೇನೂ ಇಲ್ಲ ಮದುವೆಯ ಮನೆಗಳಲ್ಲಿ ಹಾಡಬಹುದಾದ ಸಾಧಾರಣ ಮಟ್ಟದ ಒಂದು ಹಾಡು ವಿವಾಹ ವೈಭವ, ಉರುಟಣೆಯ ಸಂಭ್ರಮ ದಶಾವತಾರ ಇವುಗಳನ್ನು ಗಿರಿಯಮ್ಮ ತನ್ನ ಶಕ್ತಿಗನುಸಾರವಾಗಿ ವರ್ಣಿಸಿದ್ದಾಳೆ. ವರ್ಣನೆಗಳಲ್ಲಿ ಹೊಸತನವಿಲ್ಲ ಕೆಲವೊಮ್ಮೆ ಉಚಿತವಲ್ಲದ ರೀತಿಯಲ್ಲಿ ವರ್ಣನೆ ಮಾಡಿರುವುದೂ ಉಂಟು ದಶರಥ ಮುಂತಾದವರು ಜನಕನ ಮನೆಗೆ ಹೊರಟಾಗ ವಾದ್ಯಗಳು ಹೀಗೆ ಮೋಳಗುತ್ತಿದ್ದುವಂತೆ.

ಹೊಡೆವ ತಂಬಟೆ ಭೇರಿ ನಿಸ್ಸಾಳೆ
ಬಿಡದೆ ಬೀರುವ ಹೆಗ್ಗಹಳೆಗಳು
ಸಿಡಿಲು ಗರ್ಜಿಸುವಂತೆ ಪಂಚ ವಾದ್ಯದಿ
ನಡೆದರು ಜನಕರಾಯನ ಮನೆಗೆ[೧೦೬]

ಇದನ್ನು ಓದಿದರೆ ಮಂಗಳ ವಾದ್ಯಗಳ ಮದುವೆಯ ನೆನಪು ಮನದಲ್ಲಿ ಮೂಡದೆ ರಣರಂಗದ ರಣಭೇರಿ ಕಹಳೆಗಳ ಮೊಳಗು ಕೇಳಿಬರುತ್ತದೆ. ಆದರ ರಾಮನನ್ನು ಸ್ತುತಿಸುವಾಗ ದಶಾವತಾರಗಳನ್ನು

ಹೇಳುವಾಗ ಗಿರಿಯಮ್ಮನ ಹೃದಯ ಭಕ್ತಿರಸದಿಂದ ಉಕ್ಕೇರಿ ಹರಿಯುತ್ತದೆ. ರಾಮನ ಶ್ರೀಚರಣದ ವರ್ಣನೆ ಓದುವಾಗ ತಟ್ಟನೆ ಹರಿದಾಸರ 'ಚರಣ ಸುಳಾದಿ' ನೆನಪಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಗಿರಿಯಮ್ಮ ಭಕ್ತಿಭಾವ ಭರಿತಳಾಗಿ ಮುಕ್ತಕಂಠದಿಂದ ಹಾಡಿದ್ದಾಳೆ. ಅವಳ ಭಾಷೆ ಸರಳವಾಗಿದ್ದು, ಅಲ್ಲಲ್ಲಿ ದೇಸಿ ನುಡಿಗಳ ಸೊಬಗಿನಿಂದ ಕೂಡಿದೆ. ಈಗ ಒಂದೇ ದಿನದಲ್ಲಿ ಮದುವೆ ಮುಗಿಯುವುದರಿಂದ ಉರುಟಣೆಯ ಸಂಪ್ರದಾಯ ಮದುವೆಯಲ್ಲಿ ತನ್ನ ಸ್ಥಾನವನ್ನು ಕಳೆದುಕೊಂಡಿದೆ. ಅಂದ ಮೇಲೆ ಈ ಉರುಟಣೆ ಪದವನ್ನು ಹಾಡುವರು ಎಲ್ಲಿ ದೊರೆಯುತ್ತಾರೆ? ಈ ಸಂಪ್ರದಾಯದ ವಿವರವನ್ನೂ 'ಸೀತಾಕಲ್ಯಾಣ'ವನ್ನು ಓದಿ ತಿಳಿಯಬಹುದು. ಹೀಗೆ ಗಿರಿಯಮ್ಮನ ಕಾಲದ ಮದುವೆಯ ಶಾಸ್ತ್ರ ಸಂಪ್ರದಾಯಗಳ ಒಂದು ವರ್ಣನೆಯನ್ನು ಸೀತಾಕಲ್ಯಾಣದ ಹಾಡಿನಲ್ಲಿ ಕಾಣಸಿಗುತ್ತದೆ.

### ೫.೫. ಬ್ರಹ್ಮ ಕೊರವಂಜಿ

'ಕಣಿ' ಎಂಬ ಶಬ್ದಕ್ಕೆ ಸಮಾನಾಂತರವಾಗಿ ಭವಿಷ್ಯ, ಶಾಸ್ತ್ರ, ಶಕುನ, ಕುರುಹು ಮುಂತಾದ ಶಬ್ದಗಳು ಬಳಕೆಯಾಗುತ್ತವೆ. ಒಂದೊಂದು ವರ್ಗದವರು ಹೇಳುವ ಭವಿಷ್ಯಕ್ಕೆ ಒಂದೊಂದು ರೀತಿಯ ಹೆಸರುಂಟು. ಕೊರವಂಜಿ ಹೇಳುವ ಭವಿಷ್ಯವನ್ನು 'ಕಣಿ' ಎಂದು ಕರೆಯುತ್ತಾರೆ. ಇದನ್ನು ಶಾಸ್ತ್ರ, ಶಕುನ ಕುರುಹು, ಭವಿಷ್ಯ ಮುಂತಾದ ಶಬ್ದಗಳಿಂದ ಗುರುತಿಸುವುದಿಲ್ಲ. ಎಲ್ಲ ಕಾಲಕ್ಕೂ ಕಣಿ ಎಂಬುದು ಕೊರವಂಜಿಗೆ ಮಾತ್ರ ಸೀಮಿತವಾಗಿ ಬಳಸಿದಂತೆ ತೋರುತ್ತದೆ. ಆದ್ದರಿಂದ ಕಣಿ ಬಂದಲ್ಲೆಲ್ಲ ಕೊರವಂಜಿ ಅದರ ಹಿಂದೆ ಬಂದೇ ಬರುತ್ತಾಳೆ.

ಅಲೆಮಾರಿ ಜನಗಳಲ್ಲಿ ಒಂದು ಪಂಗಡದವರಾದ 'ಕೊರವಂಜಿ'ಗಳು ಜನಪದ ಗಾಯಕರು. ಒಂದು ಕಾಲದಲ್ಲಿ ದಕ್ಷಿಣ ಭಾರತದಲ್ಲೆಲ್ಲಾ ಅವರ ಹೆಸರು ಪ್ರಸಿದ್ಧವಾಗಿತ್ತು. ಕೊರವಂಜಿ ಶಬ್ದ ಪ್ರಮುಖ ದ್ರಾವಿಡ ಭಾಷೆಗಳಲ್ಲೆಲ್ಲಾ ಕಂಡುಬರುತ್ತದೆ. 'ಕೊರವಂಜಿ'ಯನ್ನು ಕೊರವತಿಯರೆಂದೂ ಕರೆಯಲಾಗುತ್ತದೆ. ಇವರು ಹೆಚ್ಚಾಗಿ ವಾಸಿಸುವುದು ಗುಡ್ಡ ಗಾಡುಗಳಲ್ಲಿಯೇ ಪಶುಪಾಲನೆ, ಬೇಟೆ ಮತ್ತು ಬುಟ್ಟಿ ಹೆಣೆಯುವುದು ಇವರ ಮುಖ್ಯ ಕೆಲಸ ಭವಿಷ್ಯ ಹೇಳುವ ಕಸುಬನ್ನವಲಂಬಿಸಿರುವ ಹೆಂಗಸರು 'ಕೊರವಂಜಿ'ಗಳೆಂದು ಪರಿಚಿತರಾಗಿದ್ದಾರೆ.

ಈ ಜನ ಅಲೆಮಾರಿಗಳಾಗಿರುವುದರಿಂದಲೇ ದಕ್ಷಿಣ ಭಾರತದ ಭಾಷೆಗಳನ್ನೆಲ್ಲಾ ಮಾತನಾಡಲು ಕಲಿತಿರುತ್ತಾರೆ. ಇವರ ಮೂಲದ ಬಗೆಗೆ ಅನೇಕ ಕಥೆಗಳಿವೆ. ಒಮ್ಮೆ ಪಾರ್ವತಿಯು ಕೊರವಂಜಿಗಳೆಂಬ ಹೆಸರು ಬಂದಿತೆಂಬ ಕಥೆ ಇದರಲ್ಲಿ ಪ್ರಚಾರದಲ್ಲಿದೆ. ಇನ್ನೊಂದು ಕಥೆಯ ಪ್ರಕಾರ ಪಾರ್ವತಿಯು ಒಮ್ಮೆ ಹಾವೊಂದನ್ನು ಕೊಂದು ಅದರಲ್ಲಿ ವಜ್ರ ವೈಡೂರ್ಯಗಳನ್ನು ತುಂಬಿ ತನ್ನ ಮಗುವಿಗೆ ಒಂದು ತೊಟ್ಟಿಲನ್ನು ಮಾಡಿಕೊಡುವಂತೆ ಮೇದರನಿಗೆ ಹೇಳಿದಳಂತೆ ಅವನು ಭಯದಿಂದ ಹಿಂದೆ ಮುಂದೆ

ನೋಡಿದಾಗ ಅದೇ ಮಾತನ್ನು ಕೊರಚನೊಬ್ಬನಿಗೆ ಹೇಳಿದಳಂತೆ ಆಗ ಅವನು ಯಾವ ಮಾತನ್ನೂ ಆಡದೇ ತೊಟ್ಟಿಲನ್ನು ಮಾಡಿಕೊಟ್ಟಾಗ ಆ ಕೊರಚನಿಗೆ ತನ್ನಲ್ಲಿದ್ದ ಮಂತ್ರದಂಡ ಮತ್ತು ಮೊರವನ್ನಿತ್ತು ಭವಿಷ್ಯ ಹೇಳುವ ಶಕ್ತಿಯನ್ನು ಅನುಗ್ರಹಿಸಿದಳಂತೆ. ಧರ್ಮರಾಯ ವನವಾಸದಲ್ಲಿದ್ದಾಗ ಅವನನ್ನು ಮೋಹಿಸಿದ್ದ ಹೆಣ್ಣೊಬ್ಬಳು ಭವಿಷ್ಯಗಾರ್ತಿಯಂತೆ ವೇಷ ಹಾಕಿಕೊಂಡು ಅವನಲ್ಲಿಗೆ ಹೋಗಿ ಅವನನ್ನು ವರಿಸಿದಳೆಂದೂ ಆಕೆಯ ಮಕ್ಕಳೇ ಕೊರವರೆಂದೂ ಮತ್ತೊಂದು ಕಥೆಯಿದೆ. ಪುರಾಣ ಕಾಲದಿಂದಲೂ ಕೊರವಂಜಿಗಳು ಕಣಿ ಹೇಳುತ್ತಲೇ ಬಂದಿದ್ದಾರೆ. ವೆಂಕಟೇಶ್ವರನು ಪದ್ಮಾವತಿಗೆ ಕೊರವಂಜಿಯ ವೇಶದಲ್ಲಿ ಕಣಿ ಹೇಳಿದ್ದು ಮಹಾಭಾರತದಲ್ಲಿಯ ಕೃಷ್ಣನು ಕೊರವಂಜಿ ವೇಷದಲ್ಲಿ ಕಣೀ ಹೇಳಿದ್ದು ಮಹಾಭಾರತದಲ್ಲಿಯ ಕೃಷ್ಣನು ಕೊರವಂಜಿ ವೇಷ ಧರಿಸಿ ರುಕ್ಮಿಣಿಗೆ ಕಣಿ ಹೇಳಿದ್ದು ಇವೆಲ್ಲಾ ಪುರಾಣ ಪ್ರಸಿದ್ಧ ಪ್ರಸಂಗಗಳು. ಈ ಕಾರಣದಿಂದಲೋ ಏನೋ ಕೃಷ್ಣನನ್ನು ಕೊರವಂಜಿಗಳು ಭಕ್ತಿಯಿಂದ ನೆನೆಯುತ್ತಾರೆ. ಶಿವ ಕೊರವಂಜಿ, ವಿಷ್ಣು ಕೊರವಂಜಿ, ಮನ್ಮಥ ಕೊರವಂಜಿಗಳು ಹೇಳುವುದರ ಜೊತೆಗೆ ಕೊರವಂಜಿ ಹಾಡು ಹಾಗೂ ಪಾರಿಜಾತದಂಥ ಬಯಲಾಟಗಳಲ್ಲಿ ಕೊರವಂಜಿಯ ಪಾತ್ರ ಕಂಡುಬರುತ್ತದೆ. ಶಕ್ತಿ ದೇವತೆ ಇವರ ಕುಲದೈವವೆಂದೂ ಕೃಷ್ಣನೇ ಇವರ ಮೂಲ ಪುರುಷನೆಂದೂ ಹೇಳುತ್ತಾರೆ. ಕೆಲವರ ಪ್ರಕಾರ ಶ್ರೀನಿವಾಸನು ಇವರ ಸಂಪ್ರದಾಯ ಹಾಕಿಕೊಟ್ಟವನೆಂದು ವಾದವಿದೆ. ಆಯಾ ಪ್ರದೇಶಗಳಿಗನುಗುಣವಾಗಿ ಇವರು ತಮ್ಮ ಕುಲದೇವತೆಗಳ ಹೆಸರು ಹೇಳುತ್ತಾರೆ. ಉದಾಹರಣೆಗೆ ಮಹಾಕಾಳಿ, ಸವದತ್ತಿ ಎಲ್ಲಮ್ಮ, ಚಂದ್ರಗುತ್ತಿ ರೇಣುಕ, ಕಾತ್ಯಾಯಿನಿ, ಕಾಳಿಕಾ ದೇವಿ, ಮಹಾಲಕ್ಷ್ಮೀ, ದುರ್ಗಾದೇವಿ, ಹುಲಿಗೆಮ್ಮ, ಮೂಕಮ್ಮ, ಮಾರಮ್ಮ, ದ್ಯಾವಮ್ಮ ಮುಂತಾದವು.

ಕೊರವಂಜಿ ಒಂದು ಕಾಲಕ್ಕೆ ಜಾನಪದರ ಪ್ರೀತ್ಯಾದರಗಳಿಗೆ ಒಳಗಾದವವಳು ಅವಳ ಕಾರ್ಯ ನೈಪುಣ್ಯತೆ ಆಕೆಯ ಪ್ರಸಿದ್ಧಿಗೆ ಕಾರಣವಾಗಿತ್ತು. ಎಷ್ಟೋ ಸಂದರ್ಭಗಳಲ್ಲಿ ಜನ ಆಕೆಯ ಶರಣು ಹೋಗುತ್ತಿದ್ದರು. ಆಕೆಯ ಪ್ರಭಾವವು ಹಾಗೆಯೇ ಬೀರಿತ್ತು.

ಕಣಿಯ ಹೇಳಲು ಬಂದೆ ಕೇಳಮ್ಮ
ಮಣಿ ಮಂತ್ರವ ಬಲ್ಲ ಕೊರವಂಜಿ ನಾನಮ್ಮ
ಮದ್ದು ಮಾಟವ ಮಾಡಲು ಬಲ್ಲೆ
ಬಿದ್ದ ಬೀಳನು ಎತ್ತಲು ಬಲ್ಲೆ
ಕದ್ದೊಡೋ ಕಳ್ಳನ ಹಿಡಿದು ಕೂಗಾಡಬಲ್ಲೆ
ಒದ್ದೊಡೋ ಗಂಡನ ಕರೆದು ಕೂಡಿಸಬಲ್ಲೆ
ಇದ್ದಂತ ಮಾತಿದು ನನ್ನ ಮಗಳೆ
ಎಲ್ಲ ಬಲ್ಲ ದೇವಲೋಕದ ಕೊರವಿ ನಾನಮ್ಮ[೧೦೭]

ಕೊರವಂಜಿಯರು ಎಲ್ಲ ಜನರ ಮನಸ್ಥಿತಿಯನ್ನರಿತು ಕಣಿ ಹೇಳುವ ಸಾಮರ್ಥ್ಯ ಹೊಂದಿರುತ್ತಾರೆ. ಜನಪದರಿಗೆ ಈಕೆ ದೇವಲೋಕದಿಂದ ಬಂದ ಕೊರವಿ ಎಂಬ ನಂಬಿಕೆಯು ಇದೆ. ಹೀಗೆ ಜನಪದ ಸಾಹಿತ್ಯದಲ್ಲಿ ಜನಪ್ರಿಯವಾಗಿರುವ ಕೊರವಂಜಿಯ ಪಾತ್ರವನ್ನು ಚಿತ್ರಿಸುವ ಅನೇಕ ಗೀತ ರಚನೆಗಳಿವೆ. ಕೊರವಂಜಿಯ ಪಾತ್ರ ಎಂದರೆ ಸಾಮಾನ್ಯವಾಗಿ ಹಾಸ್ಯದ ಕಲ್ಪನೆ ಜನ ಸಾಮಾನ್ಯರಲ್ಲಿ ಮೂಡುವುದು ಸಹಜ. ಹಾಗೆಯೇ ಆ ಪಾತ್ರದ ಬಗ್ಗೆ ಅತ್ಯಂತ ಕುತೂಹಲಿಗಳಾಗಿ ವೀಕ್ಷಿಸುವುದು, ಕೇಳುವುದೂ ಕೂಡ ನಿಜ. ಈ ನಿಟ್ಟಿನಲ್ಲಿ ಪಾರ್ವತಿ ಕೊರವಂಜಿ, ಬ್ರಹ್ಮಕೊರವಂಜಿ, ಪದ್ಮಾವತಿ ಕೊರವಂಜಿ, ಅರ್ಜುನ ಕೊರವಂಜಿ ಮತ್ತು ಮನ್ಮಥ ಕೊರವಂಜಿ ಎಂಬ ಹಲವಾರು ಯಕ್ಷಗಾನ ಕೃತಿಗಳೂ ದೊರೆತಿವೆ. ನೇಮಿನಾಥ ಪುರಾಣದಂತಹ ಪ್ರೌಢ ಕಾವ್ಯಗಳಲ್ಲಿಯೂ ಸಂದರ್ಭೋಚಿತವಾಗಿ ಈ ಪಾತ್ರ ಪ್ರವೇಶಿಸಿರು ವುದರಿಂದ ಈ ಕೊರವಂಜಿಯ ಪಾತ್ರದ ಜನಪ್ರಿಯತೆ ಹಿರಿಮೆ ಗರಿಮೆಗಳನ್ನು ಊಹಿಸಬಹುದು.

ಕೊರವಂಜಿ ಕಣಿ ಹೇಳುವುದು ಪ್ರಾಚೀನ ತಮಿಳು ಕಾವ್ಯ 'ಶಿಲಪ್ಪದಿಗಾರಮ್ ' ಕಾವ್ಯದಲ್ಲಿಯೇ ತೋರುತ್ತದೆ. ಮತ್ತು ಕರ್ಣಪಾರ್ಯನ ನೇಮಿನಾಥ ಪುರಾಣ ಕನ್ನಡ ಕಾವ್ಯದಲ್ಲಿ ಹಾಗೆಯೇ ಶಿವಶರಣರ ವಚನಗಳಲ್ಲಿ ಕಂಡುಬರುತ್ತದೆ ಕಣಿ ಹೇಳುವುದು ಕೊರವಂಜಿಯ ಜನ್ಮಸಿದ್ಧ ಹಕ್ಕು ಎಂದು ಕಣಿ ಹೇಳುವ ಹಲವಾರು ವಿಧಾನಗಳಿವೆ. ಕಣಿ ಹೇಳುವುದರಲ್ಲಿ ಕೊರಚರು ಪ್ರಸಿದ್ಧರಾಗಿದ್ದಾರೆ. ಕೊರವಂಜಿಯರು 'ಮೊರದಲ್ಲಿ ಅಕ್ಕಿ ಕಾಳನ್ನು ಹಾಕಿಕೊಂಡು ಅದನ್ನು ಎಣಿಸುವುದರ ಮೂಲಕ ಕಣಿ ಹೇಳುತ್ತಾರೆ. ಅಷ್ಟೇ ಅಲ್ಲ ಕೈಯ ರೇಖೆಗಳನ್ನು ಗುರ್ತಿಸುವುದರ ಮೂಲಕವೂ ಕಣಿ ಹೇಳುತ್ತಾರೆ.

ಕನ್ನಡ ಸಾಹಿತ್ಯದಲ್ಲಿ ಕೊರವಂಜಿಯ ವಿಚಾರ ಬಂದಿರುವುದು ಹನ್ನೆರಡನೆಯ ಶತಮಾನದ ಪೂರ್ವಾರ್ಧದ ಕರ್ಣಪಾರ್ಯನ ನೇಮಿನಾಥ ಪುರಾಣದಲ್ಲಿ. ೨೨ನೆಯ ತೀರ್ಥಕರ ನೇಮಿನಾಥನ ಚರಿತವಾದ ಈ ಪುರಾಣದಲ್ಲಿ ಜೈನಕವಿಯೊಬ್ಬ ತನ್ನ ಉದ್ದೇಶ ಸಾಧಿಸಿಕೊಳ್ಳಲು ಆ ಸಂದರ್ಭಕ್ಕೆ ಅತಿ ಸೂಕ್ಷ್ಮವಾಗಿ ಕಂಡುಬಂದ ಕೊರವಿಯನ್ನು ಬಳಸಿಕೊಂಡಿದ್ದಾನೆ. ಇದು ಶಿಷ್ಟ ಸಾಹಿತ್ಯದ ಪ್ರಥಮ ದಾಖಲೆಯಾಗಿ ಕಂಡುಬಂದರೂ ಜಾನಪದದಲ್ಲಿ ಅದು ಮುಂಚೆಯೇ ತೋರಿರಬಹುದು. ಆ ಕಾಲಕ್ಕಾಗಲೇ ಕೊರವಂಜಿಯ ಪ್ರಭಾವಯುತವಾದ ಪ್ರೇರಣೆ ಅಂದರೆ ಸುಮಾರು ೧೧೧೨ಕ್ಕೆ ಕಂಡುಬರುತ್ತಿದ್ದುದರಿಂದಲೇ ಕರ್ಣಪಾರ್ಯನು ಕೊರವಂಜಿಯನ್ನು ಬಳಸಿಕೊಂಡಿದ್ದಾನೆ.

> ಕೊರವಿಯರ ಕೂಪಿನಿಂದವ
> ರರಿ ತಂ ಪೇಳಂಪವೆನುತ್ತು ಮಳ್ತಿರೆ ಕಂಡಾ
> ಪರಮೆಯ ವೊಲೆಸೆವ ಕುಂತಳೆ
> ಯುಮಿಗಜ್ಜುಂ ಪೇಳ್ಗುಮೆಂದು ಕರೆಯಿದೆ ಬಂದರ್[೧೦೮]

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಹತ್ವದ ಸ್ಥಾನ ಪಡೆದಿರುವ ವಚನಕಾರರು ಭಕ್ತಿ ಮಾರ್ಗದ ಮೂಲಕ ಸಮಾಜದ ಲೋಪದೋಷಗಳನ್ನು ತಿದ್ದುವುದರ ಜೊತೆಗೆ ಸಾಹಿತ್ಯಕ್ಕೆ ವಿಶೇಷವಾದ ಕೊಡುಗೆಯನ್ನು

ನೀಡಿ ಉನ್ನತ ಮಟ್ಟದ ವಿಚಾರಗಳನ್ನು ಬೆಳೆಸಿದರು. ಶರಣರ ವಚನ ಸಾಹಿತ್ಯ ಸಮಕಾಲೀನ ಸಮಗ್ರ ಚಿತ್ರವನ್ನು ನೀಡುತ್ತದೆ. ಸಮಾಜ ಸುಧಾರಣೆಯಲ್ಲಿ ತೊಡಗಿದ ಅವರು ಎಲ್ಲ ವೈವಿಧ್ಯತೆಗಳನ್ನು ಗುರುತಿಸಿರುವರು. ಇಂಥ ಅನೇಕ ಸಂಗತಿಗಳಲ್ಲಿ ಕೊರವಂಜಿ ಪಾತ್ರವು ಉಲ್ಲೇಖಿತವಾಗಿದೆ. ೧೨ ನೇ ಶತಮಾನಕ್ಕಾಗಲೇ ಕೊರವಂಜಿ ಹೆಚ್ಚು ಜನಾನುರಾಗಿಯಾಗಿದ್ದರಿಂದಲೇ ಅವಳು ಕಣಿ ಹೇಳಲು ಅನುಸರಿಸುತ್ತಿದ್ದ ಧಾಟಿ ತಮ್ಮ ಉಪದೇಶಕ್ಕೂ ಅನುಕೂಲವಾಗುವಂತೆ ಶರಣರು ಅಳವಡಿಸಿಕೊಂಡಿರುವುದು ಕಂಡುಬರುತ್ತದೆ.

ಪಾರ್ವತಿಯು ಕೊರವಂಜಿಯಾಗಿ ಕೌಸಲ್ಯೆಗೆ ಕಣಿ ಹೇಳಿದ ಕಥೆ ಪುರಾಣಗಳಲ್ಲಿ ಕಂಡುಬರುವ ಧರ್ಮರಾಜನನ್ನು ವರಿಸಿದ ಕೊರವಂಜಿ ವೇಷದ ಹೆಣ್ಣೊಬ್ಬಳ ಕಥೆ ಪ್ರಧಾನವಾಗಿದೆ. ಗಿರಿಜೆಯು ಶಿವನನ್ನು ಮೆಚ್ಚಿಸಲು ಅತ್ಯುಗ್ರ ತಪಸನ್ನಾಚರಿಸುತ್ತಿದ್ದಾಗ ಗಿರಿಜೆಯ ಪರೀಕ್ಷಿಸಲು ಶಿವನು ಹಲವಾರು ವೇಷ ಧರಿಸುತ್ತಾನೆ. ಅಂಥ ಹಲವಾರು ಪಾತ್ರಗಳಲ್ಲಿ ಕೊರವಂಜಿಯ ಪಾತ್ರವೂ ಒಂದು ಎಂಬ ಪ್ರತೀತಿಯಿದೆ. ಇನ್ನೊಂದು ವಿಚಾರದಿಂದ ತಪಸ್ಸಿಗೆ ಕುಳಿತ ಅರ್ಜುನನ ಪರೀಕ್ಷೆಗಾಗಿ ಶಿವನು ಕಿರಾತನಾಗಿ ಶಿವೆಯು ಕಿರಾತೆಯಾಗುವಳು. ಆ ಕಿರಾತೆಯೇ ಕೊರವಿ ಎಂದು ಹೇಳುವರು. ಕೊರವಂಜಿಯಿಲ್ಲದೆ ಜಾನಪದ ಸಾಹಿತ್ಯದ ಯಾವ ಕಥೆಯೂ ಮುಕ್ತಾಯವಾಗುವುದಿಲ್ಲ. ಕೊರವ-ಕೊರವಿಯರು ಕನ್ನಡದ ನಾರದ-ನಾರದೆಯರು.

> ಕೈತೋರೆ ಕೈತೋರೆ ಕೈತೋರೆ ದುಂಡಿ ನಿನ್ನ
> ಮೈಯೊಳಗಿರ್ದ ವಸ್ತುವನು ಪೇಳುವೆನು[೧೯]

ಎನ್ನುವ ಅಕ್ಕಮಹಾದೇವಿ ಕೊರವಂಜಿಯ ಕಣಿಯ ಧಾಟಿಯನ್ನು ಅನುಸರಿಸಿ ಹೇಳುವ 'ಕೈತೋರೆ ದುಂಡಿ' ಎಂಬ ಗೀತ ವಚನವು ಕೊರವಂಜಿಯ ಪ್ರತಿಭೆಯನ್ನು ನಿರೂಪಿಸುತ್ತದೆ. ಈ ಪಲ್ಲವಿ ಜನಪದ ಧಾಟಿಯ ಕಣಿಯ ಶೈಲಿಯನ್ನು ತಿಳಿಸುತ್ತದೆ. ನಾನು ಸುಳ್ಳು ಹೇಳುವುದಿಲ್ಲ. ನಂಬು ನಂಚಿಯಮ್ಮ ಅರಿವಿನ ಬಗೆಯ ಚೆಲುವೆತ್ತ ಬಾಳಿನಿರುವ ಹೇಳುವೆ. ಭಾವದ ಲಕ್ಷಣವ ಹೇಳುವೆ, ತೋರೆಯನ್ನು ನಿನ್ನ ಕೈಯ ಕನ್ನಡಿಯ ತೋರೆಯಮ್ಮ' ಎಂಬುದು ಸಾಮಾನ್ಯ ಕೊರವಂಜಿಯೊಬ್ಬಳು ತನ್ನ ಕಣಿಯನ್ನು ನಂಬು ಎಂದು ನಂಬಿಸುತ್ತಿದ್ದ ರೀತಿ ಇದರಿಂದ ವ್ಯಕ್ತವಾಗುತ್ತದೆ. ಅಕ್ಕಮಹಾದೇವಿಯ ಕೊರವಂಜಿ ವಚನದಲ್ಲಿ ಕಣಿಯ ನೈಜ ಚಿತ್ರಣದ ಜೊತೆಗೆ ಧ್ವನಿಪೂರ್ಣವಾಗಿ ತನ್ನನ್ನಾವರಿಸುವ ಮಾಯೆಯನ್ನು ತಿಳಿಸಿ ಭಕ್ತಿಯ ಮೂಲಕ ಅದನ್ನು ಪರಿಹರಿಸಿಕೊಳ್ಳುತ್ತಾ ಪರಮೇಶ್ವರನೆಡೆಗೆ ಸಾಗುವ ಅಂಶಗಳನ್ನು ವಿವರಿಸುವುದು ಗೋಚರಿಸುತ್ತದೆ. ವೈರಾಗ್ಯದಿಂದ ಅಕ್ಕಮಹಾದೇವಿ 'ಒಡಲ ಕಿಚ್ಚಿನ ಕೊರವಂಜಿ ನಾನಲ್ಲ ತಾಯಿ' ಎಂದು ಹೇಳಿದರೂ ಸಾಮಾನ್ಯ ಕೊರೆವಂಜಿ ಹೊಟ್ಟೆಯ ಸಲುವಾಗಿಯೇ ಈ ವೃತ್ತಿಯನ್ನು ಅನುಸರಿಸುತ್ತಿದ್ದಳು ಎಂಬುದು ತಿಳಿದುಬರುತ್ತದೆ.

'ಕಣಿಯ ಹೇಳಬಂದೆ ನಾನು ಕೇಳೆ ಹೆಣ್ಣೆ ನೀನು
ಕ್ಷಣದಿ ನಿನ್ನ ದೇಹ ಜಡವ ಹಣಿದ ಮಾಡಿ ಒಡಿಸುವೆನು'[೧೧೦]

ಎಂದು ಹೇಳುವ ಇನ್ನೊಂದು ವಚನದಲ್ಲಿಯೂ ಕೊರವಂಜಿ ಇನ್ನೊಬ್ಬರ ಮನಸ್ಸನ್ನು ಅರಿತು ಅವರಿಗೊದಗುವ ಕಷ್ಟವನ್ನು ತಿಳಿದು ಅದನ್ನು ಪರಿಹರಿಸುವ ಶಕ್ತಿ ಇದ್ದವಳು ಎಂಬ ಅಂಶ ವ್ಯಕ್ತಪಡಿಸುತ್ತದೆ. ಇಲ್ಲಿ ಅಕ್ಕಮಹಾದೇವಿಯ ಭಕ್ತಿ ಹಿರಿಮೆ ಜ್ಞಾನದ ಮಹತ್ವದ ಜೊತೆಗೆ ಆಕೆಯ ಉದ್ದೇಶವು ಸ್ಪಷ್ಟಪಡಿಸುತ್ತದೆ. ಆ ಕಾಲದ ಕೊರವಂಜಿ ತಂತ್ರವನ್ನು ಬಳಸಿಕೊಂಡು ಆಕೆಯ ಉದ್ದೇಶವನ್ನು ಸಾಧಿಸಿಕೊಂಡಿರುವುದು ಮಾತ್ರ ಅಪರೂಪವಾಗಿ ತೋರುತ್ತದೆ.

ಅಕ್ಕಮಹಾದೇವಿಯ ಈ ವಚನಕ್ಕೆ ನೇರವಾಗಿ ಜನಪದವೇ ಮೂಲ ಆಕರ ಎಂಬುದನ್ನು ಈ ಕೆಳಗಿನ ಜನಪದ ಗೀತೆ ಸ್ಪಷ್ಟಗೊಳಿಸುತ್ತದೆ.

ಎಂಟು ಮಂದಿಯು ನಂಟರು ನಿನಗಮ್ಮ
ಉಂಟಾದ ಹತ್ತು ದಿಕ್ಕಿನ ಬಳಗವಮ್ಮ
ಗಂಟಲ ಮೆಟ್ಟಿ ಕೊಂಡೈದಾರೆ ಅಮ್ಮ
ಸುಂಟರಗಾಳಿಯಾಗಿ ತಿರುಗುವೆಯಮ್ಮ ನೀಲ
ಕಂಠ ನಂಘ್ರಯನು ಬಿಡದಿರು ಪಿಡಿಯಮ್ಮ[೧೧೧]

ಎಂಬ ಅಕ್ಕನ ವಚನಕ್ಕೆ

ಎಂಟು ಮಂದಿಯು ನಿನ್ನ ನಂಟರು ಕಾಣೆ
ನೆಂಟರು ನಿನ್ನ ನೆಚ್ಚಿಕೊಂಡು ಇದ್ದರು ನಿನ್ನ
'ಸುಂಟರ ಗಾಳೀಲಿ ತಿರುಗೂವೆಯಲ್ಲೆ'

ಎಂಬ ಜನಪದ ಗೀತೆಯ ಸಾಲುಗಳಲ್ಲಿ ಈ ಮೇಲಿನ ಅಕ್ಕನ ವಚನಗಳಲ್ಲಿ ಕಂಡುಬರುವ ಸಾಮೀಪ್ಯವನ್ನು ಗುರುತಿಸಬಹುದು. ಅಕ್ಕನ ಕೊರವಂಜಿ ತನ್ನ ಊರು ವೈಪುರವೆಂದರೆ ಜನಪದಗೀತೆಯಲ್ಲಿ ವೈಯಾರಿಪುರವೆಂದಿದೆ. 'ಹೊಟ್ಟೆಗೆ ಹಿಟ್ಟಿಗೆ ಬಂದ ಹೆಣ್ಣು ನಾನಲ್ಲ. ತೊಟ್ಟು ಗೂಡೆಯ ತಂದು ನಾಮಾರೋಳಲ್ಲ' ಎಂಬ ನುಡಿ ಅಕ್ಕನಲ್ಲಿ ಬಂದರೆ 'ಒಡಲ ಕಿಚ್ಚಿನ ಕೊರವಂಜಿ ನಾನಲ್ಲ ತಾಯಿ' ಎಂಬ ಸಾಲು ಜನಪದ ಗೀತೆಯಲ್ಲಿ ಬಂದಿದೆ. ಜಾನಪದ ಸಾಹಿತ್ಯ ಶರಣರಿಗೆ ಪ್ರೇರಣೆ ನೀಡಿರುವುದು ಈ ಮೇಲಿನ ಅಂಶಗಳಿಂದ ತಿಳಿಯುತ್ತದೆ. ಹೀಗೆ ವಚನ ಸಾಹಿತ್ಯ ತನ್ನ ಕೊರವಂಜಿ ಹಾಡುಗಳಲ್ಲಿ ಕೊರಮರ ಜೀವನದ ದರ್ಶನ ಮಾಡಿಸುತ್ತದೆ.[೧೧೨]

ಅಕ್ಕಮಹಾದೇವಿ ಅಲ್ಲದೆ, ಚನ್ನಬಸವಣ್ಣನವರೂ ಕೊರವಂಜಿಯ ಬಗೆಗೆ ತಮ್ಮ ವಚನಗಳಲ್ಲಿ ಪ್ರಸ್ತಾಪ ಮಾಡಿದ್ದಾರೆ. 'ಕಂಕುಳಲ್ಲಿ ಬಿದಿರು ಬುಟ್ಟಿ ಇಟ್ಟುಕೊಂಡು ಕೈಯಲ್ಲಿ ಚೋಟುದ್ದ ಕಣಿ ಕಡಿ ಹಿಡಿದು, ಜನರ ಅಂಗೈ ನೋಡಿ ಭವಿಷ್ಯ ನುಡಿಯುವವಳೇ ಕೊರವಂಜಿ. ಕಣಿ ಅಥವಾ ಭವಿಷ್ಯ

ಹೇಳುವುದನ್ನೇ ಉಪಜೀವನ ವೃತ್ತಿ ಮಾಡಿಕೊಂಡಿದ್ದಾರೆ. ಮಕ್ಕಳಿಗೆ 'ಈರಲು ಗಾಳಿ' ಭೂತ ಸೋಂಕಿದೆಯೋ ಇಲ್ಲವೋ ಎಂಬುದನ್ನು ತಿಳಿಯಲು ಕಣಿಯರನ್ನು ಕೇಳುತ್ತಿದ್ದ ಸೂಚನೆಯೊಂದು ಚನ್ನವಸವಣ್ಣನ ವಚನದಲ್ಲಿದೆ. ಈ ವಚನಗಳಿಂದ ಕಣಿ ಹೇಳುತ್ತಿದ್ದ ಮತ್ತು ಕಣಿ ಕೇಳುತ್ತಿದ ಜನಪದರ ಸಂಪ್ರದಾಯ ಆ ಕಾಲಕ್ಕೆ ಎಷ್ಟು ಪ್ರಚಾರದಲ್ಲಿತ್ತು ಎಂಬುದು ತಿಳಿಯುತ್ತದೆ. ಅಲ್ಲದೆ ಕಣಿ ಹೇಳುವವರು ಆಯಾ ಸಂದರ್ಭಕ್ಕೆ ತಕ್ಕಂತೆ ಹಿಂದಿನ ಮತ್ತು ಮುಂದಿನ ಅಂಶಗಳ ಸತ್ಯವನ್ನು ಹೇಳಿ ಅಲ್ಲಿಯ ಕಷ್ಟಗಳಿಗೆ ಪರಿಹಾರಗಳನ್ನು ಸೂಚಿಸುತ್ತಿದ್ದರು. ಇಂಥ ಅಂಶಗಳು ಜಾನಪದ ಸಾಹಿತ್ಯದಲ್ಲಿಯೂ ದೊರೆಯುತ್ತವೆ.

ಮಾನವ ತನ್ನ ಪಂಚೇಂದ್ರಿಯಗಳ ಮೂಲಕ ತಿಳಿಯಲು ಸಾಧ್ಯವಾಗದ ಆದರೆ ಅತೀಂದ್ರಿಯ ಶಕ್ತಿಯಿಂದ ತಿಳಿಯಲು ಸಾಧ್ಯವಾಗುವ ಕ್ರಮವನ್ನೇ ಕಣಿ ಎಂದು ಕರೆಯಲಾಗಿದೆ. ಅತೀಂದ್ರಿಯ ಶಕ್ತಿಯಿಂದ ಬೇರೊಬ್ಬ ವ್ಯಕ್ತಿಯ ವಿಷಯವನ್ನು ಗ್ರಹಿಸಲು ಕಳೆದು ಹೋದ ವಸ್ತು ಪತ್ತೆಹಚ್ಚಲು ಮುಂದೆ ನಡೆಯುವುದನ್ನು ಮುಂದಾಗಿ ತಿಳಿಸುವ ಕೆಲಸವನ್ನು ಕೊರವಂಜಿಗಳು ಮಾಡುವ ಸಾಮರ್ಥ್ಯವುಳ್ಳವರೆಂಬ ನಂಬಿಕೆ ಇದೆ. ಇದಲ್ಲದೆ ಬುಡಬುಡಿಕೆಯವರು ಶಕುನ ಹಕ್ಕಿಯಿಂದ ಭವಿಷ್ಯ ತಿಳಿದು ಬುಡಬುಡಿಕೆ ನುಡಿಸುತ್ತಾ ಶಕುನ ಹೇಳುವರು ಎಂಬ ನಂಬಿಕೆಯೂ ಇದೆ. ಇಂತಹ ಪ್ರಸಂಗಗಳ ದಾಖಲೆ ಹರಿದಾಸರಲ್ಲಿ ಕಂಡುಬರುತ್ತದೆ.

ಕೃಷ್ಣನ ಲೀಲೆಗಳನ್ನು ವರ್ಣಿಸುವಾಗ, ಕೃಷ್ಣ ಕೊರವಂಜಿ ವೇಷ ಧರಿಸಿ ಕಣಿ ಹೇಳುವ ಪ್ರಸಂಗವನ್ನು ಹರಿದಾಸರು ಕೀರ್ತನೆಗಳಲ್ಲಿ ಹಾಡಿದ್ದಾರೆ. ಹೆಳವನಕಟ್ಟೆ ಗಿರಿಯಮ್ಮಳು, ಕೃಷ್ಣಕೊರವಂಜಿ ಮತ್ತು ಬ್ರಹ್ಮಕೊರವಂಜಿಯನ್ನು ಉದ್ದೇಶಿಸಿ ಕಥನ ಕಾವ್ಯಗಳನ್ನು ರಚಿಸಿದ್ದಾಳೆ. 'ಬ್ರಹ್ಮಕೊರವಂಜಿ'ಯ ಹಾಡಿನಲ್ಲಿ ಉಳಿದ ಹಾಡುಗಳಿಂದ ನಿರೂಪಣೆಯ ರೀತಿಯಲ್ಲಿ ಭಿನ್ನವಾಗಿದ್ದು, ವಚನ ಹಾಗೂ ಪದ್ಯಭಾಗಗಳಿಂದ ಕೂಡಿದೆ. ಬ್ರಹ್ಮನು ಕೊರವಂಜಿಯ ವೇಷದಲ್ಲಿ ಬಂದು ಕೃಷ್ಣವತಾರದ ವಿಷಯವನ್ನು ಕಂಸನ ಸೆರೆಯಲ್ಲಿದ್ದ ದೇವಕಿಗೆ ಕಣಿ ಹೇಳುವ ನೆವದಲ್ಲಿ ತಿಳಿಸುತ್ತಾನೆ. ಇಂತಹ ಕೊರವಂಜಿಯ ಪಾತ್ರ ಕಲ್ಪನೆ ಭಾಗವತದಲ್ಲಿ ಕಂಡುಬರುವುದಿಲ್ಲ. ಶಿವಶರಣರ ಹಾಡುಗಳಲ್ಲಿ ತಾತ್ವಿಕ ನಿರೂಪಣೆಗೆ ಕಣಿ ಹೇಳುವ ತಂತ್ರವನ್ನು ಬಳಸಿಕೊಂಡಿಂತೆ ಹರಿದಾಸರು ಕೆಲವೊಂದು ಕಥಾಸಂದರ್ಭಗಳ ನಿರೂಪಣೆಗೆ ಇಂಥ ತಂತ್ರವನ್ನು ಬಳಸಿಕೊಂಡಿರುವುದು ಕಂಡುಬರುತ್ತದೆ. ಜನಪದ ಮೂಲದಿಂದಲೇ ಇಂಥ ಕಲ್ಪನೆ ಗಿರಿಯಮ್ಮನಿಗೆ ಬಂದಿರಬಹುದು. ವೆಂಕಟೇಶ್ವರನ ಪ್ರಾರ್ಥನೆಯಿಂದ ಹಾಡು ಪ್ರಾರಂಭವಾಗುತ್ತದೆ. ಇಲ್ಲಿ ಮೊದಲಿಗೇ ಗಿರಿಯಮ್ಮನ ಪಳಗಿದ ಭಾಷೆ ಶೈಲಿಗಳು ಕಾಣಿಸಿಕೊಳ್ಳುತ್ತವೆ.

ಸುರರ ಕಿನ್ನರರು ಸ್ಮರಣೆ ಮಾಡುವ ಪಾದ
ಕುರುಪತಿಯ ಗರ್ವವನು ಪರಿಹರಿಸುವ ಪಾದ
ಪರಮ ಯೋಗಿಗಳ ಹೃತ್ಕಮಲದಲ್ಲಿಹ ಪಾದ

ಸಿರಿ ವೆಂಕಟೇಶ್ವರನ ಪಾದ ಪದ್ಮವನು ನೆನೆವೆ ನಾನು
................
ಅರೆದಿಂಗಳಂತೆಸೆವ ನೊಸಲ ಕಸ್ತೂರಿತಿಲಕ
ಹೊಳೆವ ಕಿರೀಟ ಮಸ್ತಕದಿ ಧಾಳಿಸುವ
ಅಲಸದೀರೇಳ್ಜಗವ ಕರುಣದಲಿ ರಕ್ಷಿಸುವ
ಹೆಳವನಕಟ್ಟೆ ಶ್ರೀ ವೆಂಕಟೇಶ್ವರನ ನೆನೆವೆ ನಾನು[೧೧೩]

ಎಂದು ಪ್ರಾರಂಭದಲ್ಲಿ ದೀರ್ಘವಾದ ದೇವತಾಸ್ತುತಿಯಿದೆ. 'ಕಂಸಾಸುರನಿಟ್ಟ ಸೆರೆ ಮನೆಯಲ್ಲಿ ಕಷ್ಟ ಪಡುತಲಿ ದೇವಕಿ ನಿಮಿಷ ಯುಗವಾಗಿ ಕಳೆಯುತ್ತಿದ್ದಳು ಎಂದು ಹೇಳಿ ಅವಳ ಕಷ್ಟ ನಿವಾರಣೆಗಾಗಿ ಪರಮಾತ್ಮನೇ ಕೊರವಿಯ ರೂಪವನ್ನು ಧರಿಸಿ ಹೊರಟನು ಎಂದು ಚಿತ್ರಿಸಿದ್ದಾಳೆ.

ಕಂಸನು ತನ್ನ ತಂಗಿ ದೇವಕಿಯನ್ನು ವಸುದೇವನಿಗೆ ಕೊಟ್ಟು ಮದುವೆ ಮಾಡಿರುತ್ತಾನೆ. ಆದರೆ ವಿವಾಹದ ಸಂದರ್ಭದಲ್ಲಿಯೇ ದೇವಕಿಯ ಗರ್ಭದಿಂದ ಜನಿಸುವ ಮಗುವಿನಿಂದಲೇ ಕಂಸನ ಸಾವು ಸಂಭವಿಸುತ್ತದೆ ಎಂದು ಆಕಾಶವಾಣಿಯಾಗುತ್ತದೆ. ಇದರಿಂದ ಭಯಭೀತನಾದ ಕಂಸ ವಸುದೇವ ದೇವಕಿಯರನ್ನು ಸೆರೆಯಲ್ಲಿಟ್ಟು ಅವರಿಗೆ ಹುಟ್ಟಿದ ಮಕ್ಕಳೆಲ್ಲರನ್ನು ಕೊಲ್ಲುತ್ತ ಹೋಗುತ್ತಾನೆ. ನೊಂದ ದೇವಕಿ ಸೆರೆಮನೆಯಲ್ಲಿ ನಿಮಿಷವನ್ನು ಯುಗವಾಗಿ ಕಳೆಯುತ್ತಿರುತ್ತಾಳೆ. ಇಂಥ ಸಂದರ್ಭದಲ್ಲಿ ಅವಳಿಗೆ ಕೃಷ್ಣ ಮಗನಾಗಿ ಹುಟ್ಟುವುದನ್ನು ಹೋಗಿ ತಿಳಿಸಿ ಹೇಳಿದರೆ ಸಮಾಧಾನ ಮಾಡುತ್ತೇನೆಂದುಕೊಂಡು ಬ್ರಹ್ಮ ಕೊರವಂಜಿಯ ವೇಷವನ್ನು ಧರಿಸುತ್ತಾನೆ. ಬ್ರಹ್ಮನೇ ಕೊರವಿಯ ವೇಷದಲ್ಲಿ ಬಂದು ದೇವಕಿಗೆ ಭವಿಷ್ಯದ ಶಕುನ ಕಣಿ ಹೇಳುವುದು ಅವಳಲ್ಲಿ ಭರವಸೆ ಮೂಡಿಸುವುದು ಈ ಕೃತಿಯ ಕಥಾವಸ್ತು ಬ್ರಹ್ಮಕೊರವಿಯ ವೇಷ ಧರಿಸಿದ ವರ್ಣನೆಯನ್ನು ಗಿರಿಯಮ್ಮ ತುಂಬ ಅರ್ಥಪೂರ್ಣವಾಗಿ ಮಾಡಿದ್ದಾಳೆ.

ಗುಂಜಿಯ ದಂಡೆಯು ತೋಳಭಾಪುರಿ ಗಲ್ಲಕೊತ್ತಿದ ವೀಳ್ಯವು
ಮಂಜಾಡಿಯಸರ ಹವಳ ಸರ ಹತ್ತೆಸರವಾ ಕೊರಳಲಿ ಹೊಳೆಯಲು
ಅಂಜನವನಿಟ್ಟು ಅಲರಗಣ್ಣಿಗೆ ಅತಿಹರುಷದಿಂದ ಬೇಗದಿ
ಕಂಜೋದ್ಭವ ಶೃಂಗರಿಸಿ ಬೆಳಗುವ ಕನ್ನಡಿಯ ನೀಕ್ಷಿಸಿದನು ಆದನೆ ಕೊರವಿ

ಮುತ್ತು ಮಾಣಿಕ ಹೊನ್ನ ಗೂಡೆಯ ಪಿಡಿದು
ಉತ್ತಮ ಶಿಶುವ ಬೆನ್ನಲಿ ಕಟ್ಟಿ
ಚಿತ್ತದೊಳಗೆ ನರಹರಿ ಶರಣೆನುತ
ಸತ್ಯ ಲೋಕದಿಂದಿಳಿದಳೆ ಕೊರವಿ[೧೧೪]

ಇಲ್ಲಿಯ ಹಾಡುಗಳು ಸಂಭಾಷಣೆಯ ಶೈಲಿಯಲ್ಲಿದೆ. ಆದ್ದರಿಂದಲೇ ಕಾವ್ಯ ನಾಟಕೀಯವಾಗಿದೆ. ಗುಂಜಿ, ದಂಡೆ, ಮಂಜಟೆಯ ಸರ ಹವಳಗಳಿಂದ ಅಲಂಕೃತಳಾದ ಕೊರವಿ ಮುತ್ತು ಮಾಣಿಕ ಹೊನ್ನ

ಗೂಡೆಯ ಪಿಡಿದು, ಬೆನ್ನಿಗೆ ಮಗುವನ್ನು ಕಟ್ಟಿಕೊಂಡು ಹರಿಧ್ಯಾನ ಮಾಡುತ್ತಾ 'ಏನಕ್ಕಾ ಏನಮ್ಮಾ ಎನ್ನ ತಂದೆಯ ಹೆತ್ತವ್ವಾ! ಎನ್ನ ಕೂಸಿಗೆ ಒಂದಿಷ್ಟು ಅನ್ನವನಿಕ್ಕವ್ವಾ... ಎಂದು ಧ್ವನಿಪೂರ್ಣವಾಗಿ ಹಾಡುತ್ತಾ ದೇವಕಿಯ ಬಳಿಗೆ ಬಂದು ಕೈ ತೋರಿಸಲು ಹೇಳುತ್ತಾಳೆ. ಮೊರದ ತುಂಬಾ ಮುತ್ತು ಮಾಣಿಕ್ಯಗಳನ್ನೇ ಕೇಳುತ್ತಾಳೆ.

ಸನ್ನೆಮಾಡಿ ಕರೆದರೆ ಚೆನ್ನಕೊರವಂಜಿ ಬಂದು
ಎನ್ನವ್ವ ಎನ್ನಕ್ಕ ಎನ್ನ ತಂದೆಯ ಹೆತ್ತವ್ವ
ನಿನ್ನ ಮನದಾಯತವ ಹೇಳೇನು ಬಾರವ್ವ
ಎನ್ನ ಕೂಸಿಗೆ ಒಂದಿಷ್ಟನ್ನವನಿಕ್ಕವ್ವ
ಸೊಲ್ಲಕೇಳೆ ಸೊಲ್ಲಕೇಳೆ ಸಿರಿವಂತೆ ಬಾರೆ[೧೧೫]

ಸತ್ಯ ಲೋಕದಿಂದಿಳಿದು ಮಧುರಾ ಪಟ್ಟಣಕ್ಕೆ ಬರುತ್ತಾಳೆ. ಬೀದಿಯಲ್ಲಿ ಅಲೆಯುತ್ತಿದ್ದವಳನ್ನು ದೇವಕಿ ಕಂಡು ಕರೆದ ಕೂಡಲೇ ಕೊರವಿ ಅವಳೆಡೆಗೆ ಬರುತ್ತಾಳೆ. ತಾನು ಛಪ್ಪನ್ನ ದೇಶಗಳನ್ನೆಲ್ಲ ಸುತ್ತಿ ಬಂದ ಕೊರವಿಯೆಂದೂ ಬರಿಯ ಡಂಬಕದವಳಲ್ಲವೆಂದೂ ಹೇಳಿ 'ಅರುಹವೆನು ಮುಂದಣ ಕಥಾಂತ್ರವೆಲ್ಲವ ಮೊರದ ತುಂಬ ಮುತ್ತು ತಾರೆ ಮಾನಿನಿರನ್ನಳೆ' ಎಂದು ಹೇಳುತ್ತಾಳೆ.

ಬರಿಯ ಡಂಬಕದ ಕೊರವಿ ನಾನಲ್ಲ
ಅರುಹುವೆನು ಮುಂದಣ ಕಥಾಂತ್ರವೆಲ್ಲವ
ಮೊರದ ತುಂಬ ಮುತ್ತು ತಾರೆ ಮಾನಿನಿರನ್ನಳೆ
ಕುರುಹ ಹೇಳೇನು ಇಲ್ಲಿ ಕುಳ್ಳಿರು ಬಾರೆಯವ್ವ[೧೧೬]

ದೇವಕಿಯ ಕೈಯ ನೋಡಿ ಕೊರವಿ 'ತಪ್ಪು ಹೇಳುವ ಕೊರವಿ ಅಲ್ಲ' ಎಂದು ದೇವಕಿಯಲ್ಲಿ ವಿಶ್ವಾಸ ಮೂಡಿಸುತ್ತಾಳೆ.

ಉರ್ವಿಯೊಳತಿ ದಿಟ್ಟನಮ್ಮ ನಿಮ್ಮ ಮಗನು
ಗರ್ಭದೊಳಿಹನು ಕಾಣಮ್ಮ
ಕೊಬ್ಬಿದ ಕಂಸನ ಹಮ್ಮ ಮುರಿದು ನಿಮ್ಮ
ನಿರ್ಬಧ ಬಿಡಿಸುವನಮ್ಮ
ಎಂಟನೆ ಗರ್ಭವಿದಮ್ಮ ನಿಮ್ಮುದರದಿ
ಅಂಟಿಹ ಮಗನು ಕಾಣಮ್ಮ
ಕಂಟಕ ಕಂಸನ ಅಮ್ಮಾ ಇವನು ಪುಟ್ಟಿ
ಗಂಟಲ ಮುರಿವ ಕಾಣಮ್ಮ[೧೧೭]

ದೇವಕಿ ಮೊರದ ತುಂಬ ಮುತ್ತು, ಕೈಯ ತುಂಬ ಹೊನ್ನ ಕಾಣಿಕೆಯನ್ನಿತ್ತ ಮೇಲೆ ಕಣಿ ಹೇಳಲು ಆರಂಭಿಸುತ್ತಾಳೆ. ಶ್ರಾವಣ ಬಹುಳಾಷ್ಟಮಿಯ ನಡುರಾತ್ರಿ ಶ್ರೀ ಕೃಷ್ಣ ಹುಟ್ಟುವುದು. ಅವನನ್ನು ವಸುದೇವ

ಗೋಕುಲಕ್ಕೆ ಒಯ್ಯುವುದು, ಅವನು ಗೋಕುಲದಲ್ಲಿ ಬೆಳೆಯುವುದರಿಂದ ಹಿಡಿದು ಶ್ರೀಕೃಷ್ಣ ಬಿಲ್ಲ ಹಬ್ಬಕ್ಕೆ ಮಧುರೆಗೆ ಬಂದು ಕಂಸನನ್ನು ಕೊಲ್ಲುವವರೆಗಿನ ಭಾಗವತ ದಶಮಸ್ಕಂದ ಪೂರ್ವಾರ್ಧದಲ್ಲಿ ಬರುವ ಘಟನೆಗಳನ್ನೆಲ್ಲ ಶಕುನ ಹೇಳಿ ಕೃಷ್ಣನ ಬಾಲಲೀಲೆಗಳನ್ನು ಆತನಿಂದ ಆಗುವ ದುಷ್ಟ ಮರ್ದನ, ಶಿಷ್ಟ ರಕ್ಷಣಗಳನ್ನು ವರ್ಣಿಸುತ್ತಾಳೆ. ಕೊರವಿ ಕೊನೆಯಲ್ಲಿ

ಆಗದಾಗದುಯೆಂದು ಅನುಮಾನಗೊಳ್ಳದಿರೆ
ಆದೀತು ಅಮ್ಮಯ್ಯ ಅಭಯವನು ಕೊಳ್ಳೆ
ಸಾಗಿ ಕಳುಹೆನ್ನ ಸವತಿ ಒಳ್ಳೆಯವಳ್ಳಲ್ಲ
ಹೋಗಿ ಬರುತ್ತೇನೆ ನಿನಗೆ ಮೆಚ್ಚ ಹಾರೈಸಿ[೧೧೮]

ಎಂದು ಕೊರವಿ ಭರವಸೆಯ ಭವಿಷ್ಯ ಹೇಳಿದಾಗ ಸಂತುಷ್ಟಳಾದ ದೇವಕಿ

ಕೊರವಿ ನಿನ್ನ ಮಾತು ಖರೆಯಾದರೆ ಎನ್ನ ಸೆರೆಮನೆ ಹಿಂಗಿದರೆ
ಹಿರಿದಿನ ಭಾಪುರಿ ಕೊಡುವೆನು ನಿನಗೆಯೆಂದು ಕರದಿ ವೀಳ್ಯವನಿತ್ತಳು.[೧೧೯]

ಹೀಗೆ ಕೊರವಿಗೆ ದೇವಕಿ ವೀಳ್ಯವನ್ನು ಕೊಟ್ಟು ಮನ್ನಿಸಿ ಕಳುಹಿಸಿಕೊಡುತ್ತಾಳೆ. ವೀಳ್ಯ ತೆಗೆದುಕೊಂಡ ಕೊರವಿ ಮತ್ತೆ ಸತ್ಯಲೋಕಕ್ಕೆ ಹೊರಡುವಲ್ಲಿಗೆ ಹಾಡು ಮುಗಿಯುತ್ತದೆ. 'ಬ್ರಹ್ಮ ಕೊರವಂಜಿ' ವಚನ ಹಾಗೂ ಪದ್ಯಗಳಿಂದ ಕೂಡಿದೆ. ಈ ಹಾಡಿನಲ್ಲಿ ಒಳ್ಳೆಯ ಸ್ವಾರಸ್ಯವಿದೆ. ಹಾಡಿನುದ್ದಕ್ಕೂ ಭಾಷೆಯಲ್ಲಿ ನಿರೂಪಣಾ ವಿಧಾನದಲ್ಲಿ ಲವಲವಿಕೆಯಿದೆ. ಸಂಭಾಷಣೆಯ ಸೊಗಸಿದೆ. ಗಿರಿಯಮ್ಮ ಕೃಷ್ಣಾವತಾರವನ್ನು ಕುರಿತು ಈ ಹಾಡನ್ನು ತುಂಬ ತನ್ಮಯತೆಯಿಂದ ಭಾವಪೂರ್ಣವಾಗಿ ಹಾಡಿದ್ದಾಳೆ.

ಕೃಷ್ಣ ಕೊರವಂಜಿ : ಬ್ರಹ್ಮಕೊರವಂಜಿಯಂತೆ ಕೃಷ್ಣ ಕೊರವಂಜಿ ಕೂಡ ಗಿರಿಯಮ್ಮನಿಂದ ರಚಿತವಾದ ಒಂದು ದೊಡ್ಡ ಹಾಡೆಂದು ತಿಳಿದುಬರುತ್ತದೆ. ಸಿಕ್ಕಿರುವ ಭಾಗವಷ್ಟನ್ನೇ ನೋಡಿದರೆ ಕಥಾ ಸಂದರ್ಭ ಯಾವುದೆಂದು ತಿಳಿಯುವುದಿಲ್ಲ. ಈ ಹಾಡು ಪೂರ್ಣವಾಗಿ ದೊರೆತಿಲ್ಲ. ರುಕ್ಮಿಣಿಯ ಅಣ್ಣಾನಾದ ರುಕ್ಮಿ ತನ್ನ ತಂಗಿ ರುಕ್ಮಿಣಿಯನ್ನು ದಮಘೋಷನ ಮಗ ಶಿಶುಪಾಲನಿಗೆ ಮದುವೆ ಮಾಡಿಕೊಡಲು ನಿಶ್ಚಯಿಸಿರುತ್ತಾನೆ. ಆದರೆ ಕೃಷ್ಣ ರುಕ್ಮಿಣಿಯರು ಪರಸ್ಪರ ಮೆಚ್ಚಿಕೊಂಡಿರುತ್ತಾರೆ. ರುಕ್ಮಿಣಿ ವಿವಾಹದ ದಿನ ಹತ್ತಿರ ಬರುತ್ತಿರುವಂತೆ ಕಾತರದಿಂದ ಏನಾಗುತ್ತದೋ ಎಂದು ಆತಂಕ ಹೆಚ್ಚುತ್ತದೆ. ಆಗ ಕೃಷ್ಣನೇ ಕೊರವಂಜಿಯ ರೂಪದಲ್ಲಿ ಬಂದು ರುಕ್ಮಿಣಿಗೆ ಕಣಿ ಹೇಳುವ ನೆವದಲ್ಲಿ ಕೃಷ್ಣ ಬಂದು ಅವಳನ್ನು ವಿವಾಹವಾಗುವುದಾಗಿ ಹೇಳಿ ಅವಳಿಗೆ ಧೈರ್ಯ ತುಂಬುತ್ತಾನೆ. ಇದು ಈ ಕಾವ್ಯದ ಕಥಾವಸ್ತುವಾಗಿದೆ.

ಕೊರವಂಜಿಯ ಕಲ್ಪನೆ ಹೊಸದಾದರೂ ಉಳಿದಂತೆ ಕೃಷ್ಣ-ರುಕ್ಮಿಣಿಯರ ಪರಿಣಯ ಭಾಗವತದಲ್ಲಿ ಇರುವಂಥದ್ದು. ಈ ವಸ್ತುವನ್ನಾಧರಿಸಿ ಈ ಹಾಡು ಎಷ್ಟು ದೊಡ್ಡದಾಗಿದೆ ಎನ್ನುವುದು ತಿಳಿಯದಿದ್ದರೂ,

ಇದು ಬ್ರಹ್ಮಕೊರವಂಜಿಗಿಂತ ಮೊದಲು ರಚಿತವಾಗಿರಬೇಕೆಂಬ ಅಭಿಪ್ರಾಯ ವ್ಯಕ್ತವಾಗಿದೆ. 'ಬ್ರಹ್ಮ ಕೊರವಂಜಿ'ಯ ಭಾಷೆ ನಿರೂಪಣೆಗಳಲ್ಲಿ ಕಾಣುವ ನಯವಂತಿಕೆ ಇಲ್ಲಿ ಕಾಣಸುವುದಿಲ್ಲ. ಬ್ರಹ್ಮಕೊಡರವಂಜಿ ಮಧುರೆಯ 'ಮನೆ ಬಾಗಿಲುಗಳ ಮುಂದೆ ನಿಂತು ವನದ ಕೋಗಿಲೆಯಂತೆ ಯವ್ವಾ ಯವ್ವಾ ಎನುತ ವಿನಯದಿ ಸ್ವರ' ಗೈದರೆ ಕೃಷ್ಣ ಕೊರವಂಜಿಯಲ್ಲಿ

ಹೆಬ್ಬಾಗಿಲದೊಳ್ ಹುಬ್ಬುಗಳ ಕುಣಿಸುತ
ಅಬ್ಬರದಿಂದ ಸ್ವರಗೈದಾಳು
ಏಯವ್ವಾ ಏಯಕ್ಕಾ ಏಯಮ್ಮಾ ಬಾರೆಂದು
ಸಾರುತ ನಡೆದಾಳ ಕೊರವಂಜಿ[೧೨೦]

ಎಂಬ ಮಾತುಗಳು ಬರುತ್ತವೆ. ಇವಳೂ ಬ್ರಹ್ಮಕೊರವಂಜಿಯಂತೆಯೇ ಅಂಗವಂಗ ಕಳಿಂಗ, ಕಾಶ್ಮೀರ ದೇಶಗಳನ್ನು ತಿರುಗಿದವಳೇ ಆಗಿದ್ದಾಳೆ. ಆದರೆ ಇಲ್ಲಿ ಗುರುತಿಸಬಹುದಾದ ಇನ್ನೊಂದು ಅಂಶವೆಂದರೆ ಈ ಹಾಡಿನಲ್ಲಿ ಕೃಷ್ಣನೇ ಕೊರವಂಜಿ ಪಾತ್ರವಹಿಸಿಕೊಂಡು ಬಂದು ರುಕ್ಮಿಣಿಗೆ ಅಭಯವನ್ನು ನೀಡುವುದು ಈ ಹಾಡಿನ ವೈಶಿಷ್ಟ್ಯವಾಗಿದೆ.

**ನಾರದ ಕೊರವಂಜಿ :** ಶ್ರೀ ಪ್ರಸನ್ನ ವೆಂಕಟದಾಸರು ಬರೆದ 'ನಾರದ ಕೊರವಂಜಿ' ಸೊಗಸಾದ ಲಘು ಗೀತ ನಾಟಕವಾಗಿದೆ. ಇದರಲ್ಲಿ ವಚನಗಳೂ ಸೇರಿದಂತೆ ವಿವಿಧ ರಾಗತಾಳಗಳಲ್ಲಿರುವ ಪ್ರತ್ಯೇಕ ಪಲ್ಲವಿ ೩೪ ನುಡಿಗಳಿರುವ ಹಾಡುಗಳಿವೆ. ಇಲ್ಲಿ ಬರುವ ಕೊರವಂಜಿಯ ಕಲ್ಪನೆ ಜಾನಪದದ್ದಾದರೂ, ಉಳಿದಂತೆ ಕೃಷ್ಣರುಕ್ಮಿಣಿಯರ ಪರಿಣಯದ ಕಥೆ ಭಾಗವತದಲ್ಲಿ ಬರುವಂಥದ್ದು. ರುಕ್ಮಿಣಿಯ ಅಣ್ಣ ರುಕ್ಮಿಯು ತನ್ನ ತಂಗಿಯನ್ನು ಶಿಶುಪಾಲನಿಗೆ ಮದುವೆ ಮಾಡಿಕೊಡಲು ನಿಶ್ಚಯಿಸಿರುತ್ತಾನೆ. ವಿವಾಹದ ದಿನ ಹತ್ತಿರ ಬರುತ್ತಿರುವಂತೆ ಶ್ರೀ ಕೃಷ್ಣನಲ್ಲಿ ಅನುರಕ್ತಳಾದ ರುಕ್ಮಿಣಿಯು ತನ್ನನ್ನು ರಕ್ಷಿಸಲು ಕೃಷ್ಣನಿಗಾಗಿ ರುಕ್ಮಿಣಿ ಕಾತರದಿಂದ ತಲ್ಲಣಿಸುತ್ತಿದ್ದಾಗ, ಆಗ ದೇವರ್ಷಿಗಳಾದ ನಾರದರು ಕೊರವಂಜಿಯ ವೇಷದಿಂದ ಬಂದು ರುಕ್ಮಿಣಿಗೆ ಶ್ರೀಕೃಷ್ಣನು ಬಲರಾಮನೊಂದಿಗೆ ರಥವೇರಿ ಬರುವನೆಂದೂ ಅವಳನ್ನು ರಕ್ಷಿಸಿ ತನ್ನ ರಥದಲ್ಲಿ ಕುಳ್ಳಿರಿಸಿಕೊಂಡು ದ್ವಾರಕೆಗೆ ಹೋಗಿ ಅವಳನ್ನು ವಿವಾಹವಾಗುವನೆಂದೂ ಕಣಿ ಹೇಳುವುದರ ಮೂಲಕ ಅವಳನ್ನು ಸಮಾಧಾನಪಡಿಸುತ್ತಾರೆ. ಇದು ಈ ಕೃತಿಯ ಕಥಾವಸ್ತುವಾಗಿದೆ.

ಮೊದಲ ಹಾಡಿನಲ್ಲಿ ಹರಿಸ್ತುತಿ ಇದೆ. ೨ನೇ ಹಾಡಿನಲ್ಲಿ ಕೃಷ್ಣನ ಜನನದ ಕಾರಣವನ್ನು ಹೇಳಿದೆ. ಮೂರನೆಯ ಹಾಡಿನಲ್ಲಿ ರುಕ್ಮಿಣಿಯ ಜನನ ಆಕೆ ಬೆಳೆದದ್ದು, ಅವಳ ವಿವಾಹ ಪ್ರಸ್ತಾಪ, ಅವಳ ಅಪೇಕ್ಷೆ ಎಲ್ಲವನ್ನು ಸಂಕ್ಷಿಪ್ತವಾಗಿ ಹೇಳಲಾಗಿದೆ. ಈ ಸಂದರ್ಭದಲ್ಲಿ ನಾರದ ಧರಿಸುವ ಕೊರವಂಜಿಯ ವೇಷದ ವರ್ಣನೆ ಸುಂದರವಾಗಿ ಮೂಡಿಬಂದಿದೆ.

ಮಂಜುಗಾವಿಯ ಸೀರೆ ನಿರಿದೆಗೆದುಟ್ಟು
ಕೆಂಚೆಡೆ ಬಿಟ್ಟೋರೆದುರುಬಿನ ಕಟ್ಟು

ಪಂಜಿನೋತಿಯ ಮೂಗುತಿಯ ಬಲಿದಿಟ್ಟು ಗುಲ
ಗಂಜಿ ಹೊಂದಾಳೆ ಸರಗಳಳವಟ್ಟು
ಕಂಚು ಕಪುಟ ಬಿಗುಪೇರಿದ ಕಟ್ಟು
ಚಂಚಲ ನೇತ್ರಕಂಜನ ಕಾವಲಿಟ್ಟು
ಮಿಂಚುವಾಭರಣಿಟ್ಟು ಪ್ರಸನ್ವೆಂಕಟ ಕೃಷ್ಣ
ನಂ ಚಿಂತಿಸಿ ಜಯ ಜಯಯೆಂದಳು ಕೊರವಿ[೧೨೧]

ಕೇರಿಗಳನ್ನೆಲ್ಲ ಸುತ್ತುತ್ತ ಅರಮನೆಯ ಬಳಿ ಬಂದ ಕೊರವಂಜಿಯನ್ನು ರುಕ್ಮಿಣಿಯ ಸಖಿಯರು ರುಕ್ಮಿಣಿಯ ಬಳಿಗೆ ಕರೆದೊಯ್ಯುತ್ತಾರೆ. 'ಎಲೆಲೆ ಎಳೆವೆಂಗಳೆ ಎಲೆ ಹುಲ್ಲೆಗಂಗಳೆ' ಎಂದು ಮೊದಲಾಗುವ ಕೊರವಂಜಿ ಮಾಡುವ ರುಕ್ಮಿಣಿಯ ವರ್ಣನೆ ದಾಸರ ವರ್ಣನಾ ವೈಖರಿಗೆ ನಿದರ್ಶನವಾಗಿದೆ. ಈ ಕೊರವಿ ಸಾಮಾನ್ಯಳಲ್ಲ. ತಾನು ಸುತ್ತಿ ಬಂದ ಛಪ್ಪನ್ನಾರು ದೇಶಗಳ ಹೆಸರು ಹೇಳುತ್ತಾಳೆ. ಆಧ್ಯಾತ್ಮದ ಮಾತುಗಳನ್ನೂ ಆಡುತ್ತಾಳೆ. ಕೃಷ್ಣ ಬಂದು ರುಕ್ಮಿಣಿಯನ್ನು ಹೇಗೆ ಕರೆದುಕೊಂಡು ಹೋಗಿ ವಿವಾಹವಾಗುತ್ತಾನೆ ಎನ್ನುವುದನ್ನು ಹೇಳುತ್ತಾಳೆ. ಕೊರವಿಯ ಮಾತಿನಿಂದ ಸಂತೋಷಗೊಂಡ ರುಕ್ಮಿಣಿ ಕೊರವಂಜಿಗೆ ಕೃಷ್ಣ ಬರುವವರೆಗೆ ತನ್ನ ಜೊತೆಯಲ್ಲೇ ಇರು ಎಂದರೆ ಒಪ್ಪದೇ ನೀನು ನೆನೆದಾಗ ಬರುವೆನೆಂದು ಹೇಳಿ ಹೊರಟು ಹೋಗುತ್ತಾಳೆ.

ಸುರಋಷಿ ಪೇಳ್ದ ಒಕ್ಕಣೆಯ
ಹರುಷದಿ ಕೇಳ್ದ ರುಕ್ಮಿಣಿಯ
ಅರಸ ಪ್ರಸನ್ನವೆಂಕಟ ಕೃಷ್ಣ
ನಿರುತದಿ ಜಯ ನಮಗೀವ[೧೨೨]

ಎಂಬ ನಂಬಿಕೆಯೊಂದಿಗೆ ಕೃತಿ ಮುಗಿಯುತ್ತದೆ. ಈ ಕೃತಿಯನ್ನು ಹರಿಯ ಕಥೆಯೆಂಬ ಭಕ್ತಿ ಭಾವದಿಂದಲೇ ಹರಿದಾಸರು ರಚಿಸಿರುವರಾದರೂ, ಕೃತಿ ತನ್ನ ಸಹಜಗತಿಯಿಂದ ಕೊರವಂಜಿಯ ವೇಷ ಭೂಷಣ ಮಾತುಗಳು ಇತ್ಯಾದಿಗಳ ರಂಜನೀಯ ಚಿತ್ರಣದಿಂದ ಓದುಗರ ಗಮನ ಸೆಳೆಯುತ್ತದೆ. ಮಧ್ಯೆ ಮಧ್ಯೆದಲ್ಲಿ ಬರುವ ವಚನ ಭಾಗಗಳೂ ಕಾವ್ಯಮಯವಾಗಿವೆ. ಇದೇ ವಸ್ತುವನ್ನು ಕುರಿತು ಒಂದು ಕೃತಿ ಶ್ರೀವಾದಿರಾಜರ ಅಂಕಿತದಲ್ಲಿಯೂ ರಚನೆಯಾಗಿದೆ. ಅದರಲ್ಲಿ ಇಲ್ಲಿಯ ಹಾಗೆ ಪ್ರತ್ಯೇಕ ರಾಗ ತಾಳಗಳಿಂದ ಕೂಡಿದ ಹಾಡುಗಳಿಲ್ಲ. ಕೆಲವೆಡೆ ದೀರ್ಘವಾದ ಗದ್ಯಭಾಗಗಳಿವೆ. ಮಧ್ಯೆ ಮಧ್ಯೆ ಅನೇಕ ಕಡೆ ತೆಲುಗು ಭಾಷೆ ಬಳಕೆಯಾಗಿದೆ. ಉಳಿದಂತೆ ಕಥಾ ನಿರೂಪಣೆಯಲ್ಲಿ ಕೆಲಮಟ್ಟಿಗೆ ಹೋಲಿಕೆ ಇದ್ದರೂ ಕಾವ್ಯಾಭಿವ್ಯಕ್ತಿಯ ದೃಷ್ಟಿಯಿಂದ ಪ್ರಸನ್ನವೆಂಕಟದಾಸರ ಕೃತಿಯೇ ಮೇಲ್ಮಟ್ಟದ ಕೃತಿ ಎನ್ನಬಹುದು.[೧೨೩] ಹಾಗೂ ಇಲ್ಲಿ ಗುರುತಿಸಬಹುದಾದ ಇನ್ನೊಂದು ಪ್ರಮುಖ ಅಂಶವೆಂದರೆ ಹೆಳವನಕಟ್ಟೆ ಗಿರಿಯಮ್ಮನ ಕೃಷ್ಣ ಕೊರವಂಜಿ ಹಾಡಿನಲ್ಲಿ ಕೃಷ್ಣನೇ ಕೊರವಂಜಿಯಾಗಿ ಬಂದು ರುಕ್ಮಿಣಿಗೆ ಕಣಿ ಹೇಳಿ ಅಭಯವನ್ನು

ನೀಡಿದರೆ ವಾದಿರಾಜರಲ್ಲಿ ಹಾಗು ಪ್ರಸನ್ನವೆಂಕಟದಾಸರಲ್ಲಿ ನಾರದ ಕೊರವಂಜಿಯಾಗಿ ಬಂದು ರುಕ್ಮಿಣಿಗೆ ಸಮಾಧಾನ ಮಾಡುವ 'ನಾರದ ಕೊರವಂಜಿ' ಹಾಡುಗಳಿವೆ. ಈ ಕೊರವಂಜಿ ಹಾಡುಗಳನ್ನು ಗಮನಿಸಿದರೆ ಕಥೆ, ವ್ಯಕ್ತಿ ಸಂದರ್ಭಗಳಲ್ಲಿ ಒಂದಕ್ಕೊಂದಕ್ಕೆ ವ್ಯತ್ಯಾಸಗಳು ಕಂಡರೂ ಮೂಲ ಚೌಕಟ್ಟು ರೀತಿ ನೀತಿಗಳು ಒಂದೇ ಇರುವುದು ಕಾಣಿಸುತ್ತವೆ. ಇವುಗಳಲ್ಲಿ ಬರುವ ಕೊರವಂಜಿ ಪಾತ್ರ ಒಂದು ನಿರ್ದಿಷ್ಟ ಉದ್ದೇಶದಿಂದ ಸೃಷ್ಟಿಯಾಗಿರುತ್ತದೆ. ನೋಯುತ್ತಿರುವ ಪಾತ್ರವೊಂದಕ್ಕೆ ಅದರ ನೋವು ಸದ್ಯದಲ್ಲೇ ನಿವಾರಣೆಯಾಗುವ ಬಗ್ಗೆ ಭರವಸೆಯನ್ನು ನೀಡುವುದು ಈ ಪಾತ್ರ ಸೃಷ್ಟಿಯ ಮುಖ್ಯ ಉದ್ದೇಶವಾಗಿದೆ. ಹೀಗೆಯೇ ಕೊರವಂಜಿಯ ವೇಷಭೂಷಣಗಳು ಮಗುವನ್ನು ಬೆನ್ನಿನಲ್ಲಿ ಕಟ್ಟಿಕೊಂಡು ಬರುವುದು, ಮಾತುಗಾರಿಕೆಯ ರೀತಿಯಲ್ಲಿರುವ ಸಾಮ್ಯ, ಅವರೆಲ್ಲ ಛಪ್ಪನ್ನಾರು ದೇಶಗಳನ್ನು ಸುತ್ತಿಬಂದವರೇ ಆಗಿರುವುದು ಇತ್ಯಾದಿ ಎಷ್ಟೋ ಅಂಶಗಳಲ್ಲಿ ಇವುಗಳಲ್ಲಿರುವ ಸಾಮ್ಯತೆಯನ್ನು ಗಮನಿಸಬಹುದಾಗಿದೆ.

ಹೀಗೆ ಮಧ್ಯಕಾಲೀನ ಯುಗದಲ್ಲಿ ಒಂದಲ್ಲ ಒಂದು ಕಾರಣದಿಂದ ಜನರ ಕಣ್ಣಿಗೆ ಬೀಳುತ್ತಾ ತನ್ನ ಸ್ಥಾನವನ್ನು ಗಟ್ಟಿಗೊಳಿಸುತ್ತಾ ಸಾಗಿ ಬಂದಿರುವ ಕೊರವಂಜಿ ಹೆಚ್ಚು ಜನಾದರಣೀಯವಾಗಿ ತೋರುವುದು ಜಾನಪದ ಸಾಹಿತ್ಯದಲ್ಲಿ ಮುಖ್ಯವಾಗಿ ಶ್ರೀಕೃಷ್ಣ ಪಾರಿಜಾತದಲ್ಲಿ 'ಕೃಷ್ಣಪಾರಿಜಾತದ ಕರ್ತೃ ಯಾರೆಂದು ತಿಳಿದುಬಂದಿಲ್ಲ. ಯಾವುದೇ ಜಾನಪದ ಆಟಕ್ಕೆ ಇಂಥವರೇ. ಇವರೊಬ್ಬರೇ ಅದರ ಕರ್ತೃ ಎಂದು ಹೇಳುವುದು ಕಠಿಣ ಸಾಧ್ಯ ಕೃಷ್ಣ ಪಾರಿಜಾತದಂತಹ ಜನಾನುರಾಗಿ ಆಟವನ್ನು ಗಮನಿಸಿದ ಆಧುನಿಕರು ತಮ್ಮ ದೃಷ್ಟಿಗನುಗುಣವಾಗಿ ಶಿಷ್ಟವನ್ನಾಗಿಸಿರುವುದು ಸೋಜಿಗವೇನಲ್ಲ. ಸುಮಾರು ೧೮ನೇ ಶತಮಾನಕ್ಕೆ ಸೇರಿದ ಅಪರಾಳ ತಮ್ಮಣ್ಣ ಶ್ರೀ ಕೃಷ್ಣ ಪಾರಿಜಾತದ ಜನಪ್ರಿಯತೆಯನ್ನರಿತು. ನಾಟಕವನ್ನಾಗಿಸಿದ್ದಾರೆ. ಪಾರಿಜಾತದಂತಹ ವಿಶಿಷ್ಟವಾದ ನಾಟಕದಲ್ಲಿ ಕಾಣಬರುವ ಕೊರವಂಜಿ ಪಾತ್ರವೂ ಲೋಕಪ್ರಿಯವಾಗಿದೆ. ದೇವಾನುದೇವತೆಗಳು ಸಮಯಕ್ಕೆ ಸಂದರ್ಭಕ್ಕೆ ಅಳವಡಿಸಿಕೊಳ್ಳಲು ಅಪೇಕ್ಷೆಪಡುವ ಈ ಪಾತ್ರ ನಮ್ಮ ಜನಪದರಿಗಾಗಲೀ ಶಿಷ್ಟರಿಗಾಗಲೀ ಅನ್ಯವಾಗಿ ಅಥವಾ ಸಾಮಾನ್ಯವಾಗಿ ತೋರಲಿಲ್ಲ.[೧೨೪]

ಜನಮನವನ್ನು ರಂಜಿಸುವಲ್ಲಿ ತನ್ನ ಪ್ರತಿಭೆ, ನೈಪುಣ್ಯ, ತೋರಿ ಜನಮೆಚ್ಚುಗೆಯನ್ನು ಪಡೆಯುವಲ್ಲಿ ಕೊರವಂಜಿಯ ಪಾತ್ರ ಪ್ರಸಿದ್ಧವಾಗಿತ್ತು. ಅಪರಾಳ ತಮ್ಮಣ್ಣನ ಶ್ರೀಕೃಷ್ಣಪಾರಿಜಾತದಲ್ಲಿ ಕೃಷ್ಣ ಕೊರವಂಜಿಯಾಗಿ ಸತ್ಯ ಭಾಮೆಯಲ್ಲಿಗೆ ಬರುವ ಸನ್ನಿವೇಶ ಎಲ್ಲ ಪಾರಿಜಾತಗಳಲ್ಲಿ ಸಾಮಾನ್ಯವೇ ಆಗಿದೆ. ಆದರೆ ಇದು ಆಯಾ ಕವಿಯ ಅಪೇಕ್ಷೆಗನುಗುಣವಾಗಿ ಬೇರೆ ಬೇರೆ ರೀತಿಯಾಗಿ ರೂಪುಗೊಂಡಿದೆ. 'ತೂಗಿರೆ ರಂಗನ ತೂಗಿರೆ ಕೃಷ್ಣನ' ಎಂಬ ಪುರಂದರದಾಸರ ಹಾಡನ್ನು ಕೊರವಂಜಿಯ ಬಾಯಲ್ಲಿ ಆಡಿಸಿರುವುದು ಇದಕ್ಕೊಂದು ಉದಾಹರಣೆ. ಕೆಲವೆಡೆ ಆಕೆ ಮನರಂಜನೆಯ ಸಾಧನವಾದರೆ, ಕೆಲವು ಕಡೆ ಮನಃಶಾಸ್ತ್ರಜ್ಞಳಾಗಿ, ದೈವದ ಪ್ರತೀಕವಾಗಿ, ಮಹಾಮೇದಾವಿಯಾಗಿ ಕಂಡುಬರುತ್ತಾಳೆ. ಈ ಕೊರವಂಜಿ ಜನಪದ ಬದುಕಿನ ಒಳ ಹೊರಗೆಲ್ಲ ಓಡಾಡಬಲ್ಲವಳಾಗಿದ್ದಳೆಂಬುದು ಗೋಚರಿಸುತ್ತದೆ.

ಶ್ರೀಕೃಷ್ಣಪಾರಿಜಾತದ ಕಥೆ ನಾರದರು ದೇವಲೋಕದಿಂದ ಪಾರಿಜಾತ ಪುಷ್ಪವನ್ನು ತಂದು ಕೃಷ್ಣನಿಗೆ ಅರ್ಪಿಸುತ್ತಾರೆ. ಅದನ್ನು ಕೃಷ್ಣನು ಅಲ್ಲಿಯೇ ಇದ್ದ ರುಕ್ಮಿಣಿಯ ಮುಡಿಗಿಡುತ್ತಾನೆ. ನಾರದನು ಈ ವಿಷಯವನ್ನು ಸತ್ಯಭಾಮೆಯಲ್ಲಿಗೆ ಬಂದು ತಿಳಿಸುತ್ತಾನೆ. ಸವತಿ ಮಾತ್ಸರ್ಯದಿಂಧ ಸತ್ಯಭಾಮೆ ತನ್ನ ದೂತಿಯನ್ನು ಕಳಿಸಿದ್ದಲ್ಲದೆ ತಾನೂ ಕೃಷ್ಣನನ್ನು ಕರೆಯಲು ಹೋಗಿ ರುಕ್ಮಿಣಿಯಿಂದ ಅವಮಾನಿತಳಾಗುವ ದೃಶ್ಯ ಇಲ್ಲಿದೆ. ಸತ್ಯಭಾಮೆ ಶಕ್ತಿದೇವಿಯನ್ನು ಆರಾಧಿಸಿ ಶ್ರೀಕೃಷ್ಣನು ತನ್ನ ಕಡೆ ಒಲಿಯುವಂತೆ ಮಾಡಲು ಬೇಡುತ್ತಾಳೆ. ಜಗದಂಬೆಯ ಮಹಿಮೆಯಿಂದ ಕೃಷ್ಣನ ಮನಸ್ಸು ಸತ್ಯಭಾಮೆಯ ಕಡೆ ಒಲಿದು ಕೊರವಂಜಿ ವೇಷ ಧರಿಸಿ ಬಂದು ಆಕೆಯನ್ನು ಸಂತೈಸಿ ಇಂದು ರಾತ್ರಿ ನಿನ್ನ ನಲ್ಲ ಬಂದೇ ಬರುತ್ತಾನೆಂದು ಕಣಿ ಹೇಳಿ ಹೋಗುತ್ತಾನೆ. ಅದರಂತೆ ಆ ರಾತ್ರಿ ಬಂದು ಸತ್ಯಭಾಮೆಯನ್ನು ಸಂತೋಷಪಡಿಸಿ, ಮುಂದೆ ಪಾರಿಜಾತ ವೃಕ್ಷವನ್ನೇ ತಂದು ಅವಳ ಮನೆಯ ಅಂಗಳದಲ್ಲಿ ನೆಡುತ್ತಾನೆ.

ಈ ಕಥೆಯಲ್ಲಿ ಕೃಷ್ಣನೇ ಸಮಯೋಚಿತವಾಗಿ ಸತ್ಯಭಾಮೆಯಲ್ಲಿಗೆ ಕೊರವಂಜಿಯಾಗಿ ಬರುವ ಸಂದರ್ಭ ಸೊಗಸಾಗಿದೆ. ಕೊರವಂಜಿಯ ಪಾತ್ರದ ಆಗಮನವು ಸಮಂಜಸವಾಗಿದೆ. ಕೊರವಂಜಿ ಸುಲಭವಾಗಿ ಹಳ್ಳಿಯ ಹೆಂಗಸರೊಂದಿಗೆ ಬೆರೆತು ತನ್ನ ಕಾರ್ಯ ಸಾಧಿಸಿಕೊಳ್ಳುವವಳು ಅವಳ ಬಗೆಗೆ ಯಾರಿಗೂ ಅಷ್ಟು ಅನುಮಾನ ಮೂಡುವುದಿಲ್ಲ. ಕಣಿ ಹೇಳುವ ಹೆಂಗಸೊಬ್ಬಳು ಮತ್ತೊಬ್ಬಳ ಅಂತರಂಗವನ್ನರಿಯುವುದು ಮನಬಿಚ್ಚಿ ಮಾತನಾಡುವುದು ಸಹಜವಾಗಿಯೇ ತೋರುತ್ತದೆ. ಇಂಥ ಸಹಜತೆಯಿಂದಲೇ ಕೊರವಂಜಿ ಜನಪ್ರಿಯಳಾಗಿದ್ದಾಳೆ.

ದ್ರಾವಿಡ ಮೂಲದ ಕೊರವಂಜಿ ಬಯಲಾಟದ ಮೂಲಕ ಮತ್ತಷ್ಟು ಪ್ರಚಾರ ಪಡೆದಿದ್ದಾಳೆ. "ಅಪರಾಳ ತಮ್ಮಣ್ಣನಿಗೆ ಸ್ಫೂರ್ತಿ ನೀಡಿದೆ ಎಂದು ಹೇಳಲಾದ ಪ್ರಸನ್ನ ವೆಂಕಟದಾಸರ (೧೬೮೦-೧೭೫೨) ಶ್ರೀಕೃಷ್ಣ ಪಾರಿಜಾತ ಅಥವಾ ಸತ್ಯಭಾಮಾ ವಿಲಾಸವು ಒಂದು ಲಘುಗೀತ ನಾಟಕವಾಗಿದೆ. ನಾರದ ಕೊರವಂಜಿ ಎಂಬ ಇವರ ಇನ್ನೊಂದ ಕೃತಿಯೂ ಗೀತ ನಾಟಕವಾಗಿದೆ. ಹೆಳವನಕಟ್ಟೆ ಗಿರಿಯಮ್ಮ (ಸು.೧೭೫೦) ಬ್ರಹ್ಮಕೊರವಂಜಿ ಮುಮ್ಮಡಿ ಕೃಷ್ಣರಾಜರ (೧೭೯೪-೧೮೬೮) ಭಾಮಾಕಥೆ ಅಥವಾ ಪಾರಿಜಾತ ಅಪಹರಣದ ಕತೆ ಮತ್ತು ಪ್ರಸನ್ನ ಕೃಷ್ಣ ಕೊರವಂಜಿಯ ಕಥೆ ಯಕ್ಷಗಾನಗಳು ಚಂದ್ರಸಾಗರ ವರ್ಣಿಯ (೧೭೭೫-೧೮೭೦) ಮನ್ಮಥ ಕೊರವಂಜಿ ವಸುದೇವ ಪಾರಿಜಾತಗಳು ರಾಮಣ್ಣನ (ಸು.೧೭೨೦) ಪದ್ಮಾವತಿ ಕೊರವಂಜಿ ಯಕ್ಷಗಾನ, ವೆಂಕನ (ಸು.೧೮೦೦) ಪಾರ್ವತಿ ಕೊರವಂಜಿಯ ಯಕ್ಷಗಾನ, ಅನಂತನಾಥ ಕವಿಯ (ಸು.೧೮೦೦) ಮನ್ಮಥ ಕೊರವಂಜಿ ಯಕ್ಷಗಾನ ಮತ್ತು ಕವಿಯ ಹೆಸರು ಗೊತ್ತಿಲ್ಲದ (ಸು.೧೭೧೦) ಕರ್ನಾಟಕ ಕೊರವಂಜಿ (ಸು.೧೮೨೦)ರ ಪ್ರಸನ್ನ ಕೃಷ್ಣಕೊರವಂಜಿ ಅಥವಾ ನವ ಪಾರಿಜಾತ ಯಕ್ಷಗಾನ (ಸು.೧೮೩೦)ರ ಅಮ್ಮಣ್ಣ ಪಾರಿಜಾತ ಯಕ್ಷಗಾನ ಮುಂತಾದ ಪ್ರತಿಗಳೆಲ್ಲವು

ಅಪರಾಳ ತಮ್ಮಣ್ಣನ ಕೃತಿ (೧೮೩೦)ಗಿಂತಲೂ ಮೊದಲೇ ರಚಿತವಾಗಿವೆ. ಅವನಿಗಿಂತ ಪೂರ್ವದಲ್ಲಿ ಸುಮಾರು ಒಂದು ನೂರು ವರ್ಷದ ಪರಂಪರೆ ಇದೆ.[೧೨೫]

ಈ ಪರಂಪರೆಗೆ ಜನಪದರಲ್ಲಿ ಅಂದು ಇದ್ದ ಪ್ರಭಾವವೇ ಕಾರಣವಾಗಿದೆ. ಮೇಲೆ ಹೇಳಿದ ಎಲ್ಲ ಅಂಶಗಳು ಕೊರವಂಜಿ ಯಕ್ಷಗಾನಕ್ಕೆ ಪ್ರವೇಶ ಪಡೆದ ಸಂದರ್ಭವನ್ನು ಹೇಳುತ್ತಿವೆಯೇ ಹೊರತು ಕೊರವಂಜಿ ಕನ್ನಡ ನೆಲದಲ್ಲಿ ಕಾಣಿಸಿಕೊಂಡ ಬಗ್ಗೆ ಅಲ್ಲ. ಒಟ್ಟಿನ ಮೇಲೆ ಕನ್ನಡ ಸಾಹಿತ್ಯದಲ್ಲಿ ಪಾರಿಜಾತ, ಕೊರವಂಜಿ, ಸತ್ಯಭಾಮಾ ಸಂಬಂಧ ಹೊಂದಿದ ಹಿರಿಯ ಮೊತ್ತದ ಸಾಹಿತ್ಯ ಸೃಷ್ಟಿಯಾಗಿದೆ. (ಸು.೧೭೦೦ ರಿಂದ ೧೯೫೦ರವರೆಗೆ) ಇನ್ನೂರು ಇನ್ನೂರೈವತ್ತು ವರ್ಷಗಳ ಅವಧಿಯಲ್ಲಿ ೨೫ಕ್ಕಿಂತ ಹೆಚ್ಚು ಕೃತಿಗಳು ಹುಟ್ಟಿವೆ.[೧೨೬] ಹೀಗೆ ಶಿವಶರಣರ ಮತ್ತು ಹರಿದಾಸರ ಸಾಮಾಜಿಕ ಆಂದೋಲನದ ಕಾರಣ ಸಮಾಜದ ಎಲ್ಲ ವರ್ಗಗಳ ಜನರನ್ನು ಅಲ್ಲಿ ಸಮಾವೇಶಗೊಳಿಸ ಬೇಕಾದುದರ ಸಲುವಾಗಿ ಅವರಲ್ಲಿ ಜನಜನಿತವಾಗಿದ್ದ ಕೋಲುಪದ, ಗೊಂದಲಹಾಡು, ಕಣಿಹಾಡು, ಚಂದಮಾಮ ಪದ ಮುಂತಾದವುಗಳಲ್ಲಿ ಕೊರವಂಜಿ ಸಾಹಿತ್ಯದ ಮೂಲಕ ಪಾರಮಾರ್ಥಿಕ ವಿಷಯಗಳನ್ನು ತಿಳಿಸುವಲ್ಲಿ ಮುಂದಾದರು. ಜೈನ ಸಾಹಿತ್ಯದಲ್ಲಿ ಪ್ರಾಣಿ, ಪಕ್ಷಿ, ಕಥೆಗಳ ಮೂಲಕ ಧರ್ಮದ ತಿರುಳನ್ನು ಪ್ರತಿಪಾದಿಸುವಂತೆ ಕಣಿ, ಶಕುನ, ಇಲ್ಲವೆ ಭವಿಷ್ಯ ಹೇಳುವ ನೆಪದಲ್ಲಿ ಶ್ರೀಸಾಮಾನ್ಯನ ಮನಸ್ಸನ್ನು ವಶೀಕರಿಸಿಕೊಂಡು ತಮ್ಮ ತತ್ತ್ವ ಸಿದ್ಧಾಂತಗಳನ್ನು ತಿಳಿಯಪಡಿಸುವ ಉದ್ದೇಶದಿಂದ ವಚನ ಮತ್ತು ದಾಸಸಾಹಿತ್ಯದಲ್ಲಿ ಒಂದು ಮಾಧ್ಯಮ ವೆಂಬಂತೆ ರಚನೆಯಾಗಿದೆ.

## ೫.೬. ಉದ್ದಾಳಿಕನ ಕಥೆ

ಉದ್ದಾಳಿಕನ ಕಥೆ ಒಂದು ಹಾಡುಗಬ್ಬ. ಅದು ಪೌರಾಣಿಕ ವಸ್ತುವಿಗೆ ಸಂಬಂಧಿಸಿದೆ. ಗದ್ದೆಗೆ ಹರಿಯುತ್ತಿದ್ದ ನೀರನ್ನು ತಡೆಯಲು ಪ್ರವಾಹಕ್ಕೆ ಅಡ್ಡ ಮಲಗಿ ನೀರಿನಿಂದ ಎದ್ದು ಬಂದ ಆಪೋದಮುನಿ ಪುತ್ರನಾದ ಧೌಮ ಮುನಿಯ ಶಿಷ್ಯ ಉದ್ದಾಲಕ ಮತ್ತು ಜೈಮಿನಿ ಭಾರತದ ಚಂಡಿಯ ಗಂಡ ಉದ್ದಾಲಕರು ಪುರಾಣ ಪ್ರಸಿದ್ಧರು. ಆದರೆ ಗಿರಿಯಮ್ಮನ ಕಥೆಯ ನಾಯಕ ಉದ್ದಾಳೀಕ ಮೇಲಿನ ಇಬ್ಬರಿಂದಲೂ ಭಿನ್ನವಾದ ವ್ಯಕ್ತಿಯಾಗಿದ್ದಾನೆ. ಈ ಕಥೆಯ ವಸ್ತುವನ್ನು ಕವಿಯಿತ್ರಿ ಗಿರಿಯಮ್ಮ ಎಲ್ಲಿಂದ ಸ್ವೀಕರಿಸಿದಳು ಎಂಬುದು ಸ್ಪಷ್ಟವಿಲ್ಲ. ಇದು ಸಂಪೂರ್ಣ ಗಿರಿಯಮ್ಮಳ ಸ್ವಂತ ಕಲ್ಪನೆಯೋ ತಿಳಿಯುವುದಿಲ್ಲ.

ಸಾಂಗತ್ಯದ ಮಟ್ಟಿನಲ್ಲಿ ೪೪೮ ನುಡಿಗಳಲ್ಲಿ ರಚನೆಯಾಗಿರುವ ಹಾಡುಗಬ್ಬ 'ಉದ್ದಾಳಿಕನ ಕಥೆ'. ಇಲ್ಲಿ ಮೂಲ ಸ್ಪಷ್ಟವಾಗಿ ತಿಳಿಯುವುದಿಲ್ಲ. ಗಿರಿಯಮ್ಮ ಮೊದಲಿಗೆ ಆರಂಭದಲ್ಲಿ ವಿನಾಯಕ ಶಾರದೆ ನಿಲಾಬ್ಜಿಯ ಲಿಂಗ, ಸಾದುಸಜ್ಜನರು, ಗುರುಹಿರಿಯರನ್ನು ಸ್ಮರಿಸಿ, ವಂದಿಸಿ ಕಥೆಯನ್ನು ಪ್ರಾರಂಭಿಸಿದ್ದಾರೆ.

ಓಣ್ಯೊಳು ಚೆಲ್ಲಿದ ಅಣಿಮುತ್ತಾರಿಸಿ ನೂಲಿಗೆ ಪೋಣಿಸಿದಂತೆ
ಯೋಗಿಗಳರಸಸುದ್ದಾಳಿಕನ ಕಥೆಯನು ಹೇಳುವೆ ಚರಿತೆಯ ಮಾಡಿ[೧೨೮]

ಎಂದು ಹೇಳಿ ಗಿರಿಯಮ್ಮ ನೇರವಾಗಿ ಕಥೆಯನ್ನು ಆರಂಭಿಸುತ್ತಾಳೆ. ವೇದ ವೇದಾಂತ ಪಾರಂಗತನಾದ ಮುನಿ ಹಾಗೂ ಸಾದುಸಜ್ಜನ ಸತಿಯರ ಕುಲರತ್ನವೆನಿಸಿದ ಆತನ ಪತ್ನಿಯರ ಮಗನಾಗಿ ಉದ್ದಾಳಿಕನು ಹುಟ್ಟುತ್ತಾನೆ.

ಸತಿ ಪುರುಷರು ಸಂತೋಷದಲಿರುತಿರೆ
ಸುತಜನಿಸಿದ ಉದ್ದಾಳಿಕ
ಅಲೆ ಹರುಷದಿ ಜಾಕಕರ್ಮ ನಾಮಕರಣ ಸುತಗೆ
ಮಾಡಿದ ಕ್ರಮದಿಂದ[೧೨೯]

ಮುನಿ ದಂಪತಿಗಳು ಸಂತೋಷದಿಂದಿರಲು ಹುಟ್ಟಿದ ಪುತ್ರನಿಗೆ ಉದ್ದಾಳಿಕ ಎಂದು ಹೆಸರಿಟ್ಟು ಅತಿಹರ್ಷದಿಂದ ಮಗುವಿಗೆ ಜಾತಕರ್ಮ ಮತ್ತು ನಾಮಕರಣ ಕ್ರಮದಿಂದ ಜರುಗಿದವು. ಉದ್ದಾಳಿಕ ಚಿಕ್ಕವನಿರುವಾಗಲೇ ಮುನಿ ದಂಪತಿಗಳು ಸಾವನಪ್ಪಿ ಹರಿಪಾದವನ್ನು ಸೇರುತ್ತಾರೆ.

ಗುರು ಕುಲವಾಸವ ಮಾಡಿ ಉದ್ದಾಳಿಕ ಕಲಿತನೆ
ನಾಲ್ಕು ವೇದಗಳ
ಅಜ ಹರಹರಿಯ ಮೆಚ್ಚಿಸುವೆ ಎಂದೆನುತಲೆ
ಘನ ತಪವನಕಾಗಿ ನಡೆದ[೧೩೦]

ತಂದೆ ತಾಯಿಗಳನ್ನು ಕಳೆದುಕೊಂಡು ಅನಾಥನಾದ ಉದ್ದಾಳಿಕನು ಗುರುಕುಲ ವಾಸದಲ್ಲಿದ್ದು ವಿದ್ಯಾಭ್ಯಾಸ ಮಾಡಿ ನಾಲ್ಕು ವೇದಗಳನ್ನು ಕಲಿತು ಅಜ-ಹರಿ-ಹರರನ್ನು ಮೆಚ್ಚಿಸುತ್ತೇನೆಂದು ತಪಸ್ಸಿಗೆ ಹೋಗುತ್ತಾನೆ. ಅರುವತ್ತು ಸಾವಿರ ವರ್ಷಗಳ ಕಾಲ ತಪಸ್ಸಿನಲ್ಲೇ ಕಳೆಯುತ್ತಾನೆ. ಇತ್ತ ಕೌಸಲ್ಯ ದೇಶದ ಅಯೋಧ್ಯಾ ಪಟ್ಟಣದಲ್ಲಿ ರಾಜ್ಯವಾಳುತ್ತಿದ್ದ ರಾಘುರಾಯನಿಗೆ ಆತನ ಪಟ್ಟದರಸಿಯಲ್ಲಿ ಅಜಭೂಪನೆಂಬ ಕುಮಾರನೂ 'ಚಿಪ್ಪಿನೊಳ್ ಮುತ್ತು ಮೂಡುವ ತೆರನಂತೆ ಪುತ್ರಿ ಹುಟ್ಟಿದಳ್ ಚಂದ್ರಾವತಿಯು.

ನಡೆದರೆ ದಿಟ್ಟಿ ತಾರೇತೆಂದು ಕುಮಾರಿಗೆ ನುಡಿದರೆ
ಬಡವಾದಾಳೆಂದು
ಮಡಿಯ ಭಾರಕೆ ಸೆಳೆನಡುವು ನೊಂದೀತೆಂದು
ಕಡು ಹರುಷದಲಿ ಹಿಗ್ಗಿದರು.[೧೩೧]

ನಡೆದಾಡಿದರೆ ದೃಷ್ಟಿ ತಾಕುತ್ತದೆ ಎಂಬಂತೆ ತುಂಬ ಮುದ್ದಿನಿಂದ ಸಾಕಿದ ರಾಘುರಾಯ ಮಗಳಿಗೆ ಸಾಹಿತ್ಯ, ಸಂಗೀತ, ನೃತ್ಯ, ಇತ್ಯಾದಿ ವಿದ್ಯೆಗಳನ್ನೆಲ್ಲ ಕಲಿಸುತ್ತಾನೆ.

ಅಕ್ಷರಾಭ್ಯಾಸವ ಮಾಡಿಸಿ ಕುಮಾರಿಗೆ ನರ್ತನ ಗೀತವ ಕಲಿಸಿ
ಉತ್ತಮ ನಾಟಕ ಕವಿ ಶಾಸ್ತ್ರವ

ಪುತ್ರಿಗಭ್ಯಾಸ ಮಾಡಿಸಿದ
ಸತ್ಯ ಲೋಕ ತಪೋ ಲೋಕವ ಚರಿಸುತ್ತ ಹೊಕ್ಕನೆ
ಯವ ಲೋಕವನು
ಬೆಕ್ಕಿನ ಬಾಯ ಮೂಷಕದಂತೆ ಮಿಡುಕತಲಿಪ್ಪ
ಜೀವಿಗಳ ತಾಕಂಡ[೧೩೨]

ಅದೇ ಹೊತ್ತಿಗೆ ಕೌಶಿಕ ಮುನಿ ಸತ್ಯ ಲೋಕ ತಪೋ ಲೋಕಗಳನ್ನು ಸಂಚರಿಸುತ್ತ ಯಮ ಲೋಕಕ್ಕೆ ಬಂದಾಗ 'ನರಕದಲ್ಲಿ ಬೆಕ್ಕಿನ ಬಾಯ ಮೂಷಕದಂತೆ' ಮಿಡುಕುತ್ತಿದ್ದ ಉದ್ದಾಳಿಕನ ಮಾತಾಪಿತೃಗಳು ಕಾಣಸುತ್ತಾರೆ. ಕೌಶಿಕ ಮುನಿ ಈ ಮುನಿದಂಪತಿಗಳಿಗೆ ನಿಮಗೇಕೀಗತಿಯಾಯ್ತೆಂದು ವಿಚಾರಿಸಿದಾಗ 'ಸುತರಿಲ್ಲದೆ ಸದ್ಗತಿಯಿಲ್ಲ'ವೆಂದು ಶ್ರುತಿ ಹೇಳುವಂತೆ ನಮಗೀಗತಿ ಬಂದಿದೆ. ನಮ್ಮ ಸಂತತಿಯ ಮಗನಾದ ಉದ್ದಾಳಿಕನಿಗೆ ಮದುವೆಯಾಗಿ ಮಕ್ಕಳನ್ನು ಪಡೆಯುವಂತೆ ಹೇಳಿರಿ ಎಂದು ಕೇಳಿಕೊಳ್ಳುತ್ತಾರೆ.

ಉತ್ತಮಳಾಗಿರ್ಪ ಸತಿಯಳನೊಳಗೊಂಡು ಪುತ್ರ
ಸಂತಾನವ ಪಡೆದು
ಕಳತ್ರಿಯನೊಡೆಗೊಂಡು ಯಜ್ಞವ ಮಾಡಿದರೆ ಸತ್ಯ
ಅವರಿಗೆ ಸ್ವರ್ಗಲೋಕ[೧೩೩]

ಅದರಂತೆ ಕೌಶಿಕ ಮುನಿಯು ಬಂದು ಉದ್ದಳಿಕನಿಗೆ ಹೇಳಿದನು. ತನ್ನ ಮಾತಾಪಿತೃಗಳು ನರಕದಲ್ಲಿರುವುದನ್ನು ತಿಳಿದು ಉದ್ದಾಳಿಕನು ಪ್ರಾರಬ್ಧವನ್ನು ಬರೆದಂಥ ವಿಧಿಯನ್ನೇ ಕೇಳುವೆನೆಂದು ಬ್ರಹ್ಮನ ಬಳಿಗೆ ಹೋಗುತ್ತಾನೆ. ಉದ್ದಾಳಿಕನು ನಾನು ಕೇಳಿದ ಸಂಗತಿ ನಿಜವೆ? ಎಂದು ಬ್ರಹ್ಮನಿಗೆ ತನ್ನ ಪಿತೃಗಳ ವಿಚಾರವಾಗಿ ಕೇಳಲು ಬ್ರಹ್ಮನು ಅಹುದು ನಿಜವೆಂದನು.

ಜರೆ ಅಡರಿ ನೆರೆಪರಿಗಳು ಬಂದವು ಸಡಲಿದವು ದಂತಪಂಕ್ತಿ
ಕೊಡುವವರಾರು ಕರ್ನಿಕೆಯೆಂದು ಮುನಿಪನು
ಕಮಲಭವನ ಬೆಸಗೊಂಡ
ಬ್ರಹ್ಮನು ಕನ್ಯೆ ಯಾರು ಎಂಬುದನಷ್ಟೇ ಅಲ್ಲ ಮುಂದಾಗುವುದನ್ನೆಲ್ಲ ಅರುಹಿದನು.
ಉತ್ತಮ ರಘುಕಾಲ ರಘುರಾಯನಾತ್ಮಜೆ ಇಪ್ಪಳು ಕರ್ನಿಕೆಯಾಗಿ
ಪುತ್ರ ಹುಟ್ಟಿದ ಏಳು ವರುಷಕ್ಕೆ ಪತ್ನಿಯು
ದೃಷ್ಟಿಗೋಚರಕೆ ಬೀಳುವಳು
ನಿಂದ್ಯ ಹೊರುವಳಾರುಂದ್ಯಾದಲಿಡುವರು
ಕಂದ ಹುಟ್ಟುವ ನಾಶಿಕೇತು
ಅಂದೆ ನಿಮ್ಮ ಪಿತೃಗಳಿಗೊಯ್ಕಂಠವಹುದು
ಸಂದೇಹಬೇಡ ಹೋಗೆಂದ[೧೩೪]

ಉತ್ತಮ ರಘುಕುಲ ರಘುರಾಯನಾತ್ಮಜೆ ಇಪ್ಪಳು ಕನ್ನಿಕೆಯಾಗಿ ಅವಳಿಂದ ಉದ್ದಾಳಿಕನಿಗೆ ಸಂತಾನ ಪ್ರಾಪ್ತಿಯಾಗುವುದೆಂದೂ 'ಪುತ್ರಹುಟ್ಟಿದ ಏಳೂ ವರ್ಷಕ್ಕೆ ಪತ್ನಿಯು ದೃಷ್ಟಿಗೋಚರಕೆ ಬೀಳುವಳು ಎಂದು ಬ್ರಹ್ಮನು ಭರವಸೆ ನೀಡುವನು.

ಮೀರಬಾರದು ಹರಿಯ ಕುಮಾರನ ಲಿಖಿತವ
ನಾರಿ ತಾನಾಘ್ರಾಣಿಸಿದಳು
ಏರಿತು ಉತ್ತಮಾಂಗದಲಿ ಆ ಗರ್ಭವು ನಾಭಿಯ
ಕಮಲಕಿಳಿದವು.[೧೩೫]

ಅದರಂತೆ ಒಮ್ಮೆ ನೀರಾಟಕ್ಕೆಂದು ಸಖಿಯರೊಡನೆ ಹೊಳೆಗೆ ಹೋದ ಚಂದ್ರಾವತಿಯು ಉದ್ದಾಳಿಕ ಮುನಿ ತೇಲಿಬಿಟ್ಟ ಕಮಲದ ಹೂವನ್ನು ವಿಧಿವಶದಿಂದ ಆಘ್ರಾಣಿಸುತ್ತಾಳೆ. 'ಉತ್ತಮಾಂಗದಲಿ ಆ ಗರ್ಭವು ನಾಭಿಯ ಕಮಲಕೆ ಇಳಿಯಿತು' ಅವಳಿಗೂ ತಿಳಿಯದೆ ಗರ್ಭಧರಿಸುತ್ತಾಳೆ. ಮಗಳು ಗರ್ಭಿಣಿಯಾದ ವಿಷಯವನ್ನು ತಿಳಿದ ತಂದೆ ತಾಯಿಯರು ಕಂಗಾಲಾದರು. ತಂದೆ ತಾಯಿ ಮರ್ಯಾದಗೆ ಅಂಜಿ ಗರ್ಭಿಣಿಯಾದ ಅವಿವಾಹಿತ ಮಗಳು ಚಂದ್ರಾವತಿಯನ್ನು ಕಾಡಿನಲ್ಲಿ ಕೊಂದು ಬರುವುದೆಂದು ರಾಜಾಜ್ಞೆಯಾಯಿತು. ಆದರೆ ಮಂತ್ರಿಯು ಗುಪ್ತ ಆಣತಿಯಂತೆ ರಾಜಕುಮಾರಿಯಾದ ಚಂದ್ರಾವತಿಯ ಶಿರವನರಿಯದೆ ಹಾಗೇ ಬಿಟ್ಟು ಬನ್ನಿರೆಂದು ಗುಪ್ತವಾಗಿ ಹೇಳಿದನು. ಕಟುಕರಿಗೂ ಕರುಣೆ ಹುಟ್ಟಿತು. ಚಂದ್ರಾವತಿಯನ್ನು ಅರಣ್ಯದಲ್ಲಿ ಬಿಟ್ಟು ಬಂದರು. ಅವಳು ವಿಧ ವಿಧವಾಗಿ ದೇವರನ್ನು ಸ್ತುತಿಸುತ್ತ ಹಲುಬುತ್ತಲಿದ್ದಳು. ಆಗ ಗೌತಮ ಋಷಿಗಳು ಅಲ್ಲಿಗೆ ಬಂದು ಹಲುಬುತ್ತಿದ್ದ ಅನಾಥ ಬಾಲೆಯನ್ನು ತನ್ನ ಆಶ್ರಮಕ್ಕೆ ಕರೆದೊಯ್ಯುತ್ತಾರೆ. ಋಷಿಗಳ ಆಶ್ರಮದಲ್ಲಿ ನವ ಮಾಸಗಳು ತುಂಬಿ ಚಂದ್ರಾವತಿ ಪುತ್ರನನ್ನು ಪಡೆದಳು. ಜಾತಿಸೂಚಕ ವಿಲ್ಲದಂತೆ ಮಗು ನಾಸಿಕದಿಂದ ಉದಿಸಿತು. ಉದ್ದಾಳಿಕನ ತಂದೆ ತಾಯಿಯರು ತಮ್ಮ ವಂಶದಲ್ಲಿ ಪುತ್ರನು ಜನಿಸಿದ್ದರಿಂದ ಉದ್ಧಾರಗೊಂಡು ಸ್ವರ್ಗಲೋಕಕ್ಕೆ ನಡೆದರು.

ಜಾತಿ ಸೂತಕವಿಲ್ಲ ಆ ತಪಮುನಿಸುತ ನಾಸಿಕದಿಂದುದಿಸಿದನು
ಭೂತಳದೊಳಗಿದು ಆಶ್ಚರ್ಯವೆನುತಲೆ ಕಾಂತೇರ್ ವಿಸ್ಮಯವಾದರಲಿ
ನಾಲ್ಕು ವೇದಗಳ ಆಚರಿಸುವ ಆಜನಂತೆ ಶಾಂತತ್ವದಲಿ ಶಿವನಂತೆ
ರೂಪು ಲಾವಣ್ಯದಿ ಲಕ್ಷ್ಮಿಯ ಪತಿಯಂತೆ ನಾಶಿಕೇತವತರಿಸಿದನು.
ಹೆಚ್ಚಿ ಹಿಗ್ಗಿ ನಲಿದರು ಉದ್ದಾಳಿಕನ ಹೆತ್ತ ತಾಯಿ ಪಿತಾಮಹರು
ಪುತ್ರ ಹುಟ್ಟಿದ ನಮ್ಮ ಕುಲದೊಳಗೆನುತಲೆ ಹೊಕ್ಕರೆ ಸ್ವರ್ಗ ಲೋಕವನು[೧೩೬]

ಕಥೆಯ ಮೊದಲ ಭಾಗ ಇಲ್ಲಿಗೆ ಮುಗಿದು ಎರಡನೆಯ ಭಾಗ ಪ್ರಾರಂಭವಾಗುತ್ತದೆ. ತಂದೆ ಇಲ್ಲದ ಮಗುವನ್ನು ಸಾಕಲಾರದೆ ಚಂದ್ರಾವತಿ ಬೇಸತ್ತು ಮಗುವನ್ನು ಬಾಳೆ ತೊಟ್ಟಿಲಲ್ಲಿಟ್ಟು ಹರಿವ ನೀರಿನಲ್ಲಿ ತೇಲಿ ಬಿಡುತ್ತಾಳೆ. ಆ ಮಗು ವಿಧಿಲಿಖಿತದಂತೆ ಉದ್ದಾಲೀಕ ಮುನಿಗೆ ದೊರೆಯುತ್ತದೆ. ತೇಲಿಬಂದ ಮಗುವಿನ ಚಿತ್ರ ಒಂದೇ ನುಡಿಯಲ್ಲಿ ಸುಂದರವಾಗಿ ಮೂಡಿಬಂದಿದೆ.

ಸಣ್ಣಬೆರಳು ತನ್ನ ಬಾಯೊಳಗಿರಿಸಿದೆ ಕಣ್ಣ
ಮುಚ್ಚುತ ತೆರವುತಲೆ
ಪೊನ್ನ ಪುತ್ಥಳಿಯಂತೆ ಥಳ ಥಳಿಸುವ ಪುಟ್ಟ
ಚಿಣ್ಣನ ತೊಟ್ಟಿಲ ಕಂಡ

ವಿಧಿ ಲಿಖಿತದಂತೆ ಮಗು ದೊರಕಿದ ಏಳು ವರ್ಷಗಳ ನಂತರ ಕಾಡಿನಲ್ಲಿ ಅಲೆಯುತ್ತಿದ್ದ ಚಂದ್ರಾವತಿಯನ್ನು ಉದ್ದಾಳಿಕನು ಕಂಡನು ಅಲ್ಲಿಂದ ಆಶ್ರಮದ ಮುನಿಗಳು ಸೇರಿ ನಡೆದ ಎಲ್ಲ ವಿಷಯವನ್ನು ತಿಳಿದು ರಾಜನ ಆಸ್ಥಾನಕ್ಕೆ ಬಂದು ಚಂದ್ರಾವತಿ ಮತ್ತು ಉದ್ದಾಳಿಕನ ವಿವಾಹವನ್ನು ನೆರವೇರಿಸಬೇಕೆಂದು ಕೇಳಿಕೊಂಡರು. ಉದ್ದಾಳಿಕನು ಪುನಃ ನವ ಯೌವ್ವನ ವನ್ನು, ರಾಜ್ಯವನ್ನು ಪಡೆದು ವಿವಾಹವಾಗಿ ಸತಿಸುತರೊಡನೆ ಸಕಲ ಸುಖಗಳನ್ನು ಅನುಭವಿಸಿದ ಎಂದು ಕಥೆ ಸುಖಾಂತವಾಗಿ ಕೊನೆಗೊಳ್ಳುತ್ತದೆ. ಉದ್ದಾಳೀಕನ ಕಥೆಯಲ್ಲಿ ವರ್ಣನೆಗಳಲ್ಲಿಯೂ ಹೆಳವನಕಟ್ಟೆ ಗಿರಿಯಮ್ಮನ ಜಾಣ್ಮೆ ಎದ್ದು ಕಾಣುತ್ತದೆ. ಚಂದ್ರಾವತಿಯ ಸ್ತ್ರೀ ಸಹಜ ಸೌಂದರ್ಯವನ್ನು ನೋಡಿ ಈ ರೀತಿ ವರ್ಣನೆ ಮಾಡುತ್ತಾ ಹೇಳುತ್ತಾಳೆ.

ನಡಿಗೆ ನವಿಲು ನಾಚಿ ತಲೆಯಲ ತಗ್ಗಿಸಿದವು
ನುಡಿಗೆ ಅರಗಿಣಿಯು ನಾಚಿದವು
ಮಡದಿಯ ಕಡೆಗಣ್ಣಿಗೆ ಮಿಂಚು ನಾಚಿಯೆ
ಅಡಗಿದುವಂಬರದಲ್ಲಿ[೧೩೭]

ಚಂದ್ರಾವತಿ ಗೆಳತಿಯರೊಂದಿಗೆ ನೀರಾಟಕ್ಕೆ ಹೊರಟ ಸಂಭ್ರಮ, ಜಲಕ್ರೀಡೆಯ ಪರಿ ಇವುಗಳನ್ನು ಗಿರಿಯಮ್ಮ ಬಹು ಉತ್ಸಾಹದಿಂದ ವರ್ಣಿಸಿದ್ದಾಳೆ. ಜಲಕ್ರೀಡೆ ಮುಗಿಸಿ ಬಂದ ಕೆಲದಿನದ ಮೇಲೆ ಚಂದ್ರಾವತಿ

'ಮಂಚದಿಂದಿಳಿಯಲು ಮಂಡೆಯಕಟ್ಟಳು
ದುಂಡು ಮಲ್ಲಿಗೆಯ ಮುಡಿಯಳು
ಖಂಡ ಸಕ್ಕರೆ ನೊರೆ ಹಾಲು ಪರಮಾನ್ನವ ಕಂಡರೆ ಮುಖದಿರುಹುವಳು[೧೩೮]

ವಿಷಯ ತಿಳಿದ ಚಂದ್ರಾವತಿಯ ತಾಯಿ ಓಡಿ ಬಂದು ಮಗಳನ್ನು ಬಿಗಿದಪ್ಪಿ ದುಗುಡವೇನು ಎಂದು ವಿಚಾರಿಸುತ್ತಾಳೆ. ಬೆಚ್ಚಿದಳೊ ಜಲಧೀಲಿ ಕುಮಾರಿಯು ದೃಷ್ಟಿ ತಾಕಿತೊ ಬಹುಜನರ, ಎಂದೆಲ್ಲಾ ಚಿಂತಿಸಿ ಹರಕೆ ಹೊರುತ್ತಾಳೆ. ತಾಯಿ ಹೃದಯದ ಮಮತೆ ಆತಂಕಗಳು ಬಹು ಸಹಜವಾಗಿ ಇಲ್ಲಿ ವ್ಯಕ್ತವಾಗಿವೆ. ಕಡೆಗೂ ಮಗಳು ಗರ್ಭವತಿ ಎಂದು ತಿಳಿಯುತ್ತದೆ. ಗಂಡು ನೋಣವು ಸುಳಿಯದಿರುವಾಗ ಇದು ಆದದ್ದು ಹೇಗೆ ಎಂದು ಯಾರಿಗೂ ತಿಳಿಯುವುದಿಲ್ಲ. ರಾಜನಂತು 'ನೀಗುವೆ ಹರಣವ ಎನುತ ಕೈಯಲಗನು ನೀಡಿದ ತನ್ನ ಮಸ್ತಕಕೆ' ಕಡೆಗೆ ಜನ ಅಪವಾದಕ್ಕೆ ಹೆದರಿ ಊಳಿಗದವರನ್ನು ಕರೆದು 'ಅರಣ್ಯದಿ ಶಿರವರಿದು ಬನ್ನಿ' ಎಂದು ಆಜ್ಞೆ ಮಾಡುತ್ತಾನೆ. ಅವಿವಾಹಿತಳಾದ ಮಗಳು ಗರ್ಭಿಣಿ ಎಂದು

ತಿಳಿದಾಗ ತಂದೆ ತಾಯಿಯರಿಗಾಗುವ ಆಘಾತ, ಭಯ, ಚಿಂತೆಗಳನ್ನು ಗಿರಿಯಮ್ಮ ಹೃದಯ ದ್ರವಿಸುವಂತೆ ವರ್ಣಿಸಿದ್ದಾಳೆ. ಅರಣ್ಯದಲ್ಲಿ ಚಂದ್ರಾವತಿಯನ್ನು ಕಂಡ ಗೌತಮ ಮುನಿ ಆಕೆಯನ್ನು ತನ್ನ ಆಶ್ರಮಕ್ಕೆ ಕರೆತರುತ್ತಾನೆ. ಚಂದ್ರಾವತಿಯನ್ನು ನೋಡಿದ ಮುನಿಪತ್ನಿ

ಚರ್ಮದ್ವಾಸಿಗೆ ತರಗೆಲೆ ಮಂದಿರ ಉಡುವುದು ನಾರಿನೊಸ್ತ್ರವನು
ಇಡುವಾಭರಣ ವಿಭೂತಿ ರುದ್ರಾಕ್ಷಿಗೆ ಮಡದಿರಿಬ್ಬರು ಯಾತಕೆಂದು[೧೩೯]

ಕೇಳುತ್ತಾಳೆ. ಸ್ತ್ರೀ ಸಹಜ ಮಾತ್ಸರ್ಯ ಅವಳಲ್ಲಿ ಮೂಡುವುದು ಕಂಡುಬರುತ್ತದೆ. ಮುನಿ 'ಮಗಳ ತಂದೆಯ ನಿನಗೊಬ್ಬಳ' ಎಂದು ಹೇಳಿದ ಮೇಲೆ ಸಂತೋಷದಿಂದ ಅವಳನ್ನು ಸ್ವಾಗತಿಸುತ್ತಾಳೆ. ದಿನ ತುಂಬಿ ಮಗು ಜನಿಸುತ್ತದೆ.

"ಕಟ್ಟಿದರು ಮಂಡೆಯ ಪಾವುಡೆಯಲಿ ಕೊಟ್ಟರೆ ಖಾರ ಚರ್ವಣೆಯ
ಇಟ್ಟರೆ ಅಷ್ಟ ದಿಕ್ಕಿಗೆ ಎಂಟು ರಕ್ಷೆಯ ಹರಸಿ ಆರ ತಿಯನೆತ್ತಿದರು".[೧೪೦]

ಗಿರಿಯಮ್ಮ ಇಲ್ಲಿ ವಿವರವಾಗಿ ಸಾಂಪ್ರದಾಯಿಕ ಆಚರಣೆಗಳನ್ನು ಹೇಳುತ್ತಾಳೆ. ಮಗು ಬೆಳೆದು 'ತಾತನ ತೋರೆಂದರೆ' ಎಂಬ ಭಯದಿಂದ ಚಂದ್ರಾವತಿ ಮಗುವನ್ನು ಹರಿಯುವ ನೀರಿನೊಳಗೆ ಬಿಡುತ್ತಾಳೆ. ಇತ್ತ ಉದ್ದಾಳೀಕ ಮುನಿ ನದಿಗೆ ಬಂದವನು

ಸಣ್ಣ ಬೆರಳು ತನ್ನ ಬಾಯೊಳಗಿರಿಸಿದೆ ಕಣ್ಣ ಮುಚ್ಚುತ ತೆರವುತಲೆ
ಪೊನ್ನ ಪುತ್ಥಳಿಯಂತೆ ಥಳಥಳಿಸುವ ಪುಟ್ಟ ಚಿಣ್ಣನ ತೊಟ್ಟಿಲ ಕಂಡ[೧೪೧]

ಹೀಗೆ ತೊಟ್ಟಿಲಲ್ಲಿ ತೇಲುತ್ತ ಬರುವ ಮಗುವನ್ನು ಕಂಡು ಉದ್ದಾಳಿಕನು ತನ್ನ ಆತ್ಮಜನೇ ಇವನು ಎಂದು ಗುರುತಿಸಿ ಮನೆಗೆ ತಂದು ಸಾಕುತ್ತಾನೆ. ಮಗುವಿನ 'ಬಾಲಲೀಲೆ'ಯನ್ನು ಉದ್ದಾಳಿಕನ ಪಿತೃ ವಾತ್ಸಲ್ಯವನ್ನು ಗಿರಿಯಮ್ಮ ಬಹು ಸೊಗಸಾಗಿ ಚಿತ್ರಿಸಿದ್ದಾಳೆ. ಕಾವ್ಯದ ಉದ್ದಕ್ಕೂ ಹೀಗೆ ಗಿರಿಯಮ್ಮಳು ಮನುಷ್ಯ ಲೋಕದ ಕಷ್ಟ ಸುಖ ಆನಂದಗಳನ್ನು ಸಹಜವಾಗಿ ನಿರೂಪಿಸಿದ್ದಾಳೆ. ಇಡೀ ಕಾವ್ಯದಲ್ಲಿ ಚಂದ್ರಾವತಿಯ ಪಾತ್ರ ಮನಸೆಳೆಯುತ್ತದೆ. ಯಾವ ತಪ್ಪು ಮಾಡದಿದ್ದರೂ ಹಲವು ಅಪವಾದ ನಿಂದೆಗಳಿಗೊಳಗಾಗಿ ಆಕೆ ಅನುಭವಿಸುವ ಯಾತನೆ ಮನಸ್ಸನ್ನು ಕರಿಗಿಸುತ್ತದೆ. ಸ್ತ್ರೀ ಹೃದಯದಿಂದ ಕೋಮಲಾಂತಃಕರಣವನ್ನು ಗಿರಿಯಮ್ಮ ಅರಿತು ನಿರೂಪಿಸಿದ್ದಾಳೆ.

ಪುತ್ರ ಸಂತಾನವಿಲ್ಲದೆ ವಂಶೋದ್ಧಾರವಾಗಲಾರದು ಮತ್ತು ವಿಧಿಲಿಖಿತವನ್ನು ಮೀರಲು ಯಾರಿಂದಲೂ ಸಾಧ್ಯವಿಲ್ಲ ಎಂಬ ಪ್ರಾಚೀನ ನಂಬಿಕೆಗಳನ್ನು ಆಧರಿಸಿರುವ ಈ ಸಾಂಗತ್ಯ ಕಾವ್ಯದ ಕಥನ ಕೌಶಲ ಅದ್ಭುತವಾಗಿದೆ. ಈ ಕಥೆಯಲ್ಲಿ ಅಯೋಧ್ಯೆಯ ರಸ ರಘುವಿನ ಮಗಳು ಚಂದ್ರಾವತಿ ಒಂದು ಸಲ ಕೊಳದಲ್ಲಿ ಸಖಿಯರೊಂದಿಗೆ ನೀರಾಟವಾಡುತ್ತಿರುತ್ತಾಳೆ. ಉದ್ದಾಳಿಕನು ಬ್ರಹ್ಮನ ಮಾತಿನಂತೆ ಒಂದು ಕಮಲದ ಹೂವನ್ನು ತೇಲಿಬಿಡುತ್ತಾನೆ. ಉದ್ದಾಳಿಕನ ಬಿಂದು ಸಡಿಲಿ ಕಮಲದ ಹೂವಿನ ಮೂಲಕ

ಹದಿನಾಲ್ಕು ಗಾವುದ ದೂರದಲ್ಲಿದ್ದ ಚಂದ್ರಾವತಿಯನ್ನು ತಲುಪುತ್ತದೆ. ನದಿಯಲ್ಲಿ ತೇಲಿಬಂದ ಹೂವನ್ನು ಹಿಡಿದು ಮೂಸಿ ನೋಡಿದ ಚಂದ್ರಾವತಿಯು ಗರ್ಭವತಿಯಾಗುತ್ತಾಳೆ. ರಾಜನು ಲೋಕಾಪವಾದಕ್ಕೆ ಹೆದರಿ ಅವಳನ್ನು ಕೊಂದು ಬರಲು ಭಟರಿಗೆ ಆಜ್ಞಾಪಿಸುತ್ತಾನೆ. ಭಟರು ಕರುಣೆಯಿಂದ ಅವಳನ್ನು ಕಾಡಿನಲ್ಲೇ ಬಿಟ್ಟು ಬರುತ್ತಾರೆ. ಚಂದ್ರಾವತಿ ಗೌತಮರ ಆಶ್ರಮಕ್ಕೆ ಸೇರಿ ಅಲ್ಲಿ ಗೌತಮರು ಅವಳ ಆರೈಕೆ ಮಾಡುವರು. ಅವಳಿಗೆ ನಾಶಿಕೇತನನೆಂಬ ಮಗುವಿನ ಜನನದ ಪರಿಣಾಮವಾಗಿ ಉದ್ದಾಳಿಕನ ಪಿತೃಗಳಿಗೆ ಸದ್ಗತಿ ದೊರಕುತ್ತದೆ. ಆ ಮಗುವನ್ನು ಚಂದ್ರಾವತಿ ನೀರಿನಲ್ಲಿ ತೇಲಿಬಿಡುತ್ತಾಳೆ. ಅದು ಉದ್ದಾಳಿಕನ ಕೈಗೆ ಸಿಗುತ್ತದೆ. ಏಳು ವರುಷಗಳ ನಂತರ ಅವಳು ಉದ್ದಾಳಿಕನ ಆಶ್ರಮಕ್ಕೆ ಬರುತ್ತಾಳೆ. ಋಷಿಗಳು ದಿಟ್ಟ ದೃಷ್ಟಿಯಿಂದ ತಿಳಿದು ರಾಜನಿಗೆ ಈ ವಿಷಯ ತಿಳಿಸುತ್ತಾರೆ. ರಾಜನು ಸಂತೋಷದಿಂದ ಇಬ್ಬರಿಗೂ ವಿವಾಹ ಮಾಡುತ್ತಾನೆ. ಇಬ್ಬರಿಗೂ ಪುನರ್ ಯೌವನ ಹಾಗೂ ರಾಜ್ಯ ಲಭಿಸುತ್ತದೆ. ಹೀಗೆ ಗಿರಿಯಮ್ಮ ಉದ್ದಾಳಿಕನ ಕಥೆಯನ್ನು ಒಂದು ಪುಟ್ಟ ಕಾವ್ಯವಾಗಿ ರೂಪಿಸಿದ್ದಾಳೆ. ಸುತರಿಲ್ಲದೆ ಸದ್ಗತಿಯಿಲ್ಲವೆಂಬ ಶ್ರುತಿ ತತ್ವ ಹಾಗೂ 'ವಿಧಿಲಿಖಿತ'ವನ್ನಾರೂ ಮೀರಲಾರರು ಎಂಬ ವಾಕ್ಯದ ಆಧಾರದ ಮೇಲೆ ಈ ಕೃತಿ ಮೈದಳಿದು ನಿಂತಿದೆ.

ಚಂದ್ರಾವತಿಯನ್ನು ಕಾಡಿಗೆ ಬಿಟ್ಟ ಸಂದರ್ಭ, ಚಂದ್ರಹಾಸ (ಚಂದ್ರಹಾಸನ ಕಥೆ) ಹಾಗೂ ಸೀತೆ (ಲವಕುಶರ ಕಾಳಗ)ಯರನ್ನು ಕಾಡಿಗೆ ಬಿಟ್ಟ ಸಂದರ್ಭಗಳಲ್ಲಿ ತುಂಬ ಸೌಮ್ಯತೆಯಿದೆ ಎಂದು ಗುರುತಿಸಬಹುದು. ಯಮಲೋಕದಲ್ಲಿ ಮಿಡುಕುತ್ತಿದ್ದ ಪಿತೃಗಳನ್ನು ಸ್ವರ್ಗಕ್ಕೆ ಕಳಿಸಲು ಉದ್ದಾಳಿಕನು ಪುತ್ರನನ್ನು ಪಡೆಯುವುದು ಇಲ್ಲಿನ ವಸ್ತು. ಉದ್ದಾಳಿಕನ ಮಗ ಹುಟ್ಟಿದ ಏಳು ವರ್ಷಕ್ಕೆ ಹೆಂಡತಿ ಗೋಚರಿಸುತ್ತಾಳೆಂಬುದು ಬ್ರಹ್ಮ ಲಿಖಿತ. ವಿಧಿ ಲಿಖಿತ ತತ್ವವನ್ನು ಮೀರಲಾಗುವುದಿಲ್ಲವೆಂಬುದನ್ನು ಪ್ರಸ್ತುತ ಕೃತಿಯು ಪ್ರತಿಪಾದಿಸುತ್ತದೆ. ಗಿರಿಯಮ್ಮ ಈ ಕಾವ್ಯದಲ್ಲಿ ಗಂಡು ಮಕ್ಕಳಿಂದಲೇ ಮೋಕ್ಷ ಪ್ರಾಪ್ತಿ ಎಂಬ ಸನಾತನ ಪಿತೃ ಪ್ರಧಾನ ಮೌಲ್ಯವನ್ನೇ ಎತ್ತಿ ಹಿಡಿದಿದ್ದಾಳೆ. ಉದ್ದಾಳಿಕನಿಗೆ ವಿವಾಹದಲ್ಲಿ ಆಸಕ್ತಿ ಮೂಡಲೆಂದು ಕೌಶಿಕ ಮುನಿ ಆತನಿಗೆ ಉತ್ತಮ ಸತಿಯನ್ನು ಒಳಗೊಂಡು ಪುತ್ರ ಸಂತಾನ ಪಡೆದು ಹೆಂಡತಿಯೊಡನೆ ಯಜ್ಞ ಮಾಡುವುದು, ಹಸಿದು ಬಂದವರಿಗೆ ಅನ್ನವಿಕ್ಕುವುದು, ಕಾಶಿ ಗಯೆ ಮೊದಲಾದ ತೀರ್ಥ ಕ್ಷೇತ್ರಗಳಲ್ಲಿ ಹೆತ್ತವರನ್ನು ತೃಪ್ತಿಪಡಿಸುವುದು ಮುಂತಾಗಿ ಗೃಹಸ್ಥ ಧರ್ಮವನ್ನು ಬೋಧಿಸುತ್ತಾನೆ. ಗಿರಿಯಮ್ಮನ ಧರ್ಮಸೂಕ್ಷ್ಮತೆ ಇಲ್ಲೆಲ್ಲ ಪ್ರಕಟವಾಗಿದೆ.

ಉದ್ದಾಳಿಕನನ್ನು ಮದುವೆಯಾಗಲಿರುವ ಚಂದ್ರಾವತಿ ಹುಟ್ಟಿದಾಗ 'ಘಟ್ಟಿ ಚಿಪ್ಪಿನೊಳಗೆ ಮುತ್ತು ಮೂಡಿದ ತೆರನಂತೆ' ಎಂಬ ಸೂಕ್ತ ಉಪಮೆ ನೀಡಲಾಗಿದೆ. ಆಕೆಯ ಸೌಂದರ್ಯವನ್ನು ಹಂಸಗಮನೆ, ದುಂಬಿಗುರುಳು, ಕುಡಿತೆಗಣ್ಣು, ಕೋಮಲಾಂಗಿ ಇತ್ಯಾದಿ ಪುರುಷ ಸಾಹಿತ್ಯದ ಸಾಂಪ್ರದಾಯಿಕ ವರ್ಣನಾ ರೀತಿಯಲ್ಲಿಯೇ ಬಣ್ಣಿಸಲಾಗಿದೆ. ಹಿಂದೆ ಕೆಲವು ಕಲೆಗಳು ಒಂದು ರೀತಿಯಲ್ಲಿ ಉತ್ತಮ ವಂಶದವರು

ಕಲಿಯುವಂತಿಲ್ಲ ಎನ್ನುವ ಸಂಪ್ರದಾಯ ಒಂದಿತ್ತು. ಉದಾ : ಸಂಗೀತ, ನೃತ್ಯ, ನಾಟ್ಯ, ನಾಟಕ ಕಲೆ ಇತ್ಯಾದಿ ಗಿರಿಯಮ್ಮ ಉದ್ದಾಳಿಕನ ಕಥೆಯಲ್ಲಿ ಈ ಕಲೆಗಳಿಗೆ ಸಾಮಾಜಿಕ ಮಾನ್ಯತೆಯನ್ನು ತಂದುಕೊಟ್ಟಿದ್ದಾಳೆ.

ಮತ್ತಕ್ಷರಾಭ್ಯಾಸ ಮಾಡಿಸಿ ಮಗಳಿಗೆ
ನರ್ತನ ಗೀತವ ಕಲಿಸಿ |
ಉತ್ತಮವಾದ ನಾಟ್ಯ ಕವಿತಾ ಶಾಸ್ತ್ರವ
ಪುತ್ರಿಗಭ್ಯಾಸ ಮಾಡಿಸಿ[೧೪೩]

ಚಂದ್ರಾವತಿಗೆ ಸಂಗೀತ, ನರ್ತನದ ಜೊತೆಗೆ ಅಕ್ಷರಾಭ್ಯಾಸ ನಾಟ್ಯ ಕವಿತಾ ಶಾಸ್ತ್ರವನ್ನು ಕಲಿಸಿದ್ದರೆಂದು ಹೇಳಿರುವಲ್ಲಿ ಗಿರಿಯಮ್ಮ ಸ್ತ್ರೀ ಶಿಕ್ಷಣದ ಮಹತ್ವವನ್ನರಿತಿದ್ದಳೆಂಬುದು ವ್ಯಕ್ತವಾಗುತ್ತದೆ. ಉದ್ದಾಳಿಕ ಕಮಲ ಹೂವನ್ನು ಅಘ್ರಾಣಿಸಿ ನೀರಿನಲ್ಲಿ ತೇಲಿಬಿಟ್ಟದ್ದು, ಚಂದ್ರಾವತಿ ಆ ಕಮಲದ ಹೂವನ್ನು ಆಘ್ರಾಣಿಸಿ ಗರ್ಭಿಣಿಯಾದದ್ದು ಮಹಾಭಾರತದ ಕೆಲವು ಸನ್ನಿವೇಶಗಳಿಗೆ ಸಂವಾದಿಯಾಗಿದೆ. ಅವಿವಾಹಿತ ಹೆಣ್ಣು ಮಗಳು ತಾಯಿಯಾಗಲಿರುವ ಸುದ್ದಿ ತಂದೆ-ತಾಯಿಗೆ ಎಂತಹ ಆಘಾತ ಉಂಟುಮಾಡುತ್ತದೆಂಬುದನ್ನು ಕವಯಿತ್ರಿ ಹೇಳ ಹೊರಟಿದ್ದಾಳೆ. ಚಂದ್ರಾವತಿಯ ತಾಯಿ ಮಗಳ ವಿಚಾರ ಕೇಳಿ.

ಸರಳು ತಾಗಿದ ಹುಲ್ಲೆಯಂದದಿ ಬೇಡನ
ಬಲೆಗೆ ಸಿಕ್ಕಿದ ಪಕ್ಷಿಯಂತೆ
ಅರೆಗಾಯ ಹೊಂದಿದ ನಾಗರ ಮರಿಯಂತೆ
ಹೊರಳುತ್ತಿದ್ದಳು ಧರೆ ಮೇಲೆ[೧೪೪]

ತಾಯಿಯ ಆ ದುಃಖದ ತೀವ್ರತೆಯನ್ನು ಇಲ್ಲಿ ಗ್ರಹಿಸಬಹುದು. ತಂದೆ ತಾಯಿಗೆ ಗೌರವದ ಪ್ರಶ್ನೆಯಾಗಿ ಕಾಡುತ್ತದೆ. ಪರಿಸ್ಥಿತಿಯನ್ನು ಎದುರಿಸಿ ಬಾಳುವ ಮಾರ್ಗ ಹುಡುಕದೆ, ಮಗಳನ್ನು ಮುಗಿಸುವ ಯೋಚನೆ ಮಾಡುತ್ತಾರೆ. ಒಡನೆಯೇ ಸ್ತ್ರೀ ಹತ್ಯಾದೋಷದ ಭೀತಿ ಕಾಡುತ್ತದೆ. ಜೈಮಿನಿ ಭಾರತದಲ್ಲಿ ರಾಮ ಸೀತೆಯನ್ನು ಕಾಡಿಗಟ್ಟಿದಾಗ 'ಕರುಣಾಳು ರಾಘವನಲಿ ತಪ್ಪಿಲ್ಲ ತಪ್ಪಿಲ್ಲವೂ ನನ್ನದು' ಎಂದು ತಪ್ಪೆಲ್ಲವನ್ನೂ ಸೀತೆ ತನ್ನ ಮೇಲೆ ಹಾಕಿಕೊಂಡಂತೆ ಚಂದ್ರಾವತಿ ಕೂಡ

ಲಿಂಗಪೂಜೆಯ ಮಾಡಿದವರ ನಿಂದಿಸಿದೆನೊ
ನಿಂದಿಸಿದೆನೊ ಸಾಧುಜನರ
ವಂದಿಸದ್ಹೋದೆನೊ ಗುರುಹಿರಿಯ ಚರಣಕ್ಕೆ
ಬಂದಿತೆನಗೆ ಅಪನಿಂದ್ಯ[೧೪೫]

ಎಂದು ತನ್ನನ್ನೇ ಹಳಿದುಕೊಂಡು ಶೋಕಿಸುವುದು ಸಮಾಜ ಹಿಂದಿನಿಂದಲೂ ಹೆಣ್ಣನ್ನು ಆರೋಪಿ ಸ್ಥಾನದಲ್ಲಿಟ್ಟು ನೋಡಿದ್ದರ ಪರಿಣಾಮವಾಗಿ ನಾನು ಮಾತಿಗೆ ತಪ್ಪಿದೆನೆ? ಕಷ್ಟಕ್ಕೆ ಒಳಗು ಮಾಡಿದೆನೆ?

ವಿಷ್ಣು ಪೂಜೆ ಮಾಡಿದವರಿಗೆ ನಿಂದಿಸಿದೆನೆ? ಪೂಜೆಯಾಗುವಾಗ ನೋಡದೆ ಹೋದೆನೆ? ಸಾಧು ಜನರ ತಾಯಿ ತಂದೆಗಳ ಮಾತು ಮೀರಿದೆನೆ ಎಂದು ಆತ್ಮ ವಿಮರ್ಶೆ ಮಾಡಿಕೊಳ್ಳುವುದು ಪಾಪ ಪುಣ್ಯಗಳ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಎನ್ನಬಹುದು. ಚಂದ್ರಾವತಿಯ ತಂದೆ ಈ ಸುದ್ದಿ ತಿಳಿದಕೂಡಲೇ ಪ್ರಾಣ ನೀಗುವೆನೆಂದು ಖಡ್ಗವನ್ನು ಕೊರಳಿಗೆ ಇಟ್ಟುಕೊಳ್ಳುತ್ತಾನೆ. ಮಗನಿಗೆ ಪಟ್ಟಕಟ್ಟಿ ತಾನು ರಾಜ್ಯವನ್ನು ತ್ಯಜಿಸಿ ನಿರ್ಗಮಿಸುವ ಯೋಚನೆ ಮಾಡುತ್ತಾನೆ. ಆದರೆ ಮಗಳೊಡನೆ ಈತ ವ್ಯವಹರಿಸಿದ ರೀತಿ ಅನುಕರಣೀಯ ಆತ ಮಗಳಿಗೆ

ಏಳವ್ವ ತಾಯಿ ಚಿಂತಿಸಲ್ಯಾಕೆ ವರನ್ಯಾರು
ಮಾಜವುದೇಕೆ ಎನ್ನೊಡನೆ
ಧಾರೆಯನೆರೆದುಕೊಡುವೆ ಕನ್ಯಾಚೋರಗೆ
ದೇವ ಬ್ರಾಹ್ಮರು ಮೆಚ್ಚುವರೆ[೧೪೫]

ಎಂದು ಹೇಳಿ ತುಂಬ ಸಂಯಮದಿಂದ ವರ್ತಿಸುತ್ತಾನೆ. ಆದರೂ ಇಂಥ ಪ್ರಕರಣದಲ್ಲಿ ರಾಜನು ಹೆಣ್ಣಿಗೆ ಕೊಡುತ್ತಿದ್ದ ಶಿಕ್ಷೆಯೆಂದರೆ ಕಾಡಿಗೆ ಕಳಿಸಿ ಕೊಲ್ಲಿಸುವುದು. ಚಂದ್ರಾವತಿಯ ಸ್ಥಿತಿಗೆ ಸೇವಕರ ಮನಸ್ಸು ಕರಗುತ್ತದೆ. ಗರ್ಭಿಣಿಯನ್ನು ಕೊಲ್ಲದೆ, ಮಾನವೀಯತೆಯನ್ನು ಮೆರೆಯುತ್ತಾರೆ. ಇಲ್ಲೆಲ್ಲ ಹೆಣ್ಣಿನ ಶೀಲದ ಪರಿಕಲ್ಪನೆ ಅಧಿಕಾರಶಾಹಿಯಲ್ಲಿರುವ ಕ್ರೌರ್ಯ ಸುವ್ಯಕ್ತವಾಗಿದೆ. ಚಂದ್ರಾಮತಿಯ ಮೂಲಕ ಗಿರಿಯಮ್ಮ ವಿಷ್ಣು ಭಕ್ತಿಯನ್ನು ಪ್ರಕಟಿಸಿದ್ದಾಳೆ. ಗರ್ಭಿಣಿ ಚಂದ್ರಾವತಿಯನ್ನು ಗೌತಮ ಋಷಿ ತನ್ನ ಆಶ್ರಮಕ್ಕೆ ಕರೆದೊಯ್ಯುವುದು ಸೀತೆಯನ್ನು ವಾಲ್ಮೀಕಿ ಋಷಿಗಳು ತಮ್ಮ ಆಶ್ರಮಕ್ಕೆ ಕರೆದೊಯ್ದ ಪ್ರಸಂಗವನ್ನು ನೆನಪಿಗೆ ತರುವಂತಿದೆ. ಗೌತಮ ಮುನಿ ಆಕೆಗೆ ಕ್ಷತ್ರಿಯರ ಮಗಳನ್ನು ಕೊಲ್ಲುತ್ತಾರೆಯೆ? ಸ್ತ್ರೀಯರನ್ನು ಹತ್ಯೆಗೈಯುತ್ತಾರೆಯೆ? ಹೆತ್ತಮಕ್ಕಳನ್ನು ಕೊಲ್ಲುತ್ತಾರೆಯೇ? ಏನು ತಪ್ಪು ಮಾಡಿದೆ ಎಂದು ವಿಚಾರಿಸುತ್ತಾನೆ. ಇಲ್ಲೆಲ್ಲ ಗಿರಿಯಮ್ಮ ಮಾನವ ಪ್ರೀತಿಗೆ ಮನ್ನಣೆಯನ್ನಿದ್ದಾಳೆ.

ಜನಪದ ರಾಮಾಯಣಗಳ ಕೆಲವು ಪಠ್ಯಗಳಲ್ಲಿ ಸೀತೆಯನ್ನು ಮೂಗಿನಿಂದ ಹುಟ್ಟಿದವಳೆಂದು ಹೇಳಲಾಗಿದೆ. ಇದೇ ಆಶಯ ಉದ್ದಾಳಿಕನ ಕಥೆಯ ಚಂದ್ರಾಮತಿಯ ಮೂಗಿನಿನಿಂದ ಮಗನು ಜನಿಸಿದ ಪ್ರಕರಣದಲ್ಲಿದೆ. ಅವಿವಾಹಿತ ಹೆಣ್ಣು ಪ್ರಸವಿಸಿದಾಗ ಅವಳ ಮಾನಸಿಕ ಪರಿಸ್ಥಿತಿ ಹೇಗಿರುತ್ತದೆಂಬುದನ್ನು ಗಿರಿಯಮ್ಮ ಬಲ್ಲವಳಾಗಿದ್ದಾಳೆ. ಚಂದ್ರಾಮತಿ ಮಗುವನ್ನು ಉಳಿಸಿಕೊಂಡರೆ ಲೋಕಾಪವಾದವಾಗುತ್ತದೆ. ಕೊಂದರೆ ಪಾಪ ಹಾಗಾಗಿ ನೀರಿನಲ್ಲಿ ಬಿಡುವುದೇ ಲೇಸೆಂದು ಕುಂತಿ ಕರ್ಣನನ್ನು ಬಿಟ್ಟಂತೆ ಈಕೆಯೂ ನೀರಿನಲ್ಲಿ ತೇಲಿಬಿಡುತ್ತಾಳೆ. ಏಳು ವರ್ಷದ ಬಳಿಕ ಚಂದ್ರಾಮತಿ ಮಗು ಮತ್ತು ಉದ್ದಾಳಿಕ ಸೇರುವುದು ಮೂಲದಂತೆಯೇ ಇದೆ. ಆದರೆ ಗಿರಿಯಮ್ಮ ಸಂದರ್ಭವರಿತು ಅಡುಗೆ ಸಂಪ್ರದಾಯ, ಮದುವೆ ಸಂಪ್ರದಾಯಗಳಿಗೂ ಕೃತಿಯಲ್ಲಿ ಸ್ಥಾನ ಕಲ್ಪಿಸಿದ್ದಾಳೆ. ಇವು ಸಾಂಸ್ಕೃತಿಕವಾಗಿ ಮಹತ್ವವಾಗುತ್ತವೆ.

ಟಿ.ವಿ.ವೆಂಕಟಾಚಲಶಾಸ್ತ್ರೀಯವರು 'ಸಂಸಾರಿಕ ಸುಖ ದುಃಖಗಳಿಂದ ಹದಗೊಂಡ ಸುಸಂಸ್ಕೃತ ಸ್ತ್ರೀ ಹೃದಯದ ಕೋಮಲಾಂತಃಕರಣ ಈ ಕಾವ್ಯದ ತುಂಬ ಅರಳಿ ಪರಿಮಳಿಸಿದೆ. ಇಲ್ಲಿಯ ವ್ಯಕ್ತಿಲೋಕ ಅತಿ ಸರಳ ಸ್ವಭಾವದ್ದು ನಿತ್ಯ ಸಾಧಾರಣವಾದದ್ದು. ಸಾಂಗತ್ಯದ ಕವಿ ಸೊಗಸು ಇಲ್ಲಿ ಸೊಂಪಾಗಿ ಹರಡಿದೆ. ಸಾಮಾನ್ಯ ಸ್ತ್ರೀ ಪ್ರತೀಕವಾದ ಚಂದ್ರಾವತಿಯ ಬಾಲಲೀಲೆ ಗರ್ಭಿಣಿ ಸಹಜವಾದ ಬಯಕೆ ಅವಳ ಅರಣ್ಯ ರೋದನ. ಅವಳ ಮಗುವಿನ ಬಾಲಲೀಲೆ ಮದುವೆಯ ಸಮಾರಂಭ ಇವೆಲ್ಲ ಸಹಜ ಸುಂದರವು ರಸಾರ್ದ್ರವೂ ಆಗಿದ್ದು, ಗಿರಿಯಮ್ಮನ ಲೋಕಾನುಭವದ ನೈಜ ಚಿತ್ರಗಳಾಗಿವೆ'[೪೬] ಎಂದು ಅಭಿಪ್ರಾಯಪಟ್ಟಿದ್ದಾರೆ. ಪುರುಷ ದೃಷ್ಟಿಯಿಂದ ವಿವೇಚಿಸಿದಾಗ ಇದು ಸಮ್ಮತವೆನಿಸುತ್ತದೆ. ಆದರೆ ಸ್ತ್ರೀವಾದಿ ದೃಷ್ಟಿಯಿಂದ ಪರಿಭಾವಿಸಿದಾಗ ಅವಿವಾಹಿತ ಹೆಣ್ಣು ತಾಯಿಯಾಗುವುದು ಸಮಾಜದಲ್ಲಿ ಕಷ್ಟ ಪರಂಪರೆಯನ್ನೇ ಸ್ವಾಗತಿಸಿದಂತೆ. ಕಳಂಕ ಹೊತ್ತ ಹೆಣ್ಣನ್ನು ಸಮಾಜ ಕ್ರೂರವಾಗಿ ನೋಡುತ್ತದೆ. ಇಂಥ ಹೆಣ್ಣು ಮಕ್ಕಳು ಪುನಃ ಸಾಂಸಾರಿಕ ಚೌಕಟ್ಟಿನೊಳಗೆ ಪ್ರವೇಶ ಪಡೆಯುವುದು ದುಸ್ತರವೆಂಬುದನ್ನು ಕೃತಿಯಲ್ಲಿ ಗಿರಿಯಮ್ಮ ತಿಳಿಸಲೆತ್ನಿಸಿರುವುದು ಕಂಡುಬರುತ್ತದೆ. ಈ ದೃಷ್ಟಿಯಿಂದಲೂ 'ಉದ್ದಾಳಿಕನ ಕಥೆ' ಅಧ್ಯಯನ ಯೋಗ್ಯವಾಗಿದೆ.

ಗಿರಿಯಮ್ಮನ ಕಥೆಗಳು ಪುರಾಣ ಕಥೆಗಳಂತೆ ಕಂಡುಬರುತ್ತವೆ. ಅವುಗಳ ತಿರುಳು ಜನಪದ ಮೂಲದ್ದಾಗಿದೆ. ಪಾತ್ರಗಳ ಹೆಸರುಗಳನ್ನು ಶಿಷ್ಟ ಪುರಾಣಗಳಲ್ಲಿ ಕಾಣುತ್ತೇವೆ. ಆದರೆ ಕಥೆಯ ವಸ್ತು ಮಾತ್ರ ಶಿಷ್ಟ ಪುರಾಣಗಳಿಗಿಂತ ಭಿನ್ನವಾಗಿದೆ. ಗಿರಿಯಮ್ಮನು ಬಳಸಿಕೊಂಡಿರುವ ವಸ್ತು ಆಕೆ ಹೇಳಿರುವಂತೆ 'ಓಣ್ಯೊಳು ಚೆಲ್ಲಿದ ಅಣಿ ಮುತ್ತಾರಿಸಿ ನೂಲಿಗೆ ಪೋಣಿಸಿದಂತೆ' ಅಂದರೆ ಈ ಕಥೆಗಳು ಜನಪದರ ನಡುವೆ ಪ್ರಚಲಿತವಿದ್ದವೆಂದು ತಿಳಿಯಬಹುದು. ಈ ವಸ್ತುವನ್ನು ತನ್ನ ಕಾವ್ಯಕ್ಕೆ ತೆಗೆದುಕೊಂಡು ನಯಗೊಳಿಸಿ ಹಾಡಿನ ರೂಪದಲ್ಲಿ ರಚಿಸಿದ್ದಾಳೆ. ಇಲ್ಲಿ ಪಾತ್ರಗಳಲ್ಲಿ ಕಾಣುವ ಜೀವನದ ರೀತಿ ನೀತಿಗಳು ಜನಪದ ರೀತಿಯದ್ದಾಗಿದೆ. ನಂಬಿಕೆಗಳು ವೈದಿಕಪರ ಅನಿಸಿಕೆಗಳನ್ನು ಹೇಳುತ್ತವೆ. ಗಿರಿಯಮ್ಮನ ಚಂದ್ರಹಾಸನ ಕಥೆ ಮೂಲದಲ್ಲಿ ಜನಪದ ಕಥೆಯಾಗಿದ್ದರೂ ಕೂಡ ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ ಇದರ ಪ್ರಸ್ತಾಪವಿದೆ. ಉದ್ದಾಳಿಕನ ಕಥೆ ಯಾವುದೇ ಶಿಷ್ಟ ಪುರಾಣ ಅಥವಾ ಕಾವ್ಯಗಳಲ್ಲಿ ಬಳಕೆಯಾಗಿಲ್ಲ. ಇದರ ವಸ್ತು ಸ್ವತಂತ್ರ್ಯವಾಗಿದ್ದು, ವಿಶಿಷ್ಟ ಗುಣಗಳನ್ನು ಒಳಗೊಂಡಿದೆ.

ಉದ್ದಾಳಿಕನ ಕಥೆ ಮಂಗಳದಿಂದ ಪ್ರಾರಂಭವಾಗಿ ಸುಖಾಂತ್ಯದಲ್ಲಿ ಕೊನೆಗೊಳ್ಳುತ್ತದೆ. ಎಲ್ಲ ರೂಢಿಬದ್ಧ ನಿಯಮಗಳನ್ನು ತನ್ನ ಜೀವಾಳವಾಗಿಸಿಕೊಂಡಿದೆ. ಜನಪದರಲ್ಲಿ ಮತ್ತು ಶಿಷ್ಟರಲ್ಲಿ ಬೇರು ಬಿಟ್ಟಿರುವ 'ವಿಧಿ ಲಿಖಿತ' ಮತ್ತು 'ಸುತರಿಲ್ಲದೆ ಸದ್ಗತಿಯಿಲ್ಲ' ಎಂಬ ನಂಬಿಕೆಗಳ ಹಿನ್ನೆಲೆಯಲ್ಲಿ ಈ ಕಥೆಯನ್ನು ಹೆಣೆಯಲಾಗಿದೆ. ಈ ನಂಬಿಕೆಗಳ ಮೂಲಕವೇ ಕಥೆ ಕೆಲವು ಚಿಂತನೆಗಳಿಗೆ ಅವಕಾಶವನ್ನು ನೀಡುತ್ತದೆ. ಉದ್ದಾಳಿಕ ಒಬ್ಬ ತಪಸ್ವಿ. ಇವನು ಅರವತ್ತು ಸಾವಿರ ವರ್ಷ ತಪಸ್ಸು ಮಾಡಿದರೂ ಇವನ

ತಪಸ್ಸಿನ ಫಲದಿಂದ ತಂದೆ ತಾಯಿಗಳಿಗೆ ಮೋಕ್ಷ ದೊರೆಯುವುದಿಲ್ಲ. ಲೋಕದ ನಿಯಮಗಳಲ್ಲಿ ಬಂಧಿತವಾದ ಕರ್ಮದಿಂದಲೇ ಮೋಕ್ಷ ಎಂಬುದನ್ನು ಕಾಣುತ್ತೇವೆ. ಜನಪದರಲ್ಲಿ ಚಿಂತನೆಗಿಂತ ಕಾಯಕಕ್ಕೆ ಹೆಚ್ಚು ಬೆಲೆ ಮನುಷ್ಯನ ಯಾವ ಆಸೆಗಳನ್ನು ದಹನಗೊಳಿಸಲು ಇಷ್ಟ ಪಡುವುದಿಲ್ಲ. ಜೀವನ ಪಕ್ವತೆ ಪಡೆಯಬೇಕಾದರೆ ಬದುಕಿನ ಎಲ್ಲಾ ಘಟ್ಟಗಳ ಅನುಭವವನ್ನು ಪಡೆದುಕೊಳ್ಳಬೇಕು. ಯಾವ ಅನುಭವದಿಂದ ವಂಚಿತವಾದರೂ ಅವನ ಬದುಕು ಪರಿಪೂರ್ಣವಾಗುವುದಿಲ್ಲ. ಬದುಕಿನ ಪರಿಪೂರ್ಣತೆಯಿಲ್ಲದೆ ಮುಕ್ತಿಯು ದೊರೆಯುವುದಿಲ್ಲ. ಇದರಿಂದಾಗಿ ಉದ್ದಾಳಿಕನ ಅರುವತ್ತು ಸಾವಿರ ವರ್ಷಗಳ ತಪಸ್ಸಿನಿಂದಲೂ ಅವನ ತಂದೆ ತಾಯಿಗಳು ಮೋಕ್ಷದಿಂದ ವಂಚಿತರಾಗಿರುತ್ತಾರೆ. ಲೋಕರೂಢಿಯಂತೆ ಅವನು ತಂದೆಯಾದ ತಕ್ಷಣ ಉದ್ದಾಳಿಕನ ತಂದೆ ತಾಯಿಗಳು ಮುಕ್ತರಾಗುತ್ತಾರೆ. ಇದು ಕಥೆಯ ಒಂದು ಭಾಗ. ಮತ್ತೊಂದು ಭಾಗ ಉದ್ದಾಳಿಕನ ಹೆಂಡತಿಯಾದ ಚಂದ್ರಾವತಿಯ ಬದುಕಿನ ಚಿತ್ರಣವಾಗಿದೆ. ಚಂದ್ರಾವತಿ ಮದುವೆಗೆ ಮುನ್ನ ಉದ್ದಾಳಿಕ ತನ್ನ ತಪಸ್ಸಿನ ಶಕ್ತಿಯಿಂದ ನೀರಿನಲ್ಲಿ ತೇಲಿಬಿಟ್ಟ ಹೂವನ್ನು ಆಘ್ರಾಣಿಸಿ ಗರ್ಭಧರಿಸುತ್ತಾಳೆ. ಮದುವೆಗೆ ಮುನ್ನ ಸ್ತ್ರೀ ಗರ್ಭಧರಿಸುವುದು ಲೋಕ ನಿಯಮಕ್ಕೆ ವಿರುದ್ಧವಾದದ್ದು ಮತ್ತು ಅಕ್ಷಮ್ಯ ಅಪರಾಧ. ಸಮಾಜದ ನಿಯಮವನ್ನು ಮೀರಿದವರಿಗೆ ಸಮಾಜದ ಮುಖ್ಯಸ್ಥರೇ ಶಿಕ್ಷೆ ನೀಡುತ್ತಿದ್ದರು. ಹೀಗಾಗಿ ಚಂದ್ರಾವತಿ ರಾಜನ ಮಗಳಾದರೂ ಶಿಕ್ಷೆಗೆ ಗುರಿಯಾಗುತ್ತಾಳೆ. ಚಂದ್ರವತಿಯನ್ನು ರಾಜ ಕಾಡಿಗೆ ಅಟ್ಟುತ್ತಾನೆ. ಇಲ್ಲಿ ಚಂದ್ರಾವತಿಯನ್ನು ಕಾಡಿಗೆ ಕಳುಹಿಸುವುದರ ಮೂಲಕ ಅಂದಿನ ನಿಯಮವನ್ನು ರಕ್ಷಿಸಿ ಕೊಂಡಿರುವುದನ್ನು ಕಾಣುತ್ತೇವೆ.

ಕಥೆಯ ಕೊನೆಯಲ್ಲಿ ಉದ್ದಾಳಿಕ ಚಂದ್ರಾಮತಿ ಒಂದಾಗುತ್ತಾರೆ. ತಂದೆ ತಾಯಿ ಮಗುವಿನೊಂದಿಗೆ ತವರಿಗೆ ಬರುತ್ತಾರೆ. 'ವಿಧಿ ಲಿಖಿತ'ದಿಂದ ಬಂದ ಕಷ್ಟ ಪರಿಹಾರವಾಗುತ್ತದೆ. ಇಂತಹ ನಂಬಿಕೆಗಳನ್ನು ಹರಿದಾಸರು ಒಪ್ಪಿಕೊಂಡಂತೆ ಕಾಣುತ್ತದೆ. ಇದರಿಂದಾಗಿಯೇ ಗಿರಿಯಮ್ಮನಿಗೆ ಕಥೆಯು ನಾಯಕ ಮತ್ತು ನಾಯಕಿಯ ಬಗ್ಗೆ ಹೆಚ್ಚಿನ ಅನುಕಂಪವಿರುವುದನ್ನು ಕಾಣುತ್ತೇವೆ.

ನಾಶವಹುದು ರುಣರೋಗ ದಾರಿದ್ರ್ಯವು
ಕ್ಲೇಶ ಕಂಟಕ ಪರಿಹಾರವು
ಬೇಸರಿಲ್ಲದೆ ನಿನ್ನ ದಾಸನ ಕಥೆಯನ್ನು ಚರಿತೆಯ
ಮಾಡಿ ವರ್ಣಿಸಿದೆ.[೧೪೭] (ಚಂದ್ರಹಾಸನ ಕಥೆ)

ಬರಡಾಕಳೀಯಲಿ ಬಂಜೆಗೆ ಮಕ್ಕಳಾಗಲಿ
ಕರುಡಗೆ ಕಂಗಳು ಬರಲಿ
ಋಣ ಹರಿಯಲಿ ದಾರಿದ್ರ್ಯವು ಹಿಂಗಲಿ ಹರಿ
ಎಮ್ಮ ಹೃದಯದೊಳಿರಲಿ[೧೪೮] (ಶಂಕರ ಗಂಡನ ಹಾಡು)

ಪ್ರಾತಃ ಕಾಲದೊಳೆದ್ದು ಉದ್ದಾಳಿಕನ ಕಥೆಯನು
ಭಕ್ತಿಯಿಂದ ಹೇಳಿ ಕೇಳಿದರಿಗೆ
ಇಷ್ಟಾರ್ಥವು ಸಿದ್ಧಿ ಆಗೋದು ಎಂದು ಕೊಟ್ಟರೆ
ಹರಿಹರ ವರವ[೧೯] (ಉದ್ದಾಳಿಕನ ಕಥೆ)

ಈ ಮೇಲಿನ ವಿಭಾಗ ಕ್ರಮದ ದೃಷ್ಟಿಯಿಂದ ಈ ಕಥೆಗಳು ಆರಾಧನ ಕಥೆಗಳೆಂದು ಕವಿಯತ್ರಿಯ ಹೇಳಿಕೆಗಳಿಂದಲೇ ತಿಳಿದುಬರುತ್ತದೆ. ಕಥೆಗಳ ರೂಪದ ದೃಷ್ಟಿಯಿಂದ ಕನ್ನಡ ಜನಪದ ಕಥೆಗಳಲ್ಲಿ ಆರಾಧನೆಯ ಕಥೆ ಎಂದು ಒಂದು ವಿಭಾಗ ಕಲ್ಪಿಸುವುದು ಅಗತ್ಯ ಎಂದಿದ್ದಾರೆ ಡಾ. ಚಂದ್ರಶೇಖರ ಕಂಬಾರರು. ಶಿಷ್ಟ ಸಾಹಿತ್ಯದಲ್ಲಿ ಜನಪದ ಕಥಾಂಶಗಳನ್ನು ಗುರುತಿಸುವಾಗ ಈ ವಿಭಾಗ ಕ್ರಮ ಉಪಯುಕ್ತವೂ ಕೂಡ. ಕನ್ನಡ ಸಾಹಿತ್ಯವನ್ನು ಮೊದಲಿನಿಂದಲೂ ಗಮನಿಸುತ್ತಾ ಬಂದರೆ ಈ ವಿಭಾಗ ಕ್ರಮದ ಅವಶ್ಯಕತೆ ತಿಳಿಯುತ್ತದೆ. ಧಾರ್ಮಿಕ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಕಥೆಗಳು ಬಹುಮುಖ್ಯವಾಗಿ ಆರಾಧನಾ ಮನೋಭಾವವನ್ನು ಹೊಂದಿರುವುದು ಇಂತಹ ಆರಾಧನಾ ಕಥೆಗಳು ಸಾಹಿತ್ಯಕ್ಕಿಂತ ಹೆಚ್ಚಾಗಿ ಸಾಮಾಜಿಕ ಗುಣಗಳನ್ನು ಹೊಂದಿರುತ್ತವೆ.

ಕಥೆಯ ನಿರೂಪಣೆ ಮಾಡುವುದು ಒಂದು ಕಡೆ ಮನರಂಜನೆಗಾದರೆ ಇನ್ನೊಂದು ಉದ್ದೇಶ ಪುಣ್ಯಗಳಿಕೆ, ರೋಗ ರುಜಿನಗಳ ಪರಿಹಾರ, ಭೂತ ಪ್ರೇತಗಳ ನಾಶ, ದಾರಿದ್ರ್ಯ ನಾಶ. ಮಕ್ಕಳನ್ನು ಪಡೆಯಲು ಮತ್ತು ಕೇಶಕಂಟಕವನ್ನು ಪರಿಹರಿಸಿಕೊಳ್ಳಲು ಕಥೆಯ ನಿರೂಪಣೆ ಅವಶ್ಯಕ. ಇದನ್ನು ಸಾಮಾನ್ಯ ಜನವರ್ಗ ನಂಬಿದ್ದರ ಫಲವಾಗಿ ಕಥೆಗಳು ಸಮಾಜದಲ್ಲಿ ಮಹತ್ವ ಪಡೆದುಕೊಂಡಿದೆ. ಇಂತಹ ನಂಬಿಕೆಗಳನ್ನು ಆಧರಿಸಿ ರಚಿತವಾದ ಕಥೆಗಳು ಜನರನ್ನು ಬದ್ಧ ಚೌಕಟ್ಟಿನಲ್ಲಿಯೇ ಇಡುವ ಪ್ರಯತ್ನ ಮಾಡಿವೆ.

**ಅಡಿಟಿಪ್ಪಣಿಗಳು**

೧. ಬಸವಾರಾಧ್ಯ ಎನ್. ಚಂದ್ರಹಾಸನ ಕಥೆ, ೧೯೭೫, ಪು.೨

೨. ಅದೇ, ಪು.೨

೩. ಅದೇ, ಪು.೬

೪. ಅದೇ, ಪು.೭

೫. ಬಿ.ಎಸ್.ಸಣ್ಣಯ್ಯ ಡಾ.ರಾಮೆಗೌಡ, ಲಕ್ಷ್ಮೀಶನ ಜೈಮಿನಿ ಭಾರತ ೧೯೯೩, ಪು.೨೯೭

೬. ಬಸರಾವಾರ್ಯ ಎನ್. ಚಂದ್ರಹಾಸನ ಕಥೆ, ೧೯೭೫, ಪು.೮

೭. ಅದೇ, ಪು.೫

೮. ಅದೇ, ಪು.೯

೯. ಅದೇ, ಪು.೧೩

೧೦. ಅದೇ, ಪು.೧೫

೧೧. ಅದೇ, ಪು.೧೯

೧೨. ಅದೇ, ಪು.೨೨

೧೩. ಅದೇ, ಪು.೨೪

೧೪. ಅದೇ, ಪು.೨೫

೧೫. ಅದೇ, ಪು.೩೩

೧೬. ಅದೇ, ಪು.೪೫

೧೭. ಅದೇ, ಪು.೯೩

೧೮. ಅದೇ, ಪು.೮೪

೧೯. ಅದೇ, ಪು.೧೬

೨೦. ಅದೇ, ಪು.೨೧

೨೧. ಅದೇ, ಪು.೨೩

೨೨. ಅದೇ, ಪು.೫

೨೩. ಅದೇ, ಪು.೩೮

೨೪. ಅದೇ, ಪು.೩೯

೨೫. ಅದೇ, ಪು.೮೩

೨೬. ಸಂಜೀವ ಶೆಟ್ಟಿ, ಲಕ್ಷ್ಮೀಶ ಜೈಮಿನಿ ಭಾರತ, ಕಥವಸ್ತು ವಿವೇಚನೆ, ೧೯೯೪, ಪು.೧೬೭

೨೭. ಬಸವಾರಾಧ್ಯ ಎನ್., ಚಂದ್ರಹಾಸನ ಕಥೆ, ೧೯೭೫, ಪು.೫೦

೨೮. ಅದೇ, ಪು.೬೦

೨೯. ಅದೇ, ಪು.೮೨

೩೦. ಅದೇ, ಪು.೮೩

೩೧. ಅನ್ನಪೂರ್ಣ ಎಂ. ಜಾಲಗಾರ, ಶಂಕರದಾಸಿಮಯ್ಯನ ಪುರಾಣ ಒಂದು ಅಧ್ಯಯನ, ೧೯೯೯, ಪು.೨೬೨

೩೨. ಅದೇ, ಪು.೨೬೨

೩೩. ಅದೇ, ಪು.೨೬೩

೩೪. ಅದೇ, ಪು.೨೬೪

೩೫. ಎಂ.ಎಂ.ಕಲಬುರ್ಗಿ(ಸಂ), ಹರಿಹರನ ರಗಳೆಗಳು, ೧೯೯೯, ಪು.೨೭೭

೩೬. ಅದೇ, ಪು. ೨೭೮

೩೭. ಅದೇ, ಪು. ೨೭೯

೩೮. ಅದೇ, ಪು. ೨೮೫

೩೯. ಲೀಲಾವತಿ ಎಸ್.ರಾವ್. ಹೆಳವನಕಟ್ಟೆ ಗಿರಿಯಮ್ಮನ ಕೀರ್ತನೆಗಳು, ೨೦೦೩, ಪು.೧೨೮

೪೦. ಅದೇ, ಪು.೧೩೦

೪೧. ಅದೇ, ಪು.೧೩೨

೪೨. ಅದೇ, ಪು.೧೩೨

೪೩. ಅದೇ, ಪು.೧೩೨

೪೪. ಅದೇ, ಪು.೧೩೩

೪೫. ಅದೇ, ಪು.೧೩೩

೪೬. ಅದೇ, ಪು.೧೩೪

೪೭. ಅದೇ, ಪು.೧೩೬

೪೮. ಅದೇ, ಪು.೧೪೬

೪೯. ದೇ. ಜವರೇಗೌಡ, ರಾಮಧಾನ್ಯ ಚರಿತ್ರೆ, ೧೯೬೫, ಪು.೨೫

೫೦. ಅದೇ, ಪು.೧೨೪

೫೧. ಅದೇ, ಪು.೫೩

೫೨. ಅದೇ, ಪು.೫೨

೫೩. ಲೀಲಾವತಿ ಎಸ್.ರಾವ್, ಹೆಳವನಕಟ್ಟೆ ಗಿರಿಯಮ್ಮನ ಕೀರ್ತನೆಗಳು, ೨೦೦೩, ಪು.೨೨೩

೫೪. ಅದೇ, ಪು.೨೨೪

೫೫. ಅದೇ, ಪು. ೨೨೬

೫೬. ಅದೇ, ಪು.೨೨೮

೫೭. ಅದೇ, ಪು.೨೨೮

೫೮. ಅದೇ, ಪು.೨೨೯

೫೯. ಅದೇ, ಪು.೨೨೯

೬೦. ಅದೇ, ಪು.೨೩೦

೬೧. ಅದೇ, ಪು.೨೩೫-೨೩೬

೬೨. ಅದೇ, ಪು.೨೩೬

೬೩. ಅದೇ, ಪು.೨೩೯

೬೪. ಅದೇ, ಪು.೨೩೯

೬೫. ಅದೇ, ಪು.೨೪೧

೬೬. ಅದೇ, ಪು.೨

೬೭. ಅದೇ, ಪು.೨೬೬

೬೮. ಅದೇ, ಪು.೨೬೮

೬೯. ಅದೇ, ಪು.೨೬೮

೭೦. ಅದೇ, ಪು.೨೭೫-೨೭೫

೭೧. ಅದೇ, ಪು.೨೬೯

೭೨. ಅದೇ, ಪು.೨೩೬

೭೩. ಅದೇ, ಪು.೨೪೧

೭೪. ಪಾದೇಕಲ್ಲು ವಿಷ್ಣುಭಟ್ಟ, ಹಟ್ಟಿಯಂಗಡಿರಾಮಭಟ್ಟರ ಯಕ್ಷಗಾನ ಕೃತಿಗಳು, ೨೦೦೫, ಪು.೪೩

೭೫. ಕುಕ್ಕಿಲ ಕೃಷ್ಣಭಟ್ಟ, ಪಾರ್ತಿಸುಬ್ಬನ ಯಕ್ಷಗಾನಗಳು, ೧೯೭೫, ಪು.೨೭೫

೭೬. ಪಾದೇಕಲ್ಲು ವಿಷ್ಣುಭಟ್ಟ, ಹಟ್ಟಿಯಂಗಡಿ ರಾಮಭಟ್ಟರ ಯಕ್ಷಗಾನ ಕೃತಿಗಳು, ೨೦೦೫, ಪು.೪೯

೭೭. ಬಸವ ರಾಜ ನೆಲ್ಲಿಸಾರ, ಜನಪದಕಾವ್ಯ ಸಂಚಯ, ೧೯೮೪

೭೮. ಜಿ.ಸಂ.ಪರಮಶಿವಯ್ಯ, ಕರ್ನಾಟಕ ಜಾನಪದ ಸಮೀಕ್ಷೆ, ೧೯೮೨, ಪು.೨೬

೭೯. ಲೀಲಾವತಿ ಎಸ್.ರಾವ್, ಹೆಳವನಕಟ್ಟೆ ಗಿರಿಯಮ್ಮನ ಕೀರ್ತನೆಗಳು, ೨೦೦೩, ಪು.೧೩೮೪

೮೦. ಲೀಲಾವತಿ ಎಸ್ ರಾವ್ ಹೆಳವನಕಟ್ಟೆ ಗಿರಿಯಮ್ಮನ ಕೀರ್ತನೆಗಳು, ೨೦೦೩, ಪು.೧೩೮

೮೧. ಅದೇ, ಪು.೧೩೮

೮೨. ಅದೇ, ಪು.೧೩೯

೮೩. ಅದೇ, ಪು.೧೩೯

೮೪. ಅದೇ, ಪು.೧೩೯

೮೫. ಅದೇ, ಪು.೧೪೦

೮೬. ಅದೇ, ಪು.೧೪೦

೮೭. ಅದೇ, ಪು.೧೪೦

೮೮. ಮತ್ತಿಘಟ್ಟ ಕೃಷ್ಣಮೂರ್ತಿ, ಗೃಹಿಣಿ ಗೀತೆಗಳು, ೧೯೮೨, ಪು.೬೯೦

೮೯. ಲೀಲಾವತಿ ಎಸ್.ರಾವ್. ಹೆಳವನಕಟ್ಟೆ ಗಿರಿಯಮ್ಮನ ಕೀರ್ತನೆಗಳು, ೨೦೦೩, ಪು.೧೪೧

೯೦. ಅದೇ, ಪು.೧೪೨

೯೧. ಅದೇ, ಪು.೧೪೨

೯೨. ಅದೇ, ಪು.೧೪೨

೯೩. ಅದೇ, ಪು.೧೪೩

೯೪. ಅದೇ, ಪು.೧೪೩

೯೫. ಅದೇ, ಪು.೧೪೩

೯೬. ಅದೇ, ಪು.೧೪೩

೯೭. ಅದೇ, ಪು.೧೪೪

೯೮. ಅದೇ, ಪು.೧೪೫

೯೯. ಅದೇ, ಪು.೧೪೭

೧೦೦. ಅದೇ, ಪು.೧೪೮

೧೦೧. ಅದೇ, ಪು.೧೪೯

೧೦೨. ಅದೇ, ಪು.೧೫೦

೧೦೩. ಅದೇ, ಪು.೧೫೧

೧೦೪. ಅದೇ, ಪು.೧೫೨

೧೦೫. ಅದೇ, ಪು.೧೫೧

೧೦೬. ಬಿ.ಪಿ.ರಾಮಯ್ಯ, ದಕ್ಷಿಣ ಕರ್ನಾಟಕ ಕೊರವರು, ೨೦೦೨, ಪು.೪೦

೧೦೭. ಅದೇ, ಪು.೪೨

೧೦೮. ಅದೇ, ಪು.೪೨

೧೦೯. ಅದೇ, ಪು.೪೩

೧೧೦. ಅದೇ, ಪು.೪೩

೧೧೧. ಅದೇ, ಪು.೭೮

೧೧೨. ಲೀಲಾವತಿ ಎಸ್.ರಾವ್. ಹೆಳವನಕಟ್ಟೆ ಗಿರಿಯಮ್ಮ ಕೀರ್ತನೆಗಳು, ೨೦೦೩, ಪು.೨೧೦

೧೧೩. ಅದೇ, ಪು.೨೧೧

೧೧೪. ಅದೇ, ಪು.೨೧೧

೧೧೫. ಅದೇ, ಪು.೨೧೨

೧೧೬. ಅದೇ, ಪು.೨೧೩

೧೧೭. ಅದೇ, ಪು.೨೨೧

೧೧೮. ಅದೇ, ಪು.೨೨೨

೧೧೯. ಟಿ.ಕೆ. ಇಂದುಬಾಯಿ, ಹೆಳವನಕಟ್ಟೆ ಗಿರಿಯಮ್ಮನ ಹಾಡುಗಳು ೧೯೮೭, ಪು.೧೭೫

೧೨೦. ಟಿ.ಕೆ. ಇಂದುಬಾಯಿ, ಶ್ರೀಪ್ರಸನ್ನವೆಂಕಟದಾಸರ ಕೀರ್ತನೆಗಳು, ೨೦೦೩, ಪು.೪೫೯

೧೨೧. ಅದೇ, ಪು.೪೭೭

೧೨೨. ಅದೇ, ಪು.೩೭

೧೨೩. ಬಿ.ಪಿ.ರಾಮಯ್ಯ, ದಕ್ಷಿಣ ಕನಾರಟಕದ ಕೊರವರು, ೨೦೦೨, ಪು.೪೫

೧೨೪. ಎಂ.ಎಸ್.ಸುಂಕಾಪುರ, ಜಾನಪದ ಸಾಹಿತ್ಯ ದರ್ಶನ, ೧೯೭೮, ಪು. ೬೨

೧೨೫. ಅದೇ, ಪು.೬೩

೧೨೬. ಲೀಲಾವತಿ ಎಸ್.ರಾವ್., ಹೆಳವನಕಟ್ಟೆ ಗಿರಿಯಮ್ಮನ ಕೀರ್ತನೆಗಳು, ಪು.೫೬

೧೨೭. ಅದೇ, ಪು.೫೬

೧೨೮. ಅದೇ, ಪು.೫೬

೧೨೯. ಅದೇ, ಪು.೫೮

೧೩೦. ಅದೇ, ಪು.೫೮

೧೩೧. ಅದೇ, ಪು.೬೦

೧೩೨. ಅದೇ, ಪು.೬೨

೧೩೩. ಅದೇ, ಪು.೬೩

೧೩೪. ಅದೇ, ಪು.೭೦

೧೩೫. ಅದೇ, ಪು.೯೪

೧೩೬. ಅದೇ, ಪು.೯೭

೧೩೭. ಅದೇ, ಪು.೬೪

೧೩೮. ಅದೇ, ಪು.೭೧

೧೩೯. ಅದೇ, ಪು.೯೨

೧೪೦. ಅದೇ, ಪು.೯೫

೧೪೧. ಅದೇ, ಪು.೯೭

೧೪೨. ಅದೇ, ಪು.೫೮

೧೪೩. ಅದೇ, ಪು.೭೭

೧೪೪. ಅದೇ, ಪು.೭೫

೧೪೫. ಅದೇ, ಪು.೮೦

೧೪೬. ಟಿ.ಕೆ. ಇಂದುಬಾಯಿ, ಹೆಳವನಕಟ್ಟೆ ಗಿರಿಯಮ್ಮ ಹಾಡುಗಳು, ಪು.೩೦

೧೪೭. ಲೀಲಾವತಿ ಎಸ್.ರಾವ್, ಹೆಳವನಕಟ್ಟೆ ಗಿರಿಯಮ್ಮ ಕೀರ್ತನೆಗಳು, ಪು.೨೦೮

೧೪೮. ಅದೇ, ಪು.೧೩೭

೧೪೯. ಅದೇ, ಪು.೧೨೭

## ಅಧ್ಯಾಯ ೬

# ಗಿರಿಯಮ್ಮನ ಭಾಷೆ ಮತ್ತು ಶೈಲಿ

೬

# ಗಿರಿಯಮ್ಮನ ಭಾಷೆ ಮತ್ತು ಶೈಲಿ

ಹರಿದಾಸರು ಕನ್ನಡ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡುವುದರ ಮೂಲಕ ಸಾಹಿತ್ಯ ಲೋಕವನ್ನು ಸಮೃದ್ಧಿಗೊಳಿಸಿದ್ದಾರೆ. ೧೨ನೇ ಶತಮಾನದ ನಂತರ ಕನ್ನಡ ಸಾಹಿತ್ಯವು ಏಕತಾನತೆಯಿಂದ ಹೊಸ ರೂಪು ಪಡೆದು ಪ್ರಕಟವಾಯಿತು. ವಚನಕಾರರು ಜನಪರ ಸಾಹಿತ್ಯಕ್ಕೆ ಶ್ರೀಕಾರ ಹಾಕಿ ಪ್ರಚುರ ಪಡಿಸಿದರು. ಹರಿದಾಸರು ಜನಪರ ಧ್ವನಿಯನ್ನೇ ತಮ್ಮ ಸಾಹಿತ್ಯದ ಮುಖ್ಯ ಗುರಿಯನ್ನಾಗಿಸಿಕೊಂಡರು. ಸಂಸಾರದ ನಿಸ್ಸಾರತೆ, ಡಂಭಾಚಾರ, ಸೊಗಿನ ಮಡಿವಂತಿಕೆ ಸಮಾಜ ವೈವಿಧ್ಯಗಳು ಭಗವಂತನ ಸಾಕ್ಷಾತ್ಕಾರದ ಹಂಬಲ ತೀವ್ರವಾದಾಗ ಅವನ್ನು ಕಂಡು ಅನುಭವವಾದಾಗ ಅವರ ಅನುಭವಗಳು ವಿವಿಧ ಪ್ರಕಾರಗಳಲ್ಲಿ ಹರಿದು ಬಂದವು. ಹರಿದಾಸರ ಭಾವನೆಗಳು ತಕ್ಕ ಬಂಧಗಳಲ್ಲಿ ಹೊರಹೊಮ್ಮಿವೆ. ಭಾವ ವೈವಿಧ್ಯ, ವಿಚಾರ ವೈವಿಧ್ಯ, ಭಾಷಾ ವೈವಿಧ್ಯಗಳಿಗನುಗುಣವಾಗಿ ಛಂದೋ ವೈವಿಧ್ಯ ರೂಪುಗೊಂಡಿದೆ.

ದ್ವೈತ ಸಿದ್ಧಾಂತದ ತಿರುಗಳನ್ನು ಹರಿ ಮಹಿಮೆಯನ್ನು ಸಾರುವುದಕ್ಕೆ ಸಾಹಿತ್ಯವನ್ನು ಮಾಧ್ಯಮವನ್ನಾಗಿಸಿ ಕೊಂಡರು. ಹೀಗೆ ಬಳಸಿಕೊಂಡ ಸಾಹಿತ್ಯವು ಅನೇಕ ಲಕ್ಷಣಗಳನ್ನು ಒಳಗೊಂಡಿದೆ. ಮೂಲತಃ ಸಾಧಕರಾದ ಹರಿದಾಸರ ಕಾವ್ಯಕ್ಕೆ ತತ್ವವೇ ಶರೀರ ಸಮರ್ಪಣೆ ಮನೋಭಾವವೇ ಅದರ ಹೃದಯ. ಭಕ್ತಿಯೇ ಉಸಿರು. ದಾಸರ ಕೃತಿಗಳಲ್ಲಿನ ಕಾವ್ಯದ ಸೌದರ್ಯತೆಗೆ, ಸಾಹಿತ್ಯದ ಸೊಬಗಿಗೆ ಭಕ್ತಿರಸವೇ ಕಾರಣ.

"ಪ್ರತಿಯೊಬ್ಬ ಹರಿದಾಸರ ರಚನೆಗಳಲ್ಲಿಯೂ ಆತ್ಮಾನುಸಂಧಾನದ ವಿವಿಧ ಹಂತಗಳನ್ನು ತಮ್ಮ ಬದುಕಿನ ಆಗು ಹೋಗಿನ ವಿವಿಧ ಅಂಶಗಳನ್ನು ಮೆಟ್ಟಿಲು ಮೆಟ್ಟಲಾಗಿ ಹೇಳಿರುವುದರಿಂದ ಅವು ಅವರ ಆತ್ಮಗೀತೆಗಳಂತಿವೆ. ಅವರ ಭಕ್ತಿಯ ವೈವಿಧ್ಯ ಗಹನವಾದ ವಿಷಯಗಳನ್ನು ಸರಳವಾಗಿ ಹೇಳುವುದು, ಆಯಾ ಸಂದರ್ಭದಲ್ಲಿ ಅವರಲ್ಲಿ ಉಂಟಾದ ಭಾವಾವೇಶಕ್ಕೆ ತಕ್ಕಂತೆ ಅವರ ಅಭಿವ್ಯಕ್ತಿಯಲ್ಲಿ ವ್ಯಕ್ತವಾಗುವ ಭಾಷೆಯ ಬೆಡಗು, ವೈಭವಗಳು ಈ ರಚನೆಗಳಿಗೆ ಸಾಹಿತ್ಯ ಸ್ವಾರಸ್ಯವನ್ನು ತಂದುಕೊಟ್ಟಿದೆ".[೧]

ಹರಿಹಾದಸರ ಆರಾಧನಾ ವೈವಿಧ್ಯತೆಯಲ್ಲಿ ಕಾವ್ಯಾಂಶಗಳು ಅಡಕವಾಗಿವೆ. ಪ್ರತಿಯೊಬ್ಬ ಹರಿದಾಸರು ತಮ್ಮದೇ ಆದ ಶೈಲಿಯನ್ನು ರೂಢಿಸಿಕೊಂಡಿದ್ದಾರೆ. ಅದರಂತೆ ಹೆಳವನಕಟ್ಟೆ ಗಿರಿಯಮ್ಮನವರ ಸಾಹಿತ್ಯದಲ್ಲಿ ಸಾಹಿತ್ಯಿಕ ಮೌಲ್ಯಗಳು ತುಂಬಿಕೊಂಡು ಬಂದಿವೆ.

## ರೂಪಗಳು

### ಕೀರ್ತನೆ

ಕನ್ನಡ ಸಾಹಿತ್ಯದ ಆದಿಯಿಂದ ಅನೇಕ ಸಾಹಿತ್ಯ ರೂಪುಗಳು ಕಂಡುಬಂದಿವೆ. ಚಂಪೂ ಶೈಲಿ ಹಳಗನ್ನಡವನ್ನು ಬಳಸಿದರೆ ನಡುಗನ್ನಡ ಅವಧಿಯಲ್ಲಿ ಶರಣರು, ದಾಸರು ಬಳಸಿದಂತಹ ವಚನ, ಸ್ವರವಚನ, ಕೀರ್ತನೆ, ಸುಳಾದಿ, ಉಗಾಭೋಗಗಳಂತಹ ಸಾಹಿತ್ಯ ರೂಪುಗಳು ಗಮನ ಸೆಳೆಯುತ್ತವೆ. ಹರಿದಾಸರ ವಿಚಾರಕ್ಕೆ ಬಂದಾಗ ಕೀರ್ತನೆ, ಸುಳಾದಿ, ಉಗಾಭೋಗಗಳು ವ್ಯಾಪಕವಾಗಿ ಬಳಕೆಗೊಂಡವು. ಅದರಲ್ಲೂ ಹರಿದಾಸ ಸಾಹಿತ್ಯಿಕ ಪ್ರಾರಂಭಿಕ ಯುಗದಲ್ಲಿ ಅಂದರೆ ಪುರಂದರದಾಸರ ಮತ್ತು ಕನಕದಾಸರ ಕಾಲದಲ್ಲಿ ಕೀರ್ತನೆ ದಾಸ ಸಾಹಿತ್ಯದ ಜೀವ ಧ್ವನಿಯಾಗಿ ಹೊರಹೊಮ್ಮಿತ್ತು. ನಂತರ ದಾಸ ಸಾಹಿತ್ಯದ ಎರಡನೇ ಹಂತದಲ್ಲಿ ವಿಜಯದಾಸರ ಕಾಲದಲ್ಲಿ ಸುಳಾದಿ ಪ್ರಕಾರವನ್ನು ಪ್ರಮುಖ ಮಾಧ್ಯಮವನ್ನಾಗಿಸಿಕೊಳ್ಳಲಾಯಿತು. ವಿಜಯದಾಸರನ್ನು ಸುಳಾದಿ ದಾಸರೆಂದು ಕರೆಯುವಷ್ಟರ ಮಟ್ಟಿಗೆ ಸುಳಾದಿ ಪ್ರಕಾರವನ್ನು ಹೆಚ್ಚಿನ ರೀತಿಯಲ್ಲಿ ಬಳಸಿಕೊಂಡರು. ಕೀರ್ತನೆ ಸುಳಾದಿ, ಉಗಾಭೋಗಗಳು ಅಪ್ಪಟ ದೇಶಿ ಛಂದೋ ಬಂಧಗಳು.

ಭಗವಂತನನ್ನು ಒಲಸಿಕೊಳ್ಳುವ ಸಾಧನಗಳಲ್ಲಿ ಕೀರ್ತನೆಯೂ ಒಂದು. ಗಾಯನದ ಮುಖಾಂತರ ದೇವರನ್ನು ಸ್ತುತಿಸುವುದೇ 'ಕೀರ್ತನಭಕ್ತಿ'ಯಾಗಿದೆ. ಕೀರ್ತನೆಗಳನ್ನು ರಚನೆಯ ದೃಷ್ಟಿಯಿಂದ ನೋಡಿದಾಗ ಪಲ್ಲವಿ, ಅನುಪಲ್ಲವಿ, ನುಡಿಗಳು ಎಂಬ ತ್ರಿಧಾತುಗಳು ಕಂಡುಬರುತ್ತವೆ. ತಾವು ಕಂಡ ಸತ್ಯವನ್ನು ತಮ್ಮ ಅನುಭವವನ್ನು ಪಲ್ಲವಿಯಲ್ಲಿ ಹೇಳಿ ಅನುಪಲ್ಲವಿ ಮತ್ತು ನುಡಿಗಳಲ್ಲಿ ಅದನ್ನು ಸಮರ್ಥಿಸಲು ಪೋಷಿಸಲು ಯತ್ನಿಸಿದ್ದಾರೆ. ದಾಸರ ಪದಗಳು ಭಾವಗೀತೆಗಳಂತೆ ತೋರುವಲ್ಲಿ ಕೀರ್ತನೆ ಪ್ರಕಾರದ ಪಾತ್ರವನ್ನು ಮರೆಯುವಂತಿಲ್ಲ. ಕೀರ್ತನೆ ಬೆಳೆದುಬಂದದ್ದರ ಕುರಿತು ವಿದ್ವಾಂಸರು ತಮ್ಮ ಅಭಿಪ್ರಾಯಗಳನ್ನು ಹೇಳಿದ್ದಾರೆ. "ಕನ್ನಡದ ಕೀರ್ತನೆ ಅಥವಾ ಪದ ಎಂಬುದೇನು ಹೊಸದಲ್ಲ. ವೈದಿಕ ಪರಂಪರೆಯಿಂದ ಅದು ಬಂದದ್ದೆಂಬುದು ದೂರದ ಮಾತು. ಕನ್ನಡದ ಮಟ್ಟಿಗೆ ಪಾಡು, ಮೆಲ್ಪಾಡು ಬಾಜನೆಗಬ್ಬಗಳಿದ್ದವು ಆ ಮೇಲೆ ಶರಣರಲ್ಲಿ ಕೆಲವರು ಪದಗಳನ್ನು ಹಾಡಿದರು. ಅದೇ ಹರಿದಾಸರ ಬಾಯಲ್ಲಿ ಕೀರ್ತನೆ ಎಂದೇ ಹರಿಸ್ತುತಿ ಪರವಾದ ಹಾಡಾಯಿತು"[೨] ಎಂದು ಅಭಿಪ್ರಾಯ ಪಡುತ್ತಾರೆ. ರಂ.ಶ್ರೀ.ಮುಗಳಿಯವರು "ಶಿವಶರಣರು ಬರೆದ ಈ ಹಾಡುಗಳು ಪಲ್ಲವಿಯಿಂದ ಕೂಡಿ ಬೇರೆ ಬೇರೆ ರಾಗಗಳಲ್ಲಿ ಹಾಡಲು ಅನುವರಿತು ರಚಿತವಾದಗೇಯ ಕೃತಿಗಳು. ಹರಿದಾಸರ ಕೀರ್ತನ ಪ್ರಕಾರ ಮೂಲವೂ ಮಾದರಿಯೂ ಆಗಿತ್ತೆಂದು"[೩] ಡಾ.ಎಲ್.ಬಸವರಾಜು ಅವರು ಅಭಿಪ್ರಾಯ ಪಡುತ್ತಾರೆ.

"ಸ್ವರವಚನ ಮತ್ತು ಕೀರ್ತನೆ ಸ್ವರೂಪಗಳನ್ನು ಅಭ್ಯಸಿಸಿ ಹೇಳಬಹುದಾದರೆ, ಶರಣರ ಸ್ವರವಚನದ ಮುಂದಿನ ಬೆಳವಣಿಗೆಯೇ ದಾಸರ ಕೀರ್ತನೆ ಎನ್ನುವುದು ಹೆಚ್ಚು ಸೂಕ್ತ. ಸ್ವರವಚನ

ಸಾಹಿತ್ಯ ಹನ್ನೆರಡನೆಯ ಶತಮಾನದಲ್ಲಿಯೇ ಹುಟ್ಟಿಕೊಂಡಿದ್ದರೂ ಕೂಡ, ಆ ರೂಪದ ಸಾಧ್ಯತೆಗಳನ್ನು ವಿಸ್ತರಿಸಿದವರು ದಾಸರೆಂಬುದು ಒಪ್ಪಲೇಬೇಕಾಗುತ್ತದೆ"[೪] ಎನ್ನುವುದು ಅವರ ಅಭಿಪ್ರಾಯ.

ಹೆಳವನಕಟ್ಟೆ ಗಿರಿಯಮ್ಮ ಕೂಡ ಕೀರ್ತನ ಪ್ರಕಾರವನ್ನು ಬಳಸಿಕೊಂಡು ಕೃತಿ ರಚನೆಗೈದಿದ್ದಾಳೆ. ಸಂಖ್ಯೆಯಲ್ಲಿ ಕೀರ್ತನೆಯ ಲಕ್ಷಣಗಳನ್ನೊಳಗೊಂಡ ಹೆಚ್ಚು ೫೩ ಕೀರ್ತನೆಗಳಲ್ಲಿ ಭಕ್ತಿಪೂರ್ಣವಾದ ದೇವ ದೇವತಾ ಸ್ತುತಿಗಳು, ಆತ್ಮನಿವೇದನೆ, ಲೋಕನೀತಿ ಇತ್ಯಾದಿಗಳು ಇವೆ. ಒಂದೇ ಒಂದು ಉಗಾಭೋಗವನ್ನು ಬಿಟ್ಟರೆ ಉಳಿದವುಗಳೆಲ್ಲಾ ಪಲ್ಲವಿ, ಅನುಪಲ್ಲವಿ, ನುಡಿಗಳನ್ನುಳ್ಳ ಕೀರ್ತನೆಗಳು ಒಂದೆರಡರಲ್ಲಿ ಪಲ್ಲವಿ ಇಲ್ಲದಿರುವುದು ನುಡಿಗಳ ಸಂಖ್ಯೆ ಸಮನಾಗಿ ಇರುವುದು ಕಂಡುಬರುತ್ತದೆ.

## ಉಗಾಭೋಗ

ಹರಿದಾಸ ಸಾಹಿತ್ಯದ ಮತ್ತೊಂದು ವಿಭಿನ್ನ ರೂಪವೆಂದರೆ ಉಗಾಭೋಗ ಮುಕ್ತ ಛಂದಸ್ಸಿನಿಂದ ಕೂಡಿದ್ದು. ಇಲ್ಲಿ ಮಾತು ಮಿತಿ, ಅರ್ಥ ಪರಿಮಿತ. ಯುಗಾಭೋಗ= ಉಗಾಭೋಗ, ಉಗು+ಆಭೋಗ= 'ಉಗಾಭೋಗ'ಗಳಂತಹ ಉಗಾಭೋಗದ ನಿಷ್ಪತ್ತಿಗಳು ಹಲವರಲ್ಲಿ ಕಂಡುಬರುತ್ತವೆ. ಉಗಾಭೋಗ ಎಂಬ ಮಾತು ಕ್ರಿ.ಶ.ಸು.೧೨೧೦ ರಿಂದ ೧೨೪೦ರಲ್ಲಿ ಶಾರ್ಙ್ಗದೇವನ ಕಾಲದಿಂದ ಬಳಕೆಗೆ ಬಂದಂತೆ ಕಾಣುತ್ತದೆ. ಉದ್ಗ್ರಾಹ, ಮೇಲಾಪಕ ಧ್ರುವಾ, ಅನಂತ ಆಭೋಗ ಈ ಪಂಚಧಾತುಗಳ ಆದ್ಯಂತ ಪದಗಳನ್ನು ಸೇರಿಸಿ 'ಉದ್ಗ್ರಾಹ ಭೋಗ' ಎಂಬುದರ ಸಂಸ್ಕೃತದ ರೂಪ ಕನ್ನಡದಲ್ಲಿ ಉಗಾಭೋಗ ಎಂದಾಗಿರಬಹುದು. ಶ್ಲೋಕವನ್ನು ಹೋಲುವ ಇದು ಲಘುವಾದ ಬಂಧವೂ ಹೌದು. ನಿರ್ದಿಷ್ಟವಾದ ರಾಗ, ತಾಳಗಳಿಗೆ ಬದ್ಧವಾಗಿರದಿದ್ದರೂ ಅವು ರಾಗಬದ್ಧವಾಗಿಯೇ ಕೇಳಿಬರುವುದು ರೂಢಿ. ಬಹುತೇಕ ಉಗಾಭೋಗಗಳು ದ್ವಿತೀಯಾಕ್ಷರ ಪ್ರಾಸದಿಂದ ಕೂಡಿವೆ. "ಅನುಭವ ಹೆಚ್ಚಾದಂತೆ ಮಾತು ಮಿತವಾಗುತ್ತದೆಂಬಂತೆ, ದಾಸರ ಅನುಭವದ ಆಳ ಹೆಚ್ಚಿದಂತೆ ಆರಿಸಿದ ಅಣಿಮುತ್ತುಗಳಂತಹ ಕೆಲವೇ ಮಾತುಗಳಿಂದ ಒಂದೊಂದು ಉಗಾಭೋಗ ಸಿದ್ಧವಾಗಿದೆ. ಆ ಘನೀಭೂತವಾದ ರಸಗಟ್ಟಿಗಳಲ್ಲಿ ದಾಸರ ಜ್ಞಾನಾನುಭವಗಳು ಶೇಖರವಾಗಿವೆ".[೫] ಉಗಾಭೋಗಗಳು ಕಿರಿದರಲ್ಲಿಯೇ ಹಿರಿದಾರ್ಥವನ್ನು ಸಾರುವ ಪ್ರಕಾರ ಇವು ಜೀವನದ ಎಲ್ಲ ಅಂಶಗಳನ್ನು ಧಾರ್ಮಿಕ ಅನುಭವಗಳನ್ನು ಬಿತ್ತರಿಸುತ್ತವೆ.

ಗಿರಿಯಮ್ಮ ಒಂದು ಉಗಾಭೋಗವನ್ನು ರಚಿಸಿದ್ದಾಳೆ. ಅದರಲ್ಲಿಯೂ ನಾವು ದರ್ಶಿಸುವುದು ಪ್ರೌಢಕಾವ್ಯವನ್ನಲ್ಲಿ ಭಕ್ತಳೊಬ್ಬಳ ಸಾಮಾನ್ಯ ಸಹಜೋಕ್ತಿಗಳ ಅಂತರಂಗ ನಿವೇದನೆಯನ್ನು ಕಾಣಬಹುದು.

ಪಾಪಿಯೊಲು ನಾ ಬಂದೆ ಪರದೇಶಿ ನಾನಾದೆ
ಕಾಪಾಡುವರ ಕಾಣೆ ಕೈಪಿಡಿದು
ಆಪತ್ತು ಬಂದ ಕಾಲಕ್ಕೆ ಆರೈಯ್ಯರೊಬ್ಬರಿಲ್ಲ

ಶ್ರೀಪತಿಯೆ ಕಡೆಕಾಯಿಸೋ

ತಂದೆ ತಾಯೆಂಬುದನು ನಾನೊಂದು ಗುರುತನರಿಯೆ ನಿಮ್ಮ

ಕಂದಳೆನಿಸಿ ಕಡೆಹಾಯಿಸೊ ಹೆಳವನಕಟ್ಟೆರಂಗ[೬]

ಸಾಮಾನ್ಯವಾಗಿ ಎಲ್ಲ ಉಗಾಭೋಗಗಳಲ್ಲಿ ಕಂಡುಬರುವ ದ್ವಿತೀಯಾಕ್ಷರ ಪ್ರಾಸ ಇಲ್ಲಿ ಕಂಡು ಬರುತ್ತದೆ. ಒಟ್ಟಿನಲ್ಲಿ ಭೀಮವ್ವ ತನ್ನ ಕೃಷ್ಣ ಭಕ್ತಿಯನ್ನು ಉಗಾಭೋಗದ ಮೂಲಕ ತೋಡಿ ಕೊಂಡಿದ್ದಾಳೆ. ದಾಸ ಸಾಹಿತ್ಯದ ಮೂರು ಮುಖ್ಯ ಪ್ರಕಾರಗಳಲ್ಲಿ ಕೀರ್ತನೆ ಮತ್ತು ಉಗಾಭೋಗಗಳನ್ನು ಬಳಸಿಕೊಂಡಿದ್ದಾಳೆನ್ನಬಹುದು.

**ಭಾಷೆ**

ಹರಿದಾಸರು ಅಂದಿನ ಸಮಾಜದ ಅಗತ್ಯಕ್ಕೆ ಅದು ಭಾಷೆಯನ್ನು ಬಳಸಿದರು ವಚನ ಸಾಹಿತ್ಯದಿಂದ ಭಾಷೆಯ ಬಳಕೆ ಕುರಿತು ಹರಿದಾಸರು ಅರಿತುಕೊಂಡಿದ್ದರು. ಪಂಡಿತ ಭಾಷೆಯಿಂದ ಜನಭಾಷೆಯೆಡೆಗೆ ಹೊರಳಿದ ಹರಿದಾಸರು ದ್ವೈತತತ್ವಗಳನ್ನು ಪ್ರಚಾರ ಮಾಡಲು ನೆಲದ ಭಾಷೆಯನ್ನೇ ಸಾಧನವನ್ನಾಗಿಸಿ ಕೊಂಡರು. ಪ್ರತಿಯೊಬ್ಬ ಹರಿದಾಸರೊಳಗಿನ ಅಂತರಂಗದ ತುಮುಲಗಳಿಗೆ ಭಾಷೆ ಧ್ವನಿಯಾಗಿ ಜೀವ ತುಂಬಿದೆ.

''ಸಂಕೀರ್ಣವಾಗಿದ್ದ ಮತತತ್ವ ಹಾಗೂ ಆಧ್ಯಾತ್ಮಿಕ ಸಂಗತಿಗಳು ಸಂಗೀತ ಮಾಧ್ಯಮದಲ್ಲಿ ಸರಳ ಕನ್ನಡದಲ್ಲಿ ಸುಲಭ ಭಕ್ತಿಯಲ್ಲಿ ಜನಸಾಮಾನ್ಯರಿದ್ದಲ್ಲೇ ದೊರೆತದ್ದು. ದಾಸರು ಕೊಟ್ಟ ಈ ಹೊಸ ಪರಿಕಲ್ಪನೆ ಜನಸಾಮಾನ್ಯರಲ್ಲಿ ಒಂದು ಆತ್ಮವಿಶ್ವಾಸ ಹಾಗೂ ಭರವಸೆಯನ್ನು ಹುಟ್ಟು ಹಾಕಿತು. ಹರಿದಾಸ ಸಾಹಿತ್ಯ ಜನರ ಮಧ್ಯೆ ಜನರ ಮುಂದೆ ಹುಟ್ಟಿದ ಆಶು ರಚನೆಗಳು. ಅವು ಅಂದಂದಿಗೆ ಮೌಖಿಕವಾಗಿ ಹಾಡಿದ ಜನಭಾಷೆಗೆ ದೇವ ಭಾಷೆಯನ್ನು ಸ್ಥಾನತಂದು ಕೊಟ್ಟವರು ಹರಿದಾಸರು''.[೭] ಪ್ರಾದೇಶಿಕ ಭಾಷೆಯ ಕಸುವು ತುಂಬಿಕೊಂಡು ಹರಿದಾಸರ ಕೀರ್ತನೆಗಳು ಜನರ ಮನನಗಳಲ್ಲಿನ ಚಿರಸ್ಥಾಯಿಯಾಗಿ ನೆಲೆಯೂರಿದವು.

ಭಾವ, ಭಾಷೆಗಳ ಮೇಳೈಕೆಯೇ ಶೈಲಿಯಾಗಿದೆ. ''ಶೈಲಿಯಿಲ್ಲದಿದ್ದರೆ ಬರವಣಿಗೆ ನೀರಸನವಾಗುತ್ತದೆ. ಅಲ್ಲಿ ಕಾವ್ಯ ಗುಣವಿರುವುದಿಲ್ಲ. ಅಂದ ಮೇಲೆ ಆನಂದ ಸೊನ್ನೆಯೇ. ಸಾಹಿತ್ಯ ಶೈಲಿಗೆ ಸಂಬಂಧ ಸಾಮೀಪ್ಯ ಬಹಳ ಶೈಲಿಯೇ ಸಾಹಿತ್ಯವೆಂದು ಹೇಳುವುದುಂಟು. ಶೈಲಿಯ ಹೆಗ್ಗುರುತು ವ್ಯಕ್ತಿತ್ವತೆ, ಹೇಳಬೇಕಾದ ವಿಷಯವನ್ನು ದೈವಿಕವಾಗಿ, ಭಾವೋತ್ಕರ್ಷದಿಂದ ಉದ್ರೇಕಾವಸ್ಥೆಯಲ್ಲಿ ಮೇಲ್ಮೆಗೊಳಿಸಿ ರೂಪಾಂತರ ಪಡಿಸುವುದರಿಂದ ಬರವಣಿಗೆಗೆ ಗಾಂಭೀರ್ಯವೂ, ವೈಶಿಷ್ಟವೂ ಕೂಡಿಕೊಂಡು ಅದೇ ಶೈಲಿಯೆನಿಸಿಕೊಳ್ಳುತ್ತದೆ''.[೮]

ಹೈದ್ರಾಬಾದ್ ಕರ್ನಾಟಕದ ಆಡು ಭಾಷೆ ಸೊಗಡಿನಿಂದ ಅವರ ಕೀರ್ತನೆಗಳು ವಿಭಿನ್ನವೆನಿಸಿವೆ. ಗಿರಿಯಮ್ಮ ಶಬ್ದ ಸಂಪತ್ತು ವಿಪುಲವಾದುದು. ಶಬ್ದವನ್ನು ಸಂದರ್ಭಕ್ಕೆ ತಕ್ಕಂತೆ ಬಳಸಿಕೊಂಡಿರುವುದರಿಂದ ಆಕೆಯ ಕಾವ್ಯ ಸೌಂದರ್ಯ ಇಮ್ಮಡಿಸಿದೆ. ಆಡು ಭಾಷೆಯ ಪದಗಳು ಆಕೆಯ ಕೀರ್ತನೆಯ ಸಾಲುಗಳಲ್ಲಿ ಕಂಡುಬರುತ್ತವೆ.

ಛಿಟಿ ಛಿಟಿಲೆಂದಾರ್ಭಟಿಸಿ ಕಂಬವು ಸಿಡಿಯೆ
ಕಟಿ ಕಟಿ ಮಸಿದಗ್ನಿ ನಿಟ್ಟುಸಿರಿನಿಂಹಲ್ಲಳ
ಕಟಿ ಕಟಿ ಕಡಿವುತುಬ್ಬಸ ತೋರಿನಿಂದ
ಕಠಿಣ ಮಾರುತಿಯ್

ಗೀರಿಯಮ್ಮ ತನ್ನೆಲ್ಲ ಹಾಡುಗಳನ್ನು ಭಕ್ತಿಪೂರ್ವಕವಾಗಿ ಬಹುಮಟ್ಟಿಗೆ ತನಗೆ ಸಹಜವಾದ ಭಾಷೆಯಲ್ಲಿ ಸರಳವಾಗಿ ರಚಿಸಿ ನಿರರ್ಗಳವಾಗಿ ಹಾಡಿದ್ದಾಳೆ. ಭಕ್ತಿ ಅವಳ ಎಲ್ಲ ಹಾಡುಗಳ ಪ್ರೇರಕ ಹಾಗೂ ರೂಪಕ ಶಕ್ತಿ. ಸಣ್ಣ ಹಾಡುಗಳಲ್ಲಿ(ಕೀರ್ತನೆ) ಅದರ ನೇರ ಅಭಿವ್ಯಕ್ತಿ ಇದ್ದರೆ ದೊಡ್ಡ ಹಾಡುಗಳಲ್ಲಿ ಹರಿಯ ಅಥವಾ ಹರಿಭಕ್ತರ ಕಥನ ಕಾವ್ಯವಿದೆ. ಎಲ್ಲ ಕೃತಿಗಳ ಆದಿ ಅಂತ್ಯಗಳಲ್ಲಿ ದೈವಸ್ತುತಿ ಬಂದಿದೆ. ವಾತ್ಸಲ್ಯ ಮತ್ತು ಮಧುರಭಾವವು ಆಕೆಯ ಹಾಡುಗಳಲ್ಲಿ ಕಂಡುಬರುತ್ತದೆ. ಲೌಕಿಕ ಜೀವನದಲ್ಲಿ ನಿರಾಸಕ್ತಳಾದ ಗಿರಿಯಮ್ಮ ಕೃತಿಗಳಲ್ಲಿ ಮಾತ್ರ ಬದುಕಿನ ಚೆಲುವನ್ನು ಉತ್ಸಾಹದಿಂದ ವರ್ಣಿಸಿದ್ದಾಳೆ. ಒಡವೆ, ಅಡಿಗೆ, ಊಟ, ಹಬ್ಬ, ಸಮಾರಂಭ ಇವುಗಳ ವರ್ಣನೆ, ವಿವರಗಳು ಬಹು ಸ್ವಾರಸ್ಯವಾಗಿ ದೀರ್ಘವಾಗಿ ಬಂದಿರುವುದೇ ಇದಕ್ಕೆ ಸಾಕ್ಷಿ. ಗಿರಿಯಮ್ಮ ಅತ್ಯಂತ ವಿನಯದಿಂದ ಪದೇ ಪದೇ ಹೆಚ್ಚಾಗಿ ಅರಿಯದ ಹೆಣ್ಣು ಬಾಲೆಯು ನಾ ಅನ್ವಯ ಅರ್ಥ ಚಾತುರ್ಯ ಬಲ್ಲವಳಲ್ಲ. ಅರಿಯೆನು ಕವಿತಾ ಚಾತುರ್ಯದ ಮಹಿಮೆಯ ಗುರುಮುಖದಲಿ ಹೇಳಲಿಲ್ಲ ಎಂದೆಲ್ಲಾ ಹೇಳಿಕೊಂಡಿದ್ದಾಳೆ. ಗುರುಮುಖದಿಂದ ಕ್ರಮ ಪ್ರಕಾರವಾದ ಶಿಕ್ಷಣ ಅವಳಿಗೆ ದೊರೆಯದೆ ಹೋಗಿದ್ದರೂ ಹಿರಿಯರಿಂದ ಕೇಳಿ ಆಕೆ ಸಾಕಷ್ಟು ತಿಳಿದವಳು. ಅನುಭವದಿಂದ ಜ್ಞಾನ ಪಡೆದವಳು. ಆಗಿದ್ದಳೆಂಬುದರಲ್ಲಿ ಸಂಶಯವಿಲ್ಲ. ಕಾವ್ಯಕ್ಕೆ ಬೇಕಾದ ಛಂದಸ್ಸು ಅಲಂಕಾರಗಳು, ಆಕೆಗೆ ಗೊತ್ತಿದೆ. ಪ್ರಾಸಾನುಪ್ರಾಸಗಳು, ಉಪಮೆ, ರೂಪಕ, ಗಾದೆ ಮಾತುಗಳು ಸಹಜವಾಗಿ ಅವಳ ಕೃತಿಗಳಲ್ಲಿ ಬಂದಿವೆ. ಬ್ರಹ್ಮಕೊರವಂಜಿಯಲ್ಲಿ ಮೊದಲಿಗೆ ಐದು ನುಡಿಗಳಲ್ಲಿ ಬರುವ ವೆಂಕಟೇಶ್ವರನ ಸ್ಮರಣೆ ತನ್ನಷ್ಟಕ್ಕೆ ಒಂದು ಸುಂದರವಾದ ಹಾಡಾಗಿದೆ. ಅದರ ಕೊನೆಯ ಎರಡು ನುಡಿಗಳನ್ನು ಗಮನಿಸಬಹುದು.

ಕನ್ನಡಿಯ ಪಳಿದಳಿಪ ಕದಪುಕಂಗಳು ಎಸೆಯೆ
ಕರ್ಣಕುಂಡಲದ ಸಂಪಿಗೆಯ ನಾಸಿಕದ
ರನ್ನತುಟಿ ಝುಗ ಝುಗಿಸೆ ಕುಡಿಹುಬ್ಬುಗಳು ಎಳೆಯ

ಮನ್ಮಥನ ಚಾಪದಂತೆಸೆವ ಮೂರುತಿಯ ನೆನೆವೆ ನಾನು
ಅರೆದಿಂಗಳಂತೆಸೆವ ನೊಸಲ ಕಸ್ತೂರಿ ತಿಲಕ
ಹೊಳೆವ ಕಿರೀಟ ಮಸ್ತಕದಿ ಥಾಳಿಸುವ
ಅಲಸವೀರೆಳ್ಳಗವ ಕರುಣದಲಿ ರಕ್ಷಿಸುವ
ಹೆಳವನಕಟ್ಟೆ ಶ್ರೀ ವೆಂಕಟೇಶ್ವರನ ನೆನೆವೆ ನಾನು[೧೦]

ವೆಂಕಟೇಶ್ವರನ ಸುಂದರ ರೂಪವನ್ನು ಅಷ್ಟೇ ಸುಂದರವಾಗಿ ಚಿತ್ರಿಸುವ ಈ ಸಾಲುಗಳು ಗಿರಿಯಮ್ಮನ ವರ್ಣನಾ ರೀತಿಗೂ ಕನ್ನಡಿ ಹಿಡಿಯುತ್ತದೆ. ಗಿರಿಯಮ್ಮ ವರ್ಣನಾ ಪ್ರಿಯ ಸ್ವತಃ ವಿರಾಗಿಣಿಯಾದರೂ ತನ್ನ ಹಾಡುಗಳಲ್ಲಿ ಬರುವ ಪಾತ್ರಗಳ ಒಡವೆ, ವಸ್ತ್ರಾಲಂಕಾರಗಳನ್ನು ತುಂಬ ಆಸಕ್ತಿಯಿಂದಲೇ ವರ್ಣಿಸಿದ್ದಾಳೆ. ಉದಾಹರಣೆಗೆ ಉದ್ದಾಳಿಕನ ಕಥೆಯ ಚಂದ್ರಾವತಿಯ ವರ್ಣನೆ, ಸೀತಾಕಲ್ಯಾಣದ ಸೀತಾರಾಮರ ವರ್ಣನೆ, ಶಂಕರಗಂಡನ ಹಾಡಿನ ಶಂಕರನ ವೇಷಭೂಷಣದ ವರ್ಣನೆ ಇತ್ಯಾದಿಗಳನ್ನು ನೋಡಬಹುದು. ಆದರೆ ವೇಷಭೂಷಣಗಳನ್ನು ಧರಿಸುವಲ್ಲಿ ಸ್ತ್ರೀಯರೇ ಮುಂದಾದ್ದರಿಂದ ಅವರ ಅಲಂಕಾರದ ವರ್ಣನೆ ಸಹಜವಾಗಿಯೇ ದೀರ್ಘವಾಗುತ್ತದೆ. ಆಗಿನ ಕಾಲದಲ್ಲಿ ಬಳಕೆಯಾಗುತ್ತಿದ್ದ ಅಪರೂಪದ ಸೌಂದರ್ಯ ವರ್ಧಿಸುವಂತಹ ಆಭರಣಗಳು, ವೇಷಭೂಷಣಗಳ ವರ್ಣನೆ ಗಿರಿಯಮ್ಮನ ಸಾಂಪ್ರಾದಾಯಿಕ ಪ್ರಜ್ಞೆಗೆ ಕನ್ನಡಿಯಾಗಿದೆ. ಇದಕ್ಕೆ ಉದ್ದಾಳಿಕನ ಕಥೆಯ ಚಂದ್ರಾವತಿಯ ಚೆಲುವು ಧರಿಸಿದ ಅಲಂಕಾರದ ಆಭರಣಗಳ ವರ್ಣನೆಯ ವಿವರಣೆಯನ್ನು ಗಮನಿಸಬಹುದು. ಅಂದುಗೆ, ಕಾಲಂದುಗೆ, ಅಡ್ಡಿಕೆ, ಉಂಗುರ, ಚಿಂತಾಕು, ಏಕಾವಳಿ, ಒಡ್ಯಾಣ, ಓಲೆ, ಕಂಕಣ, ಗುಂಡಿಯ ಸರ, ಕಾಲುಂಗರ, ಮುತ್ತಿನಬಟ್ಟು, ಮೂಗುತಿ, ಪಾಯಪಟ್ಟಿ ಇನ್ನಿತರ ಆಭರಣಗಳ ವರ್ಣನೆಯಿದೆ.

ಜೊತೆಗೆ ಚಂದ್ರಾವತಿಯೊಡನೆ ನೀರಾಟಕ್ಕೆ ಹೊರಟ ಅವಳ ಸಖಿಯರ ವರ್ಣನೆಯನ್ನೂ ಗಮನಿಸಬಹುದು. ಗರ್ಭಿಣಿ ಚಂದ್ರಾವತಿಯ ವರ್ಣನೆ ಹೆಣ್ಣೊಬ್ಬಳು ಮಾತ್ರವೇ ಮಾಡಬಹುದಾದುದು ಎನ್ನುವಷ್ಟು ಸಹಜತೆಯಿಂದ ಕೂಡಿದೆ.

ತಿಂಗಳು ತುಂಬಿತು ಕಂಗಳು ಬಳೆಬಿಟ್ಟು
ಸರ್ವಾಂಗ ಬಡವಾಗಿ ತೋರಿದವು
ಹೊಂಬಣ್ಣವೇರಿತು ಹೊಳೆವ ದೇವಾಂಗವು
ತುಂಬಿದ ಕೊಳ ಸೂಸುವಂತೆ[೧೧]

ಇದರ ಜೊತೆಗೆ ನುಡಿ ೧೦೪, ೧೦೫, ೧೧೦, ೧೧೭ರವರೆಗಿನ ವರ್ಣನೆಗಳನ್ನು ಗಮನಿಸಬಹುದು. ಗಿರಿಯಮ್ಮ ಪಾತ್ರಗಳ ಚೆಲುವು ಒಡವೆ, ವಸ್ತ್ರಾಲಂಕಾರಗಳ ವರ್ಣನೆಗಳನ್ನು ತಂದಂತೆಯೆ ಅಡಿಗೆ ತಿಂಡಿಗಳ ವರ್ಣನೆಯನ್ನೂ ರಸವತ್ತಾಗಿ ತರುತ್ತಾಳೆ. ಗರ್ಭಿಣಿ ಚಂದ್ರಾವತಿ ಬಯಸಿದ ತಿಂಡಿತಿನಿಸುಗಳನ್ನು

ಗಿರಿಯಮ್ಮ ವರ್ಣಿಸಿದ್ದಾಳೆ. ಪಾಯಸ, ಅತಿರಸ, ಇಕ್ಷುದಂಡ, ಎರೆಯಪ್ಪ, ಕಡುಬು, ಖಂಡಸಕ್ಕರೆ, ನೊರೆಹಾಲು, ಚಿಗುಳಿ, ಜಂಬೀರರಸ, ತುಪ್ಪ, ತುರಿಗಾಯಿ, ಪರಮಾನ್ನ, ಫೇಣಿ, ಬೆಣ್ಣೆಚಕ್ಕುಲಿ, ಮಂಡಿಗೆ, ವೃಷ್ಟಾನ್ನ, ಮೇಲೋಗರ, ಮೊಸರು, ಮೋದಕ, ಶಾವಿಗೆ, ಸಂಡಿಗೆ, ಹಪ್ಪಳ, ಸಜ್ಜಿಗೆ, ಹಾಲು ಮುಂತಾದವು. ಕೇಳುಗರ ಬಾಯಲ್ಲೂ ನೀರೂರಿಸುತ್ತವೆ(ಉದ್ದಾಳಿಕನ ಕಥೆ ನುಡಿ ೧೧೦ ೧೧೩). ಸುದೀರ್ಘ ವರ್ಣನೆಗಳಂತೆಯೇ ಅನೇಕ ಚಿಕ್ಕ ಚೊಕ್ಕ ವರ್ಣನೆಗಳೂ ಕಾಣ ಸಿಕ್ಕುತ್ತವೆ. ಶಂಕರಗಂಡನ ಹಾಡಿನಲ್ಲಿ ಬರುವ ಶಂಕರಗಂಡನ ವರ್ಣನೆಯಿದು.

ಬಿಗಿದು ಸುತ್ತಿದ ದೊಡ್ಡ ಚೆಂಡಿಯ ಬೆನ್ನಿಗೆ
ಬಿಗಿದ ನಾಡಗಂಬಳಿಯ
ಹೆಗಲ ಮೇಲಿನ ಬಾರಿಕೋಲು ಮನ್ಮಥರಾಯ
ನಗುವಂತೆ ಮಾಡಿ ರೂಪವನು

ಹೆಗ್ಗಾಲು ಮರೆಯ ಮೆಟ್ಟಿದ್ದ ಕೈಯಲ್ಲಿ ದೊಡ್ಡ
ಕುಡುಗೋಲು ಕವಣೆಯ ಪಿಡಿದು
ಶೀಘ್ರದಿ ತೆರಳಿ ಅಂಗಜನಹಂಕಾರವ ನಿಗ್ರಹ
ಮಾಡುವೆನೆನುತ[೧೨]

ಹಾಡಿನಲ್ಲಿ ಬರುವ ಒಂದು ಚಿತ್ರವನ್ನು ಪ್ರಾಚೀನ ಅಲಂಕಾರಿಕರು ಹೇಳುವ ಸ್ವಭಾವೋಕ್ತಿಗೆ ನಿದರ್ಶನವಾಗಬಹುದು.

ಪಶುಜಾತಿ ಹುಲ್ಲೆ ಸಾರಂಗ ಮೃಗಗಳು ಬಹಳ
ಹಸಿದು ಬಾಯಾರಿ ಬತ್ತಿದ ಕೆರೆಗೆ ಬಂದು
ತೃಷೆಯಡಗದೆ ತಲ್ಲಣಿಸಿ ಮೂರ್ಛೆಗೊಂಡು
ದೆಸೆದೆಸೆಗೆ ಬಾಯಿ ಬಿಡುತಿಹವಯ್ಯ ಹರಿಯೆ[೧೩]

ಉಪಮೆ, ದೃಷ್ಟಾಂತಗಳಂತೂ ಎಲ್ಲ ಹರಿದಾಸರ ಹಾಡುಗಳಂತೆ ಇಲ್ಲಿಯೂ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತವೆ. ಉದಾಹರಣೆಗೆ ಅಜಾಮಿಳನ ತನ್ನ ಪಾಪಕೃತ್ಯಗಳಿಗೆ ಪಾಶ್ಚಾತ್ತಾಪ ಪಡುತ್ತ 'ಹದ್ದಿನ ಬಾಯೊಳಗಿನುರಗನಂತೆ' ಇದ್ದನಂತೆ 'ಒಣ್ಯೋಳು ಚೆಲ್ಲಿದ ಅಣಿಮುತ್ತಾರಿಸಿ ನೂಲಿಗೆ ಪೋಣಿಸಿದಂತೆ' ಗಿರಿಯಮ್ಮನ ಯೋಗಿಗಳರಸು ಉದ್ದಾಳಿಕನ ಕಥೆಯನ್ನು ಹೇಳಿರುವಂತೆ. 'ಚಿಪ್ಪಿನೊಳಗೆ ಮುತ್ತು ಮೂಡುವ ತೆರನಂತೆ' ರಘುರಾಯನಾತ್ಮಜೆ ಚಂದ್ರಾವತಿ ಹುಟ್ಟಿದಳು 'ಮತ್ತವಾರಣ ಕದಳೀವನ ಹೊಕ್ಕಂತೆ' 'ಪಂಕಜ ಪತ್ರದೊಳಿಪ್ಪನೀರಂತೆ' ಇತ್ಯಾದಿ.

ಸಂದರ್ಭದ ತೀವ್ರತೆಯನ್ನು ಅನುಸರಿಸಿ ಉಪಮೆಗಳು ಒಟ್ಟೊಟ್ಟಾಗಿಯೂ ಬರುತ್ತವೆ. ಉದಾಹರಣೆಗೆ ಕುಮಾರಿ ಚಂದ್ರಾವತಿ ಗರ್ಭಿಣಿಯಾದದ್ದನ್ನು ತಿಳಿದ ಅವಳ ತಾಯಿ. ಸರಳು ತಾಕಿದ ಹುಲ್ಲೆಯಂದದಿ, ಬೇಡನ ಬಲೆಗೆ ಸಿಲ್ಕಿದ ಪಕ್ಷಿಯಂತೆ ಅರೆಗಾಯ ಹೊಂದಿದ ನಾಗರಮಂದದಿ ಧರೆಯ ಹೆರಳುತ್ತಿದ್ದಳು ತಂದೆ ಈ ಸುದ್ಧಿಯನ್ನು ಕೇಳಿದ ಕರ್ಣದಿ ಸೂಲವೇರಿಸಿದಂತೆ, ರಾಹು ತುಡುಕಿದ ಚಂದ್ರನಂತೆ ಕೆಲವೆಡೆ ಉಪಮೆ ರೂಪಕಗಳು ಒಟ್ಟಾಗಿಯೇ ಬರುತ್ತವೆ. ಉದಾಹರಣೆಗೆ ಚಂದ್ರಾವತಿಯನ್ನು ಕಾಡಿಗೆ ಕಳಿಸಿ,

ತುಂಬೂರಗೊಳ್ಳೀಯ ಬಲೆಯೊಳಗಿಟ್ಟಂತೆ
ಕೆಂಡದೊಳಾಜ್ಯ ಬಿದ್ದಂತೆ
ತಂದೆ ತಾಯಿ ಪ್ರಧಾನಿ ಪರಿವಾರವು
ಬೆಂದರು ಶೋಕಾಗ್ನಿಯಿಂದ[೧೪]

ಸಣ್ಣಹಾಡುಗಳಾದ ತನ್ನ ಕೀರ್ತನೆಗಳನ್ನು ಭಾವನುಭವಗಳನ್ನು ಬಹಳಮಟ್ಟಿಗೆ ಸರಳವಾಗಿ ನೇರವಾಗಿ ಹಾಡಿಕೊಳ್ಳುವ ಗಿರಿಯಮ್ಮ ಕೆಲವೆಡೆ ಪರಿಣಾಮಕಾರಿಯಾಗಿಯೂ ಅಭಿವ್ಯಕ್ತಿಸಬಲ್ಲವಳೆಂಬುದಕ್ಕೆ ನಿದರ್ಶನ ಸಿಗುತ್ತದೆ. ಒಂದು ಕೀರ್ತನೆಯಲ್ಲಿ

ಮತ್ತಗಜ ಮೈಮರೆದು ಸುತ್ತಿಕೆಸರೊಳು ಬಿದ್ದು
ಶಕ್ತಿ ಹೀನವಾಗಿ ಏಳದಂತಾಗಿದೆ
ಮತ್ತಾರಿಗಳವಲ್ಲ ಮಂದರಾದ್ರಿಧರನೆ
ಎತ್ತಿ ಕಡೆಯಾಯಿಸೊ ಎನ್ನೊಡೆಯ ಶ್ರೀಹರಿಯೆ[೧೫]

ಇಹದ ಬದುಕಿನಲ್ಲಿ ಮೈಮರೆತ ಜೀವಕ್ಕೆ ಇಲ್ಲಿ ಮತ್ತಗಜ ರೂಪಕವಾಗಿ ಬಂದಿದೆ. ಇದು ಇಹದ ಭೋಗಗಳಲ್ಲಿ ಮದಿಸಿ, ಮೈಮರೆದು ಸುತ್ತಿ, ಈಗ ಕೆಸರಿನಲ್ಲಿ ಬಿದ್ದು ಶಕ್ತಿಹೀನವಾಗಿದೆ. ಆ ಕೆಸರಿನಿಂದ ಅದನ್ನು ಎತ್ತಲು ಇನ್ನಾರಿಗೂ ಸಾಧ್ಯವೇ ಇಲ್ಲ ಮುಳುಗುತ್ತಿದ್ದ ಮಂದರವನ್ನು ಎತ್ತಿ ಹಿಡಿದ ಕೂರ್ಮಾವತಾರಿ ಹರಿ ಮಾತ್ರ ಅದಕ್ಕೆ ಸಮರ್ಥ ಎನ್ನುವಲ್ಲಿ ಬಂದಿರುವ ಗಜವ ರೂಪಕ, ಮಂದರಾದ್ರಿಧರ ಎಂಬ ಪದ ತುಂಬ ಔಚಿತ್ಯ ಪೂರ್ಣವಾಗಿ ಬಂದಿರುವುದಷ್ಟೇ ಅಲ್ಲ ಆಕೆ ಹೇಳಬೇಕೆಂದಿರುವುದನ್ನು ಸರಳವಾದ ಮಾತುಗಳಲ್ಲೇ ಶಕ್ತಿಯುತವಾಗಿ ಅಭಿವ್ಯಕ್ತಿಸಿರುವುದನ್ನು ಗಮನಿಸಬಹುದು. 'ಹೆಚ್ಚಾಗಿ ಅರಿಯದ ಹೆಣ್ಣು ಬಾಲೆಯು ನಾ' ಎಂದು ಹೇಳಿಕೊಳ್ಳುವ ಈಕೆಯ ಹಾಡುಗಳಲ್ಲಿ ಪ್ರಾಸಾನುಪ್ರಾಸಗಳ, ಉಪಮೆ ರೂಪಕಾದಿ, ಅಲಂಕಾರಗಳು ಪ್ರಯತ್ನವಿಲ್ಲದೆಯೇ ಹರಿದುಬಂದಿರುವುದು ಕಾಣಸುತ್ತದೆ.

ನೀಲಕಂಠನ ನಿಗಮಸಾರನ ಬಾಲಶಶಿಧರ ಭರ್ಗನ್
ಶೀಲ ಸದ್ಗುಣ ಫಾಲನೇತ್ರನ ಕಾಲಾಂತಕ ಎನ್ನಕಾಯ್ದನ್[೧೬]
ಅಜಗರಶಯನನೆ ಬುಧಜನನ ಮಿತನೆ
ತ್ರಿಜಗವಂದಿತಪಾದ ಪದುಮಜಜನಕನೆ[೧೭]

ಪ್ರಸಾನುಪ್ರಾಸಗಳ ಜೊತೆಗೆ ಇಂಥ ಕೆಲವೆಡೆಗಳಲ್ಲಿ ಅವಳ ಭಾಷೆ ಸಂಸ್ಕೃತಿಮಯವಾಗುವುದನ್ನೂ ಗಮನಿಸಬಹುದು ಮಳೆಗಾಗಿ ಪ್ರಾರ್ಥಿಸಿದ ತನ್ನನ್ನು ಸಲಹು ಎಂದು ಈಕೆಯೇ ಪ್ರಾರ್ಥಿಸಿರುವ ಹಾಡುಗಳಲ್ಲೂ ಈಕೆಯ ಹಾಡುಗಳಲ್ಲಿ ಬರುವ ಭಕ್ತರ ಮಾತುಗಳಲ್ಲಿ ಗಜ, ಧ್ರುವ, ಅಜಾಮಿಳರ ದೃಷ್ಟಾಂತವಿತ್ತು ಅವರನ್ನು ಸಲಹಿದಂತೆ ನಮ್ಮನ್ನೂ ಸಲಹು ಎಂಬ ಮಾತುಗಳು ಸಾಮಾನ್ಯವಾಗಿ ಬರುತ್ತವೆ. ಉದಾಹರಣೆಗೆ

ಕಡೆಗಣ್ಣಲಿ ನೀ ನೋಡದಿರೆನ್ನಯ್ಯ ಬಿಡಬೇಡವೊಕೈಯ್ಯ
ಬಡವರ ಬಂಧು ಬಹುಕೃಪಾಸಿಂಧು
ಒಡೆಯ ನೀನಲ್ಲದೆ ಎನಗೆ ಬ್ಯಾರಿಲ್ಲವೊ ||ಪ||

ಶತ ಅಪರಾಧವ ಮಾಡಿದೆನಯ್ಯ ಸೇರಿದೆ ನಾ ನಿನ್ನ ಬೆನ್ನ
ಅತಿ ಪಾತಕಿ ಅಜಾಮಿಳನ ಉದ್ಧರಿಸಿದೆ
ಪೃಥಿವಿಯೊಳಗೆ ಬಿರುದಾಂತ ಶ್ರೀಕಾಂತ ||೧||

ನೆಲೆಗಾಣದೆ ನಾನಾಪರಿ ಚಿಂತೆಗೆ ಒಳಗಾದೆನೊ ನಾಹೀಗೆ
ಬಳಲಸಬ್ಯಾಡವೊ ಭಕ್ತಕುಟುಂಬಿ
ನಳಿನದಳಾಂಬಕ ನೀ ಸಲಹೆನ್ನನು ||೨||

ಸಾರಿ ಹೇಳುವೆ ಎನ್ನ ಬಳಗದ ಅರಭಾರವು ನಿನ್ನದು
ಹೇರೊಪ್ಪಿಸಿದ ಮೇಲ್ಯಾತರ ಸುಂಕವು
ಕಾರುಣ್ಯನಿಧಿ ಹೆಳವನಕಟ್ಟೆ ರಂಗಯ್ಯ[೮] ||೩||

ಗಿರಿಯಮ್ಮಳ ಜೀವನಾನುಭವದ ಫಲಗಳೆಂಬಂತೆ ಗಾದೆ ಮಾತುಗಳು ಅಲ್ಲಲ್ಲಿ ಸಂದರ್ಭಕ್ಕೆ ಅನುಗುಣವಾಗಿ ಬಳಕೆಯಾಗಿವೆ. ಉದಾಹರಣೆಗೆ 'ಹೇರೊಪ್ಪಿಸಿದ ಮೇಲ್ಯಾತರ ಸುಂಕವು' "ಬಲೆಗೆ ಸಿಲ್ಕಿದ ಪಕ್ಷಿಬೇಂಟೆಯವಗಲ್ಲದೆ ಕುಲವ ಕೂಡುವುದೆ" ಮಿಸುನಿಯ ಅಲಗೆಂದು ಬಸುರೊಳಗಿಡುವರೆ" ಇತ್ಯಾದಿ. ಜನಪದ ಸಾಹಿತ್ಯದಲ್ಲಿ ಕಂಡುಬರುವ ಪ್ರಕಾರವೆಂದರೆ ಗಾದೆ ಮಾತುಗಳು ಮನುಷ್ಯನ ಅನುಭವದ ಆಳದಿಂದ ಬರುವ ನುಡಿಗಟ್ಟುಗಳೇ ಗಾದೆ ಮಾತುಗಳು. ಗಾದೆ ಮಾತುಗಳ ಅರ್ಥ ಹೊಮ್ಮುವಿಕೆ ವಿಶಿಷ್ಟತೆಯಿಂದ ಕೂಡಿದೆ. ಗಾದೆ ಮಾತುಗಳು ಒಂದೇ ಸಾಲಾಗಿದ್ದರೂ ಹೊಮ್ಮಿಸುವ ಅರ್ಥ ವಿಸ್ತಾರವಾದುದ್ದು. ಜೇನಿನ ಹನಿಗಳಷ್ಟು ಸಿಹಿಕೊಡುವ ಗಾದೆ ಮಾತುಗಳನ್ನು ಗಿರಿಯಮ್ಮನ ಕೃತಿಯಲ್ಲಿ ಬಳಸಿಕೊಂಡಿದ್ದಾಳೆ.

ಗಿರಿಯಮ್ಮನ ಸಾಹಿತ್ಯ ಭಾಷೆ ಸರಳವಾದರೂ ಸಂದರ್ಭಕ್ಕೆ ತಕ್ಕಂತ ಸಂಸ್ಕೃತವನ್ನು ಬಳಸಿದ್ದಾರೆ. ಆಡು ನುಡಿಯ ದೇಸಿ ಆಕೆಯ ಹಾಡುಗಳ ಜೀವಾಳ ಎಂದರೆ ತಪ್ಪಾಗಲಾರದು. ಸಾಕಷ್ಟು ಶಬ್ದ ಭಂಡಾರ ಅವಳಲ್ಲಿದೆ. ಕೆಲವು ವಿಶೇಷ ಭಾಷಾ ಪ್ರಯೋಗಗಳು ಕಂಡುಬರುತ್ತವೆ.

ಈಕೆಯ ಹಾಡುಗಳಲ್ಲಿ ಕೆಲವು ವಿಶೇಷ ಭಾಷಾ ಪ್ರಯೋಗಗಳು ಕಂಡುಬರುತ್ತವೆ. ಕರ್ನಿಕೆ-ಕನ್ನಿಕೆ, ಅರುಂದ್ಯತಿ-ಅರುಂಧತಿ, ಬ್ರಾಹ್ಮರು-ಬ್ರಾಹ್ಮಣರು, ಬಾಳ-ಬಹಳ, ಪೂಜೆ-ಹೊಜೆ, ಪದನ-ಪಾದ, ಹೆತ್ತೋರ-ಹೆತ್ತವರ, ನೀತೀಲಿ-ನೀತಿಯಲ್ಲಿ ನೀರಾಗೆ-ನೀರೊಳಗೆ, ನಡದೊ-ನಡೆದಳು, ತುಂಬಿಸಿದೊ-ತುಂಬಿಸಿದಳು, ಕಾರ್ದನು-ಕಾರಿದನು, ನಾರೀರು-ನಾರಿಯರು, ಸ್ವಾರಿ-ಸವಾರಿ, ರುಂದ್ಯ-ವೃಂದ-ಕಾಡು ಇತ್ಯಾದಿ ಹಲವು ಪದಗಳಿಗೆ ಅನೇಕ ಪರ್ಯಾಯ ಪದಗಳನ್ನು ಬಳಸುತ್ತಾಳೆ. ಕೆಲವೆಡೆ ಇಂಥ ಪದಗಳನ್ನು ವಿಶಿಷ್ಟ ರೂಪಗಳೆಂದೂ, ಪ್ರಾಸಕ್ಕಾಗಿಯೋ ಉಳಿಸಿಕೊಂಡಿದ್ದರೆ, ಈ ಹಾಡುಗಳನ್ನು ಓದುತ್ತ ನಡೆದಂತೆ ಈಕೆಯ ಶಬ್ದಭಂಡಾರದ ವಿಸ್ತಾರ ಅಚ್ಚರಿ ಹುಟ್ಟಿಸುತ್ತದೆ. ಒಂದೇ ಅರ್ಥಕೊಡುವ ಹಲವು ಪದಗಳನ್ನು ಬಳಸುತ್ತಾಳೆ. ಮನ್ಮಥನಿಗೆ ನಾರಾಯಣ ಕುಮಾರ, ಪುಷ್ಪಶರ, ಪೂಶರ, ಪುಷ್ಪಬಾಣ, ಪಂಚಬಾಣ, ಮಲ್ಲಿಗೆಬಾಣ, ಮದನ, ಮಾರ, ಅಂಗಜ, ಮನಸಿಜ, ಕಂತು, ಕಂದರ್ಪ, ಕಾಮದೇವ, ಕಬ್ಬುಬಿಲ್ಲ ಶಂಕರಾರಿ ಇತ್ಯಾದಿ ಪದಗಳನ್ನೂ ಭೂಮಿಗೆ, ಇಳೆ, ಕೂಢಿ ಕುಂಭಿಣಿ, ಧಾತ್ರಿ, ಧರೆ, ನೆಲೆ, ಅವನಿ, ಪೃಥಿವಿ ಇತ್ಯಾದಿ ಪದಗಳನ್ನೂ ಅರಣ್ಯಕ್ಕೆ ವನ, ಕಾನನ, ಕಾಂತಾರ, ವೃಂದ, ರುಂದ್ಯ, ಅಡವಿ, ಕಾಡು ಎಂಬ ಶಬ್ದಗಳಿಗೆ ಆಕೆ ಬಳಸಿರುವ ಪರ್ಯಾಯ ಪದಗಳನ್ನು ಗಮನಿಸಬಹುದು.

ಕೆಲವೆಡೆ ದೋಷಪೂರ್ಣ ಪ್ರಯೋಗಗಳು ಕಾಣಸುತ್ತವೆ. ಉದ್ದಾಳಿಕನ ಕಥೆಯಲ್ಲಿ ನದಿಯನ್ನು ಕೆಲವೆಡೆ 'ಶರಧಿ'ಯೆಂದೂ ಕೆಲವೆಡೆ 'ಶರಧಿನದಿ'ಯೆಂದೂ ಕರೆಯಲಾಗಿದೆ. ಹೀಗೆಯೇ ತಾವರೆ ಕಮಲ, ಕಷ್ಟದುರಿತ ಕಿತ್ತಳೆನಾರಂಗ, ಅಡವಿ, ಅರಣ್ಯ, ಇತ್ಯಾದಿ, ದ್ವಿರುಕ್ತಿಗಳು ಅಲ್ಲಲ್ಲಿ ಕಾಣಸುತ್ತವೆ. ಅನುಚಿತ ವರ್ಣನೆಗಳು ಕೆಲವಡೆಗಳಲ್ಲಿ ಸಿಕ್ಕುತ್ತವೆ. ಸೀತಾಕಲ್ಯಾಣದಲ್ಲಿ ದಶರಥ ಮುಂತಾದವರು ಜನಕನ ಮನೆಗೆ ಹೊರಟಾಗ ವಾದ್ಯಗಳು ಹೀಗೆ ಮೊಳಗುತ್ತಿದ್ದುವೆಂದು ವರ್ಣಿಸಲಾಗಿದೆ.

ಹೊಡೆವ ತಂಬಟೆ ಭೇರಿ ನಿಸ್ಸಾಳ
ಬಿಡದೆ ಚೀರುವ ಹೆಣ್ಣಾಳೆಗಳೂ
ಸಿಡಿಲು ಗರ್ಜಿಸುವಂತೆ ಪರಿಚಯ ವಾದ್ಯದಿ
ನಡೆದರು ಜನಕರಾಯನ ಮನೆಗೆ"

ಇದನ್ನು ಓದಿದರೆ ಮದುವೆಯ ಮಂಗಳವಾದ್ಯಗಳ ನೆನಪು ಮನದಲ್ಲಿ ಮೂಡದೆ ರಣರಂಗದ ರಣಭೇರಿ, ಕಹಳೆಗಳ ಮೊಳಗು ಕೇಳಿದಂತಾಗುತ್ತದೆ. ಹೀಗೆಯೆ ಉದ್ದಾಳಿಕನ ಕಥೆಯಲ್ಲಿ ಚಂದ್ರಾವತಿ ನೀರಾಟವಾಡವಿ ಹೋದ ನದಿಯನ್ನು

ಹೊಳೆವ ಮೀನ್ಗಳು ಮುತ್ತಿನ ಚಿಪ್ಪುದಂತವು
ಆಳ್ವೆಗಳು ಅಣಿಮುತ್ತುಗಳು
ಬಿಳಿದಾವರೆಯ ಶಾರದೆ ಮುಖಕಮಲದೊಳ್
ಅಳಿಗಳು ಜಕ್ಕವಕ್ಕಿಗಳು[೨೦]

ಎಂದು ವರ್ಣಿಸುತ್ತಾಳೆ. ಉದ್ದಾಳಿಕನ ಕಥೆ, ಶಂಕರಗಂಡನ ಹಾಡು, ಚಂದ್ರಹಾಸನ ಕಥೆ ಮೊದಲಾದವು ಸಾಂಘತ್ಯದ ಮಟ್ಟಿನಲ್ಲಿರುವವಾದರೂ ಗಿರಿಯಮ್ಮ ಛಂದಸ್ಸನ್ನು ನಿಯಮಗಳನ್ನು ಸರಿಯಾಗಿ ಪಾಲಿಸಿದ್ದಾಳೆಂದು ಹೇಳಲಾಗುವುದುದಿಲ್ಲ. ಗಣವಿಂಗಡಣೆ ಮತ್ತು ದ್ವಿತೀಯ ಪ್ರಾಸಗಳು ಅನೇಕ ಎಡೆಗಳಲ್ಲಿ ತಪ್ಪುತ್ತದೆ. ದಾಸ ಸಾಹಿತ್ಯವೇ ಮುಖ್ಯವಾಗಿ ಹಾಡುವ ಧಾಟಿಯನ್ನು ಅನುಸರಿಸಿರುವುದರಿಂದ ಇಂಥ ದೋಷಗಳು ಸಹಜ. ಗಣವಿಂಗಡನೆ, ಪ್ರಾಸ, ಸಾಲುಗಳ ಸಂಖ್ಯೆ ಮುಂತಾದವುಗಳಲ್ಲಿ ಅನೇಕ ಕಡೆ ತಪ್ಪಿರುವುದು ಕಂಡುಬರುತ್ತದೆ. ಪಂಡಿತರನ್ನು ಮೆಚ್ಚಿಸುವ ದೃಷ್ಟಿ ಗಿರಿಯಮ್ಮನಿಗಿರಲಿಲ್ಲ. ಸಾಮಾನ್ಯರಿಗಾಗಿ ತನ್ನ ಆತ್ಮ ಸಂತೋಷಕ್ಕಾಗಿ ಹಾಡಿದ ಸುಂದರ ಭಕ್ತಿ ಪ್ರಧಾನ ಹಾಡುಗಳು ಅವು.

ಅವಳ ಕೃತಿಗಳಲ್ಲಿ ಬರುವ ಪಾತ್ರಗಳು ವೈವಿಧ್ಯದಿಂದ ಕೂಡಿವೆ. ಒಂದರಂತೆ ಒಂದಿಲ್ಲ. ಮುಖ್ಯವಾಗಿ ಸ್ತ್ರೀ ಪಾತ್ರಗಳನ್ನು ಗಿರಿಯಮ್ಮ ಬಹು ಸಹಜವಾಗಿ ರೂಪಿಸಿದ್ದಾಳೆ. ಹೆಣ್ಣಿನ ಮನಸ್ಸಿನ ಆಸೆ, ಆಕಾಂಕ್ಷೆ ನಿರೀಕ್ಷೆ ಅವಳ ಬದುಕಿನ ನೋವು ನಲಿವು ಸಮಾಜ ಆಕೆಯನ್ನು ಕಾಣುವ ರೀತಿ ಇವೆಲ್ಲವನ್ನು ಹೆಣ್ಣಿನ ಕೋಮಲ ಅಂತಃಕರಣದಿಂದ ಗಿರಿಯಮ್ಮ ತನ್ಮಯಳಾಗಿ ಚಿತ್ರಿಸಿದ್ದಾಳೆ. 'ಸೀತಾ ಕಲ್ಯಾಣ'ದ ಸೀತೆ ಲಜ್ಜೆಯಿಂದ ಕೂಡಿ ಹಿರಿಯರು ಹೇಳುವ ಶಾಸ್ತ್ರಗಳನ್ನು ಮಾಡುವ ನವವಧುವಾಗಿ ಚಿತ್ರಿತಳಾಗಿದ್ದರೆ, 'ಲವಕುಶರ ಕಾಳಗ'ದ ಸೀತೆ ಬದುಕಿನ ಕಷ್ಟಗಳನ್ನು ಅನುಭವಿಸಿ ಎರಡು ಮಕ್ಕಳ ತಾಯಿಯಾಗಿ ಪ್ರೌಢ ಮಹಿಳೆಯಾಗಿ ಚಿತ್ರಿತಳಾಗಿದ್ದಾಳೆ. ಕಂದರಿಲ್ಲದ ಬಂಜೆಯ ಪಾಡು, ಅವಿವಾಹಿತಳಾಗಿ ತಾಯಿಯಾಗುವ ಚಂದ್ರಾವತಿಯ ಸ್ಥಿತಿ ಗಂಡನ ಅಹಂಕಾರದಿಂದ ಪಾಡು ಪಡುವ ರತಿ ಸೆರೆವಾಸ ಅನುಭವಿಸುತ್ತಾ ಭರವಸೆಗಾಗಿ ಕಾದಿರುವ ದೇವಕಿ, ಕೃಷ್ಣನ ಬರವಿಗಾಗಿ ಹಂಬಲಿಸುತ್ತಾ ಭವಿಷ್ಯದ ನಿರೀಕ್ಷೆಯಲ್ಲಿರುವ ರುಕ್ಮಿಣಿ ಈ ಒಂದೊಂದು ಸ್ತ್ರೀ ಪಾತ್ರವು ಜೀವಂತವಾಗಿವೆ.

ಹೆಣ್ಣಿನ ಬದುಕಿನ ಮುಖ್ಯ ಹಂತಗಳಾಗಿ ಬರುವ ಮದುವೆ, ಬಸಿರು, ಸೀಮಂತ, ತಾಯ್ತನ, ಪತಿಪ್ರೇಮ, ಪುತ್ರವಾತ್ಸಲ್ಯ ಮುಂತಾದವುಗಳನ್ನು ಆ ಸಂದರ್ಭಗಳಲ್ಲಿ ನಡೆಸುವ ಅನೇಕ ಸಂಪ್ರದಾಯ, ಆಚರಣೆ, ವಿಧಿ ವಿಧಾನಗಳನ್ನು ಗಿರಿಯಮ್ಮ ಬಹುವಿಸ್ತಾರವಾಗಿ ಪರಿಚಯಿಸಿದ್ದಾಳೆ.

ನಾಶವಹುದು ರುಣರೋಗ ದಾರಿದ್ರ್ಯವು
ಕ್ಲೇಶ ಕಂಟಕ ಪರಿಹರವು
ಬೇಸರಿಲ್ಲದೆ ನಿನ್ನ ದಾಸರ ಕಥೆಯನ್ನು
ಚರಿತೆಯ ಮಾಡಿ ವರ್ಣಿಸಿದೆ[೨೧]

ಎಂದು ಚಂದ್ರಹಾಸನ ಕಥೆಯ ಕೊನೆಯಲ್ಲಿ ಗಿರಿಯಮ್ಮ ಹೇಳಿರುವ ಮಾತುಗಳು ತನ್ನ ಸುತ್ತಲಿನ ಜನ ಸಾಮಾನ್ಯರು ಈ ಕಥೆಗಳನ್ನು ಕೇಳಿ ಸನ್ಮಾರ್ಗದಲ್ಲಿ ಬದುಕಿ, ಹರಿಭಕ್ತಿಯನ್ನು ಗಳಿಸಿಕೊಳ್ಳಲಿ ಎಂಬ ಆಕೆಯ ಸದುದ್ದೇಶವನ್ನು ಸ್ಪಷ್ಟಪಡಿಸುತ್ತದೆ.

ಗಿರಿಯಮ್ಮನ ಹಾಡುಗಳಲ್ಲಿರುವ ನಾಟಕೀಯತೆ, ಸುಂದರ ವರ್ಣನೆಗಳು, ಆಡು ಮಾತಿನ ಸರಳ ದೇಶೀಯ ಸೊಬಗು ವೈವಿಧ್ಯಪೂರ್ಣ ಪಾತ್ರ ಚಿತ್ರಣ ಅವಳ ಹಾಡುಗಳನ್ನು ರಸಪೂರ್ಣವೂ ಆಕರ್ಷಕವೂ ಆಗುವಂತೆ ಮಾಡಿವೆ. ಎಲ್ಲ ಹಾಡುಗಳ ಹಿಂದಿನ ಸ್ಥಾಯೀಭಾವ ಭಗವದ್ಭಕ್ತಿಯಾಗಿದೆ. ಹಾಡುಗಾರ್ತಿ ಮುಖ್ಯವಾಗಿ ಭಕ್ತೆಯೇ ಆಗಿರುವುದರಿಂದ ಅದು ಮುಖ್ಯವಾಗಿ ಭಕ್ತಿ ಸಾಹಿತ್ಯ. ಅದಕ್ಕನುಗುಣವಾಗಿಯೇ ಇಲ್ಲಿಯ ಸಾಹಿತ್ಯ ರೂಪುಗೊಂಡಿರುವಂಥದ್ದು. ಶಂಕರ ಗಂಡನ ಹಾಡು, ಗೋಕರ್ಣೇಶ್ವರ ಹಾಗೂ ಮೈಲಾರಲಿಂಗನ ಸ್ತುತಿಗಳನ್ನು ಬಿಟ್ಟರೆ ಉಳಿದವೆಲ್ಲವೂ ಹರಿ ಹಾಗೂ ಹರಿಭಕ್ತರನ್ನು ಕುರಿತ ಹಾಡುಗಳು ಹಾಗಿದ್ದೂ ಅವುಗಳಲ್ಲಿ ಬರುವ ಪಾತ್ರಗಳು ವೈವಿಧ್ಯಪೂರ್ಣವಾಗಿವೆ 'ಸೀತಾಕಲ್ಯಾಣ'ದ ರಾಮ, ಸೀತೆ, ಜನಕ, ದಶರಥ, ರಾಮನ ತಾಯಂದಿರು, ಪಾರ್ವತಿ, 'ಉದ್ದಾಳಿಕನ ಕಥೆ'ಯ ಉದ್ದಾಳಿಕ, ಚಂದ್ರಾವತಿ, ಮುನಿಗಳು, ನಾಶಿಕೇತು, 'ಶಂಕರ ಗಂಡನ ಹಾಡಿ'ನ ಶಂಕರ, ರತಿ, ಮನ್ಮಥರು ಯಾರೂ ಒಬ್ಬರ ಅಚ್ಚು ಮತ್ತೊಬ್ಬರೆನ್ನುವಂತಿಲ್ಲ. ಕೊರವಂಜಿ ಕೂಡ 'ಬ್ರಹ್ಮಕೊರವಂಜಿ' 'ಕೃಷ್ಣಕೊರವಂಜಿ'ಗಳಲ್ಲಿ ದೇವಕಿ, ರುಕ್ಮಿಣಿಯರಿಗೆ ಅಭಯ ಕೊಡಬಂದರೆ 'ಲವಕುಶರ ಕಾಳಗ'ದಲ್ಲಿ ಸೀತೆಯ ನೆಮ್ಮದಿಯನ್ನು ಹಾಳು ಮಾಡುವ ಖಳನಾಯಕಿಯಾಗಿ ಬರುತ್ತಾಳೆ. 'ಪಾರಿಜಾತ'ದ ಸತ್ಯಭಾಮೆ, ಕೃಷ್ಣ, ನಾರದ ಒಬ್ಬೊಬ್ಬರೂ ವಿಶಿಷ್ಟವಾಗಿಯೇ ಮನಸ್ಸಿನಲ್ಲಿ ಉಳಿಯುತ್ತಾರೆ. ಗಂಭೀರವಾಗಿ ಸಾಗುವ ಈ ಹಾಡುಗಳಲ್ಲಿ ಅಲ್ಲಲ್ಲಿ ಹಾಸ್ಯದ ಲೇಪನವೂ ಇವೆ. ಉದಾಹರಣೆಗೆ

ಇಳೆಯ ಜಗಂಗಳನುದರದಲಿ
ಅಳವಡಿಸಿದ ಮಹಾತ್ಮಕನು
ಇಳೆಯ ಮಗಳನು ಎತ್ತಲಾರದೆ ರಾಮ
ಬಳಲಿದನೆಂದು ನಕ್ಕರು ಜನರು[೨೨]

ಹೀಗೆಯೇ ಉದ್ದಾಳಿಕನ ಕಥೆಯಲ್ಲಿ ಹಾಸ್ಯ ಚಿಮ್ಮಿದೆ. ಅವಳ ಸಮಕಾಲೀನ ಸಮಾಜದ ಆಚಾರ ವಿಚಾರ ನಂಬಿಕೆಗಳು ಅನೇಕ ಕಡೆಗಳಲ್ಲಿ ಸಂದರ್ಭೋಚಿತವಾಗಿ ರೂಪುಗೊಂಡಿವೆ. ಲವಕುಶರ ಹಾಡಿನಲ್ಲಿ ಬರುವ 'ಮಡದಿ ಜಾನಕಿದೇವಿ ಮಕ್ಕಳಿಲ್ಲೆನುತಲಿ ಮನದಿ ಚಿಂತಿಲಿ ಸೊರಗಿದಳು ಕಂದರಿಲ್ಲದ ಬಾಳು ದುಡುಕೆನುತಲಿ ಕಂಗಳ ಜಲವ ತುಂಬಿದಳು' ಎಂಬ ಮಾತುಗಳು ಸಮಾಜದಲ್ಲಿ ಬಂಜೆಗಿದ್ದ ಸ್ಥಾನವನ್ನು ಸೂಕ್ಷ್ಮವಾಗಿ ಸೂಚಿಸುತ್ತವೆ. ಶಂಕರಗಂಡನ ಹಾಡಿನಲ್ಲಿ

ಸರ್ವಲಕ್ಷಣವುಳ್ಳ ಸರಸಿಜನೇತ್ರೆಯು
ಒಬ್ಬಳೆ ರತಿ ನಮ್ಮ ತಂಗಿ
ಹಬ್ಬ ಹುಣ್ಣಿಮೆಗೆ ಕಳಿಸದೆ ನಮ್ಮನೆಗೆ
ನಿರ್ಬಂಧ ಮಾಡುವಿರೆಂದ[೨೩]

ಎನ್ನುವ ಶಿವನ ಮಾತುಗಳಲ್ಲಿ ವಿವಾಹಿತ ಹೆಣ್ಣಿನ ಪಾರತಂತ್ರ್ಯದ ಬದುಕಿನ ಪರಿಚಯವಿದ್ದರೆ ಇದೇ ಹಾಡಿನ ೨೪, ೨೫ನೆಯ ನುಡಿಗಳಲ್ಲಿ ವಿವಾಹದ ಸಂದರ್ಭದಲ್ಲಿ ಹೆಣ್ಣು ಮಕ್ಕಳಿಗೆ ತವರಿನಿಂದ ಸಲ್ಲುವ ಕೊಡುಗೆಯ ಚಿತ್ರವಿದೆ. 'ಸೀತಾ ಕಲ್ಯಾಣ'ದಲ್ಲಿ ಮದುವೆಯ ಸಂದಭರದ ಅನೇಕ ಆಚಾರ ವಿಚಾರಗಳ ಚಿತ್ರಣವಿದೆ. ಇಂಥ ಎಷ್ಟೋ ಅಂಶಗಳನ್ನು ಈ ಹಾಡುಗಳಲ್ಲಿ ಗುರುತಿಸಬಹುದಾಗಿದೆ.

ಭಾಷೆಯ ಮೂಲಕ ಅಭಿವ್ಯಕ್ತಿಯನ್ನು ಕಾಣುವ ಕೀರ್ತನೆಯಲ್ಲಿ ಪದ, ವಾಕ್ಯಗಳ ವಿನ್ಯಾಸ, ಕಾಕು ಸ್ವರಭಾವಗಳ ಸಂಯೋಜನೆ ಇಲ್ಲೆಲ್ಲಾ ಹಲವು ಬಗೆಯ ಆಯ್ಕೆಗೆ ಅವಕಾಶವಿದೆ. ಗಿರಿಯಮ್ಮ ಕೀರ್ತನೆಗಳ ಮೂಲಕ ಪ್ರತಿಭೆಯ ಆವಿಷ್ಕರಣದಲ್ಲಿ ನಿಯಮಬದ್ಧವಾದ ಅಥವಾ ಸಿದ್ಧಮಾದರಿಯ ಭಾಷಾ ಪ್ರಯೋಗವನ್ನು ಮೀರಿ ನಡೆಯುತ್ತಾಳೆ. ಕೀರ್ತನೆಗಳಲ್ಲಿ ಭಾಷೆ ಆಡು ಮಾತಾಗಿ ಬಂದಾಗ ಅದರ ಅರ್ಥಾಭಿವ್ಯಕ್ತಿಯ ಸಾಮರ್ಥ್ಯ ಹೆಚ್ಚುತ್ತದೆ. ಅಕ್ಷರಗಳು, ಸ್ವರಗಳು, ಪುನರಾವರ್ತಿಸಿಕೊಂಡಾಗ ಭಾವ ಜೀಕುತ್ತದೆ, ಅರ್ಥ ಹೊಮ್ಮುತ್ತದೆ.

ತೋರಬಾರದೆ ನಿಮ್ಮ ಚರಿತೆಯನು
ನರರೊಳು ನಗೆಗೇಟು ಮಾಡದ ಹಾಗೆ
ಕಲ್ಲೊಳು ಕಾಂತೆಯ ಮಾಡಿದವನೆಂ
ದೆಲ್ಲರು ಜಗದೊಳು ಹೇಳುವರು
ಅಲ್ಲಿ ಮಾಡಿದ ಹಾಗೆ ಇಲ್ಲಿ ತೋರಿಸಿದರೆ
ಬಲ್ಲಿದನೆನ್ನೊಡೆಯ ದೊಡ್ಡವನೆಂದು ಸಾರುವೆ[೨೪]

ವಾಕ್ಯಗಳ ಅನುರೂಪತೆಯಿಂದ ಒಂದು ಭಾಗ ಪುನರಾವರ್ತನೆಯಾದರೆ, ಒಂದು ಭಾಗ ಸ್ಥಿರವಾಗಿರುತ್ತದೆ. ಒಟ್ಟಿನಲ್ಲಿ ಗಿರಿಯಮ್ಮನ ಭಾಷೆ ಮತ್ತು ಶೈಲಿ ದೇಶಿ ಮಾದರಿಯಾಗಿದೆ. ಒಂದು ಭಾಷೆಯನ್ನು ಸೃಜನಾತ್ಮಕವಾಗಿ ಬಳಸಿದಾಗ ಮಾತ್ರ ಅಂತಹ ಶೈಲಿ ಮೂಡಿಬರುತ್ತದೆ.

**ಅಡಿ ಟಿಪ್ಪಣಿಗಳು**

೧. ಜಿ.ವರದರಾಜರಾವ್, ಹರಿದಾಸ ಸಾಹಿತ್ಯ ಸಾರ, ೧೯೮೭, ಪು.೩.೨೫

೨. ರಂ.ಶ್ರೀ.ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ, ೧೯೯೩, ಪು.೩೧೭

೩. ಎಲ್.ಬಸವರಾಜು, ಶಿವದಾಸ ಗೀತಾಂಜಲಿ, ೧೯೯೦, ಪು.೬೬

೪. ವಸಂತ ಕುಷ್ಟಗಿ, ಹರಿದಾಸ ಸಾಹಿತ್ಯದ ಬೆಳಕಿನಲ್ಲಿ, ೧೯೯೯, ಪು.೩೨

೫. ನಾಗರತ್ನ ಟಿ.ಎಸ್., ಹರಿದಾಸರ ಭಕ್ತಿ ಸ್ವರೂಪ, ೧೯೮೪, ಪು.೨೯೪

೬. ಲೀಲಾವತಿ ಎಸ್.ರಾವ್., ಹೆಳವನಕಟ್ಟೆ ಗಿರಿಯಮ್ಮನ ಕೀರ್ತನೆಗಳು, ೨೦೦೩, ಪು.೩೮

೭. ಎ.ವಿ.ನಾವಡ, ಗಾಯಿತ್ರಿ ನಾವಡ(ಸಂ), ಸಾವಿರ ಕೀರ್ತನೆಗಳು, ಪು.೩

೮. ಎನ್.ಕೆ.ರಾಮಶೇಷನ್, ಹರಿದಾಸ ಆಂದೋಲನ ಒಂದು ಅಧ್ಯಯನ, ೧೯೯೧, ಪು.೪೬

೯. ಲೀಲಾವತಿ, ಎಸ್.ರಾವ್(ಸಂ), ಹೆಳವನಕಟ್ಟೆ ಗಿರಿಯಮ್ಮನ ಕೀರ್ತನೆಗಳು, ೨೦೦೩, ಪು.೨೧

೧೦. ಅದೇ, ಪು.೭೧

೧೧. ಅದೇ, ಪು.೧೩೬

೧೨. ಅದೇ, ಪು.೫೪

೧೩. ಅದೇ, ಪು.೫೫

೧೪. ಅದೇ, ಪು.೮೫

೧೫. ಅದೇ, ಪು.೩೮

೧೬. ಅದೇ, ಪು.೩೭

೧೭. ಅದೇ, ಪು.೩೭

೧೮. ಅದೇ, ಪು.೩೩

೧೯. ಅದೇ, ಪು.೧೩೯

೨೦. ಅದೇ, ಪು.೧೪೪

೨೧. ಅದೇ, ಪು.೨೦೮

೨೨. ಅದೇ, ಪು.೧೪೪

೨೩. ಅದೇ, ಪು.೧೩೦

೨೪. ಅದೇ, ಪು.೧೦

# ಅಧ್ಯಾಯ ೭

# ಗಿರಿಯಮ್ಮನ ಕೃತಿಗಳು : ಮಹಿಳಾ ದೃಷ್ಟಿಕೋನ

೭

# ಗಿರಿಯಮ್ಮನ ಕೃತಿಗಳು : ಮಹಿಳಾ ದೃಷ್ಟಿಕೋನ

ವೇದ ಯುಗದ ನಂತರ ಭಾರತೀಯ ಸ್ತ್ರೀ ವಿಮೋಚನಗೊಂಡದ್ದು ಹನ್ನೆರಡನೆಯ ಶತಮಾನದಲ್ಲಿ ದೀರ್ಘಕಾಲದಿಂದ ಸ್ವರೂಪ ವಿಸ್ಮೃತಿಗೊಂಡಿದ್ದ ಆಕೆಯನ್ನು ಜಾಗೃತಗೊಳಿಸಿದವರು ಶರಣರು. ಮೂಲತಃ ಅವರದು ಧಾರ್ಮಿಕ ಕ್ರಾಂತಿಯಾಗಿದ್ದರೂ, ಆ ಮೂಲಕ ಸಮಾಜದ ಶೈಥಿಲ್ಯಕ್ಕೆ ಕಾರಣವಾಗಿದ್ದ ಜಾತಿಭೇದ, ಲಿಂಗಭೇದ, ವರ್ಗಭೇದಗಳನ್ನು ತೊಡೆದುಹಾಕಿ ಮಾನವತೆಯ ಏಕತೆಯನ್ನು ನೆಲೆಗೊಳಿಸುವುದೆ ಅವರ ಉದ್ದೇಶವಾಗಿತ್ತು. ಅಂತೆಯೇ ಅಲ್ಲಿಯವರೆಗೆ ಶೂದ್ರ ಸಮಾನಳೆಂದು ಪರಿಗಣಿಸಲ್ಪಟ್ಟ ಸ್ತ್ರೀಗೆ, ಸಾಮಾಜಿಕ ವ್ಯವಹಾರ, ಧಾರ್ಮಿಕ ಆಚರಣೆ, ಆಧ್ಯಾತ್ಮಿಕ ಸಾಧನೆಗಳಲ್ಲಿ ಸ್ವಾತಂತ್ರ್ಯ ಸಮಾನತೆಗಳನ್ನು ಕಲ್ಪಿಸಿಕೊಟ್ಟರು. ಶರಣರು ತೋರಿದ ಇಂತಹ ಉದಾರ ಧೋರಣೆಯಿಂದಾಗಿ ಮಹಿಳೆ ಬಹುಕಾಲದ ಬಂಧನದಿಂದ ಹೊರಬಂದು ತನ್ನತನವನ್ನು - ಸ್ತ್ರೀ ಧರ್ಮದ ಮೇಲ್ಮೆಯನ್ನು ಸಾರುವ ಪ್ರಯತ್ನ ಮಾಡಿದಳು. ಜಾತಿ, ಮತ, ಪಂಥಗಳನ್ನು ಮರೆತು ಸಾಮಾಜಿಕ ಕಟ್ಟು ಪಾಡುಗಳನ್ನು ಬದಿಗೊತ್ತಿ ಅನುಭವ ಮಂಟಪದಂತಹ ಪರಿಸರದಲ್ಲಿ ತಮ್ಮ ಬೌದ್ಧಿಕ, ಆಧ್ಯಾತ್ಮಿಕ ಬೆಳವಣಿಗೆಯನ್ನು ಕಂಡುಕೊಂಡ ಶರಣೆಯರು, ತಮಗೆ ದೊರೆತ ವ್ಯಕ್ತಿ ಸ್ವಾತಂತ್ರ್ಯ,, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಸಾರ್ಥಕಪಡಿಸಿಕೊಂಡರು. ಸಾಮಾಜಿಕ ತಾತ್ವಿಕ ವಿಷಯಗಳ ಬಗೆಗೆ ಚಿಂತನೆ ನಡೆಸುವುದರೊಂದಿಗೆ ಸ್ತ್ರೀಪರ ನಿಲುವನ್ನು ಸಮರ್ಥಿಸಿದರು. ಹೆಣ್ಣು ಅಬಲೆಯಲ್ಲ ಪೂರ್ಣ ಪ್ರಮಾಣದ ಅವಕಾಶ ದೊರೆತರೆ ಆಕೆ ಯಾವುದೆ ಕ್ಷೇತ್ರದಲ್ಲಿ ಮೇಲುಗೈ ಸಾಧಿಸಬಲ್ಲಳೆಂಬುದನ್ನು ಸಾಧಿಸಿ ತೋರಿದರು. ಕೆಳಸ್ತರದಿಂದ ಬಂದವರೂ ಸೇರಿದಂತೆ ಸುಮಾರು ಐವತ್ತಕ್ಕಿಂತ ಹೆಚ್ಚು ಜನ ಮಹಿಳೆಯರು ಏಕಕಾಲಕ್ಕೆ, ಸಮಾನ ವೇದಿಕೆಯ ಮೇಲೆ ಸೇರಿ ತಮ್ಮ ವಿಚಾರಗಳನ್ನು ಅಭಿವ್ಯಕ್ತಪಡಿಸಿದರು.

ಪುರುಷ ಪ್ರಧಾನ ಸಮಾಜದ ಉದ್ದಕ್ಕೂ ಸ್ತ್ರೀಯನ್ನು ನಿರ್ಲಕ್ಷಿಸುತ್ತ ಬಂದಿರುವುದು ಸರ್ವವಿದಿತಃ ಪುರುಷನಿಗಿಂತ ಆಕೆ ಎಲ್ಲ ವಿಧದಲ್ಲೂ ಕನಿಷ್ಠಳು ಎಂಬ ಭಾವನೆಯನ್ನು ಶರಣ-ಶರಣೆಯರು ನಿರಾಕರಿಸಿದರು.

ಮೊಲೆ ಮುಡಿ ಬಂದಡೆ ಹೆಣ್ಣೆಂಬರು
ಮೀಸೆಕಾಸೆ ಬಂದಡೆ ಗಂಡೆಂಬರು

ಈ ಉಭಯದ ಜ್ಞಾನ

ಹೆಣ್ಣೋ ಗಂಡೋ ನಾಸ್ತಿನಾಥ[೫]

'ದೇವರ ದಾಸಿಮಯ್ಯ'ನ ವಚನದಂತಿರುವ ಈ ವಚನ ಗೊಗವ್ವೆಯದು. ಇನ್ನೊಂದು ವಚನ ಸತ್ಯಕ್ಕನದು.

ಮೊಲೆ ಮುಡಿ ಇದ್ದುದೆ ಹೆಣ್ಣೆಂದು ಪ್ರಮಾಣಿಸಲಿಲ್ಲ

ಕಾಸೆ ಮೀಸೆ ಕಠಾರವಿದ್ದುದೆ ಗಂಡೆಂದು ಪ್ರಮಾಣಿಸಲಿಲ್ಲ

ಅದು ಜಗದ ಹಾಹೆ. ಬಲ್ಲವರು ನೀತಿಯಲ್ಲ[೬]

ಗಂಡು ಶ್ರೇಷ್ಠ ಹೆಣ್ಣು ಕನಿಷ್ಠ ಎಂಬ ಭಾವನೆ ಅಜ್ಞಾನ ಮೂಲದಿಂದ ಬಂದುದು ಪರಸ್ಪರರ ದೇಹದ ಅಂಗವಿನ್ಯಾಸದಲ್ಲಿ ವ್ಯತ್ಯಾಸವಿದೆಯ ವಿನಃ ಅವರ ಬೌದ್ಧಿಕ ಸ್ತರದಲ್ಲಿ ಅಲ್ಲ ಎಂದು ವಿವರಿಸಿ ಹೆಣ್ಣು ನಿಕೃಷ್ಟವೆಂಬ ಪರಂಪರಾಗತ ವಿಚಾರವನ್ನು ಇವರು ಖಂಡಿಸಿದರು. ಅಂದಿನ ತೀರ ಸಂಪ್ರದಾಯನಿಷ್ಠ ಪರಿಸರದಲ್ಲಿ ಸ್ತ್ರೀ ಸಮಾನತೆಯನ್ನು ಕುರಿತು ಮಾತನಾಡಿದುದು ಅವರ ದಿಟ್ಟ ಕ್ರಮವೆಂದೇ ಹೇಳಬಹುದು. ಅಲ್ಲದೆ ಅದನ್ನು ಕಾರ್ಯರೂಪಕ್ಕೆ ತಂದು ಅನುಸರಿಸಿ ತೋರಿಸಿದ ಹಿರಿಮೆಯೂ ಅವರದು.

ಮದುವೆಯಂತಹ ಕಟ್ಟು ನಿಟ್ಟಾದ ಸಾಮಾಜಿಕ ನಿಯಮವನ್ನು ಉಲ್ಲಂಘಿಸಿ, ಕೈಗೆಟುಕಿದ ರಾಜ ಭೋಗ ಭಾಗ್ಯಗಳನ್ನು ಧಿಕ್ಕರಿಸಿ, ಬಂದ ಕಷ್ಟ ನಿಷ್ಠುರಗಳನ್ನು ದಿಟ್ಟ ತನದಿಂದ ಎದುರಿಸಿ ತನಗಿಷ್ಟವಾದ ಆಧ್ಯಾತ್ಮಿಕ ಮಾರ್ಗದಲ್ಲಿ ಮುನ್ನಡೆದ ಅಕ್ಕಮಹಾದೇವಿಯ ಜೀವನ ಹೆಣ್ಣಿನ ಹಿರಿಮೆಗೆ ಜ್ವಲಂತ ನಿದರ್ಶನವಾಗಿದೆ. ಹೆಣ್ಣಿನ ರೂಪ ಕಂಡು ಬಂದವರಿಗೆ ಅಕ್ಕ ಮಹಾದೇವಿ ಕೊಡುವ ಉತ್ತರ ಇದು.

ಬಟ್ಟಿಹ ಮೊಲೆಯ ಭರದ ಜವ್ವನದ ಚೆಲುವ ಕಂಡು ಬಂದಿರಣ್ಣಾ

ಅಣ್ಣಾ, ನಾನು ಹೆಂಗೂಸಲ್ಲ; ಅಣ್ಣಾ ನಾನು ಸೂಳೆಯಲ್ಲ |

ಅಣ್ಣಾ, ಮತ್ತೆ ನನ್ನ ಕಂಡು ಕಂಡು ಆರೆಂದು ಬಂದಿರಣ್ಣಾ |

ಚನ್ನಮಲ್ಲಿಕಾರ್ಜುನನಲ್ಲದ ಮಿಕ್ಕಿನ ಪರಪುರುಷನು

ನಮಗಾಗದ ಮೊರೆ ನೋಡಿರಣ್ಣಾ[೭]

ಪುರುಷನಷ್ಟೆ ಅಲ್ಲ ಒಬ್ಬ ಮಹಿಳೆ ಕೂಡ ಸಾಮೂಹಿಕ ಜೀವನದಲ್ಲಿ ಇದ್ದು ಅಲ್ಲಿನ ಸಂಕೀರ್ಣತೆ ಸಂಘರ್ಷಗಳಿಗೆ ಒಳಗಾಗಿಯೂ ಅನುಭಾವ ಸಾಧನೆ ಮಾಡಬಲ್ಲಳು ಎಂಬುದನ್ನು ಸಾಬೀತುಪಡಿಸಿ ತೋರಿಸಿದವಳು ಅಕ್ಕಮಹಾದೇವಿ. ನಾಮದಲ್ಲಿ ಹೆಣ್ಣಾದರೂ ಭಾವಿಸಲು ಗಂಡುರೂಪದ ಮಹಾದೇವಿಯಕ್ಕನ ಆಧ್ಯಾತ್ಮಿಕ ಮೇಲ್ಮೆಯನ್ನು ಅನುಭವ ಮಂಟಪ ಶರಣರೆಲ್ಲ ಕೊಂಡಾಡಿದರು. ಶೂನ್ಯಸಿಂಹಾಸನದ ಅಧಿಪತಿ ಅಲ್ಲಮ ಪ್ರಭುಗಳು 'ಮಹಾದೇವಿಅಕ್ಕನ ಶ್ರೀಪಾದಕ್ಕೆ ನಮೋ ನಮೋ' ಎಂದು, ಶರಣ ಸಿದ್ಧರಾಮ 'ಮಹಾದೇವಿಯಕ್ಕನ ನಿಲುವಿಂಗೆ ಶರಣೆಂದು ಶುದ್ಧನಾದೆನು ಕಾಣಾ ಚೆನ್ನಬಸವಣ್ಣಾ' ಎಂದು

ಹಿರಿದು ಕಿರಿದು ಎನ್ನುವ ಭೇದಭಾವವಿಲ್ಲದೆ ಅರಿವಿನ ಮೂರ್ತಿಯೆಂದು ಅಕ್ಕಮಹಾದೇವಿಯನ್ನು ಪ್ರಶಂಸಿದ್ದಾರೆ.

ಅನುಭಾವದ ಉನ್ನತಿಗೆ ಅಕ್ಕಮಹಾದೇವಿಯಾದರೆ, ವೈಚಾರಿಕ ಉನ್ನತಿಗೆಯಲ್ಲಿ ಮಿಂಚಿದವಳು ಮುಕ್ತಾಯಕ್ಕ, ಅಣ್ಣ ಅಜಗಣ್ಣನ ಅಗಲುವಿಕೆಯಿಂದ ತೀರ ಶೋಕಿತಳಾದ ಆಕೆಯನ್ನು ಸಂತೈಸಲು ಅಲ್ಲಮ ಪ್ರಭು ಆಗಮಿಸಿದಾಗ, ಅವರೀರ್ವರಲ್ಲಿ ನಡೆಯುವ ತಾರ್ಕಿಕ ವಿವಾಹ ಮುಕ್ತಾಯಕ್ಕನ ಬೌದ್ಧಿಕ ಪ್ರಖರತೆಗೆ ಸಾಕ್ಷಿ, ನುಡಿಯ ಹಂಗಿನ್ನೂ ನಿಮಗೆ ಹಿಂಗದು, ನಡೆಯನೆಂತು ಪರರಿಗೆ ಹೇಳುವಿರಿ' ಎಂದು ಅಲ್ಲಮ ಅವಾಕ್ಕಾಗುವಂತೆ ವಾದ ಹೂಡುವ ಆಕೆ 'ಆರು ಇಲ್ಲದವಳೆಂದು ಅಳಿಗೊಳಲು ಬೇಡ ಅಳಿಗೊಂಡಡೆ ಆನು ಅಂಜುವವಳಲ್ಲ' ಎಂದು ಸವಾಲು ಹಾಕುತ್ತಾಳೆ. ತನ್ನ ಸಂದೇಹ ಪರಿಹಾರವಾದ ಮೇಲೆಯೆ ಎಂದು ಸವಾಲು ಹಾಕುತ್ತಾಳೆ. ತನ್ನ ಸಂದೇಹ ಪರಿಹಾರವಾದ ಮೇಲೆಯೆ. ಅಲ್ಲಮನ ವಿಚಾರಗಳನ್ನು ಒಪ್ಪಿಕೊಳ್ಳುತ್ತಾಳೆ. ವೈಚಾರಿಕ ಸ್ವಾತಂತ್ರ್ಯವನ್ನು ಪೂರ್ಣಪ್ರಮಾಣದಲ್ಲಿ ಬೆಳೆಸಿಕೊಂಡವಳು ಶರಣೆ ಮುಕ್ತಾಯಕ್ಕ.

ಹೆಣ್ಣು ಮಾಯೆ ಆತ್ಮ ಸಾಧನೆಗೆ ಬಂಧನ ಹೆಣ್ಣು, ಹೊನ್ನು, ಮಣ್ಣು ಇವುಗಳ ಮೋಹವನ್ನು ಬಿಟ್ಟಾಗಲೇ ಮುಕ್ತಿ ಸಾಧ್ಯ ಎಂಬುದು ದಾರ್ಶನಿಕರ ನಿಲುವು. ಮಣ್ಣು ಹೊನ್ನುಗಳಂತಹ ಜಡವಸ್ತುಗಳೊಂದಿಗೆ ಹೆಣ್ಣಿನ ಸಮೀಕರಣ ಮಾಡಿದ ಇವರು ಹೆಣ್ಣನ್ನು ಒಂದು ವಸ್ತುವಾಗಿ ಪರಿಗಣಿಸಿದರೆ ಹೊರತು. ಆಕೆಯ ಚಲನಶೀಲತೆಯನ್ನು ಗುರುತಿಸಲಿಲ್ಲ. ಹೆಣ್ಣು ತ್ಯಾಜ್ಯ ಎಂಬ ವಿಚಾರ ಶಿವಶರಣರಿಗೆ ಸಮ್ಮತವಾಗಲಿಲ್ಲ. 'ಹೆಣ್ಣು ಮಾಯೆಯೆಂಬರು ಹೆಣ್ಣು ಮಾಯೆಯಲ್ಲ. ಮನದ ಮುಂದಣ ಆಸೆಯ ಮಾಯೆ' ಎಂಬ ಪ್ರಭುದೇವರ ಮಾತಿನಲ್ಲಿ ಈ ಅಂಶ ಸ್ಪಷ್ಟವಾಗುತ್ತದೆ.

ಸ್ತ್ರೀಗೆ ವಿದ್ಯಾಭ್ಯಾಸದ ಅವಕಾಶವೇ ಇಲ್ಲದ ಅಂದಿನ ಸಂದಿಗ್ಧ ಪರಿಸ್ಥಿತಿಯಲ್ಲಿ ಕೆಳವರ್ಗದಿಂದ ಬಂದವರೂ ಸೇರಿದಂತೆ ಅನೇಕ ಜನ ಶರಣೆಯರು ಸಂಸ್ಕೃತವನ್ನೂ ಅಭ್ಯಾಸ ಮಾಡಿ ವಚನ ರಚನೆ ಮಾಡಿದುದು ನಿಜಕ್ಕೂ ಅಚ್ಚರಿಯೆನಿಸುತ್ತದೆ. ಇವರೆಲ್ಲರ ವಚನಗಳು ಉನ್ನತ ಕಾವ್ಯಾಂಶಗಳಿಂದ ಕೂಡಿವೆಯೆಂದು ಹೇಳಲಿಕ್ಕಾಗದು ಕೆಲವರನ್ನು ಬಿಟ್ಟರೆ ಕಾವ್ಯಸೃಷ್ಟಿ ಅವರ ಉದ್ದೇಶವಾಗಿರಲಿಲ್ಲ. ಮಹಾದೇವಿಯಕ್ಕನ ವಚನಗಳು ಮಾತ್ರ ಸಾಹಿತ್ಯಿಕ ದೃಷ್ಟಿಯಿಂದಲೂ ಗಮನ ಸೆಳೆಯುತ್ತವೆ. ಅಕ್ಕನ ಮಧುರ ಭಕ್ತಿಯ ಆವೇಶದ ಅಭಿವ್ಯಕ್ತಿಯಲ್ಲಿ ಒಂದರ ಹಿಂದೆ ಒಂದು ಬರುವ ಅಲಂಕಾರಗಳು. ಭಾವಗೀತಾತ್ಮಕ ಶೈಲಿ ವಚನಗಳಿಗೆ ಕಾವ್ಯಾಂಶದ ಸುಂದರ ಆವರಣವನ್ನು ರೂಪಿಸುತ್ತವೆ. ತಾತ್ವಿಕ ದೃಷ್ಟಿಯಿಂದಲೂ ಅಷ್ಟೆ. 'ಅದ್ಯರ ಅರವತ್ತು ವಚನಕ್ಕೆ, ಬಸವಣ್ಣನವರ ಇಪ್ಪತ್ತು ವಚನ, ಪ್ರಭುದೇವರ ಹತ್ತು ವಚನ ಅಜಗಣ್ಣನ ಐದು ವಚನ ಇವಕ್ಕೆ ಅಕ್ಕಮಹಾದೇವಿಯ ಒಂದೇ ಒಂದು ವಚನ-ನಿರ್ವಚನ ಸಮಾನವೆಂಬ ಚನ್ನಬಸವಣ್ಣನವರ ಮಾತಿನಿಂದ ಸ್ಮರಿಸಬಹುದು. ಬಸವಣ್ಣನವರ 'ವಿಚಾರ ಪತ್ನಿ'

ನೀಲಾಂಬಿಕೆಯ ವಚನಗಳು ಉತ್ತಮ ಮಟ್ಟದ ಶೋಕಗೀತೆಗಳಾಗಿವೆ. ಉಳಿದವರಲ್ಲಿ ಉಪದೇಶಿಯ ಸ್ಥಾನದಲ್ಲಿರುವ ಹಡಪದ ಲಿಂಗಮ್ಮ, ವಿಡಂಬನಾಕಾರ್ತಿಯರಾದ ಸತ್ಯಕ್ಕ ಅಮುಗೆ ರಾಯಮ್ಮ ಅಕ್ಕಮ್ಮ ಗಮನ ಸೆಳೆಯುತ್ತಾರೆ. ಹೀಗೆ ಶ್ರೇಷ್ಠಕವಯಿತ್ರಿ ಉನ್ನತ ವಿಚಾರವಾದಿ ಅನುಭಾವಿಗಳಾಗಿ ಮೆರೆದ ಶಿವಶರಣೆಯರು ಹೆಣ್ಣಿನ ಕೀಳರಿಮೆಯ ಭಾವನೆಯನ್ನು ತೊಡೆದು ಹಾಕುವ ಪ್ರಯತ್ನವನ್ನು ಮಾಡಿದರು. ಅನೇಕ ಸಾಮಾಜಿಕ ಮೌಲ್ಯಗಳನ್ನು ಪುನರ್ವಿಮರ್ಶೆಗೆ ಒಳಪಡಿಸಿದ ಪ್ರಥಮ ಮಹಿಳೆಯರೆನಿಸಿದರು.

೧೨ನೆಯ ಶತಮಾನದಲ್ಲಿ ನಡೆದ ವೀರಶೈವ ಕ್ರಾಂತಿಯ ಫಲವಾಗಿ ಹೆಣ್ಣು ಮೊದಲ ಬಾರಿಗೆ ಮೌನ ಮುರಿದು ಮಾತನಾಡಿದಳು ಪುರುಷನಿಗೆ ಸರಿಸಮಾನವಾಗಿ ಚಿಂತನೆ ನಡೆಸಿದಳು. ವಚನಗಳ ಮೂಲಕ ಅನುಭವ ಅನುಭಾವಗಳನ್ನು ಅಭಿವ್ಯಕ್ತಿಸಿದಳು. ಕ್ರಾಂತಿಯ ಕಾವು ಕಡಿಮೆಯಾದ ಕೂಡಲೆ ಇತಿಹಾಸಕ್ಕೆ ಸೇರಿಹೋಯಿತೆಂಬಂತೆ ಸಾಹಿತ್ಯ ಲೋಕದಿಂದ ಮಹಿಳೆ ಮರೆಯಾಗಿ ಹೋದುದಕ್ಕೆ ಆ ಕಾಲದ ರಾಜಕೀಯ, ಸಾಮಾಜಿಕ, ಪರಿಸ್ಥಿತಿ ಕಾರಣವಾಯಿತು. ಪುರುಷ ಬರಹಗಾರರ ಬರವಣಿಗೆ ನಿರಂತರವಾಗಿ ಪ್ರವಹಿಸುತ್ತಿದ್ದರೂ ಮಹಿಳೆಯ ಬರಹ ಸ್ಥಗಿತಗೊಂಡಿದ್ದೇಕೆ? ಆಕೆ ಸೃಜನಶೀಲ ಸಾಹಿತ್ಯ ನಿರ್ಮಾಣದ ಕಡೆಗೆ ಗಮನ ಹರಿಸಲಿಲ್ಲವೆ? ಅಂಥ ವಾತಾವರಣ ಮತ್ತು ಪ್ರೋತ್ಸಾಹ ಮಹಿಳೆಯರಿಗೆ ದೊರೆಯಲಿಲ್ಲವೆ? ಸಾಕ್ಷರತೆಯ ಕೊರತೆಯಿಂದಾಗಿ ಮಹಿಳಾ ಸಾಹಿತ್ಯ ಮೂಲಕ ಸಂಪ್ರದಾಯದಲ್ಲಿಯೇ ಉಳಿದು ಹೋಯಿತೆ? ಅಥವಾ ಜನಪದದಂತೆ ವ್ಯಷ್ಟಿ ರಚನೆಗಳು ಸಮೂಹ ರಚನೆಯಲ್ಲಿ ಸೇರಿ ಹೋದವೆ ಎಂಬ ಪ್ರಶ್ನೆಗಳು ಅನುಮಾನಗಳು ಉದ್ಭವಿಸುತ್ತವೆ. ಮತ್ತೊಮ್ಮೆ ಮಹಿಳಾ ಕವಯಿತ್ರಿಯರನ್ನು ಕಾಣಬೇಕಾದರೆ ಮೈಸೂರು ಅರಸರ ಕಾಲಕ್ಕೆ ಹೋಗಬೇಕಾಗುತ್ತದೆ.

ವಿದೇಶಿಯರ ಆಕ್ರಮಣಗಳು ದೇಶದಲ್ಲಿ ಅಸ್ಥಿರವಾದ ರಾಜಕೀಯಕ್ಕೆ ಅರಾಜಕತೆಗೆ ಆಸ್ಪದ ನೀಡಿತು ಇದರಿಂದ ಮಹಿಳೆಯರ ಸ್ಥಿತಿಗತಿಯ ಮೇಲೂ ತೀವ್ರ ಪರಿಣಾಮ ಉಂಟಾಯಿತು. ಹೆಣ್ಣು ಮಕ್ಕಳ ಶೀಲ ಕಾಪಾಡುವುದೇ ದುಸ್ತರವಾದ ಕಾರಣ ಹನ್ನೆರಡನೆಯ ಶತಮಾನದ ಬಿಡುಗಡೆಯ ಪ್ರಯತ್ನಗಳು. ಕಾಲಗರ್ಭದಲ್ಲಿ ಸೇರಿ ಹೋದವು ಇತಿಹಾಸ ಮರುಕಳಿಸಿದಂತೆ ಹೆಣ್ಣನ್ನು ಹಿಂದಿನಂತೆಯೇ ಸಾಂಪ್ರದಾಯಿಕ ಚೌಕಟ್ಟಿನಲ್ಲಿಯೇ ನಿರ್ಬಧಿಸಲಾಯಿತು. ಹನ್ನೆರಡನೆಯ ಶತಮಾನದ ಬಳಿಕ ಹೆಣ್ಣು ಮಕ್ಕಳ ಸೃಜನಶೀಲತೆ ನಿಷ್ಕ್ರಿಯವಾಗಿದ್ದಕ್ಕೆ ಹದಿನೇಳನೆಯ ಶತಮಾನದವರೆಗೆ ಬಹುತೇಕ ದುರ್ಬಲಗೊಂಡಿದ್ದಕ್ಕೆ ಕಾರಣಗಳನ್ನು ಪುರುಷ ಸಾಹಿತ್ಯ ಚರಿತ್ರಕಾರರು ಗಂಭೀರವಾಗಿ ಚಿಂತನೆ ನಡೆಸಿದಂತೆ ಕಂಡುಬರುವುದಿಲ್ಲ. ಹನ್ನೆರಡನೆಯ ಶತಮಾನದ ವೀರಶೈವ ಧಾರ್ಮಿಕ ಸಾಮಾಜಿಕ ಕ್ರಾಂತಿ 'ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ ನೋಡಾ' ಎಂಬ ತಿಳುವಳಿಕೆಯನ್ನು ಅಂದಿನ ಸಮಾಜದಲ್ಲಿ ಬಿತ್ತರಿಸಲು ಪ್ರಯತ್ನಿಸಿ ಯಶಸ್ವಿಯಾಯಿತು. ಆದರೆ ಈ ಶತಮಾನದ ತರುವಾಯ ಸಾಹಿತ್ಯ ರಚನೆಯ ಕಾರ್ಯವು ಹಿಂದೆ ಸರಿದಂತೆ ಇಂತಹ ಸಾಮಾಜಿಕ ಹೊಸ ವಿಚಾರಗಳೂ ಹಿಂದೆ ಸರಿದವು.

ಮಹಮ್ಮದೀಯರ ಅಕ್ರಮಣವು ಸ್ತ್ರೀ ಜೀವನದ ಸುರಕ್ಷಿತೆಯನ್ನು ಆಹುತಿ ತೆಗೆದುಕೊಂಡಿತು. ಸಮಾಜಕ್ಕೆ ಪುರುಷ ವರ್ಗಕ್ಕೆ ಕರ್ತವ್ಯ ದೃಷ್ಟಿಯಿಂದ ಸ್ತ್ರೀ ಹೊರೆಯಾಗಿ ಕಂಡಳು. ಜೊತೆಗೆ ವಿಲಾಸ ದೃಷ್ಟಿಯಿಂದ ಉಪಭೋಗದ ಸಾಧನವಾಗಿ ಕಂಡಳು" ಎಂದು ಅಭಿಪ್ರಾಯಪಟ್ಟಿರುವುದು ವಿಚಾರಾರ್ಹವಾಗಿದೆ. ಪುರುಷ ಪ್ರಧಾನ ಸಮಾಜ ಮಹಿಳಾ ಸಮಸ್ಯೆಯನ್ನು ತನ್ನ ಹಿತಾಸಕ್ತಿಗೆ ತಕ್ಕಂತೆ ನಿರ್ವಚಿಸಿಕೊಳ್ಳುತ್ತದೆ. ವಚನ ಚಳುವಳಿಯಲ್ಲಿ ಗುಂಪು ಮನೋಧರ್ಮವನ್ನು ನಿಯಂತ್ರಿಸುವ ಸಾಮರ್ಥ್ಯ ವಚನಕಾರರಿಗಿತ್ತು. ಆ ಶಕ್ತಿ ಕುಂದಿದಾಗ ಗುಂಪಿನ ಆಶಯಗಳು ಹೊರಗೆ ಕಾಣಿಸಿಕೊಳ್ಳುತ್ತವೆ. ಭಕ್ತಿ ಚಳುವಳಿಗೂ ಮೊದಲು ತರ್ಕ ಮೇಲುಗೈ ಪಡೆದಿತ್ತು ತರ್ಕದ ಮೂಲಕವೇ ಗೆಲ್ಲುತ್ತಿದ್ದರು. ತರ್ಕವೇ ವಿಪರೀತವಾದಾಗ ವಿಚಾರಗಳು ಜಡ್ಡುಗಟ್ಟುತ್ತವೆ. ಭಕ್ತಿ ಚಳುವಳಿಯಲ್ಲಿ ಕಟ್ಟುಪಾಡು ಕಡಿಮೆ ಹಾಗಾಗಿ ಹೆಣ್ಣು ಮಕ್ಕಳು ಸಾಹಿತ್ಯ ರಚನೆಯಲ್ಲಿ ಮತ್ತೊಮ್ಮೆ ತೊಡಗಲು ಭಕ್ತಿ ಚಳುವಳಿಯೇ ಬರಬೇಕಾಯಿತು.

ಕರ್ನಾಟಕದಲ್ಲಿ ಹದಿಮೂರನೆಯ ಶತಮಾನದಿಂದಲೇ ದಾಸ ಸಾಹಿತ್ಯದ ಬೆಳವಣಿಗೆ ಗೋಚರಿಸಿದರೂ ಮಹಿಳೆಯರು ಆ ಕಾಲಕ್ಕೆ ದಾಸಸಾಹಿತ್ಯ ನಿರ್ಮಾಣದಲ್ಲಿ ಪಾಲ್ಗೊಂಡಿರುವಂತೆ ಕಂಡುಬರುವುದಿಲ್ಲ. ಮದ್ವಾಚಾರ್ಯರ ಸೋದರಿ ಕಲ್ಯಾಣಿ ದೇವಿ, ಪುರಂದರದಾಸರ ಪತ್ನಿ ಸರಸ್ವತಿಬಾಯಿ ಕೀರ್ತನೆಗಳನ್ನು ರಚಿಸಿದ್ದರೆಂದು ಪ್ರತೀತಿ ಇದ್ದರೂ ಸಾಹಿತ್ಯ ಅನುಪಲಬ್ಧ. ಹಾಗಾಗಿ ಹರಿದಾಸ ಪರಂಪರೆಯಲ್ಲಿ ಮಹಿಳೆಯರು ಕಡೆಯ ನಾಲ್ಕನೆ ಘಟ್ಟದಲ್ಲಿ ಕಾಣಸಿಗುತ್ತಾರೆ. ಯಾವುದೇ ಚಳುವಳಿಯ ಸಂದರ್ಭದಲ್ಲಿ ಹೆಣ್ಣು ಮಕ್ಕಳ ಆಲೋಚನೆಗಳೂ ಕಂಡುಬರುತ್ತವೆ. ಲಿಂಗಭೇದದಿಂದಾಗಿ ಹೆಣ್ಣು ಮಕ್ಕಳು ಬರವಣಿಗೆಯ ಅವಕಾಶವನ್ನು ಪಡೆಯಲಾಗದಿದ್ದಾಗ ಭಕ್ತಿ ಚಳುವಳಿಗಳು ಜಾತಿಭೇದ ಲಿಂಗಭೇದಗಳನ್ನು ಮೀರಿ ಹೆಣ್ಣು ಮಕ್ಕಳಿಗೂ ಅವಕಾಶ ಕಲ್ಪಿಸಿದವು. ಪಾರಮಾರ್ಥ ಸಾಧನೆಗೆ ಲಿಂಗ ವರ್ಗಗಳ ಜಾತಿ ಮತಗಳ ಭೇದವಿಲ್ಲ. ಎಲ್ಲರೂ ಇದಕ್ಕೆ ಅರ್ಹರೆಂದು ಭಕ್ತಿ ಚಳುವಳಿ ಪ್ರತಿಪಾದಿಸಿತು. ಹೀಗಾಗಿ ದಾಸ ಸಾಹಿತ್ಯ ಅಂತಿಮ ಘಟ್ಟದಲ್ಲಿ ಅಂದರೆ ಹದಿನೆಂಟನೆಯ ಶತಮಾನದಲ್ಲಿ ಮಹಿಳೆಯರು ಸಾಹಿತ್ಯಿಕ ರಚನೆಯಲ್ಲಿ ತೀವ್ರವಾಗಿ ತೊಡಗಿಕೊಂಡರು. ಇವರಾರೂ ಕ್ರಮಬದ್ಧ ಶಿಕ್ಷಣ ಪಡೆದವರಲ್ಲ. ವೈದಿಕ ಪರಂಪರೆಯಿಂದ ಬಂದ ಈ ಮಹಿಳೆಯರ ಕೌಟುಂಬಿಕ ಪರಿಸರವೇ ತಕ್ಕಮಟ್ಟಿನ ಜ್ಞಾನಾರ್ಜನೆಗೆ ಅನುವು ಮಾಡಿಕೊಟ್ಟಿತ್ತೆನ್ನಬಹುದು. ರಾಮಾಯಣ, ಮಹಾಭಾರತ, ಭಾಗವತ ಮೊದಲಾದವುಗಳ ಶ್ರವಣ ದಾಸರ ರಚನೆಗಳ ಹಾಡುಗಾರಿಕೆ, ಹರಿಯ ಮೇಲಿನ ಭಕ್ತಿ ಇವೇ ಮೊದಲಾದ ಅಂಶಗಳು ಪ್ರಭಾವ ಬೀರಿದ ಪರಿಣಾಮವಾಗಿ ಕೆಲವಾದರೂ ಮಹಿಳೆಯರು ತಮ್ಮ ಭಾವನೆಗಳ ಅಭಿವ್ಯಕ್ತಿಗಾಗಿ ಹಂಬಲಿಸಿದರು. ತಮ್ಮ ಅಭಿವ್ಯಕ್ತಿಗೆ ಪುರುಷರ ಆಲೋಚನೆಯ ಕ್ರಮವನ್ನೇ ಮಾದರಿಯಾಗಿಟ್ಟುಕೊಂಡರು. ಈ ಹಿನ್ನೆಲೆಯಲ್ಲಿ ಕ್ರಿ.ಶ.೧೫೦೦ ರಿಂದ ೧೮೫೦ರ ವರೆಗಿನ ಮಹಿಳಾ ಸಾಹಿತ್ಯ ಪರಿಶೀಲಿಸಬಹುದು.

ಕ್ರಿ.ಶ.೧೫೦೦ ರಿಂದ ಮಹಿಳಾ ಸಾಹಿತ್ಯದ ಅನ್ವೇಷಣೆಯನ್ನು ಆರಂಭಿಸಿದಾಗ ೧೬ನೆಯ ಶತಮಾನದಲ್ಲಿ ಸುಮಾರು ಒಂದೂವರೆ ಶತಮಾನಗಳ ಕಾಲ ಯಾವೊಬ್ಬ ಕವಿಯಿತ್ರಿಯೂ ಕಂಡುಬರುವುದಿಲ್ಲ. ಈ ಅವಧಿಯ ಮಹಿಳಾ ಸಾಹಿತ್ಯ ಕಾಲಗರ್ಭದಲ್ಲಿ ನಾಶವಾಯಿತೆ ಅಥವಾ ಮೌಖಿಕ ಪರಂಪರೆಯಲ್ಲಿ ಹರಿದು ಹೋಯಿತೇ ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಆ ಬಳಿಕದಲ್ಲಿ ಲೇಖಕಿಯರನ್ನು ಕಾಣಬೇಕಾದರೆ ಮೈಸೂರು ಒಡೆಯರ ಕಾಲದವರೆಗೂ ಕಾಯಬೇಕಾಗುತ್ತದೆ. ಚಿಕ್ಕದೇವರಾಜನ (ಕ್ರಿ.ಶ.೧೬೭೨ ೧೭೦೪) ಕಾಲದಲ್ಲಿದ್ದ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ವಾತಾವರಣದ ಆತನ ಆಸ್ಥಾನವು ಅನೇಕ ಕವಿಗಳ ಆಶ್ರಯದಾಣವಾಗಿತ್ತು. ಹಾಗೆ ನೋಡಿದರೆ ಮೈಸೂರು ಅರಸರ ಆರಂಭ ಕಾಲದ ಸಾಹಿತ್ಯವೆಲ್ಲ ರಾಜರ ವ್ಯಕ್ತಿ ವಿಶೇಷ ಅಥವಾ ವಿಜಯೋತ್ಸವದ ನಿರೂಪಣೆಯಾಗಿತ್ತು. ಚಿಕ್ಕದೇವರಾಜನ ಕಾಲದಲ್ಲಿ ವೈಷ್ಣವ ಧರ್ಮದ ಪ್ರಭಾವ ದಟ್ಟವಾಗಿತ್ತು. ಶ್ರೀ ವೈಷ್ಣವ ಧರ್ಮ ಹನ್ನೊಂದನೆಯ ಶತಮಾನದಲ್ಲಿಯೇ ಕರ್ನಾಟಕವನ್ನು ಪ್ರವೇಶಿಸಿದ್ದರೂ ಅದು ಸಾಹಿತ್ಯದಲ್ಲಿ ಪ್ರಕಟವಾಗಿದ್ದು ಮೈಸೂರು ಅರಸರ ಕಾಲದಲ್ಲಿ ಚಿಕ್ಕದೇವರಾಜನ ಕಾಲವಂತು ವೈಷ್ಣವ ಧರ್ಮದ ಉತ್ಕೃಷ್ಟ ಕಾಲ ಆತನ ಅಸ್ಥಾನದಲ್ಲಿದ್ದ ಮಂತ್ರಿಗಳು, ಬರಹಗಾರರಲ್ಲಿ ಹೆಚ್ಚಿನವರು ಶ್ರೀವೈಷ್ಣವರೇ ಆಗಿದ್ದರು. ಚಿಕುಪಾಧ್ಯಾಯ, ತಿರುಮಲಾಚಾರ್ಯ, ಸಿಂಗಲಾರ್ಯ, ತಿಮ್ಮಕವಿ ಮೊದಲಾದ ಕವಿಗಳು ಶ್ರೀ ವೈಷ್ಣವ ಧರ್ಮವನ್ನು ಪ್ರತಿಪಾದಿಸುವ ಗ್ರಂಥಗಳನ್ನು ಸಾಲು ಸಾಲಾಗಿ ರಚಿಸಿದರು. ಚಿಕ್ಕದೇವರಾಜನ ಆಶ್ರಯದಲ್ಲಿ ಶತಮಾನದ ಬಳಿಕ ಕವಿಯಿತ್ರಿಯರು ಮೊದಲ ಬಾರಿಗೆ ಕಾಣಿಸಿಕೊಂಡರು. ಇವರೇ ಸಂಚಿಯ ಹೊನ್ನಮ್ಮ ಮತ್ತು ಶೃಂಗಾರಮ್ಮ ಮುಂದಿನ ಶತಮಾನಗಳಲ್ಲಿ ಕವಿಯಿತ್ರಿಯರ ಪರಂಪರೆಯೊಂದು ರೂಪುಗೊಂಡಿದ್ದನ್ನು ಗಮನಿಸಬಹುದು.

ವೈದಿಕ ಧರ್ಮದ ಹಿನ್ನಲೆಯಲ್ಲಿ ಹುಟ್ಟಿಕೊಂಡ ದಾಸ ಸಾಹಿತ್ಯವು ೧೨ನೆಯ ಶಸತಮಾನದ ಕೊನೆಯ ಹಂತದಲ್ಲಿ ಕಾಣಿಸಿಕೊಂಡು ೧೮ನೆಯ ಶತಮಾನದವರೆಗೆ ಏಳು ಬೀಳುಗಳನ್ನು ದಾಟಿಕೊಂಡು ಬಂದಿರುವುದನ್ನು ಕಾಣುತ್ತೇವೆ. ದಾಸಸಾಹಿತ್ಯದ ಪರಂಪರೆಯನ್ನು ಗಮನಿಸಿದರೆ ಇದು ಒಂದು ರೀತಿಯಲ್ಲಿ ಜನಪದ ಸಾಹಿತ್ಯದಂತೆ ಗ್ರಂಥಸ್ಥ ಸಾಹಿತ್ಯವಾಗಿ ಉಳಿದುಕೊಂಡು ಬಂದಿರುವುದಕ್ಕಿಂತ ಹೆಚ್ಚಾಗಿ ಮೌಖಿಕ ನೆಲೆಗಟ್ಟಿನಲ್ಲಿ ಕೀರ್ತನೆಗಳು ಹರಿದು ಬಂದುದು ಹೆಚ್ಚು, ಆದರೆ ಹರಿದಾಸ ಸಾಹಿತ್ಯದ ಉಗಮವನ್ನು ಕುರಿತಂತೆ ಹುಟ್ಟು ಹಾಕಿದ ವ್ಯಕ್ತಿಯ ಬಗ್ಗೆ ಅನೇಕ ವಿವಾದಗಳಿವೆ. 'ನರಹರಿ ತೀರ್ಥರು ಕನ್ನಡದಲ್ಲಿ ಪದಗಳನ್ನು ರಚಿಸಿ ದಾಸಕೂಟದ ಮೂಲ ಪುರುಷರೆಂದು ಪ್ರಸಿದ್ಧ ಪಡೆದಿದ್ದಾರೆ. ದಾಸ ಸಹಿತ್ಯದಲ್ಲಿ ಸುಮಾರು ಇನ್ನೂರಕ್ಕೂ ಹೆಚ್ಚು ಹರಿದಾಸರು ಕೀರ್ತನೆಗಳನ್ನು ರಚಿಸಿದ್ದಾರೆಂದು ತಿಳಿದುಬರುತ್ತದೆ.

ಭಕ್ತ ಭಗವಂತನಲ್ಲಿ ತನ್ನ ಹಾಡಿನ ಮೂಲಕ ಅಂತರಂಗ ಶೋಧನೆ, ಕಳವಳ ಸರ್ವಸಮರ್ಪಣ ಭಾವದಿಂದ ಮೊರೆಯಿಟ್ಟಿದ್ದಾನೆ. ಅಲ್ಲದೆ ಹರಿದಾಸರು ಪ್ರಮುಖವಾಗಿ ಮಧ್ವಮತ ತತ್ತ್ವದ ಪ್ರತಿಪಾದನೆಯ

ಹಿನ್ನೆಲೆಯಲ್ಲಿ ಹರಿಭಕ್ತಿ ಸ್ತುತಿ ಗೀತೆಗಳೊಂದಿಗೆ ಸಮಾಜ ಸುಧಾರಣೆ ಮತ್ತು ಜನರಿಗೆ ನೀತಿ ಭೋದೆ ಮಾಡುವುದು ಮುಖ್ಯ ಗುರಿಯಾಗಿತ್ತು. ಹಾಗೆಯೇ ಇಲ್ಲಿ ಸಂಪೂರ್ಣವಾಗಿ ದೇಶೀಯ ಮಟ್ಟುಗಳನ್ನು ಬಳಸಿಕೊಳ್ಳಲಾಯಿತು. ಹಾಡುಗಬ್ಬವಾದ ಸಾಂಗತ್ಯ, ಷಟ್ಪದಿ, ರಗಳೆ, ಕೀರ್ತನೆಗಳು ಉಗಭೋಗ, ಸುಳಾದಿಗಳನ್ನೂ ರಚಿಸಿ ಜನರಿಗೆ ಭಕ್ತಿಯಿಂದ ಆತ್ಮಸಾಕ್ಷಾತ್ಕಾರವನ್ನು ಪಡೆಯಲು ಸಾಧ್ಯ ಎಂದು ಬೋಧಿಸಿದರು.

ದಾಸ ಸಾಹಿತ್ಯದಲ್ಲಿ ಮೊದಲಿಗೆ ಗುರುಶಿಷ್ಯ ಪರಂಪರೆಯಿತ್ತು. ಆದರೆ ಅದು ನಂತರದಲ್ಲಿ ಕ್ಷೀಣವಾಗಿ, ದೀಕ್ಷೆ - ಯಾಂತ್ರಿಕವಾಯಿತು. ಇಲ್ಲಿ ಹರಿದಾಸರ ಮುಖ್ಯ ಉದ್ದೇಶ ಕೀರ್ತನೆಗಳಲ್ಲಿ ಮತ ಪ್ರಚಾರಕ್ಕಿಂತ ನೀತಿ ಬೋಧೆ, ಹರಿಭಕ್ತಿ ಪಾರಮ್ಯದ ಬಗ್ಗೆ ಅರಿವು ಮೂಡಿಸುತ್ತಾ 'ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ' ಎಂದು ಜನರಲ್ಲಿ ಆಶಾಭಾವನೆ ಮೂಡಿಸುವುದರ ಮೂಲಕ ಸಮಾಜವನ್ನು ತಿದ್ದಲು ಪ್ರಾರಂಭಿಸಿದರು. ಇದಕ್ಕೆ ಹರಿದಾಸರು ನಡೆಸಿದ ಆದರ್ಶ ಜೀವನ

ಸ್ತ್ರೀಯರ ಬಗ್ಗೆ ಹರಿದಾಸರಿಗೆ ಇದ್ದ ದೃಷ್ಟಿಕೋನ ಅವರ ಕೃತಿಗಳ ಮೂಲಕ ಅವಲೋಕಿಸಬಹುದಾಗಿದೆ. ವಚನಕಾರರಂತೆ ಹರಿದಾಸರು ಹೆಣ್ಣಿಗೆ ಹಾಗೂ ಅವರ ಆಧ್ಯಾತ್ಮ ಸಾಧನೆಯ ಪ್ರಗತಿಗೆ ಪ್ರಾಮುಖ್ಯತೆ ಕೊಟ್ಟರು. ಹೆಣ್ಣಿಗೆ ಸ್ವಾತಂತ್ರ್ಯವಿರಲಿಲ್ಲ. ಹರಿದಾಸಪಂಥ ಸ್ತ್ರೀಯರಿಗೂ ತೆರೆದಿತ್ತು. ಆದರೆ ಅಲ್ಲಿ ಬೆಳಗಿದ ಸ್ತ್ರೀಯರು ಎದ್ದು ಕಾಣುವಂಥವರು ಒಬ್ಬರು ಇಬ್ಬರು. ಪುರಂದರದಾಸರ ಪತ್ನಿ ಸರಸ್ವತಿ ಹಾಗೂ ಮಗಳಾದ ರುಕ್ಮಿಣಿ ದಾಸಪಂಥದ ಆದರ್ಶವನ್ನು ಅನುಸರಿಸಿದರೆಂದು ಕೀರ್ತನೆಗಳನ್ನು ಹಾಡಿದರೆಂದೂ ತಿಳಿದುಬರುತ್ತದೆ. ನವಕೋಟಿ ನಾರಾಯಣನೆನಿಸಿ ಲೋಭಿಯಾಗಿದ್ದ ಶೀನಪ್ಪ ನಾಯಕನನ್ನು ಪುರಂದರದಾಸರಾಗಿ ಮಾಡಿದವಳೆ ಅವರ ಪತ್ನಿ ಸರಸ್ವತಿ ಹಾಗೂ ಆಕೆಯ ಸಾತ್ವಿಕ ಗುಣಗಳು ಎಂದು ಇದನ್ನು ದಾಸರೆ ಹಾಡಿದ್ದಾರೆ.

'ಆದದ್ದೆಲ್ಲ ಒಳಿತೆ ಆಯಿತು ನಮ್ಮ ಶ್ರೀದರ ಸೇವೆಗೆ | ಸಾಧನ ಸಂಪತ್ತಾಯಿತು
...... ಹೆಂಡತಿ ಸಂತತಿ ಸಾವಿರವಾಗಲಿ ದಂಡಿಗೆ ಬೆತ್ತ ಹಿಡಿಸಿದಳಯ್ಯ'[೪]

೧೮ನೇ ಶತಮಾನದ ಹರಿದಾಸ ಪರಂಪರೆಯಲ್ಲಿ ಬರುವ ಹೆಳವನಕಟ್ಟೆ ಗಿರಿಯಮ್ಮ ಅನೇಕ ಹಾಡುಗಳನ್ನು ರಚಿಸಿದ್ದಾಳೆ. ಗಿರಿಯಮ್ಮನಿಗೆ ಗೋಪಾಲದಾಸರು ರಂಗೋಲಿಯಲ್ಲಿ ಬಾಲಗೋಪಾಲನ ಚಿತ್ರ ಬಿಡಿಸಿಕೊಟ್ಟು ಅನುಗ್ರಹಿಸಿದರು ಎಂಬ ಪ್ರತಿತಿ ಇದೆ. ಇದರಿಂದ ಹರಿದಾಸರಲ್ಲಿ ಸ್ತ್ರೀಯರ ಬಗ್ಗೆ ಅಂಥ ಪ್ರತಿಬಂಧಕ ದೃಷ್ಟಿಯಿರಲಿಲ್ಲವೆಂದೆನ್ನಬಹುದು. ಆದರೂ ಅವರು ಹೆಣ್ಣು ಸಮಾಜದಲ್ಲಿ ಪ್ರಮುಖ ಸ್ಥಾನ ಪಡೆಯಲು ಅವಳಿಗೆ ಅವಕಾಶ ದೊರಕಿಸಿ ಕೊಡುವ ದಿಸೆಯಲ್ಲಿ ಶ್ರಮಿಸಲಿಲ್ಲ, ಹೆಣ್ಣು ತಾಯಿ ಕುಲಸತಿ ಎಂದಷ್ಟೆ ಪರಿಗಣಿಸಿ ಗೌರವಿಸಿದರು. ಹಾಗೆಯೇ ಹೆಣ್ಣು, ಹೊನ್ನು, ಮಣ್ಣು ಇವೆಲ್ಲ ಅಸ್ಥಿರ,

ಭಂಗುರವೆಂದೂ ಸಾರಿದರು. ವೇದ ಮನುಸ್ಮೃತಿಯಲ್ಲಿ ತಿಳಿಸಿರುವಂತೆ 'ನಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬ ನುಡಿಯ ಪ್ರಕಾರ ಹೆಣ್ಣಿನ ತೀಕ್ಷ್ಣಮತಿ ನ್ಯಾಯ ತೀರ್ಮಾನ ದೃಷ್ಟಿಯನ್ನು ನಂಬಲಿಲ್ಲ.

ಮುಕ್ತಿಯ ಮಾರ್ಗಕ್ಕೆ ಹೆಣ್ಣು ಅಡ್ಡಿಯೆಂದೂ ಹಾಡಿದ್ದಾರೆ. ಇದರಿಂದ ಹೆಣ್ಣನ್ನು ಕಂಡರೆ ದ್ವೇಷವಿತ್ತೆ ಎಂದೂ ಅನ್ನಿಸಬಹುದು. ಮೋಕ್ಷಕ್ಕೆ ಲಿಂಗಭೇದವಿಲ್ಲ ಎಂದು ಹೇಳಿದ್ದ ಪುರಂದರದಾಸರು ಒಂದು ಕಡೆ 'ನಂಬಬೇಡಿ ನಾರಿಯನು ಹರಿಬಲ ಹಾರೈಸಬೇಡಿ' ಎಂದಿರುವುದು ಹೆಣ್ಣು ಹೇಗಿರಬೇಕೆಂದರೆ ಅವಳು ಪವಿತ್ರಳಾಗಿರಬೇಕು. ಹೆಣ್ಣಿನಂತೆ ಲಕ್ಷಣವಾಗಿರಬೇಕು. ಬಾಳೆಹಣ್ಣಿನಂತೆ ಅವಳ ಗುಣ ಸ್ವಭಾವ ಸಿಹಿಯಾಗಿರಬೇಕು. ಎಂಬಲ್ಲಿ ಗಂಡಿನ ಅಪೇಕ್ಷೆಯನ್ನು ಹೇಳಿದಂತಿದೆ. ಅವಳು ಪರಪುರುಷನನ್ನು ಮನದಲ್ಲೂ ನೆನೆಯದೆ ಪತಿಗೆ ತನ್ನನ್ನು ಸಮರ್ಪಿಸಿಕೊಳ್ಳಬೇಕು. ಅಲೆಯುವ ಹೆಂಗಸನ್ನು ನಂಬಬೇಡೆನ್ನುತ್ತಾರೆ ಹರಿದಾಸರು. ಅದೇ ರೀತಿ ಹೆಣ್ಣು ಅನುಭವಿಸುವ ಕಷ್ಟಗಳನ್ನು ಗಮನಿಸಿ 'ಒಲ್ಲೆನೆ ವೈದಿಕ ಗಂಡನ ನಾನೆಲ್ಲಾದರು ಕಲ್ಲ ಹಾಯುವೆನಮ್ಮ' ಎಂದು ಸ್ತ್ರೀಪರ ಕಾಳಜಿ ನಿಲುವಿನಿಂದ ದಾಸರು ಹೆಣ್ಣಿನ ನೋವಿನ ಧ್ವನಿಯನ್ನು ಗುರುತಿಸಿ ಹೇಳಿದ್ದಾರೆ.

ಜನಪದರಲ್ಲಿ ಒಬ್ಬ ಹೆಣ್ಣು ಮಗಳು ಮದುವೆ ಸಂದರ್ಭದಲ್ಲಿ ಮುದುಕನನ್ನು ಮದುವೆಯಾಗಲು ಒಪ್ಪದಿರುವಂತೆ ಚಿತ್ರಣಗೊಂಡಿರುವುದು ಕಾಣುತ್ತೇವೆ. ಅದೇ ರೀತಿಯ ಚಿತ್ರಣವನ್ನು ಪುರಂದರದಾಸರು ನೀಡಿದ್ದಾರೆ. 'ಮುಪ್ಪಿನ ಗಂಡನ ಒಪ್ಪೆನು ನಾನು ತಪ್ಪದೆ ಪರಿಪಾಟ ಪಡಲಾರನಕ್ಕ' ಎಂಬುದನ್ನು ನೋಡಿದಾಗ ದಾಸರಿಗೂ ಕೂಡ ಹೆಣ್ಣಿನ ಬಗ್ಗೆ ಅಭಿಮಾನವಿರುವುದು ಕಂಡುಬರುತ್ತದೆ. ಹರಿದಾಸರ ಭಕ್ತಿಪಂಥವೊಂದು ಕರ್ನಾಟಕದಲ್ಲಿ ಶಿವಶರಣರಂತೆಯೇ ಸಾಹಿತ್ಯವನ್ನು ಮನೆ ಮನೆಗೆ ತಲುಪಿಸುವ ಕೆಲಸದಲ್ಲಿ ತೊಡಗಿದಾಗ ಸತ್ವ ಮತ್ತ ಮೊತ್ತದಲ್ಲಿ ಶಿವಶರಣೆಯರಷ್ಟಲ್ಲದಿದ್ದರೂ ಕೆಲವು ವೈಷ್ಣವ ಕವಯಿತ್ರಿಯರು ಕೃತಿ ರಚನೆ ಮಾಡಿರುವುದು ಕಂಡುಬರುತ್ತದೆ. 'ಗಲಗಲಿಯ ಅವ್ವನವರು, ಭಾಗಮ್ಮ, ಹೆಳವನಕಟ್ಟೆ ಗಿರಿಯಮ್ಮ, ಹರಿಪನಹಳ್ಳಿ ಭೀಮವ್ವ, ಚೆಲ್ಲಮ್ಮ, ಸುಂದರಾಬಾಯಿ ಇತ್ಯಾದಿ ಹೆಸರುಗಳನ್ನು ಉಲ್ಲೇಖಿಸಬಹುದಾದರೂ ಗಮನಾರ್ಹವಾದ ಸಾಹಿತ್ಯ ರಚಿಸಿದವರಲ್ಲಿ ಹೆಳವನಕಟ್ಟೆ ಗಿರಿಯಮ್ಮ ಮತ್ತು ಹರಪನಹಳ್ಳಿ ಭೀಮವ್ವ ಪ್ರಮುಖರು.

ನರಹರಿ ತೀರ್ಥರಿಂದ ಆರಂಭಗೊಂಡು ಗೋಪಾಲದಾಸರವರೆಗೆ ಒಂದು ಪರಂಪರೆಯಾಗಿ ಬೆಳೆದು ಬಂದ ದಾಸ ಸಾಹಿತ್ಯದಲ್ಲಿ ಗೋಪಾಲದಾಸರಿಂದ ಅನುಗ್ರಹಿತಳಾದ ಹೆಳವನಕಟ್ಟೆ ಗಿರಿಯಮ್ಮ ಆ ಪರಂಪರೆಯನ್ನು ಮುಂದುವರಿಸಿದ ಭಕ್ತೆ ಬಾಲ್ಯದಲ್ಲಿಯೇ ದೈವ ಭಕ್ತಳಾಗಿ ವಿರಕ್ತಳಾಗಿದ್ದ ಗಿರಿಯಮ್ಮ ಮದುವೆಯಾದ ಮೇಲೂ ಸಂಸಾರ ಸುಖವನ್ನೊಲ್ಲದೆ ಗಂಡನಿಗೆ ಮತ್ತೊಂದು ಬೇರೆ ಮದುವೆಯನ್ನು ಮಾಡಿಸಿ ತನ್ನ ಸಾಧನೆಯಲ್ಲಿ ಮುಂದುವರೆದವರು. ಇದರಿಂದ ಈಕೆ ಹರಿಸ್ತುತಿ ಮಾಡುತ್ತಾ ಕೀರ್ತನೆಗಳನ್ನು ರಚಿಸುತ್ತಾ ಹರಿಸೇವೆಯಲ್ಲೇ ಕಾಲ ಕಳೆದಿರಬೇಕು. ವಿದ್ಯಾಭ್ಯಾಸದ ಬಗ್ಗೆ ನಿಖರವಾದ ಮಾಹಿತಿ

ದೊರೆಯದಿದ್ದರೂ ಆಕೆ ಓದು ಬರಹ ಬಲ್ಲವಳಾಗಿದ್ದಳು ಎಂದು ಊಹಿಸಬಹುದು. ಕೆಲವು ಕಥೆಗಳನ್ನು ಹಾಡಿನ ಮೂಲಕ ವ್ಯಕ್ತಪಡಿಸಿರುವುದರಿಂದ ಬಹುಶಃ ಕಥೆಗಳನ್ನು ಯಾರಿಂದಲೊ ಕೇಳಿ ತಿಳಿದುಕೊಂಡಿರಬಹುದು. ಇವಳ ಸುತ್ತ ಅನೇಕ ಪವಾಡಗಳ ಕಥೆಗಳು ಹಬ್ಬಿವೆ ಗಿರಿಯಮ್ಮ ತನ್ನ ಆರಾಧ್ಯ ದೈವವಾದ 'ಹೆಳವನಕಟ್ಟೆ ರಂಗ'ನ ಅಂಕಿತದಲ್ಲಿ ಅನೇಕ ಹಾಡುಗಳನ್ನು ರಚಿಸಿರುವುದಲ್ಲದೆ. ಚಂದ್ರಹಾಸನ ಕಥೆ ಶಂಕರಗಂಡನ ಹಾಡು, ಲವಕುಶರ ಕಾಳಗ, ಸೀತಾಕಲ್ಯಾಣ, ಬ್ರಹ್ಮಕೊರವಂಜಿ, ಉದ್ದಾಳಿಕನ ಕಥೆ ಇತ್ಯಾದಿ ಹಲವು ಕೃತಿಗಳನ್ನು ರಚಿಸಿ ದಾಸ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದ್ದಾಳೆ. ಗಿರಿಯಮ್ಮನ ಕೃತಿಗಳಲ್ಲೆಲ್ಲ ಹೆಚ್ಚು ಜನಪ್ರಿಯವೂ ಉತ್ತಮವೂ ಆದ ಕೃತಿ 'ಚಂದ್ರಹಾಸನ ಕಥೆ' ನಾಲ್ಕು ಸಂಧಿಗಳ ಈ ದೀರ್ಘ ಕಾವ್ಯದಲ್ಲಿ ಅವಳ ಭಕ್ತಿ ಮತ್ತು ಕಾವ್ಯಶಕ್ತಿ ಸೊಗಸಾಗಿ ಅಭಿವ್ಯಕ್ತಿಗೊಂಡಿದೆ.

ಸಾಮಾನ್ಯವಾಗಿ ಗಿರಿಯಮ್ಮನ ಹಾಡುಗಳಲ್ಲಿ ಶ್ರೀ ಹರಿಸ್ತುತಿ ಮತ್ತು ತನ್ನ ಅಂತರಂಗ ನಿವೇದನೆಯನ್ನು ತೋಡಿಕೊಂಡಿರುವುದನ್ನು ಕಾಣಬಹುದು.

ಕಡೆಗಣ್ಣಲಿ ನೀ ನೋಡದಿರೆನ್ನಯ್ಯ ಬಿಡಬೇಡವೊ ಕೈಯ್ಯ
ಬಡವರ ಬಂಧು ಬಹುಕೃಪಾಸಿಂಧು
ಒಡೆಯ ನೀನಲ್ಲದೆ ಎನಗೆ ಬ್ಯಾರಿಲ್ಲವೊ
...................
ಸಾರಿ ಹೇಳುವೆ ಎನ್ನು ಬಳಗದ ಅರಭಾರವು ನಿನ್ನದು
ಹೇರೊಪ್ಪಿಸಿದ ಮೇಲ್ಯಾತರ ಸುಂಕವು
ಕಾರುಣ್ಯನಿಧೀ ಹೆಳವನಕಟ್ಟೆ ರಂಗಯ್ಯ[೫]

ಇಲ್ಲಿ ಭಗವಂತನನ್ನು ಒಡೆಯನನ್ನಾಗಿ ನಾನಾ ರೀತಿಯಿಂದ ಹಾಡಿ ಹೊಗಳಿದ್ದಾಳೆ. ಅದೇ ರೀತಿ ಭಗವಂತನನ್ನು ಸ್ತುತಿಸುವುದರ ಜೊತೆಗೆ ತನ್ನ ಇನಿಯನನ್ನಾಗಿ 'ತಾರಮ್ಮ ಶ್ರೀ ರಂಗಧಾಮನ ತಂದು ತೋರಮ್ಮ ಎನ್ನಯ ಪ್ರೇಮದ ವಾರಿಜ ಶತಕೋಟಿ ತೇಜನ ಹೊಂತಕಾರಿಯ ನೀ ಕರತಾರ ಸೈರಿಸಲಾರೆ' ಎಂದು ಮನದಾಳವನ್ನು ವ್ಯಕ್ತಪಡಿಸಿದ್ದಾಳೆ. ಗಿರಿಯಮ್ಮ ಒಂದು ರೀತಿಯಲ್ಲಿ ಅಕ್ಕಮಹಾದೇವಿಯಂತೆ ಕಂಡುಬರುತ್ತಾಳೆ. ಭಗವಂತನನ್ನೇ ಸರ್ವಸ್ವ ಎಂದು ನಂಬಿ ಸರ್ವಸಮರ್ಪಣಾ ಭಾವದಿಂದ, ಅನನ್ಯ ಭಕ್ತಿಯಿಂದ ಹಾಡಿಕೊಂಡಾಡಿದ್ದಾಳೆ. ಮಳೆಯಿಲ್ಲದೆ ಜನ ಕಂಗಲಾದಾಗ, ರಂಗನಾಥನನ್ನು ಪ್ರಾರ್ಥಿಸಿ ಮಳೆ ತರಿಸಿ ಜನರನ್ನು ರಕ್ಷಿಸಿದಳು ಎಂಬುದಕ್ಕೆ

ಮಳೆಯ ದಯ ಮಾಡೊ ರಂಗಯ್ಯ ನಿಮ್ಮ
ಕರುಣ ತಪ್ಪಿದರೆ ಉಳಿಯದೀ ಲೋಕ
..............

ಧಗೆಯಾಗಿ ದ್ರವಗುಂದಿ ಇದುವ ಬಾವಿಯ ನೀರ
ಮೊಗೆ ಮೊಗೆದು ಪಾತ್ರೆಯಲಿ ನಾರಿಯರು
ಹಗಲೆಲ್ಲ ತರುತಿಹರು ಯೋಚನೆಯ ಮಾಡುತ್ತ
ಬೇಗದಿಂದಲಿ ತರಿಸೊ ವೃಷ್ಟಿಯನು ಹರಿಯೆ[೬]

ಪ್ರಸ್ತುತ ಕೀರ್ತನೆ ಕಂಡುಬರುವ ನೇರ ನಿರೂಪಣೆಯೊಂದಿಗೆ ಒಂದೊಂದು ನುಡಿಯಲ್ಲಿಯೂ ಜಲಕ್ಷಾಮದ (ಬರಗಾಲ) ಬೇಗೆ ಎಂತಹುದೆನ್ನುವುದನ್ನು ಸ್ವಾಭಾವಿಕವಾಗಿ ಚಿತ್ರಿಸಿದ್ದಾಳೆ. ಮೂಕ ಪ್ರಾಣಿಗಳ ನೀರಿಗಾಗಿ ಪರದಾಟ ಬತ್ತಿದ ಬಾವಿಯಿಂದ ಹೆಂಗಸರು ನೀರನ್ನು ಮೊಗೆಯುವುದು ಮಳೆಗಾಲ ಕಳೆದರೂ ಜನರಿಗೆ ಅನಾವೃಷ್ಟಿಯಿಂದ ಬಿಡುಗಡೆ ಹೊಂದದಿರುವುದು ಮೊದಲಾದವುಗಳನ್ನು ಕಾಣಬಹುದು. ಇಲ್ಲಿ ಗಿರಿಯಮ್ಮ ಮುಖ್ಯವಾಗಿ ಹೆಣ್ಣು ಮಕ್ಕಳು ಬರಗಾಲದಲ್ಲಿ ನೀರಿಲ್ಲದೆ ಬಹುದೂರದಿಂದ ನೀರನ್ನು ಮೊಗೆ ಮೊಗೆದು ಹೊತ್ತು ತರುವುದನ್ನು ಕಂಡು ಸ್ತ್ರೀಪರ ಕಾಳಜಿಯಿಂದ ರಂಗನಾಥನನ್ನು ಪ್ರಾರ್ಥಿಸಿ ಬೇಗನೆ ಮಳೆಯನ್ನು ತರಿಸು ಎಂದು ಮೊರೆಯಿಟ್ಟಿದ್ದಾಳೆ. ಹೆಣ್ಣಾಗಿ ಹುಟ್ಟಿ ಗಿರಿಯಮ್ಮ ಎದುರಿಸಿದ ಸಮಸ್ಯೆಗಳು ಅನುಭವಿಸಿದ ನೋವು ವಿಷಾದಗಳು ಈಕೆಯ ರಚನೆಯಲ್ಲಿ ವೈಯಕ್ತಿಕತೆಯನ್ನು ಕಳಚಿಕೊಂಡು ಸಾರ್ವತ್ರಿಕತೆ ಪಡೆದುಕೊಳ್ಳುತ್ತದೆ. ಪಾರಿಜಾತದ ಹಾಡಿನಲ್ಲಿ ಕೃಷ್ಣ ರುಕ್ಮಿಣಿಗೆ ಪಾರಿಜಾತವನ್ನು ಕೊಟ್ಟನೆಂದು ತಿಳಿದಾಗ ಸತ್ಯಭಾಮೆಗೆ ಕೋಪ ದುಃಖಗಳು ಒಟ್ಟಿಗೆ ಒತ್ತರಿಸಿ ಬರುತ್ತವೆ.

ಯಾಕೆನ್ನ ಬ್ರಹ್ಮ ಪುಟ್ಟಿಸಿದನೊ ಸೃಷ್ಟಿಸಿದನೊ
ಮಾಲೆನ್ಯಾಕೆ ಪಡೆದಳೋ
ಸಾಕಿನ್ನು ಹೆಣ್ಣು ಜನ್ಮದ ಬಾಳು
ಯಾಕೆ ಹೇಳು ತಾಕಲೆನ್ನಯ ಗೋಳು[೭]

ಕೃಷ್ಣ ರುಕ್ಮಿಣಿಗೆ ಪಾರಿಜಾತ ಹೂ ತಂದುಕೊಟ್ಟ ವಿಷಯ ತಿಳಿದು ಸಂಕಟವನ್ನು ಅನುಭವಿಸುತ್ತಾ ಸತ್ಯಭಾಮೆಯು ಭಗವಂತನಲ್ಲಿ 'ಈ ಹೆಣ್ಣು ಜನ್ಮಬೇಡವೆಂದು ಬೇಡುತ್ತಾಳೆ'. ಇದನ್ನು ಗಮನಿಸಿದ ಕೃಷ್ಣ ಇಬ್ಬರು ಪತ್ನಿಯರ ನಡುವೆ ಜೀವನ ನಡೆಸುವುದು ಕಷ್ಟ ಎನ್ನುತ್ತಿರುವುದನ್ನು ಹಾಡಿನ ಮೂಲಕ ಗಿರಿಯಮ್ಮ ವ್ಯಕ್ತಪಡಿಸಿ

ದೇವಲೋಕದ ಹೂ ತನಗಿಲ್ಲವಲ್ಲ
ಭಾಮೆ ಎನ್ನೋಳು ಮುನಿಯದೆ ಬಿಡುವಳಲ್ಲ
ಆವ ಪರಿಯಲಿ ತಿಳಿದು ಹೇಳುವೆನು ಸೊಲ್ಲ
ಜೀವದೊಲ್ಲಭೆಯೊಡನೆ ಪಂಥವು ಸಲ್ಲ.[೮]

ಇಲ್ಲಿ ಮುಖ್ಯವಾಗಿ ಗಿರಿಯಮ್ಮ ಹೇಳ ಹೊರಟಿರುವುದು ಇಬ್ಬರು ಪತ್ನಿಯರು ಇದ್ದರೆ ಯಾವತ್ತು ಅವರಿಗೆ ನೋವು ತಪ್ಪಿದಲ್ಲ ಒಬ್ಬ ಹೆಣ್ಣು ಇನ್ನೊಂದು ಹೆಣ್ಣಿನ ಸುಖ ಸಂತೋಷವನ್ನು ಸಹಿಸುವುದಿಲ್ಲ.

ತನಗೆ ಸಿಕ್ಕದೇ ಇರುವುದು ಬೇರೆ ಯಾರಿಗೂ ಸಿಕ್ಕಬಾರದು ಎಂಬುದೇ ಮುಖ್ಯವಾಗುತ್ತದೆ. ಆದರಿಂದ ಇಲ್ಲಿಯೂ ರುಕ್ಮಿಣಿಯ ಮೇಲೆ ಕೃಷ್ಣ ಅಲೆಯಾದ ಪ್ರೀತಿ ತೋರಿದ್ದರಿಂದ ಸತ್ಯಭಾಮೆಯಲ್ಲಿ ಅಸೂಯೆ ಆಗಿ ಬೇಸರ ಆಗಿ ಹೆಣ್ಣಾಗಿ ಹುಟ್ಟಬಾರದು ಎಂಬುದನ್ನು 'ಸಾಕಿನ್ನು ಹೆಣ್ಣು ಜನ್ಮದ ಬಾಳು ಯಾತಕೆ ಹೇಳು ತಾಕಲೆನ್ನಯ ಗೋಳು' ಎಂಬು ಭಗವಂತನಲ್ಲಿ ಮೊರೆಯಿಡುತ್ತಾಳೆ.

ಕೋಮಲೆಯರ ನೀರಾಟದ ರಭಸಕ್ಕೆ ತಾವರೆಗಳು ಬೆರಗಾಗೆ
ಭಾವಕಿಯರ ಮುಖವನೆ ನೋಡಿ ಅಂಬುಜ
ಹೇಮದಿ ತಲೆಯ ತಗ್ಗಿದವು.[೯]

'ಚಂದ್ರಹಾಸನ ಕಥೆ'ಯಲ್ಲಿ ಜಲಕ್ರೀಡೆಯನ್ನಾಡುತ್ತಾ ಹೆಂಗಳೆಯರು ಅಹ್ಲಾದಕರವಾಗಿ ಮೈಮರೆತಿರುವ ಸಂದರ್ಭವನ್ನು ಹಾಗೂ ಹೆಣ್ಣಿನ ಸೌಂದರ್ಯದ ಬಗ್ಗೆ ವರ್ಣಿಸಲಾಗಿದೆ. 'ಉದ್ದಾಳಿಕನ ಕಥೆ'ಯಲ್ಲಿ ಬರುವ ಅವಿವಾಹಿತಳಾದ ಚಂದ್ರಾವತಿಯ ಗರ್ಭವತಿಯಾಗುವುದು ಅವರ ತಂದೆ ತಾಯಿ ಶೋಕಿಸುವ ರೀತಿ ಬ್ರಹ್ಮಲಿಖಿತ, ವಿಧಿ ನಿಯಮವನ್ನು ಯಾರಿಂದಲೂ ಮೀರಲು ಸಾಧ್ಯವಿಲ್ಲ. ಆದರೆ ಮೋಕ್ಷ ಪಡೆಯಲು ಹರಿಸ್ಮರಣೆ, ಹರಿಭಕ್ತಿ ಇವುಗಳಿಂದ ಮಾತ್ರ ಸಾಧ್ಯ ಎಂಬುದನ್ನು ಗಿರಿಯಮ್ಮನ ಹಾಡುಗಳಲ್ಲಿ ಕಾಣಬಹುದು.

ಮೀರ ಬಾರದು ಹರಿಕಯ ಕುಮಾರನ
ಲಿಖಿತವ ನಾರಿ ತಾನಾ ಘ್ರಾಣಿಸಿದಳು
ಏರಿತು ಉತ್ತಮಾಂಗದಲಿ ಆ ಗರ್ಭವು
ನಾಭಿಯ ಕಮಲಕಿಳಿದವು.[೧೦]

'ಪೃಥುವೀಶ ರೋಳು ತಲೆತಗ್ಗಿಸಿದಂತಾಯಿತು ವ್ಯರ್ಥವಾಯಿತು ಎನ್ನಬದುಕು ಹೊತ್ತಿರಲಾರೆ ದೇಹ ವನೀಕ್ಷದಲ್ಲಿ ಹತ್ಯೆ ಮಾಡಿಕೊಂಟೆ' ಎಂದು ರಾಜ ತನ್ನ ಮನದ ಚಿಂತೆಯನ್ನು ವ್ಯಕ್ತಪಡಿಸುತ್ತಾನೆ. ಕಾರಣ ಆಗಿನ ಸಮಾಜದ ಸ್ಥಿತಿಗತಿ ಹಾಗಿತ್ತು ಜೀವನ ಮೌಲ್ಯಗಳಿಗೆ ಬದ್ಧರಾಗಿರಲೇ ಬೇಕಿತ್ತು ಸಮಾಜದ ನಿಂದನೆಗೆ ಒಳಗಾದ ಚಂದ್ರಾವತಿಯನ್ನು ನಾವು ಪ್ರಗತಿಪರ ಮಹಿಳೆ ಎಂದು ಒಪ್ಪಿಕೊಳ್ಳಬಹುದಾಗಿವೆ. ಅಂತಹ ಸಮಾಜ ವ್ಯವಸ್ಥೆಯನ್ನು ಎದುರಿಸಿ ನಿಲ್ಲುವ ಧೈರ್ಯ ಆಕೆಯಲ್ಲಿ ಮಾತ್ರ ಇತ್ತು. ಅನಂತರ ಗಿರಿಯಮ್ಮನಲ್ಲೂ ವಿಶೇಷವಾದ ಸ್ತ್ರೀಪರ ಕಾಳಜಿ ಇದ್ದುದರಿಂದ ಬಹುಶಃ ಈ ರೀತಿ ಚಿತ್ರಿಸಿರಬಹುದು.

ಅಕ್ಷರಾಭ್ಯಾಸದ ಮಾಡಿಸಿ ಕುಮಾರಿಗೆ
ನರ್ತನ ಗೀತವ ಕಲಿಸಿ
ಉತ್ತಮವಾದ ನಾಟಕ ಕವಿಶಾಸ್ತ್ರವ
ಪುತ್ರಿಗಭ್ಯಾಸ ಮಾಡಿಸಿದ[೧೧]

ಚಂದ್ರಾವತಿ ರಾಜಕುಮಾರಿಗೆ ಅವಳ ತಂದೆ ಸಂಗೀತ ನರ್ತನದ ಜೊತೆಗೆ ಅಕ್ಷರಾಭ್ಯಾಸ ನಾಟ್ಯ. ಕವಿತಾ ಶಾಸ್ತ್ರವನ್ನು ಕಲಿಸಿದ್ದರೆಂದು ಹೇಳಿರುವಲ್ಲಿ ಗಿರಿಯಮ್ಮ ಸ್ತ್ರೀ ಶಿಕ್ಷಣದ ಮಹತ್ವವನ್ನರಿತಿದ್ದಳೆಂಬುದು ವ್ಯಕ್ತವಾಗಿದೆ. ಶಿಕ್ಷಣ ಎನ್ನುವ ಸಾಮಾಜಿಕ ಸಂಸ್ಥೆಗೆ ಎಲ್ಲ ಸಮಾಜಗಳಲ್ಲೂ ಎರಡು ಪ್ರಮುಖ ಜವಾಬ್ದಾರಿಗಳಿವೆ. ಒಂದು ಆ ಸಮಾಜದ ಸಾಂಸ್ಕೃತಿಕ ಪರಂಪರೆಯನ್ನು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ವರ್ಗಾಯಿಸುವುದು. ಎರಡನೆಯದು. ಆ ಸಮಾಜದಲ್ಲಿ ಬದಲಾವಣೆಯನ್ನು ತರುವುದಕ್ಕೆ ಪೂರಕವಾದ ವಾತಾವರಣವನ್ನು ಸೃಷ್ಟಿಸುವುದು. ಈ ಎರಡು ಕಾರ್ಯಗಳೂ ಮಹಿಳೆಯರ ಬದುಕಿನ ಮೇಲೆ ವಿಶೇಷವಾದ ಪ್ರಭಾವವನ್ನು ಬೀರುವಂಥವು ಸಂಪ್ರದಾಯವನ್ನು ಮುಂದುವರೆಸಿಕೊಂಡು ಹೋಗುವುದರ ಮೂಲಕ ಶಿಕ್ಷಣ ಮಹಿಳೆಯರಿಗೆ ಬದಲಾವಣೆಗೆ ಅನೇಕ ಅವಕಾಶಗಳನ್ನೂ ಕೂಡ ಮಹಿಳೆಯರಿಗೆ ನೀಡುತ್ತಾ ಬಂದಿದೆ ಎನ್ನುವುದು ಗಮನಾರ್ಹ. ಈ ಎರಡು ಕಾರ್ಯಗಳಲ್ಲಿ ಪರಸ್ಪರ ವೈರುಧ್ಯವೆನಿಸುವಂತಹ ಪರಿಸ್ಥಿತಿ ಕಂಡುಬಂದರೂ ಇವೆರಡೂ ಶಿಕ್ಷಣ ಎನ್ನುವ ಸಂಸ್ಥೆಯೊಡನೆ ಜೋಡಣೆಯಾಗಿರುವಂತಹ ವಿಚಾರಗಳಾಗಿವೆ.

ಶಿಕ್ಷಣ ವ್ಯಕ್ತಿ ಅಥವಾ ಸಮಾಜದ ಪ್ರಗತಿಗೆ ಕಾರಣವಾಗಿರುವಂತಹ ಅತ್ಯಂತ ಪ್ರಮುಖ ಹಾಗೂ ಪ್ರಬಲ ಸಾಧನ ಎಂದರೂ ತಪ್ಪಾಗಲಾರದು ಆದರೆ, ಭಾರತೀಯ ಸಮಾಜದಲ್ಲಿ ಶತಮಾನಗಳಿಂದಲೂ ಮಹಿಳೆಯರಿಗೆ ಲಭ್ಯವಿರುವ ಶಿಕ್ಷಣಾವಕಾಶಗಳು ಪುರುಷರಿಗೆ ಹೋಲಿಸಿದರೆ ಕಡಿಮೆ ಹಿಂದೆಂದಿಗಿಂತ ಇಂದು ಸಂಖ್ಯಾತ್ಮಕ ಸೃಷ್ಟಿಯಿಂದ ಮಹಿಳೆಯರಿಗೆ ಶಿಕ್ಷಣದ ಅವಕಾಶಗಳಲ್ಲಿ ಹೆಚ್ಚಳ ಉಂಟಾಗಿರುವುದು ನಿಜವಾದರೂ ಈ ಹೆಚ್ಚಿರುವ ಅವಕಾಶಗಳ ಹಂಚಿಕೆಯಲ್ಲಿ ಸಮಾನತೆ ಕಂಡುಬರುತ್ತಿಲ್ಲ. ಇಂದಿಗೂ ಭಾರತದ ಒಟ್ಟು ಮಹಿಳಾ ಜನಸಂಖ್ಯೆಯಲ್ಲಿ ಶೇಕಡ ೩೯.೪೭ರಷ್ಟು ಮಾತ್ರ ಸಾಕ್ಷರರಾಗಿದ್ದು, ಇನ್ನುಳಿದ ಮಹಿಳೆಯರ ಪಾಲಿಗೆ ಶಿಕ್ಷಣವನ್ನು ಪಡೆಯುವ ಅವಕಾಶ ದೊರೆಯದಿರುವುದು. ಆಹಾರದಷ್ಟೇ ಮೂಲಭೂತ ಅವಶ್ಯಕತೆಯಿಂದ ಶಿಕ್ಷಣವನ್ನು ಪಡೆಯುವುದರಲ್ಲಿ ಎಷ್ಟು ಮಟ್ಟಿನ ಲಿಂಗತಾರತಮ್ಯ ಅಡಕವಾಗಿದೆ ಎಂಬುದು ತಿಳಿದುಬರುತ್ತದೆ.

ಪ್ರಾಚೀನ ಕಾಲದಲ್ಲಿ ಮಹಿಳೆಯರ ಸ್ಥಿತಿ ಉತ್ತಮವಾಗಿತ್ತು ಅವರು ಯಾವುದೇ ಬಗೆಯ ತಾರತಮ್ಯಕ್ಕೆ ಒಳಗಾಗಿರಲಿಲ್ಲ ಗಾರ್ಗಿ, ಮೈತ್ರೇಯಿಯರಂಥ ಮಹಿಳೆಯರು ಉದ್ದಾಮ ಪಂಡಿತರಾಗಿದ್ದರು ಎಂದು ತಿಳಿದುಬರುತ್ತದೆ. ಆದರೆ ಯಾವುದೇ ಕಾಲದಲ್ಲಿ ಸ್ತ್ರೀ ಪುರುಷರಿಗೆ ಸಮಾಜ ಶೈಕ್ಷಣಿಕ ಅವಕಾಶಗಳು ಇರಲಿಲ್ಲವೆಂಬುದು ನೈಜವಾಗಿ ಇದ್ದಂಥ ಪರಿಸ್ಥಿತಿ ಶತಮಾನಗಳಿಂದ ಹೆಣ್ಣಿನ ಬದುಕನ್ನು ವಿವಾಹ ಮತ್ತು ತಾಯ್ತನಗಳೆಂಬ ಎರಡು ಸಂಕೋಲೆಗಳಲ್ಲಿ ಬಂಧಿಸಿ ಆಕೆಗೆ ಶಿಕ್ಷಣವನ್ನು ಪಡೆಯುವ ಹಕ್ಕನ್ನು ನಿರಾಕರಿಸುತ್ತಾ ಬಂದಿರುವ ಸಾಮಾಜಿಕ ಮೌಲ್ಯಗಳು ಆಕೆಯನ್ನು ಅಜ್ಞಾನದ ಅಂಧಕಾರದಲ್ಲಿ ನೂಕಲು ಬಹು ಆಸಕ್ತಿಯನ್ನು ತೋರುವ ಹೆಣ್ಣಿಗೆ ಶಿಕ್ಷಣ ವರ್ಜ್ಯ ಎಂಬ ಮಿಥ್ಯೆಯನ್ನು ಸೃಷ್ಟಿಸಿ ಆ

ಮಿಥ್ಯೆಗೆ ಧಾರ್ಮಿಕ ಬೆಂಬಲವೂ ಇದೆಯೆಂಬ ಪ್ರಚಾರವನ್ನು ನೀಡಿ ಪುರುಷ ಪ್ರಧಾನ ವ್ಯಕ್ತಿಗಳು ಹೆಣ್ಣನ್ನು ಬಹುಕಾಲ ಜ್ಞಾನಾರ್ಜನೆಯ ಪ್ರಕ್ರಿಯಿಂದಲೇ ದೂರವಿಟ್ಟಿದ್ದರು. ಹೆಣ್ಣಾದವಳು ಬಾಲ್ಯದಲ್ಲಿ ತಂದೆಯ ಪೋಷಣೆಯಲ್ಲೂ, ವಯಸ್ಕಳಾದ ಮೇಲೆ ಪತಿಯ ಆಸರೆಯಲ್ಲೂ, ವೃದ್ಧಾಪ್ಯದಲ್ಲಿ ಮಗನ ಪೋಷಣೆಯಲ್ಲೂ ಇರಬೇಕೆಂದು ಪ್ರತಿಪಾದಿಸಿ 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬ ಮನುವಿನ ಸ್ತ್ರೀ ಸ್ವಾತಂತ್ರ್ಯ ವಿರೋಧಿ ಮೌಲ್ಯಗಳು ಇಂದಿಗೂ ಸಂಪೂರ್ಣವಾಗಿ ನಶಿಸಿ ಹೋಗಿಲ್ಲವೆಂಬುದು ಸಮಕಾಲೀನ ಸಮಾಜದ ವಿಪರ್ಯಾಸಗಳಲ್ಲಿ ಒಂದು. ಹೆಣ್ಣು ಶಿಶುವಿನ ಜನನವನ್ನೇ ಒಂದು ಶಾಪವೆಂದು ತಿಳಿಸಿದ್ದ ಪೋಷಕರು, ಅವಳಿಗೆ ಜ್ಞಾನವನ್ನು ಒದಗಿಸಲು ಯಾವ ಆಸಕ್ತಿಯನ್ನು ತೋರಿರಲಿಲ್ಲ. ಸಣ್ಣ ವಯಸ್ಸಿನಲ್ಲೇ ಹೆಣ್ಣು ಮಕ್ಕಳನ್ನು ವಿವಾಹವೆಂಬ ಬಂಧನಕ್ಕೆ ಕಟ್ಟಿ, ಅವರನ್ನು ಸಾಂಸಾರಿಕ ಬಂಧನಗಳಲ್ಲಿ ಕಟ್ಟಿ ಹಾಕುತ್ತಿದ್ದರು ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ನೀಡಿದರೂ ಅದು ಅವರು ಮನೆಯಲ್ಲಿ ನೆರವೇರಿಸುವಂಥ ಕೆಲಸಗಳಿಗೆ ಸಂಬಂಧಿಸಿದ್ದಾಗಿತ್ತೇ ಹೊರತು ಅವರಿಗೆ ಪ್ರಾಪಂಚಿಕ ಜ್ಞಾನವನ್ನು ನೀಡಲಾಗಲಿ, ಅವರ ಬದುಕಿನ ಮೇಲೆ ಅವರು ನಿಯಂತ್ರಣವನ್ನು ಸಾಧಿಸಲಾಗಲಿ ಅವರಿಗೆ ಆ ಶಿಕ್ಷಣ ನೆರವಾಗುತ್ತಿರಲಿಲ್ಲ. ಹೆಣ್ಣಿನ ಪ್ರಪಂಚ ಮನೆಗೇ ಮೀಸಲು, ಅವಳ ಜೀವನದ ಪ್ರಮುಖ ಗುರಿಗಳೆಂದರೆ ಹೆಂಡತಿಯಾಗಿ, ತಾಯಿಯಾಗಿ ತನ್ನ ಕರ್ತವ್ಯಗಳನ್ನು ನೆರವೇರಿಸುವುದು ಎಂಬ ನಂಬಿಕೆ ಇಂದಿಗೂ ಜೀವಂತವಾಗಿರುವಾಗ ಶತಮಾನಗಳ ಹಿಂದೆ ಇನ್ನೆಷ್ಟು ಪ್ರಬಲವಾಗಿತ್ತು ಎಂಬುದನ್ನು ನಾವು ಊಹಿಸಬಹುದು.

'ಚಂದ್ರಹಾಸನ ಕಥೆ'ಯಲ್ಲಿ ಆದರ್ಶ ಗೃಹಿಣಿಯ ಮನದಾಳದ ನೋವು ನಲಿವು ಈ ಕಾವ್ಯದ ತುಂಬ ಚಿತ್ರಿತಗೊಂಡಿದೆ. ಬ್ರಹ್ಮಕೊರವಂಜಿ ಹಾಡಿನಲ್ಲಿ ಸ್ತ್ರೀ ಸಹಜ ಕೋಮಲ ಮನೋಧರ್ಮ ಮತ್ತು ದೈವಿಕ ಲೀಲೆಗಳನ್ನು ಆಶುಕವಿಯ ರೀತಿಯಲ್ಲಿ ಚಿತ್ರಣ ಮಾಡಿರುವುದನ್ನು ಕಾಣಬಹುದು. ಉದ್ದಾಳಿಕನ ಕಥೆಯಲ್ಲಿ ಬರುವ ಚಂದ್ರಾವತಿ ಗರ್ಭಿಣಿಯದಾಗ ಮಾಡುವ ವರ್ಣನೆ ತುಂಬ ಸಹಜತೆಯಿಂದ ಮೂಡಿ ಬಂದಿದೆ 'ತಿಂಗಳು ತುಂಬಿತು ಕಲಗಳು ಬಳೆಬಟ್ಟು ಸರ್ವಾಗ ಬಡವಾಗಿ ತೋರಿದವು ಹೊಂಬಣ್ಣವೇರಿತು ಹೊಳೆವ ದೇವಾಂಗವು ತುಂಬಿದ ಕೊಳ ಸೂಸುವಂತೆ' ಎಂಬ ಭಾಗವನ್ನು ಗಮನಿಸಿದರೆ ಹೆಣ್ಣಿನಿಂದ ಮಾತ್ರ ಈ ರೀತಿಯ ಚಿತ್ರ ನೀಡಲು ಸಾಧ್ಯ ಎಂಬುದು ತಿಳಿಯುತ್ತದೆ.

ಜನಪದದಲ್ಲಿ ಬರುವ ಬಂಜೆತನ ಮತ್ತು ಹೆಣ್ಣು ಸೊಸೆಯಾಗಿ ಅತ್ತೆ ಮನೆಗೆ ಹೋದಾಗ ಅಲ್ಲಿ ಆಕೆ ಎಲ್ಲರಿಗೂ ತಲೆಬಾಗಿ ನಡೆದುಕೊಳ್ಳುವ ಸ್ಥಿತಿಗತಿಯನ್ನು ಗಿರಿಯಮ್ಮನ ಹಾಡುಗಳಲ್ಲಿಯೂ ಗುರುತಿಸಬಹುದು. 'ಮಡದಿ ಜಾನಕಿದೇವಿ ಮಕ್ಕಳಿಲ್ಲೆನುತಲಿ ಮನದಿ ಚಿಂತಿಲಿ ಸೊರಗಿದಳು ಕಂದರಿಲ್ಲದ ಬಾಳು ದುಡುಕೆನುತಲಿ ಕಂಗಳ ಜಲವ ತುಂಬಿದಳು ಅದೇ ರೀತಿಯಾಗಿ ಸಮಾಜದಲ್ಲಿ ಅನೇಕ ಜನ ಸ್ತ್ರೀಯರು ವ್ಯಥೆ ಪಡುತ್ತಿರುವುದನ್ನು ಕಾಣಬಹುದು.

ಸರ್ವ ಲಕ್ಷಣವುಳ್ಳ ಸರಸಿಜನೇತ್ರೆಯ
ಒಬ್ಬಳೆ ರತಿ ನಮ್ಮ ತಂಗಿ

ಹಬ್ಬ ಹುಣ್ಣಿಮೆಗೆ ಕಳಿಸದೆ

ನಮ್ಮನೆಗೆ ನಿರ್ಬಧ ಮಾಡುವಿರೆಂದ[೨]

ಹರಿದಾಸರು ಮಧ್ವ ಮತದ ಸಿದ್ಧಾಂತದ ಪ್ರತಿಪಾದನೆಗೆ ಕೀರ್ತನೆಗಳನ್ನು ಬಳಸಿಕೊಂಡಿರುವಂತೆ ಭೀಮವ್ವನೂ ಹರಿಸರ್ವೋತ್ತಮತ್ವ ಮೊದಲಾದ ವಿಚಾರಗಳನ್ನು ತನ್ನ ಕೀರ್ತನೆಗಳಲ್ಲಿ ಸರಳವಾಗಿ ನಿರೂಪಿಸಿದ್ದಾಳೆ. ಈಕೆ ತನಗಿಂತ ಪೂರ್ವದಲ್ಲಿದ್ದ ಮಾಧ್ವ ಗುರುಪರಂಪರೆಯನ್ನು ಭಕ್ತಿಯಿಂದ ಸ್ಮರಿಸಿದ್ದಾಳೆ. ಇದಕ್ಕೆ ಅಕ್ಷೋಭ್ಯತೀರ್ಥ, ವಾದಿರಾಜ, ಮಧ್ವರಾಜ, ರಾಘವೇಂದ್ರ ಮೊದಲಾದವರ ಮೇಲೆ ಹಾಡುಗಳು ನಿದರ್ಶನಗಳಾಗಿವೆ. ಪ್ರಾಣದೇವರಲ್ಲಿಯು ಈಕೆಗೆ ಅಪಾರ ಭಕ್ತಿ ಇರುವುದು ಹಾಡಿನಲ್ಲಿ ವ್ಯಕ್ತವಾಗಿದೆ.

ಭೀಮವ್ವ ತನ್ನ ಕೃತಿಗಳಲ್ಲಿ ಧಾರ್ಮಿಕ, ಸಂಪ್ರದಾಯಿಕ ಬದುಕಿನ ಊಟೋಪಚಾರಗಳಿಗೆ ಮತ್ತು ವಿಶೇಷವಾಗಿ ಹೆಣ್ಣು ಮಕ್ಕಳ ಹಬ್ಬ, ಹುಣ್ಣಿಮೆ ವಿವಿಧ ವ್ರತಾಚರಣೆಯು ಅವರ ಬದುಕಿನ ಎಲ್ಲ ಸಂದರ್ಭಗಳಿಗೆ ತಕ್ಕಂತೆ ಹಾಡುಗಳನ್ನು ರಚಿಸಿ ಅವು ಇಂದಿಗೂ ಬಳ್ಳಾರಿ ಜಿಲ್ಲೆಯ ಮನೆಗಳಲ್ಲಿ ಹೆಣ್ಣು ಮಕ್ಕಳ ಬಾಯಲ್ಲಿ ನಲಿದಾಡುತ್ತಿವೆ. ಮೈ ನೆರೆಯುವ ಭೂಮ ಇಡುವ, ಅಪೋಶನ ಹಾಕುವ, ಹಸೆಗೆ ಕರೆಯುವ, ಆರತಿ ಮಾಡುವ, ಬಾಗಿಲು ಕಟ್ಟುವ, ನಿಷೇಕ ಮುಂತಾದ ಮದುವೆಯ ಸಂದರ್ಭದ ಹಾಡುಗಳನ್ನು ಇಂದಿಗೂ ಸಂಪ್ರದಾಯದ ಮನೆಗಳಲ್ಲಿ ಬಳಕೆಯಾಗುತ್ತಿವೆ. ಗರ್ಭಿಣಿಯರ ಸೀಮಂತ, ಹೂ ಮೂಡಿಸುವ ಉಡಿ ತುಂಬುವ, ಆಶೀರ್ವಾದದ ಜೋಗುಳ, ಲಾಲಿಪದ, ದೇವರಲ್ಲಿ ಹೂವ ಬೇಡುವ ಹಾಡುಗಳು ಇವೆ. ಇವಲ್ಲದೇ ಮಧ್ವರ ಮನೆಯ ಹೆಣ್ಣು ಮಕ್ಕಳು ಆಚರಿಸುತ್ತಿದ್ದ ವ್ರತಗಳನ್ನು ಕುರಿತು ಭೀಮವ್ವ ಅನೇಕ ಹಾಡುಗಳನ್ನು ರಚಿಸಿದ್ದು ಮಗಳಗೌರಿ ವ್ರತದ ಹಾಡು, ಸ್ತುತಿ ಮಣಿ ಮಾಲಿಕ, ಬುಧ ಬೃಹಸ್ಪತಿ ಹಾಡು, ಶುಕ್ರವಾರದ ಹಾಡು, ಶನಿವಾರದ ಹಾಡು, ಲಕ್ಷ್ಮೀ ವ್ರತದ ಹಾಡು, ದಾನ ವ್ರತದ ಹಾಡು ಮುಂತಾದವು ಮಹಿಳಾ ಸಮುದಾಯದಲ್ಲಿ ಬಳಕೆಯಲ್ಲಿವೆ. ವ್ರತ ಹಿಡಿದವರು ಅಪೇಕ್ಷಿಸುವುದು ಪ್ರಾರ್ಥಿಸುವುದು ಗಂಡುಸಂತಾನ ಮುತ್ತೈದೆ ಭಾಗ್ಯ ಪ್ರಾಪ್ತಿಗೆ ಗಂಡು ಹುಟ್ಟಿದಾಗ ಸಂತೋಷ ವ್ಯಕ್ತಪಡಿಸಲು ಸಕ್ಕರೆ ಹಂಚುವುದುಂಟು ವ್ರತಚರಣೆ ಹೆಂಗಸರಿಂದಾದರೆ ಇವರ ಫಲಾನುಭವಿಗಳು ಪುರುಷರು, ಅವರ ಒಳಿತಿಗಾಗಿ ಹುಟ್ಟಿಕೊಂಡಂತವು. ಈ ರೀತಿಯ ಸಂಪ್ರದಾಯ ಹಾಡುಗಳು ಆಯಾ ಸಂಪ್ರದಾಯದ ವಿವರಗಳನ್ನೊಳಗೊಂಡಿರುತ್ತವೆ. ನಿದರ್ಶನಕ್ಕೆ ಉಡಿ ತುಂಬುವ ಶಾಸ್ತ್ರದ ಹಾಡಿನಲ್ಲಿ ಗರ್ಭಿಣಿಗೆ ಕಡಲೆ, ಕೊಬ್ಬರಿ ಬಟ್ಟಲು ನಿಂಬೆ, ಬಾಳೆ, ದಾಳಿಂಬೆ, ಉತ್ತತ್ತಿ, ದ್ರಾಕ್ಷಿ, ಕಿತ್ತಳೆ, ಸೀತಾಫಲ, ಅಕ್ಕಿ, ಅಂಜೂರಗಳನ್ನು ಮಡಿಲು ತುಂಬಿದ ವರ್ಣನೆಯಿದೆ. ಹೀಗೆ ಸಂಪ್ರದಾಯಸ್ಥ ವೈದಿಕ ಮನೆಗಳಲ್ಲಿ ಇಂದಿಗೂ ಆಯಾ ಸಂದರ್ಭದಲ್ಲಿ ಭೀಮವ್ವನ ಹಾಡುಗಳನ್ನು ಹೇಳುತ್ತಾರೆ.

ಭೀಮವ್ವನ ಕೃತಿಗಳಲ್ಲಿ ವಿಶೇಷವಾಗಿ ಆಭರಣ ಮತ್ತು ಅಡುಗೆಯ ವರ್ಣನೆಯ್ನು ಗಮನಿಸಬಹುದು. ಇವು ಹೆಂಗಳೆಯರ ಅನುಭವಕ್ಕೆ ಸುಲಭವಾಗಿ ದೊರಕುವ ವಸ್ತುಗಳಾದುದರಿಂದ ತಮ್ಮ ಕೃತಿಗಳಲ್ಲಿ

ಸ್ಥಾನಕಲ್ಪಿಸಿದ್ದಾರೆ. ಭೀಮವ್ವನಿಗೆ ಆಭರಣಗಳ ವರ್ಣನೆಯೆಂದರೆ ಸಂಭ್ರಮ ಅದಕ್ಕಾಗಿ ತನ್ನ ಕೃತಿಯಲ್ಲಿ ಈ ಅವಕಾಶವನ್ನು ಬಳಸಿಕೊಂಡಿದ್ದಾಳೆ. "ಆಲದೆಲೆಯ ಮೇಲೆ ಮಲಗಿದಾದಿ ಕೇಶವನೆ' ಹಾಡಿನಲ್ಲಿ ಕೃಷ್ಣನನ್ನು ವರ್ಣಿಸುವಾಗ ಆಭರಣಗಳ ಸಾಲು ಸಾಲನ್ನೇ ಕಾಣಬಹುದು. 'ಆರತಿಯನು ಬೆಳಗಬನ್ನಿರೆ' ಎಂಬ ಹಾಡಿನಲ್ಲಿ ಆ ಕಾಲದಲ್ಲಿ ಪ್ರಚಲಿತದಲ್ಲಿದ್ದ ಆಭರಣಗಳ ಯಾದಿಯೇ ದೊರೆಯುತ್ತದೆ. ಹಾಗೂ ಮಂಗಳಗೌರಿ ಹಾಡಿನಲ್ಲಿ ವಿವಿಧ ಬಗೆಯ ಅಡಿಗೆಗಳನ್ನು ಹೆಸರಿಸಲಾಗಿದೆ. ಭೀಮವ್ವನ ಸಾಹಿತ್ಯದಲ್ಲಿ ನೂರಕ್ಕೂ ಹೆಚ್ಚು ಅಡುಗೆಗಳು ಪ್ರಸ್ತಾಪವಾಗಿದೆ. ಇವುಗಳಿಗೆ ಸಾಂಸ್ಕೃತಿಕವಾದ ಮಹತ್ವವಿದೆ. ಹಾಗೆಯೇ ಭೀಮವ್ವ ಆಭರಣ, ಅಡಿಗೆಗಳನ್ನು ತನ್ನ ಕೃತಿಯಲ್ಲಿ ವಸ್ತುವಾಗಿ ಸ್ವೀಕರಿಸಿದಂತೆ ಉಡುಗೆಗಳ ಬಗೆಗೂ ಇದೇ ಕುತೂಹಲ ತೋರಿದ್ದಾಳೆ. ಜಲಕ್ರೀಡೆ ಹಾಡಿನಲ್ಲಿ ಬಗೆ ಬಗೆಯ ಸೀರೆಗಳ ಉಲ್ಲೇಖವಿದೆ. ಇಲ್ಲಿ ಗೋಪಿಕ ಸ್ತ್ರೀಯರ ಸೀರೆಯನ್ನು ಕೃಷ್ಣ ಕದ್ದೊಯ್ದಾಗ ಸೀರೆ ಕಳೆದುಕೊಂಡವರು 'ಮಾವ ತೆಗೆದುಕೊಟ್ಟ ಸೀರೆ' ಅತ್ತೆ ಉಟ್ಟುಕೊಟ್ಟದ ಸೀರೆ' 'ಮದುವೆಯಲ್ಲಿ ತಂದಿದ್ದ ಸೀರೆ' ಎಂದು ನೆನೆದು ದುಃಖಿಸುವರು. ಇಲ್ಲಿ ಹೆಣ್ಣಿಗೆ ಸೀರೆಯೊಂದಿಗಿರುವ ಭಾವನಾತ್ಮಕ ಸಂಬಂಧ ಬಾಂಧವ್ಯಕ್ಕೆ ಮಹತ್ವ ಕೊಟ್ಟಿರುವ ಮೊದಲಾದ ಅಂಶಗಳು ಗಮನ ಸೆಳೆಯುತ್ತವೆ.

ಭೀಮವ್ವನ ಹಾಡುಗಳಲ್ಲಿ ಕೃಷ್ಣ ಚರಿತೆಯ ಕೆಲವು ಘಟನೆಗಳು ಅಲ್ಲಲ್ಲಿ ಮೂಡಿ ಬಂದಿವೆ. ಕೃಷ್ಣ ಮಥುರೆಗೆ ತೆರಳಿದ್ದನ್ನು ವರ್ಣಿಸುವ ಒಂದು ಹಾಡಿನಲ್ಲಿ ಆತನ ಅಗಲಿಕೆಯಿಂದ ಗೋಪಿಯರಲ್ಲಿ ಮೂಡಿದ ವಿರಹಭಾವನೆ ಹಾಗೂ ಅವರು ಪರಸ್ಪರ ಮಾತನಾಡಿಕೊಳ್ಳುವಾಗ

> ಅತ್ತೆ ಮಾವಂದಿರೀ ವರ್ತಮಾನನ ಕೇಳಿ
> ನೆತ್ತಿಮ್ಯಾಲ್ಹೊಡದ್ಹೊರಗ್ಹಾಕೋರೊ[೪]

ಎಂದಿದ್ದು ಇಲ್ಲಿ ಅತ್ತೆ ಸೊಸೆಯರ ಸಂಬಂಧ ಅತ್ತೆಯಾದ ಕಾರಣ ಸಿಕ್ಕಿದ ಸ್ಥಾನಮಾನಗಳ ಸ್ಥಾನ ಬಲದಿಂದ ಸೊಸೆಯನ್ನು ಹಿಂಸಿಸುತ್ತಿದ್ದುದು ವ್ಯಕ್ತವಾಗಿದೆ. ಭೀಮವ್ವ, ಪುತ್ರ ಮತ್ತು ಪುತ್ರಿ ಇಬ್ಬರನ್ನೂ ಪಡೆಯುವಂತೆ ಶುಭ ಕೋರುವುದು ಸ್ತ್ರೀ ಸಮಾನತೆಯ ಚಿಂತನೆಯ ಎಳೆಗಳು ಗೋಚರಿಸುತ್ತದೆ. ಆಶೀರ್ವಾದದ ಹಾಡಿನಲ್ಲಿ ದ್ರೌಪದಿಯು 'ಅತಿ ಹರುಷದಿಂದ ಗಂಡು ಸುತರನು ಪಡೆದು ನೀ ವೃದ್ಧಿನಾಳೆನುತ' ಹರಿಸಿದರೆ ದೇವಕಿ, ಅಕ್ಕರಿಂದ್ಹೆಣ್ಣು ಮಕ್ಕಳ ಪಡೆದು ಪಲ್ಲಕ್ಕಿ ನೇರೆನುತ' ಶುಭ ಕೋರುತ್ತಾಳೆ. ಭೀಮವ್ವ ರಚಿಸಿದ ಸಣ್ಣ ಹಾಡುಗಳಲ್ಲಿ ಲಕ್ಷ್ಮೀದೇವಿ ಹಾಡು ಶನಿವಾರದ ಹಾಡು ಸ್ತುತಿಮಣಿಮಾಲಿಕೆ ಜಲಕ್ರೀಡೆ ಹಾಡು ನಿಡಿದಾಗಿವೆ. ಭೀಮವ್ವನ ದೀರ್ಘಹಾಡುಗಳು ಸಿದ್ಧವಸ್ತುವನ್ನು ಆಧರಿಸಿವೆ. ಮಹಾಭಾರತದ ಅರಣ್ಯಪರ್ವದಲ್ಲಿ ಬರುವ ಪ್ರಸಿದ್ಧ ನಳೋಪಾಖ್ಯಾನವನ್ನಿಟ್ಟುಕೊಂಡು ಈಕೆ ನಳಚರಿತ್ರೆ ರಚಿಸಿದ್ದಾಳೆ. ಭೀಮವ್ವನಿಗಿಂತ ಪೂರ್ವದಲ್ಲಿ ಕನಕದಾಸರ ನಳಚರಿತ್ರೆ ಪ್ರಸಿದ್ಧಿ ಪಡೆದಿತ್ತು ಭೀಮವ್ವ ಕನಕದಾಸರಿಗಿಂತ ಸಂಕ್ಷಿಪ್ತವಾಗಿ ಈ ಕೃತಿಯನ್ನು ರಚಿಸಿದ್ದಾಳೆ.

ಕಂತುಪಿತನ ಕರುಣದಲಿ ದಮ
ಯಂತಿ ಬಂದಾಪತ್ತು ಕಳೆದು
ಸಂತೋಷದಿ ಸಾಮ್ರಾಜ್ಯವಾಳಿದ
ಕಥೆಯ ಪೇಳುವೆನು[೧೪]

ಎಂದು ಈ ಕೃತಿಯನ್ನು ನಳಚರಿತ್ರೆಯಾಗಿ ನೋಡದೆ ದಮಯಂತಿ ಕಥೆಯಾಗಿ ಪರಿಗಣಿಸಿರುವುದು ಕವಯಿತ್ರಿಯ ಸ್ತ್ರೀ ಸಂವೇದನೆಯನ್ನು ಗುರುತಿಸಬಹುದು. ಹರಿಯ ಕರುಣದಿಂದ ದಮಯಂತಿಯ ಆಪತ್ತುಗಳನ್ನು ನಿವಾರಿಸಿಕೊಂಡಿರುವುದು ವೇದ್ಯವಾಗುತ್ತದೆ. ಕಥಾಪ್ರಧಾನ ಕೃತಿಯಾಗಿರುವ ನಳ ಚರಿತ್ರೆಯಲ್ಲಿ ಶೃಂಗಾರ, ಕರುಣ, ಭಕ್ತಿ, ವೀರರಸಗಳ ಚಿತ್ರಣ ಮನೋಹರವಾಗಿ ಮೂಡಿ ಬಂದಿದೆ. ಸಂದರ್ಭಾನುಸಾರವಾಗಿ ಅಲಂಕಾರ, ಉಪಮೆ ಕವಿ ಸಮಯದಿಂದ ತುಂಬ ಚಮತ್ಕಾರದಿಂದ ಕಾವ್ಯ ಹೆಣೆದಿದ್ದಾಳೆ. ಹೆಳವನಕಟ್ಟೆ ಗಿರಿಯಮ್ಮ ಹಾಗೂ ಹರಪನಹಳ್ಳಿ ಭೀಮವ್ವನ ಕೃತಿಗಳಲ್ಲಿ ಮಹಿಳೆಯಾಗಿ ಆ ಕಾಲದ ಸ್ತ್ರೀ ಸಂವೇದನೆಯ ಹಲವು ವಿವರಗಳನ್ನು ಯಥಾವತ್ತಾಗಿ ಹೇಳಿದ್ದಾರೆ. ಈ ಕಾಲದ ಸಂಪ್ರದಾಯಸ್ಥ ಮಹಿಳೆಯರ ದೃಷ್ಟಿ ಧೋರಣೆಗಳು ಅದರಿಂದ ತಿಳಿದುಬರುತ್ತವೆ.

**ಅಡಿ ಟಿಪ್ಪಣಿಗಳು**

೧. ಆರ್.ಸಿ.ಹಿರೇಮಠ(ಸಂ), **ಶಿವಶರಣೆಯರ ವಚನಗಳು,** ವಚನ.೧೯೦, ಪು.೩೬೯

೨. ಅದೇ, ವಚನ.೧೫೨, ಪು.೩೬೪

೩. ಅದೇ, ವಚನ.೧೧೦, ಪು.೪೪

೪. ಎನ್.ಕೆ.ರಾಮಶೇಷನ್, **ಹರಿದಾಸ ಆಂದೋಲನ,** ೧೯೯೧, ಪು.೩೧೬

೫. ಲೀಲಾವತಿ ಎಸ್.ರಾವ್(ಸಂ), **ಹೆಳವನಕಟ್ಟೆ ಗಿರಿಯಮ್ಮನ ಕೀರ್ತನೆಗಳು,** ೧೯೯೧, ಪು.೩೧೬

೬. ಅದೇ, ಪು.೫೪-೫೫

೭. ಅದೇ, ಪು.೪೬

೮. ಅದೇ, ಪು.೪೭

೯. ಅದೇ, ಪು.೧೭೯

೧೦. ಅದೇ, ಪು.೭೦

೧೧. ಅದೇ, ಪು.೫೮

೧೨. ಅದೇ, ಪು.೧೩೦

೧೩. ನಾಗರತ್ನ ಟಿ.ಎನ್., ಅಕ್ಕಮಹಾದೇವಿ(ಸಂ), **ಹರಪನಹಳ್ಳಿ ಭೀಮವ್ವನ ಕೀರ್ತನೆಗಳು,** ೨೦೦೩, ಪು.೧೪೬

೧೪. ಅದೇ, ಪು.೩೩೦

## ಅಧ್ಯಾಯ ೮

# ಕನ್ನಡ ಕವಿತ್ರಿಯರಲ್ಲಿ ಗಿರಿಯಮ್ಮನ ಸ್ಥಾನ

೮

# ಕನ್ನಡ ಕವಿತ್ರಿಯರಲ್ಲಿ ಗಿರಿಯಮ್ಮನ ಸ್ಥಾನ

ಕನ್ನಡ ಸಾಹಿತ್ಯಚರಿತ್ರೆಯನ್ನು ಪರಿಶೀಲಿಸಿದಾಗ ಮಹಿಳೆಯರಿಂದ ರಚಿತವಾದ ಸಾಹಿತ್ಯದ ಕೊರತೆಯೂ ಎದ್ದು ಕಾಣುವಂತಿದೆ. ವೇದಗಳ ಕಾಲದಲ್ಲಿ ಸಂಸ್ಕೃತದಲ್ಲಿ ಮೈತ್ರೇಯಿ, ಗಾರ್ಗಿ, ಲೋಪಾಮುದ್ರೆಯರಂಥ ಕೆಲವರು ಮಾತ್ರ ಕಾವ್ಯವನ್ನು ರಚಿಸಿದರು. ಕಥೆ, ಕಾದಂಬರಿ, ಕಾವ್ಯ ಬರೆಯುವುದು, ಹಾಡುವುದು ಪುರುಷರಿಗಷ್ಟೇ ಮೀಸಲಾದುದಲ್ಲ ಎಂದು ಮಹಿಳೆಯರಿಗೂ ಆಸಕ್ತಿ ಇರುತ್ತದೆ. ಕನ್ನಡಿಗರ ಸೊತ್ತಾದ ಜನಪದ ಸಾಹಿತ್ಯವೇ ಇದಕ್ಕೆ ನಿದರ್ಶನ, ಅತ್ಯಂತ ವಿಪುಲವೂ ವೈವಿಧ್ಯ ಪೂರ್ಣವೂ ಆಗಿರುವ ಜನಪದ ಸಾಹಿತ್ಯ ನಿರ್ಮಿಸುವಲ್ಲಿ ಮಹಿಳೆಯರ ಪಾಲೂ ಸಾಕಷ್ಟು ದೊಡ್ಡದಿದೆ ಎಂಬುದಲ್ಲಿ ಸಂದೇಹವಿಲ್ಲ ಆದರೆ ಲಿಖಿತ ಗ್ರಂಥ ಸಾಹಿತ್ಯ ಹಳೆಗನ್ನಡದಲ್ಲಿ ಅಷ್ಟು ವಿಪುಲವಾಗಿ ದೊರಕುವುದಿಲ್ಲ ಪುರುಷರ ಸಂಖ್ಯೆಗೆ ಹೋಲಿಸಿದರೆ ಮಹಿಳೆಯರ ಸಂಖ್ಯೆ ಬಹಳಷ್ಟು ಕಡಿಮೆಯಿದೆ. ಇದಕ್ಕೆ ಕಾರಣ ಆಗ ಮಹಿಳೆಯರಿಗೆ ಶಿಕ್ಷಣ ಸೌಲಭ್ಯವಿರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಮನೆಯ ನಾಲ್ಕು ಗೋಡೆಯ ಒಳಗೇ ಅವರ ಜೀವನ ಪ್ರಪಂಚ ಸೀಮಿತವಾಗಿತ್ತು. ಚರಿತ್ರೆಯಲ್ಲಿ ಕೆಲವು ಮಹಿಳೆಯರು ರಾಣಿಯರಾಗಿದ್ದಾರೆ ಕವಿ ಪಂಡಿತರಿಗೆ ಆಶ್ರಯ ನೀಡಿದ್ದಾರೆ. ಇನ್ನೂ ಬಹುಪಾಲು ಮಹಿಳೆಯರು ಮಕ್ಕಳಿಗೆ ಉತ್ತಮ ಸಂಸ್ಕಾರ, ಶಿಕ್ಷಣ ನೀಡಿ ನಾಡಿನ ಶೂರ ಸತ್ಪ್ರಜೆಗಳನ್ನಾಗಿ ಮಾಡಿದ್ದಾರೆ. ಹೀಗೆ ನಮ್ಮ ನಾಡಿನ ಚರಿತ್ರೆ ಬರೀ ಪುರುಷರ ಇತಿಹಾಸವಾಗಿದೆ. ಇಲ್ಲಿ ಸಾಹಿತ್ಯ ಎನ್ನುವುದೊಂದು ಮನಸ್ಸಿನಿಂದ ಸೃಷ್ಟಿಯಾದುದಾಗಿದೆ. ಇದಕ್ಕೆ ಹೆಣ್ಣು ಗಂಡೆಂಬ ಭೇದವಿಲ್ಲ. ಎಲ್ಲೆಲ್ಲಿ ಸಂವೇದನೆ ಹಾಗೂ ಬೌದ್ಧಿಕತೆ ಇರುತ್ತದೆಯೋ ಅಲ್ಲೆಲ್ಲ ಸಾಹಿತ್ಯ ರಚನೆಯ ಕಾರ್ಯ ನಡೆದಿದೆ. ೧೧ನೆಯ ಶತಮಾನದಲ್ಲಿ ಇದ್ದಳೆಂದು ನಂಬಲಾಗಿರುವ ಕಂತಿ ಮತ್ತು ೧೨ನೆಯ ಶತಮಾನದ ವಚನಕಾರ್ತಿಯರೇ ಇದಕ್ಕೆ ನಿದರ್ಶನ.

'ಕಂತಿ' ಎಂಬ ಕನ್ನಡದ ಮೊದಲ ಕವಯಿತ್ರಿ ದೋರರಾಯನ ಅಸ್ಥಾನ ಪಂಡಿತೆಯಾಗಿದ್ದಳು. ೧೨ನೇ ಶತಮಾನದ ಹೊಯ್ಸಳ ವೀರಬಲ್ಲಾಳನ ಆಸ್ಥಾನದ ಕವಿ ಅಭಿನವ ಪಂಪ ಅಥವಾ ನಾಗಚಂದ್ರನ ಸಮಕಾಲೀನಳು ಎಂಬ ಊಹೆಗಳಿವೆ. ಉದಾಹರಣೆ 'ದನಮಂ ಕಡಿ ಕಡಿದು ಬಸದಿಗೆಸೆಯುತಿರ್ದರ್' ಎಂಬ ಕಂದ ಪದ್ಯದ ಕೊನೆಯ ಸಾಲನ್ನು ನಾಗಚಂದ್ರನು ಹೇಳಿದರೆ ಅವಳು 'ನಳನಳಿಸಿ ಬೆಳೆದು ತೊಳಗುವ ಸುರುಚಿರ ಸಚ್ಚಂದನಮಂ ಕಡಿ ಕಡಿದು ಬಸದಿಗೆಸೆಯುತಿರ್ದರ್' ಎಂದು ಪದ ಪೂರ್ತಿ

ಮಾಡಿದಳಂತೆ ಆದರೆ ನಾಗಚಂದ್ರನೆಂಬ ಕವಿಗೆ ಸಮಕಾಲೀನಳಾಗಿ 'ಕಂತಿ' ಎಂಬುವವಳಿದ್ದಳು ಎಂಬುದಕ್ಕೆ ಸಾಕಷ್ಟು ಆಧಾರಗಳಿಲ್ಲ. ಹಾಗೂ 'ಕಂತಿ ಹಂಪನ ಸಮಸ್ಯೆಗಳು' ಎಂಬ ಕೃತಿ ದೊರೆತಿದ್ದು ಇದನ್ನು ಕಂತಿಯೇ ರಚಿಸಿರಬೇಕೆಂದು ನಂಬಲಾಗಿದೆ. ಕಾವ್ಯಸ್ಪರ್ಧೆಯಲ್ಲಿ ಮೊದಲನೆಯವಳಾಗಿದ್ದು 'ಅಭಿನವ ವಾಗ್ದೇವಿ' ಎಂಬ ಬಿರುದನ್ನು ಪಡೆದಿರಬೇಕಾದರೆ ಕಂತಿಯನ್ನೇ ಕನ್ನಡದ ಮೊದಲ ಕವಿಯಿತ್ರಿ ಎಂದು ಗುರುತಿಸಬಹುದಾದರೂ ಯಾವುದೇ ಖಚಿತವಾದ ಆಧಾರಗಳಿಲ್ಲ. ಕಂತಿಯನ್ನು ಬಿಟ್ಟರೆ, ನಂತರ ಕನ್ನಡ ಸಾಹಿತ್ಯದಲ್ಲಿ ೧೨ನೆಯ ಶತಮಾನ ಬಹಳ ಪ್ರಮುಖ ಘಟ್ಟ. ಇಲ್ಲಿ ಕಂಡುಬರುವ ವಚನ ಸಾಹಿತ್ಯ ತನ್ನದೇ ಆದ ಸಂಸ್ಕೃತಿಯ ಮಹತ್ವವನ್ನು ಪಡೆದಿದೆ. ಧಾರ್ಮಿಕ ಮತ್ತು ಸಾಮಾಜಿಕ, ಬದಲಾವಣೆಗಳನ್ನು ಗುರಿಯಾಗಿಟ್ಟುಕೊಂಡು ತನ್ಮೂಲಕ ಸಾಹಿತ್ಯಕ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆ ಉಂಟಾಗಲು ಕಾರಣವಾಯಿತು.

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಹನ್ನೆರಡನೆಯ ಶತಮಾನವು ಮಹಿಳಾ ಸಾಹಿತ್ಯ ದೃಷ್ಟಿಯಿಂದ ಸುವರ್ಣಯುಗವೆಂದು ಹೇಳಬಹುದು. ಬಹುಕಾಲದವರೆಗೆ ಮಹಿಳಾ ಸಾಹಿತ್ಯವನ್ನೇ ಕಾಣದ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಚನಕಾರ್ತಿಯರು ಬೆಳೆದುಬಂದರು. ಇದಕ್ಕೆ ಕಾರಣಕರ್ತರು ಆ ಯುಗಪ್ರವರ್ತಕರಾದ ಬಸವಣ್ಣನವರು ರೂಪಿಸಿದ ಹೊಸ ಸಮಾಜದಲ್ಲಿ ಗಂಡು-ಹೆಣ್ಣು ಬಡವ-ಸಿರಿವಂತ, ಮೇಲುಜಾತಿ, ಕೀಳುಜಾತಿ ಎಂಬ ಭೇದ ಭಾವಕ್ಕೆ ಅವಕಾಶವಿರಲಿಲ್ಲ. ಲಿಂಗಧಾರಿಗಳೆಲ್ಲ ಒಂದೇ ಸಮಾನತೆ. ಸಮತಾಭಾವ, ಸದಾಚಾರ, ಸದ್ಭಕ್ತಿ, ಸತ್ಯ ಶುದ್ಧ ಕಾಯಕ ಮಾಡುವವರೆಲ್ಲ ಒಂದೇ ಎಂದು ದೇವರು ಒಬ್ಬ ಮಾನವಕುಲ ಒಂದು ಸ್ತ್ರೀ ಕೀಳಲ್ಲ. ಪುರುಷ ಮೇಲಲ್ಲ ಎಲ್ಲರೂ ಸಮಾನರು ಎಂಬ ಸರ್ವಸಮಾನತೆಯ ಭಾವವನ್ನು ಮೂಡಿಸಿದರು. ಹಾಗೆಯೇ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಪುರುಷ ಸಮಾನ ಸ್ಥಾನಮಾನಗಳನ್ನು ಸ್ತ್ರೀಯರಿಗೂ ಕಲ್ಪಿಸಿಕೊಟ್ಟರು. ಅನುಭವ ಮಂಟಪದಲ್ಲಿ ಶರಣರೊಂದಿಗೆ ಆಧ್ಯಾತ್ಮ ವಿಚಾರಗಳನ್ನು ಕುರಿತು ಚರ್ಚಿಸುವ ಅವಕಾಶವನ್ನು ಮಹಿಳೆಯರಿಗೆ ಒದಗಿಸಿಕೊಟ್ಟರು. ಒಂದು ಬಗೆಯ ಮುಕ್ತ ವಾತಾವರಣದ ನಿರ್ಮಾಣವಾಯಿತು.

ಮಹಿಳೆಯರು ಪತಿಯೇ ದೇವರೆಂದು ನಂಬಿದ ಕಾಲದಲ್ಲಿ ಅಕ್ಕಮಹಾದೇವಿ ದೇವರೆ ಪತಿ ಎಂದು ನಂಬಿದಳು. ಸಾಮಾಜಿಕ ಜೀವನದಲ್ಲಿ ಬಂದ ಅಡೆ-ತಡೆಗಳನ್ನು ದಿಟ್ಟತನದಿಂದ ಎದುರಿಸಿದಳು. ಶಿವಶರಣೆಯರ ವಚನಗಳಲ್ಲಿ ಅಕ್ಕಮಹಾದೇವಿಯ ವಚನಗಳು ಕಾವ್ಯಮಯವಾಗಿವೆ. ಅರ್ಥಪೂರ್ಣ, ಭಾವಪೂರ್ಣವಾಗಿವೆ. ಅನುಭಾವ, ಸಮತಾಭಾವಗಳ ಪ್ರತೀಕವಾಗಿವೆ. ಅಕ್ಕಮಹಾದೇವಿಯ ವಚನಗಳಲ್ಲಿ ಆಕೆಯ ದಿಟ್ಟನಿಲುವು, ವೈರಾಗ್ಯಭಾವ ಎದ್ದು ಕಾಣುತ್ತದೆ.

೧೨ನೇ ಶತಮಾನದ ವಚನ ಚಳುವಳಿಯಲ್ಲಿ ಹುಟ್ಟಿ ಬೆಳೆದ ಅಕ್ಕಮಹಾದೇವಿ ಕನ್ನಡದ ಮೊಟ್ಟ ಮೊದಲ ಕವಯಿತ್ರಿ. ಅಕ್ಕಮಹಾದೇವಿಯ ಬದುಕು ವಿಲಕ್ಷಣವಾದದ್ದು. ಆದ್ದರಿಂದಲೇ ಮದುವೆ ಎಂಬ

ಸಾಮಾಜಿಕ ವ್ಯವಸ್ಥೆಯನ್ನೆ ನಿರಾಕರಿಸಿ ಲೌಕಿಕವಾದ 'ಚನ್ನಮಲ್ಲಿಕಾರ್ಜುನದೇವ'ನನ್ನು ಪತಿಯೆಂದು ಭಾವಿಸಿ ತನ್ನ ಅಂತರಂಗದ ನಿವೇದನೆಗಳಿಗೆ, ತಾಕಲಾಟಗಳಿಗೆ, ಆಸೆಗಳಿಗೆ ವಚನರೂಪದಲ್ಲಿ ಅಭಿವ್ಯಕ್ತಿಯನ್ನು ನೀಡಿದ್ದಾಳೆ. ಅಕ್ಕಮಹಾದೇವಿ ವಚನಗಳಲ್ಲದೆ 'ಯೋಗಾಂಗ ತ್ರಿವಿಧಿ' ಎಂಬ ತ್ರಿಪದಿರೂಪದ ಕೃತಿಯನ್ನೂ ರಚಿಸಿದ್ದಾಳೆ. ಮಹಾಸಾಧಕಿಯಾದ ಆಕೆ ತನ್ನ ಸಾಧನೆಯ ಹಾದಿಯಲ್ಲಿ ಒದಗಿದ ಲೌಕಿಕ ಅನುಭವಗಳಿಗೆ ಪ್ರತಿಕ್ರಿಯಿಸಿದ್ದಾಳೆ. ತೀವ್ರವಾದ ಭಾವುಕತೆ, ಪ್ರಖರವಾದ ವೈಚಾರಿಕತೆ ಎರಡನ್ನೂ ಆಕೆಯ ವಚನಗಳಲ್ಲಿ ಕಾಣಬಹುದು.

'ಅಕ್ಕ ಕೇಳವ್ವ ನಾನೊಂದು ಕನಸು ಕಂಡೆ'
'ಸಾವಿಲ್ಲದ ಕೇಡಿಲ್ಲದ ಚೆಲುವಂಗಾನೊಲಿದೆನವ್ವ'
'ಕಿಚ್ಚಿಲ್ಲದ ಬೇಗೆಯಲಿ ಬೆಂದೆನವ್ವ'
'ಚಿಲಿಮಿಲಿ ಎಂದೋದುವ ಗಿಳಿಗಳಿರಾ ನೀವು ಕಾಣಿರೆ'[೧]

ಇತ್ಯಾದಿ ವಚನಗಳು ಭಾವಗೀತೆಗಳ ಸೊಬಗಿನಿಂದ ಕೂಡಿದರೆ, 'ವೇದಶಾಸ್ತ್ರ ಆಗಮ ಪುರಾಣಂಗಳೆಲ್ಲವೂ ಕೊಟ್ಟಣವ ಕುಟ್ಟಿದ ನುಚ್ಚು ತೌಡು ಕಾಣಿಬೊ' ಅನುಭಾವದ ಹಂಬಲದಲ್ಲಿ ಲೌಕಿಕದ ಎಲ್ಲಾ ಬಂಧಗಳನ್ನು ನಿರಾಕರಿಸಿ, ಆತ್ಮಸಕ್ಷಾತ್ಕಾರದ ಅಲೌಕಿಕ ಪತಿಗಾಗಿ ಪರಿತಪಿಸಿದ ಮಹಾದೇವಿಯಕ್ಕ ಮಹಾಯೋಗಿನಿ, 'ಹರನೇ ನೀನೆನಗೆ ಗಂಡನಾಗಬೇಕೆಂದು ಅನಂತಕಾಲ ತಪಿಸಿದ್ದೆ ನೋಡಾ' ಎನ್ನುವ ವಿಲಕ್ಷಣ ಆದರ್ಶಕ್ಕಾಗಿ ಬದುಕಿನುದ್ದಕ್ಕೂ ಅನೇಕ ಸಮಸ್ಯೆಗಳನ್ನು ಎದುರಿಸಿದ್ದಾಳೆ. ಉತ್ಕಟ ಭಾವೋಕ್ತಿ ದೈವೀ ಪ್ರೀತಿ, ಅಂತರ್ಮುಖತೆ, ಭಾವ ಪರವಶತೆ, ಮಧುರಭಕ್ತಿಯ ಸಾಧನೆಯಿಂದ ಅಕ್ಕಮಹಾದೇವಿ ವಿಶಿಷ್ಟಳೆನ್ನಿಸಿದ್ದಾಳೆ. ಆತ್ಮಾಭಿವ್ಯಕ್ತಿಯಂತೆ ಕಂಡುಬರುವ ಆಕೆಯ ವಚನಗಳು ಆತ್ಮಶೋಧೆ, ಭಕ್ತಿ, ವಿರಕ್ತಿ, ಅನುಭಾವ, ಅಲೌಕಿಕ ಪ್ರವೃತ್ತಿ ಮತ್ತು ಕಾವ್ಯ ಪ್ರತಿಭೆಯನ್ನು ಒಳಗೊಂಡಿವೆ. ಸತಿಪತಿಭಾವದ ಭಕ್ತಿ ಪರವಶತೆ ಮತ್ತು ಅನುಭಾವದ ಅವ್ಯಕ್ತ ಭಾವರೂಪಗಳನ್ನು ಕಾವ್ಯಮಯವಾಗಿ ಧ್ವನಿಸುವ ಭಾವ ಸಂಪತ್ತು ಅಪೂರ್ವವಾದುದು. ಭಾವಭಾಷೆಯ ಸಹಜ ಸಾಂಗತ್ಯದೊಂದಿಗೆ ಲಯಬದ್ಧವಾಗಿ ಪ್ರಮಿಸುವ ಕೌಶಲ್ಯದಲ್ಲಿ ಮಹಾದೇವಿಯಕ್ಕನ ಕಾವ್ಯಪ್ರತಿಭೆಯಂತಿದೆ. ಭಾವತನ್ಮಯತೆ, ಸಂವೇದನಾ ಶೀಲತೆ ಮತ್ತು ಭಾವಗೀತಾತ್ಮಕತೆಯ ಕಾಂತಿಯುಳ್ಳ ಅಕ್ಕನ ವಚನಗಳು ಶ್ರೇಷ್ಠಮಟ್ಟದ ಭಾವಗೀತೆಗಳಾಗಿವೆ. ಮಧುರ ಭಾಷೆ ಸಹಜ ಸರಳ ಭಾವಪೂರ್ಣ ನಿರೂಪಣೆ ಅಕ್ಕನ ವಚನಗಳ ವಿಶಿಷ್ಟ ಸತ್ವವಾಗಿದೆ. ಬದುಕಿನುದ್ದಕ್ಕೂ ಅನುಭವಿಸಿದ ದುಃಖ ದುಮ್ಮಾನ, ಅಪಮಾನ ನಿಂದೆ, ಒಂಟಿತನಗಳು ಆಕೆಯನ್ನು ಅಂತರ್ಮುಖಿಯನ್ನಾಗಿಸಿದಂತೆ ತೋರುತ್ತದೆ. ಅಂತೆಯೇ ಆಕೆಯ ಅನೇಕ ವಚನಗಳು ಆಕೆಯ ಕನಸಿನ ಪ್ರತಿಮೆಗಳಾಗಿ ರೂಪುಗೊಂಡಿವೆ. 'ಹೊಳೆವ ಕೆಂಜೆಡೆಗಳ, ಫಣಿ ಮಣಿ ಕರ್ಣಕುಂಡಲದವ'ನೊಂದಿಗೆ ಬೆರಸಿ ಬೇರಿಲ್ಲದಂತಾಗುವ ಉತ್ಕಟ ಅಪೇಕ್ಷೆ, ಅಲೌಕಿಕ ಆದರ್ಶವನ್ನು ಲೋಕಧರ್ಮವನ್ನಾಗಿಸುವ ವಿಲಕ್ಷಣ ಒಲುವೆ ಕನಸಾಗಿ ಸಾಕಾರಗೊಂಡಿದೆ.

ಅಕ್ಕ ಕೇಳಕ್ಕಾ ನಾನೊಂದು ಕನಸುಕಂಡೆ
ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು
ಬಂದೆನ್ನ ನೆರದ ನೋಡವ್ವಾ
ಆತನನಪ್ಪಿಕೊಂಡು ತಳವೆಳಗಾದೆನು
ಚೆನ್ನಮಲ್ಲಿಕಾರ್ಜುನನ ಕಂಡು
ಕಣ್ಣ ಮುಚ್ಚಿ ತೆರೆದು ತಳವೆಳಗಾದೆನು[೨]

ಮೃದುಮಧುರ ಭಾವೋಕ್ತಿಗಳಿಂದ ಕೂಡಿದ ಅಕ್ಕನ ವಚನಗಳು ಮೇಲುನೋಟಕ್ಕೆ ಸುಲಭವಾಗಿ ಕಂಡರೂ ಆಧ್ಯಾತ್ಮಿಕ ಚಿಂತನೆ ಗಂಭೀರ ತತ್ವದರ್ಶನ ಮತ್ತು ವಿಸ್ತೃತ ಲೋಕಾನುಭವಗಳಿಂದ, ಅರ್ಥಪೂರ್ಣವಾದ ಉಪಮೆ, ರೂಪಕ, ದೃಷ್ಟಾಂತಗಳಿಂದ ಅಕ್ಕಮಹಾದೇವಿಯ ವಚನಗಳು ಉತ್ತಮ ಸಾಹಿತ್ಯ ಸತ್ವವನ್ನು ಒಳಗೊಂಡು ಉತ್ಕೃಷ್ಟ ಜೀವನಾದರ್ಶವನ್ನು ಪ್ರಕಟಿಸುತ್ತವೆ.

ಅಕ್ಕ ನಾಗಲಾಂಬಿಕಾ ತಾಯಿಯ ವಚನಗಳಲ್ಲಿ ಬಸವಾದಿ ಶರಣರನ್ನು ಕೃತಜ್ಞತೆಯಿಂದ ನೆನೆದ ವಚನಗಳೇ ಹೆಚ್ಚಾಗಿವೆ. ಬಸವಣ್ಣನವರ ಪತ್ನಿ ನೀಲಾಂಬಿಕೆ ಬಸವಣ್ಣನವರ ಕೈಹಿಡಿದು ಐಕ್ಯಸ್ಥಾನ ತಲುಪಿದಳು. ಬಸವಣ್ಣನವರ ಮಹಾಮನೆಯ ದಾಸೋಹದ ಅನ್ನಪೂರ್ಣೆಯಾದಳು. ನಿತ್ಯ ಸಾವಿರಾರು ಜನರ ಊಟೋಪಚಾರವನ್ನು ಸಮರ್ಥ ರೀತಿಯಿಂದ ನಡೆಸುತ್ತಿದ್ದಳು. ಅದರಲ್ಲಿ ಬಿಡುವು ಮಾಡಿಕೊಂಡು ಮನೆಯ "ಶಿವ ಪೂಜೆಯ ಮಾಣಿಕದ ನೆಲಮಾಳಿಗೆಯಲ್ಲಿ ಕುಳಿತು ಶಿವಯೋಗ ಸಾಧನೆಗೈಯುತ್ತಿದ್ದಳು." ನೀಲಾಂಬಿಕೆ ಅಕ್ಕಮಹಾದೇವಿ ಗುಡ್ಡಾಪುರ ದಾನಮ್ಮನಂಥ ಶರಣೆಯರಿಗೆಲ್ಲ ತಾಯಿ ವಾತ್ಸಲ್ಯ ತೋರಿದಳು. ಇಚ್ಛಾ ಮರಣವನ್ನಪ್ಪಬಲ್ಲ ಆತ್ಮಶಕ್ತಿ ಸಂಪನ್ನಳಾಗಿದ್ದಳು. ಬಸವಣ್ಣನವರ ಪತ್ನಿಯಾಗಿ ನೀಲಾಂಬಿಕೆ ಅವರ ಒಡನಾಟದಿಂದ ಅನುಭಾವಿಯಾಗಿದ್ದಳು. ನೀಲಾಂಬಿಕೆಯ ವಚನಗಳಲ್ಲಿ ಬಸವಣ್ಣನವರ ಜೀವನ ಅವರು ಮಾಡಿದ ಕಾರ್ಯಗಳ ಹಿರಿಮೆಯ ವರ್ಣನೆಯಿದೆ. ಬಸವಣ್ಣನವರ ವ್ಯಕ್ತಿತ್ವವನ್ನು ತನ್ನ ಒಂದು ವಚನದಲ್ಲಿ ಸುಂದರವಾಗಿ ನಿರೂಪಿಸಿದ್ದಾಳೆ.

ಪ್ರಣವದ ಬೀಜವ ಬಿತ್ತಿ, ಪಂಚಾಕ್ಷರಿಯ ಬೆಳೆಯ ಬೆಳೆದು
ಪರಮ ಪ್ರಸಾದವನೊಂದು ರೂಪ ಮಾಡಿ ಮೆಚೆದು
ಭಕ್ತಿ ಫಲವನುಂಡಾತ ನಮ್ಮ ಬಸವಯ್ಯನು
ಚೆನ್ನಬಸವನೆಂಬ ಪ್ರಸಾದಿಯ ಪಡೆದು ಅನುಭವ ಮಂಟಪವನು ಮಾಡಿ
ಅನುಭವಮೂರ್ತಿ ನಮ್ಮ ಬಸವಯ್ಯನು[೩]

ಎಂಬ ಬಹುದೊಡ್ಡ ವಚನದಲ್ಲಿ ಬಸವಣ್ಣನವರ ಬಗ್ಗೆ ನೀಲಾಂಬಿಕೆಗೆ ಇದ್ದ ಭಕ್ತಿ, ಪ್ರೇಮ, ಆತ್ಮೀಯತೆ, ಅಭಿಮಾನ ಉಕ್ಕಿ ಹರಿದಿದೆ. ನೀಲಾಂಬಿಕೆಗೆ ಬಸವಣ್ಣನವರು ಪತಿ, ಗುರು, ಲಿಂಗ, ಜಂಗಮ ಎಲ್ಲವೂ

ಆಗಿದ್ದರು. ಅವರ ದಾಂಪತ್ಯ ಜೀವನ ಭೋಗಜೀವನವಾಗಿರಲಿಲ್ಲ. ದಂಪತಿಗಳು 'ಶರಣಸತಿ, ಲಿಂಗಪತಿ' ತತ್ವಕ್ಕೆ ಅಂಟಿಕೊಂಡಿದ್ದರು ಎಂಬುದಕ್ಕೆ 'ಅಂಗದ ಸಂಗಿಗನಲ್ಲ ನಮ್ಮ ಬಸವಯ್ಯನು' ಎಂಬ ನೀಲಾಂಬಿಕೆಯ ವಚನ ಸಾಕ್ಷಿಯಾಗಿದೆ. 'ಅನುಭಾವದ ಸಾರವೇ ನಿಜ ಸಾರವಾಗಿ ನಿಂದನೆಮ್ಮ ಬಸವಯ್ಯನು' ಈ ಮಾತು ಬಸವಣ್ಣನವರ ಆತ್ಮಶಕ್ತಿಯ ಸಂಕೇತವಾಗಿದೆ. 'ಬಸವಣ್ಣ ಪ್ರಸಾದ ಕಾಯದವನು' ಬಸವನ ಅನುಭಾವದಿಂದ ವಿವರವ ಕಂಡು ವಿಚಾರ ಪತ್ನಿಯಾದೆನಯ್ಯಾ ಸಂಗಯ್ಯಾ' ಎಂಬ ವಚನ ಅರ್ಥಪೂರ್ಣವಾಗಿದೆ. ಶೂದ್ರ ಸಮಾನಳಾದ ಹೆಣ್ಣಿಗೆ ಬಸವಣ್ಣನವರು ಸಮಾನ ಸ್ಥಾನಮಾನ ಕಲ್ಪಿಸಿಕೊಟ್ಟರು. ಕೈಹಿಡಿದ ಪತ್ನಿ ಭೋಗದ ವಸ್ತು ಎಂದು ಭಾವಿಸಲಿಲ್ಲ. ಆಕೆಗೆ ವಿಚಾರ ಸ್ವಾತಂತ್ರ್ಯ, ಅಭಿವ್ಯಕ್ತಿಯ ಸ್ವಾತಂತ್ರ್ಯವನ್ನಿತ್ತುದರಿಂದ ನೀಲಾಂಬಿಕೆ ವಿಚಾರಪತ್ನಿಯಾಗಿದ್ದಳು.

ಮಡದಿ ಎನಲಾಗದು ಬಸವಂಗೆ ಎನ್ನನು
ಪುರುಷನೆನಲಾಗದು ಬಸವನ ಎನಗೆ
ಉಭಯ ಕುಳವ ಹರಿದು ಬಸವಂಗೆ ಶಿಶುವಾನಾದೆನು
ಬಸವನೆನ್ನ ಪುರಾತನರು ಸಾಕ್ಷಿಯಾಗಿ
ಸಂಗಯ್ಯನಿಕ್ಕಿದ ದಿವ್ಯವ ಮೀರದೆ ಬಸವನೊಳಗಾನಗಡಗಿದೆ.[೪]

ಬಸವಣ್ಣ ಮತ್ತು ನೀಲಲೋಚನೆಯ ದಾಂಪತ್ಯವು ಲೌಕಿಕ ನೆಲೆಯ ನಿರೀಕ್ಷೆಗಳಿಂದ ಗಂಡು ಹೆಣ್ಣಿನ ದೇಹ ಸಂಬಂಧಿ ನೆಲೆಯ ಕಾಮವಾಸನೆಯಿಂದ ಮುಕ್ತವಾದ ಆತ್ಮಸಂಬಂಧವಾಗಿ ವಿಕಾಸಗೊಂಡಿದೆ. ಪರಸ್ಪರರ ಆಧ್ಯಾತ್ಮ ಸಾಧನೆಗೆ ಪೂರಕ ಪೋಷಕರಾಗುತ್ತ ದಾಂಪತ್ಯ ಸಂಬಂಧವನ್ನು ಪ್ರಾಪಂಚಿಕ ನೆಲೆಯಿಂದ ಪಾರಮಾರ್ಥದ ನೆಲೆಗೇರಿಸಿಕೊಂಡ ಶ್ರೇಷ್ಠ ಮಾದರಿಯೊಂದನ್ನು ನೀಲಾಂಬಿಕೆಯ ವಚನ ಕಟ್ಟಿಕೊಟ್ಟಿದೆ. ಬಸವಣ್ಣನವರ ಆಪ್ತ ಕಾರ್ಯದರ್ಶಿಯಂತಿದ್ದ ಹಡಪದ ಅಪ್ಪಣ್ಣನವರ ಪತ್ನಿ ಲಿಂಗಮ್ಮನ ವಚನಗಳು ಮಹತ್ವದ್ದಾಗಿವೆ. ಲಿಂಗಮ್ಮ ತತ್ವಜ್ಞಾನ ಬಲ್ಲವಳಾಗಿದ್ದಳೆಂಬುದಕ್ಕೆ ಆಕೆಯ ವಚನಗಳೇ ಸಾಕ್ಷಿಯಾಗಿವೆ.

ಮನವ ನಿರ್ಮಲವ ಮಾಡುವೆನೆಂದು
ತನುವ ಕರಗಿಸಿ, ಮನವ ಬಳಲಿಸಿ ಕಳವಳಿಸಿ
ಕಣ್‌ಕಾಣದ ಅಂಧಕರಂತೆ ಮುಂದುಗಾಣದೆ
ಸಂದೇಹದಲ್ಲಿ ಮುಳುಗಿರುವ ಮನುಜರಿರಾ, ನೀವು ಕೇಳಿರೊ ಹೇಳಿಹೆನು
ಮನವ ನಿರ್ಮಲವ ಮಾಡಿ, ಆ ಘನವ ಕಾಂಬುದಕ್ಕೆ
ಆ ಮನವೆಂತಾಗಬೇಕೆಂದಡೆ
ಗಾಳಿ ಬೀಸದ ಜಲದಂತೆ, ಮೋಡವಿಲ್ಲದ ಸೂರ್ಯನಂತೆ

ಬೆಳಗಿದ ದರ್ಪಣದಂತೆ ಮನ ನಿರ್ಮಲವಾದಲ್ಲದೆ
ಆ ಮಹಾ ಘನವ ಕಾಣಬಾರದೆಂದರು
ನಮ್ಮ ಅಪ್ಪಣ್ಣ ಪ್ರಿಯ ಚೆನ್ನಬಸವಣ್ಣನವರು[೫]

ಲಿಂಗಮ್ಮ ತನ್ನ ಚಿತ್ತಮನಗಳನ್ನು ಸ್ವಾಧೀನದಲ್ಲಿಟ್ಟುಕೊಂಡು ಕಾಯಕ ಮಾಡುತ್ತಾ ಏಕಾಗ್ರತೆಯಿಂದ ಸದಾ ಧ್ಯಾನ ಮಗ್ನಳಾಗಿ ಬಾಳಿದಳು. ಆತ್ಮೋನ್ನತಿಯ ಶಿಖರವನ್ನು ತಲುಪಿದಳು. ಅದೇ ಮಾರ್ಗದಲ್ಲಿ ಮುನ್ನಡೆಯುವಂತೆ ಮಾರ್ಮಿಕವಾಗಿ ತನ್ನ ವಚನಗಳಲ್ಲಿ ಹಲವಾರು ಉಪಮೇಗಳನ್ನು ಕೊಟ್ಟು ತಿಳಿಸಿದ್ದಾಳೆ. ದೇವರನ್ನು ಕಾಣಬೇಕಾದರೆ ಚಿತ್ತ ಗಾಳಿ ಬೀಸದ ಜಲದಂತೆ, ಮೋಡವಿಲ್ಲದ ಸೂರ್ಯನಂತೆ ಬೆಳಗಿದ ದರ್ಪಣದಂತಿರಬೇಕೆಂದೂ ಮನವನ್ನು ಗೆಲ್ಲಬೇಕಾದರೆ ಕಾಮ, ಕ್ರೋಧ, ಮದ, ಮತ್ಸರಗಳನ್ನು ಗೆಲ್ಲಬೇಕೆಂದೂ, ಆತ್ಮಸಾಕ್ಷಾತ್ಕಾರ ಪಡೆಯುವ ತತ್ವಗಳನ್ನು ಬಹಳ ಸುಲಭಗೊಳಿಸಿ ಹೇಳಿದ್ದಾಳೆ.

ನರರ ಬೇಡೆನು, ಸುರರ ಹಾಡೆನು
ಕರಣಂಗಳ ಹರಿಯಬಿಡೆನು, ಕಾಮನ ಬಲೆಗೆ ಸಿಲ್ಕೆನು
ಮರವೆಗೊಳಗಾಗೆನು ಪ್ರಣವ ಪಂಚಾಕ್ಷರಿಯ ಜಪಿಸಿದೆನೆಂದು
ತನುವ ಮರೆದು ನಿಜಮುಕ್ತಳಾದೆನಯ್ಯ! ಅಪ್ಪಣ್ಣ ಪ್ರಿಯ ಚೆನ್ನಬಸವಣ್ಣ[೬]

ಲಿಂಗಮ್ಮನ ಹಲವಾರು ವಚನಗಳು ಉಚ್ಚ ಮಟ್ಟದವಾಗಿವೆ. ಅಂಗಗುಣವಳಿಯಬೇಕು, ಲಿಂಗಗುಣ ನೆಲೆಗೊಳ್ಳಬೇಕು, ಆಸೆಯನಳಿದವಂಗೆ ರೋಷದ ಹಂಗೇಕೊ? ಕಾಮನ ಸುಟ್ಟವಂಗೆ ಕಳವಳದ ಹಂಗೇಕೊ' ಎಂದು ಕೇಳಿದ ಲಿಂಗಮ್ಮ 'ಬಟ್ಟಬರಿಯ ಬಯಲಿನೊಳಗೋಲಾಡಿ ಸುಖಿಯಾದ ಎಂದು ವರ್ಣನೆ ಮಾಡಿದ್ದಾಳೆ.

ಸೊಲ್ಲಾಪುರದ ಶರಣ ಅಮುಗಿದೇವನ ಪತ್ನಿ ರಾಯಮ್ಮ ಪರಮ ಶಿವಭಕ್ತಳು. ರಾಯಮ್ಮನ ವಚನಗಳಲ್ಲಿ ಬಾಹ್ಯ ಡಂಭಾಚಾರದ ಪೂಜೆ, ಇರುವಿಕೆಗಳನ್ನು ಸುಂದರ ಶೈಲಿಯಲ್ಲಿ ಪ್ರತಿಭಟಿಸಿದ್ದಾಳೆ. ಆಕೆಯ ಉಪಮೆಗಳು ಅರ್ಥಪೂರ್ಣವಾಗಿವೆ. ಆಕೆ ತನ್ನ ಅನೇಕ ವಚನಗಳಲ್ಲಿ ಭಕ್ತ, ಜಂಗ, ಲಿಂಗಧಾರಿಗಳನ್ನು ಕುರಿತು ಹೇಗಿರಬೇಕು ಎಂಬುದನ್ನೂ ವಿವರಿಸಿದ್ದಾಳೆ.

ಮೂಗಿಲ್ಲದವಂಗೆ ಕನ್ನಡಿಯ ತೋರಲೇಕೆ?
ಕೈಯಿಲ್ಲದವಂಗೆ ಕುದುರೆಯನೇರಲೇಕೆ?
ಕಾಲಿಲ್ಲದವಂಗೆ ನಿಚ್ಚಣಿಗೆಯನೇರಲೇಕೆ? ಭಕ್ತಿ ಜ್ಞಾನ ವೈರಾಗ್ಯವಿಲ್ಲದವಂಗೆ
ಇಷ್ಟಲಿಂಗವೇಕೆ ಅಮುಗೇಶ್ವರಾ|[೭]

ಎಂದು ಸ್ಪಷ್ಟವಾಗಿ, ದಿಟ್ಟತನದಿಂದ ಕೇಳಿದ್ದಾಳೆ. ಮನದ ಅವಗುಣಗಳನ್ನೆಲ್ಲ ಕಳೆದುಕೊಂಡು ಭಕ್ತಿ, ಜ್ಞಾನ, ವೈರಾಗ್ಯದ ಬಲದಿಂದ ಶಿವಗುಣ ಸಂಪಾದನೆ ಮಾಡುವುದೇ ಮುಖ್ಯ ಎಂದು ಹೇಳಿದ್ದಾಳೆ.

ಮುಕ್ತಾಯಕ್ಕ ಮಹಾ ಶಿವಶರಣೆ. ಅನುಭಾವಿ, ಆಕೆಗೆ ಅಣ್ಣ ಅಜಗಣ್ಣನೇ ಗುರು, ಲಿಂಗ, ಜಂಗಮ, ಮಂತ್ರ ಸರ್ವಸ್ವವೂ ಆಗಿದ್ದನು. ಅಜಗಣ್ಣ ಲಿಂಗೈಕ್ಯನಾದಾಗ ಮುಕ್ತಾಯಕ್ಕ ತನ್ನ ಮನಸ್ಸಿನಲ್ಲಿದ್ದ ವೇದನೆಯನ್ನು ವ್ಯಕ್ತಪಡಿಸುತ್ತಾಳೆ.

ನಾನೆಂತು ಬದುಕುವೆನಣ್ಣಾ?
ಕತ್ತಲೆಯ ಬೆಳಗಕಾಂಬ ಸಂದೇಹಿ ನಾನೊಬ್ಬಳು
ಎನ್ನ ಕಣ್ಣ ಕಟ್ಟಿ ಕನ್ನಡಿಯ ತೋರಿತ್ತೋ ಅಜಗಣ್ಣ ನಿನ್ನ ಯೋಗ
ರವಿಯೊಳಡಗಿದ ಪ್ರತಿಬಿಂಬದಂತೆ ಹಿಡಿವರಿಗಳನಲ್ಲದಿರಬೇಕು ಅಣ್ಣಾ
ನಿನ್ನೊಳಡಗಿದ ಭೇದದ ಭಿನ್ನವ ಮಾಡುವರೆ ಎಲೆ ಅಣ್ಣಾ
ನಿನ್ನ ನುಡಿಯೆಲ್ಲಾ ಪ್ರತಿಬಿಂಬಗಳಾದವೆ ಎಲೆ ಅಣ್ಣಾ
ಕೊಡನೊಳಗಣ ಜ್ಯೋತಿಯಡಗಿಸಲರಿಯದೆ
ಮಿಗೆವರಿದಂತಾದೆಯೊ ಅಜಗಣ್ಣಾ[೮]

ಮುಕ್ತಾಯಕ್ಕ ಮನದ ದುಃಖವನ್ನು ತಡೆಯಲಾರದೆ ಅಣ್ಣನನ್ನು ನೆನೆದು ಅವನ ವರ್ಣನೆ ಮಾಡುತ್ತ ಅಳುವುದನ್ನು ಕಂಡ ಅಲ್ಲಮಪ್ರಭುಗಳು ಮುಕ್ತಾಯಕ್ಕನ ಬಗೆಗೆ ವಿಚಾರಿಸಿದಾಗ 'ಅಂಗೈಯ್ಯಲ್ಲೊಂದು ಅರಳ್ದಲೆಯ ಹಿಡಿದು ಕಂಗಳಮುತ್ತ ಪವಣಿಸುವವಳು ನೀನಾರು' ತಾಯೆ ಎಂದಾಗ ಆಕೆಯು ನೀಡುವ ಉತ್ತರ

ಆರೆಂದು ಕುರುಹ ಬೆಸಗೊಳ್ಳಲು ಏನೆಂದು ಹೇಳುವೆನಯ್ಯಾ?
ಕಾಯದೊಳಗೆ ಮಾಯವಿಲ್ಲ
ಭಾವದೊಳಗೆ ಭ್ರಮೆಯಿಲ್ಲ
ಕರೆದು ಬೆಸಗೊಂಬಡೆ ಕುರುಹಿಲ್ಲ
ಒಬ್ಬರಿಗೂ ಹುಟ್ಟದೆ ಅಯೋನಿಯಲ್ಲಿ ಬಂದು
ನಿರ್ಬುದ್ಧಿಯಾದವಳನೇಗೆಂಬೆಯಣ್ಣಾ|
ತಲೆಯುಳಿದು ನೆಲೆಗಟ್ಟು ಬೆಳಗುವ ಜ್ಯೋತಿ
ಎನ್ನ ಅಜಗಣ್ಣ ತಂದೆಯ ಬೆನ್ನಬಳಿಯದಳಾನಯ್ಯಾ[೯]

ಮುಕ್ತಾಯಕ್ಕ ತನ್ನ ವಿಚಾರವನ್ನು ಹೇಳುತ್ತಾ ಜೊತೆಗೆ ಅಣ್ಣನ ಬಗ್ಗೆ ತನಗಿರುವ ಗೌರವ ಆದರಗಳನ್ನು ತಿಳಿಸಿ ಹೇಳುತ್ತಾ ಅಲ್ಲಮಪ್ರಭುಗಳಿಗೆ ಆಶ್ಚರ್ಯವಾಗುವ ರೀತಿಯಲ್ಲಿ ವರ್ಣನೆ ಮಾಡುತ್ತಾಳೆ. ಅಜಗಣ್ಣನ ವರ್ಣನೆಯ ವಚನಗಳಲ್ಲದೆ, ಸಹಜ ಸುಂದರ ವಚನಗಳನ್ನು ಮುಕ್ತಾಯಕ್ಕ ರಚಿಸಿದ್ದಾಳೆ.

'ಸುಮ್ಮನೇಕೆ ದಿನ ಕಳೆವಿರಿ, ಸುಮ್ಮನೇಕೆ ಹೊತ್ತುಗಳೆವಿರಿ?
ಸುಮ್ಮನೇಕೆ ಹೊತ್ತುಗಳೆವಿರಿ, ಸ್ವಾಮಿಗಳಿರಾ?

ಮಾಡಬನ್ನಿ ದಿನ ಶಿವರಾತ್ರಿಯ, ಕೇಳಬನ್ನಿ ಶಿವಾನುಭವವ
ನೋಡಬನ್ನಿ ಅಜಗಣ್ಣನಿರವ ಬಸವಣ್ಣ ತಂದೆ[೧೦]

ಎಂದು ಹೇಳಿದ ಮುಕ್ತಾಯಕ್ಕ ನುಡಿಯ ಹಂಗಿನ್ನೂ ನಿಮಗೆ ಹಿಂಗದು, ನಡೆಯನೆಂತು ಪರರಿಗೆ ಹೇಳುವಿರಾ? ಎಂದು ಪ್ರಭುದೇವರನ್ನೇ ಕೇಳಿದ್ದಾಳೆ. ಶಿವಶರಸಶಣರ ಮಹಿಮೆ ಸಾಮಾನ್ಯರಿಗೆ ತಿಳಿಯಲಾರದು 'ಕಬ್ಬುನವುಂಡ ನೀರಿನಂತೆ ಕಬ್ಬಿಸಿಲುಂಡ ಅರಿಸಿನದಂತೆ ಉರಿಯೊಳಡಗಿದ ಕರ್ಪೂರದಂತೆ' ಇದ್ದಾರೆ ಎನ್ನುವ ಮುಕ್ತಾಯಕ್ಕನ ವರ್ಣನಾತ್ಮಕ ವಚನಗಳು ಅಪೂರ್ವವಾಗಿವೆ.

ಕಾಶ್ಮೀರದರಸು ಮೋಳಿಗೆ ಮಾರಯ್ಯನವರ ಪತ್ನಿ ಮಹಾದೇವಿಯಮ್ಮ ಪತಿಭಕ್ತಿ ಪರಾಯಣೆ. ಆಧ್ಯಾತ್ಮ ಮಾರ್ಗದಲ್ಲಿ ಪತಿಗಿಂತ ಮುಂದೆ ಹೋಗಿದ್ದಳು. ಕಟ್ಟಿಗೆ ತಂದು ಮಾರುವ ಕಾಯಕ ಕೈಗೊಂಡ ಮಾರಯ್ಯನವರಿಗೆ ಅಹಂಕಾರದ ಸೋಂಕು ತಗುಲಿತು. ಅರಸೊತ್ತಿಗೆಯನ್ನು ಬಿಟ್ಟು ಕಟ್ಟಿಗೆ ಕಾಯಕ ಮಾಡುತ್ತ ಸಣ್ಣಾದೆ. ಇನ್ನು ಕಾಯವೆರೆಸಿ ಕೈಲಾಸಕ್ಕೆ ಹೋಗಬೇಕೆಂದು ಇಚ್ಛೆ ಉಂಟಾಗಲು ಪತ್ನಿಗೆ ಸಲಹೆ ಕೇಳಿದರು. ಅದಕ್ಕೆ ಅನುಭಾವಿ ಮಹಾದೇವಿಯಮ್ಮ ಹೇಳೀದ ವಚನಗಳು ಮಾರ್ಮಿಕವಾಗಿವೆ. 'ಕೈಯಲ್ಲಿ ಜ್ಯೋತಿಯ ಹಿಡಿದು ಕತ್ತಲೆ ಎನಲೇತಕ್ಕೆ? ಕಾಯವೆರೆಸಿ ಕೈಲಾಸಕ್ಕೆ ಹೋದಿಹೆನೆಂಬುದು ಭಕ್ತಂಗೆ ಹಿತವಲ್ಲ' ಎಂದು ಅವಳ ವಿನಯ ಸುಸಂಸ್ಕೃತ ಸ್ವಭಾವಕ್ಕೆ ಹಿಡಿದ ಕನ್ನಡಿಯಾಗಿದೆ. ದೊರೆಯೆ ನಿಮ್ಮ ಭಕ್ತಿ ಕೈಯ್ಯಲ್ಲಿ ಜ್ಯೋತಿಯನ್ನು ಹಿಡಿದು ಕತ್ತಲೆಯನ್ನರಸಿದಂತಿದೆ. ಶಕ್ತಿಯ ಮಾತೆಂದು ಧಿಃಕರಿಸಬೇಡಿರಿ ಕಾಯಕವೇ ಕೈಲಾಸ ಎಂದು ವಿನಯದಿಂದ ಪತಿಗೆ ಭಿನ್ನವಿಸುತ್ತಾಳೆ. ಮಾರಯ್ಯನವರು ಪತ್ನಿ ಬುದ್ಧಿ ಹೇಳುವಳೆಂದು ಸಿಟ್ಟಾಗದೆ ಕೇಳುತ್ತಾರೆ. 'ಸತ್ವಗೆಟ್ಟಲ್ಲ ಕಾಷ್ಠವನೂರಿ ನಡೆಯಬೇಕು. ಮತತ್ವವಿದಲ್ಲಿ ನಿಶ್ಚಯವ ಹೇಳಲಾಗಿ ಮಹಾಪ್ರಸಾದವೆಂದು ಕೈಕೊಳ್ಳಬೇಕು, ನೀ ಶಕ್ತಿಯಾದ ಕಾರಣ ಎನ್ನ ಸತ್ಯಕ್ಕೆ ನೀ ಪತಿಯಾದ ಕಾರಣ' ನಮ್ಮಿಬ್ಬರ ಸುಖ ದುಃಖ ಇಬ್ಬರಲ್ಲಿ ಭೀನ್ನಭೇದವಿಲ್ಲ ಎಂದು ಸತಿ ಹೇಳಿದಾಗ ಅದಕ್ಕೆ ವಿನಯಶೀಲೆ ಮಹಾದೇವಿಯಮ್ಮ ಹೇಳುತ್ತಾಳೆ 'ಎನ್ನ ಶಕ್ತಿ ಜಾತಿ ಲಕ್ಷಣ ನಿಮ್ಮ ಭಕ್ತಿ ಸೂತ್ರದಿಂದ ಎನ್ನ ಸ್ತ್ರೀ ಜಾತಿ ನಿಮ್ಮ ಶ್ರೀಪಾದದಲ್ಲಿ ಅಡಿಗಿತ್ತು' ಎಂಬ ಅರ್ಪಣಭಾವವಿದೆ. ಸ್ತ್ರೀ ಸ್ವಾತಂತ್ರ್ಯದ ಹೋರಾಟವಿಲ್ಲ ಇಲ್ಲಿ. ಪರಸ್ಪರರು ಸಮತಾಭಾವದಿಂದ ಗೌರವಭಾವದಿಂದ ಬಾಳಿದ ಆದರ್ಶ ದಂಪತಿಗಳವರು ಮಹಾದೇವಿಯಮ್ಮ ತನ್ನ ವಚನಗಳಲ್ಲಿ ವೀರಶೈವ ತತ್ವಜ್ಞಾನವನ್ನು ಎಳೆ ಎಳೆಯಾಗಿ ಬಿಡಿಸಿದ್ದಾಳೆ.

ಬಸವಣ್ಣನವರ ಅಂಗಳದಲ್ಲಿ ಬಿದ್ದ ಅಕ್ಕಿಯನ್ನು ಆಯ್ದು ತಂದು ಗುರು, ಲಿಂಗ, ಜಂಗಮ, ದಾಸೋಹ ನಡೆಸುತ್ತಿದ್ದ ಅಯ್ದಕ್ಕಿ ಮಾರಯ್ಯ ಆತನ ಪತ್ನಿ ಲಕ್ಕಮ್ಮ ಕಾಯಕ ನಿಷ್ಠೆಯುಳ್ಳವರು. ಲಕ್ಕಮ್ಮ ಸತ್ಯ ಸದಾಚಾರಿ, ಸತ್ಯ ನಿಷ್ಠುರಳು. ಪತಿ ಕಾಯಕದ ಬಗೆಗೆ ಶರಣರೊಂದಿಗೆ ಚರ್ಚಿಸುತ್ತ ಅಕ್ಕಯನ್ನು ಆಯ್ದು ತರುವುದನ್ನೆ ಮರೆತಾಗ, ಕರ್ತವ್ಯ ದಕ್ಷ ಪತ್ನಿ ಲಕ್ಕಮ್ಮ ಧಾವಿಸಿ, ಪತಿಯ ಬಳಿಗೆ

ಬಂದು ಹೇಳುತ್ತಾಳೆ. 'ಕಾಯಕ ನಿಂದಿತ್ತು ಹೋಗಯ್ಯ ಎನ್ನಾಳ್ದನೆ' ಎಂದು ಪ್ರೀತಿ, ಭಕ್ತಿಯಿಂದ ಹೇಳಿದಾಗ ಮಾರಯ್ಯನವರು ಅಕ್ಕಿಯನ್ನಾಯಲು ಹೋಗುತ್ತಾರೆ. ವಿಚಾರದ ಗುಂಗಿನಲ್ಲಿ ಹೆಚ್ಚು ಅಕ್ಕಿಯನ್ನು ಆಯ್ದು ತರುತ್ತಾರೆ. ಅದನ್ನು ಕಂಡ ಲಕ್ಕಮ್ಮ 'ಆಶೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೇ' ಹೆಚ್ಚಿನ ಅಕ್ಕಿಯನ್ನು ಅಲ್ಲೆ ಸುರಿದು ಬನ್ನಿರಿ ಎಂದು ಕಳಿಸುತ್ತಾಳೆ. ಮಹಾಮನೆಯ ಶರಣರನ್ನೆಲ್ಲ ತನ್ನ ಮನೆಗೆ ಪ್ರಸಾದಕ್ಕೆ ಕರೆಯುವ ಆಸೆ ಲಕ್ಕಮ್ಮನಿಗಾಗುವುದು ಅದನ್ನು ಪತಿಗೆ ಹೇಳುವಳು ನಮ್ಮಂಥ ಬಡವರಿಗೆ ಅದು ಹೇಗೆ ಸಾಧ್ಯ ಎಂದು ಪತಿ ಶಂಕಿಸಿದಾಗ ಆಕೆಯ ಆತ್ಮವಿಶ್ವಾಸ ಜಾಗೃತವಾಗುವುದು. 'ಅಂಜದಿರು ಎನ್ನಾಳ್ದ ಮನಶುದ್ಧವಿಲ್ಲದವರಿಗೆ ದ್ರವ್ಯದ ಬಡತನವಲ್ಲದೆ ಚಿತ್ತ ಶುದ್ಧದಲ್ಲಿ ಕಾಯಕವ ಮಾಡುವ ಸದ್ಭಕ್ತರಿಗೆ ಎತ್ತ ನೋಡಿದಡತ್ತ ಲಕ್ಷ್ಮಿತಾನಾಗಿಪ್ಪಳು' ಎಂದು ಪತಿಗೆ ಧೈರ್ಯ ಹೇಳುತ್ತಾಳೆ. ದಂಪತಿಗಳು ಭಕ್ತಿಯಿಂದ ಬಸವಾದಿ ಶರಣರನ್ನು ಕರೆದು ಆರೋಗಣೆ ಮಾಡಿಸುವರು. ಇವರ ಮನೆಯ ಪ್ರಸಾದ ಸೇವಿಸಿ ಸಂತುಷ್ಟರಾದ ಬಸವಣ್ಣನವರು ಹೇಳುತ್ತಾರೆ. 'ಮನೆನೋಡಾ ಬಡವರ, ಮನನೋಡಾ ಸಂಪನ್ನರು, ಧನನೋಡಾ ಬಡವರು ಘನಮನ ಸಂಪನ್ನರು ನಮ್ಮ ಕೂಡಲ ಸಂಗನ ಶರಣರು' ಎಂದು ಲಕ್ಕಮ್ಮನ ವಚನಗಳಲ್ಲಿ ಕಾಯಕದ ಮಹತಿ, ಪತಿಭಕ್ತಿ, ಎದ್ದು ತೋರುವುದು. ಸರಳ ಶೈಲಿಯ ಸುಂದರ ವಚನಗಳಿಂದ ಲಕ್ಕಮ್ಮ ಜನಮನದಲ್ಲಿ ನೆಲೆಸಿದ್ದಾಳೆ.

ಸತ್ಯಕ್ಕನ ವಚನಗಳಲ್ಲಿ ಸಮಾಜದ ಮೌಲ್ಯಗಳಿಗೆ ಬದ್ಧರಾಗಿರಬೇಕು ಎಂಬ ತನ್ನ ನಿಲುವನ್ನು ವ್ಯಕ್ತಪಡಿಸುತ್ತಾಳೆ. ಮೇಲುನೋಟಕ್ಕೆ ಭಕ್ತಿಯಾಚರಣೆ ಮಾಡದೆ ಆಂತರಿಕವಾಗಿ ಪರಿಶುದ್ಧ ಮನೋಭಾವನೆಯನ್ನು ಹೊಂದಿರಬೇಕು. ನಿಷ್ಠೆಯಿಂದ ಕಾಯಕವನ್ನು ಮಾಡುತ್ತಾ ಯಾವುದೇ ರೀತಿಯ ವಂಚನೆ ದ್ರೋಹಗಳನ್ನು ಮಾಡಬಾರದು.

ಅರ್ಚನೆ ಪೂಜನೆ ನೇಮವಲ್ಲ; ಮಂತ್ರತಂತ್ರ ನೇಮವಲ್ಲ
ಧೂಪ ದೀಪಾರತಿ ನೇಮವಲ್ಲ
ಪರಧನ ಪರಸ್ತ್ರೀ ಪರದೈವಗಳಿಗೆಳಗದಿಪ್ಪುದೆ ನೇಮ
ಶಂಭು ಜಕ್ಕೇಶ್ವರನಲ್ಲಿ ಇವು ಕಾಣಿರಣ್ಣಾ ನಿತ್ಯನೇಮ[೧೧]

ಮನುಷ್ಯ ಕೇವಲ ತೋರಿಕೆಗಾಗಿ ಮಂತ್ರ ತಂತ್ರ ಜಪಗಳನ್ನು ಮಾಡುತ್ತಾ ಕಾಲ ಕಳೆಯುವುದು ನೇಮವಾಗುವುದಿಲ್ಲ. ಮಂತ್ರ, ಜಪ, ಪೂಜೆ ಮಾಡುವುದರ ಜೊತೆಗೆ ಆತ್ಮ ಶುದ್ಧಿಯಾಗಿರಬೇಕು ಪರರ ಆಸ್ತಿಯನ್ನಾಗಲಿ ಸ್ತ್ರೀಯನ್ನಾಗಲಿ, ದೈವವನ್ನಾಗಲಿ ಬಯಸದೆ ಇರಬೇಕು. ಆಗ ಮಾತ್ರ ನಿಜವಾದ ಭಕ್ತ ಎನಿಸಿಕೊಳ್ಳುತ್ತಾನೆ. ಸತ್ಯಕ್ಕನಲ್ಲೂ 'ಶರಣಸತಿ ಲಿಂಗಪತಿ' ಭಾವವು ವ್ಯಕ್ತವಾಗಿರುವುದನ್ನು ಗುರುತಿಸಬಹುದು.

ಹೊಟಗಿದ್ದಹನೆಂದು ನಾನು ಯರೆದು ಮಾತನಾಡಿದೆ
ಅಟೆಯಲೀಯದೆ ಬಂದೆನ್ನ ಅಂತರಂಗದಲ್ಲಿಪ್ಪನು

ತೆಱಹಿಲ್ಲದಭವ ನುಡಿಗೆಡೆಗೊಡನು
ಆತನ ಬಯಲಿಂಗೆ ಬೇಟಗೊಂಡೆನವ್ವಾ
ನಮ್ಮ ಶಂಭುಜಕ್ಕೇಶ್ವರನು
ಇನಿಯಂಗೆ ತವಕವಿಲ್ಲ ಎನಗೆ ಸ್ಮರಣೆಯಿಲ್ಲ
ಮನದಿಚ್ಛೆಯಱಿವ ಸಖಿಯರಿಲ್ಲ ಇನ್ನೇವೆನವ್ವಾ?
ಮನುಮಥ ವೈರಿಯ ಅನುಭಾವದಲ್ಲಿ ಎನಮನ ಸಿಲುಕಿ ಬಿಡದು
ಇನ್ನೇನು ಮಾಡುವೆನಲೆ ಕರುಣವಿಲ್ಲದ ತಾಯೆ?
ದಿನ ವೃಥಾ ಹೋಯಿತ್ತಾಗಿ ಯೌವನ ಬೇಸರವಾಗದ ಮುನ್ನ
ಪಿನಾಕಿಯ ನೆರೆಹವ್ವಾ ಶಂಭುಜಕ್ಕೇಶ್ವರನ[೨]

ಮೊದಲಿಗೆ ಪರಮಾತ್ಮ ನಮ್ಮ ಆತ್ಮದಿಂದ ದೂರವಿರುವವನು ಎಂದು ತಿಳಿದಿದ್ದು ಅನಂತರ ನಮ್ಮ ಆತ್ಮದಲ್ಲೇ ನೆಲೆಸಿರುವನೆಂದು ತಿಳಿದುಕೊಂಡಿರುತ್ತಾಳೆ. ಮೊದಲಿಗೆ ಇಷ್ಟಪಟ್ಟವರನ್ನು ಪತಿಯೆಂದು ಸ್ವೀಕರಿಸಲು ಸಾಧ್ಯ. ಆತನಿಗಾಗಿ ತಾನು ಕಾಯಲು ಸಿದ್ಧ. ಆದರೆ ಯೌವನ ವ್ಯರ್ಥವಾಗುವುದಕ್ಕೆ ಮೊದಲೇ ಬರಹೇಳು ಎಂದು ಬೇಡಿಕೊಳ್ಳುವಲ್ಲಿ ಆಕೆಯ ಭಕ್ತಿಯ ಪ್ರೇಮದ ಅರಿವು ಮತ್ತು ಮಾನವ ಸಹಜವಾದ ಹಂಬಲ ವ್ಯಕ್ತವಾಗಿದೆ. ಹಾಗೆಯೇ ಸತ್ಯಕ್ಕ ಅನುಭಾವದಲ್ಲಿ ಸಿಲುಕಿಕೊಂಡು ತವಕಿಸುತ್ತಿರುವುದನ್ನು ಕಾಣಬಹುದು. ಗಂಡು ಹೆಣ್ಣು ಎಂಬ ಭೇದಭಾವವನ್ನು

ಮೊಲೆ ಮೂಡಿ ಇದ್ದುದೆ ಹೆಣ್ಣೆಂದು ಪ್ರಮಾಣಿಸಲಿಲ್ಲ
ಕಾಸೆ ಮೀಸೆ ಕಠಾರವಿದ್ದುದೆ ಗಂಡೆಂದು ಪ್ರಮಾಣಿಸಲಿಲ್ಲ
ಅದು ಜಗದ ಹಾಹೆ ಬಲ್ಲವರ ನೀತಿಯಲ್ಲ
ಏತಱ ಹೆಣ್ಣಾದಡೂ ವಧುಕವೆ ಕಾರಣ
ಅಂಧವಿಲ್ಲದ ಕುಸುಮಕ್ಕೆ ವಾಸನೆಯೇ ಕಾರಣ
ಇದಱಂದವ ನೀನೆ ಬಲ್ಲೆ ಶಂಭೂಜಕ್ಕೇಶ್ವರಾ[೨೩]

ಮುಂದಿನ ನಾಲ್ಕು ಶತಮಾನಗಳ ಅವಧಿಯಲ್ಲಿ ಮಹಿಳಾ ಸಾಹಿತ್ಯ ತಟಸ್ಥವಾದುದು ಕಂಡುಬರುತ್ತದೆ. ಹದಿನೇಳನೆ ಶತಮಾನದಲ್ಲಿ ಸಾಹಿತ್ಯ, ಸಂಗೀತ, ವಿದ್ವತ್ ಸೇವೆಗಳಿಗೆ ಸಮಾನ ಪ್ರಾಶಸ್ತ್ಯ ನೀಡಿದ ಮೈಸೂರು ಒಡೆಯರಾದ ಚಿಕ್ಕದೇವರಾಯನ ಕಾಲದಲ್ಲಿ ಅವನ ಆಶ್ರಯ ಪಡೆದ ಕವಿಗಳಲ್ಲಿ ಕವಯಿತ್ರಿಯರೂ ಇದ್ದುದು ತಿಳಿದುಬರುತ್ತದೆ. ಅವರುಗಳಲ್ಲಿ ಸಂಚಿಯ ಹೊನ್ನಮ್ಮ, ಶೃಂಗಾರಮ್ಮ, ಚೆಲುವಾಂಬೆಯರು ಪ್ರಮುಖರು. ಅಕ್ಕಮಹಾದೇವಿ ತನ್ನ ದಿಟ್ಟತನ ಮತ್ತ ಕ್ರಾಂತಿಕಾರಕ ವಿಚಾರಗಳಿಂದ ಹೆಸರು ಮಾಡಿದ್ದಾರೆ. ಸಂಚಿ ಹೊನ್ನಮ್ಮ ಸಂಪ್ರದಾಯದ ಚೌಕಟ್ಟಿನೊಳಗೆ ಪುರುಷ ಪ್ರಧಾನ ಚಿಂತನೆಗಳಿಂದಲೇ ಗಮನ ಸೆಳೆದಿದ್ದಾಳೆ.

ಚಿಕ್ಕದೇವರಾಯನ ರಾಜಾಶ್ರಯದಲ್ಲಿ ಸಂಚಿಯ ಊಳಿಗದಲ್ಲಿದ್ದ ಹೊನ್ನಮ್ಮ 'ಹದಿಬದೆಯ ಧರ್ಮ' ಎಂಬ ಕೃತಿ ರಚಿಸಿದಳು. ಹೊನ್ನಮ್ಮ ಮೈಸೂರಿನ ಎಳಂದೂರು ಗ್ರಾಮದವಳು. ವ್ಯಾಸಂಗದಲ್ಲಿ ಆಸಕ್ತಿಯಿದ್ದ ಹೊನ್ನಮ್ಮ ಸಿಂಗರಾರ್ಯನಲ್ಲಿ ವ್ಯಾಸಂಗ ಮಾಡಿ ಸುಪ್ತವಾಗಿದ್ದ ಕವಿತ್ವ ಶಕ್ತಿಯನ್ನು ವಿಕಾಸ ಪಡಿಸಿಕೊಂಡಳು. ಹೊನ್ನಮ್ಮನ ಕೃತಿ ಗಾತ್ರದಲ್ಲಿ ಚಿಕ್ಕದಾದರೂ ಸತ್ವದಲ್ಲಿ ದೊಡ್ಡದು ಆಕೆ ರಚಿಸಿದ ಕೃತಿ ಒಂದೇ ಆದರೂ ಅದರಿಂದಲೇ ಸಾಕಷ್ಟು ಕೀರ್ತಿ ಪಡೆದಳು.

ಪತಿವ್ರತಾ ಸ್ತ್ರೀ ಧರ್ಮದ ಬಗ್ಗೆ 'ಹದಿಬದೆಯ ಧರ್ಮ' ಎಂಬ ಸಾಂಗತ್ಯವನ್ನು ರಚಿಸಿದ ಕವಯಿತ್ರಿ **ಸಂಚಿಯ ಹೊನ್ನಮ್ಮ**. ಈಕೆ ಹುಟ್ಟು, ತಂದೆ, ತಾಯಿ ಬಾಲ್ಯದ ಬಗ್ಗೆ ಏನನ್ನೂ ಹೇಳಿಲ್ಲ. "ಆನಾವಳೆನ್ನ ಮುನ್ನಿರವಾವುದು ನಿನ್ನ ದಯವಾವುದಕಟ ಹೆಳವನೆಡೆನಾಗಂಗೆ ತಾನೈದೆ ಬಂದುದೆಂಬಂತೆ" ಎಂದು ಮಾತ್ರ ಹೇಳಿದ್ದಾಳೆ. ಇದರಿಂದ ತಿಳಿದುಬರುವುದು ಹೊನ್ನಮ್ಮ ಚಿಕ್ಕದೇವರಾಯನ ಊಳಿಗದ ಹೆಣ್ಣು. ರಾಯನ ಪಾದಸ್ಪರ್ಶದಿಂದ ತನ್ನ ಜೀವನ ಸಾರ್ಥಕವಾಯಿತು ಎಂದು ಅರಸನಿಗೆ ತನ್ನ ಕೃತಜ್ಞತೆಯನ್ನು ಅರ್ಪಿಸಿದ್ದಾಳೆ.

ಹದಿಬದೆಯ ಧರ್ಮಕ್ಕೆ ಸ್ತ್ರೀಧರ್ಮ ಸಾಂಗತ್ಯ ಎಂಬ ಪರ್ಯಾಯ ನಾಮವೂ ಹಸ್ತ ಪ್ರತಿಗಳಲ್ಲಿದೆ. ಆ ಕಾಲಕ್ಕೆ ಹೆಣ್ಣಿನ ಧರ್ಮ ಎಂದು ಶಾಸ್ತ್ರಕಾರರು ಏನೇನು ವಿಧಿಸಿದ್ದರೊ ಅದನ್ನು ಈ ಕೃತಿಯಲ್ಲಿ ನಿರೂಪಿಸಲಾಗಿದೆ. ರಾಮಾಯಣ, ಮಹಾಭಾರತ, ಭಾಗವತದ ಸನ್ನಿವೇಶಗಳು ತೀರ್ಥಂಕರ ಚರಿತೆಗಳು ಶರಣರ ಕಥೆಗಳೇ ಕಾವ್ಯಕ್ಕೆ ವಸ್ತುವಾಗಿದ್ದಂತಹ ಸಂದರ್ಭದಲ್ಲಿ ಸ್ತ್ರೀ ಕೇಂದ್ರಿತ ಹದಿಬದೆಯ ಧರ್ಮವನ್ನು ಕುರಿತು ಕೃತಿ ರಚಿಸಲು ಸಾಧ್ಯವಾದದ್ದು ಕವಯಿತ್ರಿಗಿರುವ ಸ್ತ್ರೀಪರ ಕಾಳಜಿಯೇ ಆಗಿದೆ.

ಚಿಕ್ಕದೇವರಾಯ ಪ್ರಜೆಗಳ ಹಿತಚಿಂತಕನಾಗಿದ್ದು, ಜ್ಞಾನಾರ್ಜನೆಗಾಗಿ ಸಕಲ ವ್ಯವಸ್ಥೆಯನ್ನು ಮಾಡಿ ಎಲ್ಲರಿಗೂ ಲಭಿಸುವಂತೆ ಮಾಡಿದ್ದು ರಾಜರ ಆದ್ಯ ಕರ್ತವ್ಯವಾಗಿದೆ. ಈ ಕಾಲದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಿಗೆ ಮತ್ತು ಸಾಹಿತ್ಯ ಕಲೆಗಳ ಅಭಿವೃದ್ಧಿಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗಿತ್ತು. ಇದರ ಅನುಕೂಲಗಳನ್ನು ಮಹಿಳೆಯರು ಪಡೆದುಕೊಂಡರು. ಇದರಿಂದ ಪ್ರಭಾವಿತಳಾದ ಹೊನ್ನಮ್ಮನಿಗೆ ಚಿಕ್ಕದೇವರಾಯ ಮತ್ತು ರಾಣಿಯ ಹೆಚ್ಚಿನ ಪ್ರೋತ್ಸಾಹದಿಂದ, 'ಹದಿಬದೆಯ ಧರ್ಮ' ಎಂಬ ಕಾವ್ಯ ರಚಿಸಲು ಸಾಧ್ಯವಾಯಿತು. ಇದರಲ್ಲಿ ಸ್ತ್ರೀ ಧರ್ಮವನ್ನು ಮುಖ್ಯ ವಸ್ತುವಾಗಿಟ್ಟು ಸ್ತ್ರೀಗೆ ಸಂಬಂಧಿಸಿದ ವಿಚಾರಗಳು ಹಾಗೂ ಗೃಹಿಣಿಯ ಬಾಳಿಗೆ ಮೌಲ್ಯವೆನಿಸಿದ 'ಪಾತಿವ್ರತ್ಯ' ವಿಚಾರವನ್ನು ಕುರಿತ ಕಾವ್ಯವಾಗಿ ರಚನೆಗೊಂಡಿದೆ.

'ಚಿಕ್ಕ ದೇವರಾಯನ ಊಳಿಗದವರಲ್ಲಿ ಒಬ್ಬಳಾದ ಸಂಚಿಯ ಹೊನ್ನಮ್ಮ ಸರಸ ಸಾಹಿತ್ಯದ ವನದೇವತೆ. ಕಾವ್ಯಾಲಂಕಾರ ನಾಟಕಗಳ ಪವಣಿಗೆ ಬಲ್ಲವಳು. ಹದಿಬದೆಯ ಧರ್ಮವೆಂಬ ನೀತಿ

ಕಾವ್ಯವನ್ನು ಬರೆದಿದ್ದಾಳೆ. ಇದರಲ್ಲಿ ಪತಿವ್ರತಾ ಸ್ತ್ರೀಯರ ಧರ್ಮವನ್ನು ಕುರಿತು ಬಣ್ಣಿಸಿದ್ದಾಳೆ. ರಾಮಾಯಣ, ಮಹಾಭಾರತ, ಮನುಶಾಸ್ತ್ರಗಳಲ್ಲಿ ಹೇಳಿರುವ ಸತೀಧರ್ಮವನ್ನು ಹೇಳುವುದೇ ಇದರ ಉದ್ದೇಶ. ಹೊನ್ನಮ್ಮನ ಮಾತಿನಲ್ಲಿ ಶಕ್ತಿಯುಂಟು. ಸ್ತ್ರೀಯರ ಹಕ್ಕುಬಾಧ್ಯತೆಗಳಿಗಾಗಿ ಧೈರ್ಯದಿಂದ ಸಮಾಜದೊಡನೆ ಈಕೆ ಸವಾಲು ಹಾಕಿದ್ದಾಳೆ. ಸತಾತನ ಆರ್ಯ ಸ್ತ್ರೀಯರು ಯಾವ ಯಾವ ಪತಿವ್ರತಾ ಗುಣಗಳನ್ನು ಹೊಂದಿರಬೇಕೋ, ಅವರಿಗೆ ವಿದ್ಯೆಯಲ್ಲಿ, ಸಮಾಜದಲ್ಲಿ, ಮನೆಯಲ್ಲಿ ಎಷ್ಟೆಷ್ಟು ಗೌರವ ಇರಬೇಕೋ ಅದನ್ನೆಲ್ಲ ತಿಳಿಸಿದ್ದಾಳೆ. ಈಗಿನ ವನಿತಾ ಸಮಾಜ ಸುಧಾರಕರಿಗೆ ಇದು ಮೆಚ್ಚುಗೆಯಾಗಬಹುದು. ಇಲ್ಲಿ ಸರ್ವಕಾಲಕ್ಕೂ ಸಾಧಾರವಾದ ಸಾರಭೂತವಾದ ತತ್ತ್ವದ ನೆಲೆಗಟ್ಟು ಕಂಡುಬರುತ್ತದೆ. ಈ ತತ್ತ್ವದಿಂದ ಕಾವ್ಯಕ್ಕೆ ಶಕ್ತಿ ಮೂಡಿದೆ. ನಡುನಡುವೆ ನಿಂದಕರಿಗೆ ಉದಾಸೀನರಿಗೆ ಎಚ್ಚರಿಕೆ ಕೊಡುವ ಮಾತುಗಳೂ ನಿಶಿತವಾಗಿವೆ'' ಎಂದು 'ಹದಿಬದೆಯ ಧರ್ಮ'ವನ್ನು ಕುರಿತು ಹೇಳಿದ ಮಾತುಗಳು ಕಾವ್ಯದ ನೈಜತೆಗೆ ಹಿಡಿದ ಕನ್ನಡಿಯಾಗಿದೆ.

ಇದೇ ಕಾಲದಲ್ಲಿ ಗುರುತಿಸಬಹುದಾದ ಇನ್ನೊಬ್ಬ ಕವಿಯಿತ್ರಿ ರಾಣಿ ಚೆಲುವಾಂಬೆ ಈಕೆ. ಕ್ರಿ.ಶ.೧೭೧೩-೧೭೩೧ರವರೆಗೆ ಆಳಿದ ದೊಡ್ಡ ಕೃಷ್ಣರಾಜ ಒಡೆಯರ ಪತ್ನಿ. ಕಳಲೆಯ ದಳವಾಯಿ ಕಾಂತನೃಪನ ಮಗಳು. ಹೀಗೆ ಅರಮನೆಯ ಪರಿಸರದಲ್ಲಿಯೇ ಹುಟ್ಟಿ ಬೆಳೆದರೂ ಸಾಹಿತ್ಯ ರಚನೆಯಲ್ಲಿ ಉತ್ಸಾಹ ಭಾವವಹಿಸಿದ ರೀತಿ ವೈಶಿಷ್ಟ್ಯಪೂರ್ಣ. ಈಕೆಯ ಕೃತಿಗಳು 'ವರನಂದೀ ಕಲ್ಯಾಣ', 'ವೆಂಕಟಾಚಲ ಮಹಾತ್ಮಂ' 'ಲಾಲಿಪದ', 'ಆಲಮೇಲು ಮಂಗೆ ಲಾಲಿಪದ' ಮಂಗಳಾರತಿ ಪದ 'ತುಲಾಕಾವೇರಿ ಮಹಾತ್ಮಂ' ಮುಂತಾದ ಕೃತಿಗಳನ್ನು ರಚಿಸಿದ್ದಾಳೆ.

ಚೆಲುವಾಂಬೆ ತನ್ನ ಕೃತಿಗಳಲ್ಲಿ ವರನಂದೀ ಕಲ್ಯಾಣ ಇತರ ಕೃತಿಗಳಿಗಿಂತ ಮಿಗಿಲಾದ ಕಾವ್ಯಸಿದ್ಧಿ ಪಡೆದಿದೆ. ಇದರಲ್ಲಿ ೭ ಸಂಧಿ ೮೮೧ ಸಾಂಗತ್ಯ ಪದ್ಯಗಳಿವೆ. ಇದರ ವಸ್ತು ಪೌರಾಣಿಕ, ಪ್ರಣಯ, ಚಾರಿತ್ರಿಕ ಘಟನೆ ಮತ್ತು ಧಾರ್ಮಿಕ ವಿಚಾರಗಳಿಂದ ಕೂಡಿದೆ. ಈ ಕಾವ್ಯದ ವಸ್ತು ಒಡೆಯರ ಕಾಲದಲ್ಲಿ ಜನಪ್ರಿಯವಾದುದು. ಚೆಲುವಾಂಬೆ ವರನಂದೀ ಕಲ್ಯಾಣ ರಚಿಸಲು ಪ್ರೇರಣೆ ನೀಡಿದವರು ಆಕೆಯ ಪತಿ ದೊಡ್ಡ ಕೃಷ್ಣರಾಜ ಒಡೆಯರು ಈ ಅಂಶವನ್ನು

ವರಯದುವಂಶ ತಿಲಕ ನಮ್ಮರಸುಯದು
ಗಿರಿಯೆರೆಯನ ಚಾರಿತ್ರವನು
ನೆರೆ ಸೊಬಗಿನೋಳುಸುರೆಂದು ನೇಮಿಸಲೆನ್ನ
ಶಿರ ದೊಳಗಾಂತು ಪೇಳುವೆನು''[೧೪]

ಎಂದು ಕಾವ್ಯರಂಭದಲ್ಲಿ ತಿಳಿಸಲಾಗಿದೆ. ದಿಲ್ಲಿಯ ಸುಲ್ತಾನನ ಮಗಳು ವರನಂದಿ ಮೇಲುಕೋಟೆಯ ಚೆಲುವ ನಾರಾಯಣನನ್ನು ವಿವಾಹವಾದುದನ್ನು ನಿರೂಪಿಸುವುದೇ ಇಲ್ಲಿ ಈ ಕಾವ್ಯದ ಮುಖ್ಯ ಉದ್ದೇಶ.

ಹದಿನೆಂಟನೆಯ ಶತಮಾನದ ಕನ್ನಡದ ಕವಯಿತ್ರಿರಲ್ಲಿ ಹರಿದಾಸರ ಭಕ್ತಿಪಂಥದಲ್ಲಿ ಕರ್ನಾಟಕದ ಶಿವಶರಣರಂತೆಯೇ ಸಾಹಿತ್ಯವನ್ನು ಮನೆ ಮನೆಗೆ ತಲುಪಿಸುವ ಕಾರ್ಯದಲ್ಲಿ ಪುರುಷ ದಾಸರಂತೆ ಮಹಿಳೆಯರು ಸಹಭಾಗಿತ್ವದಲ್ಲಿ ತೊಡಗಿದರು. ಸತ್ತ್ವ ಮತ್ತು ಮೊತ್ತದಲ್ಲಿ ಶಿವಶರಣೆಯಷ್ಟಲ್ಲದಿದ್ದರೂ ಕೆಲವು ವೈಷ್ಣವ ಭಕ್ತಿ ಕವಿಯಿತ್ರಿಯರು ಕೃತಿ ರಚನೆ ಮಾಡಿರುವುದು ಕಂಡುಬರುತ್ತದೆ. ಗಲಗಲಿಯ ಅವ್ವನವರು, ಭಾಗಮ್ಮ, ಗಿರಿಯಮ್ಮ, ಭೀಮವ್ವ, ಚೆಲ್ಲಮ್ಮ, ಸುಂದರಾಬಾಯಿ, ಸರಸಾಬಾಯಿ, ಓರುಬಾಯಿ ಲಕ್ಷ್ಮೀದೇವಮ್ಮ, ನಿಡಗುರುಕಿ ಜೀವೂಬಾಯಿ, ಗಣಪಕ್ಕ ಮುಂತಾದವರ ಹೆಸರುಗಳನ್ನು ಉಲ್ಲೇಖಿಸಬಹುದಾದರೂ ಗಮನಾರ್ಹವಾದ ಸಾಹಿತ್ಯ ರಚಿಸಿದವರಲ್ಲಿ ಹೆಳವನಕಟ್ಟೆ ಗಿರಿಯಮ್ಮ ಮತ್ತು ಹರಪನಹಳ್ಳಿ ಭೀಮವ್ವ ಪ್ರಮುಖರು.

ಗಲಗಲಿ ಅವ್ವ ಎಂದು ಪ್ರಸಿದ್ಧಿಯಾಗಿರುವ ಹರಿದಾಸ ಸಂಪ್ರದಾಯದ ಈಕೆಯ ಹೆಸರು ರಮಾಬಾಯಿ. ಕೊಪ್ಪಳ ಜಿಲ್ಲೆಯ ಭೋಗಪುರದ ಶಾನುಭೋಗರ ಮಗಳು ರಮಾಬಾಯಿ ಮುಂದೆ ವಿವಾಹವಾದ ಬಳಿಕ ಬಿಜಾಪುರ ಜಿಲ್ಲೆಯ ಗಲಗಲಿ ಹಾಗೂ ಅದರ ಸಮೀಪದ ಶೂರಪಾಲಿಯಲ್ಲಿ ವಾಸ್ತವ್ಯ ಹೂಡಿದ್ದರೆಂದು ತಿಳಿದುಬರುತ್ತದೆ. ರಮಾಬಾಯಿ ಹನ್ನೆರಡರ ಬಾಲಕಿಯಾಗಿದ್ದಾಗ, ತೊಂಬತ್ತೈದು ವರ್ಷದ ವಿಧುರನೂ ವಯೋವೃದ್ಧನೂ ಆದ ವಿಜಾಪುರ ಜಿಲ್ಲೆಯ ಗಲಗಲಿಯ ಮುದ್ಗಲಾಚಾರ್ಯನೊಂದಿಗೆ ವಿವಾಹವಾಯಿತು. ಮದುವೆಯಾದ ಎಂಟು ದಿನಗಳಿಗೆ ಮುದ್ಗಲಾಚಾರ್ಯರು ದಿವಂಗತರಾದರು. ರಮಾಬಾಯಿ ವಿದ್ವತ್ ಶಕ್ತಿ ಕಂಡು ಸಾಯುವ ಮೊದಲು ಐದು ಜನ ಗಂಡು ಮಕ್ಕಳನ್ನು ಕರೆದು ರಮಾಬಾಯಿಗೆ ವಿದ್ಯೆ ಕಲಿಸಿರಿ ಈಕೆಯಿಂದ ನಮ್ಮ ಕುಲ ಉದ್ಧಾರವಾಗುವುದೆಂದು ಹೇಳಿದ್ದರಿಂದ ರಮಾಬಾಯಿಗೆ ಸಾಂಪ್ರದಾಯಿಕವಾದ ಧಾರ್ಮಿಕ ಶಿಕ್ಷಣ ಮನೆಯಲ್ಲಿಯೇ ದೊರೆಯಿತು. ಚತುರಮತಿ, ಸೂಕ್ಷ್ಮಗ್ರಹಿಯೂ ಆದ ಈಕೆ ವಿದ್ವತ್ತು ಪಡೆದಳು. ಆಕೆ ತನಗೊದಗಿದ ವಿದ್ರೋಹಕ್ಕಾಗಿ ಕಣ್ಣೀರು ಹರಿಸಲಿಲ್ಲ. ಅಥವಾ ಪ್ರತಿಭಟಿಸಲಿಲ್ಲ. ತನ್ನ ಪಾಲಿಗೆ ಬಂದ ಬದುಕನ್ನು ಇರುವ ಸ್ಥಿತಿಯಲ್ಲಿಯೇ ಸಾರ್ಥಕಪಡಿಸಿಕೊಳ್ಳಬೇಕೆಂದು ಧೈರ್ಯದಿಂದ ಮುನ್ನಡೆದಳು. ಹರಿಭಕ್ತಿಯ ನೆಲೆಯಿಂದ ಸಾಹಿತ್ಯಿಕವಾಗಿ ಆಧ್ಯಾತ್ಮಿಕವಾಗಿ ಸಾಧನೆ ಮಾಡಿ ಗಲಿಗಲಿ ಅವ್ವನವರಾಗಿ ಬೆಳೆದು ಬಂದಳು.

ಗಲಗಲಿ ಅವ್ವ ಅನೇಕ ವಿದ್ವತ್ ಗೋಷ್ಠಿಗಳಲ್ಲಿ ಚರ್ಚೆಗಳಲ್ಲಿ ಭಾಗವಹಿಸುತಿದ್ದಳೆಂದು ನಿದರ್ಶನಗಳಿವೆ. ಈಕೆ ಶಾಸ್ತ್ರ ವಿಚಾರಗಳನ್ನು ಆಳವಾದ ಅಧ್ಯಯನ ಕೈಗೊಂಡಿದ್ದಳೆಂದು ತಿಳಿದುಬರುತ್ತದೆ. ತನ್ನ ಪಾಂಡಿತ್ಯದಿಂದ ಶಿಷ್ಯರೊಂದಿಗೆ ಮೈಸೂರಿಗೆ ಹೋಗಿ ರಾಜನಿಂದ ಮರ್ಯಾದೆ ಪಡೆದು ಅಲ್ಲೆ ಕೆಲವು ದಿನಗಳ ಕಾಲ ಅರಮನೆಯಲ್ಲಿದ್ದು ಶಿಕ್ಷಣ ನೀಡಿದಳೆಂದೂ ಆಕೆಗೆ ನ್ಯಾಯಶಾಸ್ತ್ರ ಅಭ್ಯಾಸ ಮಾಡಿ ಕರಗತವಾಗಿತ್ತೆಂದು ತಿಳಿಯಲಾಗಿದೆ.

ಉಪಲಬ್ಧವಿರುವ ಆಧಾರಗಳಿಂದ ಗಲಗಲಿ ಅವ್ವನವರೇ ಪ್ರಥಮ ದಾಸ ಮಹಿಳೆ ಎಂದು ಗುರುತಿಸಲಾಗಿದೆ. ಈಕೆ ಕ್ರಿ.ಶ.೧೬೬೫೦ ರಿಂದ ೧೭೩೦ರವರೆಗೆ ೮೦ ವರ್ಷಗಳ ಸಾರ್ಥಕ ಬದುಕು

ನಡೆಸಿದಳು. ಹಲವಾರು ಊರುಗಳನ್ನು ಸಂಚರಿಸಿದಳು. ಈಕೆಯ ಅಂಕಿತ 'ಶ್ರೀರಾಮೇಶ' ಅಥವಾ 'ಶ್ರೀರಮಿಲರಸ' ಗಲಗಲಿ ಅವ್ವ ಭಕ್ತಿಯ ನೆಲೆಯಿಂದ ಕಾವ್ಯ ರಚಿಸಿದಳು. ಈಕೆಯ ಕೃತಿಗಳು ಮುಯ್ಯದ ಹಾಡು, ಮೋರೆಗೆ ನೀರುತಂದ ಹಾಡು, ಶೃಂಗಾರ ತಾರತಮ್ಯ, ಬೀಗರ ಹಾಡು ಹಾಗೂ ಕೀರ್ತನೆಗಳನ್ನು ರಚಿಸಿದ್ದಾಳೆ. ಅವ್ವನ ಕೃತಿಗಳಲ್ಲಿ ಸೇತು ಬಂಧನದ ಹಾಡು ಮತ್ತು ಮಯ್ಯದ ಹಾಡುಗಳು ಬಹಳ ಜನಪ್ರಿಯತೆ ಪಡೆದಿವೆ. ಉತ್ತರ ಕರ್ನಾಟಕದಲ್ಲಿ ಸೀಗೆಹುಣ್ಣಿಮೆ ಮತ್ತು ಗೌರಿ ಹುಣ್ಣಿಮೆಗಳು ಮಹಿಳೆಯರ ಹಬ್ಬಗಳಾಗಿವೆ. ಈ ಸಂದರ್ಭದಲ್ಲಿ 'ಮುಯ್ಯ' ಕೊಡುವ ಹಾಗೂ ತೆಗೆದುಕೊಳ್ಳುವ ಸಂಪ್ರದಾಯವಿದೆ. ವಿವಿಧ ಬಗೆಯ ತಿಂಡಿ ತಿನಿಸುಗಳನ್ನೊಳಗೊಂಡ ಮುಯ್ಯವನ್ನು ಬಂದು ಬಾಂದವರ ಮನೆಗಳಿಗೆ ಒಯ್ದಾಗ ಅವರನ್ನು ಸತ್ಕರಿಸಿ ಗೌರಿಪೂಜೆಗೆ ಅನುವು ಮಾಡಿಕೊಡಬೇಕೆಂಬುದು ಸಂಪ್ರದಾಯ. ಹೀಗೆ ಹೆಂಗಳೆಯರು ಒಟ್ಟಿಗೆ ಕಲೆತಾಗ ಹಾಡು ಕೋಲಾಟ ವಿನೋದ ಚಾಟು ನುಡಿಗಳು ಹೊರಬರುತ್ತವೆ. ಇಂಥ ಸನ್ನಿವೇಶವನ್ನು ಹತ್ತಿರದಿಂದ ಕಂಡಿದ್ದ ಗಲಗಲಿ ಅವ್ವ ಮುಯ್ಯದ ಹಾಡುಗಳನ್ನು ಹರಿಭಕ್ತಿಯ ಪ್ರಕಟಣೆಯಲ್ಲಿ ಬಳಸಿಕೊಂಡಿದ್ದಾಳೆ. ಪೌರಾಣಿಕ ಪಾತ್ರಗಳನ್ನು ಮುಯ್ಯದ ಸಂಪ್ರದಾಯಕ್ಕೆ ಹೊಂದಿಸಿಕೊಂಡು ಈಕೆ ಕೃಷ್ಣ, ರುಕ್ಮಿಣಿ, ಸತ್ಯಭಾಮೆ, ಪಾಂಡವರು, ದ್ರೌಪದಿ, ಸುಭದ್ರೆ ಇಲ್ಲಿನ ಪಾತ್ರಗಳಾಗಿ ಕಂಡುಬರುತ್ತವೆ. ಸುಭದ್ರೆ ಮತ್ತು ದ್ರೌಪದಿಯರು ನೀಡಿದ್ದ ಮುಯ್ಯವನ್ನು ಹಿಂದಿರುಗಿಸಲು ರುಕ್ಮಿಣಿ ಮತ್ತು ಸತ್ಯಭಾಮೆ ಯಾದವ ಪರಿವಾರದೊಡನೆ ಹಸ್ತಿನಾವತಿಗೆ ತೆರಳುತ್ತಾರೆ. ಅಲ್ಲಿ ಅತ್ತಿಗೆ ನಾದಿನಿಯರು ಭಾವ ಮೈದುನರು ಪರಸ್ಪರ ಜರಿಯುವ ಸಂಪ್ರದಾಯವಿದೆ.

ಕೃಷ್ಣನರಸೇರು ಉಟ್ಟ ಪಟ್ಟಾವಳಿಯಬೆಳಕು
ಅಷ್ಟು ಇಷ್ಟೆಂಬ ಮಿತಿಯಿಲ್ಲ
ನಲ್ಲೆ ಸೂರ್ಯನಾಚಿ ಬಿಟ್ಹೋದ[೧೫]

ಗಲಗಲಿ ಅವ್ವ ಶಾಸ್ತ್ರ ವಿಷಯಗಳಲ್ಲಿ ಪರಿಣತೆ ಎನಿಸಿಕೊಂಡಿದ್ದರೂ ಆಕೆಯ ಸಾಹಿತ್ಯದ ಪ್ರೇರಣೆ ಜಾನಪದವೂ ಆಗಿತ್ತೆಂಬುದನ್ನು 'ಮೋರೆಗೆ ನೀರು ತಂದ ಹಾಡು' ಇನ್ನೊಂದು ಸಂಪ್ರದಾಯವನ್ನು ಪ್ರತಿನಿಧಿಸುತ್ತದೆ. ಮದುವೆಯ ಸಮಯದಲ್ಲಿ ಬೀಗರು ಗಂಡಿನ ಮನೆಗೆ ಮೋರೆಗೆ ನೀರು ತರುವ ಸಂಪ್ರದಾಯವಿದೆ. ಈ ಸಂದರ್ಭದಲ್ಲಿ ಈ ಹಾಡುಗಳನ್ನು ಹಾಡುತ್ತಾರೆ. ಇವು ಒಂದು ರೀತಿಯ ಜರಿಯುವ ಹಾಡುಗಳು. ಇದನ್ನು ಗಲಗಲಿ ಅವ್ವ ದೇವತೆಗಳಲ್ಲಿ ಈ ಸಂಪ್ರದಾಯವನ್ನೂ ಕಲ್ಪಿಸಿ ಹಾಡಿದ್ದಾಳೆ.

ಬೀಗರ ಹಾಡುಗಳು ಕೂಡ ಈ ರೀತಿಯವೆ. ರಾಮಾವತಾರ, ಕೃಷ್ಣಾವತಾರಗಳಿಗೆ ಸಂಬಂಧಿಸಿದಂತೆ ಈಕೆ ಈ ಹಾಡುಗಳನ್ನು ರಚಿಸಿದ್ದಾಳೆ. ಈಕೆಯ ಕೃತಿಗಳು ಬಹುಪಾಲು ನಿಂದಾಸ್ತುತಿಗಳಾಗಿವೆ. 'ಹರಿಕಥಾಮೃತಸಾರ'ದಲ್ಲಿ ವಿವರಿಸಲಾಗಿರುವ ದೇವತೆಗಳ ತಾರತಮ್ಯ ಜ್ಞಾನವನ್ನು ತಿಳಿದುಕೊಂಡು

ಕಾಮಕ್ರೋಧಗಳನ್ನು ತೊರೆದು ಪವಿತ್ರ ಜ್ಞಾನವನ್ನು ಪಡೆಯುವುದು ಎಲ್ಲ ತರಹದ ಆಭರಣಗಳನ್ನು ಧರಿಸಿದಂತೆ ಎಂಬುದು ಈ ಕೃತಿಯಲ್ಲಿ ಪ್ರತಿಪಾದಿಸಲಾದ ಮುಖ್ಯ ವಸ್ತು.

ಗಲಿಗಲಿ ಅವ್ವನ ಶಿಷ್ಯೆ ಭಾಗಮ್ಮಳಿಗೆ ಪ್ರಯಾಗಮ್ಮ ಎಂಬ ಪರ್ಯಾಯ ನಾಮವೂ ರೂಢಿಯಲ್ಲಿದ್ದಂತಿದೆ. ಈಕೆಯ ಕೃತಿ ಸಂಖ್ಯೆ ಖಚಿತವಾಗಿ ತಿಳಿಯದು. ಸದ್ಯದಲ್ಲಿರುವ ಈಕೆಯ ಏಕೈಕ ಗ್ರಂಥವೆಂದರೆ ಭಾಗವತ ತೃತೀಯ ಸ್ಕಂದ ಗಲಗಲಿ ಅವ್ವನ ಸಹಚರ್ಯದಲ್ಲಿದ್ದ ಭಾಗಮ್ಮನಿಗೆ ಆಕೆಯ ಪ್ರಭಾವದಿಂದ ಸುಪ್ತವಾಗಿದ್ದ ಕವಿತಾಶಕ್ತಿ ಉದ್ದೀಪನಗೊಂಡಿರಬೇಕು. ಈಕೆಯ ಸೃಜನಶೀಲತೆ ಹೊರ ಹೊಮ್ಮಿದ ಸಂದರ್ಭದ ಬಗ್ಗೆ ಹೀಗೆ ಹೇಳುವುದುಂಟು. ಒಮ್ಮೆ ಭಾಗಮ್ಮ ಗಲಗಲಿ ಅವ್ವನೊಂದಿಗೆ ಕಾಶೀಯಾತ್ರೆಗೆ ಹೋದಾಗ ಕಾಲರಾ ರೋಗಕ್ಕೆ ತುತ್ತಾದಳು. ಆಗ ಅವ್ವ ಭಾಗವತವನ್ನು ಬರೆದರೆ ರೋಗ ನಿವಾರಣೆಯಾಗುತ್ತದೆಂದು ಹೇಳಲಾಗಿ ಭಾಗಮ್ಮ ಈ ಕೃತಿ ರಚನೆ ಮಾಡಿದಳೆಂದು ಪ್ರತೀತಿ ಇದೆ. ಕೃತಿಯ ಆರಂಭದಲ್ಲಿ ಕವಯಿತ್ರಿ ಕೃತಿ ರಚನೆಯ ಸಂದರ್ಭವನ್ನು ತಿಳಿಸುತ್ತಾ

ಕಾಶಿ ಪಟ್ಟಣದಲ್ಲಿ ವಾಸಾದ ದಾಸಿ ಭಾ
ಗಮ್ಮನು ಕಟ್ಟಿದ ಪದವನು
ಭೂಸುರರೆಲ್ಲರು ಉದಾಸೀನ ಮಾಡದೆ
ಲೇಸಾಗಿ ಪದವ ತಿದ್ದುವುದು[೧೬]

ಎಂದು ವಿನಯದಿಂದ ಕೃತಿಯನ್ನು ವಿದ್ವಾಂಸರ ಮುಂದಿಟ್ಟಿದ್ದಾಳೆ. ಕಾಶಿಯಲ್ಲಿ ಬರೆದರೂ ಆರಾಧ್ಯದೈವ ಪಾಂಡುರಂಗನನ್ನು ಭಕ್ತಿಯಿಂದ ಸ್ಮರಿಸಿದ್ದಾಳೆ.

ಪುಂಡರೀಕನ ಪ್ರಭು ಪಾಂಡುರಂಗನ ಪಾದ
ಕಂಡು ವಂದನೆಯ ಮಾಡುವೆನು
ದಂಡಿಸಿ ದೇಹವ ತಾಂಡವ ಕೃಷ್ಣನ
ಕೊಂಡಾಡಿ ಪದನ ಹೇಳುವೆನು[೧೭]

ಗಣಪತಿ ಗುರುಮುನಿಗಳನ್ನು ಪ್ರಾರ್ಥಿಸಿದ ಬಳಿಕ ಕಾವ್ಯ ಸಂಪ್ರದಾಯದಂತೆ ಕೃತಿ ಆರಂಭವಾಗುತ್ತದೆ. ಇಲ್ಲಿನ ಉದ್ದೇಶ ಹರಿಚರಿತೆಯ ನಿರೂಪಣೆ, ದುರ್ಯೋಧನನ ನೀಚ ಮಾತುಗಳನ್ನು ಕೇಳಿದ ವಿದುರ ದೋಷ ಪರಿಹಾರ್ಥ ತೀರ್ಥಯಾತ್ರೆಯಲ್ಲಿದ್ದಾಗ ಮಾರ್ಗಮಧ್ಯದಲ್ಲಿ ಉದ್ಧವನನ್ನು ಹರಿಚರಿತೆಯನ್ನು ಹೇಳುವ ತಂತ್ರವಿದೆ. ಪ್ರತಿ ಧರ್ಮದಲ್ಲಿಯೂ ಅದರದೇ ಆದ ಸೃಷ್ಟಿ ಕಥೆಗಳಿವೆ. ಭಾಗಮ್ಮ ಹರಿಚರಿತೆಯಲ್ಲಿ ವೈದಿಕ ಧರ್ಮದನ್ವಯ ಸೃಷ್ಟಿಕಥೆಯನ್ನು ವಿವರಿಸಿದ್ದಾಳೆ. ಪ್ರಳಯವಾದಾಗ ಕೃಷ್ಣನು ಆಲದೆಲೆಯ ಮೇಲೆ ಹೋಗುವುದು ವೈಷ್ಣವ ಪರಿಕಲ್ಪನೆ. ಹರಿಚರಿತೆಗೆ ಪೂರಕವಾಗಿ ಕರ್ದಮಮುನಿಯ ವೃತ್ತಾಂತ, ದೇವಹೂತಿ ಮಗನಿಗಾಗಿ ಪ್ರಾರ್ಥಿಸುವುದು ಹರಿಯೇ ಆಕೆಯ ಗರ್ಭದಲ್ಲಿ ಕಪಿಲಮುನಿಯಾಗಿ

ಜನಿಸುವುದು ಮೊದಲಾದ ಅಂಶಗಳು ಕೃತಿಯಲ್ಲಿ ನಿರೂಪಿತಗೊಂಡಿವೆ. ಇತರ ಕವಯಿತ್ರಿಯರಂತೆ ಭಾಗಮ್ಮಳು ಸಹ ವಿವಾಹ ವರ್ಣನೆ ಅಡುಗೆಯ ವರ್ಣನೆಯನ್ನು ಮಾಡಿದ್ದಾಳೆ. ವಸ್ತು ಪೌರಾಣಿಕವಾದರೂ ಭಾಗಮ್ಮ ಸಮಕಾಲೀನ ಪ್ರಜ್ಞೆಯಿಂದ ಕಾವ್ಯವನ್ನು ರಚಿಸಿದ್ದಾಳೆ.

ದಾಸಸಾಹಿತ್ಯದ ಮೊದಲ ಮೂರು ಘಟ್ಟಗಳಲ್ಲಿ ಕಂಡುಬಂದ ಶ್ರೇಷ್ಠ ಕೀರ್ತನೆ ರಚನೆಕಾರರಾದ ಹರಿದಾಸರು ಕೊನೆಯ ಅಥವಾ ಆಧುನಿಕ ಘಟ್ಟದಲ್ಲಿ ಅಷ್ಟಾಗಿ ಕಾಣದಿದ್ದರೂ, ವಿಶೇಷವಾಗಿ ೧೭ನೇ ಶತಮಾನದ ಅವಧಿಯಲ್ಲಿ ಹಲವು ವೈಷ್ಣವ ಕವಯಿತ್ರಿಯರು ಹೆಚ್ಚಿನ ಸಂಖ್ಯೆಯಲ್ಲಿ ಕಾಣಸಿಗುತ್ತಾರೆ. ಕರ್ನಾಟಕದ ಎಲ್ಲ ಭಾಗಗಳಲ್ಲೂ ಈ ಕೀರ್ತನಕಾರ್ತಿಯರು ಭಗವದ್ಭಕ್ತಿಯನ್ನು ಸಾರುವ ಕೀರ್ತನೆಗಳನ್ನು, ಸಂಪ್ರದಾಯದ ಹಾಡುಗಳನ್ನು, ಕಥನ ಕವನ, ಸುಳಾದಿ, ಉಗಾಭೋಗಗಳನ್ನು ರಚಿಸತೊಡಗಿ ದಾಸ ಸಾಹಿತ್ಯ ಪರಂಪರೆಯನ್ನು ಉಳಿಸಿ ಬೆಳೆಸಲು ನೆರವಾಗಿರುವುದು ಚರಿತ್ರೆಯ ಗಮನಾರ್ಹ ಸಂಗತಿಯಾಗಿದೆ.

ಆಧುನಿಕ ಯುಗದಲ್ಲಿ ದಾಸರು ರಚಿಸಿದ ಹಾಡುಗಳನ್ನು ಮನೆಯಲ್ಲಿ ಹಾಡಿಕೊಳ್ಳುವ ಹೆಣ್ಣು ಮಕ್ಕಳಿಗೆ ಕಲಿಸುವ ಅಭ್ಯಾಸದಿಂದಾಗಿ ಸಹ ಈ ದಾಸ ಸಾಹಿತ್ಯ ಪುನರುಜ್ಜೀವನಗೊಳ್ಳಲು ಸಹಕಾರಿಯಾಗಿದೆ ಎನ್ನಬಹುದು. ವೈದಿಕ ಸಂಪ್ರದಾಯ ಮನೆಗಳಲ್ಲಿ ನೀಡುವ ಉತ್ತೇಜನ, ಇತರ ವಿದ್ಯಾನ್ಮಾನ ಸೌಕರ್ಯಗಳ ಮೂಲಕ ದಾಸರ ರಚನೆಗಳು ಹೆಚ್ಚು ಹೆಚ್ಚು ಪ್ರಚಾರ ಪಡೆಯಲು ಸಹಾಯಕವಾದವು. ಆದರೆ ಅದಕ್ಕೆ ಮುಂಚೆ ಮನೆಯಲ್ಲಿ ಹೆಣ್ಣು ಮಕ್ಕಳೇ ಹೆಚ್ಚಾಗಿ ಹಬ್ಬ ಹರಿದಿನಗಳಲ್ಲಿ ಇತರ ಮದುವೆ ಸಂಭ್ರಮಗಳ ಸಂದರ್ಭಗಳಲ್ಲಿ ದೇವರನಾಮಗಳನ್ನು ಹಾಡಿ ಅತಿ ಹೆಚ್ಚು ಜನಪ್ರಿಯವಾಗುವಂತೆ ಮಾಡಿದ್ದರ ಜೊತೆಗೆ ಸ್ವತಃ ತಾವೂ ಹಾಡುಗಳನ್ನು ರಚಿಸಿ ದಾಸ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಯನ್ನು ನೀಡಿದರು.

ಹೀಗೆ ಕೃತಿಗಳನ್ನು ರಚನೆ ಮಾಡಿದ ಮಹಿಳೆಯರ್‍ಯಾರು ಶಾಲೆಗೆ ಹೋಗಿಯಾಗಲೀ ಮನೆಯಲ್ಲಾಗಲೀ ವಿದ್ಯೆ ಕಲಿತವರಲ್ಲ. ಹೆಣ್ಣು ಮಕ್ಕಳಿಗೆ ಶಿಕ್ಷಣದ ಅಗತ್ಯವಿಲ್ಲವೆಂದು ಎಲ್ಲ ವರ್ಗದ ಜನರು ಭಾವಿಸಿದ ಕಾಲ ಅದು. ಮಹಿಳೆಯರು ತಮ್ಮ ಗೃಹಕೃತ್ಯದ ಜೊತೆಗೆ ತಾವೂ ಕೇಳಿ ಗ್ರಹಿಸಿದ ಜ್ಞಾನವೇ ಇವರ ಹಾಡಿನ ಸಂಪತ್ತಾಗಿದ್ದಿತು. ಕಟ್ಟು ನಿಟ್ಟಾದ ಸಂಪ್ರದಾಯಸ್ಥ ನಿರ್ಬಂಧಗಳ ಬದುಕಿನೊಳಗಿದ್ದುಕೊಂಡೇ ಅವರು ಸಾಧನೆ ಮಾಡಬೇಕಿತ್ತು. ಇಂತಹ ವಾತಾವರಣದಲ್ಲಿ ಹರಿದಾಸರು ಅಚ್ಚ ಕನ್ನಡದಲ್ಲಿ ಪ್ರಚಾರಕ್ಕೆ ತಂದಿದ್ದ ವೈಷ್ಣವ ಮತದ ಸಿದ್ಧಾಂತ ತತ್ವಗಳನ್ನು ಭಕ್ತಿರಸದ ಹರಹಿನಲ್ಲಿ ರಾಮಾಯಣ, ಮಹಾಭಾರತ, ಭಾಗವತ ಮುಂತಾದ ಪುರಾಣಗಳನ್ನಾಧರಿಸಿ ದಾಸ ಮತ್ತು ಭಗವಂತನ ಕ್ರಮದಲ್ಲಿ ಚಿಂತನೆಗೆ ಒಳಪಡಿಸಿ ತಮ್ಮ ಹಾಡುಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಈ ನಿಟ್ಟಿನಲ್ಲಿ ಕೃತಿ ರಚನೆ ಮಾಡಿದ ಮೊದಲ ಹಂತದವರಲ್ಲಿ ಪ್ರಮುಖ ಕವಯಿತ್ರಿ ಹೆಳವನಕಟ್ಟೆ ಗಿರಿಯಮ್ಮ. ಅನೇಕ ಕೃತಿಗಳನ್ನು ರಚಿಸಿ ಕಾವ್ಯ ಮತ್ತು ಕೀರ್ತನೆ ಎರಡೂ ಪ್ರಕಾರಗಳಲ್ಲಿ ಪ್ರಸಿದ್ಧಿ ಪಡೆದವಳು.

ನರಹರಿತೀರ್ಥರಿಂದ ಆರಂಭಗೊಂಡು ಗೋಪಾಲದಾಸರವರೆಗೆ ಒಂದು ಪರಂಪರೆಯಾಗಿ ಬೆಳೆದು ಬಂದ ದಾಸ ಸಾಹಿತ್ಯದಲ್ಲಿ ಗೋಪಾಲದಾಸರಿಂದ ಅನುಗ್ರಹಿತಳಾದ ಹೆಳವನಕಟ್ಟೆ ಗಿರಿಯಮ್ಮ ಆ ಪರಂಪರೆಯನ್ನು ಮುಂದುವರೆಸಿದ ಭಕ್ತೆ. ಬಾಲ್ಯದಲ್ಲಿಯೇ ದೈವಭಕ್ತಳಾಗಿ, ವಿರಕ್ತಳಾಗಿದ್ದ ಗಿರಿಯಮ್ಮ ಮದುವೆಯಾದ ಮೇಲೂ ಸಂಸಾರ ಸುಖವನ್ನು ಬಯಸದೆ, ಗಂಡನಿಗೆ ಮತ್ತೊಂದು ಮದುವೆಯನ್ನು ಮಾಡಿಸಿ ತನ್ನ ಸಾಧನೆಯಲ್ಲಿ ಮುಂದುವರೆದವಳು. ಇವಳ ಸುತ್ತ ಅನೇಕ ಪವಾಡದ ಕಥೆಗಳು ಪ್ರಚಾರದಲ್ಲಿ ಹಬ್ಬಿವೆ. ಪುಂಗನೂರಿನ ರಾಜಕುಮಾರನು ಕಣ್ಣಿಲ್ಲದೆ ಅಂಧನಾಗಿದ್ದು, ತಿರುಪತಿಯ ಶ್ರೀನಿವಾಸನ ಸೇವೆ ಮಾಡಿ ಒಂದು ಕಣ್ಣನ್ನು ಪಡೆದುಕೊಂಡಿದ್ದನು. ಇನ್ನೊಂದು ಕಣ್ಣಿಗಾಗಿ ಗಿರಿಯಮ್ಮನಲ್ಲಿಗೆ ಹೋಗಲು ಸ್ವಪ್ನದಲ್ಲಿ ಆದೇಶವಾಯಿತು. ಅದರಂತೆ ರಂಗನಾಥನಲ್ಲಿ ಗಿರಿಯಮ್ಮ ಪ್ರಾರ್ಥಿಸಲು ನಂದಾದೀಪದ ಕಾಡಿಗೆಯನ್ನು ಕೊಟ್ಟಳು ಅದನ್ನು ಹಚ್ಚಿಕೊಂಡ ಮೇಲೆ ಅರಸು ಕುಮಾರನಿಗೆ ಕಣ್ಣು ಕಾಣತೊಡಗಿತು. ಅದರ ಕೃತಜ್ಞತೆಗಾಗಿ ದೊರೆ ಕುಮಾರನು ಹೆಳವನಕಟ್ಟೆಯ ರಂಗನಾಥನ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದನು ಎಂದು ಪ್ರತೀತಿ ಇದೆ.

ಗಿರಿಯಮ್ಮ ತನ್ನ ಶುದ್ಧವಾದ ಆಚರಣೆಯಿಂದ ಜೀವನವನ್ನು ಸಾರ್ಥಕ ಮಾಡಿಕೊಳ್ಳಲು ಮೊದಲಿನಿಂದ ಕೊನೆಯವರೆಗೂ ಯತ್ನಿಸಿ ಸಿದ್ಧವನ್ನು ಹೊಂದಿದಳು. ಇದರ ಫಲವಾಗಿ ಆಕೆಯಿಂದ ಕನ್ನಡ ಸಾರಸ್ವತ ಪ್ರಪಂಚಕ್ಕೆ ಘನವಾದ ನೀತಿ ಸಂದಾಯವಾಯಿತು. ರಂಗನಾಥನನ್ನು ಪೂಜಿಸುವಾಗ ಗಿರಿಯಮ್ಮನ ಬಾಯಿಂದ ಸುಂದರವಾದ ಹಾಡುಗಳು ಹೊರಹೊಮ್ಮುತ್ತಿದ್ದವು. ಅವುಗಳನ್ನು ಆಯ್ದುಕೊಂಡು ಬರೆದುಕೊಳ್ಳುವವರಿಲ್ಲದೇ ಅನೇಕ ಹಾಡುಗಳು ಮರೆಯಾಗಿವೆ. ಈಗ ಸಿಕ್ಕಿರುವ ಹಾಡುಗಳು ಗಿರಿಯಮ್ಮನ ಜೀವನ ಸಾಧನೆಯನ್ನು ವಿಶಾಲ ಕವಿ ಹೃದಯವನ್ನು ಪ್ರತಿಬಿಂಬಿಸುವಂತಿವೆ. ವೈರಾಗ್ಯದಿಂದ ಪರಿಪಕ್ವಗೊಂಡ ಕವಿ ಹೃದಯದಿಂದ ಹರಿದುಬಂದ ಈ ಹಾಡುಗಳು ರಸಪೂರ್ಣವಾಗಿವೆ. ಭಕ್ತಿಯ ಆಗರದಂತಿವೆ. ಈಕೆ ಕನ್ನಡದ ಶ್ರೇಷ್ಠ ಕವಯಿತ್ರಿಯೂ ಕೀರ್ತನಕಾರಳೂ ಆಗಿ 'ಕಲ್ಪನಾ ಕುಶಲ ಕಾಮಿನಿ' ಎಂಬ ಖ್ಯಾತಿಗೆ ಭಾಜನಳಾಗಿ 'ಕರ್ನಾಟಕದ ಮೀರಾ' ಎಂದು ಹೆಸರಾಗಿದ್ದಾಳೆ.

೧೮ನೇ ಶತಮಾನದ ಹರಿದಾಸ ಸಾಹಿತ್ಯ ಪರಂಪರೆಯಲ್ಲಿ ಹೆಳವನಕಟ್ಟೆ ಗಿರಿಯಮ್ಮ ಮಹತ್ವದ ಹರಿದಾಸಳಾಗಿ ಕಂಡುಬರುತ್ತಾಳೆ. ವೈಷ್ಣವ ಕವಯಿತ್ರಿಯರಲ್ಲಿ ಗಿರಿಯಮ್ಮ ವಿಷ್ಣುಭಕ್ತೆಯಾಗಿದ್ದರೂ ಹರಿಹರರಲ್ಲಿ ಭೇದವನ್ನೆಣಿಸದ ಸದ್ಭಕ್ತೆಯಾಗಿ ಸಮಾನಭಾವ ತಳೆದವಳು. ತನ್ನ ಆರಾಧ್ಯ ದೇವ ಹೆಳವನಕಟ್ಟೆ ರಂಗನಾಥ ಹಾಗೂ ತವರೂರಿನ ಮನೆ ದೇವರಾದ ಮೈಲಾರಲಿಂಗ ದೇವನನ್ನು ಕುರಿತು ಸ್ತುತಿಸಿದ್ದಾಳೆ. ಅವಳಿಗೆ ಹೆಳವನಕಟ್ಟೆ ರಂಗ ಮತ್ತು ಮೈಲಾರಲಿಂಗಗಳಲ್ಲಿ ಭೇದವಿಲ್ಲ. ಭಾಗವತ ಸಂಪ್ರದಾಯದಂತೆ ಇಬ್ಬರನ್ನು ಕೊಂಡಾಡಿದ್ದಾಳೆ. ಗಿರಿಯಮ್ಮ ತನ್ನ ಆರಾಧ್ಯ ದೈವವಾದ 'ಹೆಳವನಕಟ್ಟೆ ರಂಗಯ್ಯ'ನ ಅಂಕಿತದಲ್ಲಿ ಅನೇಕ ಕೀರ್ತನೆಗಳನ್ನು ರಚಿಸಿರುವುದಲ್ಲದೆ ಉದ್ದಾಳಿಕನ ಕಥೆ, ಶಂಕರ ಗಂಡನ

ಹಾಡು, ಸೀತಾಕಲ್ಯಾಣ, ಚಂದ್ರಹಾಸನ ಕಥೆ, ಬ್ರಹ್ಮಕೊರವಂಜಿ, ಲವಕುಶರ ಕಾಳಗ ಮುಂತಾದ ಕಥನ ಕಾವ್ಯಗಳನ್ನು ರಚಿಸಿದ್ದಾಳೆ. ಅಪೂರ್ಣವಾದ ಕೆಲವು ಕೃತಿಗಳು ದೊರೆತಿವೆ. ಆತ್ಮನಿವೇದನೆ ಭಕ್ತಿ, ಮಧುರಭಕ್ತಿ, ವಾತ್ಸಲ್ಯಭಕ್ತಿಗಳನ್ನು ಇವಳ ಹಾಡುಗಳಲ್ಲಿ ಹೆಚ್ಚಾಗಿ ಕಾಣಬಹುದು. ಗಿರಿಯಮ್ಮನ ಕೃತಿಗಳಲ್ಲೆಲ್ಲಾ ಹೆಚ್ಚು ಜನಪ್ರಿಯವೂ ಉತ್ತಮವೂ ಆದ ಕೃತಿ 'ಚಂದ್ರಹಾಸನ ಕಥೆ' ಸಾಂಗತ್ಯದಲ್ಲಿ ರಚನೆಯಾಗಿದೆ. ನಾಲ್ಕು ಸಂಧಿಗಳ ಈ ದೀರ್ಘ ಕಾವ್ಯದಲ್ಲಿ ಅವಳ ಭಕ್ತಿ ಮತ್ತು ಕಾವ್ಯಶಕ್ತಿ ಸೊಗಸಾಗಿ ಅಭಿವ್ಯಕ್ತಗೊಂಡಿದೆ. ಇದಲ್ಲದೆ ಉಪಲಬ್ಧವಿಲ್ಲದಿರುವ ಗಜೇಂದ್ರ ಮೋಕ್ಷ, ಗಿಳಿಪಾರಿಜಾತ, ಕಾಲೀಯಮರ್ಧನ ಮುಂತಾದವುಗಳನ್ನು ಗಿರಿಯಮ್ಮ ರಚಿಸಿದ್ದಳೆಂಬ ಪ್ರತೀತಿ ಇದೆ. ಎಲ್ಲ ಕೃತಿಗಳಲ್ಲೂ ಭಕ್ತಿಯೇ ಪ್ರಧಾನವಾಗಿದೆ. ತಾನು 'ದಾಸರ ದಾಸರ ದಾಸಿ' ಎಂಬ ನಮ್ರತೆಯನ್ನೇ ಎಲ್ಲೆಡೆಯೂ ಮೆರೆದಿದ್ದಾಳೆ. ಗಿರಿಯಮ್ಮ ಹೆಚ್ಚು ಓದು ಬರಹ ಕಲಿತವಳಲ್ಲವಾದರೂ ಶುದ್ಧ ದೇಸಿ ಶೈಲಿಯಲ್ಲಿಯೇ ಕೃತಿಗಳನ್ನು ರಚಿಸಿದ್ದಾಳೆ. ಭಾವರಸ ಪುಷ್ಟಿ ಅಲಂಕಾರ ಸೌಂದರ್ಯಗಳು ಸಹಜವಾಗಿಯೇ ಮೂಡಿ ಬಂದು ಅವಳ ಕೃತಿಗಳನ್ನು ಸರಳ ಸುಂದರ ಕಾವ್ಯಗಳನ್ನಾಗಿಸಿವೆ. 'ಕೃಷ್ಣ ಕೊರವಂಜಿ'ಯಲ್ಲಿ ಕೃಷ್ಣ ಕೊರವಂಜಿಯಾಗಿ ತನ್ನನ್ನೆ ವರಿಸಬೇಕೆಂದಿರುವ ರುಕ್ಮಿಣಿಗೆ ಕಣಿ ಹೇಳುವ ಕಥೆ ಇಲ್ಲಿ ಪರಮಾತ್ಮನ ವರ್ಣನೆಯನ್ನು ಭಕ್ತಿ ಪೂರ್ವಕವಾಗಿ ಮಾಡಲಾಗಿದೆ. 'ಬ್ರಹ್ಮ ಕೊರವಂಜಿ' ಸೆರೆಯಲ್ಲಿರುವ ದೇವಕಿಗೆ ಬ್ರಹ್ಮಕೊರವಂಜಿಯಾಗಿ ಬಂದು ಶಕುನ ಹೇಳಿದ್ದು ಈ ಎರಡೂ ಪೌರಾಣಿಕ ಆವರಣವಿರುವ ಕಥೆಗಳು 'ಲವಕುಶರ ಕಾಳಗ'ದಲ್ಲಿ ಶೂರ್ಪನಖಿ ಕೊರವಂಜಿಯಾಗಿ ಬಂದು ಸೀತೆಯಿಂದ ರಾವಣನ ಚಿತ್ರವನ್ನು ಬರೆಸಿ ರಾಮನು ಅವಳ ಪರಿತ್ಯಾಗಕ್ಕೆ ಕಾರಣವಾಗುವ ನವೀನ ತಂತ್ರವನ್ನು ಬಳಸಲಾಗಿದೆ. ೮೭ ನುಡಿಗಳ 'ಸೀತಾ ಕಲ್ಯಾಣ' ಸೀತಾರಾಮರ ವಿವಾಹದ ವರ್ಣನೆಯನ್ನು ರಾಮನ ಅವತಾರದ ವರ್ಣನೆಯನ್ನು ಒಳಗೊಂಡಿದೆ. ರಾಮನ ದಶಾವತಾರದ ವರ್ಣನೆಯಲ್ಲಿ ಭಕ್ತಿ ವಿನಮ್ರತೆಗಳಿವೆ. 'ಸೀತಾ ಕಲ್ಯಾಣ'ದಲ್ಲಿ ಕಥೆ ಹಳೆಯದಾದರೂ ಆ ಕಾಲದ ವಿವಾಹದ ಚಿತ್ರಣ ನೋಡಲು ಸಿಗುತ್ತದೆ. ವೈಷ್ಣವ ಕವಿಯಿತ್ರಿಯಾದ ಗಿರಿಯಮ್ಮ ಪರಮತ ಸಹನೆಯಿಂದ 'ಶಂಕರಗಂಡನ ಹಾಡು' ಎಂಬ ಕಾವ್ಯ ಬರೆದಿರುವುದು ವಿಶೇಷ. ಈ ಕಾವ್ಯದಲ್ಲಿ ರತಿ ಶಿವನ ತಂಗಿ. ತಂಗಿಯನ್ನು ನೋಡಲು ಬಂದ ಶಿವನನ್ನು ಮನ್ಮಥ ಹಾಸ್ಯ ಮಾಡುತ್ತಾನೆ. ಶಿವ ಕಾಮನ ಗರ್ವಭಂಗ ಪಡಿಸುವುದು ಈ ಕಾವ್ಯದ ಪ್ರಧಾನ ವಸ್ತು. ಹಾಗೂ ಲಕ್ಷ್ಮೀಶ ಕವಿಯ 'ಜೈಮಿನಿ ಭಾರತ'ವನ್ನು ಆಧರಿಸಿದ ನಾಲ್ಕು ಸಂಧಿಯ ಸಾಂಗತ್ಯದ ಕೃತಿ 'ಚಂದ್ರಹಾಸನ ಕಥೆ'ಯನ್ನು ದೃಷ್ಟಾಂತ ಕಥೆಗಳ ಮೂಲಕ ಮನಮುಟ್ಟುವಂತೆ ಹೇಳಿದ್ದಾಳೆ. 'ಕಾವ ಕೊಲ್ಲುವು ಶ್ರೀ ಹರಿಯಲ್ಲದೆ : ಭೂವಲಯದೊಳು ಬೇರುಂಟೆ' ಎಂಬುದು ಕೃತಿಯ ಆಶಯ. ಈ ಎಲ್ಲ ಕೃತಿಗಳಲ್ಲೂ ಹರಿಯ ಮಹಿಮೆಯನ್ನು ಅಪಾರ ಭಕ್ತಿಯಿಂದ ವರ್ಣಿಸಲಾಗಿದೆ. 'ಉದ್ದಾಳಿಕನ ಕಥೆ'ಯಲ್ಲಿ ಸ್ತ್ರೀ ಹೃದಯ ಬಿಂಬಿತವಾಗಿದೆ. ಸಂಸಾರದ ಸುಖದುಃಖಗಳ ಅನುಭವದಿಂದ ಸುಸಜ್ಜಿತವಾದ ಹೆಣ್ಣಿನ ಅಂತಃಕರಣದಲ್ಲಿ ಮೂಡಿ ನಿಂತಿದೆ. ಈ ಕೃತಿಯ ಮೂಲಕ 'ಪುತ್ರನಿಲ್ಲದೆ ಸದ್ಗತಿಯಿಲ್ಲ' ಎಂಬ ಎಂಬ ಶ್ರುತಿ ತತ್ವವನ್ನು

ಸಾರಹೊರಟ ಗಿರಿಯಮ್ಮ ಹೊನ್ನಮ್ಮನಷ್ಟು ಮುಂದುವರಿದ ವಿಚಾರದವಳಲ್ಲ. ಗಿರಿಯಮ್ಮನೂ ಭಕ್ತೆ, ಹೊನ್ನಮ್ಮನೂ ಭಕ್ತೆ ಆದರೆ ಹೊನ್ನಮ್ಮನ ಭಕ್ತಿಯಲ್ಲಿ ವಾಸ್ತವಾಂಶಗಳಿವೆ; ಗಿರಿಯಮ್ಮನಿಗೆ ವಾಸ್ತವತೆಗಿಂತ ಭಾವುಕತೆಯಲ್ಲಿ ಹೆಚ್ಚು ವಿಶ್ವಾಸ. ಅವಳು ಹಿರಿಯ ದಾಸರು ಅನುಸರಿಸಿದ ಸರ್ವಸಮರ್ಪಣಭಾವ ಮಾರ್ಗವನ್ನೇ ಅನುಸರಿಸಿ ನಡೆದವಳು. ಹೊನ್ನಮ್ಮನ ಪ್ರಭಾವ ಈಕೆಯ ಕಾವ್ಯಗಳ ಮೇಲೆ ದಟ್ಟವಾಗಿ ಬೀರಿರುವುದನ್ನು ಗುರುತಿಸಬಹುದು. ಹೊನ್ನಮ್ಮನಂತೆ ಗಿರಿಯಮ್ಮನೂ ಪುರಾಣೇತಿಹಾಸಗಳನ್ನು ಓದಿಕೊಂಡಿರಬಹುದು. ಈಕೆಯ ಸರಳ ದೇಸಿಯ ಕಾವ್ಯ ಸೌಂದರ್ಯ ಜನಸಾಮಾನ್ಯರ ಮನಸ್ಸನ್ನು ಸೆರೆಹಿಡಿಯುತ್ತದೆ.

ಒಟ್ಟಿನಲ್ಲಿ ಗಿರಿಯಮ್ಮನ ಎಲ್ಲ ಕೃತಿಗಳನ್ನು ಅವಲೋಕಿಸಿದಾಗ ಈಕೆಗೆ ರಾಮಾಯಣ, ಮಹಾಭಾರತ, ಭಾಗವತಗಳನ್ನು ಆಳವಾಗಿ ಅಭ್ಯಾಸ ಮಾಡಿದ್ದಳೆಂಬುದು ವಿಧಿತವಾಗುತ್ತದೆ. 'ವೇದಾಂತ ವೇದ್ಯ ತತ್ವಜ್ಞಾನ ಕಥೆಯನ್ನು ಪಾದ ಪಂಕಜಯುಗಳದಲಿ ನೋಡಿ ಮಾಡಿದೆನು' ಎಂದು ಸ್ವತಃ ಕವಯಿತ್ರಿಯೇ ಹೇಳಿಕೊಂಡಿರುವುದನ್ನು ಗಮನಿಸಿದರೆ ಈ ಮಾತು ಸ್ಪಷ್ಟವಾಗುತ್ತದೆ. ಗಿರಿಯಮ್ಮ ಸಾಂಗತ್ಯದಲ್ಲಿ ಸುಂದರವಾದ ಕಾವ್ಯಗಳನ್ನು ರಚಿಸಿ ಉತ್ತಮ ಕವಯಿತ್ರಿಯಾಗಿದ್ದಾಳೆ. ಈಕೆ ತನಗೆ ಗೊತ್ತಿಲ್ಲದ್ದನ್ನು ಬರೆದು ಕವಯಿತ್ರಿಯಾಗಲಾರದೇ ಪರಮಾತ್ಮನ ಸನ್ನಿಧ್ಯಕ್ಕಾಗಿ ಹಾರೈಸಿ ರಚಿಸಿದವುಗಳು. ಈಕೆ ಬರೆದುದೆಲ್ಲ ಜೀವನವನ್ನು ಕಳೆದುದೆಲ್ಲ ಹೆಳವನಕಟ್ಟೆ ರಂಗನಾಥನಿಗಾಗಿ, ಆತನ ಕರುಣೆಗಾಗಿ ಅದರಿಂದ ಗಿರಿಯಮ್ಮನ ಬದುಕು ಸಾರ್ಥಕ ಪಡೆಯಿತು ಮತ್ತು ಕಾವ್ಯ ಸಿದ್ಧಿಯನ್ನು ಹೊಂದಿತು.

ದಾಸ ಸಾಹಿತ್ಯದಲ್ಲಿ ಭಕ್ತಿಗೆ ಪ್ರಧಾನ ಸ್ಥಾನ. ಅಲ್ಲಿಯ ಭಾವ, ರಸ ಎಲ್ಲವೂ ಭಕ್ತಿಯೆ, ಉಳಿದದ್ದೆಲ್ಲಾ ಇದಕ್ಕೆ ಪೂರಕ ಮಾತ್ರ ಗಿರಿಯಮ್ಮ ಸಂಸಾರದಲ್ಲಿ ವಿರಕ್ತಳಾಗಿ, ಪರಮಾತ್ಮನ ಭಕ್ತಿಯಲ್ಲಿಯೇ ಬದುಕು ಸವೆಸಿದ ಮಹಾತ್ಮಳು. ಅವಳ ಕೃತಿಗಳಲ್ಲಿರುವುದೆಲ್ಲಾ ಹರಿಭಕ್ತಿ ನಿವೇದನೆಯೇ. ಅವಳು ಆರಿಸಿಕೊಂಡ ವಸ್ತುಗಳೆಲ್ಲಾ ಒಂದಲ್ಲ ಒಂದು ರೀತಿಯಲ್ಲಿ ದೇವರಿಗೂ ಭಕ್ತರಿಗೂ ಸಂಬಂಧಪಟ್ಟಿದ್ದೇ. ಲೌಕಿಕ ಸಂಗತಿಗಳಲ್ಲಿ ಆಕೆ ಆಸಕ್ತಳಲ್ಲ. ಹೀಗಾಗಿ ಅವಳ ಕೃತಿಗಳಲ್ಲಿ ಭಕ್ತಿರಸವೇ ಪ್ರಧಾನ. ತಾನು ಹೆಚ್ಚು ತಿಳಿದವಳಲ್ಲ. ಹರಿಕೃಪೆಯಿಂದ ಈ ರಚನೆ ಸಾಧ್ಯವಾಗಿದೆ ಎಂಬ ನಮ್ರತೆ ಅವಳಲ್ಲಿದೆ. ಪಂಡಿತೆಯಲ್ಲದ ಆಕೆಯ ಕೃತಿಗಳಲ್ಲಿ ಸಹಜವಾಗಿಯೇ ಹಲ ಕೆಲವು ಲೋಪದೋಷಗಳು ಕಾಣಸಿಗುತ್ತವೆ. ಜನ ಸಾಮಾನ್ಯರಿಗಾಗಿ ಅದರಲ್ಲೂ ಹೆಂಗಸರು ಹಾಡಿಕೊಳ್ಳಲು ಅನುಕೂಲವಾಗುವಂತೆ ರಚಿತವಾಗಿರುವ ಭಕ್ತಿ ಪ್ರಧಾನವಾದ ಈ ರಚನೆಗಳಲ್ಲಿ ಹೆಚ್ಚಿನದ್ದನ್ನು ನಿರೀಕ್ಷಿಸುವುದು ಸರಿಯಾಗಲಾರದು.

"ಗಿರಿಯಮ್ಮ ಭಕ್ತಿಯಿಂದ ಬರೆದ ಈ ಹಾಡುಗಳಾಗಲೀ ಕಥೆಗಳಾಗಲೀ ಪಂಡಿತರನ್ನು ಮೆಚ್ಚಿಸಲಿಕ್ಕಾಗಿಯೋ ರಾಜರಿಂದ ಮನ್ನಣೆ ಪಡೆಯಲಿಕ್ಕಾಗಿಯೋ ರಚಿತವಾದವುಗಳಲ್ಲ. ಅವಳು ಭಗವಂತನನ್ನು ಅರ್ಚಿಸುವಾಗ ಹೊಮ್ಮಿದ ಸಹಜ ಗೀತೆಗಳು ಅವಳ ಹಾಡುಗಳು... ೧೮ನೇ ಶತಮಾನದ

ಪೂರ್ವಾರ್ಧದಲ್ಲಿ ಜೀವಿಸಿದ್ದು ವಿವಾಹಿತಳಾಗಿ ತನಗಿದ್ದ ಹಲವು ಪರಿಮಿತಿಗಳ ನಡುವೆಯೇ ತನ್ನ ಸಹಜ ಪ್ರತಿಭೆ, ಭಕ್ತಿಗಳಿಂದ ಹಾಡಿರುವ ಗಿರಿಯಮ್ಮನ ಈ ಹಾಡುಗಳಿಗೆ ಕನ್ನಡ ಭಕ್ತಿ ಸಾಹಿತ್ಯದಲ್ಲಿ ಒಂದು ವಿಶಿಷ್ಟವಾದ ಸ್ಥಾನವಿದೆ." - ಟಿ.ಕೆ.ಇಂದುಬಾಯಿ.

"ಗಿರಿಯಮ್ಮ ಒಂದು ಸಾಮಾನ್ಯ ಕುಟುಂಬದ ಗೃಹಿಣಿಯಾಗಿದ್ದಾಳೆ. ಕಾರಣ ಅವಳ ಕೃತಿಗಳಲ್ಲಿಯಾಗಲಿ ಕೀರ್ತನೆಗಳಲ್ಲಿಯಾಗಲಿ ಪಾಂಡಿತ್ಯಕ್ಕೂ ಅಪ್ರತಿಮವಾದ ಪ್ರತಿಭೆಗೂ ನಾವು ಹುಡುಕಾಟ ಮಾಡಬೇಕಾಗಿಲ್ಲ. ಸಾಮಾನ್ಯ ಜನತೆಗೆಂದು ಬರೆದ ಸಾಮಾನ್ಯ ಭಕ್ತ ಕವಯಿತ್ರಿ ಅವಳಾಗಿದ್ದಾಳೆ. ಆದರೂ ಅಂದಿನ ಸಾಮಾಜಿಕ ಪರಿಸರದಲ್ಲಿ ಸಾಮಾನ್ಯ ಸ್ತ್ರೀಯೋರ್ವಳು ಅಭಿವ್ಯಕ್ತಿಯ ಈ ಸ್ವಾತಂತ್ರ್ಯವನ್ನು ವಹಿಸಿದುದು ಹೆಚ್ಚೆಂದೇ ತೋರುತ್ತದೆ. ಆದ್ದರಿಂದಲೇ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಗಿರಿಯಮ್ಮನ ಸ್ಥಾನ ಮಹತ್ವದ್ದಾಗಿದೆ" - ಕಾವ್ಯಪ್ರೇಮಿ.

"ಗಿರಿಯಮ್ಮನ ಕೃತಿಗಳನ್ನು ಪರಿಶೀಲಿಸಿದಾಗ ಸರಳವೂ ಸುಲಭವೂ ಆದ ಶೈಲಿ ಈಕೆಯದೆಂದು ತಿಳಿಯುತ್ತದೆ. ತೊಡಕಿನದಾದ ವರ್ಣನೆಗಳು, ಅಲಂಕಾರಗಳು ಇಲ್ಲವೆ ದೇಶೀಯ ಛಂದಸ್ಸಿನಲ್ಲಿ ಬರೆದ ಈಕೆ ಸಾಮಾನ್ಯ ಜನರಿಗಾಗಿಯೇ ಕೃತಿರಚಿಸಿದಂತಹವಳು. ಈಕೆಯ ಕೃತಿಗಳಲ್ಲಿ ಭಕ್ತಿಯ ತೀವ್ರತೆಯೇ ಹೆಚ್ಚಾಗಿ ಕಂಡುಬರುತ್ತದೆಯೇ ಹೊರತು ವಿದ್ವತ್ತಲ್ಲ. ಸಮಕಾಲೀನ ಸಮಾಜದ ಆಚಾರ ವಿಚಾರ, ನಂಬಿಕೆ ಪದ್ಧತಿಗಳು ಕಾವ್ಯದಲ್ಲಿ ಸಂದರ್ಭೋಚಿತವಾಗಿ ಸಮಾವೇಶಗೊಂಡಿವೆ. ಈಕೆಯ ಕಾವ್ಯಗಳಲ್ಲಿ ನೇರ ನಿರೂಪಣೆ. ಸ್ವಾರಸ್ಯಕರವಾದ ಸಂಭಾಷಣೆಗಳಿವೆ. ಹೃದಯವಂತಿಕೆ ಮತ್ತು ಸಾಮಾಜಿಕ ಪ್ರಜ್ಞೆಯಿರುವ ಈಕೆ ವೈಷ್ಣವ ಭಕ್ತಿಪಂಥದ ಕೃತಿಕಾರರಲ್ಲಿ ಪ್ರಮುಖ ಸ್ಥಾನ ಪಡೆದಿದ್ದಾಳೆ" - ಅಕ್ಕಮಹಾದೇವಿ

ಈ ಮೂರು ಅಭಿಪ್ರಾಯಗಳು ಹೆಚ್ಚು ಕಡಿಮೆ ಒಂದೇ ರೀತಿಯಾಗಿದ್ದು ಗಿರಿಯಮ್ಮನ ಸಾಧನೆ ಮತ್ತು ಸ್ಥಾನವನ್ನು ನಿರ್ದೇಶಿಸುತ್ತವೆ.

ಗಿರಿಯಮ್ಮ ಸಂಸಾರದಲ್ಲಿ ವಿರಕ್ತಳಾಗಿ ಭಗವಂತನ ಭಕ್ತಿಯಲ್ಲಿಯೇ ಬದುಕನ್ನು ಸಾಗಿಸಿದವಳು. ಲೌಕಿಕ ವಿಚಾರಗಳನ್ನು ಅವಳು ಹೇಳಿಲ್ಲ. ಅವಳ ಕೃತಿಯಲ್ಲಿರುವುದೆಲ್ಲಾ ಹರಿಭಕ್ತಿಯ ನಿವೇದನೆಯ ಪುರಾಣ, ರಾಮಾಯಣ, ಮಹಾಭಾರತ, ಭಾಗವತ ಅವಳಿಗೆ ಚೆನ್ನಾಗಿ ತಿಳಿದಿದೆ. ಲಕ್ಷ್ಮೀಶನ ಪ್ರಭಾವ ದಟ್ಟವಾಗಿ ಬೀರಿದೆ. ಮತ್ತು ಕುಮಾರವ್ಯಾಸರನ್ನು ಅಭ್ಯಾಸ ಮಾಡಿರಬಹುದು. ತಕ್ಕಮಟ್ಟಿಗೆ ದೇಶ ಸಂಚಾರವನ್ನು ಕೈಗೊಂಡಿರುವಂತೆ ಭಾಸವಾಗುತ್ತದೆ. ಅವಳ ತೌರುಮನೆಯ ದೇವರು ಮೈಲಾರಲಿಂಗ. ಹಾಗಾಗಿ ಅವಳಲ್ಲಿ ಹರಿಹರಲ್ಲಿ ಬೇಧವಿಲ್ಲದೆ ಸಮನ್ವಯ ಭಾವವನ್ನು ಕಾಣಬಹುದು. 'ಈತ ಲಿಂಗದೇವ ಶಿವನು ಆತ ರಂಗಧಾಮ ವಿಷ್ಣು' ಎಂದು ಹಾಡಿದ್ದಾಳೆ. ಈ ಹಿನ್ನೆಲೆಯಲ್ಲಿ ಗಿರಿಯಮ್ಮ ದೇವೋನ್ಮಾದದಲ್ಲಿ ಹುಟ್ಟಿ ಬೆಳೆದು ಆವೇಶ ಬಲದಿಂದ ತನ್ನ ಕೃತಿಗಳನ್ನು ರಚಿಸಿರಬೇಕೆಂದು ತೋರುತ್ತದೆ ಎಂಬ ಮಾತು

ಗಿರಿಯಮ್ಮನ ಸಾಧನೆಗೆ ಅನ್ಯಾಯವೆಸಗಿದಂತಾಗುತ್ತದೆ. ಅವಳ ಸಾಹಿತ್ಯ ಕೇವಲ ಉನ್ಮಾದ ಅಥವಾ ಆವೇಶವಲ್ಲ "ತನ್ನ ಕಾಲದ ಒಬ್ಬ ಪವಾಡ ಪುರುಷಳಂತಿಲ್ಲ ಗಿರಿಯಮ್ಮ ಇವಳೊಬ್ಬಳೇ ಕಥನ ಕಲೆಯ ಕಂಪನ್ನು ಅಷ್ಟಿಷ್ಟು ತೋರಬಲ್ಲವಳಾಗಿದ್ದಾಳೆ" ಈಕೆ ಹೊನ್ನಮ್ಮನಿಗಿಂತಲೂ ಉತ್ತಮ ಕವಯಿತ್ರಿಯೆಂದು ತೋರುತ್ತದೆ' ಎಂಬಂಥ ಮಾತುಗಳು ಸತ್ಯಕ್ಕೆ ಹತ್ತಿರವಾಗುವಂಥವು.

ಪ್ರಾಚೀನ ಕನ್ನಡ ಸಾಹಿತ್ಯವನ್ನು ಪರಿಶೀಲಿಸುವಾಗ ನಾವು ಮತ್ತೆ ಮತ್ತೆ ಕೇಳುವ ಕವಯಿತ್ರಿಯರ ಹೆಸರುಗಳೆಂದರೆ ಅಕ್ಕಮಹಾದೇವಿ, ಹೊನ್ನಮ್ಮ ಮತ್ತು ಗಿರಿಯಮ್ಮ. ಆದರೆ ಮೊದಲ ಇಬ್ಬರಿಗೆ ಸಿಕ್ಕಂತಹ ಜನಪ್ರಿಯತೆ, ಹೆಸರು, ಪ್ರಚಾರ ಗಿರಿಯಮ್ಮನಿಗೆ ಸಿಕ್ಕಿಲ್ಲ ಅಕ್ಕಮಹಾದೇವಿ ವ್ಯಕ್ತಿತ್ವದಿಂದಲೂ, ಕಾವ್ಯ ಶಕ್ತಿಯಿಂದಲೂ, ಆಧ್ಯಾತ್ಮ ಕ್ಷೇತ್ರದಲ್ಲಿ ಸಾಧಿಸಿದ ಮೇಲ್ಮೆಯಿಂದಲೂ ಬಹು ಹಿರಿಯಳು ನಿಜ. ಅದರೂ ಅವಳಿಗೆ ಬಹುದೊಡ್ಡ ಒಂದು ಚಳುವಳಿಯ ಗುಂಪಿನ ಬೆಂಬಲವಿತ್ತು (Mass Movement) ಎಂಬುದನ್ನು ಮರೆಯುವಂತಿಲ್ಲ. ಹೊನ್ನಮ್ಮನಿಗೆ ರಾಜಾಶ್ರಯವಿದ್ದು, ವಿದ್ಯಾಭ್ಯಾಸ ದೊರೆತದ್ದರಿಂದ ಅವಳ ಕಾವ್ಯಕ್ಕೊಂದು ರಾಜಮನ್ನಣೆ, ಸ್ಥಾನ ದೊರೆಯಿತು. ಗುಂಪಿನ ಬೆಂಬಲ, ರಾಜಾಶ್ರಯ ಎರಡೂ ಇಲ್ಲದವಳು ಗಿರಿಯಮ್ಮ. ನಿಜವಾಗಿ ಇವಳಿಗೆ ಸಲ್ಲಬೇಕಾದಷ್ಟು ಗೌರವ ಪ್ರಚಾರಗಳು ದೊರೆತಿಲ್ಲ. ಸುಮಾರು ಎರಡು ಶತಕಗಳಿಂದ ಹಿಂದೆ ಸಾಮಾನ್ಯ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿ, ಓದು ಬರಹಗಳಿಲ್ಲದಿದ್ದರೂ ತನ್ನ ಸಾಧನೆ, ಅನುಭವ, ಆಸಕ್ತಿಗಳಿಂದ ಭಕ್ತಿಮಾರ್ಗದಲ್ಲಿ ನಡೆದು ಕಾವ್ಯಶಕ್ತಿಯನ್ನು ಗಳಿಸಿದ್ದು, ಸಾಮಾನ್ಯ ವಿಷಯವಲ್ಲ. ಅಕ್ಕಮಹಾದೇವಿಯಂತೆ ಈಕೆಯೂ ಬಾಲ್ಯದಿಂದಲೇ ವಿರಕ್ತಳೂ ದೈವಭಕ್ತಳೂ ಆಗಿದ್ದರೂ ಅಕ್ಕಮಹಾದೇವಿಯಂತೆ ಒತ್ತಾಯಕ್ಕೆ ಮಣಿದು ಮದುವೆ ಆಗಬೇಕಾಯಿತು. ಅಕ್ಕನಂತೆ ಗಂಡನನ್ನು ತೊರೆದು ಮನೆಬಿಟ್ಟು ಹೋಗದೆ, ತನಗೆ ಸಂಸಾರದಲ್ಲಿ ಆಸಕ್ತಿ ಇಲ್ಲ ಎಂಬುದನ್ನು ತಿಳಿಸಿ ಗಂಡನಿಗೆ ಇನ್ನೊಂದು ಮದುವೆ ಮಾಡಿಸಿ ಗಂಡನ ಮನೆಯಲ್ಲಿದ್ದುಕೊಂಡೇ ತನ್ನ ಆಧ್ಯಾತ್ಮ ಸಾಧನೆಯನ್ನು ಮುಂದುವರೆಸಿದಳು. ತನ್ನ ಊರ ಜನರಿಗೆ ಬೇಕಾದವಳಾಗಿ ತನ್ನಿಂದಾದ ರೀತಿಯಲ್ಲಿ ಸಹಾಯ ನೀಡುತ್ತಾ ರಂಗನಾಥ ಮತ್ತು ಮೈಲಾರಲಿಂಗರಲ್ಲಿ ಭೇದವೆಣಿಸದೆ ಅಂದಿನ ಸಮಾಜದಲ್ಲಿ ಸಾಕಷ್ಟು ತನ್ನ ಪ್ರಭಾವ ಬೀರಿದಳು. ಬ್ರಾಹ್ಮಣರು ಅಬ್ರಾಹ್ಮಣರು ಎಂಬ ಭಾವನೆ ಬರದಂತೆ ಪವಾಡ ಸದೃಶ ಕಾರ್ಯವನ್ನೆಸಗಿದ್ದನ್ನು ಕೇಳುವಾಗ ಬೆರಗಾಗುತ್ತದೆ. ಅವಳ ಸಾಧನೆಗೆ ಅವಳು ಗಳಿಸಿದ್ದ ಸಿದ್ಧಿಗೆ ದೊರೆತ ಪ್ರಸಿದ್ಧಿ ಸಾಲದು. ಈ ನಿಟ್ಟಿನಿಂದ ಇವಳ ಕಾವ್ಯಗಳನ್ನು ಅಭ್ಯಾಸ ಮಾಡಿದರೆ ಹೊನ್ನಮ್ಮನಿಗಿಂತ ಮೇಲಿನ ಸ್ಥಾನ ಗಿರಿಯಮ್ಮಳಿಗೆ ನಿಸ್ಸಾಂಶಯವಾಗಿ ಸಲ್ಲುತ್ತದೆ.

ಹರಿದಾಸ ಸಾಹಿತ್ಯ ಪರಂಪರೆಯ ಕವಯಿತ್ರಿಯರಲ್ಲಿ ಹೆಳವನಕಟ್ಟೆ ಗಿರಿಯಮ್ಮನ ಅನಂತರ ವ್ಯಾಪಕವಾದ ಸಾಹಿತ್ಯ ಸೃಷ್ಟಿ ಮಾಡಿ ಜನಮನ್ನಣೆಗೆ ಪಾತ್ರಳಾದ ಹರಪನಹಳ್ಳಿ ಭೀಮವ್ವ ಪ್ರಮುಖಳು. (ಕ್ರಿ.ಶ.೧೮೨೩ ರಿಂದ ೧೯೦೩) ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕು ನಾರಾಯಣ ದೇವರ ಕೆರೆ

ಎಂಬಲ್ಲಿ ಜನಿಸಿದಳು. ಈ ಸ್ಥಳ ಈಗ ತುಂಗಭದ್ರಾ ಆಣೆಕಟ್ಟಿನಲ್ಲಿ ಮುಳುಗಿ ಹೋಗಿದೆ. ಭೀಮವ್ವನ ತಂದೆ ರಘುನಾಥಚಾರ್ಯ ತಾಯಿ ರಾಘಮ್ಮ ತಂದೆ ತಾಯಿಗಳು ಇಟ್ಟ ಹೆಸರು ಭೀಮಾಬಾಯಿ. ಈಕೆ ಹನ್ನೊಂದನೆಯ ವಯಸ್ಸಿಗೆ ಕಾಲಿಟ್ಟಾಗ ಬಳ್ಳಾರಿ ಜಿಲ್ಲೆ ರಾಮದುರ್ಗ ತಾಲೂಕಿನ ಹಿರೇಹಾಳ ಗ್ರಾಮದ ನಲವತ್ತೈದು ವರ್ಷದ ವಿಧುರ ಮುನಿಯಪ್ಪನೊಂದಿಗೆ ವಿವಾಹವಾಯಿತು. ತರುವಾಯ ಗಂಡನ ಮನೆಯವರು ಈಕೆಗೆ ಕೊಟ್ಟ ಹೆಸರು ಕೃಷ್ಣಬಾಯಿ ಮುಂದೆ ಎರಡೂ ಮನೆಯವರಿತ್ತ ಹೆಸರನ್ನು ಸೇರಿಸಿ 'ಭೀಮೇಶ ಕೃಷ್ಣ' ಎಂಬ ಅಂಕಿತವನ್ನಿಟ್ಟುಕೊಂಡು ಸಾಹಿತ್ಯ ರಚನೆಗೆ ತೊಡಗಿದಳು. ದಾಸ ಪಂಥಕ್ಕೆ ಸೇರಿದ ನರಹರಿ ಆಚಾರ್ಯರ ಮನೆತನ ಭೀಮವ್ವನದು. ಇತ್ತ ತಾಯಿಯ ತಂದೆ ಜೋಯಿಸ ವೆಂಕಪ್ಪಾಚಾರ್ಯರು ಹರಿದಾಸರೇ ಆಗಿದ್ದರು. ಹೀಗೆ ಪರಂಪರೆಯಿಂದ ಬಂದ ದಾಸ ಸಾಹಿತ್ಯ ಸಂಸ್ಕಾರ ಮನೆಯಲ್ಲಿನ ಮಾಧ್ವ ಸಂಪ್ರದಾಯ ಹರಿಕಥಾ ಶ್ರವಣ ಭೀಮವ್ವನ ಎಳೆಯ ವಯಸ್ಸಿನ ಮೇಲೆ ಪ್ರಭಾವ ಬೀರಿದವು. ಈಕೆಗೆ ಅದ್ಭುತ ಸ್ಮರಣ ಶಕ್ತಿಯಿಂದ ತನಗೆ ಕವಿತಾಶಕ್ತಿ ಪ್ರಾಪ್ತವಾಗಿದೆಯೆಂದು ಭಾವಿಸಿದ್ದಳು. ತನ್ನಿಂದ ಭಗವಂತನೇ ಹಾಡಿಸುತ್ತಿದ್ದಾನೆಂಬ ನಂಬಿಕೆ ಆಕೆಯಲ್ಲಿತ್ತು. ಭೀಮವ್ವನಿಗೆ ಸ್ವಾಮಿರಾಯ ಮತ್ತು ಸುಬ್ಬಾಬಾಯಿ ಎಂಬ ಇಬ್ಬರು ಮಕ್ಕಳು ಈಕೆಯ ಸಂಸಾರಿಕ ಜೀವನದಲ್ಲಿ ಒಮ್ಮೆ ಕಳತನವಾಗಿ ಮನೆಯಲ್ಲಿದ್ದ ಸಂಪತ್ತೆಲ್ಲ ಬರಿದಾಯಿತು. ಬಡತನಕ್ಕೆ ಸಿಲುಕಬೇಕಾಯಿತು. ಅದೇ ವರ್ಷ ಪತಿಯ ವಿಯೋಗದ ದುಃಖ ಆವರಿಸಿತು.

ಹರಿದಾಸ ಪರಂಪರೆಯಲ್ಲಿ ಹೆಳವನಕಟ್ಟೆ ಗಿರಿಯಮ್ಮನ ಅನಂತರ ಹರಪನಹಳ್ಳಿ ಭೀಮವ್ವ ಮುಖ್ಯರು. ಭೀಮವ್ವ 'ಮಯ್ಯನ ಹಾಡು, ಸುಭದ್ರಾ ಕಲ್ಯಾಣ, ರತಿಕಲ್ಯಾಣ, ನಳಚರಿತ್ರೆ, ಪತಿದಾನ ಕೊಟ್ಟ ಹಾಡು, ಶಕುಂತಲಾ ದುಷ್ಯಂತ ಮಹಾರಾಜರ ಹಾಡು ಇವೇ ಆರು ದೊಡ್ಡ ಹಾಡುಗಳೊಂದಿಗೆ 'ಭೀಮೇಶ ಕೃಷ್ಣ' ಎಂಬ ಅಂಕಿತದಲ್ಲಿ ಅನೇಕ ಸಣ್ಣ ಹಾಡುಗಳನ್ನು ರಚಿಸಿದ್ದಾಳೆ. ದ್ರೌಪದಿಯ ವಸ್ತ್ರಾಪಹರಣದ ಪ್ರಸಂಗದಲ್ಲಿ ಮಹಾಭಾರತದ ಸಭಾಪರ್ವದಲ್ಲಿ ಬರುವ ಕಥೆಯನ್ನು ಇತರ ಹರಿದಾಸರಂತೆಯೇ ಕೃಷ್ಣಭಕ್ತಿಯ ದ್ಯೋತಕವಾಗಿ ಹೆಣೆದು ಹಾಡಿದ್ದಾಳೆ. ಅಣ್ಣನ ಆದೇಶದಂತೆ ದುಶ್ಶಾಸನ ಬಂದು ದ್ರೌಪದಿಯ ಸೀರೆಯನ್ನು ಸೆಳೆಯತೊಡಗಿದ ಅಸಹಾಯಕಳಾದ ದ್ರೌಪದಿ ಕಣ್ಣುಮುಚ್ಚಿ ಸರ್ವರಕ್ಷಕನಾದ ಶ್ರೀಹರಿಯನ್ನು ಅನನ್ಯ ಭಕ್ತಿಯಿಂದ ಸ್ಮರಿಸಲು, ಆಕೆ ಉಟ್ಟ ವಸ್ತ್ರ ಅಕ್ಷಯವಾಯಿತು ಎಂದು ವರ್ಣಿಸಿದ್ದಾಳೆ.

ಭೀಮವ್ವನ ಹಾಡುಗಳಲ್ಲಿ ಹಸೆಗೆ ಕರೆಯುವುದು, ಆರತಿಯೆತ್ತುವುದು, ಆಶೀರ್ವಾದ ಮಾಡುವುದು, ಬಾಗಿಲು ಕಟ್ಟುವುದು, ಜೋಗುಳ ಹಾಡುವುದು ಮುಂತಾದ ಧಾರ್ಮಿಕ ಆಚರಣೆಯ ಹಾಡುಗಳಲ್ಲಿ ಬಿಂಬಿತವಾಗಿದೆ. 'ಅಂಗಜ ಪಿತನರ್ಧಾಗೀ ನೀ ಏಳು ಶೃಂಗಾರದಂಥ ಶುಭಾಂಗಿ ನೀ ಏಳು, ಕಂಗಳ ನೋಟದ ಕಡುಚೆಲ್ವೆ ನಿನ್ನ ಪಾದಂಗಳಿಗೆರಗುವೆ ಎನುತ ಮಾಲಕ್ಷುಮಿ ಅಂಗನೆಯರ್ಹಸೆಗೆ ಕರೆದರು'

ಎಂಬುದನ್ನು ಯಾವುದೇ ಶುಭ ಸಮಾರಂಭದಲ್ಲಿ ಲಕ್ಷ್ಮೀ ಸ್ವರೂಪಳಾದ ಮುತ್ತೈದೆಯನ್ನು ಹಸೆಯ ಮೇಲೆ ಕೂರಿಸುವಾಗ ಈ ಹಾಡನ್ನು ಹಾಡಬಹುದು. ಇದು ಲಕ್ಷ್ಮೀದೇವಿಯನ್ನು ಹಸೆಗೆ ಕರೆದ ಹಾಡು. ಇದೇ ರೀತಿಯಾಗಿ ಬಸಿರು ಬಣ್ಣಿಸಿದ ಹಾಡನ್ನು ಹೂ ಮುಡಿಸಿದ ಹಾಡನ್ನು ಹಾಗೂ ಹೆಣ್ಣು ಮಕ್ಕಳು ಪೂಜೆ ಪುರಸ್ಕಾರಗಳನ್ನು ಮಾಡುವಾಗ ತಮ್ಮ ಮುತ್ತೈದೆತನ ವೃದ್ಧಿಯಾಗುವಂತೆ, ಸಂತಾನ ಸೌಭಾಗ್ಯ ಪ್ರಾಪ್ತಿಯಾಗುವಂತೆ ಕೇಳಿಕೊಂಡ ಹಾಡುಗಳು ಸಿಕ್ಕುತ್ತವೆ. ಕೃಷ್ಣರುಕ್ಮಿಣಿಯರು ಪರಸ್ಪರ ಒಗಟುಗಳನ್ನು ಹೇಳುವರು. ಭೀಮವ್ವ ಹಾಡುಗಳಲ್ಲಿ ಮುತ್ತೈದೆತನ ಮತ್ತು ಸಂತಾನ ಪ್ರಾಪ್ತಿಗಾಗಿ ಮಾಡಿದ ವ್ರತಾಚರಣೆಗಳು ಹೆಚ್ಚಾಗಿ ಕಂಡುಬರುತ್ತದೆ. ಶುಕ್ರವಾರದ ಹಾಡು, ಶನಿವಾರದ ಹಾಡಿನ ಮೂಲಕ ಮಾಡುವ ವ್ರತದಿಂದ ಉಂಟಾಗುವ ಪ್ರಾಪ್ತಿಯನ್ನು ತಿಳಿಸಿ ಹೇಳುತ್ತಾ 'ಕಟ್ಟಿದ ಮಾಂಗಲ್ಯ ಕುಂಕುಮ ಗಾಜಿನ ಬಳೆ ಮುತ್ತೈದೆತನ ಸಂಪತ್ತು ಸಂತಾನಕೆ ಹಾಗೆಯೇ ಶನಿವಾರದ ಹಾಡನ್ನು ಹೇಳಿದರೆ 'ಮುತ್ತೈದೆತನ ಧನಧಾನ್ಯ ಸಂತಾನ ಸಮಸ್ತ ಕಾರ್ಯವು ಸಿದ್ಧಿ ಉಂಟು' ಆದರೆ ಈ ವ್ರತ ಮಾಡದಿದ್ದರೆ ಆಗುವ ಅನಾನುಕೂಲದ ಬಗ್ಗೆಯೂ ಹೇಳಿದ್ದಾಳೆ. ಮಂಗಳಗೌರಿ ವ್ರತದ ಮಹಿಮೆಯಲ್ಲಿ ಹದಿನಾರು ವರ್ಷ ಮಾತ್ರ ಆಯುಷ್ಯವಿದ್ದ ಗಂಡನನ್ನು ಮಂಗಳಗೌರಿ ವ್ರತ ಮಾಡಿ ಉಳಿಸಿಕೊಂಡ ಹೆಣ್ಣಿನ ಚಿತ್ರಣವಿದೆ.

ಪಾತಿವ್ರತ್ಯವು ಹೆಣ್ಣನ್ನು ಯಾವ ರೀತಿಯಾಗಿ ಕಾಪಾಡುತ್ತದೆ ಎಂಬುದನ್ನು 'ನಳ ಚರಿತ್ರೆ'ಯಲ್ಲಿ ತಿಳಿಸಲಾಗಿದೆ. ನಳ ದಮಯಂತಿ ಅರಣ್ಯದಲ್ಲಿ ಕಷ್ಟಪಡುತ್ತಿದ್ದಾಗ ಪತ್ನಿಯನ್ನು ತವರು ಮನೆಗೆ ಹೋಗು ಎಂದಾಗ 'ಅಟ್ಟ ಅರಣ್ಯದಲ್ಲಿ ಬಿಟ್ಟು ನಿಮ್ಮೊಬ್ಬರನೆ, ಹೆತ್ತವರ ಮನೆಯ ಸುಖಯೆನಗೆ ಸಮ್ಮತವಿಲ್ಲ' ಎನ್ನುವಲ್ಲಿ ಪತಿಯ ಮೇಲಿನ ಪ್ರೀತಿ ವಿಶ್ವಾಸವನ್ನು ಗುರುತಿಸುವುದರ ಜೊತೆಗೆ ಪತಿ ಕಷ್ಟದಲ್ಲಿದ್ದು ತಾನು ಸುಖದಲ್ಲಿರಲು ಬಯಸುವುದಿಲ್ಲ. ಇಂತಹ ಪಾತಿವ್ರತ್ಯ ಧರ್ಮದಿಂದಲೇ ದಮಯಂತಿಯನ್ನು ಕೆಟ್ಟವ್ಯಕ್ತಿಯೊಬ್ಬ ಕೈಹಿಡಿಯಲು ಹೋದಾಗ ಸುಟ್ಟು ಭಸ್ಮವಾಗುತ್ತಾನೆ.

ದ್ರೌಪದಿಯ ಶೌರ್ಯ ಮೆಚ್ಚುವಂಥದ್ದು ಅದನ್ನು ಭೀಮವ್ವ 'ಪ್ರಚಂಡ ನಿನ್ನ ಶಿರವ ನಾ ಚೆಂಡಾಡುವೆನೆಂದು' ಹೇಳುವುದನ್ನು ಮೆಚ್ಚಿ ನೋಡಿರೇ' ದ್ರೌಪದಿ ಚರಿತೆಯ ಕೊಂಡಾಡಿರೀಕೆಯ ಮಹಾಶೌರ್ಯ' ಎಂದು ಹಾಡಿ ಹೊಗಳಿದ್ದಾಳೆ. ಭೀಮವ್ವ ಸಾಂಪ್ರದಾಯಿಕ ನೆಲೆಗಟ್ಟಿನಿಂದ ಬಂದವರಾಗಿದ್ದು, ಅವರಲ್ಲಿ ಸಮಾಜದಲ್ಲಿರುವ ಸಾಮಾಜಿಕ ಸಮಸ್ಯೆಯ ಬಗ್ಗೆ ಅನುಕಂಪ ಇರುವುದನ್ನು ಕಾಣಬಹುದು. 'ಪತಿದಾನ ಕೊಟ್ಟ ಹಾಡಿ'ನಲ್ಲಿ ಹೆಣ್ಣಿನ ಎರಡು ರೀತಿಯ ಅಂಶಗಳನ್ನು ಗುರುತಿಸಬಹುದು. ಮೊದನೆಯದಾಗಿ ಸಮಾಜದಲ್ಲಿರುವ ಬಹುಪತ್ನಿತ್ವದ ಕಡೆಗೆ ಕಾಳಜಿಯ ಮನೋಧರ್ಮವನ್ನು ತನ್ನ ಹಾಡುಗಳಲ್ಲಿ ವ್ಯಕ್ತಪಡಿಸಿದ್ದಾಳೆ. ಸತ್ಯಭಾಮೆಯ ಬಾಯಿಂದ ಹೊರಡುವ ಮಾತು 'ಸುಡು ಹೆಣ್ಣು ಜನ್ಮ ಸಂಸಾರ ವ್ಯಾಕೆಂದೆನುತ' ಎಂಬುದು ತುಂಬ ಗಮನಿಸತಕ್ಕದ್ದು, ಆದರೆ ಮೊದಲಿಗೆ ನಡೆಯುವ ಸವತಿಮತ್ಸರ ಹಾಡು ಮುಂದುವರಿಯುತ್ತಾ ಕೊನೆ ಘಟ್ಟದಲ್ಲಿ ಕೃಷ್ಣನ ಹಿರಿಮೆಯನ್ನು ಹೇಳುವುದೇ ಆಗಿದೆ.

'ಶಕುಂತಲಾ ದುಷ್ಯಂತ ಮಹಾರಾಜನ ಹಾಡಿ'ನಲ್ಲಿ ಶಕುಂತಲೆಯನ್ನು ಬಿಟ್ಟು ಮೇನಕೆ ಹೊರಟಾಗ ಭೀಮವ್ವ 'ಒಣಗಿದೆಲೆಯ ಮ್ಯಾಲೆ ಅಣುವಿನ ಆ ಮುನಿಚರಣದಲ್ಲೇ ಬಿಸುಟು ಕರುಣವಿಲ್ಲದೆಲೆ ಕಣ್ಣೆತ್ತಿ ನೋಡದೆ ದಾರಿ ಹಿಡಿದಳು ತನಲೋಕಕೆ' ಎಂಬುದನ್ನು ಖಂಡಿಸುತ್ತಾಳೆ. ತಾಯಿ ತನ್ನ ಕರ್ತವ್ಯವನ್ನು ಮರೆತು ಹೊರಟಿರುವುದು ಸರಿಯಲ್ಲ ಎಂಬುದು ಭೀಮವ್ವನ ಅಭಿಪ್ರಾಯ. ಭೀಮವ್ವನ ಕೃತಿಗಳಲ್ಲಿ ಶೃಂಗಾರ, ಕರುಣ, ಭಕ್ತಿ, ವೀರರಸಗಳ ಅಂಶಗಳು ರಾಮಾಯಣ ಮತ್ತು ಮಹಾಭಾರತದಿಂದ ಆರಿಸಿಕೊಂಡ ವಸ್ತು. ಆದ್ದರಿಂದ ಭೀಮವ್ವನ ಕೃತಿಗಳು ಲೌಕಿಕ ನೆಲೆಗಟ್ಟಿಗಿಂತ ಅಲೌಕಿಕ ನೆಲೆಗಟ್ಟಿನಲ್ಲಿ ನಡೆಯುವ ವಿಷಯಗಳೇ ಹೆಚ್ಚು. ಬಹುಶಃ ಇದಕ್ಕೆ ಕಾರಣ ಕವಿಯಿತ್ರಿಗಿರುವ ಅಪಾರ ಭಕ್ತಿ ಎನ್ನಬಹುದು.

ಹೆಣ್ಣಿನ ದಿಟ್ಟತನವನ್ನು ಶೌರ್ಯವನ್ನು ಕೊಂಡಾಡುವ ಭೀಮವ್ವ ತನ್ನ ಕೃತಿಯಲ್ಲಿ ದ್ರೌಪದಿಯ ಚಿತ್ರಣ ನೀಡಿ, ವ್ರತ ನಿಯಮಗಳನ್ನು ಮಾಡುವುದರಿಂದ ಮುತ್ತೈದೆತನ ಮತ್ತು ಸಂತಾನ ಪ್ರಾಪ್ತಿಯಾಗುವುದನ್ನು ಕೂಡ ವಿವರ ಪೂರ್ಣವಾಗಿ ನೀಡಿದ್ದಾಳೆ. 'ಭದ್ರೆ ನಿನ್ನ ಸರಿ ಸಮರ್ಥರು ಮೂರ್ಜಗದೊಳಗೆ ಕಾಣೆನೆನುತ' ಕಮಲರಾಜನೇ ಅವಳ ಪಾದಕ್ಕೆ ಎರಗಿ ಹೆಣ್ಣಿನ ಶೌರ್ಯವನ್ನು ಮೆಚ್ಚಿ ಶರಣಾಗುವ ಚಿತ್ರಣ ಬಹಳ ಮಹತ್ವಪೂರ್ಣವಾದುದು. ಭೀಮವ್ವನಲ್ಲಿ ದೈವಭಕ್ತಿಯನ್ನು ಕಾಣುವುದರ ಜೊತೆಗೆ ಸಂಪ್ರದಾಯಸ್ಥ ಹೆಣ್ಣಿನ ಮನೋಭಾವನೆಗಳು ಕೂಡ ವ್ಯಕ್ತವಾಗಿರುವುದನ್ನು ಕಾಣಬಹುದು.

ಹೆಳವನಕಟ್ಟೆ ಗಿರಿಯಮ್ಮ, ಹರಪನಹಳ್ಳಿ ಭೀಮವ್ವ ಮತ್ತು ಗಲಗಲಿಯ ಅವ್ವನವರಂತೆ ಆಧ್ಯಾತ್ಮಿಕ ನೆಲೆಗಟ್ಟನ್ನು ಅನುಸರಿಸಿ ಭಾಗಮ್ಮ, ಜೆ.ರಾ.ಚೆಲ್ಲಮ್ಮ ಗಣಪಕ್ಕ, ಸುಂದರಬಾಯಿ, ಪನ್ನಿಲಕ್ಷ್ಮೀಬಾಯಿ, ಶಾಂತಿಬಾಯಿ, ಓರಬಾಯಿ ಲಕ್ಷ್ಮೀದೇವಮ್ಮನವರು ಕೃತಿ ರಚನೆ ಮಾಡಿದ್ದಾರೆ. ಭಾಗಮ್ಮ ಭಾಗವತದ ತೃತೀಯ ಸ್ಕಂದವನ್ನು ರಚಿಸಿದ್ದಾರೆ. ಜೆ.ರಾ.ಚೆಲ್ಲಮ್ಮ ರುಕ್ಮಿಣೀ ಪರಿಚಯ, ರಾಜಕಳಾನಿಧಿ, ಗೃಹಿಣೀ ಧರ್ಮ, ಜನ್ಮ, ರಾಜಕೀಯ, ರಾಜ್ಯಾಂಗ, ಅಮಾತ್ಯ, ಅರ್ಥ, ಕಾಲ, ಕರ್ತವ್ಯ, ಮುಂತಾದ ೧೬ ಪ್ರಕರಣಗಳನ್ನು ಹೊಂದಿರುವ ಕೃತಿ. ಚೆಲ್ಲಮ್ಮ ಅವರ ಕಾವ್ಯದಲ್ಲಿ ಭಕ್ತಿಯ ಜೊತೆಗೆ ಭಾವನೆಗಳು ಸೇರಿಕೊಂಡು ವೈವಿಧ್ಯಮಯವಾಗಿದೆ. ಗೃಹಣೀಧರ್ಮ ಪ್ರಕರಣದಲ್ಲಿ 'ಶೀಲವತಿ ಸಂಸಾರದೇಳ್ಗೆಗೆ ಮೂಲಕಾರಣವೆನಿಸಿತದನು. ಮೇಳವಿಸಿ ಪತಿಗೀವಳಾರೋಗ್ಯಾಭಿವೃದ್ಧಿಯೂ' ಎಂದು ಸಂಸಾರದ ಜವಾಬ್ದಾರಿ ಹೆಣ್ಣಿನ ಮೇಲಿರುತ್ತದೆ. ಸಂಸಾರದಲ್ಲಿ ಪತಿ ಆರೋಗ್ಯಭಿವೃದ್ಧಿಗಳು ಹೆಣ್ಣಿನಿಂದ ನಿರ್ವಹಿಸಲ್ಪಡುತ್ತದೆ ಎಂದು ಚೆಲ್ಲಮ್ಮನ ದೃಷ್ಟಿಯಲ್ಲಿ ಹೆಣ್ಣು ಸಂಪ್ರದಾಯ ಬದ್ಧಳಾಗಿದ್ದರೆ ಶ್ರೇಷ್ಠ ಎಂಬುದು ಸ್ಪಷ್ಟವಾಗುತ್ತದೆ. ಗಣಪಕ್ಕ ಚಿಕ್ಕಂದಿನಿಂದಲೂ ಕಾವ್ಯ ರಚಿಸುವ ಆಸಕ್ತಿಯನ್ನು ಬೆಳಸಿಕೊಂಡು 'ಅನಂತಾದ್ರೀಶ' ಎಂಬ ಅಂಕಿತದಲ್ಲಿ ಕೃತಿಗಳನ್ನು ರಚಿಸಿದ್ದಾಳೆ. ಗೋಕರ್ಣ ಮಹಾತ್ಮೆ, ರುಕ್ಮಿಣೀ ಪರಿಣಯ, ಕೃಷ್ಣನ ಹುಟ್ಟು, ಕೃಷ್ಣ ಲೀಲೆ, ಅನಂತನ ಕಥೆ, ತುಳಸೀ ಮಹಾತ್ಮೆ, ಆರತಿ ಪದಗಳು, ಮದುವೆಯ ಹಾಡು ಮುಂತಾದ ಕೃತಿಗಳನ್ನು ರಚಿಸಿದ್ದಾಳೆ. 'ರುಕ್ಮಿಣೀ ಪರಿಣಯ'ದಲ್ಲಿ ಕೃಷ್ಣ ರುಕ್ಮಿಣಿಯ ವಿವಾಹ ವಸ್ತುವನ್ನೇ ಹೊಸ

ರೀತಿಯಾಗಿ ಬಳಸಿಕೊಂಡು ಹೇಳಿದ್ದಾಳೆ. ಸುಂದರಬಾಯಿ 'ಶ್ರೀವೆಂಕಟೇಶಾ, ಬೆಟ್ಟದೊಡೆಯ ಶ್ರೀವೆಂಕಟೇಶಾ' ಎಂಬ ಮುದ್ರಿಕೆಯಿಂದ ಕೃತಿ ರಚಿಸಿದ್ದಾಳೆ. ಕೃಷ್ಣನ ಹುಟ್ಟು, ರುಕ್ಮಾಂಗದ ಚರಿತ್ರೆ ಸುಭದ್ರಾಮಯ್ಯ, ರುಕ್ಮಿಣಿಮಯ್ಯ, ರುಕ್ಮಿಣೀ ಪರಿಣಯ, ಸುಭದ್ರಾಕಲ್ಯಾಣ, ಶುಕ್ರವಾರ, ಶನಿವಾರ ಹಾಡು ಗೌರಿಯ ಹಾಡುಗಳು ಮುಂತಾದವುಗಳನ್ನು ರಚಿಸಿದ್ದಾಳೆ. 'ರುಕ್ಮಿಣೀ ಸ್ವಯಂವರ'ದಲ್ಲಿ ಮಾತ್ರ ತನ್ನನೇ ನಾಯಕಿಯನ್ನಾಗಿ ಭಾವಿಸಿಕೊಂಡು ರಚಿಸಿದ್ದಾಳೆಂದು ಊಹಿಸಲಾಗಿದೆ.

ಪನ್ನೀಲಕ್ಷ್ಮೀಬಾಯಿ ದೇವರ ಹಾಡುಗಳನ್ನು ರಚಿಸಿದ್ದಾಳೆ. ಅವು ಜನರ ಬಾಯಿಯಲ್ಲಿ ಹೆಚ್ಚಿನ ಪ್ರಚುರತೆ ಪಡೆದುಕೊಂಡಿವೆ. ಶಾಂತಿಬಾಯಿ ಕನ್ನಡ ಮತ್ತು ಮರಾಠಿಗಳೆರಡರಲ್ಲೂ ಪದಗಳನ್ನು ರಚಿಸಿದ್ದಾಳೆ. 'ಶಾಂತಿ ಪಾಲಿಪ ಗುರು' ಎಂಬ ಮುದ್ರಿಕೆಯಿಂದ ಕೀರ್ತನೆಗಳನ್ನು ರಚಿಸಿದ್ದಾಳೆ. ಈಕೆಯ ಹಾಡುಗಳು ದೇವತಾಸ್ತುತಿಗಳು, ಭಕ್ತಿ ಪರವಾದ ವೈರಾಗ್ಯ ಕೀರ್ತನೆಗಳು, ಓರಬಾಯಿ ಲಕ್ಷ್ಮೀದೇವಮ್ಮ ರಾಘವೇಂದ್ರಯತಿಗಳನ್ನು ಕುರಿತು ಅನೇಕ ಹಾಡುಗಳನ್ನು ರಚಿಸಿದ್ದಾಳೆ. ಭಕ್ತಿಯೇ ಈಕೆಯ ಹಾಡುಗಳ ಪ್ರಧಾನವಸ್ತು.

ಒಟ್ಟಿನಲ್ಲಿ ಹರಿದಾಸ ಸಾಹಿತ್ಯ ಪರಂಪರೆಯಲ್ಲಿ ಕಂಡುಬರುವ ಕವಯಿತ್ರಿಯರು ಹೆಚ್ಚಾಗಿ ಭಕ್ತಿ ವೈರಾಗ್ಯದಿಂದ ಕೃತಿಗಳನ್ನು ರಚಿಸಿದ್ದಾರೆ. ಇನ್ನು ಕೆಲವರು ಸಂಪ್ರದಾಯಬದ್ಧ ಮದುವೆ ಹಾಡು, ಮುಯ್ಯದ ಹಾಡು, ಬೀಗರ ಹಾಡು ಮೊದಲಾದವುಗಳನ್ನು ರಚಿಸಿದ್ದಾರೆ. ಪಾತಿವ್ರತ್ಯ ಧರ್ಮದ ಬಗ್ಗೆ ಹೆಚ್ಚಿನ ಒಲವು ನೀಡಿದ್ದಾರೆ. ವ್ರತ ನಿಯಮಗಳ ಸಂದರ್ಭದಲ್ಲಿ ಹಾಡುವ ಹಾಡನ್ನು ರಚಿಸಿದ್ದಾರೆ. ಇದರಿಂದ ಆಗುವ ಪ್ರಯೋಜನದ ಬಗ್ಗೆ ಮತ್ತು ವ್ರತ ನಿಯಮಗಳನ್ನು ಸರಿಯಾಗಿ ಪಾಲಿಸದಿದ್ದರೆ ಆಗಬಹುದಾದ ಅನಾಹುತಗಳ ಬಗ್ಗೆಯೂ ಪ್ರಸ್ತಾಪಿಸಿ ವಿವರಣೆ ನೀಡಿದ್ದಾರೆ. ಇದರಿಂದ ಸಾಮಾನ್ಯವಾಗಿ ಈ ಎಲ್ಲಾ ಕವಯಿತ್ರಿಯರು ಸಂಪ್ರದಾಯ ನಿಷ್ಠರು ಎಂದು ಗುರುತಿಸಬಹುದು.

**ಅಡಿ ಟಿಪ್ಪಣಿಗಳು**

೧. ಜಿ.ಎಸ್.ಶಿವರುದ್ರಪ್ಪ (ಸಂ), ಕನ್ನಡ ಸಾಹಿತ್ಯ ಸಂದರ್ಭ, ೧೯೯೦, ಪು.೧೬೬

೨. ಎಚ್.ಎಸ್.ಶ್ರೀಮತಿ(ಸಂ) ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ೨೦೦೬, ಪು.೮೧

೩. ಅದೇ, ಪು.೧೪೪

೪. ಅದೇ, ಪು.೧೪೫

೫. ಅದೇ, ಪು.೧೪೬

೬. ಅದೇ, ಪು.೧೪೬.

೭. ಬಿ.ಬಿ.ಆಶಾ ಕುಮಾರಿ(ಸಂ), ಮಹಿಳಾ ಕಾವ್ಯದಲ್ಲಿ ಹೆಣ್ಣಿನ ಪರಿಕಲ್ಪನೆ, ೨೦೦೩, ಪು.೫೫

೮. ಅದೇ, ಪು.೫೫

೯. ಆರ್.ಸಿ.ಹಿರೇಮಠ(ಸಂ), ಶಿವದೀಪ್ತಿ, ೧೯೯೦, ಪು.೧೪೭

೧೦. ಪಿ.ಬಿ.ಆಶಾಕುಮಾರಿ(ಸಂ), ಮಹಿಳಾ ಕಾವ್ಯದಲ್ಲಿ ಹೆಣ್ಣಿನ ಪರಿಕಲ್ಪನೆ ೨೦೦೩, ಪು.೫೫

೧೧. ಅದೇ, ಪು.೫೬

೧೨. ಎಚ್.ಎಸ್.ಶ್ರೀಮತಿ(ಸಂ), ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ೨೦೦೬, ಪು.೧೭೬

೧೩. ಅದೇ, ಪು.೧೭೬-೧೭೭

೧೪. ಪಿ.ಬಿ.ಆಶಾ ಕುಮಾರಿ(ಸಂ), ಮಹಿಳಾ ಕಾವ್ಯದಲ್ಲಿ ಹೆಣ್ಣಿನ ಪರಿಕಲ್ಪನೆ ೨೦೦೩, ಪು.೫೯

೧೫. ಅದೇ, ಪು.೧೯೦

೧೬. ಅದೇ, ಪು.೧೯೦

೧೭. ಜಿ.ಎಸ್.ಶಿವರುದ್ರಪ್ಪ(ಸಂ), ಕನ್ನಡ ಸಾಹಿತ್ಯ ಸಂದರ್ಭ, ೧೯೯೦, ಪು.೧೪೦

ಅಧ್ಯಾಯ ೯

# ಸಮಾರೋಪ

೯

# ಸಮಾರೋಪ

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಹರಿದಾಸ ಸಾಹಿತ್ಯದ್ದು ಒಂದು ಪ್ರಮುಖ ಘಟ್ಟ. ಶಿವಶರಣರ ನಂತರ ಜನಸಾಮಾನ್ಯರಿಗೆ ಸುಲಭವಾಗಿ ನಿಲುಕುವ ಸಾಹಿತ್ಯವನ್ನು ರಚಿಸಿದರು ಹರಿದಾಸರು. ಹರಿದಾಸ ಸಾಹಿತ್ಯದ ಉಗಮವನ್ನು ಮಧ್ವಾಚಾರ್ಯರಿಂದಲೇ ಗುರುತಿಸಲಾಗುತ್ತದೆ. ಅಂದಿನಿಂದ ಇಂದಿನವರೆಗೂ ಈ ಸಾಹಿತ್ಯ ಬೆಳೆಯುತ್ತಲೇ ಬಂದಿದೆ. ಇಷ್ಟು ಸುದೀರ್ಘವಾದ ಇತಿಹಾಸವಿದ್ದರೂ ಇದರಲ್ಲಿ ವಿಶೇಷವಾದ ಪ್ರತಿಭೆಯಿಂದ ಮೆರೆದವರು ಕೆಲವು ಮಂದಿ ಮಾತ್ರ. ಮಹೀಪತಿದಾಸರು, ಶ್ರೀಪಾದರಾಯರು, ವ್ಯಾಸರಾಯರು, ವಾದಿರಾಜರು, ಪುರಂದರದಾಸರು, ಕನಕದಾಸರು ವಿಜಯದಾಸರು ಜಗನ್ನಾಥದಾಸರು ಗೋಪಾಲದಾಸರು. ಪ್ರಸನ್ನವೆಂಕಟದಾಸರು ಮುಂತಾದವರು.

ಹರಿದಾಸರು ರಚಿಸಿದ ಸಾಹಿತ್ಯ ಭಕ್ತಿ ಪ್ರಚಾರ ಮತ್ತು ಮತ ಪ್ರಚಾರಕ್ಕಾಗಿ ಹುಟ್ಟಿಕೊಂಡದ್ದಾದರೂ ವಸ್ತು, ಭಾಷೆ, ಛಂದಸ್ಸುಗಳಿಂದಾಗಿ ಅದು ವಿಶೇಷವಾಗಿ ಕಾವ್ಯವೆನಿಸಿಕೊಂಡಿದೆ. ವಿದ್ವಾಂಸರು ದಾಸ ವಾಙ್ಮಯವನ್ನು ನಾಲ್ಕು ಘಟ್ಟಗಳಲ್ಲಿ, ವ್ಯಾಸರಾಯರ ಗುರುಪರಂಪರೆಯಲ್ಲಿ ಹದಿನಾರನೆಯ ಶತಮಾನದಲ್ಲಿ ಪುರಂದರದಾಸರು ಕನಕದಾಸರು ಪ್ರಕಟ ಮಾಡಿದಂತಹ ಸಾಹಿತ್ಯ ರಚನೆ ದ್ವಿತೀಯ ಘಟ್ಟ ವಿಜಯದಾಸರ ಮುಂದಾಳತ್ವದಲ್ಲಿ ಹೊರಬಂದ ದಾಸಸಾಹಿತ್ಯ ಮೂರನೆಯ ಘಟ್ಟದಲ್ಲಿ ಪ್ರಸನ್ನ ವೆಂಕಟದಾಸ, ಗೋಪಾಲದಾಸ, ಜಗನ್ನಾಥದಾಸ, ಹೆಳವನಕಟ್ಟೆ ಗಿರಿಯಮ್ಮ ಮೊದಲಾದವರು. ನಾಲ್ಕನೆಯ ಘಟ್ಟದಲ್ಲಿ ಪ್ರಾಣೇಶದಾಸ ಗುರುಪ್ರಾಣೇಶದಾಸ ಮೊದಲಾದ ದಾಸರು ದಾಸತಿಸಾಹಿತ್ಯವನ್ನು ಸಂರಕ್ಷಿಸಲು ಪ್ರಯತ್ನಿಸಿದರು.

ಕನ್ನಡ ಸಾಹಿತ್ಯದಲ್ಲಿ ಮಹಿಳಾ ಕೃತಿಕಾರರು ಕೃತಿ ರಚಿಸಿರುವುದು ಕಂಡುಬರುತ್ತದೆ. ಆಯಾ ಕಾಲಘಟ್ಟಕ್ಕೆ ಅನುಗುಣವಾಗಿ ಸಾಹಿತ್ಯ ರಚನೆಯಲ್ಲಿ ತೊಡಗಿರುವುದು ವಿಶೇಷವಾಗಿದೆ. ತಮ್ಮ ಸಮಕಾಲೀನ ಬದುಕಿನ ಚಿತ್ರಣವನ್ನು ಮೌಲ್ಯಗಳನ್ನು ತಮ್ಮ ಕೃತಿಗಳ ಮೂಲಕ ಕಟ್ಟಿಕೊಟ್ಟಿದ್ದಾರೆ. ಕರ್ನಾಟಕ ಭಕ್ತಿ ಪಂಥ ಚಳುವಳಿಯಲ್ಲಿ ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿರುವ ಹರಿದಾಸ ಸಾಹಿತ್ಯದಲ್ಲಿ ಮಹಿಳೆಯರ ಧ್ವನಿ ಗಟ್ಟಿಯಾಗಿ ನೆಲೆಯೂರಿದೆ. ದಾಸ ಸಾಹಿತ್ಯ ೧೩ನೇ ಶತಮಾನದಿಂದ ಈಚೆಗೆ ಬೆಳೆದು ಬಂದಿದ್ದರೂ ಮಹಿಳೆಯರು ಕಂಡುಬರುವುದು ೧೮ನೇ ಶತಮಾನದ ಕೊನೆಯ ಘಟ್ಟದಲ್ಲಿ.

೧೮ನೇ ಶತಮಾನದ ಅವಧಿಯಲ್ಲಿ ಕರ್ನಾಟಕದ ಎಲ್ಲ ಭಾಗಗಳಲ್ಲೂ ಈ ಕೀರ್ತನ ಕಾರ್ತಿಯರು ಭಗವದ್ಭಕ್ತಿಯನ್ನು ಸಾರುವ ಕೀರ್ತನೆಗಳನ್ನು ಸಂಪ್ರದಾಯದ ಹಾಡುಗಳನ್ನು, ಕಥನ ಕವನ, ಸುಳಾದಿ, ಉಗಾಭೋಗಗಳನ್ನು ರಚಿಸತೊಡಗಿ ದಾಸ ಸಾಹಿತ್ಯ ಪರಂಪರೆಯನ್ನು ನಷ್ಟವಾಗದಂತೆ ಉಳಿಸಿಡಲು ನೆರವಾದ ಮಹಿಳೆಯರ್ಯಾರು ಶಾಲೆಗೆ ಹೋಗಿಯಾಗಲೀ ಮನೆಯಲ್ಲಾಗಲೀ ವಿದ್ಯೆ ಕಲಿತವರಲ್ಲ. ಹೆಣ್ಣು ಮಕ್ಕಳಿಗೆ ಶಿಕ್ಷಣದ ಅಗತ್ಯವಿಲ್ಲವೆಂದು ಎಲ್ಲ ವರ್ಗದವರೂ ಭಾವಿಸಿದ್ದ ಕಾಲ. ಗೃಹಕೃತ್ಯದ ಜೊತೆಗೆ ತಾವೂ ಕೇಳಿ ಗ್ರಹಿಸಿದ ಜ್ಞಾನವೇ ಇವರ ಸಂಪತ್ತಾಗಿದ್ದಿತು. ಕಟ್ಟುನಿಟ್ಟಾದ ಸಂಪ್ರದಾಯಸ್ಥ ನಿರ್ಬಂಧಗಳ ಬದುಕಿನೊಳಗಿದ್ದುಕೊಂಡೇ ಅವರು ಸಾಧನೆ ಮಾಡಬೇಕಿತ್ತು. ಇಂತಹ ವಾತಾವರಣದಲ್ಲಿ ಹರಿದಾಸರು ಅಚ್ಚಕನ್ನಡದಲ್ಲಿ ಪ್ರಚಾರಕ್ಕೆ ತಂದಿದ್ದ ವೈಷ್ಣವಮತದ ಸಿದ್ಧಾಂತ ತತ್ವಗಳನ್ನು ಭಕ್ತಿರಸದ ಹರಹಿನಲ್ಲಿ ರಾಮಾಯಣ, ಮಹಾಭಾರತ, ಭಾಗವತ ಮುಂತಾದ ಪುರಾಣಗಳನ್ನಾಧರಿಸಿ ದಾಸರು ಭಕ್ತ ಮತ್ತು ಭಗವಂತನ ಕ್ರಮದಲ್ಲಿ ಚಿಂತನೆಗೆ ಒಳಪಡಿಸಿ ತಮ್ಮ ಹಾಡುಗಳಲ್ಲಿ ಅಭಿವ್ಯಕ್ತಿಸಿದ್ದಾರೆ.

ಕನ್ನಡ ಹರಿದಾಸ ಸಾಹಿತ್ಯದಲ್ಲಿ ಹೆಳವನಕಟ್ಟೆ ಗಿರಿಯಮ್ಮನ ಸ್ಥಾನ ಉನ್ನತವಾದುದು. ಅವಳ ಕೀರ್ತನೆಗಳ ಮತ್ತು ಖಂಡಕಾವ್ಯಗಳ ಮಹತ್ವ ಅನದೃಶ್ಯವಾದುದು. ಅವಳು ಸಮುದಾಯ ಮುಖಿ ಕೀರ್ತನೆಗಳನ್ನು ಮತ್ತು ಕಾವ್ಯಗಳನ್ನು ಬರೆದಳು. ಗಿರಿಯಮ್ಮ ಕೇವಲ ಉಪದೇಶಕಳಾಗಿರಲಿಲ್ಲ. ನುಡಿದಂತೆ ನಡೆದು ತೋರಿಸಿದಳು. ಜೀವನ ಪ್ರೀತಿ, ಪರರಲ್ಲಿ ಸಹಾನುಭೂತಿ ಅವಳಿಗಿತ್ತು. ಹೀಗಾಗಿ ತನ್ನ ಕಾಲಘಟ್ಟದ ಸಾಂಸ್ಕೃತಿಕ ಅಂಶಗಳನ್ನು ತನ್ನ ಸಾಹಿತ್ಯದಲ್ಲಿ ಅಳವಡಿಸಿಕೊಂಡಿದ್ದಾಳೆ. ಗಿರಿಯಮ್ಮನ ಕೀರ್ತನೆ ಹಾಗೂ ಖಂಡಕಾವ್ಯಗಳ ಸ್ವರೂಪವನ್ನು ಈ ಮಹಾಪ್ರಬಂಧದಲ್ಲಿ ವಿಸ್ತಾರವಾಗಿ ವಿವೇಚಿಸಲಾಗಿದೆ. ಈ ಪ್ರಬಂಧದಲ್ಲಿ ಕಂಡುಕೊಂಡ ಹೊಸ ಸಂಗತಿಗಳು ಹೀಗಿವೆ.

೧. ಗಿರಿಯಮ್ಮ ತನ್ನ ಅನುಭವಗಳ ಅಭಿವ್ಯಕ್ತಿಗೆ ಹೆಚ್ಚಿನ ಭಾವದೀಪ್ತಿಯನ್ನು ಜೀವಂತಿಕೆಯನ್ನು ತರುವುದಕ್ಕೆ ಪ್ರತಿಯೊಂದು ಕಾವ್ಯಗಳಲ್ಲಿ ಪಾತ್ರಗಳು, ಸನ್ನಿವೇಶಗಳನ್ನು ಪರಿಣಾಮಕಾರಿಯಾಗಿ ಬಳಸಿದ್ದಾಳೆ. ಪ್ರತಿಮೆಯಲ್ಲಿ ಕಾವ್ಯ, ಸೌಂದರ್ಯ ಮತ್ತು ಧ್ವನಿಶಕ್ತಿ ಇರಬೇಕು ಪ್ರತಿಮೆ ಕಾವ್ಯದಲ್ಲಿ ಸಂಕ್ಷಿಪ್ತಪ್ರತಿಯನ್ನು, ಸಾಂದ್ರತೆಯನ್ನು ಸಾಧಿಸಿಕೊಳ್ಳುವ ಸಾಧನವಾಗಬೇಕು. ಗಿರಿಯಮ್ಮ ಕೀರ್ತನೆಗಳಲ್ಲಿ ಪ್ರತಿಮೆಗಳು ವೈಚಾರಿಕವಾಗಿ ಮೂಡಿಬಂದಿವೆ.

ಅಂದಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಘಟನೆಗಳನ್ನು, ಭಾಷಿಕ ಸಂಕಥನಗಳನ್ನು ಅವು ಪ್ರತಿಬಿಂಬಿಸುತ್ತವೆ. ಅವು ಅವಳ ಲೋಕಾನುಭವ ಹಾಗೂ ಮಾನವ ಸ್ವಭಾವಗಳನ್ನು ಕುರಿತು ವಿಮರ್ಶಾ ರೂಪದ್ದಾಗಿರುತ್ತವೆ. ಸಮಾಜದ ಮತ್ತು ಬದುಕಿನ ವಿವಿಧ ಮುಖಗಳನ್ನು ಅಭಿವ್ಯಕ್ತಿಸುವ ಅವಳ ಕೀರ್ತನೆಗಳಲ್ಲಿ ಪ್ರಧಾನವಾಗಿ ಕಾಣವುವುದು ಸಮತಾವಾದ ಸಮಾಜ ರಚನೆ ಮತ್ತು ಮಾನವೀಯ ಅನುಕಂಪ ವಸ್ತು ಸಂಗತಿವೊಂದರ ವಸ್ತುಸ್ಥಿತಿಯನ್ನು ಶಬ್ದ ಚಿತ್ರಗಳ ಮೂಲಕ

ಗಿರಿಯಮ್ಮ ಹೇಳುತ್ತಾಳೆ. ಈ ಎಲ್ಲ ಅಂಶಗಳನ್ನು ತೌಲನಿಕವಾಗಿ ಕೀರ್ತನೆಗಳ ವಿವೇಚನೆ ಎಂಬ ಭಾಗದಲ್ಲಿ ಚರ್ಚಿಸಲಾಗಿದೆ.

೨. ಗಿರಿಯಮ್ಮ ಕೀರ್ತನೆಗಳಲ್ಲನ್ನಲ್ಲದೆ ಖಂಡ ಕಾವ್ಯಗಳನ್ನು ರಚಿಸಿದ್ದಾಳೆ. ಚಂದ್ರಹಾಸನ ಕಥೆ, ಉದ್ದಾಳಿಕನ ಕಥೆ, ಶಂಕರಗಂಡನ ಹಾಡು, ಸೀತಾಕಲ್ಯಾಣ, ಲವಕುಶರ ಕಾಳಗ, ಬ್ರಹ್ಮಕೊರವಂಜಿ ೬೨ ರಿಂದ ೪೪೪ ನುಡಿಗಳವರೆಗೆ ಇವುಗಳ ವಿಸ್ತಾರವಿದೆ. ಪ್ರಸ್ತುತ ಪ್ರಬಂಧದಲ್ಲಿ ಈ ಖಂಡಕಾವ್ಯಗಳಿಗೆ ಮೂಲ ಆಕರ ಯಾವುದ ಎಂಬುದನ್ನು ಶೋಧಿಸಿ ತೌಲನಿಕವಾಗಿ ವಿವೇಚಿಸಲಾಗಿದೆ. ಉದಾ. ಚಂದ್ರಹಾಸನ ಕಥೆಯನ್ನು ಲಕ್ಷ್ಮೀಶನ ಜೈಮಿನಿ ಭಾರತದ ಚಂದ್ರಹಾಸೋಪಖ್ಯಾನವೆ ಮೂಲ ಎಂಬುದನ್ನು ಗುರುತಿಸಿ ಚರ್ಚೆ ಬೆಳೆಸಲಾಗಿದೆ. ಇದು ಈ ಪ್ರಬಂಧದ ಹೊಸತನವೆಂದೇ ಹೇಳಬೇಕು. ಪ್ರತಿಯೊಂದು ಖಂಡಕಾವ್ಯಗಳ ಕಾವ್ಯ ಸೌಂದರ್ಯ, ಸಾಹಿತ್ಯಿಕ ಮಹತ್ವವನ್ನು ಆಯಾ ಭಾಗದಲ್ಲಿ ಚರ್ಚಿಸಲಾಗಿದೆ.

೩. ಸಾಮಾಜಿಕ ಕ್ರಾಂತಿ, ಸಾಂಸ್ಕೃತಿಕ ಸಂವರ್ಧನೆ, ಧಾರ್ಮಿಕ ಆಚಾರ, ವಿಚಾರಗಳ ಕಡೆಗೆ ತತ್ವ ಸಿದ್ಧಾಂತಗಳು ದಾಸಸಾಹಿತ್ಯದ ಉಗಮಕ್ಕೆ ಕಾರಣವಾಯಿತು. ಕೀರ್ತನೆಗಳು ತತ್ವನಿಷ್ಠವಾದರೂ ತತ್ವಗಳ ಜಟಿಲತೆಯಿಲ್ಲ. ದರ್ಶನ ಸಾಹಿತ್ಯದಿಂದ ದಾಸರು ಹೊಸ ರೀತಿಯ ಆಲೋಚನೆ ಮಾಡಲಿಕ್ಕೆ ವೈಚಾರಿಕ ಸಂಗತಿಗಳನ್ನು ಸ್ವೀಕರಿಸಿದರು. 'ಈತ ರಂಗನಾಥ ಹರಿಯು' 'ಬಟ್ಟೆಯ ನೆವದಿಂದ ಬಂದು', 'ಕರೆದಳು ತನ್ನ ಮಗನ ಯಶೋಧೆ' ಇಂತಹ ಗಿರಿಯಮ್ಮನ ಕೀರ್ತನೆಗಳನ್ನು ಗಮನಿಸಿ ಇಲ್ಲಿ ವಿವೇಚಿಸಲಾಗಿದೆ.

೪. ಸಾಹಿತ್ಯ ಮತ್ತು ಸಮಾಜದ ದೃಷ್ಟಿಯಿಂದ ಗಿರಿಯಮ್ಮನ ಕೀರ್ತನೆಗಳು ಮತ್ತು ಖಂಡಕಾವ್ಯಗಳು ಮೌಲಿಕವಾಗಿವೆ ಮಧ್ವ ಸಿದ್ಧಾಂತದ ಸಾರವನ್ನು ಕನ್ನಡದಲ್ಲಿ ವಿವರಣಾತ್ಮಕವಾಗಿ ನೀಡುವ ಮಹಾ ಕಾರ್ಯವನ್ನು ಗಿರಿಯಮ್ಮ ಮಾಡಿದ್ದಾಳೆ. ಸಂಸ್ಕೃತ ಗ್ರಂಥಗಳಲ್ಲಿ ಪ್ರಮೇಯಗಳನ್ನು ಸಮನ್ವಯ ಮಾಡಿ ವ್ಯಾಖ್ಯಾನಿಸಲು ಕಷ್ಟವಾದಾಗ ಗಿರಿಯಮ್ಮನ ಹಾಡುಗಳ ನೆರವನ್ನು ಇಂದಿಗೂ ಪಡೆಯುವುದು ಸುವಿದಿತವಾಗಿದೆ. ಇದನ್ನು ಈ ಪ್ರಬಂಧದಲ್ಲಿ ಗುರುತಿಸಲಾಗಿದೆ.

೫. ವಚನ ಸಾಹಿತ್ಯದಂತೆ ದಾಸ ಸಾಹಿತ್ಯವು ಸ್ತ್ರೀಪರವಾದ ಚಳುವಳಿಗೆ ವೈಚಾರಿಕವಾದ ಭದ್ರ ಬುನಾದಿ ಹಾಕಿತು. ಸಂಸಾರದ ಸಾಂಸ್ಥಿಕ ಬಂಧನದಿಂದ ಹೊರಬಂದು ಮಹಿಳೆ ತನ್ನ ಮಾರ್ಗವನ್ನು ತಾವೇ ಆಯ್ದುಕೊಳ್ಳಬಹುದು ಎಂಬ ಸಿದ್ಧಾಂತಕ್ಕೆ ಒಂದು ವಿಶಿಷ್ಟವಾದ ತಿರುವನ್ನು ಪಡೆದ ಗಿರಿಯಮ್ಮನ ಬದುಕು ಬರಹಗಳು ಕನ್ನಡ ಸಾಹಿತ್ಯದ ಸ್ತ್ರೀಪರ ಚಿಂತನೆ ಚರಿತ್ರೆಯಲ್ಲಿ ಮಹತ್ವದ ಘಟ್ಟ. ಒಂದು ಸಂಸ್ಕೃತಿಯ ನಡೆ ನುಡಿ ನಂಬಿಕೆ, ಆಚರಣೆಗಳು ಗಿರಿಯಮ್ಮ ತಾನು ಮಹಿಳೆಯಾಗಿ ವ್ಯಕ್ತಪಡಿಸಿದ ಸ್ತ್ರೀಪರ ಧೋರಣೆಯನ್ನು ಒಂದು ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

೬. ಗಿರಿಯಮ್ಮನಲ್ಲಿ ಭಾಷಾ ಪ್ರಜ್ಞೆ ಹೆಚ್ಚು ಏಕಾಗ್ರತೆಯಿಂದ ಅರ್ಥಪೂರ್ಣವಾಗಿ ಕೆಲಸ ಮಾಡಿದೆ. ಗಿರಿಯಮ್ಮ ತನ್ನ ಕಾಲದ ವ್ಯವಹಾರಿಕ ಭಾಷೆಯನ್ನೇ ಕೀರ್ತನೆ, ಕಾವ್ಯ ರಚನೆಯ ಪ್ರಕ್ರಿಯೆಯಲ್ಲಿ ಬಳಸಿದ್ದಾಳೆ. ಆ ಸಂದರ್ಭದ ಭಾಷೆಯಲ್ಲಿ ಒಂದು ಪುನರ್ ಸಂಯೋಜನೆ ಇರುತ್ತದೆ. ಕೀರ್ತನೆಯೊಳಗೆ ಪ್ರಾಸ, ಛಂದಸ್ಸು, ಅಲಂಕಾರಗಳ ಬಳಕೆಯ ಮೂಲಕ ಕಾವ್ಯದ ಅಭಿವ್ಯಕ್ತಿಯ ಶಕ್ತಿ ಹೆಚ್ಚುತ್ತದೆ. ಭಾಷೆಗೆ ಒಂದು ಬಗೆಯ ಕಾವ್ಯ ಸಿದ್ಧಿ ಪ್ರಾಪ್ತವಾಗುತ್ತದೆ. ಅಂದರೆ ಶೈಲಿಯ ಮುಖ್ಯ ತುಡಿತವೆಂದರೆ ಅನುಭವವನ್ನು ಹರಳುಗಟ್ಟಿಸುವ ಪ್ರಯತ್ನ ಅಲ್ಲಿ ಗಿರಿಯಮ್ಮನ ಪ್ರತಿಭಾ ಶಕ್ತಿ ಮತ್ತು ವಸ್ತು ಪ್ರತಿರೂಪ ಭಾಷೆಯಲ್ಲಿ ಪಾಕಗೊಂಡಿರುತ್ತದೆ.

ಒಟ್ಟಿನಲ್ಲಿ ಗಿರಿಯಮ್ಮನ ಕೃತಿಗಳು ಶ್ರೀಹರಿಯನ್ನು ಬೆಳೆಸಿಕೊಳ್ಳಬೇಕಾದ ಆಶಯಕ್ಕಿಂತ ಲೋಕವನ್ನು ತಿದ್ದುವ ಸಮರ್ಪಣ ಮನೋಭಾವದ ಆಶಯ ಅಧಿಕವಾಗಿದೆ. ಈ ಎಲ್ಲ ದೃಷ್ಟಿಗಳಿಂದ ಗಿರಿಯಮ್ಮನ ಸ್ಥಾನ ಕೇವಲ ದಾಸಸಾಹಿತ್ಯದಲ್ಲಿ ಮಾತ್ರವಲ್ಲದೆ, ಕನ್ನಡ ಸಾಹಿತ್ಯದಲ್ಲಿಯೆ ವಿಶಿಷ್ಟವಾಗಿದೆ ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ.

# ಅನುಬಂಧಗಳು

೧. ಆಕರ ಗ್ರಂಥಗಳು

೨. ಛಾಯಾಚಿತ್ರಗಳು

# ೧. ಆಕರ ಗ್ರಂಥಗಳು

**ಲೇಖನಗಳು**

೧. ಹೆಳವನಕಟ್ಟೆ ಗಿರಿಯಮ್ಮ, ಹರಿದಾಸರ ಕಥೆಗಳು, (ಸಂ) ಕಮಲದಾನಿ ಗುರುರಾಯರು, ಸಿಟಿಬುಕ್ ಸ್ಟಾಲ್ ಹುಬ್ಬಳ್ಳಿ, ೧೯೫೫

೨. ಹೆಳವನಕಟ್ಟೆ ಗಿರಿಯಮ್ಮ, ಕನ್ನಡ ಕಬ್ಬಿಗಿತಿಯರು, 'ದೇವಗಂಗೆ' (ಸಂ) ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿ, ಪದ್ಮಶ್ರೀ ಶಿವಮೂರ್ತಿಶಾಸ್ತ್ರೀ ಸಂಭಾವನಾ ಗ್ರಂಥ

೩. ಗಿರಿಯಮ್ಮನವರು, ಶ್ರೀ ಕರ್ನಾಟಕ ಭಕ್ತ ವಿಜಯ, (ಲೇ)ಬೇಲೂರು ಕೇಶವದಾಸರು, ಡಿ.ವಿ.ಕೆ.ಮೂರ್ತಿ, ಕೃಷ್ಣಮುರ್ತಿ ಪುರಂ, ಮೈಸೂರು, ೨೦೦೦

೪. ಹೆಳವನಕಟ್ಟೆ ಗಿರಿಯಮ್ಮ, ಕರ್ನಾಟಕದ ಕವಯಿತ್ರಿಯರು ಡಾ. ಸರೋಜಿನಿ ಮಹಿಷಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೪

೫. ಹೆಳವನಕಟ್ಟೆ ಸಂತ ಗಿರಿಯಮ್ಮ(ಲೇ), ತಿರುಕ, ಅನಾಥ ಸೇವಾಶ್ರಮ, ಮಲ್ಲಾಡಿಹಳ್ಳಿ, ೧೯೬೪

೬. ಹೆಳವನಕಟ್ಟೆ ಸಂತ ಗಿರಿಯಮ್ಮ, ಕರ್ನಾಟಕ ಕವಿಯಿತ್ರಿಯರು, (ಸಂ) ನಿರುಪಮಾ ಶ್ರೀ ಪ್ರಕಾಶನ (ರಿ), ರಾಜಾಜಿನಗರ ಬೆಂಗಳೂರು, ೧೯೮೦

೭. ಹೆಳವನ ಕಟ್ಟೆ ಗಿರಿಯಮ್ಮನ ಯುಗ ಸು. ಕ್ರಿ.ಶ.೧೭೦೦ ರಿಂದ ೧೮೦೦ರವೆಗೆ, ಕನ್ನಡ ಕವಿಯಿತ್ರಿಯರು (ಲೇ)ಕಾಶಿ ವಿಶ್ವನಾಥಶೆಟ್ಟಿ, ಎಸ್. ಜಯಕುಮಾರ ಸ್ಮಾರಕ ಗ್ರಂಥ ಪ್ರಕಾಶನ, ಚಿಕ್ಕಮಗಳೂರು, ೧೯೭೫

೮. ಮಹಾಭಕ್ತೆ ಶ್ರೀಮತಿ ಗಿರಿಯಮ್ಮ, ಹರಿ ದಾಸ ಕೀರ್ತನ ಸುಧಾ ಸಾಗರ, (ಸಂ) ಎಮ್.ಕೇಶವಯ್ಯ, ಸರ್ವಸ್ವಾಮ್ಯ ರಕ್ಷಿತ

೯. ಹರಿಭಕ್ತಿ ವಾಹಿನಿ, (ಲೇ)ಜಿ.ವರದರಾಜರಾವ್, ಪ್ರಥಮ ವಿಶ್ವಕನ್ನಡ ಸಮ್ಮೇಳನ ಸಾಹಿತ್ಯಮಾಲೆ

೧೦. ಹೆಳವನಕಟ್ಟೆ ಗಿರಿಯಮ್ಮನ ಸೀತಾ ಕಲ್ಯಾಣ, ದಾಸ ಸಾಹಿತ್ಯದ ಕೆಲವು ನೋಟಗಳು, (ಸಂ) ಲೀಲಾವತಿ ಎಸ್.ರಾವ್, ಯುಗ ಪುರುಷ ಪ್ರಕಟಣಾಲಯ ಕಿನ್ನಿಗೋಳ, ದಕ್ಷಿಣ ಕನ್ನಡ, ೧೯೮೩

೧೧. ಹೆಳವನ ಕಟ್ಟೆ ಗಿರಿಯಮ್ಮನ ಸಾಹಿತ್ಯಾವಲೋಕನ, ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಮಹಿಳೆ, (ಸಂ) ಲೀಲಾವತಿ ಎಸ್.ರಾವ್, ಸಂವಹನ ಪ್ರಕಾಶನ, ಶಿವರಾಂಪೇಟೆ, ಮೈಸೂರು, ೨೦೦೦

೧೨. **ಹೆಳವನ ಕಟ್ಟೆ ಗಿರಿಯಮ್ಮನ ಚರಿತ್ರೆ**, (ಸಂ) ವಡವಿ ಭೀಮಾಚಾರ್ಯ, ಹನುಮಂತಾಚಾರ್ಯ, ೧೯೨೭

೧೩. **ಹೆಳವನಕಟ್ಟೆ ಗಿರಿಯಮ್ಮ**, (ಸಂ) ಬಿ.ವಿ.ವೀರಭದ್ರಪ್ಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೬

೧೩. **ಹೆಳವನಕಟ್ಟೆ ಸ್ಥಳ ಮಹಾತ್ಮೆ ಮತ್ತು ಗಿರಿಯಮ್ಮನವರ ಚರಿತ್ರೆ, ಕೀರ್ತನೆಗಳು**, (ಸಂ)ಮೂರ್ತಿ ಅರ್ಚಕ ಸುಬ್ಬಣ್ಣಾಚಾರ್ , ೧೯೨೬

೧೪. ಹೆಳವನಕಟ್ಟೆ ಗಿರಿಯಮ್ಮ, (ಲೇ)ಬಿ.ವೀರಭದ್ರಪ್ಪ, **ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ**, ಸಂಪುಟ-೫, ಜಿ.ಎಸ್.ಶಿವರುದ್ರಪ್ಪ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೧೫. **ಹೆಳವನಕಟ್ಟೆ ಗಿರಿಯಮ್ಮ**, (ಲೇ)ಲೀಲಾವತಿ ಎಸ್.ರಾವ್, ಭೂಷಣ(ಸಂ), ಡಾ.ಚಿದಾನಂದ ಮೂರ್ತಿ, ಸಿ.ಯು.ಮಂಜುನಾಥ, ಶ್ರೀ ಸರ್ಪಭೂಷಣ ಶಿವಯೋಗೀಶ್ವರ ಮಠ, ಬೆಂಗಳೂರು, ೧೯೯೯

೧೬. **ಹೆಳವನಕಟ್ಟೆ ಗಿರಿಯಮ್ಮ**, (ಲೇ)ಕಾಕೋಳು ಸರೋಜರಾವ್ , ಚಂದ್ರಿಕಾ ಪ್ರಕಾಶನ, ಬೆಂಗಳೂರು, ೧೯೯೪

೧೭. **ಸೀತೆಯ ಕುಂಚದಿಂದ ಮೂಡಿದ ರಾವಣ**, (ಲೇ)ಬಿ.ವಿ.ವೀರಭದ್ರಪ್ಪ, ವೇದಾಂತ ರೆಜಿಮೆಂಟ್ ಮತ್ತು ಇತರ ವೈಚಾರಿಕ ಲೇಖನಗಳು ಪತ್ರಿಕೆ ಪ್ರಕಾಶನ, ಬೆಂಗಳೂರು ೧೯೯೫

೧೮. ಸಂಚಿಯ ಹೊನ್ನಮ್ಮ ಮತ್ತು ಹೆಳವನಕಟ್ಟೆ ಗಿರಿಯಮ್ಮ, (ಲೇ)ಡಾ.ಕಮಲಾಹಂಪನಾ ಬಾಸಿಂಗ, ಸಾಹಿತ್ಯ ದರ್ಶನ ಮಾಲೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೪

೧೯. ಹೆಳವನಕಟ್ಟೆ ಗಿರಿಯಮ್ಮನ ಕಾಲದ ಮೇಲೆ ಹೊಸಬೆಳಕು; ಬಿ.ರಾಜಶೇಖರಪ್ಪ ಇತಿಹಾಸ ಕಥನ, ಸಿ.ವಿ.ಜಿ.ಪಬ್ಲಿಕೇಷನ್ಸ್, ಬೆಂಗಳೂರು, ೨೦೦೧

೨೦. ಬಯಲು ಸೀಮೆಯ ಮದುವೆಯ ಹಾಡು, (ಲೇ)ಜೆ.ಶಶಿಕಲಾ, ಹೊನ್ನಬಿತ್ತೇವುಯ ಹೊಲಕೆಲ್ಲ (ಸಂ), ಗೋರೂರು ಚನ್ನಬಸವಪ್ಪ ಕರ್ನಾಟಕ ಜಾನಪದ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೬೭

೨೧. ಹೆಳವನಕಟ್ಟೆ ಗಿರಿಯಮ್ಮ, ರಂ.ಶ್ರೀ.ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ ಗೀತಾ ಬುಕ್ ಹೌಸ್ ಪ್ರಕಾಶಕರು, ಬೆಂಗಳೂರು ೧೯೯೮

**ಸಂಪಾದನೆ ಕೃತಿಗಳು**

೧. ಅನಂತ ಪದ್ಮನಾಭರಾವ್(ಸಂ), **ಅಂಬಾಬಾಯಿ ಅವರ ಕೀರ್ತನೆಗಳು**, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು ೨೦೦೩

೨. ಇಂದುಬಾಯಿ ಟಿ.ಕೆ.(ಸಂ), **ಹೆಳವನಕಟ್ಟೆ ಗಿರಿಯಮ್ಮನ ಹಾಡುಗಳು**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೭

೩. ಇಂದುಬಾಯಿ ಟಿ.ಕೆ., ಶ್ರೀ ಪ್ರಸನ್ನ ವೆಂಕಟದಾಸರ ಕೀರ್ತನೆಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩

೪. ಕಲಬುರ್ಗಿ ಎಂ.ಎಂ.(ಸಂ), ಹರಿಹರನ ರಗಳೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೫. ಕಾವ್ಯಪ್ರೇಮ (ಸಂ), ಹೆಳವನಕಟ್ಟೆ ಗಿರಿಯಮ್ಮನ ಹಾಡುಗಳು, ಸಮಾಜ ಪುಸ್ತಕಾಲಯ ಧಾರವಾಡ, ೧೯೭೭

೬. ಜವರೇಗೌಡ ದೇ.(ಸಂ), ರಾಮಧಾನ್ಯಯ ಚರಿತ್ರೆ, ರಾಜ್ಯ ಸಮಿತಿ, ಶ್ರೀ ಕನಕದಾಸ ನಾಲ್ಕನೆಯ ಶತಮಾನೋತ್ಸವ, ಬೆಂಗಳೂರು, ೧೯೬೫

೭. ನಾಗರತ್ನ ಟಿ.ಎನ್.(ಸಂ), ಹರಪನಹಳ್ಳಿ ಭೀಮವ್ವನ ಹಾಡುಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೮೪

೮. ನಾಗರತ್ನ ಟಿ.ಎನ್., ಅಕ್ಕಮಹಾದೇವಿ(ಸಂ), ಹರಪನಹಳ್ಳಿ ಭೀಮವ್ವನ ಕೀರ್ತನೆಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩

೯. ನಾವಡ ಎ.ವಿ., ಗಾಯಿತ್ರಿ ನಾವಡ(ಸಂ), ಸಾವಿರಾರು ಕೀರ್ತನೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೦

೧೦. ನಾಗರತ್ನ ಟಿ.ಎನ್., ಮಂದಾಕಿನಿ(ಸಂ), ಹರಿದಾಸರ ಜನಪ್ರಿಯ ಹಾಡುಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೭

೧೧. ಮತಿಘಟ್ಟ ಕೃಷ್ಣಮೂರ್ತಿ (ಸಂ), ಕನ್ನಡ ಜನಪದ ಸಾಹಿತ್ಯ ಭಂಡಾರ, ಸಂಪುಟ-೨, ಗೃಹಿಣೀ ಗೀತೆಗಳು, ಮತಿಘಟ್ಟ ಕೃಷ್ಣಮೂರ್ತಿ, ಬೆಂಗಳೂರು ೧೯೮೨

೧೨. ರವೀಂದ್ರನಾಥ ಕೆ.(ಸಂ), ಬಸವಯುಗದ ವಚನೇತರ ಸಾಹಿತ್ಯ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೦

೧೩. ರಾಮಚಂದ್ರರಾವ್ ಎಸ್ .ಕೆ.(ಸಂ), ಪುರಂದರ ಸಾಹಿತ್ಯ ದರ್ಶನ, ೧, ೨, ೩, ೪, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು ೧೯೮೫

೧೪. ಲೀಲಾವತಿ ಎಸ್.ರಾವ್(ಸಂ), ಹೆಳವನಕಟ್ಟೆ ಗಿರಿಯಮ್ಮನ ಕೀರ್ತನೆಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩

೧೫. ಲೀಲಾವತಿ, ಎಸ್.ರಾವ್(ಸಂ), ನಿಡಗುರುಕಿ ಜೀವೂ ಬಾಯಿಯವರ ಕೀರ್ತನೆಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩

೧೬. ಬಸವರಾಜು ನೆಲ್ಲಿಸರ(ಸಂ) ಜನಪದ ಕಾವ್ಯ ಸಂಚಯ, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ ಬಿ.ಆರ್.ಪ್ರಾಜೆಕ್ಟ್, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೮೪

೧೭. ಬಸವರಾಜ ಸಬರದ(ಸಂ) ಪುರಂದರದಾಸರ ಕೀರ್ತನೆಗಳು ಭಾಗ-೧, ಭಾಗ-೨, ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩

೧೮. ಬಸವರಾಜು ಎಲ್.(ಸಂ), ಶಿವದಾಸ ಗೀತಾಂಜಲಿ, ಜಗದ್ಗುರು ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು ೧೯೯೦

೧೯. ಬಸವಾರಾಧ್ಯ ಎನ್(ಸಂ), ಚಂದ್ರಹಾಸನ ಕಥೆ, ಕನ್ನಡ ಮತ್ತು ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೬

೨೦. ಮರುಳಯ್ಯ ಸಾ.ಶಿ(ಸಂ), ಕನಕ ಸಾಹಿತ್ಯ ದರ್ಶನ, ಸಂಪುಟ-೭, ಕನ್ನಡ ಮತ್ತು ಸಂಸ್ಕೃತಿಕ ನಿರ್ದೇಶನಾಲಯ, ಬೆಂಗಳೂರು.

೨೧. ಸಣ್ಣಯ್ಯ, ಬಿ.ಎಸ್., ರಾಮೇಗೌಡ(ಸಂ), ಲಕ್ಷ್ಮೀಶನ ಜೈಮಿನಿ ಭಾರತ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೯೩

೨೨. ಸುಂಕಾಪುರರ ಎಂ.ಎಸ್., ನೂತನ ಪುರಾತನದ ರಗಳೆಗಳು, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೭೬

೨೩. ಸರೋಜ ಬಿ.ಎಸ್., ಸಂಪ್ರದಾಯದ ಹಾಡುಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೮

೨೪. ಹಣಮಂತ ತಾಸಗಾಂವಕರ(ಸಂ), ಗಲಗಲಿ ಅವ್ವನವರ ಕೀರ್ತನೆಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೩

೨೫. ಹಿರೇಮಠ ಆರ್.ಸಿ., ಸುಂಕಾಪುರ ಎಮ್.ಎಸ್.(ಸಂ) ಶಾಂತಲಿಂಗದೇಶಿ, ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ, ಭಾಗ-೧, ಕನ್ನಡ ವಿಶ್ವವಿದ್ಯಾಲಯ, ಧಾರವಾಡ, ೧೯೬೮

**ವಿಮರ್ಶಾ ಗ್ರಂಥಗಳು**

೧. ಅನ್ನಪೂರ್ಣ ಎಂ. ಜಾಲಗಾರ, ಶಂಕರ ದಾಸಿಮಯ್ಯನ ಪುರಾಣ : ಒಂದು ಅಧ್ಯಯನ, ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ, ಡಂಬಳ, ಗದಗ, ೧೯೯೯

೨. ಅಂಗಡಿ ಎಸ್.ಎಸ್., ದಾಸ ಸಾಹಿತ್ಯ ಶಬ್ದಶಿಲ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫

೩. ಕರ್ಕಿ ಡಿ.ಎಸ್., ಕನ್ನಡ ಛಂದೋವಿಕಾಸ, ಶ್ರೀಕಾಡಸಿದ್ದೇಶ್ವರ ಕಾಲೇಜು, ಹುಬ್ಬಳ್ಳಿ, ೧೯೯೨

೪. ಕಪಟರಾಳ ಕೃಷ್ಣರಾವ್, ಕರ್ನಾಟಕ ಸಂಸ್ಕೃತಿಯ ಸಂಶೋಧನೆ, ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೭೦

೫. ಕೃಷ್ಣಸ್ವಾಮಿ ಅಯ್ಯಂಗಾರ ಎಚ್.ಎಸ್.(ಸಂ), ದಾಸ ಸಾಹಿತ್ಯ ದರ್ಶನ, ಮಂಗಳ ಭಾರತಿ ಪ್ರಕಾಶನ, ಮೈಸೂರು ೧೯೮೪

೬. ಕೃಷ್ಣರಾವ್ ಎಂ.ವಿ., ಕೇಶವಭಟ್ಟ ಎಂ.(ಸಂ)., ಕರ್ನಾಟಕ ಇತಿಹಾಸ ದರ್ಶನ, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು ೧೯೭೦

೭. ಗುಡಿ ಆರ್.ಜಿ., ದಾಸ ಸಾಹಿತ್ಯ ಒಂದು ಸೈದ್ಧಾಂತಿಕ ಅಧ್ಯಯನ, ಶ್ರೀನಿಧಿ ಪ್ರಕಾಶನ, ವಿದ್ಯಾನಗರ, ಅಥಣಿ ೧೯೯೪

೮. ಗೋಕುಲನಾಥ ಕೆ., ಶ್ರೀ ವಿಜಯದಾಯರು, ಸಿಂಧುಶಯನ ಪ್ರಕಾಶನ ೪೬೨, ೫ನೇ ಬ್ಲಾಕ್ ರಾಜಾಜಿನಗರ, ಬೆಂಗಳೂರು ೧೯೭೧

೯. ಚಿಕ್ಕಣ್ಣ ಕಾ.ತ.(ಸಂ), ಕನಕ ಕಿರಣ, ಕಾಳಿದಾಸ ಸಾಂಸ್ಕೃತಿಕ ಸಂಘ, ಬೆಂಗಳೂರು ೧೯೮೨

೧೦. ಜವರೇಗೌಡ ದೆ., ಕನ್ನಡ ಸಾಹಿತ್ಯ ದರ್ಶನ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು ೧೯೯೦.

೧೧. ತಿಪ್ಪೇರುದ್ರಸ್ವಾಮಿ, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ.ಮೂರ್ತಿ, ಕೃಷ್ಣಮೂರ್ತಿ ಪುರಂ, ಮೈಸೂರು ೨೦೦೧

೧೨. ದಾಸ ಸಾಹಿತ್ಯ ದ್ವಿತೀಯ ಘಟ್ಟ ಸಾಧನೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೦

೧೩. ದಿವಾಣಜಿ ಅ.ವ., ಪ್ರಸಾದಯೋಗ, ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೨೭

೧೪. ದೊಡ್ಡಸ್ವಾಮಿ ಎಂ.ಎ., ಶರಣ ಸಾಹಿತ್ಯ ಸಮೀಕ್ಷೆ, ದುಂಡನ ಹಳ್ಳಿ, ಮಂಡ್ಯ, ೧೯೭೨

೧೫. ನಂದಿಮಠ ಎಸ್.ಸಿ., ಕರ್ನಾಟಕ ಧರ್ಮಗಳು, ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು, ೧೯೮೩

೧೬. ನಾಗರತ್ನ ಟಿ.ಎನ್., ಹರಿದಾಸರ ಭಕ್ತಿ ಸ್ವರೂಪ, ಪ್ರಸಾರಾಂಗ ಮೈಸೂರು, ವಿಶ್ವವಿದ್ಯಾಲಯ, ಮೈಸೂರು, ೧೯೮೬

೧೭. ನಾಗರಾಜಪ್ಪ ಕೆ.ಜಿ. ಸಾಹಿತ್ಯ ಮತ್ತು ಸಾಮಾಜಿಕ ನಿಲುವುಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೮೯

೧೮. ನಾವಲಗಿ ಸಿ.ಕೆ., ವಚನ ಸಾಹಿತ್ಯದಲ್ಲಿ ಜಾನಪದ ಅಂಶಗಳು, ಜ್ಞಾನೋದಯ ಪ್ರಕಾಶನ, ಬೆಂಗಳೂರು, ೨೦೦೦

೧೯. ನಾವಡ ಎ.ವಿ., ದಾಸಮಾರ್ಗ, ಜಗದ್ಗುರು ಶ್ರೀ ಮನ್ಮಧ್ವಾಚಾರ್ಯ, ಮೂಲ ಮಹಾಸಂಸ್ಥಾನ, ಶ್ರೀ ರಾಘವೇಂದ್ರಸ್ವಾಮಿ ಮಠ, ಮಂತ್ರಾಲಯ ೨೦೦೪

೨೦. ನಿರುಪಮಾ, ಲಲಿತಾಶಾಸ್ತ್ರಿ, ದಾಸ ಪರಂಪರೆ, ಆರತಿ ಪಬ್ಲಿಕೇಷನ್, ಬೆಂಗಳೂರು, ೧೯೯೯

೨೧. ಪಾಟೀಲ ಎಂ.ಎಸ್., ನಾಯಕ ಡಿ.ಬಿ.(ಸಂ), ಕನ್ನಡದಲ್ಲಿ ಅನುಭಾವ ಸಾಹಿತ್ಯ, ಬಂಜಾರ ಪ್ರಕಾಶನ, ಗುಲಬರ್ಗಾ, ೨೦೦೩

೨೨. ಪೂಜಾರ ವ್ಹಿ.ಜಿ., ಸಾಹಿತ್ಯಾನ್ವೇಷಣೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೨

೨೩. ಪಂಡಿತಾರಾಧ್ಯ (ಸಂ), ಸಾಹಿತ್ಯ ವಿಮರ್ಶೆ ೨೦೦೦, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೨೦೦೧

೨೪. ಪ್ರಭಾವತಿ ಎಸ್.ವಿ., ಕನ್ನಡ ರಾಮಾಯಣಗಳು, ಸುಮುಖ ಪ್ರಕಾಶನ, ಬೆಂಗಳೂರು, ೨೦೦೫

೨೫. ಬಸವರಾಜ ಕಲ್ಗುಡಿ, ಮಧ್ಯಕಾಲೀನ ಭಕ್ತಿ ಮತ್ತು ಅನುಭಾವ ಹಾಗೂ ಚಾರಿತ್ರಿಕ ಪ್ರಜ್ಞೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೨

೨೬. ಬರಗೂರು ರಾಮಚಂದ್ರಪ್ಪ, ಕನ್ನಡ ಸಾಹಿತ್ಯದಲ್ಲಿ ದೇಸೀಯತೆ, ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು ೧೯೯೪

೨೭. ಬೆನಗಲ್ ರಾಮರಾವ್, ಪಾನ್ಯಂ ಸುಂದರಂ ಶಾಸ್ತ್ರೀ(ಸಂ), ಪುರಾಣನಾಮ ಚೂಡಾಮಣಿ ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೨೦೦೩

೨೮. ಬೇಲೂರು ಕೇಶವದಾಸರು, ಶ್ರೀ ಕರ್ನಾಟಕ ಭಕ್ತ ವಿಜಯ, ಗೀತಾಬುಕ್ ಹೌಸ್, ಮೈಸೂರು, ೧೯೭೦

೨೯. ಮತ್ತೂರು ಕೃಷ್ಣಮೂರ್ತಿ, ಶ್ರೀರಾಮ ಕಥಾಸಾರ, ಶ್ರೀರಂಗಂ ಶ್ರೀಮದ್ ಅಂಡಮನ್ ಸ್ವಾಮಿಗಳ ಪವನಜ ಪ್ರಕಾಶನ, ಬೆಂಗಳೂರು, ೨೦೦೫.

೩೦. ಮಧುಕರ ಎಕ್ಕುಂಡಿ, ಪುರಂದರ ದಾಸ ಕೀರ್ತನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪

೩೧. ಮಧು ವೆಂಕಾರೆಡ್ಡಿ, ಹೊನ್ನಮ್ಮನ ಹದಿಬದೆಯ ಧರ್ಮ : ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೫

೩೨. ಮಹಾದೇವಯ್ಯ ಕೆ.ಪಿ., ಹರಿಹರನ ರಗಳೆಗಳ ಸಾಹಿತ್ಯಿಕ ಅಧ್ಯಯನ, ಅಭಿರುಚಿ ಪ್ರಕಾಶನ, ಮೈಸೂರು ೧೯೯೯

೩೩. ಮಲ್ಲೇಪುರಂ ಜಿ. ವೆಂಕಟೇಶ, ಸಾಹಿತ್ಯ ಮತ್ತು ಪುರಾಣ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ೧೯೯೩

೩೪. ಮುಗಳಿ ರಂ.ಶ್ರೀ., ಕನ್ನಡ ಸಾಹಿತ್ಯ ಚರಿತ್ರೆ, ಗೀತಾಬುಕ್ ಹೌಸ್ ಪ್ರಕಾಶಕರು, ಬೆಂಗಳೂರು, ೧೯೯೮

೩೫. ರಾಮಚಂದ್ರರಾವ್ ಎಸ್.ಕೆ., ದಾಸ ಸಾಹಿತ್ಯ ಮತ್ತು ಸಂಸ್ಕೃತಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ೨೦೦೩

೩೬. ರಾಮಶೇಷನ್ ಎನ್ .ಕೆ., ಹರಿದಾಸ ಆಂದೋಲನ, ತಿರುಮಲ ತಿರುಪತಿ ದೇವಸ್ಥಾನ, ತಿರುಪತಿ ೧೯೯೧

೩೭. ವರದರಾಜರಾವ್ ಜಿ., ಪುರಂದರದಾಸರು, ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೮೩

೩೮. ವರದರಾಜರಾವ್ ಜಿ., ದಾಸ ಸಾಹಿತ್ಯದ ದಿಗ್ಗಜಗಳು, ಬುರ್ಲಿ ಬಿಂದು ಮಾಧವ ಸ್ಮಾರಕ ಪ್ರತಿಷ್ಠಾನ, ಹುಬ್ಬಳ್ಳಿ, ೧೯೮೭

೩೯. ವರದರಾಜರಾವ್ ಜಿ., ಹರಿದಾಸ ಸಾಹಿತ್ಯ ಸಾರ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೯೭.

೪೦. ವರದರಾಜರಾವ್ ಜಿ., ಹರಿದಾಸ ಹೃದಯ, ಶಾರದಾ ಮಂದಿರ, ಮೈಸೂರು, ೧೯೬೭

೪೧. ವರದರಾಜರವ್ .ಜಿ., ಹರಿದಾಸ ಸಾಹಿತ್ಯ ಸಮೀಕ್ಷೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೮೭

೪೨. ವಸಂತ ಕುಷ್ಟಗಿ, ವಿಜಯನಗರ ಸಾಮ್ರಾಜ್ಯದ ಪತನಾ ನಂತರದ ಹರಿದಾಸ ಸಾಹಿತ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೨

೪೩. ವಾಸುದೇವ ಅಗ್ನಿ ಹೋತ್ರಿ, ಪುರಂದರದಾಸರು ಮತ್ತು ಶ್ರೀಮದ್ಭಾಗವತ : ಒಂದು ತೌಲನಿಕ ಅಧ್ಯಯನ, ಸಂಸ್ಕೃತಿ ಪ್ರಕಾಶನ, ಸೇಡಮ್ ೨೦೦೪

೪೪. ವೀರಣ್ಣ ರಾಜೂರ, ವಿಚಾರ ಪತ್ನಿಯರು (ಶಿವಶರಣೆಯರು), ಮಂಗಳ ಪ್ರಕಾಶನ, ಧಾರವಾಡ, ೨೦೦೦

೪೫. ವೆಂಕಟೇಶ ಮೂರ್ತಿ ಎಚ್.ಎಸ್., ಕೀರ್ತನಕಾರರು, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ೧೯೭೫

೪೬. ಸರಿತಾ ಕುಸುಮಾಕರ ದೇಸಾಯಿ, ಹರಪನಹಳ್ಳಿ ಭೀಮವ್ವನ ಹಾಡುಗಳು : ಒಂದು ಅಧ್ಯಯನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ೨೦೦೧

೪೭. ಸರೋಜಿನಿ ಮಹಿಷಿ, ಕರ್ನಾಟಕ ಕವಯಿತ್ರಿಯರು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ೧೯೬೫

೪೮. ಸುನಂದಮ್ಮ ಆರ್., ದಾಸ ಸಾಹಿತ್ಯದಲ್ಲಿ ಜಾನಪದ ಅಂಶಗಳು : ಒಂದು ಅಧ್ಯಯನ, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೯೪

೪೯. ಸಂಜೀವಶೆಟ್ಟಿ, ಲಕ್ಷ್ಮೀಶನ ಜೈಮಿನಿ ಭಾರತ ಕಥಾ ವಸ್ತು ವಿವೇಚನೆ, ಸಂಜೀವಶೆಟ್ಟಿ ಸನ್ಮಾನ ಸಮಿತಿ, ಮುಂಬಯಿ, ೧೯೯೪

೫೦. ಸ್ವಾಮಿರಾವ್ ಕುಲಕರ್ಣಿ, ದಾಸ ದರ್ಶನ, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ ಗುಲ್ಬರ್ಗಾ, ೨೦೦೨

೫೧. ಶಾಂತದೇವಿ ಮಾಳವಾಡ, ಬಸವಯುಗದ ಶಿವಶರಣೆಯರು, ಶ್ರೀ ಜಗದ್ಗುರು, ಗಂಗಾಧರ ಧರ್ಮ ಪ್ರಚಾರಕ ಮಂಡಳ, ಮೂರು ಸಾವಿರ ಮಠ ಹುಬ್ಬಳ್ಳಿ, ೧೯೮೨

೫೨. ಶಿವಕುಮಾರ ಸ್ವಾಮಿ ಸಿ.ಎಸ್., ವಚನಕಾರರ ಜೀವನ ದೃಷ್ಟಿ, ಪ್ರಸಾರಾಂಗ, ಕುವೆಂಪು, ವಿಶ್ವವಿದ್ಯಾಲಯ, ಶಂಕರಘಟ್ಟ, ೨೦೦೧

೫೩. ಶಿವರುದ್ರಪ್ಪ ಜಿ.ಎಸ್., ಕನ್ನಡ ಸಾಹಿತ್ಯ ಸಮೀಕ್ಷೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ೧೯೯೯

೫೪. ಶಿವರುದ್ರಪ್ಪ ಜಿ.ಎಸ್.(ಸಂ)., ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೮

೫೫. ಶಿವರುದ್ರಪ್ಪ ಜಿ.ಎಸ್., ಬೆಡಗು, ಸುವಿದ್ಯಾ ಪ್ರಕಾಶನ, ಬೆಂಗಳೂರು, ೧೯೮೯

೫೬. ಶಿವರುದ್ರಪ್ಪ ಜಿ.ಎಸ್., ಕನ್ನಡ ಸಾಹಿತ್ಯ ಸಂದರ್ಭ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೦

೫೭. ಹಂಜಿ ಎಸ್.ವಾಯ್, ಶಿವಶರಣರ ದೃಷ್ಟಿಯಲ್ಲಿ ಸ್ತ್ರೀ, ವಿಮೋಚನಾ ಪ್ರಕಾಶನ, ವಿಮೋಚನಾ ದೇವದಾಸಿ, ಪುನರ್ವಸತಿ ಸಂಘ, ಅಥಣಿ, ೧೯೯೩

೫೮. ಹಂಪ ನಾಗರಾಜಯ್ಯ(ಸಂ), ವೀರಣ್ಣರಾಜೂರ, ಕನ್ನಡ ಸಾಂಗತ್ಯ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೫

೫೯. ಹಂಪ ನಾಗರಾಜಯ್ಯ, ಸಾಂಗತ್ಯ ಕವಿಗಳು, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೨೦೦೦

೬೦. ಹೆಗಡೆ ಜಿ.ಎಂ., ಸಾಹಿತ್ಯ ವಿಮರ್ಶೆ ೧೯೯೮, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೮

## ಮಹಿಳಾ ಅಧ್ಯಯನ

೧. ಆರ್ಯಾಂಬ ಪಟ್ಟಾಬಿ, ಮಹಿಳಾ ಸಾಹಿತ್ಯ ಸಮೀಕ್ಷೆ, ಸಂವಹನ ಪ್ರಕಾಶನ, ಮೈಸೂರು, ೨೦೦೪

೨. ಆಶಾ ಕುಮಾರಿ ಬಿ.ಪಿ., ಮಹಿಳಾ ಕಾವ್ಯದಲ್ಲಿ ಹೆಣ್ಣಿನ ಪರಿಕಲ್ಪನೆ, ಅಭಿರುಚಿ ಪ್ರಕಾಶನ, ಮೈಸೂರು, ೨೦೦೩

೩. ಇಂದಿರಾ ಆರ್., ಮಹಿಳೆ ಸಮಾಜ ಮತ್ತು ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೨

೪. ಕಮಲಾ ಹಂಪನಾ, ಬೊಗಸೆ, ಮಹಿಳೆ ಸುತ್ತಮುತ್ತ, ಸಿವಿಜಿ ಪಬ್ಲಿಕೇಷನ್ಸ್ , ಬೆಂಗಳೂರು, ೨೦೦೩

೫. ಗಾಯಿತ್ರಿ ನಾವಡ, ಮಹಿಳಾ ಸಂಕಥನ, ಕನ್ನಡ ಪುಸ್ತಕ ಪ್ರಾಧಿಕಾರ, ಚಾಮರಾಜ ಪೇಟೆ, ಬೆಂಗಳೂರು, ೨೦೦೩

೬. ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ(ಸಂ), ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು ಬೆಂಗಳೂರು, ೧೯೯೪

೭. ನೀಲಮ್ಮ ಕತ್ನಳ್ಳಿ, ಮಹಿಳೆ ಹಲವು ಮುಖಗಳು, ಶ್ರೀ ರೇಣುಕಾ ಪ್ರಕಾಶನ, ಗುಲಬರ್ಗಾ, ೧೯೯೭

೮. ಪ್ರಭಾಮಣಿ, ಮಹಿಳೆ ಮತ್ತು ಧರ್ಮ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೨

೯. ಬರಗೂರು ರಾಮಚಂದ್ರಪ್ಪ(ಸಂ), ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

೧೦. ಭಾಗ್ಯಲಕ್ಷ್ಮಿ ಎನ್.ವಿ., ಮಹಿಳಾ ಸ್ವಾತಂತ್ರ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೨

೧೧. ಲೀಲಾವತಿ ಎಸ್.ರಾವ್(ಸಂ), ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಮಹಿಳೆ, ಸಂವಹನ ಪ್ರಕಾಶನ, ಶಿವರಾಂಪೇಟೆ, ಮೈಸೂರು, ೨೦೦೦

೧೨. ವಿಜಯದಬ್ಬೆ, ನಾರಿ-ದಾರಿ-ದಿಗಂತ, ರಚನಾ ಪ್ರಕಾಶನ, ಮೈಸೂರು ೧೯೯೭

೧೩. ವಿಜಯದಬ್ಬೆ, ಮಹಿಳೆ ಸಾಹಿತ್ಯ ಸಮಾಜ, ರಚನಾ ಪ್ರಕಾಶನ, ಮೈಸೂರು ೧೯೮೯

೧೪. ವೀಣಾ ಶಾಂತೇಶ್ವರ, ಮಹಿಳಾ ಅಧ್ಯಯನ, ಎಚ್.ವಿ.ನಾಗೇಶ್ ಅಭಿನಂದನ ಗ್ರಂಥ, ಪ್ರೊ.ಎಚ್. ವಿ.ನಾಗೇಶ ಸನ್ಮಾನ ಸಮಿತಿ, ಧಾರವಾಡ, ೧೯೯೩.

೧೫. ಸರೋಜಿನಿ ಶಿಂತ್ರಿ, ಪ್ರಗತಿ ಪಥದಲ್ಲಿ ಮಹಿಳೆ, ಧಾರವಾಡ ಜಿಲ್ಲಾ ಕನ್ನಡ ಸಾಹಿತ್ಯ, ಪರಿಷತ್ತು ಧಾರವಾಡ

೧೬. ಸುಮಿತ್ರಾಬಾಯಿ ಬಿ.ಎನ್., ಸ್ತ್ರೀವಾದ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೬

೧೭. ಶಶಿಕಲ ಶಿವಶಂಕರ, ದೀಪಕ್ಕೆ ದೀಪ್ತಿ, ಜ್ಞಾನೋದಯ ಪ್ರಕಾಶನ, ಬೆಂಗಳೂರು, ೨೦೦೦

೧೮. ಶಾಂತಾದೇವಿ ಮಾಳವಾಡ, ಮಹಿಳಾ ಚೇತನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೭೬

೧೯. ಶಾಂತಾ ಇಮ್ರಾಪೂರ, ಮಹಿಳೆ ಸಾಹಿತ್ಯ ಸಂಸ್ಕೃತಿ, ಚೇತನಾ ಪ್ರಕಾಶನ, ಧಾರವಾಡ, ೨೦೦೧

೨೦. ಶಾಂತಾ ಇಮ್ರಾಪೂರ, ಧರ್ಮ ಮಹಿಳೆ ಮತ್ತು ಸಮಾಜ, ಚೇತನಾ ಪ್ರಕಾಶನ ಧಾರವಾಡ, ೨೦೦೧

೨೧. ಶ್ರೀಮತಿ ಎಚ್.ಎಸ್(ಸಂ), ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

## ಜಾನಪದ ಅಧ್ಯಯನ

೧. ಕುಲಕರ್ಣಿ ಆರ್.ಜಿ.(ಸಂ), ಅಪರಾಳ ತಮ್ಮಣ್ಣಕೃತ ಶ್ರೀಕೃಷ್ಣ ಪರಿಜಾತ, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೨

೨. ಕುಕ್ಕಿಲಕೃಷ್ಣಭಟ್ಟ, ಪಾರ್ತಿಸುಬ್ಬನ ಯಕ್ಷಗಾನಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೫

೩. ಜವರೇಗೌಡ ದೇ, ಜಾನಪದ ಅಧ್ಯಯನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೧

೪. ಪರಮಶಿವಯ್ಯ ಜೀ.ಶಂ., ಜನಪದ ಕಾವ್ಯ ಕಥೆಗಳು, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೦

೫. ಪರಮಶಿವಯ್ಯ ಜೀ.ಶಂ.(ಸಂ), ಕರ್ನಾಟಕ ಜಾನಪದ ಸಮೀಕ್ಷೆ, ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು, ೧೯೮೨

೬. ಪರಮಶಿವಯ್ಯ ಜೀ.ಶಂ. ಮತ್ತು ವಿಲಿಯಂ ಮಾಡ್ತ, ಕರ್ನಾಟಕ ಜಾನಪದ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೧೯೯೯.

೭. ಪಾದೇಕಲ್ಲು ವಿಷ್ಣುಭಟ್ಟ(ಸಂ), ಹಟ್ಟಿಯಂಗಡಿ ರಾಯಭಟ್ಟರ, ಯಕ್ಷಗಾನ ಕೇಂದ್ರ, ಎಂ.ಜಿ.ಎಂ.ಕಾಲೇಜು, ಉಡುಪಿ, ೨೦೦೫

೮. ಬಸವರಾಜು ಮಲಶೆಟ್ಟಿ, ಉತ್ತರ ಕರ್ನಾಟಕದ ಬಯಲಾಟಗಳು, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೩

೯. ಬೋರಲಿಂಗಯ್ಯ ಹಿ.ಚಿ.(ಸಂ), ಕರ್ನಾಟಕ ಜನಪದ ಕಲೆಗಳ ಕೋಶ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

೧೦. ಮಾನಸ, ಕೊರವರ ಸಂಸ್ಕೃತಿ, (ಉಪ ಸಂಸ್ಕೃತಿ ಅಧ್ಯಯನ ಮಾಲೆ), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೩

೧೧. ರಾಜೇಂದ್ರ ಡಿ.ಕೆ., ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೦

೧೨. ರಾಮಯ್ಯ ಬಿ.ಪಿ., ದಕ್ಷಿಣ ಕರ್ನಾಟಕದ ಕೊರವರು : ಒಂದು ಸಾಂಸ್ಕೃತಿಕ ಅಧ್ಯಯನ, ಮಾನಸ ಪ್ರಕಾಶನ, ಕುಮಟಾ (ಉ.ಕ), ೨೦೦೨

೧೩. ಲಕ್ಕಪ್ಪಗೌಡ ಎಚ್.ಜೆ., ಕರ್ನಾಟಕ ಬುಡಕಟ್ಟುಗಳು, ಸಂಪುಟ-೭, ಕರ್ನಾಟಕ ಜಾನಪದ ಮತ್ತು ಯಕ್ಷಗಾನ, ಅಕಾಡೆಮಿ, ಬೆಂಗಳೂರು, ೨೦೦೦

೧೪. ಸುಂಕಾಪುರ ಎಂ.ಎಸ್., ಜಾನಪದ, ಸಾಹಿತ್ಯ ದರ್ಶನ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೮

೧೫. ಶ್ರೀರಾಮ ಇಟ್ಟಣ್ಣವರ, ಶ್ರೀಕೃಷ್ಣಪಾರಿಜಾತ ಒಂದು ಅಧ್ಯಯನ, ವಿನಿ ಪ್ರಕಾಶನ, ಬೀಳಗಿ, ೧೯೯೧

## ೨. ಛಾಯಾಚಿತ್ರಗಳು



ಹೆಳವನಕಟ್ಟೆ ಶ್ರೀ ಲಕ್ಷ್ಮೀರಂಗನಾಥ
ದೇವಸ್ಥಾನ, ಕೊಮಾರನಹಳ್ಳಿ



ಹೆಳವನಕಟ್ಟೆ ಶ್ರೀ ಲಕ್ಷ್ಮೀರಂಗನಾಥಸ್ವಾಮಿ
ಕೊಮಾರನಹಳ್ಳಿ




ಹೆಳವನಕಟ್ಟೆ ಶ್ರೀಲಕ್ಷ್ಮೀ ರಂಗನಾಥ ದೇವಸ್ಥಾನದ ಆವರಣ, ಕೊಮಾರನಹಳ್ಳಿ











ಹೆಳವನಕಟ್ಟೆ ಗಿರಿಯಮ್ಮ
ಕಮ್ಮಾರಗಟ್ಟೆ



ಶ್ರೀ ಆಂಜನೇಯಸ್ವಾಮಿ
ಕಮ್ಮಾರಗಟ್ಟೆ



ಕೊಮಾರನಹಳ್ಳಿಯ ಹೆಳವನಕಟ್ಟೆ ಗಿರಿಯಮ್ಮನ ಮೂರ್ತಿ



ಹೆಳವನಕಟ್ಟೆ ರಂಗನಾಥನ ಕೆರೆ, ಕೊಮಾರನಹಳ್ಳಿ



ಶ್ರೀ ಆಂಜನೇಯಸ್ವಾಮಿ ದೇವಸ್ಥಾನ, ಕಮ್ಮಾರಗಟ್ಟೆ



ತುಂಗಾನದಿ ತೀರ, ಕಮ್ಮಾರಗಟ್ಟೆ

